ಪ್ರಭಾತ

Rs 1/8

PRABHAT ANNUAL 1951

ಅನುಕ್ರಮಣಿಕೆ.

(ಪುಟ 42—43 ಮತ್ತು 173ರಿಂದ 176ರ ವರೆಗೆ ಪುಟಗಳು ಸ್ಥಾನಬದಲಾಗಿ ಮುದ್ರಿಸಲ್ಪಟ್ಟವೆ. ಪುಟಸಂಖ್ಯೆಯನ್ನು ನೋಡಿ ಓದಬೇಕಾಗಿ ವಿನಂತಿ.

ಸಂ। ಪ್ರಭಾತ.)

Mangalore Ganesh Beedies



A NAME YOU CANNOT FORGET

AND

A NAME YOU CANNOT REGRET.

GANESH TRADE MARK ENSURES

YOU A PERFECT PRODUCT.

Mangalore Ganesh Beedi Works,

SREERAMPET – MYSORE.

"IT'S JUST THE AROMA THAT MAKES THE DIFFERENCE!"

Year in and year out, - in all seasons and all climes,

MANGALORE GREAT DARBAR BEEDIES

Are recognised as the best enjoyable - by all smokers.

THEY ARE TRULY CALLED

"A NATION'S DELIGHT"

UNPARALALLED — UNEQUALLED

IT'S JUST THE AROMA THAT MAKES THE DIFFERENCE !
AND - THAT SECRET, THE SECRET OF BLENDING
CHOICEST TOBACCOS, IS KNOWN ONLY TO

REGISTERED

THE GREAT DARBAR BEEDI WORKS
CAR STREET MANGALORE.

TRADE MARK

THE GREAT DARBAR BEEDI WORKS
CAR STREET, MANGALORE

The Great Darbar Beedi Works, Mangalore.

Sole Agent:— **P. CUNNIAH NAIDU,**
Cigars, Cigaretters, Beedies & General Merchant,
No. 2, Varadamuthiappan Street, G. T., Madras.

FAMOUS FOR ITS QUALITY AND STANDARD!

SRI KRISHNA MILLS COS'

COCOANUT OILS: OF FIRST AND SECOND QUALITIES— HYGIENIC IN PREPARATION.

TIL (GINGELLY) OIL: PURE- QUALITY PRODUCT.

FAME THROUGH SERVICE.

KRISHNA MILLS OILS Are a household name to-day throughout the District and elsewhere. Their quality products— never vary in flavour. More than a quarter of Century's service has earned them a reputation—never equalled.

BUY 'KRISHNA OILS' FOR HEALTH & HYGIENE

Sri Krishna Mills Co.,

Ansari Road - Bunder - MANGALORE.

ALSO AVAILABLE, IN BOMBAY AT:-

M. Krishna R. Nayak & Sons,

Commission Agents, Merchants & Importers.

1st Floor, Mathuradas Buildings, 19, Vithaldas Road, BOMBAY - 2.



ಗಮನಿಸಿರಿ!! ಗಮನಿಸಿರಿ!!!

ಕಡಲ ಕಡೆಯಲು ಪುಟ್ಟಿತದರಿಂ ।
ಒಡವೆಗಳು ಬಹಳವುಗಳೊಳಗತಿ ।
ಕೊಡುತಿಹವು "ಸುಖ" ಕಲ್ಪತರು ಮೇಣ್ ಕಾಮಧೇನುವಿವು ॥
ಪೊಡವಿಯೊಳಗೆಂದೆನುತ ತಿಳಿಯಲು ।
ಪಡೆಯಲಾಗದೆ ಬಾಂಧವರೆ ಸುಖ ।
ಬಿಡದೆ ಕೊಳ್ಳುತ "ಕೃಷ್ಣ ಮಿಲ್ಲಿನ ತೆಂಗಿನೆಣ್ಣೆ"ಯನು ॥

ಪ್ರಸಿದ್ಧವಾದ ಮಂಗಳೂರು ಶ್ರೀ ಕೃಷ್ಣಾ ಓಯಿಲ್ ಮಿಲ್ಸ್

— ಇವರ —

ಒಂದನೇ ತರಗತಿಯ ಶುದ್ಧವಾದ ತೆಂಗಿನೆಣ್ಣೆಯು ಅಂದವಾದ ಏಳು ರಾತ್ತಲಿನ ಡಬ್ಬಿಗಳಲ್ಲಿ
ಯಾವಾಗಲೂ ನಮ್ಮಲ್ಲಿ ದೊರಕುತ್ತದೆ.

लक्षांत ठेवा! विसरू नका!! जरूर लक्षांत ठेवा!!!

ही वस्तु आहे शुद्ध । त्यांत आहे आनंद ।
म्हणून कृष्णा मिलचें परिशुद्ध । खोबरेल तेल आहे प्रसिद्ध ।


IT'S EXCLUSIVE! *IT'S SUPREME!*

Roasted by "Thermalo" Process and "Granulised"

GIRIJA COFFEE

Guarantees uniformity of shade and fullest development of bean giving DELICIOUS & FINEST FLAVOUR in the cup.

THE NEW PLANT, EQUIPPED WITH LATEST GRANULISERS TO GRIND COFFEE OF UNIFORM GRANULES TO REQUIRED SPECIFICATIONS— UNIQUE IN ITS KIND—ENSURES UNVARYING SUPERIOR QUALITY FOR YOU



INDEED THIS IS THE "CUP THAT CHEERS YOU"

Manufacturers:

Girija Coffee Works

PROPS:

Mysore Lachia Setty & Sons, Ltd., Mangalore.

ಅದು, ಹಿರಿಯ ಸ್ಥಾನ ಪಡೆದಿರುವ ಉತ್ತಮ ತರದ ವಸ್ತುವಾಗಿದೆ!

"ಗಿರಿಜಾ ಕಾಫಿ"

"ಥರ್ಮಾಲೋ" ಎಂಬ ಆಧುನಿಕ ವಿಧಾನದಿಂದ, ಹೊಸ ಯಂತ್ರದಲ್ಲಿ, ರವೆರವೆಯಾಗಿ ಬಹು ಕಾಲದ ವರೆಗೆ ಪರಿಮಳ ಕೆಡದಂತೆ ತಯಾರಿಸಲ್ಪಡುವ "ಗಿರಿಜಾ ಕಾಫಿ" ಹುಡಿಯು, ನೀವು ಇಚ್ಛಿಸಿದಷ್ಟೆ ಉತ್ತಮವಾಗಿ, ನಿಮಗೆ ಒದಗಿಸಲ್ಪಡುತ್ತಿದೆ.

ರಖಂ ಯಾ ಚಿಲ್ಲರೆ ದರಗಳಿಗೆ ವಿಚಾರಿಸಿರಿ:

ಗಿರಿಜಾ ಕಾಫಿ ವರ್ಕ್ಸ್, ಬಂದರ, ಮಂಗಳೂರು.

ಮಾಲಕರು: ಮೈಸೂರು ಲಚ್ಚಯ್ಯ ಶೆಟ್ಟಿ ಎಂಡ್ ಸನ್ಸ್, ಲಿಮಿಟೆಡ್, ಮಂಗಳೂರು



ಈ ವಿಶೇಷಾಂಕವು

ಸಚ್ಚರಿತರೂ

ಸಹೃದಯಿಗಳೂ

ಸವಿನಯಸ್ಥರೂ

ಸದ್ಧಾರ್ಮಿಕರೂ

ಸರ್ವ ಸುಲಭರೂ

ಸದರ್ಥರೂ

ಆಗಿರುವ

ಶ್ರೀ। ಧರ್ಮಸ್ಥಳ ಮಂಜಯ್ಯಹೆಗ್ಗಡೆ

ಶ್ರೀ ಕ್ಷೇತ್ರ ಧರ್ಮಸ್ಥಳದ ಆಡಳಿತಗಾರರು

ಎಮ್. ಎಲ್. ಸಿ.,

ಇವರ

ಸದ್ವಿಧಿಯುಕ್ತ, ಸಫಲೀಕೃತ ಜೀವನದ

ಷಷ್ಟ್ಯಬ್ದಿ ಪೂರ್ತಿಯ ಸ್ಮಾರಕವಾಗಿ

ಸಮರ್ಪಣ.



ತನ್ನ ಸೀರೆಯಲ್ಲಿ ಸಿಕ್ಕಿಕೊಂಡ ಚೇಳನ್ನು ಒದರುವ ಒಬ್ಬ ಯುವತಿಯ ಕೆತ್ತನೆಯುಳ್ಳ
ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಗೋಪುರದ ಮದನಕೆಯ್ಯ ಚಿತ್ರ.

ಜನಕೆ ಜಾಗೃತಿಯುದಯ
-ವಿದುವೆ ತಾಮಸ ಜಡತೆ
ಗಳೆವ ವಿಜಯುವ ಸಾರ್ವ
ವೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ-
ವೀವಾದ್ಯ ಶಕ್ತಿಯಿದು,
ಸದಮಲಾಂತಃಕರಣ
ತರುಣ ಪ್ರಭಾತಂ

ವಿಶೇಷಾಂಕ ೧೯೫೧. PRABHAT **ANNUAL 1951.**

ಬೇಲೂರಿನ ಚೇಳು

(೧೩—೫—೧೯೫೦)

ಅಂದಿನಿಂದೀ ಹರೆಯುವೊಂದು ದಿನ ಹೆಚ್ಚಿಲ್ಲ,
ಇನ್ನು [೧]ನಿಗುರಿಲ್ಲೆಂದು ಕೊಂಕಿಸಿದ ಭಂಗಿ;
ನೋಡುವನಿಬರು ನೋಡೆ ಬತ್ತಲೆಯು ಮುಚ್ಚಿಲ್ಲ—
ಹಿಡಿಗೆ ಮುಡಿಸಲೊ ನಿರಿಗೆ? ನಾಚೆಯಾ ತಂಗಿ?

ನೋಡೆವೆನೆ ನೋಡಿಸುವೆ, ಬೇಡವೆನೆ ಬೇಡಿಸುವೆ,
ನುಡಿಸೆ ನೀ ನುಡಿಯೆ, ಕಣ್ಣೆಡಲಣಂ ಕಣಿಸೆ;
ಗೂಡುಬೆಳಕಿನ ಶಲಭವೆನೆ ಮನವನಾಡಿಸುವೆ—
ಆದರೆತ್ನಿಸಿ[೨] ಮುಟ್ಟೆ ನೀನಣಂ [೩]ಘೃಣಿಸೆ!

ಒದರೆ[೪] ಸೀರೆಯು ಚೇಳ, ತೋರಬಾರದೆ ಬೆನ್ನ
ನನಿತು ದಿಗ್ಭ್ರಮೆಯೊ, ಮೆಯ್ಮರವೊ, ತಳಮಳವೊ?
ಏನಿರಲಿ, ಅಂತೆ ಇರು, ಜಗವ ತೃಷಯಿಸೆ ನಿನ್ನ
ಲಾವಣ್ಯನಿಧಿಯೊ,[೫] ಯೌವನದ ಮೃಗಜಳವೊ!

ನಿನ್ನ ಜಾಡಿಸಿದ ಕೊಂಡಿಯು ಚೇಳು ನೋಡ,
ಕಾಂಬೆದೆಗೆ ಮುಳ್ಳೂರಿ ಕೊಳ್ಳುತಿದೆ ಸೇಡ!

ಗೋವಿಂದ ಪೈ.

---

೧ ನೆಟ್ಟಗಾಗು. ೨ ಎತ್ನಿಸಿ=ಪ್ರಯತ್ನಿಸಿ (ಏಕೆಂದರೆ ಆ ಸ್ತ್ರೀವಿಗ್ರಹ ಕೈಗೆ ಎಟಕುವುದಕ್ಕಿಂತ ಎತ್ತರದಲ್ಲಿದೆ.) ೩ ಹೇವರಿಸು. ೪ ಜಾಡಿಸು. ೫ ಲಾವಣ್ಯನಿಧಿ=ಸೌಂದರ್ಯದ ಸಮುದ್ರ, ಹಾಗೂ ಉಪ್ಪು (=ಲವಣ) ನೀರಿನ ಕಡಲು (**ಆದಕಾರಣ** ತೃಷೆಯನ್ನು ನಿವಾರಿಸಲಾರದು.)

ಸೊತೋಬಾ ಕೊಮಾಚಿ

(SOTOBA KOMACHI)

ಜಪಾನಿನ ಒಂದು 'ನೋ' [Noh] ನಾಟಕದ ಭಾಷಾಂತರ

ಗೋವಿಂದ ಪೈ

ಪಾತ್ರಗಳು

ಒನೋ ನೋ ಕೊಮಾಚಿ—ನೂರಾರು ವರ್ಷಗಳ ಹಿಂದೆ ಸತ್ತ ಒಬ್ಬ ಹೆಂಗಸಿನ ಆತ್ಮ[೧].

ಪ್ರಯಾಣಿಕರಾದ ಇಬ್ಬರು ಯಾಜಕರು[೧].

ಆ ಯಾಜಕರು ಜಪಾನಿನ ಕೊಯೊಸನ್ (Koyosan) ಎಂಬಲ್ಲಿಂದ ಹಳೆಯ ರಾಜಧಾನಿಯಾದ ಕಿಯೊಟೊಗೆ(Kioto) ಹೋಗುತ್ತಾರೆ. ನಡುವೆ ಸೆಟ್ಸು (Settsu) ಎಂಬಲ್ಲಿ ಅವರು ಹಾದಿಯ ಬದಿಯಲ್ಲಿ ಪೂಜಾರ್ಹವಾದ ಒಂದು ಸಂಪುಟವೊ (Shrine) ಬೇರೇನೋ ಒಡವೆಯ ಮೇಲೆ ಕೂತಿರುವ ಒನೋ ನೋ ಕೊಮಾಚಿ (Ono no Komachi) ಎಂದು ತೋರುವ ಒಬ್ಬ ಮುದಿ ಹೆಂಗಸನ್ನು ಕಾಣುತ್ತಾರೆ. ಆದರೆ ಆಕೆ ಯಥಾರ್ಥವಾಗಿ ಆ ಹೆಂಗಸಲ್ಲ, ಶಾನೆ ಹಿಂದೆ ಸತ್ತುಹೋದ ಆಕೆಯ ಆತ್ಮ. ಇದರಲ್ಲಿ ಹೆಸರಿಸಿರುವ ಶೋ ಶೋ (Shosho) ಎಂದರೆ ಆಕೆಯ ಪ್ರಣಯಿ. ಈ ಒನೋಳನ್ನೇ ಕುರಿತ ಹಾಗೂ ಈ ನಾಟಕದ ಪೂರ್ವಭಾಗವಾದ "ಕಾಯೊಯಿ ಕೊಮಾಚಿ" (Kayoi Komachi) ಎಂಬ ನಾಟಕದ ಅನುವಾದ 'ಪ್ರಭಾತ'ದ ೧೯೪೬ನೆಯ ಇಸವಿಯ ವಿಶೇಷಾಂಕದಲ್ಲಿ (ಪು. ೪೯-೫೦ ಮತ್ತು ೫೨) ಪ್ರಕಟವಾಗಿದೆ.

ಒನೋ ನೋ ಕೊಮಾಚಿ

ನಾನು ಎಳೆಯವಳಿದ್ದಾಗ ನನಗೆ ತುಂಬ ಹೆಮ್ಮೆ ಇತ್ತು. ನನ್ನ ತುರುಬಿನ ಹೂವುಗಳು ಚೈತ್ರಮಾಸದ ನೀರುಹಬ್ಬೆಯಂತೆ ಒಲೆದಾಡುತಿದ್ದುವು. ನಾನು ಗೊರವಂಕಗಳಂತೆ ಉಲಿದಾಡುತಿದ್ದೆ. ಈಗಲಾದರೆ ನನಗೆ ಅಪ್ಪಟ ಮುಪ್ಪು, ನೂರಾರು ವರ್ಷಗಳ ಮುಪ್ಪು, ಮೆಯ್ಯೆಲ್ಲ ಸೊಪ್ಪು. ಈಗ ನಾನಿಲ್ಲಿ ಕೊಂಚ ಕುಳಿತುಕೊಂಡು ದಣುವಾರಿಸಿಕೊಳ್ಳುವೆ.

೧ನೆಯ ಯಾಜಕ

(ಆಕೆಯ ಅಶ್ರದ್ಧೆಯನ್ನು ಕಂಡು ದಕ್ಕೆಪಟ್ಟು)

ಸಂಜೆ ಆಗಲಾಯಿತು. ನಾವಿನ್ನು ಮುಂದೆ ಸಾಗೋಣ. ಆದರೆ ಆ ತಿರುಕಿಯನ್ನು ಕಂಡಿಯಾ? ಆಕೆ ಕೂತಿರುವುದಾದರೆ ಸೊತೋಬದ[೨] ಮೇಲೆ. ಕೆಳಗಿಳಿ ಎನ್ನು ಆಕೆಗೆ, ಬೇರೆಲ್ಲಿಯೂ ತಕ್ಕ ಎಡೆಯಲ್ಲಿ ಕುಳ್ಳಿರಲಿ.

ಒನೋ

ಏ, ನಿನ್ನ ಹರಟೆ ಎಲ್ಲ ಅತ್ತಿರಲಿ. ಇದರಲ್ಲಿ ಬರೆದ ಅಕ್ಷರಗಳೂ ಇಲ್ಲ, ಹಳತು ಬಣ್ಣದ ರವಷ್ಟು ಸೊಗಡು ಕೂಡಾ ಇಲ್ಲ. ನಾನಾದರೆ ಅದೊಂದು ಕೋಲಷ್ಟೇ ಎಂದು ಬಗೆದೆ.

೧ನೆಯ ಯಾಜಕ

ಅದು ಬರೇ ಕೋಲೋ? ಅಲ್ಲ, ಮೋಟೋ? ಯಾವೊಮ್ಮೆ ಅದರ ಹೊತ್ತಿಗೆ ಅದರಲ್ಲಿ ಚಲೋ ಹೂವುಗಳು ಇದ್ದುವೇನೊ—ಅಹುದು, ಅದರ ಹೊತ್ತಿಗೆ, ಅದರ ಹೊತ್ತಿಗೆ. ಈಗ ನಿಜವಾಗಿ ಆದೊಂದು ಕೋಲೇ, ಆದರೆ ಭಗವಾನ್ ಬುದ್ಧನ ಕೆತ್ತನೆಯ ಕೋಲು.

ಒನೋ

ಓಹೋ, ಹಾಗಾದರೆ ನಾನೂ ಒಂದು ಮೋಟು ತಾನೆ; ಗಟ್ಟಿಯಾಗಿ ಹುಗಿದುಹೋಗಿದೆ, ಎದೆಯ ಮೇಲೆ ಒಂದು ಹೂವಿದೆ. ಮುಂದರಿಸು, ಸಂಪುಟವನ್ನು ಕುರಿತು ಹೇಳು.

(ಆಗ್ಗೆ ೨ನೆಯ ಯಾಜಕನು ಸಂಪುಟದ ಕಥೆಯನ್ನು ಹೇಳುತ್ತಿರುವಾಗ, ೧ನೆಯ ಯಾಜಕನು ಆ ಮುದಿಗೂಬೆಯ ವಿಲಕ್ಷಣವಾದ ಬದಲಾವಣೆಯನ್ನು ಕಂಡು)

೧ನೆಯ ಯಾಜಕ

ನೀನು ಯಾರು?

ಒನೋ

ನಾನು ಒನೋಳ ಹೇಕುಮುರುಕು.

---

೧. ಈ ನಾಟಕದಲ್ಲಿ ಒನೋ ನೋ ಕೊಮಾಚಿಯ ಆತ್ಮ 'ಶೀತೆ' (Shite), ೧ನೆಯ ಯಾಜಕನು 'ವಾಕಿ' (Waki), ೨ನೆಯ ಯಾಜಕನು 'ತ್ಸುರೆ' (Tsure). ೨. ಸೊತೋಬಾ=ಬುದ್ಧನ ಪೂಜೆಯ ಮರದ ಕೆತ್ತನೆಯ ಕೋಲು ಅಥವಾ ಸಂಪುಟ (a carved wooden devotional stick or shrine).

ಗಂಡಿನ ಹೃದಯ

Cosimo Giorgeri Contri ಎಂಬ ಇಟಲಿ ದೇಶದ ಕತೆಗಾರನ ಕಥೆಯ ಅನುವಾದ.

(ಅನುವಾದಕ: ಎಂ. ವಿ. ಸೀತಾರಾಮಯ್ಯ)

ಗೂಗ್ಲೀಲ್ಮೊ ಬಾಗಿಲ ಕರೆಗಂಟೆ ಬಾರಿಸಿದ್ದನ್ನು ಕೇಳಿದನು. ಬಳಿಕ ಯಾರೋ ಒಳಕ್ಕೆ ಹೋಗಿ ಹಜಾರದಲ್ಲಿ ಮಾತಾಡುತ್ತಿದ್ದುದೂ ಅವನಿಗೆ ಕೇಳಿಸಿತು. ಆದರೆ ಅವನು ಕದಲಲಿಲ್ಲ.. ಅವರು ಯಾರಿರಬಹುದು? ಔಷಧಿಯಂಗಡಿಯ ಕೆಲಸದ ಹುಡುಗನೆ, ರೊಟ್ಟಿಯಂಗಡಿಯವನೆ, ಇಲ್ಲವೆ ಒಕ್ಕಲಗಿತ್ತಿಯೆ? ತನ್ನ ಸರಳವಾದ ಏಕಪ್ರಕಾರವಾದ ಜೀವನದ ವಿವರಗಳೆಲ್ಲವೂ ಅವನಿಗೆ ಹೃದ್ಗತವಾಗಿದ್ದುವು. ತನ್ನ ಓದುವ ಕೋಣೆಯಲ್ಲಿ ಕುಳಿತು ಅವನು ಪ್ರತಿದಿನದ ಕಾರ್ಯಕಲಾಪಗಳ ಗತಿಯ ಏಕನಾದವನ್ನು ಆಲಿಸುತ್ತಿದ್ದನು. ಅಂದು ಜರುಗುತ್ತಿದ್ದ ಎಂದಿನವಲ್ಲದ ಘಟನೆಗಳು ಕೂಡ ಅವನಿಗೆ ಹಿಂದೆ ಪರಿಚಯವಾದ ಘಟನೆಗಳಂತೆ ಕಿವಿಯಲ್ಲಿ ಮೊರೆಯತೊಡಗಿದವು; ಅವುಗಳಲ್ಲಿ ಅವನು ವಿಶೇಷ ಆಸಕ್ತಿ ವಹಿಸಲಿಲ್ಲ; ಉದಾಹರಣೆಗೆ, ಔಷಧ ವ್ಯಾಪಾರಿ ಹೊಸಬ; ಆದಮಾತ್ರಕ್ಕೆ ತಾನೇಕೆ ಕುಳಿತ ಕಡೆ ಬಿಟ್ಟು ಕದಲಬೇಕು? ಘಟನೆಗಳ ಕಾರ್ಯಗತಿಯನ್ನು ವ್ಯತ್ಯಾಸಗೊಳಿಸಲು ಅವನು ಏನನ್ನೂ ಅರಿಯ; ಅವನು ಏನನ್ನೂ ಮಾಡಲಾರ. ಅವನು ತನಗೆ ತಾನು ಹೇಳಿಕೊಳ್ಳುತ್ತಿದ್ದನು: "ಇನ್ನೇನು ತುಸಹೊತ್ತಿನಲ್ಲಿ ಸೂಲಗಿತ್ತಿ ಅಕಾರ್ಡಿ ಬರುತ್ತಾಳೆ. ಆಮೇಲೆ ಡಾಕ್ಟರು ಬರುತ್ತಾರೆ. ಅನಂತರ ಬಾಗಿಲ ಗಂಟೆ ಮತ್ತೆ ಮತ್ತೆ ಬಾರಿಸುತ್ತದೆ. ಒಂದೆರಡು ಗಂಟೆಯಲ್ಲಿ ಎಲ್ಲವೂ ಮುಗಿದುಹೋಗುತ್ತದೆ."

ತನ್ನ ಮನಸ್ಸಿನ ಆತಂಕವನ್ನು ಅಡಗಿಸುವುದಕ್ಕಾಗಿ ಅವನು ಮತ್ತೆ ಓದತೊಡಗಿದನು; ವಸಂತದ ಹಸುರುಹೊದೆದ ಊರಹೊರಗಿನ ಚಿಕ್ಕ ತೋಟದ ಕಡೆ ಕತ್ತೆತ್ತಿಯೂ ನೋಡಲಿಲ್ಲ. ಅವನ ವ್ಯಾಸಂಗವೂ ಅವನ ಬಾಳಿನಷ್ಟೆ ನಿರಾಡಂಬರವಾದದ್ದು, ಮಿತವ್ಯಾಪ್ತಿಯುಳ್ಳದ್ದು. ಈಗ, ಓದಓದುತ್ತಲೇ ತನ್ನ ಬಾಳಿನ ವಿಚಾರವಾಗಿ ಆಲೋಚಿಸತೊಡಗಿದನು........ ಅವನಿಗೆ ಮದುವೆಯಾದಾಗ ಇಪ್ಪತ್ತೈದು ವರ್ಷ; ಈಗ ಅವನಿಗೆ ಮೂವತ್ತು. ಐದು ವರ್ಷಗಳ ವೈಶಿಷ್ಟ್ಯವಿಲ್ಲದ ಜೀವನ; ಗಮನಿಸುವ ಮಟ್ಟಿಗೆ ಸುಖವಾದದ್ದೂ ಅಲ್ಲ,

---

ಇಬ್ಬರೂ ಯಾಚಕರು

(ಒಟ್ಟಿಗೆ)

ಅಕಟಾ, ಇದೇತರ ಶೋಚನೀಯವಾದ ಮಾರ್ಪಾಡು! ಆಕೆಯು ಹೊತ್ತಿನಲ್ಲಿ ಕೊಮಾಚಿ ಎಂದರೆ ಉಜ್ಜ್ವಲವಾದೊಂದು ವಿಕಚ ಪುಷ್ಪ ತಾನೆ. ಒಮ್ಮೆಯೂ ಆಕೆ ಮೋರೆಗೆ ಹುಡಿಯನ್ನು ಪೂಸಿಕೊಳ್ಳಲಿಲ್ಲ. ಸೊಗಸಾದ ಉಡಿಗೆ-ತೊಡಿಗೆಗಳಲ್ಲಿ ಆಕೆ ಅರಮನೆಗಳಲ್ಲಿ ನಡೆದಾಡಿದ್ದಳು. ಆಕೆಯ ಕವನಗಳನ್ನು ನಮ್ಮ ನುಡಿಯಲ್ಲೇ ಅಲ್ಲ, ಚೀನದ ನುಡಿಯಲ್ಲೂ ಕೇಳಲಿಕ್ಕೆ ಎಷ್ಟೋ ಮಂದಿ ನೆರೆಯುತಿದ್ದರು. ಈಗಲಾದರೆ ಆಕೆಯ ಹೆಗಲ ಹೊಟ್ಟಿನ ಮೇಲೆ ಆಕೆಯ ತಲೆಯಲ್ಲಿ ಚಳಿಗಾಲ ನರೆತಿದೆ. ಆಕೆಯ ಕಣ್ಣುಗಳೀಗ ದೂರದ ಬೆಟ್ಟಗಳ ಮೇಲಣ ಬಣ್ಣದಂತೆ ಇಲ್ಲ. ಆಕೆ ಬೆಳಗಾನದ ಹಿಡಿತದಲ್ಲಿ ಮಸುಳುತ್ತಿರುವ ನಿಷ್ಪ್ರಭವಾದ ತಿಂಗಳಿನೋಪಾದಿ ತೋರುತ್ತಾಳೆ. ಆಕೆಯ ಕೊರಳಲ್ಲಿ ಜೋತಾಡುವ ಜೋಳಿಗೆಯಲ್ಲಿ ಕೆಲವು ಒಣ ಅವರೇಕಾಳು ಇವೆ. ಬೆನ್ನಿನಲ್ಲಿ ಒಂದು ಗಂಟನ್ನು ಹೊದ್ದುಕೊಂಡದೆ. ಹೆಗಲಲ್ಲಿ ಬೇರುಗಳಿಂದ ಹೆಣೆದ ಗೂಡೆ ಇದೆ. ಆಕೆಗೆ ಅವನ್ನು ಸರ್ವಥಾ ಅಣಗಿಸಲಾಸ. ಹಾದಿಯ ಉದ್ದಕ್ಕೆ ಆಕೆ ಬೇಡುತಿದ್ದಾಳೆ, ಅಲೆದಾಡುತಿದ್ದಾಳೆ, ಪಾಪ, ಹುಚ್ಚುಹುಚ್ಚಾದ ನೆರಳಿನಂತೆ.

(ಆದರೆ ಇಂಥಾ ಕನಿಕರ ಆಕೆಗೆ ಬೇಕಾಗಿಲ್ಲ. ಆಕೆ ಹೇಳುತ್ತಾಳೆ.)

ಒನೋ

ಹುಚ್ಚುಹುಚ್ಚೇ? ನೀನು ಆತನ ಮಾತನ್ನು ಕೇಳುವಿಯಾ? ನನ್ನ ಎಳವೆಯಲ್ಲಿ ಇವನಿಗಿಂತ ಒಂದು ಬಣ್ಣಕ್ಕೆ ಮೇಲಾದವರಿಂದ ನನಗೆ ನೂರಾರು ಓಲೆ ಬಂದಿದ್ದುವು. ಅವು ಬೇಸಗೆಯ ಮಳೆಯ ಹನಿಗಳಂತೆ ಬಂದುವು. ಆಗ್ಗೆ ನನ್ನ ತಲೆ ತಕ್ಕಷ್ಟು ಮೇಲಕ್ಕೆ ಎತ್ತಿ ಇದ್ದಿತೇನೋ, ನಾನು ಯಾರಿಗೂ ಮಾರುಬರೆಯಲಿಲ್ಲ. ನಾನೀಗ ಏಕಾಕಿಯಾಗಿರುವುದನ್ನು ಕಂಡು, ಆ ಹಳಗಾಲದಲ್ಲಿ ಶೋಶೋ ಇತರರೊಂದಿಗೆ ಬಂದಾಗ, ಆತನು ಬೆಳದಿಂಗಳಲ್ಲಿ ಬಂದಾಗ, ಕಾರಿರುಳಲ್ಲಿ ಬಂದಾಗ, ಮಳೆಯಿಂದ ಉಬ್ಬರಿಸುವ ರಾತ್ರಿಗಳಲ್ಲಿ ಆತನು ಬಂದಾಗ, ಕಪ್ಪಾನೆ ಮೋರೆಯ ಗಾಳಿಯಲ್ಲಿ ಬಂದಾಗ, ಸಿಕ್ಕಾಬಟ್ಟೆಯಾಗಿ ಚಟೀರನೆ ಹಿಮ ಬೀಳುವಂದು ಬಂದಾಗ, ಆ ಹಳಗಾಲದಲ್ಲಿ ನನಗೊಬ್ಬ ಚೆಲುವನಾದ ಗೆಣೆಗಾರನು ಜತೆಗೆ ಇಲ್ಲವಾದನೆಂದು ನೀವಾದರೆ ಬಗೆವಿರಿ. ಆತನು ಬಂದನು, ಸೂರುಗಳಿಂದ ಕರಗಿ ಹನಿಗಳು ಉದುರುವಷ್ಟು ಹಲವು ಸಲ, ೯೯ ಸಲ ಬಂದನು, ಮತ್ತೆ ಸತ್ತನು. ಆತನ ಆತ್ಮವಾದರೆ ನನ್ನ ಬಳಿಯಲ್ಲಿದೆ, ನನಗೆ ಹುಚ್ಚೇರಿಸಿ ಮುಂದಕ್ಕೆ ಅಟ್ಟುತ್ತಲಿದೆ.

ಸುಖವಿಲ್ಲದ್ದೂ ಅಲ್ಲ. ಅವನಿಗೋಸುಗ ಅವನ ತಾಯಿ ಮಾಡಿದ್ದ ಸಾಧಾರಣವಾದ ವ್ಯವಸ್ಥೆ ಸಂಪೂರ್ಣವಾಗಿ ಸಿದ್ಧಿಸಿತ್ತು; ಅದು ಸಿದ್ಧಿಸಲು ಅವನೂ ಅವಕಾಶಕೊಟ್ಟಿದ್ದನು; ತನ್ನ ವ್ಯಕ್ತಿಪ್ರಭಾವವನ್ನು ತೋರಿಸುವುದಕ್ಕೇ ಆಗದಷ್ಟು ಅತಿ ಸೋಮಾರಿತನ ಅವನದು; ಅಲ್ಲದೆ ತನ್ನ ಗುಣಗಳಲ್ಲಿಯೇ ಆಗಲಿ ತನ್ನ ಕಾರ್ಯಸಾಮರ್ಥ್ಯದಲ್ಲಿಯೇ ಆಗಲಿ ಅವನಿಗೇ ನಂಬಿಕೆಯಿಲ್ಲ. ಅವನ ತಾಯಿಯಾದರೂ ಎಲ್ಲ ಮಧ್ಯ ವಯಸ್ಸಿನ ಸ್ತ್ರೀಯರಂತೆಯೇ ತನ್ನ ಮಗನ ವಿಚಾರದಲ್ಲಿ ಸಾಧಾರಣ ರೀತಿಯ ಬಯಕೆಗಳನ್ನೇ ಇಟ್ಟುಕೊಂಡಿದ್ದಳು; ತಮ್ಮ ಮಕ್ಕಳು ಕಟ್ಟಕಡೆಗೆ ಜೀವನವನ್ನು ಎದುರಿಸಬೇಕಾದ ಸನ್ನಿವೇಶದಲ್ಲಿ ಅವರ ಬಗ್ಗೆ ತಂದೆತಾಯಿಗಳು ಯಾವ ಹೆಚ್ಚಿನ ಭ್ರಾಂತಿಯನ್ನೂ ಇಟ್ಟುಕೊಳ್ಳದೆ ಎಚ್ಚರಿಕೆಯಿಂದ ಕೂಡಿದ ವಾತ್ಸಲ್ಯವನ್ನು ತೋರುತ್ತಾರೆಯೋ ಅದೇ ಬಗೆಯ ವಾತ್ಸಲ್ಯದಿಂದ ಆಕೆ ತನ್ನ ಮಗನಿಗೆ ಹೀಗೆ ಉಪದೇಶಮಾಡಿದ್ದಳು: "ನೀನು ಐರೀನಳನ್ನು ಮದುವೆಮಾಡಿಕೊ. ಅವಳು ನಿನಗೆ ತಕ್ಕ ಹೆಣ್ಣು. ನಿನಗೆ ಯೋಗ್ಯಳಾದವಳೆಂದರೆ ಅವಳೊಬ್ಬಳೆ. ಅವಳು ಅಷ್ಟು ಅಂದವಾಗಿಲ್ಲ, ಒಪ್ಪಿಕೊಳ್ಳುತ್ತೇನೆ. ಆದರೆ ಒಳ್ಳೆ ಗಂಭೀರ ಸ್ವಭಾವದವಳು; ಗಟ್ಟಿಗಳು. ಹಣವಂತಳಲ್ಲದಿದ್ದರೂ ತಕ್ಕಮಟ್ಟಿಗೆ ಅನುಕೂಲಸ್ಥಿತಿಯಲ್ಲಿದ್ದಾಳೆ........... ಇಷ್ಟಕ್ಕೂ ಹಣವನ್ನಲ್ಲವಲ್ಲ ನೀನು ಮದುವೆಮಾಡಿಕೊಳ್ಳುವುದು! ಮಕ್ಕಳುಮರಿ ಹಡೆದು, ಒಳ್ಳೆಗೃಹಿಣಿಯಾಗಿರುತ್ತಾಳೆ.... ಇದಕ್ಕಿಂತ ಹೆಚ್ಚಿಗೆ ನಿನಗೆ ಆಗಬೇಕಾದದ್ದೇನು? ನೋಡು, ಇದು ನಿನಗೆ ತಿಳಿಯದ್ದಲ್ಲ; ಇಲ್ಲದ ಸಲ್ಲದ ಭ್ರಾಂತಿ ಇಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ."

ಖಂಡಿತವಾಗಿಯೂ ಅವನು ಯಾವ ಭ್ರಾಂತಿಯನ್ನೂ ಇಟ್ಟುಕೊಂಡಿರಲಿಲ್ಲ. ತನ್ನ ತಾಯಿಯನ್ನು ಮೆಚ್ಚಿಸುವುದಕ್ಕಾಗಿ ಅವನು ಐರೀನಳನ್ನು ಮದುವೆಯಾಗಿದ್ದನು. ತನ್ನ ತಾಯಿಯ ಸುಖದ ಕಲ್ಪನೆಗೆ ಅನುಗುಣವಾಗಿ ಸುಖವಾಗಿರುವುದನ್ನು ಅಭ್ಯಾಸಮಾಡಿಕೊಂಡಿದ್ದನು.

ಅದು ಸಪ್ಪೆಯಾದ, ಬತ್ತಿಹೋಗಿದ್ದ ಸುಖ; ಪಥ್ಯವೆಂದು ಸಪ್ಪೆಯ ಸಾರು ಊಟಮಾಡಿದಂತೆ. ಅವನ ತಾಯಿ 'ಭ್ರಾಂತಿ' ಎಂದು ಅವನೊಂದಿಗೆ ಹೇಳಿದಾಗ ಅದು ಏನೆಂಬುದನ್ನು ಅವಳು ಸಂಪೂರ್ಣವಾಗಿ ಅರಿತಿದ್ದಳು. ಗೂಗ್ಲಿಲ್ಮೋವಿನ ಭಾಗಕ್ಕೆ ಭ್ರಾಂತಿ ಎಂದರೆ ಅವನ ಸೋದರತ್ತೆಯ ಮಗಳು ಅನಾ. ಅವಳ ತಾಯಿ ಧನಿಕನಾದ ಒಬ್ಬ ವರ್ತಕನ ಹೆಂಡತಿ. ಗೂಗ್ಲಿಲ್ಮೋ ಹುಡುಗನಾಗಿದ್ದಂದು ಅವರ ಮನೆಗೆ ಬಹಳವಾಗಿ ಹೋಗಿಬರುತ್ತಿದ್ದನು; ಆದರೆ ಅವನು ದೊಡ್ಡವನಾದಂತೆ ಅವನ ಸೋದರತ್ತೆಯ ಸಂಶಯಗಳೂ ಎರಡು ಕುಟುಂಬಗಳ ಭಾಗ್ಯಭೇದಗಳೂ ನಡುವೆ ಒಂದು ಕಮರಿಯನ್ನುಕಲ್ಪಿಸಿದ್ದುವು. ಇದರಿಂದಾಗಿ ಅವನು ಅವರ ಮನೆಗೆ ಹೋಗುವುದನ್ನೇ ಬಿಟ್ಟುಬಿಟ್ಟಿದ್ದನು. ಅನಾ ಎತ್ತರವಾದ, ಚೆಂದದ ಹುಡುಗಿ; ಯಾವಾಗಲೂ ಒಳ್ಳೆಯ ಉಡುಪನ್ನೇ ಉಟ್ಟು, ಪರಿಮಳ ಪೂಸಿಕೊಂಡು, ಸೊಗಸಾಗಿ ಕಾಣುವಳು. ಅವನ ತಾಯಿಗೆ ಇವಳು 'ಭ್ರಾಂತಿ'; ಇವಳ ವಿರುದ್ಧವಾಗಿಯೇ ಆಕೆಯ ಹೋರಾಟ. "ಇಂಥವನಿಂದ ಅವಳಿಗೆ ಆಗಬೇಕಾದದ್ದೇನು? ಇವನನ್ನು ಅವಳು ಮದುವೆಯಾಗುವುದೇ? ಎಲ್ಲಿಂದೆಲ್ಲಿಗೆ! ಅವಳ ಗುರಿ ಇನ್ನೂ ಬಹು ಮೇಲಿನದು.... .. ....ಇವನಲ್ಲಿ ಪ್ರೀತಿಯೆ? ಛೆ, ಎಲ್ಲಿ ಬಂತು. ತನ್ನ ವಿನೋದಕ್ಕಾಗಿ ಸುಮ್ಮನೆ ಇವನೊಂದಿಗೆ ಚೆಲ್ಲಾಟವಾಡುತ್ತಿದ್ದಾಳೆ; ತನ್ನ ಮನಸ್ಸಿನಲ್ಲಿ ಇವನಿಗೆ ಸ್ವಲ್ಪವೂ ಎಡೆಕೊಟ್ಟಿಲ್ಲ. ಇದು ಇವನ ಅರಿವಿಗೆ ಬಂದಿಲ್ಲವೆ?"

ಈ ಮಾತುಗಳು ಅವನ ಕನಸನ್ನು ಕರಗಿಸಿಬಿಟ್ಟಿದ್ದುವು; ಕ್ರೂರವಾಗಿ, ಕಡೆತಡೆಯಿಲ್ಲದೆ; ತೊಟತೊಟನೆ ತೊಟ್ಟಿಕ್ಕುವ ನೀರು ಕಲ್ಲನ್ನೇ ಸವೆಸುವ ಹಾಗೆ. ಆದ್ದರಿಂದ ಅವನು ಐರೀನಳನ್ನು ಮದುವೆಯಾದನು—ಶಾಂತಿ, ಸುಖ...........

ಸಪ್ಪೆಯ ಸುಖದ ಹಲವು ವರ್ಷ ಕಳೆದ ಮೇಲೆ ಐರೀನಿಗೆ ಪುತ್ರ ಜನನವಾಗುವುದರಲ್ಲಿತ್ತು. ಮೊದಲು ಈ ಬಗ್ಗೆ ಗೂಗ್ಲಿಲ್ಮೋಗೆ ಅಷ್ಟೇನೂ ಉತ್ಸಾಹವಿರಲಿಲ್ಲ. 'ಭ್ರಾಂತಿ'ಗಳನ್ನು ಇಟ್ಟುಕೊಳ್ಳಬೇಡ ಎಂದು ಎಚ್ಚರಿಕೊಡುವುದಕ್ಕಾಗಿಯೇ ಇನ್ನೊಂದು ಜೀವವನ್ನು ಬೆಳಸುವ ಕಾಲ ಬಂದಿತೆಂದು ಅವನು ಈಗ ಭಾವಿಸಿದನು. ಕೆಲವು ತಿಂಗಳುಗಳು ಕಳೆದ ಮೇಲೆ, ನದಿನೆರೆ ತುಂಬಿ ನಾಡನ್ನು ಕೊಚ್ಚುವಂತೆ, ಅವನ ಹೃದಯದ ತುಂಬ ನಲವೇರಿತು. ಕಡೆಗೊಬ್ಬ ಪುತ್ರ; ತನ್ನ ಹಿಂದಿನ ಎಲ್ಲ ದುಃಖಗಳಿಗೂ ಪ್ರೇಮ ಸೌಖ್ಯಗಳ ತ್ಯಾಗಕ್ಕೂ ಪ್ರತಿಫಲ!

ಈ ಸಲ ಅವನು ಯೋಚನೆಯ ಮಂಪರದಿಂದ ಎಚ್ಚತ್ತು, ತನ್ನ ಓದುವ ಕೋಣೆಯನ್ನು ಬಿಟ್ಟು, ಹೊರಗೆ ನಡವೆಯನ್ನು ಸೇರಿದನು. ಪೂತಿನಾಶಕದ ಕಟುವಾಸನೆ ಅವನ ಹೆಂಡತಿಯ ಕೋಣೆಯಿಂದ ಹೊರಬರುತ್ತಿತ್ತು. ಅವನು ಬಹಳ ಕಷ್ಟದಿಂದ ಕಿವಿಗೊಟ್ಟು ಆಲಿಸಿದ್ದರೆ ಬಹುಶಃ ನರಳುವ ದನಿಯೂ ಅವನಿಗೆ ಕೇಳಿಬರುತ್ತಿತ್ತು...........ಆದರೆ ತಟ್ಟನೆ ಹೊರಗಿನಿಂದ ಒಂದು ನೆರಳು ಅವನ ಮುಂದೆ ಸುಳಿಯಿತು; ಬಲವಾದ, ಶಾಂತವಾದ, ದನಿಯೊಂದು ಅವನ ಆಲೋಚನೆಯ ಎಳೆಯನ್ನು ಕತ್ತರಿಸಿತು:

"ಇದೇ ತಾನೆ ನಾನಿಲ್ಲಿ ಬಂದೆ. ನಾನು ಬಂದದ್ದು ಗೊತ್ತಾಯಿತೆಂದು ಕಾಣುತ್ತೆ."

ಮಾತಾಡಿದಾತ ಡಾಕ್ಟರು; ಇವನ ಹಳೆಯ ಶಾಲಾ ಸ್ನೇಹಿತ; ಇವನ ಮನೆಗೆ ಹಿಂದೆ ಒಂದು ಕಾಲದಲ್ಲಿ ಆಗಾಗ್ಗೆ ಬರುತ್ತಿದ್ದನಾತ. ಸ್ಥೂಲ ಕಾಯ; ಕೆಂಪು ಮುಖ; ಸರಸ ಸ್ವಭಾವದವನು. ಹೊಸ ಜೀವಗಳನ್ನು ಪ್ರಪಂಚಕ್ಕೆ ತರುವ

ಕಾರ್ಯಭಾರ ಅದು ಹೇಗೋ ಅವನಿಗೆ ಹೆಚ್ಚಿನ ಕಸುವನ್ನು ಕೊಟ್ಟಿತ್ತು.

"ನನ್ನ ಕೈಲಾದ ಮಟ್ಟಿಗೂ ಬೇಗ ಬಂದೆ........ಆಕೆ ಹೇಗಿದ್ದಾಳೆ?........ಕ್ಷೇಮವಾಗಿದ್ದಾಳೆಯೋ? ಒಳ್ಳೆಯದು.... ಗಾಬರಿಪಟ್ಟುಕೊಳ್ಳಬೇಡವಯ್ಯ........ನಾನಾಗಿದ್ದರೆ ಹೊರಕ್ಕೆ ಹೊರಟುಹೋಗುತ್ತಿದ್ದೆ, ಇಲ್ಲವೆ ಓದುವ ಕೋಣೆಯಲ್ಲಿ ತೆಪ್ಪನೆ ಕುಳಿತಿರುತ್ತಿದ್ದೆ........ಇನ್ನೊಂದೆರಡು ಗಂಟೆಯಲ್ಲಿ ಬಂದು ಎಲ್ಲವನ್ನೂ ತಿಳಿಸುತ್ತೇನೆ."

ಅವನು ಸಕ್ಕು ಮಲಗುವ ಕೋಣೆಯೊಳಕ್ಕೆ ಹೋದನು. ಗೂಗ್ಲಿಲ್ಮೊ ತನ್ನ ಓದುವ ಕೋಣೆಗೆ ಹಿಂದಿರುಗಿದನು. ಹೊರಹೊರಡಬೇಕೆಂದು ಅವನು ಕ್ಷಣಕಾಲ ಯೋಚಿಸಿದನು; ಆದರೆ, ಸಂತೋಷಭಯಮಿಶ್ರವಾದ ಒಂದು ಬಗೆಯ ಅಸ್ಪಷ್ಟವಾದ ಸಂವೇದನೆ ಅವನನ್ನು ತಡೆದು ನಿಲ್ಲಿಸಿತು. ಇದು ತನ್ನ ನರಗಳ ಉದ್ರೇಕದ ಫಲವೋ ಅಥವಾ ಇನ್ನೇನಾದರೂವೋ ಎಂದು ಅವನು ಅಚ್ಚರಿಗೊಂಡನು.

ಅವನು ಮತ್ತೆ ತನ್ನ ಬರೆಯುವ ಮೇಜಿನ ಮುಂದೆ ಕುಳಿತನು. ಅವನಿಗೆ ಒಂದು ಮಗು ಹುಟ್ಟಿ ಅವನ ಜೀವನವೇ ಭವಿಷ್ಯದ ತೆರೆಯ ಮೇಲೆ ರೂಪಗೊಳ್ಳುತ್ತಿದ್ದ ಆ ಕ್ಷಣದಲ್ಲಿ ಅವನ ಸದ್ಯದ ಆಲೋಚನೆಗಳು ವಕ್ರಪಥವನ್ನು ಹಿಡಿದು ಗತಕಾಲಕ್ಕೆ ದೂರ ದೂರ ಸಾಗಿಹೋಗುತ್ತಿವೆಯೋ ಎಂಬಂತೆ ಅವನ ಹಿಂದಣ ಆಲೋಚನೆಗಳು ಅವನಲ್ಲಿ ಮರುಕೊಳಿಸಿದುವು.

ಅವನ ಭಾಗಕ್ಕೆ ಗತಕಾಲವೆಂದರೆ ಅನಾ—ಯಾವಾಗಲೂ ಆನಾ—ಅವಳೇ; ಅವಳು ಮತ್ತು ಅವಳ ಹೆಸರು: ಅನಾ!

ಅವನು ತನ್ನ ಮದುವೆಯಾದ ಮೇಲೆ ಆನಾಳನ್ನು ಹಲವು ಸಲ ಕಂಡಿದ್ದನು. ಅವಳಾದರೋ ಮದುವೆಯಾಗಲೇ ಇಲ್ಲ; ಮದುವೆಯಾಗುವುದಕ್ಕಿಂತ ಸ್ವತಂತ್ರವಾಗಿರುವುದು ಲೇಸು—ಹೀಗೆಂದು ಅವಳೇ ನಗುನಗುತ್ತ ಹೇಳುತ್ತಿದ್ದಳು. ಈಗ ಅವಳಿಗೆ ಇಪ್ಪತ್ತೇಳು ವಯಸ್ಸು; ಒಂಟಿ ಬಾಳು; ಮೇಲಿಂದ ಮೇಲೆ ಪ್ರಯಾಣಮಾಡುವಳು; ಯಾವಾಗಲೂ ಏನಾದರೂ ಕೆಲಸಮಾಡುತ್ತಲೇ ಇರುವಳು; ಆದರೂ ಎಂದಿನಂತೆಯೇ ಉಲ್ಲಾಸವಾಗಿದ್ದಾಳೆ, ಎಂದಿನಂತೆಯೇ ಅಂದವಾಗಿ ಕಾಣುತ್ತಾಳೆ. ಅವಳು ಕೆಲವು ವೇಳೆ ಇವರನ್ನು ನೋಡಲು ಬರುವಳು; ಐರೀನಳೊಂದಿಗೆ ಸ್ನೇಹದಿಂದ ವರ್ತಿಸುವಳು. ಅವನೊಂದಿಗೆ ಹೆಚ್ಚು ಮಾತುಕತೆಯಿಲ್ಲ—ಹೆಚ್ಚೆಂದರೆ ಒಂದೆರಡು ಮುಗುಳುನಗೆ; ಸ್ನೇಹಿತರಂತೆ ಅವನ ಕೈ ಕುಲುಕುವಳು. ತನ್ನ ತಾಯಿ ಅರ್ಧಮಟ್ಟಿಗೆ ಮಾತ್ರ ತಪ್ಪು ತಿಳಿದಳೆಂದು ಅವನು ಭಾವಿಸುವನು. ಆನಾ ಅಷ್ಟೊಂದು ಅತ್ಯಾಶೆಯುಳ್ಳವಳಲ್ಲದಿರಬಹುದು; ಆದರೂ ವಿಶ್ವಾಸಪರಳಲ್ಲವೆಂಬುದು ಖಂಡಿತ.

ಹಜಾರದಲ್ಲಿ ಹೆಚ್ಚು ಜನರಿರುವರೆ? ಯಾರೋ ಕೆಲಸಗಿತ್ತಿಯೊಂದಿಗೆ ತಗ್ಗು ದನಿಯಲ್ಲಿ ಮಾತಾಡುತ್ತಿದ್ದರು. ಆ ದನಿ ಅವನನ್ನು ಬೆಚ್ಚುಬೀಳುವಂತೆ ಮಾಡಿತು. ಬಳಿಕ, ಅವನ ಓದುವ ಕೋಣೆಯ ಬಾಗಿಲು ತೆರೆಯಿತು; ಸುಂದರವಾದ ಮುಖವೊಂದು ಕಾಣಿಸಿತು.

"ನಾನು, ಗೂಗ್ಲಿಲ್ಮೊ. ಒಳಕ್ಕೆ ಬರಲೋ?"

ತನ್ನ ಆಲೋಚನೆಗಳನ್ನೆಲ್ಲ ಮೇಜಿನ ಸಂದೂಕದೊಳಗೆ ಸೇರಿಸಿ ಮುಚ್ಚಿಡಲು ಬಯಸುವ ರೀತಿಯಲ್ಲಿ, ತಪ್ಪೆಸಗುವಾಗಲೇ ಸಿಕ್ಕಿಬಿದ್ದ ತಪ್ಪಿತಸ್ಥನಂತೆ, ನಿಸ್ಸಹಾಯಕನಾಗಿ ಮೇಜಿನ ಮೇಲೆ ಕೈಯಾಡಿಸಿದನು. ಆದರೆ ಆನಾ ಶಾಂತಳಾಗಿ, ಹಿಂದೆ ಮುಂದೆ ನೋಡದೆ, ಬಳಿಸಾರಿದಳು.

"ಹಾಗೆಯೇ ವಿಚಾರಿಸಿಕೊಂಡು ಹೋಗೋಣವೆಂದು ಬಂದೆ. ಹೇಗಿದ್ದಾಳೆ ಐರೀನ್?"

ಗೂಗ್ಲಿಲ್ಮೊ ಬಹಳ ಅನ್ಯಮನಸ್ಕನಾಗಿದ್ದುದನ್ನು ಕಂಡು, ಪ್ರೀತಿಯಿಂದ ಅವನ ಕಡೆ ನೋಡಿ, ಅವಳು ಮುಂದುವರಿಸಿದಳು.

"ಅಯ್ಯೋ ಪಾಪ. ನಿನಗೆ ತುಂಬ ಚಿಂತೆಗಿಟ್ಟುಕೊಂಡಿದೆ."

ಅವನು ಗೊಣಗಿದನು: "ಏನಿಲ್ಲ. ಡಾಕ್ಟರು ಬಂದಿದ್ದಾರೆ."

ಪ್ರೇಮದ ಹಾಗೂ ಜೀವನದ ಒಂದು ಘಟನೆಯಲ್ಲಿ ಅಷ್ಟೊಂದು ಆಸಕ್ತಿ ವಹಿಸಿದ್ದ ಈ ತರುಣಿಯನ್ನು ಕುರಿತು ತಟ್ಟನೆ ಅವನ ಮನಸ್ಸಿನಲ್ಲಿ ಒಂದು ಭಾವನೆ ಉದಿಸಿತು; ಅದು ಅವನ ಮನಸ್ಸನ್ನು ಕಲಕಿತು; ಏಕೆಂದರೆ, ಅವನು ಜಾಗರೂಕನಾಗಿದ್ದನು, ಪರಿಶುದ್ಧ ಮನಸ್ಕನಾಗಿದ್ದನು. ಅವನು ಅಪ್ರಯತ್ನವಾಗಿ ಅವಳ ಸುಂದರ ದೇಹವನ್ನು,—ಮಕ್ಕಳ ತಾಯಾಗಲು ಪೂರ್ಣವಾಗಿ ಹೊಂದಿಕೊಂಡಿದ್ದ ಅವಳ ದೇಹವನ್ನು—ದೃಷ್ಟಿಸಿದನು.

"ಒಂದು ಕ್ಷಣ ಕುಳಿತುಕೊ ಆನಾ........ನೀನು ದೊಡ್ಡ ಮನಸ್ಸುಮಾಡಿ ಬಂದದ್ದು ಬಹಳ ಸಂತೋಷ."

ಸ್ಥಾಯಿ ಬದಲಾಯಿಸಿದ ಸಂಗೀತ ಸ್ವರದಂತೆ, ಅವನ ಧ್ವನಿ ಅಪೂರ್ವವಾಗಿ ಕೇಳಿಸಿತವಳಿಗೆ. ಆನಾ ಅಚ್ಚರಿಗೊಂಡು ಅವನ ಕಡೆ ನೋಡಿದಳು; ಕ್ಷಣಕಾಲ ಅವಳು ಏನೂ ನುಡಿಯಲಿಲ್ಲ. ಆ ಮೇಲೆ ಕೇಳಿದಳು:

"ನಿನಗೆ ಏನಾದರೂ ಬೇಕಾಗಿದೆಯೇನು? ನನ್ನಿಂದ ಏನಾದರೂ ಉಪಯೋಗವಾದೀತೋ?"

ಉತ್ತರ ಕೊಡದಿರುವುದಕ್ಕೆ ಈಗ ಅವನ ಸರತಿ. ಅವರಿಬ್ಬರೂ ಸಿಲುಕಿದ್ದ ಮೌನದ ಸುಳಿ ಬರುಬರುತ್ತ ದೊಡ್ಡದಾಯಿತು. ಯಾವುದೋ ಬೇರೊಂದು ಧ್ವನಿಯನ್ನು, ಹಿಂದೊಮ್ಮೆ ನುಡಿದು ಈಗ ಮರೆತ ಇಲ್ಲವೆ ಹೇಳಬೇಕೆಂದು ಆಲೋಚಿಸಿ

ಹೇಳದೆ ಬಿಟ್ಟ ಮಾತುಗಳನ್ನು, ನೆನಪಿನಲ್ಲಿ ಆಲಿಸುತ್ತಿದ್ದಂತೆ ಅವನಿಗೆ ಭಾಸವಾಯಿತು. ಇದ್ದಕ್ಕಿದ್ದಂತೆ ಗೂಗ್ಲೀಲ್ಮೊ ಒಂದು ವಿಚಿತ್ರವಾದ ಪ್ರಶ್ನೆ ಹಾಕಿ ಮೌನವನ್ನು ಮುರಿದನು; ನಾಚಿಕೆಯ ಸ್ವಭಾವದ ಅಂಥವನಿಂದ ಅದು ಹೊರಬಂದದ್ದ ರಿಂದ ಆ ಪ್ರಶ್ನೆ ವಿಚಿತ್ರತರವಾಗಿ ಕಂಡಿತು; ಅದರಿಂದ, ಹೇಗೆ ಹೇಗೋ ಮುದ್ದಾಡಿದಂತೆ ಎನಿಸಿತು ಅವಳಿಗೆ.

"ನೀನೆಷ್ಟು ಒಳ್ಳೆಯವಳು ಅನಾ....ಏಕೆ ನೀನು ಮದು ವೆಯೇ ಆಗಿಲ್ಲವಲ್ಲ?"

ಅವಳು ಹುಚ್ಚಾಬಟ್ಟೆ ಕೆಂಪೇರಿದಳು; ಅವಳ ಮುಖವೆ ಲ್ಲವೂ ಬರಿದಾಗಿದ್ದ ಕೊರಳೂ ಅಚ್ಚಗೆಂಪಾದುವು. ಅವಳ ಕಣ್ಣನ್ನು ಕವಿದ ನೆನೆಪಿನ ನೆರಳನ್ನು ಮುಚ್ಚಿಡುವುದಕ್ಕಾಗಿ ಅವಳು ನಸುನಗಲು ಪ್ರಯತ್ನಿಸಿದಳು.

"ನೀನು ಈಗ ಯೋಚಿಸುತ್ತಿರುವುದೇನು, ಗೂಗ್ಲೀಲ್ಮೊ? ....ನಾನು ಮದುವೆಯಾಗದೆ ಒಂಟಿಯಾಗಿರುವುದು ಏಕೆಂ ದರೆ—ಏಕೆಂದರೆ, ನಾನು ಯಾರಿಗೂ........ಬೇಕಾಗಲಿಲ್ಲ...."

"ಓಹೋ!"

ಜೊತೆಗೆ, ಗೂಗ್ಲೀಲ್ಮೊ ಹೊಟ್ಟೆ ಹಿಡಿಸಲಾರದಷ್ಟೂ ಗೊಳ್ಳನೆ ನಕ್ಕನು. ಅವಳು ಯಾರಿಗೂ ಬೇಕಾಗಲಿಲ್ಲವೆ? ಊರಿನ ಇತರ ಎಲ್ಲ ಹುಡುಗಿಯರನ್ನೂ ಒಟ್ಟುಗೂಡಿಸಿ ಎಣಿಸಿದ್ದಕ್ಕಿಂತ ಹೆಚ್ಚು ಸಂಖ್ಯೆಯ ತರುಣರು ಅವಳ ಲೆಕ್ಕಕ್ಕೆ ಇದ್ದರಲ್ಲಾ!

"ನಿನಗೆ ಹೇಳಿದವರು ಯಾರು?"

"ಯಾರೆ, ನನ್ನ ತಾಯಿ."

"ನಿಮ್ಮ ತಾಯಿಗೆ ಏನೂ ತಿಳಿದಿರಲಿಲ್ಲ, ಪಾಪ. ಹೋ ಗಲಿ, ಆಗ ನಾನು ಒಂದು ಪ್ರತಿಜ್ಞೆಮಾಡಿದೆ ಎಂದು ಇಟ್ಟು ಕೊಳ್ಳೋಣ" ಎಂದು ಅನಾ ಇನ್ನೂ ನಗುತ್ತಲೇ ಹೇಳಿದಳು; ಆದರೆ ಅವಳು ನಿಜವಾಗಿ ಪೇಚಾಟಕ್ಕೆ ಸಿಲುಕಿದ್ದಳು.

"ಪ್ರತಿಜ್ಞೆಯೆ? ಆದರೆ ನಾವಿಬ್ಬರೂ ಚಿಕ್ಕವರಾಗಿದ್ದಾಗ ನೀನು ಆ ಇನ್ನೊಬ್ಬ—"

"ಆ ಮೇಲೆ ಪ್ರತಿಜ್ಞೆ ಮಾಡಬಹುದಲ್ಲ—"

"ನೀನು ಮಾಡಿದ್ದು ಯಾವಾಗ?"

"ಖಂಡಿತವಾಗಿ ಹೇಳಲಾರೆ....... ಸುಮಾರು ಐದಾರು ವರ್ಷಗಳ ಹಿಂದೆ—"

"ನಾನು ಮದುವೆಯಾದಾಗ, ಅಲ್ಲವೆ?"

ಅವಳು ಹೆಚ್ಚೂ ಹೆಚ್ಚೂ ಪೇಚಾಟಕ್ಕೆ ಸಿಲುಕಿದಂತವ ಳಾಗಿ, ಮಾತು ನಿಲ್ಲಿಸಿದಳು; ತುಟಿ ಕಚ್ಚಿಕೊಂಡಳು; ಅವಳು ಅವಿವೇಕದ ಮಾತಾಡಿದ್ದಳು.

ಗೂಗ್ಲೀಲ್ಮೊ ಹೇಳಿದ: "ಹೌದು, ಹೌದು. ನನಗೆ ನೆನಪಿದೆ, ನೀನು ಆ ವರ್ಷ ಅಸ್ವಸ್ಥವಾಗಿದ್ದೆ........ಯಾರಿಗೂ ಏನೆಂದು ಗೊತ್ತಾಗಲಿಲ್ಲ.....ನನಗೆ ನೆನಪಿದೆ—ನಾನು ಐರೀನ್ ಸ್ವಿಟ್ಸರ್ಲಂಡಿನಲ್ಲಿದ್ದೆವು....ಆ ಮೇಲೆ ಆ ವಿಚಾರ ಕೇಳಿ ತಿಳಿದೆ...." ಅವನು ಮುಗುಳುನಗೆ ನಗುತ್ತ ಮುಂದುವರಿಸಿದ: "ಆಗಲೇ ಅಲ್ಲವೆ ನೀನು ಹಾಗೆಂದು ನಿಶ್ಚಯ ಮಾಡಿದ್ದು?"

"ಹೋಗಿ ಬರುತ್ತೇನೆ, ಗೂಗ್ಲೀಲ್ಮೊ. ಮತ್ತೆ ಬರು ತ್ತೇನೆ. ಫೋನ್ ಮಾಡಿ ಎಲ್ಲ ವಿಚಾರವನ್ನೂ ನನಗೆ ತಿಳಿಸು."

"ಓಹೋ, ಅಗತ್ಯವಾಗಿ. ಅದೇಕೆ, ಕೈ ಕುಲುಕುವು ದಿಲ್ಲವೇನು?"

"ಅದಕ್ಕೇನು, ಆಗಲಿ. ಇಕೋ."

ಅವಳು ತನ್ನ ಹಸ್ತವನ್ನು ನೀಡಿದಳು. ಅವನು ಅದನ್ನು ಕುಲುಕಿ, ಅಪ್ರಯತ್ನವಾಗಿ ಅದನ್ನು ಹಿಡಿದುಕೊಂಡೇ ಇದ್ದನು. ಏನು ಸಮಾಚಾರವೋ? ಅದೇಕೆ ಅವಳ ಕೈ ಹಾಗೆ ನಡುಗು ತ್ತಿತ್ತು? ಅವನು ಕೈಯನ್ನು ಇನ್ನೂ ಬಲವಾಗಿ ಅದುಮಿದನು; ಅವಳು ಪರವಶಳಾಗಿ ಅವನಿಗೆ ತನ್ನನ್ನು ತಾನೇ ಅರ್ಪಿಸಿಕೊಂ ಡಂತೆ ಅವನಿಗೆ ಭಾಸವಾಯಿತು........(ಓಹ್, ಹಠಾತ್ತಾದ, ಭ್ರಾಮಕವಾದ, ಆದರೂ ನಿಶ್ಚಯವಾದ ಭಾವನೆ!)

ಈಗ ಅವನು ಒಬ್ಬನೇ ಇದ್ದನು; ತಾನು ಧೈರ್ಯಮಾಡಿ ಹೇಳಿದ ಮಾತಿಗಾಗಿ, ಬಗೆದ ಆಲೋಚನೆಗಾಗಿ, ಅಚ್ಚರಿ ಗೊಂಡನು. ಸತ್ಯವೇ ಮೂರ್ತಿಮತ್ತಾಗಿ ಅವನ ಮುಂದೆ ನಿಂತು ಅವನನ್ನು—"ನಿನಗೆ ಅರ್ಥವಾಗಲಿಲ್ಲವೇ?"—ಎಂದು ಪ್ರಶ್ನಿಸುತ್ತಿರುವಂತೆ ಅವನಿಗೆ ತೋರಿತು.

ಇಲ್ಲ—ಅವನಿಗೆ ಅರ್ಥವಾಗಿರಲಿಲ್ಲ. ಅವನು ತನ್ನ ತಾಯ ಕುರುಡುತನವನ್ನು ನಂಬಿ ಆಕೆ ಹೇಳಿದಂತೆ ನಡೆದಿ ದ್ದನು; ಪ್ರಪಾತದ ಅಂಚಿಗೆ ನಡೆದು ಹೋಗಿ ಅನಿವಾರ್ಯವಾಗಿ ಇವರೊಳಕ್ಕೆ ಮಗುಚಿಕೊಂಡಿದ್ದನು.

ಈಗ ಹಿಂದಿನದೆಲ್ಲವೂ ಅದರ ಸಹಜವಾದ ಬೆಳಕಿನಲ್ಲಿ ಅವನಿಗೆ ಗೋಚರವಾಯಿತು. ಅವನು ಅನೇಕ ವೇಳೆ ಅನಾ ಳನ್ನು ನೋಡಲು ಹೋಗಿದ್ದಾಗ, ಅವಳ ಮುಖಮಂಡಲವು ಬೆಳಗಿ ತೊಳಗುತ್ತಿತ್ತು; ಅವನು ಅವಳನ್ನು ನೋಡುವುದು ಅಪರೂಪವಾದಾಗ, ಅವಳು ಅಸುಖಿಯಾಗುತ್ತಿದ್ದುದನ್ನೂ ಅವನು ಬಲ್ಲನು. ಬಳಿಕ ಅವಳು ಅಸ್ವಸ್ಥಳಾದಳು; ಆ ಮೇಲೆ ಆ ಹಲವು ವರ್ಷಗಳಲ್ಲಿ ಉಪೇಕ್ಷಿತಳಾಗಿದ್ದ ಅವಳು ಬೇರೆ ಯಾರನ್ನೂ ಮದುವೆಯಾಗಲೊಪ್ಪಲೇ ಇಲ್ಲ........ಹಾಗಾದರೆ, ಅವಳೇಕೆ ಏನನ್ನೂ ಹೇಳಲಿಲ್ಲ? ಅದೇನು ನೊಂದ ಅಭಿಮಾ ನವೋ? ಇಲ್ಲನೆ, ಮುಖಭಂಗವಾಗಬಹುದೆಂಬ ಹೆದರಿಕೆಯೋ? ಇಲ್ಲ; ನಿಜವಾಗಿ ಅವಳಾದರೂ ಅರ್ಥಮಾಡಿಕೊಂಡಿರಲಿಲ್ಲ.

ಈಗಲೋ? ತಟ್ಟನೆ ಎಲ್ಲವೂ ಬೆಳ್ಳಂಬೆಳಕು!.....ಅವಳ ಮುಖ ಕೆಂಪೇರಿದ್ದು, ಅವಳ ಕೈನಡುಕ........ಅನಾ ತನ್ನನ್ನು ಇನ್ನೂ ಪ್ರೀತಿಸುತ್ತಾಳೆ........"ಇಲ್ಲ; ಅದು ಸಾಧ್ಯ ವಿಲ್ಲ" ಎಂದು ಅವನು ತನಗೆ ತಾನೇ ಹೇಳಿಕೊಂಡನು. ಆದರೆ ಅವನ ಹೃದಯ ಸಹಜಪ್ರೇರಣೆಯನ್ನು ಪಡಿನುಡಿಯುವಂತೆ

ಮಂದವಾಗಿ ಸ್ಪಂದಿಸುತ್ತಿತ್ತು. ಅದು ಹಾಗೆಯೇ ಸರಿ, ಅದು ಹಾಗೆಯೇ ಸರಿ........

ದಾರುಣ ವೇದನೆಯ ಭೀಕರ ಚೀತ್ಕಾರವೊಂದು ಅವನ ಆಲೋಚನೆಯ ಎಳೆಯನ್ನು ಕತ್ತರಿಸಿತು. ತನ್ನ ಮಗು, ತನ್ನ ದೇಹದ ಒಂದು ಭಾಗ, ಹುಟ್ಟುವುದರಲ್ಲಿತ್ತು; ತಾನಿಲ್ಲವಾದ ಮೇಲೆ ತನ್ನ ಬಾಳನ್ನು ಮುಂದುವರಿಸುವುದಾಗಿತ್ತು. ಒಂದು ಹೊಸ ನಲಿವು, ತನ್ನ ಮಗು, ತನ್ನೆಡೆಗೆ ಬಂದಿರುವಾಗ ತಾನು ಇಲ್ಲಿ ಕುಳಿತು ಕಣ್ಮರೆಯಾದ ಸುಖವನ್ನು ಕುರಿತು ಚಿಂತಿಸುತ್ತಿದ್ದಾನೆ! ಆದರೂ ಆನಾಳ ನೆನಪು ಇನ್ನೂ ಕಾಡುತ್ತಿದೆ. ಅಂತೂ ಈ ಎರಡು ಹೆಚ್ಚಿನ ನಲಿವುಗಳು—ಒಂದು ಅಸಾಧ್ಯವಾದದ್ದು, ಬತ್ತಿಹೋದದ್ದು; ಇನ್ನೊಂದು ಬಹು ಹತ್ತಿರದ್ದು, ಬಹು ಮಟ್ಟಿಗೆ ಖಚಿತವಾದದ್ದು—ಇವೆರಡು ಹೇಗೋ ಒಂದರೊಡನೆ ಒಂದು ಬೆರೆತು, ಪರಸ್ಪರ ಪೂರಕವಾಗಬೇಕು........

"ಗೂಗ್ಲಿಲ್ಮೊ"

ಡಾಕ್ಟರು ಅವನ ಮುಂದೆ ಕಳವಳಗೊಂಡು ನಿಂತಿದ್ದರು; ಅವರ ಮುಖ ವಿವರ್ಣವಾಗಿತ್ತು. ಗೂಗ್ಲಿಲ್ಮೊ ಚಿಗಿದು ನಿಂತು, ಗಾಬರಿಗೊಂಡು ಕೇಳಿದನು:

"ಏನು? ಏನು ಸಮಾಚಾರ?"

ಡಾಕ್ಟರು ಗಂಭೀರ ವಾಣಿಯಲ್ಲಿ ಹೇಳಿದರು: "ಆಕೆ ಅಪಾಯದಲ್ಲಿದ್ದಾಳೆ. ಅನಿರೀಕ್ಷಿತವಾಗಿ ತೊಡಕುಂಟಾಗಿದೆ. ಆದರೂ ಇನ್ನೂ ಆಶೆಯಿದೆ; ಶಸ್ತ್ರಚಿಕಿತ್ಸೆ ಮಾಡಬೇಕಾದೀತು. ನಿನಗೆ ತಿಳಿಸುವುದು ಮೇಲೆಂದು ತೋರಿತು........"

ಗೂಗ್ಲಿಲ್ಮೊವಿನ ತಲೆ ತಿರುಗಿದಂತಾಯಿತು. ಜೀವವನ್ನು ನೋವಿಗೆ ಬಲಿಕೊಟ್ಟು ನರಳುತ್ತಿದ್ದ ತನ್ನ ಹೆಂಡತಿಯನ್ನು ನೆನೆದನು.

ಡಾಕ್ಟರು ಮುಂದುವರಿಸಿದರು: "ನಿನ್ನನ್ನು ಕೇಳೋಣವೆಂದು ಬಂದೆ. ಈಗ ಯಾವುದು ಉತ್ತಮ ಪಕ್ಷವೆಂಬುದನ್ನು ನಿನ್ನ ಅಂತರಾತ್ಮ ನಿರ್ಧರಿಸಬೇಕು. ಇಬ್ಬರಲ್ಲಿ ಒಬ್ಬರನ್ನು ಮಾತ್ರ ಉಳಿಸಬೇಕಾಗಿ ಬಂದರೆ, ಯಾರನ್ನು ಉಳಿಸಲಿ—ತಾಯಿಯನ್ನೆ, ಮಗುವನ್ನೆ?"

"ಏನು?"—ಗೂಗ್ಲಿಲ್ಮೊ ಸತ್ತವನ ಹಾಗೆ ಬಿಳಿಚಿಕೊಂಡು ಚೀರಿದನು.

"ಹೌದು. ಇರುವ ಸಂಗತಿ ಹೀಗೆ. ಇಬ್ಬರಲ್ಲಿ ಒಬ್ಬರನ್ನು ಉಳಿಸುವುದು ವಿಜ್ಞಾನಕ್ಕೆ ಸಾಧ್ಯ. ನಿಮಗೆ ನಾನು ಅಷ್ಟು ಮಟ್ಟಿಗೆ ಭರವಸೆ ಕೊಡಬಲ್ಲೆ. ಆದರೆ, ಬಹುಶಃ ಇಬ್ಬರನ್ನೂ ಸಾಧ್ಯವಾಗಲಾರದು........ಯೋಚನೆಮಾಡಿ ನನಗೆ ತಿಳಿಸಿ........"

ಗೂಗ್ಲಿಲ್ಮೊವಿನ ಕಣ್ಣಮುಂದೆ ಅವನ ಹೊಸ ಜೀವ ಮಿಂಚಿನಂತೆ ಹೊಳೆದು ಗೋಚರವಾಯಿತು; ವಿಧಿಯೇ ಕೈಯೆತ್ತಿ ಕೊಡಬಂದಿದ್ದ ಹೊಸ ಜೀವ, ಅವನ ಬಾಳಿನ ಮುಂದೆ ಒಡ್ಡಿದ ಒಂದು ಹೊಸ ಸೆಳೆತ. ಜೊತೆಗೆ ಗಂಡು ಜೀವ, ಪುತ್ರ; ಅವನ ಬಾಳಿನ ಗುರಿ. ಆನಾ; ಮತ್ತು ಅವಳೊಂದಿಗೆ ಸುಖಜೀವನ. ಎಲ್ಲವೂ ಮಾರ್ಪಡುವುದು; ಎಲ್ಲವೂ ಹೊಸತಾಗುವುದು. ಅವನ ಸೌಖ್ಯವು ಕಳೆಗುಂದಿ ನಿಸ್ತೇಜವಾಗಿರುವುದರ ಬದಲು, ಅವನು ಅನೇಕ ಸಲ ಕನಸು ಕಂಡಂತೆ ಪ್ರಕಾಶಮಾನವಾಗಿ ಉಜ್ವಲವಾಗಿರುವುದು. ಇನ್ನು ಮುಂದೆ ಕರ್ತವ್ಯ ಪಾಲನೆಗೆ ಬದಲು ಪ್ರೇಮ; ಪರಿಪಾಠಕ್ಕೆ ಬದಲು ವ್ಯಾಮೋಹ........ಐರೀನ್ ಸತ್ತುಹೋದರೆ, ಆನಾಳನ್ನು ತಾನು ಮದುವೆಯಾಗಬಹುದು........ತನಗೆ ಯಾವುದು ಬೇಕೋ ಅದನ್ನು ಕೈನೀಡಿ ಆರಿಸಿಕೊಳ್ಳಬೇಕಾಗಿದೆ, ಅಷ್ಟೆ. ಯಾರು ತಾನೆ ತನ್ನನ್ನು ನಿಂದಿಸುವರು? ಜೀವನದ ನಿಯಮಕ್ಕೆ ಮನುಷ್ಯ ಜಾತಿಯ ಆವಶ್ಯಕತೆಗೆ ಕಟ್ಟುಬಿದ್ದು ತಾನೆ ತಾನು ನಡೆದುಕೊಳ್ಳುತ್ತಿರುವುದು?

"ಅಯ್ಯೋ ದೇವರೇ!" ಎಂದ ಗೂಗ್ಲಿಲ್ಮೊ ನರಳುದನಿಯಲ್ಲಿ ನುಡಿದನು.

ಅವನ ಹೃದಯ ನುಡಿಯುತ್ತಲೇ ಇತ್ತು:

"ನೀನು ನಿನ್ನ ಹೆಂಡತಿಯನ್ನು ಹೇಗೂ ಪ್ರೀತಿಸುವುದಿಲ್ಲ. ನಿನ್ನ ಭಾಗಕ್ಕೆ ಅವಳು ಇದ್ದರೂ ಒಂದೆ ಇಲ್ಲದಿದ್ದರೂ ಒಂದೆ. ನೀನು ಅವಳೊಂದಿಗೆ ಮಕ್ಕಳಿಲ್ಲದೆ ಒಂಟಿಯಾಗಿ ಜೀವಿಸುತ್ತ ಹೋಗಬೇಕಾದೀತು. ಎರಡನೆಯ ಸಲವೂ ಆ ಇನ್ನೊಬ್ಬಳು ಕೈತಪ್ಪಿ ಹೋದಾಳು, ಜೋಕೆ ಸ್ವಲ್ಪ ಯೋಚಿಸಿ ನೋಡು.....ಇಷ್ಟೆಲ್ಲಾ ನಿನ್ನ ತಪ್ಪಿನಿಂದ. ಹ್ಞೂ, ಹೇಳು.....ಎರಡು ಮಾತು.....ಅದು ಅಷ್ಟು ಕಷ್ಟವೆ? ಅಯ್ಯೋ ಮಂಕೇ, ಹೇಳು; 'ಮಗು' ಎಂದು ಹೇಳು." ಅವನು ತಲೆಯೆತ್ತಿ ನಿರ್ವಿಣ್ಣನಾಗಿ ನುಡಿದನು:

"ತಾಯಿಯನ್ನು ಉಳಿಸಿಕೊಡಿ!"

ವಿಮರ್ಶೆ - ವಿಮರ್ಶಕ

[ಲೇಖಕರು: ಶ್ರೀ ಆರ್. ಎಸ್. ರಾಮರಾವ್, ಬೆಂಗಳೂರು.]

ಕನ್ನಡ ಸಾಹಿತ್ಯದಲ್ಲಿ ವಿಮರ್ಶನಕಾರ್ಯ ಅಷ್ಟಾಗಿ ಪೂರ್ಣವಾಗಿ ಬೆಳೆದಿಲ್ಲ. ಪಾಶ್ಚಾತ್ಯ ಸಾಹಿತ್ಯದಲ್ಲಿ ವಿಮರ್ಶೆ ಎಂದರೆ ಅದೂ ಸಾಹಿತ್ಯದಂತೆ ಒಂದು ಕಲೆ ಎಂಬಂತೆ ಬೆಳೆದಿದೆ. ಷೇಕ್ಸ್‌ಪಿಯರ್ ಮುಂತಾದ ನಾಟಕಕಾರರ ಗ್ರಂಥಗಳ ವಿಷಯದಲ್ಲಿ ನಿರೂಪಿತವಾದ ವಿಮರ್ಶನ ಪ್ರಬಂಧಗಳು ಕಲಾಪೂರ್ಣವಾಗಿ ಹೃದಯಂಗಮವಾಗಿರುತ್ತವೆ. ನಮ್ಮಲ್ಲೂ ಶ್ರೀ. ಎ. ಆರ್. ಕೃಷ್ಣ ಶಾಸ್ತ್ರಿಗಳ 'ಸಂಸ್ಕೃತ ನಾಟಕ' 'ಭಾಸ ಕವಿ' ಮೊದಲಾದ ವಿಮರ್ಶ ಗ್ರಂಥಗಳು ಆ ಮಾದರಿಗೆ ಸೇರಿದವು ಎಂದು ಹೇಳಬಹುದು. ಆದರೆ ಅಂಥ ವಿಮರ್ಶೆಗಳು ಕೈ ಬೆರಳಿನಲ್ಲಿ ಎಣಿಸಬಹುದಾದಷ್ಟು. ಅವರು ಮಾರ್ಗ ತೋರಿಸಿ ಕೊಟ್ಟಿದ್ದಾರೆ. ಆ ದಾರಿಯಲ್ಲಿ ಪ್ರಯಾಣಮಾಡುವ ಪ್ರಯಾಣಿಕರು ಇನ್ನೂ ಪ್ರಸ್ತಾನ ಕಟ್ಟಿಲ್ಲ. ಕನ್ನಡದಲ್ಲಿ ಈಗ ಪ್ರಕಟವಾಗುತ್ತಿರುವ ವಿಮರ್ಶನಭಾಗ 'ವಿಮರ್ಶೆ' ಎಂಬ ಶಬ್ದಾರ್ಥವನ್ನೂ ಸೂಚಿಸುತ್ತದೆಯೋ ಇಲ್ಲವೊ ಎಂಬ ಸಂದೇಹವಿದೆ. ಪ್ರತಿಯೊಂದು ಪತ್ರಿಕೆಗಳವರು ಈ ವಿಧವಾದ ಸಾಹಿತ್ಯ ಬಗೆಗೆ ಒಂದೆರಡು ಪುಟಗಳನ್ನು ಮೀಸಲಾಗೇನೋ ಇಟ್ಟಿರುತ್ತಾರೆ. ಆದರೆ ಅಲ್ಲಿ ಪ್ರಕಟವಾಗುವ ವಿಮರ್ಶೆಯು ಸತ್ವಪೂರ್ಣ, ಪಾಕದ್ದಲ್ಲ.

ವಿಮರ್ಶೆಗೂ ಪುಸ್ತಕ ಪರಿಚಯಕ್ಕೂ ಅಜಗಜಾಂತರವಿದೆ. ಪುಸ್ತಕ ಪರಿಚಯಕ್ಕೂ ಒಂದು ಕ್ರಮವಿರುವುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ ನೋಡಿದರೆ ವಿಮರ್ಶಕನಿಗೂ ಗ್ರಂಥ ಪರಿಚಯಕಾರನಿಗೂ ಭೇದವೇ ಇಲ್ಲ. ಗ್ರಂಥ ಸಮೀಕ್ಷಕನ ಕಾರ್ಯ ಗ್ರಂಥ ಪರೀಕ್ಷೆ. ಗ್ರಂಥ ಪರಿಚಯಕಾರ ಅಬುದ್ಧಿವಂತ ಓದುಗನಿಗೋಸ್ಕರ ಪುಸ್ತಕವನ್ನು ಪರಿಚಯ ಮಾಡಿಕೊಡುತ್ತಾನೆ. ಇವರಿಬ್ಬರಿಗೂ ಒಂದು ದೃಷ್ಟಿಯಿಂದ ನೋಡಿದರೆ ಏನೂ ಭೇದ ಕಾಣಿಸುವುದಿಲ್ಲ. ಮತ್ತೊಂದು ದೃಷ್ಟಿಯಿಂದ ಕಾಣುವಾಗ ಸೂಕ್ಷ್ಮಭೇದಗಳೂ ತೋರುತ್ತವೆ.

ವಿಮರ್ಶೆಯ ವಿಷಯವನ್ನು ಪ್ರಸ್ತಾವಿಸುತ್ತಾ ಒಬ್ಬನು 'The whole effort of a sincere man is to erect his personal impressions into laws' ಎಂದಿದ್ದಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ನಿಯಮಗಳನ್ನು ರಚಿಸುವುದರಲ್ಲಿ ವಿಮರ್ಶಕನು ಅನುಸರಿಸುವ ಮಾರ್ಗ. ತನ್ನ ಅಭಿಪ್ರಾಯಗಳನ್ನು ಸೂತ್ರದಂತೆ ಪಟ್ಟಿ ಮಾಡುವುದಲ್ಲ. ಅವನ್ನು ಗ್ರಂಥದಲ್ಲಿ ನಿರೂಪಿತವಾದ, ತಾನು ಸಮಾಜದಲ್ಲಿ ಕಂಡ ಅನುಭವಗಳೊಂದಿಗೆ ತೂಗಿ ನೋಡಿ, ಅಳೆದು ಸುರಿದು ತನ್ನ ತೂಕವಾದ ಅಭಿಪ್ರಾಯಗಳನ್ನು ಹೊರಗೆಡಹಬೇಕು. ಅದು ಅವನ ಅನುಭೂತ ಭೂತಕಾಲದ ಅಭಿಪ್ರಾಯಗಳು, ಅನುಭವಗಳು ಅವುಗಳ ಪ್ರತಿಕಾರ್ಯಗಳು. ಅವು ಅವನ ಸ್ವಂತ ನಿಯಮಕ್ಕೆ ಒಳಪಟ್ಟವು. ಸ್ವಂತ ಮಾರ್ಗವನ್ನು ಅನುಸರಿಸತಕ್ಕವು. ಸ್ವಂತ ಪ್ರಯತ್ನದಿಂದಲೇ, ಸ್ವಕೀಯ ಅನುಭವದಿಂದಲೇ ಹೊಳಪುಗೊಂಡದ್ದು. ಈ ರೀತಿಯ ಒಂದು ಕ್ರಮ, ಒಂದು ರೀತಿ, ಒಂದು ಕಟ್ಟು ಇಲ್ಲದ ವಿಮರ್ಶಕ ವಿದ್ಯಾಡಾಂಭಿಕ

ವಿಮರ್ಶೆಯ ಕಾರ್ಯ ಮುಖ್ಯವಾಗಿ ಸಾಹಿತ್ಯದ ಕಾರ್ಯ. ಸ್ವಂತ ಅನುಭವಕ್ಕೆ ದಾರಿಮಾಡಿ ಕೊಡುವುದು ಎಂದರೆ ವಿಮರ್ಶಕನ ಅನುಭವ ಪ್ರದರ್ಶನಕ್ಕೆ ನೆರವಾಗುವುದು ಈ ಕಾರ್ಯ. ಅವನೂ ಇತರ ಬರಹಗಾರರಂತೆ ಘನೋದ್ದೇಶದಿಂದಲೇ ತನ್ನ ವಸ್ತು ಜ್ಞಾನದ ಮೇಲೆ ಬರೆಯುತ್ತಾನೆ. ತನ್ನ ಅಭಿಪ್ರಾಯಗಳನ್ನೂ ನಿರ್ಧಾರಗಳನ್ನೂ ಸಮಂಜಸವಾಗಿ ಕೊಡುತ್ತಾನೆ. ಅದೂ ಸಾಹಿತ್ಯವೇ ತಾನೆ? ಅವನ ಬರವಣಿಗೆ ಅಚರಷ್ಟಕ್ಕೆ ಸ್ವತಂತ್ರವಾದದ್ದು; ಸಹೃದಯರಿಗೆ ಉಪಯೋಗವಾಗುವಂಥದು. ತನ್ನ ಅನುಭೂತಿಯನ್ನು ತಾನು ವಿಮರ್ಶೆಗೆ ತೆಗೆದುಕೊಂಡ ಗ್ರಂಥಾಭಿಪ್ರಾಯದೊಂದಿಗೆ ಹೆಣೆದು ಅದನ್ನು ಪ್ರಸಾರಮಾಡುತ್ತಾನೆ. ಆ ಅನುಭವ ಸಾರ್ವಜನಿಕವಾಗುವಂತೆ ಪ್ರಯತ್ನಿಸುತ್ತಾನೆ. ಸಾಧಾರಣ ಬರಹಗಾರರಲ್ಲಿ ಕಾಲಾನುಕ್ರಮದಲ್ಲಿ ಕಂಡುಬರುವ ದೋಷದಿಂದ ಇವನೂ ದೂರನಾಗಲಾರ. ಕಾಲಾನುಕಾಲದಲ್ಲಿ ಈತನೂ ತಾನು ಜನಜೀವನಕ್ಕೆ ಅತಿ ಸಮೀಪನಾಗುವುದರಿಂದಲೋ ಅಥವಾ ಸಂನ್ಯಾಸಿಯಂತೆ ಅತಿ ದೂರನಾಗುವುದರಿಂದಲೋ ಅಭಿಪ್ರಾಯ ಕುಬ

ನಾಗುತ್ತಾನೆ. ಏಕೆಂದರೆ ಜೀವನದ ಹೋಲಿಕೆಯ ದೃಷ್ಟಿ ಅಲ್ಪವಾದ ಅನುಭವದಿಂದ ಸಂಕುಚಿತವಾಗುತ್ತದೆ ಇಲ್ಲವೆ ಮಂದವಾಗುತ್ತದೆ. ಮಾನವ ಜನಾಂಗವೇ ಜೀವನ ಸಾಹಿತ್ಯದ ನಿರ್ಣಾಯಕ ಶಕ್ತಿ. ಜೀವನ ಸಾಹಿತ್ಯ ಜೀವನದ ಕೂಡಿಟ್ಟ ಸ್ವತ್ತು.

“ಮಾನವ ಪ್ರಕೃತಿಯ ಪ್ರತಿಬಿಂಬಗಳನ್ನು ಬಿಟ್ಟು ಯಾವುದೂ ಬಹಳ ಕಾಲ ನಿಲ್ಲುವುದಿಲ್ಲ. ಬಹು ಜನರನ್ನು ಆನಂದಗೊಳಿಸುವುದಿಲ್ಲ. ಕೆಲವು ರೀತಿನೀತಿಗಳು ಕೆಲವು ಗುಂಪಿಗೆ ಮಾತ್ರ ತಿಳಿದಿರಬಹುದು. ಅವರು ಮಾತ್ರ ಅವು ಹೇಗೆ ಜೀವನದಿಂದ ಪ್ರತಿಕೃತಿಯಾಗಿದೆ ಎಂದು ತೀರ್ಪುಕೊಡಬಹುದು. ವಿನೋದ ಶೋಧನೆಗಳೂ ಆಕ್ರಮಕೂಟಗಳೂ ಅಲ್ಪಕಾಲ ಆನಂದದಾಯಕವಾಗಿದ್ದರೂ ಜೀವನದ ಅತಿತೃಪ್ತಿ ಅಥವಾ ಅತೃಪ್ತಿ ನಮ್ಮನ್ನು ಹೊಸ ಹೊಸದರ ಅನ್ವೇಷಣೆಗೆ ಅಟ್ಟುತ್ತದೆ. ತಕ್ಷಣ ಆಶ್ಚರ್ಯದ ಆನಂದ ಬಹು ಬೇಗ ಮುಗಿದು ಹೋಗಿ ಮನಸ್ಸು ಸತ್ಯದ ಹಾಸಿಗೆಯ ಮೇಲೆ ವಿಶ್ರಾಂತಿಪಡೆಯುತ್ತದೆ”ಎಂದು ಡಾ|ಜಾನ್‌ಸನ್ ಹೇಳುತ್ತಾರೆ.

ವಿಮರ್ಶಕನ ಸ್ಥಾನ ಸ್ಥಿರವೊ ಅಸ್ಥಿರವೊ ಅವನ ಅನುಭವ ಸತ್ಯದಿಂದ ಗೊತ್ತಾಗುತ್ತದೆ. ಅವನು ಸತ್ಯವನ್ನು ಪ್ರತಿಪಾದಿಸುವ ನೈಪುಣ್ಯವನ್ನು ಅವಲಂಬಿಸುತ್ತದೆ. ವಿಮರ್ಶಕ ಓದುಗರನ್ನು ಕುತೂಹಲಗೊಳಿಸಬೇಕು ನಿಜ; ಆಸೆ ಹುಟ್ಟಿಸಬೇಕು ನಿಜ. ಪ್ರತಿಯೊಬ್ಬ ಗ್ರಂಥಕರ್ತನೂ ತನ್ನ ವಾಚಕರ ಕುತೂಹಲವನ್ನೂ ಆಸೆಯನ್ನೂ ಕೆರಳಿಸಲೇಬೇಕು. ಆದರೆ ವಿಮರ್ಶಕ ಗ್ರಂಥಕರ್ತನಿಗಿಂತ ಹೆಚ್ಚಿನ ಕುತೂಹಲವನ್ನು ಕೆರಳಿಸುವ ಗುರಿ ಇಟ್ಟುಕೊಳ್ಳಬಾರದು. ಈಗ ಇದೊಂದು ಸಂಪ್ರದಾಯವಾದಂತೆ ಕಾಣುತ್ತಿದೆ. ತನ್ನ ಮಾತಿನ ಚಾಕಚಕ್ಯತೆಯಿಂದ ವಾಕ್ಯದ ತಿರುವುಗಳಿಂದ ತನ್ನ ಕಾರ್ಯವನ್ನು ಸಾಗಿಸುತ್ತಾನೆ. ಹೊಸ ಪುಸ್ತಕವನ್ನು ಉತ್ತಮ ಪುಸ್ತಕವನ್ನಾಗಿ ಮಾಡುವುದೂ ತಮಗೆ ಬೇಕಾದ ಪುಸ್ತಕಗಳನ್ನು ಹೊಗಳಲು ಕಾಡಿನಲ್ಲಿ ನುಗ್ಗಿ ಮೈ ಕೈ ಪರಚಿಸಿಕೊಂಡರೂ ಔಷಧವು ಎಂದು ಕೆಲವು ಸೊಪ್ಪುಗಳನ್ನು ಆರಿಸಿಕೊಂಡು ಇದೇ ಅಮೂಲ್ಯವಾದುವು ಎಂದು ಹೇಳುವಂತೆ ಕೆಲವು ಸಣ್ಣ ಸಣ್ಣ ಸನ್ನಿವೇಶಗಳನ್ನೊ ಘಟನೆಗಳನ್ನೊ ವಿಸ್ತರಿಸಿ ವರ್ಣಿಸುವುದೂ ಇವರ ಕಾರ್ಯ. ಪುಸ್ತಕ ಯಾವ ವಿಷಯವನ್ನೇ ಪ್ರತಿಪಾದಿಸಲಿ ಅದರ ಜೀವಾಳ ಏನೇ ಇರಲಿ ವಿಮರ್ಶಕ ತನ್ನ ಓದುಗರಿಗೆ ಅದರ ರುಚಿಯನ್ನು ಉಣಿಸಬೇಕು ಎಂಬುದು ಈ ಗುಂಪಿನವರ ವಾದ. ಇದೊಂದು ಅಪರಿಚಿತ ವರ್ಗದ ವಾದ. ಇವರ ಕಾಲ ಅಲ್ಪ.

ವಿಮರ್ಶೆ ಸಾಹಿತ್ಯ ಕಲೆಯ ಒಂದು ಕಲಾಂಶ. ಕಲಾಕಾರ್ಯವನ್ನು ವಿಮರ್ಶಕ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಕಲಾಸಿದ್ಧಿಗಾಗಿ ಹೋರಾಡುವ ಅವನಿಗೆ ತನ್ನ ಕಲೆಯ ವಿಷಯದಲ್ಲಿ ಜನ ಅನಾದರಣೆಯನ್ನು ತೋರಿಸಬಹುದು. ಅದರಿಂದ ಅವನ ಮನಸ್ಸು ನೊಂದುಕೊಳ್ಳುವ ಸ್ಥಿತಿಯಲ್ಲಿರಬಾರದು. ತನ್ನ ಕಲೆಗೆ ಜನಾದರಣೆಬೇಕೆಂಬ ಬಯಕೆಯಿಂದ ಆತ್ಮದ್ರೋಹ ಬಗೆದುಕೊಳ್ಳಬಾರದು ಅವನು. ಶಿಲ್ಪಿ ತನ್ನ ಕೃಷ್ಣ ವಿಗ್ರಹವನ್ನು ಜನ ಮೆಚ್ಚಲಿ ಎಂದು ಅದಕ್ಕೆ ಮೀಸೆ ಇಡಲು ಇಷ್ಟಪಡುವುದಿಲ್ಲ. ವಿಮರ್ಶಕನ ಕರ್ತವ್ಯ ತನ್ನ ಅಭಿಪ್ರಾಯಗಳಿಗೆ ರೂಪ ಕೊಡುವುದು, ತನ್ನ ಮುಂದಿರುವ ಸಾಹಿತ್ಯ ಕರ್ಮದ ಮೇಲೆ ತನ್ನ ಅಭಿಪ್ರಾಯಗಳನ್ನು ಬಹಿರಂಗಪಡಿಸುವುದು. ಆದ್ದರಿಂದ ತನ್ನ ಅಭಿಪ್ರಾಯ ಹೃದಯದಿಂದ ಬಂದದ್ದು ನಿಜವಾದದ್ದು ಎಂದು ಅವನು ಮೊದಲು ನಿರ್ಧಾರಮಾಡಿಕೊಳ್ಳಬೇಕು. ತನ್ನ ವಿವೇಕದ ಕ್ಷಣಿಕ ಕ್ಷೋಭೆಗಳನ್ನೂ ಅಕಸ್ಮಾತ್ ಪ್ರಲೋಭನೆಗಳನ್ನೂ ಕಾದುಕೊಂಡು ನಿರ್ವೇಗಪರವಾದ ಅಭಿಪ್ರಾಯ ಕೊಡಬೇಕು. ಆ ಸಾಧನೆಗೆ ಒಂದು ಕ್ರಮ ಆವಶ್ಯಕ. ತನ್ನ ಸಂತತವಾದ ಪ್ರತಿಕಾರ್ಯಗಳನ್ನು ಅನುಭವದ ಒರೆಗಲ್ಲಿನಲ್ಲಿ ಉಜ್ಜಿ ಮರೀಚ ಮೃಗರೂಪಿ ಹಂಬಲಗಳನ್ನೂ ದುರಾಶೆಗಳನ್ನೂ ಉದ್ರೇಕಗಳನ್ನೂ ಬದಿಗಿಟ್ಟು ಒಂದು ಸಮಷ್ಟಿ ಮಾರ್ಗವನ್ನು ಹುಡುಕಿಕೊಳ್ಳಬೇಕು. ತನ್ನ ಮುಂದಿರುವ ಸಾಹಿತ್ಯಕರ್ಮದ ಭಾವವನ್ನು ಸ್ಪಷ್ಟಪಡಿಸುವುದರಲ್ಲಿ ಮಾತ್ರ ಅವನು ಆಸಕ್ತ. ಆತನ ತೀರ್ಪು ಭಾವದ ತೀರ್ಪು; ಅರ್ಥದ ತೀರ್ಪು. ಸಾಹಿತ್ಯದಲ್ಲಿ ಅನೇಕ ಬಗೆಯ ಭಾವಗಳಿವೆ. ಅರ್ಥಗಳಿವೆ. ಚಾರಿತ್ರಿಕ, ನೈತಿಕ, ಸೌಂದರ್ಯಸೂಚಕ ಭಾವಗಳು. ಅಂದರೆ ಮಾನವ ಜ್ಞಾನದ ಒಂದು ಮುಖ್ಯ ಭಾಗದ ಒಂದು ಮುಖ್ಯಾಂಶವಾಗಿರಬಹುದು. ಅಥವಾ ಜೀವನದ ಒಂದು ಅಂಶದ ದಾರಿಯನ್ನು ಸೂಚಿಸುವುದರಲ್ಲಿ ಪ್ರಧಾನವಾಗಿರಬಹುದು; ಓದುಗನಲ್ಲಿ ಕಲೆಯ ಭಾವವನ್ನು ಹೊರಪಡಿಸುವ ಕಲಾಪೂರ್ಣಾಂಶವಾಗಿರಬಹುದು. ಇವುಗಳಲ್ಲಿ ಒಂದು ಅಥವಾ ಎಲ್ಲದರ ಸಮಷ್ಟಿಯಾಗಿರಬಹುದು. ಈ ಭಾವಗಳಲ್ಲಿ ಯಾವುದಾದರೊಂದರ ಕಡೆಗಾದರೂ ವಿಮರ್ಶಕನ ಮನಸ್ಸು ಒಲಿದಿರಲೇಬೇಕು. ಅವನು ಚರಿತ್ರಕಾರನಾಗಿರಬಹುದು, ನೀತಿಬೋಧಕನಾಗಿರಬಹುದು; ಶಿಲ್ಪಜ್ಞನಾಗಿರಬಹುದು. ತನ್ನ ಒಲವು ಯಾವುದರ ಕಡೆಗೆ ಎಂಬುದರ ಜ್ಞಾನ ಅವನಿಗೆ ಕರ್ಮಸಾಕ್ಷಿಯಾಗಿರಬೇಕಲ್ಲದೆ ತನ್ನ ಜೊತೆಯಲ್ಲಿಯೇ ಓಡಿಹೋಗುವ ಕ್ಷಣಿಕಸತ್ವವುಳ್ಳದ್ದಾಗಿರಬಾರದು. ನಿಜವಾದ ವಿಮರ್ಶಕ ಈ ಎಲ್ಲ ಒಲವುಗಳನ್ನು ಹದವಾಗಿ ಬೆರಸುತ್ತಾನೆ. ಇಂಥ ವಿಮರ್ಶಕರು ಒಳ್ಳೆಯ ಕೃತಿಕಾರರಂತೆಯೇ ವಿರಳ. ಅನನುಭವಿಯಾದ ವಿಮರ್ಶಕ ಸಾಹಿತ್ಯದಲ್ಲಿ, ಮತ್ತು ಇತರ ವಿಧದಲ್ಲಿ ತನ್ನ ರುಚಿಯನ್ನು ಬೆಳಸಿಕೊಳ್ಳುವುದರಿಂದ ತನ್ನ ಬಲವನ್ನು ತಿದ್ದಿಕೊಳ್ಳಬಹುದು.

ವಿಮರ್ಶೆ ಸ್ವತಂತ್ರ ಸಾಹಿತ್ಯಕಲೆ ಎಂದು ಪರಿಗಣಿತವಾದ್ದ ಮೇಲೆ ವಿಮರ್ಶಕರು ತಮ್ಮ ಹೃದಯ ತೆರೆದು ನೋಡಿಕೊಳ

ಬೇಕಾದುದಿಲ್ಲ. ಏಕೆಂದರೆ ಪುಸ್ತಕದ ವ್ಯಾಪಾರ ದೃಷ್ಟಿಯಲ್ಲಿ ಯಾವ ವಿಧವಾದ ಕಾರ್ಯಗತವಾದ ಪ್ರೋತ್ಸಾಹವೂ ಅವರಿಂದ ದೊರಕುವುದಿಲ್ಲ. ಸಾಹಿತ್ಯಭಾಗದಲ್ಲಿ ವಿಮರ್ಶೆಯೆಂದರೆ ಯಾವ ಕೃತಿಕಾರ ಶ್ರೇಷ್ಠ ಕೃತಿಯಾದರೂ ಅದು ಏತಕ್ಕೆ ಯಾವ ಕಾರಣದಿಂದ ಎಷ್ಟರಮಟ್ಟಿಗೆ ಪ್ರಸಿದ್ಧಿ ಎಂಬುದನ್ನು ನಿಧಾನವಾಗಿ ಕೂಲಂಕಷವಾಗಿ ಸಾಧ್ಯತಾಸಾಧ್ಯತೆಗಳನ್ನು ಕುರಿತು ವಿವೇಚನೆಮಾಡುವುದು. ವಿಮರ್ಶಾತ್ಮಕ ಲೇಖನಗಳೂ ಪ್ರಬಂಧಗಳೂ ಸ್ವತಂತ್ರವಾಗಿ ಓದುವಂತಿರುತ್ತವೆ. ಗ್ರಂಥ ವಿಷಯ ಜ್ಞಾನವುಳ್ಳವರೂ ಹೆಚ್ಚು ಕುತೂಹಲದಿಂದ ಓದುವಂತಿರುತ್ತವೆ. ಶ್ರೀ. ಕೃಷ್ಣ ಶಾಸ್ತ್ರಿಗಳ ಭಾರತದ ಮುನ್ನುಡಿಯಿದ್ದಂತೆ. ಅವು ಉತ್ಕೃಷ್ಟವೆಂದರೆ ಸ್ವಪರಿಪೂರ್ಣ. ಪುಸ್ತಕದ ವಿಮರ್ಶೆ ವಿಮರ್ಶಿಸಿದ ಪುಸ್ತಕವನ್ನು ಓದುಗ ತತ್‌ಕ್ಷಣ ಓಡಿಹೋಗಿ ಕೊಂಡುಕೊಳ್ಳಲೆಂದು ಹೇಳುವುದಿಲ್ಲ.

ಹೊಸ ಪುಸ್ತಕಗಳ ಬೆಲೆ ಕಟ್ಟುವುದು ಅವುಗಳ ಮೌಲ್ಯವನ್ನು ಇಳಿಸಿದಂತಾಗುವ ಸಂಭವವೇ ಹೆಚ್ಚು. ಅದು ಅಪಾಯಕರ. ವಿಮರ್ಶೆಯು ಘಾತಕತನ. ಸಾಹಿತ್ಯ ವಿಮರ್ಶಕನಿಗೆ ಸಮಕಾಲೀನ ಸಾಹಿತ್ಯ ಗ್ರಂಥಗಳ ವಿಷಯದಲ್ಲಿ ನಗ್ನಸತ್ಯಾಂಶಗಳನ್ನು ಹೃದಯಪೂರ್ವಕವಾಗಿ ಹೇಳುವುದು ಕಷ್ಟ ಸಾಧ್ಯ; ಅಸಾಧ್ಯ. ಹಾಗೆಯೇ ದುಷ್ಟ ಪುಸ್ತಕಗಳ ವಿಷಯದಲ್ಲಿ ಸತ್ಯಾಂಶವನ್ನು ಹೇಳುವುದೂ ಕೂಡ. ಒಬ್ಬನೇ ಕೃತಿಕಾರನ ಲೇಖನಿಯಿಂದ ಸತ್ಕೃತಿಗಳೂ ದುಷ್‌ಕೃತಿಗಳೂ ಹೊರಬಿದ್ದಿರುತ್ತವೆ. ಮೊದಲು ದೋಷಪೂರ್ಣವಾದ ಗ್ರಂಥಗಳನ್ನೂ ಪ್ರಕಟಿಸಿ ಪ್ರಸಿದ್ಧಿಗೆ ಬಂದಿರುವವರಿಂದ ದೋಷರಹಿತವಾದ ಕೃತಿಗಳು ಹೊರಬಿದ್ದಾಗ ಅವರ ವಿಷಯದಲ್ಲಿ ಆಡುವ ಮಾತೇ ಬೇರೆಯಾಗುತ್ತದೆ. ಆದರೆ ಅವರ ಮೊದಲ ಗ್ರಂಥವನ್ನು ಚಿಳಿಯುವ ಪೈರಿಗೆ ಕೈನೀರೆರೆಯುವಂತೆ ಪ್ರೋತ್ಸಾಹದ ನುಡಿಯಿಟ್ಟು ಮುಂದೂಡುವಾಗ ಮನಸ್ಸು ಹಿಂಜರಿಯುತ್ತದೆ. ಕೈಹಿಡಿಯುತ್ತದೆ. ಖ್ಯಾತಿವೆತ್ತ ಕೃತಿಕಾರನ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಮಾತನಾಡುವುದು ಕೃತಿಕಾರನ ದೃಷ್ಟಿಯಿಂದ ಅವನ ಮೆಚ್ಚುಗರ ದೃಷ್ಟಿಯಿಂದ ಸಹಿಸಲಸಾಧ್ಯ. ಇಂಥ ಸಂದರ್ಭಗಳಲ್ಲಿ ವಿಮರ್ಶಕನ ನರಕದ ದಾರಿ ಸದಭಿಪ್ರಾಯಗಳ ಹೂವಿನ ಹಾಸಿಗೆ. ಸಮಕಾಲೀನರ ಗ್ರಂಥಗಳ ವಿಮರ್ಶೆಯ ಮಾರ್ಗದಲ್ಲಿ ಅನೇಕ ರೀತಿಯ ಕಂಟಕಗಳಿವೆ; ಪ್ರತಿ ಅವಹೇಳನದ ಅಪಾಯಗಳಿಂದ ಪ್ರತೀಕಾರದ ಭಯಗಳಿಂದ ನಿಬಿಡವಾಗಿವೆ. ಪ್ರಸಿದ್ಧ ಗ್ರಂಥಕರ್ತರು ತಮ್ಮ ಶಕ್ತಿಯ ಯಾಥಾರ್ಥ್ಯದಲ್ಲಿ ಎಷ್ಟೇ ವಿಶ್ವಾಸವಿಟ್ಟದ್ದರೂ ತಮ್ಮ ಅಂತಿಮ ಸಾಧನೆ, ಏಳಿಗೆ ತಮ್ಮ ಖಚಿತವಾದ ಗುಣಾವಗುಣಗಳನ್ನೂ ಅವಲಂಬಿಸಿವೆಯೆಂದು ನಂಬದೆ ಇರಲಾರರು. ಹಾಗೆಯೇ ಅವರು ಎಡವಿದ್ದಾರೆ ಎಂದರೆ ಅದು ವ್ಯಕ್ತಿಯನ್ನು ಕುರಿತು ಆಡಿದ ಅಪಹಾಸ್ಯವೆಂದೂ ನಂಬದೇ ಇರಲಾರರು.

ದುರದೃಷ್ಟವಶಾತ್ ಕೆಲವು ವಿಮರ್ಶಕರು ತಮ್ಮ ಸಮಕಾಲೀನ ಕೃತಿಕಾರರ ವಿಷಯದಲ್ಲಿ ನಿಜವಾಗಿಯೂ ಒಳ್ಳೆಯ ಅಭಿಪ್ರಾಯಗಳನ್ನು ಹೇಳುವಂಥ, ಅವರ ಕೃತಿಗಳನ್ನು ಹೊಗಳುವಂಥ ಸುಭಿಕ್ಷ ಕಾಲದಲ್ಲಿ ಬದುಕಿರುವುದು ಅವರ ಪೂರ್ವಾರ್ಜಿತ ಪುಣ್ಯ. ಅನೇಕ ವೇಳೆ ವಿಮರ್ಶಕರು ವಿಮರ್ಶೆಯ ಆವಶ್ಯಕತೆಗೆ ಬಲಿಬಿದ್ದು, ಬ್ಯಾಹ್ಯದ ಅಡಚಣೆಗಳಿಗೆ ತುತ್ತಾಗಿ, ತಾವು ಅರಿಸಿಕೊಳ್ಳಲಾರದ ಅಭಿಪ್ರಾಯವನ್ನು ಸೂಚಿಸಲಾರದ ಪತ್ರಿಕೆಯ ಪುಸ್ತಕಗಳ ಮೇಲೆ ಬರೆಯಬೇಕಾಗುತ್ತದೆ. ತಮ್ಮ ಸ್ವಂತ ಅಭಿಪ್ರಾಯ ಪ್ರಕಟಣೆಗೆ ವಿರುದ್ಧವಾದ ಸಾಜೋಕು ಗುಣಗಳನ್ನು ಇಲ್ಲದ ಗುಣಗಳನ್ನು ಹೇಳಬೇಕಾಗುತ್ತದೆ. ಹುಡುಕಿ ವಿಚಾರಿಸಬೇಕಾಗುತ್ತದೆ. ಇದಕ್ಕೆ ಕಾವ್ಯನಾಮವೊಂದು ಭಯಂಕರ ಸೋಗು; ಆತ್ಮರಕ್ಷಣೆ. ಆದರೆ ಈ ವಿಧಾನ ಇತರೇ ವಿಧವಾದ ದುಷ್ಪರಿಣಾಮಗಳಿಗೆ ಎಡೆಕೊಡುತ್ತದೆ. ಕಾವ್ಯನಾಮದ ತೆರೆಯ ಮರೆಯಲ್ಲಿ ಅರಿತುಕೊಳ್ಳಲು ವಿಮರ್ಶಕ ಅಥವಾ ಗ್ರಂಥ ಪರಿಚಯಕಾರ ಅಪೇಕ್ಷಿಸಬಾರದು. ಅಲ್ಲದೆ ಸತ್ಯವನ್ನು ಪ್ರಕಾಶಪಡಿಸುವುದರಲ್ಲಿ ಅವನು ಯಾವಾಗಲೂ ಸಿದ್ಧನಿರಬೇಕು. ಒಳ್ಳೆಯ ವಿಮರ್ಶೆ ಒಳ್ಳೆಯ ಪದ್ಯಕಾವ್ಯದಂತೆ ಒಂದು ಕುಸುರಿ ಕೆಲಸ; ಕಲಾಕರ್ಮ, ಅದರ ಕರ್ತೃ ಕೀರ್ತಿಯಿಂದ ಧನದಿಂದ ಬಹುಮಾನ ಹೊಂದಲೇಬೇಕು. ಆತನ ಓದುಗರು ವಿಮರ್ಶನ ಕಾರ್ಯವನ್ನು ವಿವೇಚಿಸಲು! ಅಶಕ್ತರಾದರೆ ಆತನ ಅಭಿಪ್ರಾಯಗಳ ಕಾರ್ಯಕಾರಣ ಸಂಬಂಧವನ್ನೂ, ಪರಿಪಾಕವನ್ನೂ ಗುರುತಿಸಲಾರರು. ವಿಮರ್ಶಕ ತನ್ನ ಉದ್ದೇಶಗಳನ್ನು ಯಾವಾಗಲೂ ಸಾರಿ ಘೋಷಿಸುತ್ತಿರಲಾಗುವುದಿಲ್ಲ. ನಿಜವಾದ ವಿಮರ್ಶೆಯಲ್ಲಿ ಕಂಡುಬರುವ ಸ್ಪಷ್ಟ ಸಿದ್ಧಾಂತವೆಂದರೆ ಅದನ್ನು ಇತರರ ಅನುಭವದ ಅಭಿಪ್ರಾಯಗಳ ಜೊತೆಯಲ್ಲಿ ಸೇರಿಸಿದರೆ ಅದರ ಹಿಂದೆ ಮನಸ್ಸಿಗೊಪ್ಪುವಂಥ ಅಂತರ್ವಾಹಿನಿಯಾದ ಒಂದು ಯೋಜನೆ; ಕ್ರಮ.

ವಿಮರ್ಶೆ ಒಂದು ಕಲೆ. ಅದಕ್ಕೇ ಒಂದು ಶಾಸ್ತ್ರವುಂಟು. ಅದರಲ್ಲಿಯೂ ಮತಾಚಾರ್ಯರಂತೆ ವೈವಿಧ್ಯಗಳಿವೆ.

೧. ಗ್ರಂಥದ ಸಂಪೂರ್ಣ ಪರಿಣಾಮವನ್ನೂ ಅದರ ವಿಚಿತ್ರವಾದ ವೈಶಿಷ್ಟ್ಯವನ್ನೂ ವೈಯಕ್ತಿತ್ವವನ್ನೂ ತಿಳಿಸಲು ವಿಮರ್ಶಕ ಪ್ರಯತ್ನಪಡಬೇಕು. ೨. ಪ್ರಯತ್ನಪಟ್ಟು ಈ ವಿಶೇಷ ಗುಣಗಳನ್ನು ಸೂತ್ರಿಸಿ, ಲಕ್ಷಿಸಿ ಈ ಅಭಿಪ್ರಾಯ ಬರಲು ಕಾರಣವಾದ ಭಾವದ ಗುಣವನ್ನು ಘೋಷಿಸಬೇಕು. ೩. ಘೋಷಿಸಿದ ಈ ಭಾವಗಳನ್ನು ಸ್ಥಿರಪಡಿಸುವ ಕಾರಣಗಳನ್ನು ಸ್ಥಿರೀಕರಿಸಬೇಕು. ೪. ಸ್ಥಿರಪಟ್ಟ ತಿಳಿವಿಗೆ ಭಾವಕ್ಕೆ ಸೂಕ್ತರೂಪ ಕೊಟ್ಟು ಮಾರ್ಗವನ್ನು ವಿವರಿಸಬೇಕು. ವಿಂಗಡಿಸಬೇಕು. ಎಂದರೆ ಶೈಲಿಯನ್ನು ಶಾಸ್ತ್ರದ ಒರೆಗೆ ಹಚ್ಚಿ ನೋಡುವುದು. ೫. ಒಂದು ಅಪೂರ್ವ ಸನ್ನಿವೇಶದ ಸೂಕ್ಷ್ಮ ಪರೀಕ್ಷಣ ಎಂದರೆ ಎಲ್ಲಿ ಲೇಖನ ಭಾವ ಅಥವಾ ತಿಳಿವು ಸಂಪೂ

ಗೆಣಸು

ಖಾರಕ್ಕೆ ಮೆಣಸು, ಭಾರಕ್ಕೆ ಗೆಣಸು. ಸಿಹಿ ಬಟಾಟೆಯೆಂದು ಇಂಗ್ಲಿಷು ಭಾಷೆಯಲ್ಲಿ ಹೆಸರುಪಡೆದಿರುವ ವಸ್ತುವೇ ಈ ಲಘುಪ್ರಬಂಧದ ವಸ್ತು. ಹಿಂದಿನ ಕಾಲದ ಮುನಿಗಳಿಂದ ಆಹಾರಸಾಧನವಾಗಿ ಪರಿಗಣಿಸಲ್ಪಟ್ಟ ಗೆಡ್ಡೆ ಗೆಣಸುಗಳಲ್ಲಿ, ಗೆಡ್ಡೆಯನ್ನು ಕಳೆದರೆ ಬಾಕಿ ಉಳಿದುದು ಗೆಣಸು. ಇದನ್ನು ಸಾಮಾನ್ಯವಸ್ತುವೆಂದು ಬದಿಗಿಡಲು ಮನಸ್ಸು ಬರುವುದಿಲ್ಲ, ಒಪ್ಪುವುದಿಲ್ಲ.

ಈಗಿನ ಕಾಲದಲ್ಲಿ ಮನುಷ್ಯನ ಗೇಣುದ್ದ ಹೊಟ್ಟೆಗೆ ಗೆಣಸೇ ಗತಿಯೆಂದು ನನ್ನೆಣಿಕೆ. ಗೆಣಸೆಂಬ ಸಾಧನವೂ ಸಾಧಾರಣ ಒಂದೇ ಗೇಣು ಉದ್ದವಾಗಿ ಸಿಗುವುದರಿಂದ ಲೆಕ್ಕ ಹಾಕಿ ನೋಡಿದರೂ ಉತ್ತರ ತಪ್ಪೆಂದು ಹೇಳಲಾಗುವುದಿಲ್ಲ. ಗೇಣಿಗಿಂತ ಉದ್ದವೂ ಅಗಲವೂ ಹೆಚ್ಚಾದರೆ, ಭಾರವೂ ಹೆಚ್ಚಾಗಿ ಉದರಭರಣದ ಕಾರ್ಯವನ್ನು ನೆರವೇರಿಸಲು ಗೆಣಸಿನ ಶಕ್ತಿಯೂ ಅಧಿಕವಾಗುವುದು. ಇದಕ್ಕೆ ಯಾರ ಅಡ್ಡಿಯೂ ಇರುವುದಿಲ್ಲ.

ಅಂಗಡಿಗಳಲ್ಲಿ, ಬೀದಿಗಳಲ್ಲಿ, ಎತ್ತಿನ ಗಾಡಿಗಳಲ್ಲಿ, ಸಾಕಾಗದಿದ್ದಲ್ಲಿ ಮನೆಯ ಬಾಗಲಲ್ಲೆ ಮಾರಾಟಕ್ಕೆ ಬರುವ ಸಾಧನ, ಮತ್ತು ಧಾರಾಳವಾಗಿ ಸಿಗುವಂಥದು. ಬೇಕಾದಷ್ಟನ್ನು ಪಡಕೊಂಡು ಪ್ರಯೋಗಿಸಬಹುದಾದ ಆಹಾರದ ವಸ್ತು. ಬಹುಜನರ ಭೋಜನದ ಸಾಮಗ್ರಿ.

ಗೆಣಸು ಜನಪ್ರಿಯವಾದುದು. ಈ ವಸ್ತುವಿನ ಕ್ರಯವೂ ಮಿತಿಮೀರಿ ಏರಿರುವುದಿಲ್ಲ. ಇದು ಬಾಯಿಗೆ ರುಚಿಸದಷ್ಟು ಸಪ್ಪಗೆಯೂ ಅಲ್ಲ. ಆದುದರಿಂದ ಜನಪ್ರಿಯತೆಯನ್ನು ಸಂಪಾದಿಸಿರುತ್ತದೆ. ಬಡಜನರ ಓಟು ಗೆಣಸಿಗೆ ಖಂಡಿತವಾಗಿ ಇದೆ.

ರ್ಣವಾಗಿ ಬಹಿರಂಗವಾಗಿದೆ; ಒಡಮೂಡಿದೆ ಎಂದು. ಇದು ಮತ್ತೆ ಮೊದಲನೆಯ ಅಂಶದ ಕಡೆಗೆ ಧಾವಿಸುತ್ತದೆ. ಸೂಕ್ತ ವಸ್ತುವನ್ನುಒಂದು ಕ್ರಮದಲ್ಲಿ ಓದುಗನ ಮುಂದಿಡಲಾಗುತ್ತದೆ.

ಈ ಆದರ್ಶ ವಿಮರ್ಶೆಯು ರಾಗಮೇಳದ ಚಲನೆಯ ವಿವಿಧ ಮುಖಗಳನ್ನು ಬೇರೊಂದು ರೀತಿಯಲ್ಲಿ ಕ್ರಮಗೊಳಿಸಬಹುದು. ಚಾರಿತ್ರಿಕ ಅಥವಾ ನೈತಿಕ ವಿಮರ್ಶೆ ಆ ತಿಳಿವಿನ ಗುಣದ ಮೇಲೆ ಹರಡಿಕೊಳ್ಳಬಹುದು. ಅದರ ಬೆಲೆ ಅದು ಇತರ ತಿಳಿವಿನೊಡನೆ ಇಟ್ಟುಕೊಳ್ಳುವ ಸಂಬಂಧದ ಮೇಲೆ ಅವಲಂಬಿಸುತ್ತದೆ. ಈ ತಿಳಿವು ಯಾವ ರೀತಿಯಲ್ಲಿ ಪ್ರಕಟವಾಗಿದೆ ಎಂಬುದಕ್ಕೆ ಅವನು ಅಷ್ಟಾಗಿ ಗಮನ ಕೊಡುವುದಿಲ್ಲ. ಅಂಥ ವಿಮರ್ಶಕ ಉತ್ತಮ ದರ್ಜೆಯವನಾಗಲಾದರೂ ಎರಡನೆಯ ಮಟ್ಟದವನಾಗುತ್ತಾನೆ. ವಿವಿಧ ಭಾವಾರ್ಥಗಳ ನಿರ್ಣಯವನ್ನು ಮಾಡಲಾರದ ವಿಮರ್ಶಕ ಬೃಹತ್ ಕಲೆಗೂ ಪೂರ್ಣ ಕಲೆಗೂ ಇರುವ ವ್ಯತ್ಯಾಸವನ್ನು ಪರಿಗಣಿಸಲಾರ. ಅಂಥ ತೀರ್ಪು ಸತ್ಯ ವಿಮರ್ಶೆಗೆ ಅನಿವಾರ್ಯ, ಅಗತ್ಯ. ನೀತಿಯ ತೀರ್ಪಿಗೆ ಅದೇ ಕೊನೆಯ ವಿಶ್ರಾಂತಿ ಸ್ಥಾನ.

ವಿಮರ್ಶೆಯ ಫಲವನ್ನು ನಾವು ಯೋಚಿಸಬೇಕಾದುದಿಲ್ಲ. ಕಾವ್ಯದ ಫಲವೇನೋ ವಿಮರ್ಶೆಯ ಫಲವೂ ಅದೇ. ಎರಡೂ ಲಲಿತ ಕಲೆಗಳೇ; ಆನಂದದಾಯಕಗಳೇ. ಎರಡೂ ತಮತಮಗೆ ಯೋಗ್ಯವಾದ ಆಹ್ಲಾದವನ್ನು ಕೊಡಲೇ ಬೇಕು. ಈ ರೀತಿಯ ಆಹ್ಲಾದವನ್ನೂ ಕೊಟ್ಟರೆ ವಿಮರ್ಶೆ, ಸೃಷ್ಟಿ ಕಾರ್ಯ. ಅದು ಓದುಗ ತಾನು ಕಾಣದೆ ಇರುವ ಸೌಂದರ್ಯವನ್ನೂ ಸಾರ್ಥವನ್ನೂ ತಿಳಿಸುತ್ತದೆ. ಓದುಗ ಮಸಕುಮಸಕಾಗಿ ಕಂಡದ್ದನ್ನು ಆ ಪ್ರದೇಶಕ್ಕೆ ತನ್ನ ವಿಮರ್ಶನ 'ಲೆನ್ಸಿ'ನಿಂದ ಹೆಚ್ಚು ಬೆಳಕನ್ನು ಬೀರಿ ಸ್ಪಷ್ಟವಾಗಿ ಕಾಣುವಂತೆ ಮಾಡಿ ಆನಂದವನ್ನು ಅನುಭವಿಸುವಂತೆ ಮಾಡುತ್ತದೆ. ವಿಮರ್ಶೆ ಹೆದರಿ ಹೆದರಿ ಬರೆದುದಾಗಿರಬಾರದು. ಅದರ ಕೊನೆಯ ನಿರ್ಣಯಗಳು ನೀತಿಯುತವಾಗಿರಬೇಕೆಂದು ಅದು ಬಹಿರಂಗವಾಗಿ ಒಪ್ಪಿಕೊಳ್ಳಬೇಕು. ವಿಮರ್ಶಕ ತನ್ನ ನೈತಿಕ ಸಾರಗಳನ್ನೂ ಧೋರಣೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅದಕ್ಕೆ ತನ್ನಿಂದ ಸಾಧ್ಯವಾದಷ್ಟು ನೀತಿಯುತ ಧರ್ಮದ ಬೆಳಕನ್ನು ಚೆಲ್ಲಬೇಕು. ಎಂದರೆ ವಿಮರ್ಶಕನಿಗೆ ತಾನು ಕಲೆಗಾರನೆಂಬ ಜ್ಞಾನವಿರಬೇಕು. ತನ್ನ ಕಲೆಯಿಂದ ಆರೋಪಿತವಾದ ಜವಾಬ್ದಾರಿಯನ್ನೆಲ್ಲಾ ಅವನು ಮನಗಂಡಿರಬೇಕು. ತನ್ನ ಶಾಸ್ತ್ರದ ನೈಪುಣ್ಯವನ್ನು ಅರಿತಿರಬೇಕು; ಗೌರವಿಸಬೇಕು; ಆತ್ಮಾಭಿಮಾನಿಯಾಗಿರಬೇಕು; ಅಗ್ಗವಾದ ವಿಮರ್ಶಕನಾಗಿರಬಾರದು; ಅಗ್ಗದ ಮುಗ್ಗಿನ ಜೋಳದ ಸರಕಾಗಬಾರದು ಅವನ ರಚನೆ. ಮೇಲೆ ಮೇಲೆ ಕೆದಕುವ ಆಳವಿಲ್ಲದ ಅಭ್ಯಾಸ ಕೂಡದು; ತನಗೆ ತಾನು ಎರಡು ಬಗೆಯಬಾರದು. ಹೊಗಳುವುದರಲ್ಲಿ ತೆಗಳುವುದರಲ್ಲಿ ದ್ರೋಹಿಯಾಗಬಾರದು.

ಕಾವ್ಯಕಮಲ ವಿಮರ್ಶೆ ಅದರ ಸೌರಭವನ್ನು ಹಂಚುವ ಮಂದಮಾರುತ.

(ಇಂಗ್ಲಿಷ್ ಲೇಖನವೊಂದರ ಆಧಾರದಿಂದ.)

ಓಟವೂ ಇದೆ. ಯಾವುದಾದರೂ ವಠಾರದಲ್ಲಿ ಬಳ್ಳಿಯಿಂದಲಂಕೃತವಾದ ಒಂದು ಗೆಣಸಿನ ಗಾಡಿ ಬಂದು ನಿಂತರಾಯಿತು. ನೂರಾರು ಜನರು ಚೀಲವನ್ನು ಹಿಡಿದು ಆ ಸ್ಥಳಕ್ಕೆ ಓಡುವರು. ಈ ಓಟದಲ್ಲಿ ಹೆಚ್ಚಾಗಿ ಭಾಗವಹಿಸುವವರು ಸಣ್ಣವರು. ಓಟದ ಗುರಿಯು ಗಾಡಿಯನ್ನು ಖಾಲಿಮಾಡುವುದೇ. ದೊಡ್ಡವರೂ ಅವರ ಹಿಂದೆಯೇ ಓಡಬೇಕಾಗುತ್ತದೆ—ದುಡ್ಡಿನ ಲೆಕ್ಕವನ್ನುಮಾಡಿ ತುಂಬಿದ ಚೀಲವನ್ನು ಹೊರಲಿಕ್ಕೆ. ಗೆಣಸು ಭಾರದಲ್ಲಿ ಕಮ್ಮಿಯಲ್ಲ.

ಗೆಣಸಿನ ಅಂಗಡಿಗಳಲ್ಲಿ ಎರಡು ವಿಧ. ಮೊದಲನೆಯ ವಿಧದ ಅಂಗಡಿಗಳಲ್ಲಿ ಶುದ್ಧವಾದ ಕಚ್ಚಾ ಮ್ಹಾಲು ಮಾರಾಟವಾಗುತ್ತದೆ—ಸೇರು, ಪಂಚೇರು, ಕಾಲುಮಣ—ಇಂತಹ ರಾಶಿಯಾಗಿ ಅದು ಸಿಗುವುದು. ಎರಡನೆಯವುಗಳಲ್ಲಿ ಬೇಯಿಸಿದ ಗೆಣಸು ಸಿಗುವುದು. ಇದನ್ನು ಹಸಿದು ಬಂದವರು ಅಲ್ಲಿಯೆ ಕೂತುಕೊಂಡು ತಿನ್ನುವುದು ವಾಡಿಕೆ. ಚೀಲದಲ್ಲಿ ತುಂಬಿಸಿ ಹೊತ್ತುಕೊಂಡು ಹೋಗಿ ಮನೆಯಲ್ಲಿ ಬೇಯಿಸುವ ರಗಳೆಯಿಲ್ಲ, ಹೊಟ್ಟೆಯೆಂಬ ಚೀಲದದಲ್ಲಿಯೆ ಅದನ್ನು ನೇರವಾಗಿ ಇಳಿಸುವುದು ಇಲ್ಲಿಯ ಕ್ರಮ. ಈ ಕೆಲಸವು ಸುಲಭವಾಗಿ ನಡೆಯುವಂತೆ ಅದೇ ಅಂಗಡಿಯಲ್ಲಿ ಒಂದು ವಿಧದ ಕಾಫಿಯು ತಯಾರಾಗುವುದು. ಈ ಕಾಫಿಯ ದರವು ಕಮ್ಮಿಯಾದರೂ ಪ್ರಮಾಣವು ಸಣ್ಣದಲ್ಲ. ಸಣ್ಣ ಕಪ್ಪುಗಳಲ್ಲಿ ಕಾಣಿಸಿಕೊಳ್ಳುವ ಕಾಫಿ ಇದಲ್ಲ. ಒಂದು ಡಜನ್ ಕಪ್ಪುಗಳಷ್ಟು ಕಾಫಿಯನ್ನು ಹಿಡಿಯುವ ಶಕ್ತಿಯು ಈ ಪಾತ್ರೆಗಳಿಗಿದೆ. ಇಲ್ಲಿ ನಡೆಯುವ ಗೆಣಸಿನ ಫಲಾಹಾರ ಒಂದು ಊಟದಷ್ಟೆ ಮಹತ್ವವುಳ್ಳದ್ದು.

ದೊಡ್ಡ ತಾಜಾ ಹೊಟೆಲುಗಳಲ್ಲೂ ಗೆಣಸಿಗೆ ಪ್ರವೇಶವು ದೊರಕಿದೆ. ಹಿಂದಿನ ಒಂದು ಯುಗದಲ್ಲಿ ಎಲ್ಲಾ ಹೊಟೆಲುಗಳಲ್ಲಿ ಗೆಣಸಿನ ಖಾದ್ಯಕ್ಕೆ ಪ್ರಥಮಸ್ಥಾನ, ಕಡಲೆಯ ಉಸ್ನರಿಕೆಗೆ ದ್ವಿತೀಯ ಸ್ಥಾನವಿತ್ತು. ಈಗಲೂ ಹಳ್ಳಿಯ ಹೊಟೆಲುಗಳಲ್ಲಿ ಗೆಣಸು ಅದರ ಸ್ಥಾನವನ್ನು ಇಟ್ಟುಕೊಂಡಿರಬಹುದು. ನಗರದ ಹೊಟೆಲುಗಳಲ್ಲಿ ರೊಟ್ಟಿಯ ಜೋಡಿಯಾಗಿ ಬರುವ ಭಾಜಿಯಲ್ಲಿ ಬಟಾಟೆಯ ಸ್ಥಾನದ ಗೆಣಸೇ ಕೆಲಸವನ್ನು ಮಾಡುವುದು. ಗೆಣಸು ಕೂಡ ಒಂದು ಜಾತಿಯ ಬಟಾಟೆಯೇ ಅಲ್ಲವೆ? ಎರಡರಲ್ಲಿಯೂ ಒಂದೇ ಬಗೆಯ ವ್ಹಾಟಮಿನ್ ಇದೆಯೆಂದು ಆಹಾರ ವಿಜ್ಞಾನಿಗಳ ಮತ.

ಮದುವೆ, ಮುಂಜಿ ಸಮಾರಂಭಗಳಲ್ಲಿ ಗೆಣಸು ಕಾಯಿಸಿದ ತೈಲಸಂಪರ್ಕದಿಂದ ತೆಳುವಾದ 'ಚಿಪ್ಸ್' ಅಥವಾ 'ಕಚ್ಚಿರಿ' ಆಗಿ, ಸೇವಕರಿಗೆ ಮೋದವನ್ನುಂಟುಮಾಡುವುದು. ಮಳೆಗಾಲದ ತಿಂಡಿಗಳಲ್ಲೊಂದಾದ ಗೆಣಸುಹಪ್ಪಳವನ್ನೂ ನಿರ್ಗಣಿಸಲಾಗುವುದಿಲ್ಲ. ಮೊನ್ನೆ ಕಳೆದು ಹೋದ ಚವತಿಯ ಸಮಯದಲ್ಲಿ ಅತಿಥಿಯಾಗಿ ಬಂದ ಗಣೇಶಗೂ ಗೆಣಸಿನ ಒಂದೆರಡು ವಿಧದ ತಯಾರಿಕೆಯು ಅರ್ಪಿತವಾಗಿರಬೇಕು. 'ಸೋಂಟೆ'ಯೆಂಬ ತಿಂಡಿಯೂ ಗೆಣಸಿನಿಂದ ಜನ್ಯವಾದುದು. ಇದು ಮಕ್ಕಳಿಗೂ ರುಚಿಸುವಂಥದು.

ತುಳು ಭಾಷೆಯಲ್ಲಿ ಗೆಣಸಿಗಾಗಿರುವ ಶಬ್ದಾವಲೋಕನವನ್ನು ಮಾಡಿದರೆ ಗೆಣಸಿಗೆ ರಂಗು ಉಂಟು ಎಂಬುದು ವ್ಯಕ್ತವಾಗುವುದು. ನೆಲದಿಂದಗೆದು ಮೇಲಕ್ಕೆತ್ತುವಾಗ ಇದು ಕೆಂಪು ಅಥವಾ ಬಿಳೇ ರಂಗನ್ನು ಧರಿಸಿರುತ್ತದೆ. ಆದರೆ ಬೇಯಿಸಿದ ಮೇಲೆ ಒಳಭಾಗದಲ್ಲಿ ನೀಲವರ್ಣವೂ ಕಾಣಿಸಿಕೊಳ್ಳುತ್ತದೆ. ಇದರ ಅರಿವು ತಿಂದವರಿಗೆಲ್ಲ. ಚಿಪ್ಸ್, ಬಂಗಾರ ವರ್ಣವನ್ನು ತಳೆಯುತ್ತವೆ. ಹಪ್ಪಳಕ್ಕೂ ರಂಗುಂಟು.

ಇಂಗ್ಲಿಷು ಮತ್ತು ಮಲೆಯಾಳಿ ಜನರು ಗೆಣಸಿನ ಮಧುರತೆಯ ಕಡೆಗೆ ಗಮನವಿತ್ತು ಗೆಣಸಿಗೆ ಯೋಗ್ಯವಾದ ನಾಮವನ್ನೆ ಮಾಡಿರುತ್ತಾರೆ. ನಾವು ಮುಖ್ಯವಾಗಿ ಗಮನಿಸಬೇಕಾದ ಒಂದು ವಿಷಯವು ಈ ಹೆಸರಲ್ಲ ಅಡಕವಾಗಿದೆ. ನಮ್ಮೊ ವಿಜ್ಞಾನ ಯುಗದಲ್ಲಿ ಸಕ್ಕರೆಯ ಅಭಾವವು ಆಗಾಗ್ಗೆ ತಲೆದೋರುವುದರಿಂದ ಚಾ ಕುಡಿಯುವವರಿಗೆ ಅನೇಕ ಸಲ ತೊಂದರೆಯುಂಟಾಗುತ್ತದೆ. ಈ ಕೊರತೆಯ ಪರಿಹಾರಕ್ಕಾಗಿ ಗೆಣಸನ್ನೂ ಸಕ್ಕರೆಯ ಉತ್ಪಾದನೆಗೆ ಮೂಲಪದಾರ್ಥವನ್ನಾಗಿ ಆರಿಸಿದರೆ ಸಕ್ಕರೆಯು ಸ್ವಲ್ಪ ಅಧಿಕಪ್ರಮಾಣದಲ್ಲಿ ತಯಾರಿಸಲ್ಪಟ್ಟು, ಬಡವರಿಗೆ ಅನುಕೂಲವಾಗಬಹುದು. ಫ್ರಾನ್ಸ್ ದೇಶದಲ್ಲಿ ಬೀಟ್‌ರೂಟ್ ಎಂಬ ಮೂಲದಿಂದ ಸಕ್ಕರೆಯು ತಯಾರಿಕೆಯಾಗುವುದಂತೆ. ಗೆಣಸು ಕೂಡ ಈ ಮೂಲದ ಸಂಬಂಧಿಯೆಂದು ನನಗನ್ನಿಸುತ್ತದೆ. ತಯಾರಿಸುವ ವಿಧಾನವನ್ನು ನಮ್ಮ ವೈಜ್ಞಾನಿಕರು ಅಥವಾ ಅವರಷ್ಟೆ ತಲೆಯುಳ್ಳವರು ಕಂಡುಹಿಡಿಯಬೇಕಾಗಿದೆ.

ಗೆಣಸಿನ ಸಮೀಪದ ಬಂಧುವಾದ ಟೇಪಿಯೋಕ (ಟೊಪೇಕೊ ಎಂದು ವ್ಯಾಪಾರಿಗಳಿಂದ ಕರೆಯಲ್ಪಡುವಂಥದು) ಹಿಟ್ಟಾಗಿ ಮಾರ್ಪಟ್ಟು, ಆ ಹಿಟ್ಟು ಉಪ್ಪು ಖಾರಗಳ ಮಿತ್ರತ್ವವನ್ನು ಬಳಸಿಕೊಂಡು ದೋಸೆಯ ರೂಪಕ್ಕಿಳಿದು, ನಮ್ಮೆಲ್ಲರ ಬೆಳಗ್ಗಿನ ಫಲಾಹಾರವನ್ನು ಫಲಕಾರಿಯನ್ನಾಗಿ ಮಾಡುತ್ತದೆ. ಇದು ಮಲಬಾರಿನಲ್ಲಿ ತುಂಬಾ ಬೆಳದು ಇಲ್ಲಿಗೆ ಬಂದು ಎಲ್ಲರ ಮುಖವನ್ನೂ ಬೆಳಗಿಸುತ್ತದೆ.

ಭಾರತೀಯರ ಪ್ರಾಚೀನ ವೈಮಾನಿಕ ಕಲೆ



ಬ್ರಿಟಿಷರ ಹೆಲಿಕೊಪ್ಟರ್ ನಾಮಾಂಕಿತ ವಿಮಾನ. ಶಾಂತಿಕಾಲದಲ್ಲಿ ಪ್ರಯಾಣಿಕರಿಗೂ ಯುದ್ಧಕಾಲದಲ್ಲಿ ಸೈನ್ಯಕ್ಕೂ ಉಪಯೋಗಿಸಲ್ಪಡುತ್ತಿದೆ.

ವರ್ತಮಾನ ಸಮಯದ ಕೆಲವು ದಿನ ಪೂರ್ವದಲ್ಲಿಯೇ ವೈಮಾನಿಕಕಲೆಯು ಪ್ರಾಯಃ ನಷ್ಟವಾಗಿತ್ತು. ಅನಂತರ, ಪಾಶ್ಚಾತ್ಯ ವಿದ್ವಾನರ ಬುದ್ಧಿವಿಕಾಸದಿಂದ, ವಿಮಾನಗಳು ಪುನಃ ಈ ಜಗತ್ತಿನಲ್ಲಿ ಕಾಣಿಸುತ್ತವೆ. ವಿಮಾನವೆಂಬ ಹೆಸರಿನ ಯಾವ ವಸ್ತುವೂ ಹಿಂದೆ ಇರಲಿಲ್ಲವೆಂದು ಕೆಲವರು ಹೇಳುತ್ತಾರೆ; ಆದರೆ, ಪಕ್ಷಿಗಳು ಆಕಾಶದಲ್ಲಿ ಹಾರುವುದನ್ನು ಕಂಡು ಭಾರತೀಯರು ಕೇವಲ ಕಪೋಲಕಲ್ಪನೆಮಾಡುವವರಾದರು ಎಂದು ಟೀಕಿಸುವವರು ಹಲವರು.

ಆದರೆ, ವಿಮಾನನಾಮದ ಒಂದು ವಸ್ತು ಹಿಂದೆ ದೇಶದಲ್ಲಿತ್ತು; ಆಕಾಶದಲ್ಲಿ ಹಾರುತ್ತಿತ್ತೆಂದು ಉಲ್ಲೇಖವು ರಾಮಾಯಣಾದಿ ಗ್ರಂಥಗಳಲ್ಲಿ ಲಭಿಸುತ್ತದೆ. ವಿಮಾನದ ವಿಷಯದಲ್ಲಿ ಮಹರ್ಷಿ ಕರ್ದಮನು ಸಹಾ ಹೀಗೆಯೇ ಹೇಳಿರುವನು. ಇಂದು ಸಹಾ ನಮ್ಮ ಸಮಕ್ಷಮದಲ್ಲಿ ಉದಾಹರಣಾರ್ಥ ಇಂತಹ ಒಂದು ಗ್ರಂಥವಿದೆ. ಅದರಿಂದ ಸ್ಪಷ್ಟ ತಿಳಿದುಬರುವುದು ಇದು. ವಿಮಾನದ ವಿಷಯದಲ್ಲಿ ನಮ್ಮ ಪೂರ್ವಜರು ಉಚ್ಚಕೋಟಿಯ ವೈಜ್ಞಾನಿಕ ತತ್ತ್ವಗಳನ್ನು ಹುಡುಕಿ ತೆಗೆದವರಾದರು; ಅದನ್ನು ಇಂದು ಸಹಾ ಪಾಶ್ಚಾತ್ಯವಿಜ್ಞಾನವೇತ್ತರು ಹುಡುಕಿ ತೆಗೆಯಲು ಅಸಮರ್ಥರಾಗಿಯೇ ಇದ್ದಾರೆ. ಆ ಗ್ರಂಥವು ಅತ್ಯಂತ ಪ್ರಾಚೀನ ಹಾಗೂ ಮಹರ್ಷಿ ಭಾರದ್ವಾಜಕೃತ "ಯಂತ್ರಸರ್ವಸ್ವ"ವಾಗಿದೆ.

ಈ ಗ್ರಂಥವು ಬಡೋದಾ ರಾಜ್ಯದ ಪುಸ್ತಕಾಲಯದಲ್ಲಿ ಹಸ್ತಲಿಖಿತವಾಗಿ ಈಗಲೂ ಇದೆ; ಇದು ನಿಜ. ಅದರ "ವೈಮಾನಿಕ ಪ್ರಕರಣ"ವು ಬೋಧಾನಂದನ ವೃತ್ತಿಯೊಡನೆ, ಛಾಪಿತವಾಗಿದೆ. ಇದರ ಮೊದಲಿನ ಪ್ರಕರಣದಲ್ಲಿ ಪ್ರಾಚೀನ ವಿಜ್ಞಾನ ವಿಷಯದ ೨೫ ಗ್ರಂಥಗಳ ಒಂದು ಸೂಚಿ ಇದೆ. ಅವುಗಳಲ್ಲಿ, ಅಗಸ್ತ್ಯಕೃತ "ಶಕ್ತಿಸೂತ್ರ", ಈಶ್ವರಕೃತ "ಸೌದಾಮಿನೀ ಕಲಾ" ಭಾರದ್ವಾಜಕೃತ "ಅಂಶುಮತಂತ್ರ", "ಆಕಾಶ ಶಾಸ್ತ್ರ", ಹಾಗೂ "ಯಂತ್ರಸರ್ವಸ್ವ", ಶಾಕಟಾಯನಕೃತ "ವಾಯುತತ್ತ್ವಪ್ರಕರಣ", ನಾರದಕೃತ "ವೈಶ್ವಾನರತಂತ್ರ", "ಧೂಮಪ್ರಕರಣ", ಆದಿ ಆಗಿವೆ.

ವೃತ್ತಿಕಾರ ಬೋಧಾನಂದನು ಹೀಗನ್ನುತ್ತಾನೆ:—

"ನಿರ್ಮಥ್ಯ ತದ್ವೇದಾಂಬುಧಿಂ ಭಾರದ್ವಾಜೋ ಮಹಾಮುನಿಃ॥
ನವನೀತಂ ಸಮುದ್ಧೃತ್ಯ ಯಂತ್ರಸರ್ವಸ್ವರೂಪಕಮ್ ॥
ಪ್ರಾಯಚ್ಛತ್ ಸರ್ವಲೋಕಾನಾಮೀಪ್ಸಿತಾರ್ಥಫಲಪ್ರದಮ್ ॥
ತಸ್ಮಿನ್ ಚತ್ವಾರಿಂಶತಿಕಾಧಿಕಾರೇ ಸಂಪ್ರದರ್ಶಿತಮ್ ॥
ನಾನಾವಿಮಾನವೈಚಿತ್ರ್ಯರಚನಾಕ್ರಮಬೋಧಕಮ್ ॥
ಅಷ್ಟಾಧ್ಯಾಯೈರ್ವಿಭಜಿತಂ ಶತಾಧಿಕರಣೈರ್ಯುತಮ್ ॥
ಸೂತ್ರೈಃ ಪಂಚಶತೈರ್ಯುಕ್ತಂ ವ್ಯೋಮಯಾನಪ್ರಧಾನಕಮ್॥
ವೈಮಾನಿಕಾಧಿಕರಣಮುಕ್ತಂ ಭಗವತಾ ಸ್ವಯಮ್ ॥"

ಅರ್ಥ:—"ಭರದ್ವಾಜಮುನಿಯು ವೇದರೂಪೀ ಸಮುದ್ರದ ಮಂಥನಮಾಡಿ, ಯಂತ್ರಸರ್ವಸ್ವವೆಂಬ ಹೆಸರಿನ ನವನೀತ ತೆಗೆದಿರುವನು; ಅದು ಸಕಲ ಜನರಿಗೆ ಇಚ್ಛಿತಫಲ ಕೊಡುವಂಥಾದ್ದು; ಅದರಲ್ಲಿ ೪೦ನೇ ಅಧಿಕರಣದಲ್ಲಿ ವೈಮಾನಿಕ ಪ್ರಕರಣವಿದೆ. ಈ ಪ್ರಕರಣದಲ್ಲಿ ವಿಮಾನವಿಷಯಕ ರಚನೆಯ ಕ್ರಮವು ಹೇಳಲ್ಪಟ್ಟಿದೆ; ಅದು ೮ ಅಧ್ಯಾಯಗಳಲ್ಲಿ ವಿಭಜಿಸಲ್ಪಟ್ಟಿದೆ; ಅದರಲ್ಲಿ ೧೦೦ ಅಧಿಕರಣಗಳು ಮತ್ತು

೫೦೦ ಸೂತ್ರಗಳು ಇವೆ; ಅದರಲ್ಲಿ ವೈಮಾನಿಕ ವಿಷಯವೇ ಪ್ರಧಾನವಾಗಿದೆ."

"ಏವಂ ವಿಧಾಯ ವಿಧಿವನ್ಮಂಗಲಾಚರಣಂ ಮುನಿಃ ॥
ಪೂರ್ವಾಚಾರ್ಯಾಶ್ಚ ತದ್‌ಗ್ರಂಥಾನ್
ದ್ವಿತೀಯಶ್ಲೋಕತೋಽಬ್ರವೀತ್ ॥
ವಿಶ್ವನಾಥೋಕ್ತನಾಮಾನಿ ತೇಷಾಂ ವಕ್ಷ್ಯೇ
ಯಥಾಕ್ರಮಮ್ ॥
ನಾರಾಯಣಃ ಶೌನಕಶ್ಚ ಗರ್ಗೋ ವಾಚಸ್ಪತಿಸ್ತಥಾ ॥
ಚಾಕ್ರಾಯಣಿರ್ಧುಂಡಿನಾಥಶ್ಚೇತಿ ಶಾಸ್ತ್ರಕೃತಃ ಸ್ವಯಮ್ ॥
ವಿಮಾನಚಂದ್ರಿಕಾ ವ್ಯೋಮಯಾನತಂತ್ರಸ್ತಥೈವಚ ॥
ಯಂತ್ರಕಲ್ಪೋ ಯಾನಬಿಂದುಃ ಖೇಟಯಾನಪ್ರದೀಪಿಕಾ ॥
ತಥೈವ ವ್ಯೋಮಯಾನಾರ್ಕಪ್ರಕಾಶಶ್ಚೇತಿ ಷಟ್‌ಕ್ರಮಾತ್॥
ನಾರಾಯಣಾದಿಮುನಿಭಿಃ ಪ್ರೋಕ್ತಾನಿ ಜ್ಞಾನವಿತ್ತಮೈಃ ॥"

ಅರ್ಥ:-ಭಾರದ್ವಾಜಮುನಿಯು ಹೀಗೆ ವಿಧಾನಪೂರ್ವಕ ಮಂಗಲಾಚರಣ ಮಾಡಿ, ದ್ವಿತೀಯ ಶ್ಲೋಕದಲ್ಲಿ ವಿಮಾನ ಶಾಸ್ತ್ರದ ಪೂರ್ವಾಚಾರ್ಯರನ್ನು ಹಾಗೂ ಅವರ ಗ್ರಂಥಗಳನ್ನು ಉಲ್ಲೇಖಿಸಿದ್ದಾನೆ. ಅವರ ಹೆಸರುಗಳು ವಿಶ್ವನಾಥನ ಕಥನಾನುಸಾರ ಈ ಪ್ರಕಾರ ಇವೆ--ನಾರಾಯಣ, ಶೌನಕ, ಗರ್ಗ, ವಾಚಸ್ಪತಿ, ಚಾಕ್ರಾಯಣಿ ಮತ್ತು ಧುಂಡಿನಾಥ—ಈ ಆರು ಗ್ರಂಥಕಾರರು ಇರುವರು; ಹಾಗೂ ವಿಮಾನ ಚಂದ್ರಿಕಾ, ವ್ಯೋಮಯಾನತಂತ್ರ, ಯಂತ್ರಕಲ್ಪ, ಯಾನಬಿಂದು, ಖೇಟ ಯಾನ ಪ್ರದೀಪಿಕಾ ಮತ್ತು ವ್ಯೋಮಯಾನಾರ್ಕಪ್ರಕಾಶ—ಈ ಆರು ಕ್ರಮದಿಂದ ರಚಿತ ಆಧಾರ ಗ್ರಂಥಗಳು."

ವಿಮಾನದ ಪರಿಭಾಷೆಯನ್ನು ಉಲ್ಲೇಖಿಸುತ್ತ ಹೀಗೆ ಹೇಳಿರುವನು:


"ಪೃಥಿವ್ಯಪ್‌ಸ್ವಂತರಿಕ್ಷೇಷು ಖಗವದ್ವೇಗತಃ ಸ್ವಯಮ್!॥
ಯಃ ಸಮರ್ಥೋ ಭವೇದ್ ಗಂತುಂ ಸವಿಮಾನ
ಇತಿ ಸ್ಮೃತಃ ॥"

ಅರ್ಥ:—"ಪೃಥಿವೀ, ಜಲ ಮತ್ತು ಆಕಾಶಗಳಲ್ಲಿ ಪಕ್ಷಿಗಳಂತೆ ವೇಗಪೂರ್ವಕ ಚಲಿಸುವುದರಿಂದ, ವಿಮಾನವೆನ್ನಲ್ಪಡುತ್ತದೆ. "ರಹಸ್ಯಜ್ಞೋಽಧಿಕಾರೀ"॥ (ಭರದ್ವಾಜಸೂತ್ರ ಅಧ್ಯಾಯ ೧ ಸೂತ್ರ ೨) ವೃತ್ತಿ.

"ವೈಮಾನಿಕ ರಹಸ್ಯಾನಿ ಯಾನಿ ಪ್ರೋಕ್ತಾನಿ ಶಾಸ್ತ್ರತಃ ॥
ದ್ವಾತ್ರಿಂಶದಿತಿ ತಾನ್ಯೇವ ಯಾನಯಂತೃತ್ವಕರ್ಮಣಿ
ಏತೇನ ಯಾನಯಂ ತೃತ್ವೇ ರಹಸ್ಯಜ್ಞಾನಮಂತರಾ ॥
ಸೂತ್ರೇಽಧಿಕಾರಸಂಸಿದ್ಧಿರ್ನೇತಿ ಸೂತ್ರೇಣ ವರ್ಣಿತಮ್ ॥
ವಿಮಾನರಚನೇ ವ್ಯೋಮಾರೋಹಣೇ ಚಾಲನೇ ತಥಾ ॥
ಸ್ತಂಭನೇ ಗಮನೇ ಚಿತ್ರಗತಿ ವೇಗಾದಿ ನಿರ್ಣಯೇ ॥
ವೈಮಾನಿಕರಹಸ್ಯಾರ್ಥಜ್ಞಾನಸಾಧನಮಂತರಾ ॥
ಯತೋಽಧಿಕಾರಸಂಸಿದ್ಧಿರ್ನೇತಿ ಸಮ್ಯಗ್ ವಿನಿರ್ಣಿತಮ್ ॥"

ಅಥ:—"ವಿಮಾನದ ರಹಸ್ಯಗಳನ್ನು ಅರಿಯುವವನೇ ಅದನ್ನು ಚಲಿಸಲು ಅಧಿಕಾರಿಯು. ಶಾಸ್ತ್ರಗಳಲ್ಲಿ ೩೨ ವೈಮಾನಿಕ ರಹಸ್ಯಗಳು ವರ್ಣಿತವಾಗಿವೆ; ವಿಮಾನ ಚಾಲಕರು ಅವುಗಳ ಉತ್ತಮಜ್ಞಾನ ಪಡೆಯುವುದು ಪರಮಾವಶ್ಯಕವಾಗಿದೆ. ಮತ್ತು ಆಗ ಮಾತ್ರ, ಅವರು ಸಫಲಚಾಲಕರೆನ್ನಲ್ಪಡುವರು: ಸೂತ್ರದ ಅರ್ಥದಿಂದ ಸಿದ್ಧವಾಗುವುದು ಇದುಃ ರಹಸ್ಯಗಳನ್ನು ಅರಿಯದೇ ಮನುಷ್ಯನು ಯಾನಚಾಲನದ ಅಧಿಕಾರಿಯಾಗಲಾರನು; ಯಾಕಂದರೆ, ವಿಮಾನ ರಚಿಸುವುದು; ಅದನ್ನು ಪೃಥ್ವಿಯಿಂದ ಆಕಾಶದಲ್ಲಿ ಕೊಂಡುಹೋಗುವುದು, ನಿಲ್ಲಿಸುವುದು, ಮುಂದೆ ಪ್ರಚಲಿತ ಮಾಡುವುದು, ವಕ್ರಗತಿಯಿಂದ ಚಲನೆಮಾಡುವುದು, ಸುತ್ತಾಡಿಹೋಗುವುದು, ಮತ್ತು ವಿಮಾನದ ವೇಗವನ್ನುಹೆಚ್ಚಿಸುವುದು ಅಥವಾ ಕಡಮೆ ಮಾಡುವುದು, ಆದಿ ವೈಮಾನಿಕ ರಹಸ್ಯಗಳ ಪೂರ್ಣ ಅನುಭವವಿಲ್ಲದೇ ವಿಮಾನ ಚಲಿಸುವುದು ಅಸಂಭವವಾಗಿದೆ."

ವಿಮಾನಚಾಲನೆಯ ೩೨ ರಹಸ್ಯಗಳು ಹೇಳಲ್ಪಟ್ಟಿವೆ; ಅವುಗಳಲ್ಲಿಂದ ಕೆಲವು ರಹಸ್ಯಗಳ ಸಂಕ್ಷಿಪ್ತ ದಿಗ್ದರ್ಶನವು ಈ



★

೧೪೦ ಟನ್‌ಗಳ "ಪ್ರಿನ್ಸೆಸ್" ನಾಮಾಂಕಿತ ವಾಯುಯಾನ. ೩೫೦೦ ಅಶ್ವಶಕ್ತಿಯ ಇಂಜಿನ್‌ಗಳಿವೆ. ಬ್ರಿಟೈನ್-ಅಮೇರಿಕ ದಕ್ಷಿಣ ಅಮೇರಿಕಗಳೊಳಗೆ ಈ ಹೊಸ "ಗಾಳಿಯ ಹಡಗು", ಬರುವ ವರ್ಷ ಸರ್ವಿಸು ಆರಂಭಿಸುವುದು.

★

ಕೆಳಗೆ ಮಾಡಿದುದಾಗಿದೆ. ಅವುಗಳ ದ್ವಾರಾ, ಪಾಶ್ಚಾತ್ಯ ವಿದ್ವಾನರ ಇಂದಿನ ವೈಜ್ಞಾನಿಕ ಕಲೆಯು ಪ್ರಾಚೀನ ಭಾರತೀಯ ವೈಜ್ಞಾನಿಕ ಕಲೆಗಿಂತ ಬಹು ಹಿಂದೆ ಇರುತ್ತದೆಂದು ತಿಳಿಯಬಹುದು.

(೩) "ಕೃತಕರಹಸ್ಯೋನಾಮ—ವಿಶ್ವಕರ್ಮಛಾಯಾಪುರುಷ ಮನುಮಯಾದಿ ಶಾಸ್ತ್ರಾನುಷ್ಠಾನದ್ವಾರಾ ತತ್ತತ್ ಶಕ್ತ್ಯನುಸಂಧಾನಪೂರ್ವಕಂ ತಾತ್ಕಾಲಿಕ ಸಂಕಲ್ಪಾನುಸಾರೇಣ ವಿಮಾನರಚನಾಕ್ರಮರಹಸ್ಯಮ್ ||"

ಅರ್ಥ:—"ಆ ೩೨ ರಹಸ್ಯಗಳಲ್ಲಿ ಕೃತಕ ಹೆಸರಿನ ರಹಸ್ಯವು ಮೂರನೆಯದು; ವಿಶ್ವಕರ್ಮ, ಛಾಯಾಪುರುಷ, ಮನು, ಮಯದಾನವ ಆದಿ ವಿಮಾನ ಶಾಸ್ತ್ರಕಾರರು ಬರೆದ ಶಾಸ್ತ್ರಗಳ ಅನುಶೀಲನ ಮಾಡುವುದರಿಂದ, ಆಯಾಯ ಧಾತು-ಕ್ರಿಯಾ ಆದಿಯಲ್ಲಿರುವ ಸಾಮರ್ಥ್ಯದ ಅನುಭವವು ಹೊಂದಿದ ನಂತರವೇ, ಇಚ್ಛಾನುಸಾರ ನವೀನ ವಿಮಾನ ರಚನೆ ಮಾಡಬೇಕಾಗಿದೆ."

(೫) "ಗೂಢರಹಸ್ಯೋ ನಾಮ-ವಾಯುತತ್ತ್ವಪ್ರಕರಣೋಕ್ತರೀತ್ಯಾ ವಾತಸ್ತಂಭಾಷ್ಟಮ ಪರಿಧಿರೇಖಾಪಥಸ್ಯ ಯಾಸಾವಿಯಾಸಾಪ್ರಯಾಸಾದಿ ವಾತಶಕ್ತಿಭಿಃ ಸೂರ್ಯಕಿರಣಾಂತರ್ಗತ ತಮಃಶಕ್ತಿಮಾಕೃಷ್ಯ ತತ್ಸಂಯೋಜನದ್ವಾರಾ ವಿಮಾನಾಚ್ಛಾದನರಹಸ್ಯಮ್ ||"

ಅರ್ಥ:—"ಗೂಢ ಹೆಸರಿನ ೫ನೇ ರಹಸ್ಯವು. ವಾಯುತತ್ತ್ವಪ್ರಕರಣದಲ್ಲಿ ಹೇಳಿದ ರೀತಿಯ ಅನುಸಾರ, ವಾತಸ್ತಂಭದ ೮ನೇ ಪರಿಧಿರೇಖೆಯ ಮಾರ್ಗದ 'ಯಾಸಾ', 'ವಿಯಾಸಾ', 'ಪ್ರಯಾಸಾ' ಇತ್ಯಾದಿ ವಾಯುಶಕ್ತಿಗಳ ದ್ವಾರಾ ಸೂರ್ಯಕಿರಣದಲ್ಲಿ ಉಪಸ್ಥಿತವಾದ ಅಂಧಕಾರ ಶಕ್ತಿಯ ಆಕರ್ಷಣ ಮಾಡಿ, ವಿಮಾನದೊಡನೆ ಅದರ ಸಂಬಂಧ ಕಟ್ಟಿಕೊಳ್ಳುವುದರಿಂದ ವಿಮಾನವು ಮರೆಯಾಗುತ್ತದೆ."

(೯) ಅಪರೋಕ್ಷರಹಸ್ಯೋನಾಮ—ಶಕ್ತಿತಂತ್ರೋಕ್ತರೋಹಿಣೀವಿದ್ಯುತ್‌ಪ್ರಸಾರಣೇನ ವಿಮಾನಾಭಿಮುಖಸ್ಥವಸ್ತೂನಾಂ ಪ್ರತ್ಯಕ್ಷನಿದರ್ಶನಕ್ರಿಯಾರಹಸ್ಯಮ್ ||"

ಅರ್ಥ:—"ಅಪರೋಕ್ಷ ೯ನೇ ರಹಸ್ಯದ ಅನುಸಾರ, ಶಕ್ತಿತಂತ್ರದಲ್ಲಿ ಹೇಳಿದ ರೋಹಿಣೀ ವಿದ್ಯುತ್(ಒಂದು ವಿಶೇಷ ಪ್ರಕಾರದ ಸಿಡಿಲು ಅಥವಾ ವಿದ್ಯುತ್ತು)ನ ಪ್ರಸಾರಣದಿಂದ ವಿಮಾನದ ಸಮ್ಮುಖ ಬರುತ್ತಿರುವ ವಸ್ತುಗಳನ್ನು ಪ್ರತ್ಯಕ್ಷ ನೋಡಬಹುದಾಗಿರುತ್ತದೆ."


(೨೨) "ಸಾರ್ಪಗಮನರಹಸ್ಯೋ ನಾಮ-ದಂಡವಕ್ರಾದಿ ಸಪ್ತವಿಧಮಾತರಿಶ್ವಾರ್ಕಕಿರಣಶಕ್ತೀರಾಕೃಷ್ಯ ಯಾನಮುಖಸ್ಥವಕ್ರಪ್ರಸಾರಣ ಕೇಂದ್ರ ಮುಖೇ ನಿಯೋಜ್ಯ ಪಶ್ಚಾತ್ತದಾಹೃತ್ಯ ಶಕ್ತ್ಯುದ್ಗಮನನಾಲೇ ಪ್ರವೇಶಯೇತ್ | ತತಃ ತತ್ಕೀಲಿಚಾಲನಾದ್ವಿಮಾನಸ್ಯ ಸರ್ಪವದ್ಗಮನಕ್ರಿಯಾರಹಸ್ಯಮ್ ||"

ಅರ್ಥ:—"ಸಾರ್ಪಗಮನನಾಮಕ ೨೨ನೇ ರಹಸ್ಯದ ಅನುಸಾರ, ದಂಡ, ವಕ್ರ ಆದಿ ೭ ಪ್ರಕಾರದ ವಾಯು, ಮತ್ತು ಸೂರ್ಯಕಿರಣಗಳ ಶಕ್ತಿಗಳ, ಆಕರ್ಷಣ ಮಾಡಿ, ಯಾನದ ಮುಖದಲ್ಲಿರುವ ಪ್ರಸಾರಣ ಕೇಂದ್ರದ ಮುಂಭಾಗದಲ್ಲಿ ಅವುಗಳನ್ನು ನಿಯೋಜಿಸಿ, ಅದರ ನಂತರ ಅವುಗಳನ್ನು ಹೀರಿ ಎಳೆದು, ಶಕ್ತಿಯ ಉದ್ಗಮಸ್ಥಾನವಾಗಿರುವ ನಾಳದಲ್ಲಿ ಪ್ರವೇಶ ಮಾಡಿಸಬೇಕಾಗಿದೆ; ಆಗ ಅದರ ಬಟನ್ (Button) ಒತ್ತುವುದರಿಂದ, ವಿಮಾನದ ಗತಿಯು ಸರ್ಪದಂತೆ ಡೊಂಕು ಡೊಂಕಾಗಿ ಪರಿಣಮಿಸುತ್ತದೆ."

(೨೫) "ಪರಶಬ್ದಗ್ರಾಹಕರಹಸ್ಯೋನಾಮ-ವಿಮಾನಸ್ಥರೂಪಾಕರ್ಷಣ ಯಂತ್ರದ್ವಾರಾ ಪರವಿಮಾನಸ್ಥಿತವಸ್ತುರೂಪಾಕರ್ಷಣರಹಸ್ಯಮ್ ||"

ಅರ್ಥ:—"ರೂಪಾಕರ್ಷಣ ಹೆಸರಿನ ೨೬ನೇ ರಹಸ್ಯದ ಅನುಸಾರ, ವಿಮಾನದಲ್ಲಿದ್ದ ರೂಪಾಕರ್ಷಣ ಯಂತ್ರದ್ವಾರಾ ಇನ್ನೊಂದು ವಿಮಾನದಲ್ಲಿರುವ ವಸ್ತುಗಳ ರೂಪ ಕಾಣಿಸುವಂತೆ ಮಾಡುತ್ತದೆ.

(೨೮) "ದಿಕ್‌ಪ್ರದರ್ಶನರಹಸ್ಯೋ ನಾಮ—ವಿಮಾನ



ತಾಸಿಗೆ ೩೮೩ ಮೈಲು ಓಡುವ 'ಹಾಕರ್‌ಫ್ಯೂರಿ' ನಾಮಾಂಕಿತ ವಿಮಾನ.

ಮುಖಕೇಂದ್ರ ಕೀಲೀಚಾಲನೇನ ದಿಶಾಂಪತಿ ಯಂತ್ರನಾಲ ಪತ್ರದ್ವಾರಾ ಪರಯಾನಾಗಮನದಿಕ್‌ಪ್ರದರ್ಶನರಹಸ್ಯಮ್ ||"

ಅರ್ಥ: —"ದಿಕ್‌ಪ್ರದರ್ಶನನಾಮಕ ೨೮ನೇ ರಹಸ್ಯಾನುಸಾರ, ವಿಮಾನದ ಮುಖಕೇಂದ್ರದ ಕೀಲೀ (ಬಟನ್) ಚಾಲನದಿಂದ, ದಿಶಾಂಪತಿ ನಾಮಕಯಂತ್ರದ ನಳಿಯಲ್ಲಿರುವ ಸೂಜಿಯ ದ್ವಾರಾ ಇನ್ನೊಂದು ಆಗಮಿಸುವ ವಿಮಾನದ ದಿಕ್ಕನ್ನು ಅರಿಯಬಹುದಾಗಿದೆ."

(೩೧) "ಸ್ತಬ್ಧಕರಹಸ್ಯೋ ನಾಮ–ವಿಮಾನೋತ್ತರ ಪಾರ್ಶ್ವಸ್ಥ ಸಂಧಿಮುಖನಾಲಾದಪಸ್ಮಾರಧೂಮಂ ಸಂಗ್ರಾಹ್ಯ ಸ್ತಂಭನಯಂತ್ರದ್ವಾರಾ ತದ್‌ಧೂಮಪ್ರಸಾರಣಾತ್ ಪರ ವಿಮಾನಸ್ಥ ಸರ್ವಜನಾನಾಂಸ್ತಬ್ಧೀಕರಣರಹಸ್ಯಮ್ ||"

ಅರ್ಥ: —"ಸ್ತಬ್ಧಕನಾಮಕ ೩೧ನೇ ರಹಸ್ಯದ ಅನುಸಾರ, ವಿಮಾನದ ಎಡಗಡೆಯಲ್ಲಿರುವ ಸಂಧಿಮುಖ ನಾಮಕ ನಳಿಯ ದ್ವಾರಾ, ಅಪಸ್ಮಾರನಾಮಕ (ಒಂದು ವಿಶೇಷ ತೂತಿನಿಂದ ಹೊರಟು ಬರುವ) ದೂವೆಗಳನ್ನು ಏಕತ್ರಿತಮಾಡಿ ಸ್ತಂಭನಯಂತ್ರದ್ವಾರಾ ಇನ್ನೊಂದು ಯಂತ್ರದ ಮೇಲೆ ಧೂಮ ಪ್ರಸಾರಣದಿಂದ, ಆ ವಿಮಾನದಲ್ಲಿರುವ ಸಕಲ ಜನರು ಸ್ತಬ್ಧ (ಸ್ಮೃತಿತಪ್ಪಿಬೀಳುವರು)ರಾಗುವರು."

(೩೨) "ಕರ್ಷಣರಹಸ್ಯೋನಾಮ–ಸ್ವವಿಮಾನಸಂಹಾರಾರ್ಥಂ ಪರವಿಮಾನಪರಂಪರಾಗಮನೇ ವಿಮಾನಾಭಿಮುಖಸ್ಥವೈಶ್ವಾನರನಾಲಾಂತರ್ಗತಜ್ವಾಲಿನೀಪ್ರಜ್ವಾಲನಂ ಕೃತ್ವಾ ಸಪ್ತಾಶೀತಿ ಲಿಂಕಪ್ರಮಾಣೋಷ್ಣಂ ಯಥಾ ಭವೇತ್ ತಥಾ ಚಕ್ರದ್ವಯಕೀಲೀ ಚಾಲನಾತ್ ಶತ್ರುವಿಮಾನೋಪರಿ ವರ್ತುಲಾಕಾರೇಣ ತತ್-ಶಕ್ತಿಪ್ರಸಾರಣದ್ವಾರಾ ಶತ್ರುವಿಮಾನನಾಶನ ಕ್ರಿಯಾರಹಸ್ಯಮ್ ||"

ಅರ್ಥ: —"ಕರ್ಷಣ ಹೆಸರಿನ ೩೨ನೇ ರಹಸ್ಯವಾಗಿದೆ. ಅದರಿಂದ ತನ್ನ ವಿಮಾನದ ನಾಶ ಸಾಧಿಸಲು, ಶತ್ರುವಿಮಾನಗಳು ಬರುತ್ತಿರುವ ಸಮಯ, ವಿಮಾನದ ಮುಖದಲ್ಲಿರುವ ವೈಶ್ವಾನರ ಹೆಸರಿನ ನಳಿಯಲ್ಲಿ ಜ್ವಾಲಿನಿ (ಒಂದು ಗೇಸಿನ ಹೆಸರು)ಯನ್ನು ಉರಿಸಿ ೮೭ ಲಿಂಕ ಪ್ರಮಾಣ (ಡಿಗ್ರಿಯಂತೆ, ಲಿಂಕು ಒಂದು ಅಳತೆಯ ಪ್ರಮಾಣವಾಗಿದೆ) ಉಷ್ಣತೆಯನ್ನು ಲಭಿಸಿದ ತರುವಾಯ, ಎರಡೂ ಚಕ್ರಗಳ ಕೀಲಿ (ಬಟನ್)ಗಳ ಚಾಲನೆ ಮಾಡಿ, ಶತ್ರುವಿಮಾನಗಳ ಮೇಲೆ, ಗೋಲಾಕಾರದಿಂದ ಆ ಶಕ್ತಿಪ್ರಸಾರಣದ್ವಾರಾ, ಶತ್ರುವಿಮಾನವು ನಾಶವಾಗುತ್ತದೆ."

ಈ ವೈಮಾನಿಕಪ್ರಕರಣದಲ್ಲಿ ಉಲ್ಲೇಖಿಸಲ್ಪಟ್ಟ ಗ್ರಂಥ ಮತ್ತು ಗ್ರಂಥಕಾರರ ಹೆಸರುಗಳಿಂದ ಸ್ಪಷ್ಟವಾಗಿ ತಿಳಿದುಬರುವುದು ಇದು: ನಮ್ಮ ಪೂರ್ವಜರು ವಿಮಾನಶಾಸ್ತ್ರದಲ್ಲಿ ಅತ್ಯಂತ ನಿಪುಣರಾಗಿದ್ದರು. ಈ ರಹಸ್ಯಗಳನ್ನು ಓದಿ, ಅಧ್ಯಯನಮಾಡುವುದರಿಂದ, ಸೂಚಿತವಾಗುವುದು ಇದು. ಇಂಗಿನ ವೈಜ್ಞಾನಿಕರು, ವಿಮಾನದ್ವಾರಾ, ಉಪಯೋಗಿಸುವ ಸಕಲ ಕಲೆಗಳನ್ನು ಅವರು ಅರಿತಿದ್ದರು; ಅವರೊಡನೆ ಸಕಲ ಕಲೆಗಳಿದ್ದುವು; ಆದರೆ, ಇಂದು ಆಧುನಿಕ ವೈಜ್ಞಾನಿಕರು ಇನ್ನಿತರ ಕಲೆಗಳ ಶೋಧದಲ್ಲಿ ವ್ಯಸ್ತರಾಗಿದ್ದಾರೆ; ಹಲವುಗಳ ಕಲ್ಪನೆಯನ್ನು ಸಹಾ ಅವರು ಹೊಂದಿರುವುದಿಲ್ಲ; ಅಂತಹ ಕಲೆಗಳನ್ನು ನಮ್ಮ ಪೂರ್ವಜರು ಅರಿತಿದ್ದರು. ೯ನೇ ರಹಸ್ಯದಿಂದ, 'ದೂರಬೀನ'ನಂತಹ ಒಂದು ದೂರದರ್ಶಕ ಯಂತ್ರವು ಅವರೊಡನೆ ಇತ್ತು ಎಂದು ತಿಳಿದುಬರುತ್ತದೆ; ೨೫ನೇ ರಹಸ್ಯದಿಂದ, 'ವಾಯರಲೆಸ್' ರೆಡಿಯೊ ಸಹಾ ಅವರೊಡನೆ ಇತ್ತೆಂದು ಕಾಣಿಸುತ್ತದೆ. ಇಂದಿನ ವೈಜ್ಞಾನಿಕರಂತೆ ದೂರದಿಂದಲೇ ಶತ್ರುವಿಮಾನವನ್ನು ಗೊತ್ತುಹಿಡಿಯುವ ಕಲೆಯು ಸಹಾ ಅವರೊಡನೆ ಇತ್ತೆಂದು, ೨೮ನೇ ರಹಸ್ಯದಿಂದ ತಿಳಿದುಬರುತ್ತದೆ. ೩೨ನೇ ರಹಸ್ಯದಿಂದ ಸ್ಪಷ್ಟವಾಗುವುದು ಇದು: ಅವರು ಗೇಸು, ಬಾಂಬು ಆದಿ ದ್ವಾರಾ, ಶತ್ರುಸಂಹಾರವನ್ನು ಇಂದು ವಿಮಾನದಿಂದ ಮಾಡುತ್ತಿರುವವರಂತೆಯೇ, ಅಂದು ಆ ಜನರು (ವೈಮಾನಿಕರು)ವಿಮಾನದಿಂದ ಅಂತಹ ಶಸ್ತ್ರಾಸ್ತ್ರಗಳ ಉಪಯೋಗಮಾಡುತ್ತಿದ್ದರು. ೨೬ನೇ ರಹಸ್ಯದಿಂದ ತಿಳಿದುಬರುವುದು ಇದು. ಇಂದಿನ ವೈಜ್ಞಾನಿಕರು ಟೆಲಿಫೋನಿನಿಂದ ಮಾತಾಡುವವರ ಆಕೃತಿ ತೋರಿಸಿಕೊಡುವ 'ಟೆಲಿವಿಜನ್' ನಾಮಕ ಯಂತ್ರದ ಆವಿಷ್ಕಾರ ಮಾಡಿರುವಂತೆ, ಅಂತಹ ಯಂತ್ರವು ಅಧಿಕ ಚಮತ್ಕಾರಿಕ ರೂಪದಲ್ಲಿ ನಮ್ಮ ಪೂರ್ವಜರೊಡನೆ ಇತ್ತು. ವಿಮಾನಗಳನ್ನು ಅದೃಶ್ಯಮಾಡುವ ೫ನೇ ರಹಸ್ಯವು ಇದರಲ್ಲಿ ಇದೆ; ಹಾಗೂ, ಅದರ ಸದೃಶ ಅನ್ಯ ಹಲವು ರಹಸ್ಯಗಳಿವೆ. ವಿಸ್ತಾರಭಯದಿಂದ ಇಲ್ಲಿ ಅವುಗಳು ಉದ್ಧೃತಮಾಡಲ್ಪಡಲಿಲ್ಲ; ಈ ಸಕಲ ವಿಷಯದಲ್ಲಿ ಇಂದಿನ ವೈಜ್ಞಾನಿಕರು, ಇಂದಿನ ತನಕ ಸಮರ್ಪಕವಾಗಿ ವಿಚಾರಿಸಲು, ಹಾಗೂ ವಿವೇಚಿಸಲು ಸಮರ್ಥರಾಗಲಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಇದು ಶೋಚನೀಯವೇ ಸರಿ.

(ಶ್ರೀಮಾನ್ ದಾಮೋದರ ಝಾರವರು ಸಿದ್ಧಾಂತದಲ್ಲಿ ಬರೆದ ಲೇಖನದ ಆಧಾರದಿಂದ ಇದನ್ನು ಬರೆದಿರುವೆನು.

ಉತ್ತಮ ವೃತ್ತಿ

ಲೇಖಕರು:
ಶ್ರೀ। ಎಲ್. ಎಸ್. ಶೇಷಗಿರಿರಾವ್, ಎಮ್. ಎ., ಬೆಂಗಳೂರು.



೧

ಮೂರು ವರ್ಷಗಳಿಂದ ರಾಧ ಹೀಗೆ ನಿದ್ದೆ ಕೆಟ್ಟಿರಲಿಲ್ಲ. ಗಂಡ ತೀರಿಕೊಂಡ ಹೊಸದರಲ್ಲಿ ದುಃಖ ತುಂಬಿದ ಹೃದಯವು ನಿದ್ದೆಗೆ ಅವಕಾಶ ಕೊಡುತ್ತಿರಲಿಲ್ಲ. ಕಾಲ ಕಳೆದಂತೆ ದುಃಖ ಮಾಯವಾಗದಿದ್ದರೂ ಅದರ ತೀಕ್ಷ್ಣತೆ ಕಡಮೆಯಾಗಿ ಮನಸ್ಸು ಒಂದು ರೀತಿಯಲ್ಲಿ ಹದಕ್ಕೆ ಬಂದಿತ್ತು. ಹತ್ತು ವರ್ಷದ ಉಷಾ, ಎಂಟು ವರ್ಷದ ಮೋಹನ ಇವರನ್ನು ನೋಡಿಕೊಂಡು, ತಂಗಿ ಚಂದ್ರಳನ್ನು ನೋಡಿಕೊಂಡು ಜೀವನದಲ್ಲಿ ಆಸಕ್ತಿಯನ್ನು ಉಳಿಸಿಕೊಂಡು ಬಂದಿದ್ದಳು. ಆದರೆ ಈಗ ಮತ್ತೆ ಜೀವನದಲ್ಲಿ ಕಾರ್ಮುಗಿಲು ಕವಿದಿತ್ತು. ಶಾಲೆಯ ಅಧ್ಯಾಪಕಿಯಾಗಿ ತನಗೆ ಬರುವ ಸಂಬಳದಲ್ಲಿ ಜೀವನ ಸಾಗುವುದು ಕಷ್ಟವಾಗಿತ್ತು. ಮನೆಯ ಬಾಡಿಗೆ, ಹಾಲು, ಮೊಸರು— ಎಲ್ಲದರ ಬೆಲೆ ಏರುತ್ತಿತ್ತು. ಮುಗಿಲು ಮುಟ್ಟಲು ಹವಣಿಸುತ್ತಿತ್ತು. ಈ ಮಧ್ಯೆ ಉಷಾ ಕಾಯಿಲೆ ಮಲಗಿದಳು. ಅವಳದು ವಿಚಿತ್ರ ಕಾಯಿಲೆ; ಹತ್ತು ವರ್ಷದ ಹುಡುಗಿಗೆ ಮೈ ಕೈ ನೋವು, ಎದ್ದು ಓಡಾಡುವುದೇ ಅಸಾಧ್ಯವಾಯಿತು. ತಿಂಗಳುಗಟ್ಟಲೆ ಚಿಕಿತ್ಸೆ ನಡೆಯಬೇಕೆಂದು ಡಾಕ್ಟರು ಸೂಚಿಸಿದ್ದರು. ಒಂದು ತಿಂಗಳ ಚಿಕಿತ್ಸೆ ಮುಗಿದು, ಡಾಕ್ಟರು ಐವತ್ತಾರು ರೂಪಾಯಿಗೆ 'ಬಿಲ್' ಕಳುಹಿಸಿದ್ದರು. ತಂಗಿ ಚಂದ್ರ ಬಿ.ಎ. ಮಾಡಿ ಆರು ತಿಂಗಳು ಕಳೆದಿದ್ದರೂ ಕೆಲಸ ಸಿಕ್ಕಿರಲಿಲ್ಲ. ಪಾಪ, ತಾರುಣ್ಯದ ಹೊಸ್ತಿಲಲ್ಲಿ ಕಾಲಿಟ್ಟ ಹುಡುಗಿ, ನಾಚಿಕೆ, ಅಂಜಿಕೆಗಳನ್ನು ಬಿಟ್ಟು ಕಚೇರಿಗಳೆಲ್ಲ ತಿರುಗಿ ಬೇಸತ್ತಿದ್ದಳು. ಯಾವುದಾದರೂ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಸಿಕ್ಕೀತೆಂದು ಅಲೆದದ್ದಾಯಿತು. ವಿದ್ಯಾಧಿಕಾರಿಗಳನ್ನು ನೋಡಲೆಂದು ಒಂದು ವಾರ ಸತತವಾಗಿ ಕಚೇರಿಗೆ ಅಲೆದು, ಕೆಲಸವಿಲ್ಲ ಎನ್ನಿಸಿಕೊಂಡು ಬಂದಿದ್ದಳು. ಕಾಲು ನೋವು ಬಂದುದೊಂದೇ ಫಲವಾಯಿತು. ಹಿಂದಿನ ದಿನ ತಾನೇ ಪುಣ್ಯಾತ್ಮರೊಬ್ಬರು ನಡೆಸುತ್ತಿದ್ದ!ಬಾಲಕಿಯರ ಪಾಠಶಾಲೆಯಲ್ಲಿ ಕೆಲಸ ಸಿಕ್ಕೀತೆಂಬ ಆಸೆಯಿಂದ ಕಾರ್ಯದರ್ಶಿಗಳ ಮನೆಯ ಬಾಗಿಲನ್ನು ಬೆಳಗ್ಗೆಯಿಂದ ಕಾದು, ರಾತ್ರಿ ಏಳು ಗಂಟೆಗೆ ಸಪ್ಪೆ ಮುಖ ಹಾಕಿಕೊಂಡು ಬಂದಿದ್ದಳು. ಪಾಪ, ಆ ಹುಡುಗಿ ತಾನೇ ಏನು ಮಾಡೀತು?

ರಾಧೆಯ ಮನಸ್ಸಿನ ಚಿಂತೆ ನಿದ್ದೆಯನ್ನು ದೂರ ಅಟ್ಟಿತು. ಮುಂದೆ ಗತಿ? ಗಂಡನ ಇನ್ಸ್ಯೂರೆನ್ಸ್ ಹಣವೂ ಮುಗಿಯುತ್ತ ಬಂತು. ಬೆಲೆಗಳು ಹೀಗೆ ಏರುತ್ತಿರುವಾಗ ಇನ್ನೆಷ್ಟು ದಿನ ಸಂಸಾರ ನಡೆಸಲು ಸಾಧ್ಯ? ನಡೆಸದೆ ವಿಧಿಯುಂಟೆ? ದೇಶಕ್ಕೆ ಸ್ವಾತಂತ್ರ್ಯ ಬಂದಿತು, ಆರು ತಿಂಗಳಾಯಿತು. ಸ್ವಾತಂತ್ರ್ಯ ಬಂದರೆ ಬಂಗಾರದ ಮಳೆ ಬರದಿದ್ದರೂ ಸ್ವಲ್ಪವಾದರೂ ಸ್ಥಿತಿಗತಿ ಉತ್ತಮವಾದೀತು; ಗುಲಾಬಿಯ ಹಾಸಿಗೆಯಲ್ಲಿ ಮಲಗಲು ಆಗದಿದ್ದರೂ ನಿರಾತಂಕವಾಗಿ ಉಸಿರಾಡಲು ಸಾಧ್ಯವಾದೀತು ಎಂಬ ಆಸೆ ಮಣ್ಣುಗೂಡಿತ್ತು. ಸಾಮಾನ್ಯ ಜನರ ಸ್ಥಿತಿ ಸ್ವಲ್ಪವೂ ಉತ್ತಮಗೊಳ್ಳುವಂತೆ ತೋರಲಿಲ್ಲ. ಸಂಸಾರ ನಡೆಸುವುದು ಹೇಗೆ, ಉಷಾಗೆ ಔಷಧಕೊಡಿಸುವುದು ಹೇಗೆ? ಅಧಿಕಾರಿಗಳು, ಮಂತ್ರಿಗಳು ಎಲ್ಲರಿಗೂ ಬಡವರು ಮೊರೆಯಿಟ್ಟಾಯಿತು. ಮೊನ್ನೆ ತಾನೆ ನಡೆದ ಉಪಾಧ್ಯಾಯಿನಿಯರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಮಂತ್ರಿಗಳು ನುಡಿದಿದ್ದರು; 'ಉಪಾಧ್ಯಾಯ ವೃತ್ತಿ ಜಗತ್ತಿನ ಎಲ್ಲ ವೃತ್ತಿಗಳಲ್ಲಿಯೂ ಪವಿತ್ರವಾದುದು, ಪರಮಪೂಜ್ಯವಾದುದು. ದೇಶದಲ್ಲಿ ಜ್ಞಾನದ, ಸಂಸ್ಕೃತಿಯ ನಂದಾದೀವಿಗೆಯನ್ನು ಉರಿಸಿಕೊಂಡು ಬರುವ ಮಂಗಳ ಕಾರ್ಯ ಅವರದು. ದೇಶದ ಅಭಿವೃದ್ಧಿಯ ಅಡಿಗಲ್ಲನ್ನು ಸಿದ್ಧಗೊಳಿಸುವ ಪುಣ್ಯಮೂರ್ತಿಗಳು ಅವರು. ಈ ಮಹಾಕಾರ್ಯದಲ್ಲಿ ಉಪಾಧ್ಯಾಯಿನಿಯರ ಕರ್ತವ್ಯವಂತೂ ಅತಿಪವಿತ್ರವಾದುದು. ಅವರಿಂದ ಉಪಾಧ್ಯಾಯ ವೃತ್ತಿಯ ಆದರ್ಶಗಳು ಸಾಧಿತವಾದಂತೆ ಉಪಾಧ್ಯಾಯರಿಂದ ಆಗುವುದು ಕಷ್ಟ. ಮಾತೃಭೂಮಿಗೆ ಅಮೂಲ್ಯವಾದ, ಪವಿತ್ರವಾದ ಸೇವೆ ಸಲ್ಲಿಸುವ ಭಾಗ್ಯ ಪಡೆದಿರುವ ಉಪಾಧ್ಯಾಯರು, ಉಪಾಧ್ಯಾಯಿನಿಯರು ತ್ಯಾಗಕ್ಕೆ ಸಿದ್ಧರಾಗಿರಬೇಕು, ತಮ್ಮ ತ್ಯಾಗದಿಂದ ದೇಶದ ಬಾಲಕಬಾಲಕಿಯರಿಗೆ ತ್ಯಾಗದ, ತೆರೆಯ ಪಥವನ್ನು ತೋರಿಸಬೇಕು' ಎಂದು ಹೇಳಿದ್ದರು. ಹೊಟ್ಟೆಗೆ

ಇಲ್ಲದವರು ತ್ಯಾಗಕ್ಕೆ ಮುಂದೆ ಬರಬೇಕು! ಉಸಿರಾಡಲು ಶಕ್ತಿಯಿಲ್ಲದವರು ಹೊರೆಯನ್ನು ಹೊರಲು ಆನಂದದಿಂದ, ಉತ್ಸಾಹದಿಂದ ಧಾವಿಸಿ ಬರಬೇಕು!!

ಹುಂ, ಇದೆಲ್ಲ ಯೋಚಿಸಿ ಪ್ರಯೋಜನವೇನು? ಈಗ ತನ್ನ ಜೀವನದ ಸಮಸ್ಯೆಗಳನ್ನು ಎದುರಿಸುವುದು ಹೇಗೆ?

ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ ರಾಧೆಗೆ ಸಮಸ್ಯೆ. ದೀಪ ಹಾಕಿ, ಉಷಾ, ಮೋಹನ ಇಬ್ಬರಿಗೂ ಹೊದಿಕೆ ಸರಿಮಾಡಿ, ಮತ್ತೆ ದೀಪ ಆರಿಸಲೆಂದು ತಿರುಗಿದಳು. ನಿದ್ರೆಯ ಉಡಿಯಲ್ಲಿದ್ದ ಚಂದ್ರ ಕಣ್ಣಿಗೆ ಬಿದ್ದಳು. ಅವಳನ್ನೆ ನೋಡುತ್ತ ನಿಂತಳು ರಾಧ.

ನಿದ್ದೆಮಾಡುತ್ತಿದ್ದ ಚಂದ್ರ ರಾಧೆಯ ಕಣ್ಣಿಗೇ ಚೆಲುವಾಗಿ ಕಂಡಳು. ಕೆಂಪು, ಬಿಳುಪು ಕಣ್ಣಿಗೆ ಮೋಹಕವಾಗಿ ಬೆರತಿದ್ದ ಮೈಯ ಬಣ್ಣ, ಉಬ್ಬಿಕೊಂಡಿದ್ದ ಕೆಂಪು ಕೆನ್ನೆ, ನಿದ್ದೆಯಿಂದ ನಸು ಜಾರಿದ್ದ ಸೆರಗಿನ ಮರೆಯಲ್ಲಿ ಯೌವನದ ದರ್ಪದಿಂದ ಎದ್ದ ಎದೆ, ಮುಚ್ಚಿದ್ದ, ಕಪ್ಪು ರೇಷ್ಮೆಯ ಎಳೆಗಳನ್ನು ಜೋಡಿಸಿದಂತೆ ಕಾಣುವ ಕಣ್ಣಾಲಿ, ನಸು ಬಿರಿದಿದ್ದ ಕೆಂಪು ತುಟಿ, ಹೊದಿಕೆಯ ಕೊನೆಯಲ್ಲಿ ಕಾಣುತ್ತಿದ್ದ ಹೂವಿನಂತೆ ಮೃದುವಾದ ಪಾದಗಳು. ತನ್ನ ಗಿಡದಲ್ಲಿ ಮಲಗಿ ನಿದ್ರಿಸುವ ಗುಲಾಬಿ ಹೂವಿನಂತೆ ತೋರಿದಳು ಚಂದ್ರ ರಾಧೆಗೆ. 'ಅಯ್ಯೋ, ಏನು ಕಷ್ಟ ಬಂತು ಈ ಮಗುವಿಗೆ' ಎಂದುಕೊಂಡಳು ರಾಧೆ. ತಾಯಿಯನ್ನು ಹುಟ್ಟುತ್ತಲೇ ಕಳೆದುಕೊಂಡು, ಆ ಮೇಲೆ ತಂದೆಯನ್ನು ಕಳೆದುಕೊಂಡು ಅಕ್ಕನ ಮನೆ ಸೇರಿದಳು ಹುಡುಗಿ. ಅಂತೂ ಪದವೀಧರಳೆನ್ನಿಸಿಕೊಂಡಾಯಿತು. ಈಗ ಕೆಲಸಕ್ಕಾಗಿ ಅಲೆತ!

ದೀಪ ಆರಿಸಿ ಮಲಗಿದಳು ರಾಧ. ನಿದ್ದೆ ಹತ್ತಿರ ಸುಳಿಯಲಿಲ್ಲ.

೨

ಮರುದಿನ ರಾಧ ಚಂದ್ರಳಿಗೆ ಹೇಳಿದಳು: 'ನಿನ್ನೆ ಡಾಕ್ಟರ್ ಹೋದ ತಿಂಗಳ ಬಿಲ್ ಕಳುಹಿಸಿದರಮ್ಮ.'

"ಎಷ್ಟಾಯಿತು?"

"ಐವತ್ತಾರು ರೂ."

ಎರಡು ಕ್ಷಣ ಇಬ್ಬರೂ ಮಾತನಾಡಲಿಲ್ಲ. ಆ ಮೇಲೆ ಮೆಲು ದನಿಯಲ್ಲಿ ಚಂದ್ರ ಕೇಳಿದಳು: "ನನ್ನಿಂದ ನಿನಗೆ ಎಷ್ಟು ತೊಂದರೆ, ಅಕ್ಕ?"

"ತೊಂದರೆ ಏನಮ್ಮ?"

"ಹೌದು, ನಿನ್ನ ಹೊರೆಯ ಜೊತೆಗೆ ನನ್ನ ಭಾರವನ್ನೂ ಸೇರಿಸಿದ್ದೇನೆ."

"ಛಿ, ಏನು ಮಾತು ಚಂದ್ರಾ?"

"ಹೌದಕ್ಕ, ಎಂಟು-ಹತ್ತು ವರ್ಷಗಳಿಂದ ನನ್ನನ್ನು ಸಾಕಿಕೊಂಡು ಬಂದಿದ್ದೀ; ಈಗ ಆರು ತಿಂಗಳಿನಿಂದ ಬರಿಯ ಸೋಮಾರಿಯಾಗಿ ಕಾಲ ಕಳೆಯುತ್ತಿದ್ದೇನೆ."

"ನೀನೇನು ಮಾಡುತ್ತಿ, ಚಂದ್ರಾ? ಕೆಲಸಕ್ಕಾಗಿ ಅಲೆದೂ ಅಲೆದೂ ನಿನ್ನ ಕಾಲು ಬೆಳಗ್ಗೆ ಮಲ್ಲಿಗೆಯ ಹಾಗೆ ಬೆಳಗಿದ್ದು ಸಂಜೆ ಕೆಂಪು ಗುಲಾಬಿಯಾಗಿರುತ್ತದೆ."

"ಓಹೋ, ಏನು ನೀನೂ ಕವಿಯಿತ್ರಿಯಾದ ಹಾಗೆ ತೋರುತ್ತದೆ?"

"ಹೌದಮ್ಮ, ನಿನ್ನ ರೂಪ ನೋಡಿದರೆ ನನಗೂ ನಿನ್ನಲ್ಲಿ ಪ್ರೇಮ ಹುಟ್ಟುತ್ತದೆ!"

ಚಂದ್ರ ಬೆಚ್ಚಿದಳು. "ಹಾಳು ರೂಪ, ಯಾರಿಗೆ ಬೇಕು, ಸುಟ್ಟ ರೂಪ!" ಎಂದು ಗೊಣಗಿದಳು.

"ಹಾಗೆಂದರೆ ಹೇಗೆ, ಚಂದ್ರಾ? ನೋಡ್ತಾ ಇರು, ನಿನ್ನ ರೂಪಕ್ಕೋಸ್ಕರ ಯಾವೊಬ್ಬನಾದರೂ ರಾಜಕುಮಾರ ನಿನ್ನನ್ನು ಮದುವೆ ಆಗ್ತಾನೆ."

ಚಂದ್ರಳ ಕಣ್ಣಿನಲ್ಲಿ ನೀರು ಉಕ್ಕಿತು. "ಅಕ್ಕ, ಹಾಗೆ ಮಾತನಾಡಬೇಡ."

"ಇದೇನು ಚಂದ್ರ, ಯಾಕೆ ಅಳುತ್ತಿ?"

"ನನ್ನ ಸುಡುಗಾಡು ರೂಪದ ವಿಷಯ ನೀನು ಮತ್ತೆ ಮಾತನಾಡಿದರೆ ನನಗೆ ಅಳು ಬರುತ್ತೆ."

"ಹುಂ, ಹೋಗಲಿ ಬಿಡಮ್ಮ. ನಾನ್ಯಾಕೆ ವರ್ಣಿಸಲಿ ನಿನ್ನ ರೂಪ. ನಾಳೆ ನಿನ್ನ ಕೈಹಿಡಿದ ಗಂಧರ್ವ ರಾಜಕುಮಾರ ವರ್ಣಿಸಿದರೆ ಕಿವಿಗೆ ಇಂಪಾಗಿರುತ್ತೆ."

ಮತ್ತೆ ಮೌನ. ಎರಡು ನಿಮಿಷ ಬಿಟ್ಟು ಚಂದ್ರಾ ಕೇಳಿದಳು: "ಅಕ್ಕ, ನಿನಗೆ ಕೋಪ ಬಂತೇನೇ?"

ಅವಳಿಗೆ ದುಃಖ ಒತ್ತರಿಸಿಕೊಂಡು ಬರುತ್ತಿದೆ ಎನ್ನುವುದು ರಾಧೆಗೆ ಅವಳ ಮಾತಿನ ರೀತಿಯಿಂದಲೇ ಗೊತ್ತಾಯಿತು. ಹೊಲಿಯುತ್ತಿದ್ದವಳು ತಲೆ ಎತ್ತಿ ನೋಡಿದಳು. ಚಂದ್ರಳ ಬೊಗಸೆಗಣ್ಣುಗಳಲ್ಲಿ ನೀರು ತುಳುಕುತ್ತಿತ್ತು.

"ಅಯ್ಯೋ ಹುಚ್ಚು ಹುಡುಗಿ, ನನಗೆ ಕೋಪವೇಕೆ? ತಮಾಷೆಗೆ ನಾನು ಹೇಳಿದರೆ ಅದನ್ನೇ ನೀನು ಹೀಗೆ ತಿಳಿದುಕೊಂಡು ಅತ್ತುಬಿಡುವುದೆ? ವಿಚಿತ್ರ ಹುಡುಗಿಯಮ್ಮ ನೀನು."

ಪ್ರೀತಿಯಿಂದ ಅವಳ ಗುಂಗುರು ಕೂದಲಿನಲ್ಲಿ ಕೈಆಡಿಸಿದಳು ರಾಧ. ಚಂದ್ರ ಸೆರಗಿನ ಕೊನೆಯಿಂದ ಕಣ್ಣೊರಸಿಕೊಂಡಳು.

"ಅಕ್ಕ, ನಿನ್ನೆ ನಿಮ್ಮ ಸಾಹೇಬರನ್ನು ನೋಡುವುದಕ್ಕೆ ಹೋಗಿದೆಯಲ್ಲ ಏನಾಯಿತ ?"

"ಅಯ್ಯೋ, ಯಾಕೆ ಕೇಳ್ತಿ ಚಂದ್ರ ಆ ವಿಷಯ? ಹನ್ನೊಂದು ಗಂಟೆಗೆ ಹೋದರೆ ಮೂರು ಗಂಟೆ ಆಯಿತು; ಆಫೀಸ್ ಅಸಿಸ್ಟೆಂಟರನ್ನ ನೋಡೋದಕ್ಕೆ; ಸಾಹೇಬರನ್ನ ನೋಡೋದಕ್ಕೆ ಆಗೋದಿಲ್ಲ, ಅವರಿಗೆ ಪುರುಸೊತ್ತಿಲ್ಲ ಎಂದರು. ಅಸಿಸ್ಟೆಂಟರ ಹತ್ತಿರ ನನ್ನ ಕಷ್ಟ ಹೇಳಿಕೊಂಡೆ. "ನನಗೆ ಬರಬೇಕಾದ ಐದು ರೂ. ಪ್ರಮೋಷನ್ ಆರು ತಿಂಗಳಾದರೂ

ಬಂದಿಲ್ಲ, ನನ್ನ ಕಷ್ಟ ಹೀಗಿದೆ, ದಯವಿಟ್ಟು ಕೊಡಿಸಿ," ಅಂತ ಕೇಳಿದೆ. "ಸರ್ಕಾರಾನ ಹಾಗೆಲ್ಲ ಆತುರಪಡಿಸೋದಕ್ಕೆ ಸಾಧ್ಯವೆ, ತಾಳಬೇಕು," ಎಂದರು. "ನನ್ನ ಕೆಲಸ ತೃಪ್ತಿಕರವಾಗಿಲ್ಲವೆ?" ಎಂದು ಕೇಳಿದೆ. "ಛೆ ಛೆ, ಹಾಗೇನಿಲ್ಲ. ನಿಮ್ಮನ್ನು ಕುರಿತು ನಿಮ್ಮ ಹೆಡ್ಮಿಸ್ಟ್ರೆಸ್ ಸೊಗಸಾದ ರಿಪೋರ್ಟ್ ಬರೆದಿದ್ದಾರೆ. ಸಾಹೇಬರ ಇನ್ಸ್‌ಪೆಕ್ಷನ್ ರಿಪೋರ್ಟಿನಲ್ಲಿಯೂ ನಿಮ್ಮ ಪಾಠವನ್ನು ಬಹಳ ಹೊಗಳಿದ್ದಾರೆ. ನಿಮ್ಮಂತಹ ಅಧ್ಯಾಪಕಿಯರು ಬೇಕು ನಮ್ಮ ದೇಶಕ್ಕೆ" ಎಂದು ಬಾಯಿತುಂಬ ಹೊಗಳಿದರು. 'ಹಾಗಿದ್ದರೆ ನನಗೆ ನ್ಯಾಯವಾಗಿ ಬರಬೇಕಾದ ಹಣ ಕೊಡಿಸಿ,' ಎಂದೆ. "ಅಮ್ಮ, ಅದು ಅಷ್ಟು ಸುಲಭವಲ್ಲ. ದೊಡ್ಡ ಸಾಹೇಬರನ್ನು ನಾವು ಅವಸರಿಸೋದಕ್ಕೆ ಆಗೋದಿಲ್ಲ. ಇಲ್ಲಿಂದ ದೊಡ್ಡ ಸಾಹೇಬರ ಆಫೀಸಿಗೆ ಅದು ಇನ್ನೂ ಹೋಗಿಲ್ಲ. ಅಲ್ಲಿ ಎಷ್ಟು ಕಾಲ ತೆಗೆದುಕೊಳ್ಳುತ್ತೊ, ನಾವು ಯಾರೂ ಏನುಮಾಡುವುದಕ್ಕಾಗುವುದಿಲ್ಲ. ನಿಮ್ಮತೊಂದರೆ ನನಗೆ ಅರ್ಥವಾಗುತ್ತದೆ. ನನ್ನ ಸಹಾನುಭೂತಿ ನಿಮ್ಮ ಕಡೆಗಿದೆ," ಎಂದರು.

"ಏನಾದರೂ ಮಾಡಿ ಸಾಹೇಬರನ್ನೇ ನೋಡಬೇಕಾಗಿತ್ತು?"

"ಅದು ಸಾಧ್ಯವೇ ಇಲ್ಲ ಎಂದುಬಿಟ್ಟರು ಅಸಿಸ್ಟೆಂಟರು."

ಸ್ವಲ್ಪ ಹೊತ್ತು ಚಂದ್ರಾ ಮಾತನಾಡಲಿಲ್ಲ. ಅನಂತರ ಮತ್ತೆ ಕೇಳಿದಳು: "ಅಕ್ಕಾ, ದೊಡ್ಡ ಅಧಿಕಾರಿಗಳು, ಜನರ ಮುಖಂಡರು, ಮಂತ್ರಿಗಳು ಎನ್ನಿಸಿಕೊಂಡವರಿಗೆ ನಮ್ಮ ಕಷ್ಟ ಗೊತ್ತಾಗುವುದಿಲ್ಲವೇನೆ? ಅವರನ್ನೇ ನೋಡಿ ಕಷ್ಟ ತೋಡಿಕೊಂಡರೆ?"

"ಅಯ್ಯೋ, ಹುಚ್ಚು ಹುಡುಗಿ, ಈ ಸಣ್ಣಪುಟ್ಟ ಸಾಹೇಬರುಗಳನ್ನ ನೋಡುವುದಕ್ಕೇ ನಮಗೆ ಸಾಧ್ಯವಿಲ್ಲ. ಮಂತ್ರಿಗಳು, ಮುಖಂಡರನ್ನ ನೋಡುವುದಕ್ಕಾದೀತೆ?"

"ಉಪಾಧ್ಯಾಯರೆಲ್ಲ ಸೇರಿ ನೋಡಿದರೆ?"

"ಅದೂ ಕಷ್ಟವೇ. ಇಷ್ಟಾಗಿ ನೋಡಿ ಹೇಳಿದರೆ ಉತ್ತರ ಸಿದ್ಧವಾಗಿರುತ್ತದೆ: 'ಉಪಾಧ್ಯಾಯ ವೃತ್ತಿ ಪವಿತ್ರವಾದುದು' ಎನ್ನುವ ಪಲ್ಲವಿ. 'ಉಪಾಧ್ಯಾಯರು ತ್ಯಾಗಕ್ಕೆ ಸಿದ್ಧರಾಗಿರಬೇಕು' ಎನ್ನುವ ಅನುಪಲ್ಲವಿ ಗೊತ್ತೇ!"

"ನಿನ್ನೆ ಆ ಸ್ಕೂಲಿನ ಕಾರ್ಯದರ್ಶಿ ಅನ್ನಿಸಿಕೊಂಡವನ ಮನೆಗೆ ಹೋಗಿದ್ದೆನಲ್ಲ, ಏನಾಯಿತು ಗೊತ್ತೇ, ಅಕ್ಕ!"

"ಏನು, ಸಾಧ್ಯವಿಲ್ಲ ಅಂದನೋ?"

"ಅಷ್ಟೇ ಹೇಳಿದ್ದರೆ ಚೆನ್ನಾಗಿತ್ತು,"

"ಮತ್ತೆ—?"

"ನನ್ನ ಮೇಲೆ ಕೆಟ್ಟ ದೃಷ್ಟಿ ಹಾಕಿದ."

"ಅಯ್ಯೋ ನಾರಾಯಣ."

"ಅವನ ಮನಸ್ಸಿನ ಹಾಗೆ ನಡೆದರೆ ಎರಡೇ ದಿನಗಳಲ್ಲಿ ಕೆಲಸವಾಗುತ್ತದೆ, ಮಿಡ್ಲ್ ಸ್ಕೂಲಿನಲ್ಲಿ ನಾನೊಬ್ಬಳೇ ಗ್ರಾಡ್ಯುಯೇಟ್ ಆದುದರಿಂದ ಹೆಚ್ಚಿಗೆ ಸಂಬಳದ ಮೇಲೆ ಕೆಲಸಕೊಡಬಹುದು. ಹೀಗೆ ಅಂತ ಬಾಯಿಬಿಟ್ಟು ಅವನು ಹೇಳಲಿಲ್ಲ. ಆದರೆ ಆ ಅರ್ಥ ಬರುವ ಹಾಗೆ ಮಾತನಾಡಿದ. ಅದಕ್ಕೇ ನೀನು ನನ್ನ ರೂಪದ ವಿಷಯ ಎತ್ತಿದಾಗ ನನಗೆ ಕಣ್ಣಿನಲ್ಲಿ ನೀರು ಬಂದದ್ದು!"

"ಇರ್ತಾರಮ್ಮ, ಅಂತಹ ಘಾತುಕರೂ ಇರುತ್ತಾರೆ. ಈಗ ಹತ್ತು-ಹನ್ನೆರಡು ವರ್ಷಗಳ ಹಿಂದೆ ನನಗೂ ಹೀಗೆಯೇ ಆಯಿತು. ಆಗ ಇವರೂ ಬದುಕಿದ್ದರು. ನನ್ನನ್ನು ಕಾಣದ ಕೊಂಪೆಯೊಂದಕ್ಕೆ ವರ್ಗಮಾಡಿದರು, ವರ್ಗ ತಪ್ಪಿಸಿ ಎಂದು ಕೇಳಲು ಹೋದರೆ ಸಾಹೇಬನೆನ್ನಿಸಿಕೊಂಡ ಮೃಗ ಹೀಗೆಯೇ ಮಾತನಾಡಿದ: 'ನೀನು ವರ್ಗ ತಪ್ಪಿಸದಿದ್ದರೂ ಚಿಂತೆಯಿಲ್ಲ, ನನ್ನ ದೇಹ ಮಾರಲಾರೆ,' ಅಂತ ಹೇಳಿ ಬಂದೆ. ಮನೆಯಲ್ಲಿ ಇದನ್ನ ಕೇಳಿ ಇವರು ಕೆಂಡಕೆಂಡವಾದರು, 'ಅವನ ಹಲ್ಲುದುರಿಸುತ್ತೇನೆ' ಅಂತ ಕೋಪಿಸಿದ್ದರು. ಅವರನ್ನು ಸಮಾಧಾನ ಮಾಡುವುದೇ ಕಷ್ಟವಾಗಿ ಹೋಯಿತು."

ಇಷ್ಟು ಹೊತ್ತಿಗೆ ಬೂಟ್ಸ್ ಶಬ್ದ ಕೇಳಿಸಿತು. ಅಕ್ಕ ತಂಗಿಯರು ಮಾತು ನಿಲ್ಲಿಸಿದರು. ಡಾಕ್ಟರ್ ಒಳಕ್ಕೆ ಬಂದರು. ರೋಗಿಯನ್ನು ಪರೀಕ್ಷಿಸಿ, ಇಂಜಕ್ಷನ್ ಕೊಟ್ಟು, ಹೊರಡುವಾಗ ಕೇಳಿದರು: 'ನಿನ್ನೆ ಬಿಲ್ ಕಳಿಸಿದ್ದೆ, ಬಂತೆ ರಾಧಮ್ಮ?'

"ಬಂತು ಡಾಕ್ಟರ್."

"ಹಣ ಸ್ವಲ್ಪ ಬೇಗ ಕಳಿಸಿದರೆ ವಾಸಿ. ಇನ್ನೆರಡು ತಿಂಗಳಿಗೆ ನನ್ನ ಮಗಳ ಮದುವೆ ಗೊತ್ತಾಗಿದೆ.......ಅಂದ ಹಾಗೆ, ಈ ವಾರವಾದ ಮೇಲೆ ಉಷಾಗೆ ಬೇರೆ ಇಂಜಕ್ಷನ್ 'ಕೋರ್ಸ್' ಆರಂಭ ಮಾಡುತ್ತೇನೆ. ಅದು ಇದಕ್ಕಿಂತ ಹೆಚ್ಚು ಖರೀದಿ, ಆದರೆ ಬೇಗ ಗುಣ ಆಗುತ್ತೆ."

"ಆಗಲಿ ಡಾಕ್ಟರ್."

ಡಾಕ್ಟರ್ ಹೋಗುತ್ತಲೇ ಅಕ್ಕತಂಗಿಯರು ಮುಖ ನೋಡಿಕೊಂಡರು. ರಾಧೆಯ ಮುಖದಲ್ಲಿ ದುಃಖ, ನಿರಾಸೆ ತುಂಬಿತ್ತು; ಚಂದ್ರ ಕೊಠಡಿಯೊಳಕ್ಕೆ ಹೊರಟು ಹೋದಳು.

ಚಂದ್ರ ಕೊಠಡಿಯಿಂದ ಹೊರಕ್ಕೆ ಬಂದಾಗ ಆರು ಗಂಟೆ. ಕಣ್ಣು ಕೆಂಪಗಾಗಿತ್ತು. ಕಣ್ಣಿನಲ್ಲಿ ಇನ್ನೂ ನೀರು ಆಡುತ್ತಿತ್ತು. ಮುಖ ಗಂಭೀರವಾಗಿತ್ತು.

"ಕಾಫಿ ಕುಡಿಯಲೇ ಇಲ್ಲವಲ್ಲ, ಚಂದ್ರ?"

"ನನಗೆ....ಬೇಡ....ಅಕ್ಕ."

ಚಂದ್ರ ಪಾದರಕ್ಷೆ ಮೆಟ್ಟಿಕೊಳ್ಳುತ್ತಿದ್ದಳು.

"ಕತ್ತಲಾಗುತ್ತ ಬಂತು, ಒಬ್ಬಳೇ ಹೋಗುತ್ತಿದ್ದಿ. ಬೇಗ ಬಂದುಬಿಡು, ಚಂದ್ರ."

ಚಂದ್ರ ಕೂಡಲೇ ಉತ್ತರ ಕೊಡಲಿಲ್ಲ. ಬಾಗಿಲ ಹತ್ತಿರ ನಿಂತು, "ಅಕ್ಕ, ನಾನು ರಾತ್ರಿ ಮನೆಗೆ ಬರದೇ ಇದ್ದರೆ ಗಾಬರಿಯಾಗಬೇಡ," ಎಂದು ಹೇಳಿ ಸರಸರನೆ ಹೊರಟು ಹೋದಳು.

"ಚಂದ್ರಾ.... ಚಂದ್ರಾ.... ಇದೇನೆ ಇದು?"

ಚಂದ್ರಾ ಸಂಜೆಯ ಮಬ್ಬಿನಲ್ಲಿ ಮಾಯವಾದಳು.

ಅಂದು ರಾತ್ರಿಯೂ ರಾಧ ನಿದ್ದೆ ಮಾಡಲಿಲ್ಲ.

ಮರುದಿನ ಬೆಳಗ್ಗೆ ಏಳು ಗಂಟೆಗೆ ಬಂದಳು ಚಂದ್ರಾ. ಕಣ್ಣು ಅತ್ತು ಅತ್ತು ಊದಿಕೊಂಡಿತ್ತು, ಕೂದಲು ಅಸ್ತವ್ಯಸ್ತವಾಗಿತ್ತು. ಮನೆಯೊಳಕ್ಕೆ ಕಾಲಿಟ್ಟವಳೇ ಕೊಠಡಿಗೆ ಹೋಗಿ ಚಿಲುಕ ಹಾಕಿಕೊಂಡಳು. ರಾಧ ಮಾತನಾಡಲಿಲ್ಲ.

ಮಧ್ಯಾಹ್ನ ಜವಾನನೊಬ್ಬ ಚಂದ್ರಳಿಗೆ ಶಾಲೆಯಲ್ಲಿ ಹೆಚ್ಚಿನ ಸಂಬಳದ ಮೇಲೆ ಕೆಲಸ ಕೊಟ್ಟಿರುವುದಾಗಿ ಕಾಗದ ತಂದುಕೊಟ್ಟು ಹೋದ.

೩

ಒಂದೂವರೆ ವರ್ಷ ಕಳೆದಿತ್ತು, ಮತ್ತೆ ರಾಧೆಯ ಮನಸ್ಸಿಗೆ ಮೋಡ ಕವಿದಿತ್ತು. ಪದಾರ್ಥಗಳ ಬೆಲೆ ಒಂದೇ ಸಮನೆ ಏರುತ್ತಿತ್ತು.

ಮನೆಯ 'ವರಾಂಡ'ದಲ್ಲಿ ಅಕ್ಕತಂಗಿಯರು ಕುಳಿತು ಮಾತನಾಡುತ್ತಿದ್ದರು.

"ಆಗಲೇ ಸಾಲ ಐನೂರಕ್ಕೆ ಮುಟ್ಟುತ್ತಿದೆ, ಚಂದ್ರಾ. ಅಂಗಡಿಯವನು ಇನ್ನು ಸಾಲ ಕೊಡುವುದಿಲ್ಲ ಎಂದು ಹೇಳುತ್ತಿದ್ದಾನೆ. ಹೋದ ವರ್ಷ ಇದ್ದುದಕ್ಕೆ ಎರಡರಷ್ಟಾಗಿದೆ ಎಲ್ಲ ಬೆಲೆ."

"ಗತಿ ಏನಕ್ಕ?"

"ಏನೋ ಕಾಣೆನಮ್ಮ, ದೀಪಾವಳಿ ಬಂತು; ಈ ವರ್ಷವಾದರೂ ಹಬ್ಬಕ್ಕೆ ಹುಡುಗರಿಗೆ ಬಟ್ಟೆ ಹೊಲಿಸಬೇಕು. ಉಷಾ ಜರತಾರಿ ಲಂಗ ಬೇಕು ಎನ್ನುತ್ತಾಳೆ. ಅವಳು ಇನ್ನೆಷ್ಟು ದಿವಸ ಲಂಗ ಹಾಕಿಕೊಂಡಾಳು? ಅವಳ ಆಸೆ ಪೂರೈಸಬೇಕು. ನಾನು ಸೀರೆ ತೆಗೆದುಕೊಳ್ಳಬೇಕು, ನೀನೂ ಎರಡು ಸೀರೆಯಲ್ಲಿ ಕಾಲ ಹಾಕುತ್ತಿದ್ದೀ. ಹಾಲಿನವಳು ಮುಂದಿನ ತಿಂಗಳಿನಿಂದ ಎರಡೇ ಸೇರು ರೂಪಾಯಿಗೆ ಅಂತ ನೋಟೀಸ್ ಕೊಟ್ಟುಬಿಟ್ಟಿದ್ದಾಳೆ."

"ಈಗ ಖಾಲಿ ಇರೋ ಹೆಡ್ ಮಿಸ್ಟ್ರೆಸ್ ಕೆಲಸವಾದರೂ ನನಗೆ ಸಿಕ್ಕಿದರೆ—"

"ಹೇಗೆ ಸಿಗುತ್ತದೆ, ಚಂದ್ರಾ? ನಿನಗಿಂತ ಹೆಚ್ಚು ಸರ್ವಿಸ್ ಆದವರು ಇದ್ದಾರೆ. ಪಾಪ, ಆ ಸೀತಮ್ಮ ಹದಿನಾಲ್ಕು ವರ್ಷಗಳಿಂದ ಆ ಶಾಲೆಯಲ್ಲೇ ಇದ್ದಾರೆ. ನಿನಗೆ ಸಿಗುವುದೂ ಕಷ್ಟ, ಸಿಕ್ಕರೂ ಅನ್ಯಾಯ, ಅಲ್ಲವೆ?"

"ಅನ್ಯಾಯ ಹೇಗೆ ಅಕ್ಕ? ನಾನೊಬ್ಬಳೇ ಆ ಸ್ಕೂಲಿನ ಗ್ರಾಜ್ಯುಯೇಟು, ನನಗೆ ಕೆಲಸ ಕೊಟ್ಟಾಗಲೇ ಹೆಚ್ಚಿಗೆ ಸಂಬ ಕೊಟ್ಟಿದ್ದಾರೆ."

"ಹೌದು, ಆದರೆ ನಿನಗಿಂತ ಹೆಚ್ಚು ಕಾಲದಿಂದ ಅಲ್ಲಿ ದುಡಿಯುತ್ತಿರುವವರ ಗತಿ? ಅವರೇನು ಚೆನ್ನಾಗಿ ಕೆಲಸಮಾಡ ತ್ತಿಲ್ಲವೆ, ಅವರಿಗೂ ಮನೆಯಲ್ಲಿ ತಾಪತ್ರಯ ಇರುವುದಿಲ್ಲವೆ?"

"ಹಾಗೆ ನೋಡುತ್ತ ಕುಳಿತರೆ ಹೇಗೆ, ರಾಧ? ನಮ್ಮ ಕಷ್ಟಗಳಿಗೆ, 'ಅಯ್ಯೋ' ಎನ್ನುವವರು ಯಾರು?"

"ಹೋಗಲಿ ಬಿಡು, ಈ ವಾಗ್ವಾದವೇತಕ್ಕೆ? ನಿನಗೆ ಆ ಕೆಲಸ ಸಿಗುವ ಹಾಗಿದ್ದರೆ ತಾನೆ ಚರ್ಚೆಮಾಡಬೇಕು?"

ಕೆಲವು ನಿಮಿಷ ಮೌನ. ರಾಧ ಹೊಲಿಗೆ ಕೆಲಸದಲ್ಲಿ ನಿರತಳಾದಳು. ಚಂದ್ರಾ ಹತ್ತಿರವಿದ್ದ ಮಾಸಪತ್ರಿಕೆಯೊಂದರ ಹಾಳೆಗಳನ್ನು ತಿರುವಿ ಹಾಕಲಾರಂಭಿಸಿದಳು. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಅನಂತರ ಚಂದ್ರಾ, "ಅಕ್ಕಾ, ನನಗೆ ಆ ಕೆಲಸ ಸಿಗುವುದಿಲ್ಲ ಅಂತ ನಿನಗೆ ಹೇಗೆ ಗೊತ್ತು?"

"ಹೇಳಿದೆನಲ್ಲ, ನಿನಗಿಂತ ಹೆಚ್ಚು ವರ್ಷ, ತೃಪ್ತಿಕರವಾಗಿ ಕೆಲಸಮಾಡಿದವರು ಇದ್ದಾರೆ; ಅದಕ್ಕೋಸ್ಕರ."

"ಬೆಳಗ್ಗೆ ಪ್ರೆಸಿಡೆಂಟರನ್ನ ನೋಡಿದ್ದೆ. ನಾಳೆ ಬೆಳಗ್ಗೆ ಇದನ್ನ ಇತ್ಯರ್ಥಮಾಡೋದಕ್ಕೆ ಸಮಿತಿ ಸಭೆ ಕರೆದಿದ್ದಾರಂತೆ. ಪ್ರೆಸಿಡೆಂಟರು ಹೇಳಿದರು, 'ನಿಮ್ಮ ಕೆಲಸ ತುಂಬಾ ಚೆನ್ನಾಗಿದೆ ಅಂತ ಎಲ್ಲರೂ ಹೊಗಳ್ತಾ ಇದ್ದಾರೆ, ವಿದ್ಯಾರ್ಥಿನಿಯರಿಗೆಲ್ಲ ಅಚ್ಚುಮೆಚ್ಚಾಗಿದ್ದೀರಂತೆ; ಅದೆಲ್ಲ ನನಗೆ ಗೊತ್ತು. ಆದರೆ ನಿಮಗಿಂತ ಸೀನಿಯರ್ಸ್ ಇದ್ದಾರೆ, ನೋಡೋಣ!" ಅಂದರು.

"ಅಯ್ಯೋ, ಮೇಲಿನಧಿಕಾರಿಗಳೆಲ್ಲ ಯಾವಾಗಲೂ ಹೇಳುವುದು ಒಂದೇ, ಚಂದ್ರಾ. 'ನಿಮ್ಮ ಕೆಲಸ ಚೆನ್ನಾಗಿದೆ, ಕಷ್ಟಪಟ್ಟು ದುಡಿಯುತ್ತಿದ್ದೀರಿ, ಮಾತಿನ ಬಹುಮಾನ ನಿಮಗೆ ಎಷ್ಟುಬೇಕಾದರೂ ಕೊಡುತ್ತೇವೆ,' ಅಂತ."

ಎರಡು ನಿಮಿಷ ಸುಮ್ಮನಿದ್ದು, ಮತ್ತೆ ಚಂದ್ರಾ ಮಾತನ್ನು ಆರಂಭಿಸಿದಳು: "ನನಗೆ ಈ ಸ್ಕೂಲಿನಲ್ಲಿ ಕೆಲಸ ಸಿಗುವುದೂ ಕಷ್ಟವಾಗಿ ತೋರಿದ್ದುದು ಸುಲಭವಾಗಲಿಲ್ಲವೆ, ಅಕ್ಕ?"

ಹಾವನ್ನು ತುಳಿದವಳಂತೆ ಬೆಚ್ಚಿ ಕೇಳಿದಳು ರಾಧ: "ಚಂದ್ರಾ, ಏನಂದೆ?"

"ಏನಿಲ್ಲ ಅಕ್ಕ, ಸ್ವಾತಂತ್ರ್ಯ ಯುಗದಲ್ಲಿ ಓದು, ಶಕ್ತಿ, ಶ್ರದ್ಧೆ ಕೇಳುವವರು ಯಾರು? ನೀನು ನೋಡು, ಫಸ್ಟ್‌ಕ್ಲಾ ನಲ್ಲಿ ಪಾಸುಮಾಡಿದೆ, ಶಾಲೆಗಾಗಿ ಶಕ್ತಿಮೀರಿ ದುಡಿಯುತ್ತಿ ವಿದ್ಯಾರ್ಥಿನಿಯರೆಲ್ಲ ನಿನ್ನನ್ನು ಹೊಗಳುತ್ತಾರೆ, ಆದರೆ ನಿನಗೆ ಬಂದ ಭಾಗ್ಯವೇನು? ನಾನು ಬಿ.ಎ. ಮಾಡಿದ್ದೇನೆ, ಚೆನ್ನಾಗಿ ಪಾಠ ಹೇಳಿಕೊಡುತ್ತೇನೆ ಸಾರ್ಥಕವೇನು? ನನ್ನ ನಿನ್ನ ಕಷ್ಟ ಕೇಳುವವರು ಯಾರು?"

"ಅದಮಾತ್ರಕ್ಕೆ, ಚಂದ್ರ—"

ಚಂದ್ರ ರಾಧ ಮಾತನಾಡಲು ಅವಕಾಶ ಕೊಡದೆ ಮುಂದುವರಿದಳು; ಪಟಾಕಿಯ ಸರದಲ್ಲಿ ಒಂದಾದ ಮೇಲೊಂದು ಪಟಾಕಿ ಸಿಡಿದಂತೆ ಅವಳ ಬಾಯಿಂದ ಮಾತುಗಳು ಹೊರ ಬೀಳುತ್ತಿದ್ದವು, "ನಮಗಿಂತ ರೈಲ್ವೆ ಪೋರ್ಟರುಗಳು, ಝಾಡಮಾಲಿಗಳು ಉತ್ತಮ. ಅವರು ಮುಷ್ಕರ ಹಿಡಿಯುತ್ತೇವೆ ಎಂದರೆ ಸರ್ಕಾರ ನಡುಗುತ್ತದೆ,ಅವರನ್ನು ಸಂತೈಸುತ್ತದೆ. ಅತಿ ಪವಿತ್ರವಾದ ವೃತ್ತಿಯಲ್ಲಿರುವ ನಮ್ಮನ್ನು ಕೇಳುವವರೇ ಇಲ್ಲ. ನ್ಯಾಯ, ಧರ್ಮ, ಕರ್ತವ್ಯ ಎಂದು ಕುಳಿತರೆ ಕೇಳುವವರು ಯಾರು? ಜೀವನ ಒಂದು ಹೋರಾಟ, ಬದುಕಬಹುದಾದವರು ಮಾತ್ರ, ಬದುಕಲು ಶಕ್ತಿ ಇರುವವರು ಮಾತ್ರ ಬದುಕಬಹುದು. ನಮಗೆ ಕಾಲೇಜಿನಲ್ಲಿ ಹೇಳಿಕೊಡುತ್ತಿದ್ದುದು ನೆನಪಿದೆಯೇ, ರಾಧ? ನಿಸರ್ಗದ ರಾಜ್ಯದಲ್ಲಿ ಶಕ್ತಿಯೇ ನ್ಯಾಯ, ಅಲ್ಲಿ ಧರ್ಮಕ್ಕೆ, ನ್ಯಾಯಕ್ಕೆ ಸ್ಥಾನವಿಲ್ಲ, ಬಲವಂತನಾದವನು ಮಾಡಿದುದೇ ಧರ್ಮ; ಇದು ಹೋಗಿ, ಪ್ರತಿಯೊಬ್ಬ ವ್ಯಕ್ತಿಯು–ಅವನು ಬಲಶಾಲಿಯಾಗಲಿ, ಶಕ್ತಿಹೀನನಾಗಲಿ–ಸಮಾನತೆಯನ್ನು, ಸ್ವಾತಂತ್ರ್ಯವನ್ನು ಅನುಭವಿಸುವಂತೆ ವ್ಯವಸ್ಥೆ ಮಾಡುತ್ತದೆ 'ಮಾನವ ಸಮಾಜ', ಎಂದು ಹೇಳುತ್ತಿದ್ದರು, ಕ್ಲಾಸಿನಲ್ಲಿ. ಯಾವುದಾದರೂ ಕಾಲದಲ್ಲಿ ಮಾನವ ಸಮಾಜ ಹಾಗಿತ್ತೋ ಏನೋ, ಇವತ್ತು ನಮ್ಮದು ಮಾನವ ಸಮಾಜದ ವೇಷದಲ್ಲಿರುವ ನಿಸರ್ಗ ರಾಜ್ಯ ಶಕ್ತಿಯೇ ಮುಖ್ಯ ಎನ್ನುತ್ತಿರುವ ಕಾಡಿನ ನಿಯಮ. ಅಲ್ಲಿ ಹಸುವಿನ ಸಾಮರ್ಥ್ಯಕ್ಕೆ, ಜಿಂಕೆಯ ಬಟ್ಟಲುಗಣ್ಣಿಗೆ ಬೆಲೆಯಿಲ್ಲ. ನಮ್ಮ ಸಮಾಜದಲ್ಲಿಯೂ ಹಾಗೆಯೇ. ಶಕ್ತಿಯೇ ಮುಖ್ಯ. ಒಂದೊಂದು ಪ್ರಾಣಿಗೆ ಒಂದೊಂದು ಶಕ್ತಿ, ಆ ಶಕ್ತಿಯನ್ನು ಸರಿಯಾಗಿ ಬಳಸಿಕೊಂಡರೆ ಅದು ಬದುಕೀತು. ಸಿಂಹಕ್ಕೆ ದೇಹದ ಶಕ್ತಿ. ಹುಲಿಗೆ ಉಗುರಿನ ಬಲ. ಜಿಂಕೆಗೆ ಕಾಲ ಓಟದ ನೆರವು. ನಮ್ಮಲ್ಲಿಯೂ ಹಾಗೆಯೇ–ಕೆಲವರು ಪುಣ್ಯವಂತರ ಮನೆಯಲ್ಲಿ ಹುಟ್ಟಿದ ಭಾಗ್ಯವಂತರು, ಕೆಲವರಿಗೆ ರಾಜಕೀಯದ ಬಲ, ಕೆಲವರಿಗೆ ಕೈ ಹಿಡಿದೆತ್ತುವವರ ನೆರವು, ಇನ್ನು ಕೆಲವರಿಗೆ-ಸೌಂದರ್ಯವೇ ಶಕ್ತಿ."

"ಚಂದ್ರಾ—"

ಚಂದ್ರಳ ಮಾತು ಇನ್ನೂ ವೇಗವಾಗಿ ಓಡುತ್ತಿತ್ತು. "ಕಾರ್ಯದರ್ಶಿಗಳು ಹೇಳಿದರು, ಪ್ರೆಸಿಡೆಂಟರನ್ನು ಮತ್ತೊಮ್ಮೆ ಇವತ್ತು ಸಂಜೆ ಕಂಡರೆ ಫಲವಿದ್ದೀತು ಅಂತ."

"ನೀನು ಮಾಡುತ್ತಿರುವುದು ಸರಿ ಎಂದು ತೋರುತ್ತದೆಯೆ, ಚಂದ್ರಾ?"

"ಸರಿ ತಪ್ಪುಗಳ ಪ್ರಶ್ನೆ ನನ್ನ ಮುಂದೇಕೆ ಇಡುತ್ತಿ, ರಾಧ? ಮಳೆ ಬಂದು ಹೆಂಗಸರು ಮಕ್ಕಳು ತೊಯುತ್ತಿರುವಾಗ ಇದೇ ಸಮಯವೆಂದು ಒಂದಕ್ಕೆ ಮೂರರಷ್ಟು ಕೂಲಿ ಕೇಳುವ ಪೋರ್ಟರನಿಗೆ, ಗಾಡಿಯವನಿಗೆ ಧರ್ಮ, ನ್ಯಾಯಗಳ ಅಗತ್ಯ ಇಲ್ಲ. ಅಧಿಕಾರ ಸಿಕ್ಕಾಗಲೇ ಅನುಭವಿಸಬೇಕೆಂದು ದುಡ್ಡು ಮಾಡಿ, ಅನ್ಯಾಯಗಳ ಹೊರೆಯನ್ನು ಗೌರೀಶಂಕರಕ್ಕಿಂತ ಎತ್ತರಕ್ಕೆ ಏರಿಸಿದ ಅಧಿಕಾರಿಗಳು, ಮಂತ್ರಿಗಳಿಗೆ, ನ್ಯಾಯಾನ್ಯಾಯಗಳ ತತ್ವಗಳು ಅನ್ವಯಿಸುವುದಿಲ್ಲ. ಪದವಿಗೋಸ್ಕರ ತತ್ವಗಳನ್ನು ಕಟುಕರಂತೆ ಕತ್ತರಿಸುವ ರಾಜಕಾರ್ಯಧುರೀಣರಿಗೆ ಸರಿ–ತಪ್ಪುಗಳ ಗೊಡವೆ ಇಲ್ಲ, ನನಗೊಬ್ಬಳಿಗೇಕೆ? ಹುಲಿಯನ್ನು ನೋಡಿ ಜಿಂಕೆ ಓಡುವುದು ಸರಿಯೋ, ತಪ್ಪೆ? ಅದಕ್ಕಿರುವುದು ಕಾಲ ಬಲ ಒಂದೇ ಅದನ್ನು ಉಪಯೋಗಿಸುತ್ತದೆ. ತಪ್ಪು ಯಾರದು? ಅದಕ್ಕೆ ಓಡುವುದರ ಹೊರತು ಬೇರೆ ಮಾರ್ಗವೇ ಇಲ್ಲದಂತೆ ಮಾಡಿದ ಸೃಷ್ಟಿಕರ್ತನದು."

ರಾಧ ಸುಮ್ಮನಾದಳು. ಚಂದ್ರ ಸರಸರನೆ ತನ್ನ ಕೊಠಡಿಗೆ ಹೊರಟು ಹೋದಳು.

ಅವತ್ತು ರಾತ್ರಿ ಚಂದ್ರ ಮನೆಯಲ್ಲಿ ಮಲಗಲಿಲ್ಲ.

ಮೂರು ದಿನಗಳಾದ ಮೇಲೆ ಚಂದ್ರ ತನ್ನ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ನಿಯಮಿತಳಾದಳು.

೪

ಗಡಿಯಾರ ಹನ್ನೊಂದು ತೋರಿಸುತ್ತಿತ್ತು. ಮನೆಯ ಹೊರಗಡೆ ಕಾರೊಂದು ನಿಂತಹಾಗೆ ಶಬ್ದವಾಯಿತು. ರಾಧ ಕಿಟಕಿಯ ಬಳಿ ನಿಂತು ನೋಡಿದಳು.

ಚಂದ್ರ ಕಾರಿನಿಂದ ಇಳಿಯುತ್ತಿದ್ದಳು. ಬೆಳದಿಂಗಳ ಶಾಂತ ಕಿರಣ ಅವಳ ಮೇಲೆ ಬೀಳುತ್ತಿತ್ತು. ಹಸುರು ಬಣ್ಣದ ಸೀರೆಯುಟ್ಟು, ತಲೆಗೆ ತುರುಬು ಕಟ್ಟಿ, ಅರ್ಧ ಚಂದ್ರಾಕೃತಿಯ ಹೂವಿನ ದಂಡೆಯನ್ನು ಮುಡಿದಿದ್ದಳು. ಕಿವಿಯ ಲೋಲಕ್ಕು ಬೆಳದಿಂಗಳಿನಲ್ಲಿ ಥಳಥಳನೆ ಹೊಳೆಯುತ್ತಿತ್ತು. ಚಂದ್ರನ ಬೆಳಕಿನಲ್ಲಿ ಕಾರಿನಿಂದ ಇಳಿಯುತ್ತಿದ್ದ ಚಂದ್ರ ಅಪ್ಸರ ಕನ್ಯೆಯಂತೆ ತೋರುತ್ತಿದ್ದಳು.

"ಗುಡ್‌ನೈಟ್, ಮಿಸ್ ಚಂದ್ರಾ, ನಾಳೆಯ ದಿನ ಮರೆಯಬೇಡಿ."

"ಇಲ್ಲ, ಇಲ್ಲ, ಗುಡ್‌ನೈಟ್" ಚಂದ್ರಳ ಮಧುರ ಧ್ವನಿ ಕೇಳಿಸಿತು.

ರಾಧ ಬಾಗಿಲು ತೆಗೆದಳು. ಚಂದ್ರ ಬಂದವಳೇ ಕುರ್ಚಿಯಲ್ಲಿ ಕುಸಿದಳು.

"ಉತ್ಸವ ಹೇಗಾಯಿತು, ಚಂದ್ರಾ?"

"ಓ, ಸೊಗಸಾಗಿ ಆಯಿತು. ಈ ಸ್ಕೂಲು ಪ್ರಾರಂಭವಾದಾಗಿನಿಂದ ಸ್ಕೂಲ್ ಡೇ ಇಷ್ಟು ವಿಜೃಂಭಣೆಯಿಂದ ಆಗಿಯೇ ಇರಲಿಲ್ಲ ಎಂದು ಎಲ್ಲರೂ ಹೊಗಳುತ್ತಿದ್ದರು. ನಮ್ಮ ಮ್ಯಾನೇಜಿಂಗ್ ಕಮಿಟಿಯವರಿಗಂತೂ ಸಂತೋಷ ಹಿಡಿಸುವ ಹಾಗೆಯೇ ಇಲ್ಲ."

"ನಾಟಕ ಹೇಗೆ ಆಯಿತು?''

"ತುಂಬಾ ಚೆನ್ನಾಗಿ ಆಯಿತು. ಬೊಂಬಾಯಿಯಿಂದ ಬಂದಿದ್ದರಲ್ಲ ಆ ಫಿಲ್ಮಂ ಡೈರೆಕ್ಟರು, ಅವರಂತೂ ತಮ್ಮ ಅಧ್ಯಕ್ಷ ಭಾಷಣದಲ್ಲಿ ಬಹಳ ಹೊಗಳಿದರು, ನನ್ನ ಅಭಿನಯಕ್ಕಂತೂ ಎಷ್ಟು ಮೆಚ್ಚಿದರೋ! ನಮ್ಮ ಪ್ರೆಸಿಡೆಂಟರು, "ನಾನು ಇಷ್ಟು ಶ್ರಮಪಟ್ಟು ಇವರನ್ನ ಅಧ್ಯಕ್ಷತೆ ವಹಿಸುವುದಕ್ಕೆ ಕರೆದುಕೊಂಡು ಬಂದದ್ದು ಸಾರ್ಥಕವಾಯಿತು'' ಎಂದರು. ಆತ, "ನನಗೆ ಈ ಅಧ್ಯಕ್ಷತೆ ವಹಿಸುವುದಕ್ಕೆ ಇಷ್ಟವಿರಲಿಲ್ಲ. ನಿಮ್ಮ ಪ್ರೆಸಿಡೆಂಟರು ನನ್ನ ಸ್ನೇಹಿತರು, ಅವರು ಕರೆದರೆ ಇಲ್ಲ ಎನ್ನಲಾರದೆ ಒಪ್ಪಿದೆ, ಆದರೆ ಈಗ ಬಂದದ್ದಕ್ಕೆ ಸಂತೋಷವಾಯಿತು'' ಅಂತ ಹೇಳಿದರು.

"ಕಾರಿನಿಂದ ನೀನು ಇಳಿಯುತ್ತಿದ್ದಾಗ ಮಾತನಾಡಿದವರು ಯಾರು?''

"ಅವರೇ ಆ ಡೈರೆಕ್ಟರು.''

ರಾತ್ರಿ ಊಟವಾದ ಮೇಲೆ, ಮಲಗಿಕೊಳ್ಳುವ ಮೊದಲು ಹೇಳಿದಳು ಚಂದ್ರಾ: "ಅಕ್ಕ, ಆ ಡೈರೆಕ್ಟರು 'ನೀವು ಸಿನಿಮಾಕ್ಕೆ ಸೇರಿ, ಬಹಳ ಬೇಗ ಖ್ಯಾತಿ ಪಡೆಯುತ್ತೀರಿ, ನಾನು ನಿಮಗೆ ನಮ್ಮ ಕಂಪೆನಿಯಲ್ಲಿ ಹೊಸ ಚಿತ್ರದಲ್ಲಿ ಮುಖ್ಯ ಪಾತ್ರ ಕೊಡುತ್ತೇನೆ' ಅಂತ ಹೇಳಿದರು.''

"ನೀನು ಏನು ಹೇಳಿದೆ?''

"ಆಗಲಿ ಎಂದೆ. ನಾಳೆ ಅವರನ್ನು ಟ್ರಾವಲರ್ಸ್ ಬಂಗಲೆಯಲ್ಲಿ ನೋಡುತ್ತೇನೆ.''

ಒಂದು ನಿಮಿಷ ತಡೆದು ರಾಧ ಕೇಳಿದರು: "ಹಾಗಾದರೆ ಡೈರೆಕ್ಟರ್ ಸಾಹೇಬರು ಮೆಚ್ಚಿದ್ದು ನಿನ್ನ ಅಭಿನಯವನ್ನೋ, ನಿನ್ನನ್ನೋ?"

ಮುಸುಕೆಳೆಯುತ್ತಾ ಹೇಳಿದಳು ಚಂದ್ರಾ: "ಹೇಗಾದರೂ ಒಂದೇ ತಾನೆ?"

೫

ಇದಾಗಿ ಒಂದೂವರೆ ವರ್ಷ ಕಳೆದಿತ್ತು.

ಚಂದ್ರಾ ವರಾಂಡದ ಬಾಗಿಲು ಮುಚ್ಚಿ ಒಳಗೆ ಬಂದುದು ರಾಧೆಗೆ ತಿಳಿಯಲೇ ಇಲ್ಲ. ಅವಳು ಪತ್ರಿಕೆಯನ್ನಿಟ್ಟುಕೊಂಡು ಏನೋ ಕುತೂಹಲದಿಂದ ಹುಡುಕುತ್ತಿದ್ದಳು.

"ಅಕ್ಕಾ—''

ರಾಧ ತಲೆಯೆತ್ತಿ ನೋಡಿದಳು.

"ಓ, ಬಿಡುವಾಯಿತೇನಮ್ಮ? ಸಂಜೆ ಐದು ಗಂಟೆಗೆ ಬಂದವಳು ಈಗ 'ಅಕ್ಕಾ' ಅಂತಾ ಇದ್ದಿ.''

"ನಾನೇನು ಮಾಡಲಿ, ಹೇಳು? ಒಬ್ಬರಾದ ಮೇಲೊಬ್ಬರು ಬರುತ್ತಿದ್ದಾರೆ. ಪತ್ರಿಕಾ ಪ್ರತಿನಿಧಿಗಳು ನಾಲ್ಕು ಜನ ಆಯಿತು, ಆಗಲೇ. 'ಇದೇನು ಈಗ ಬಂದಿದ್ದೀರಿ?' ಎಂದೇ ಪ್ರತಿಯೊಬ್ಬರ ಪ್ರಶ್ನೆ. ಒಂದು ಚಿತ್ರ ಮುಗಿಯಿತು, ಮತ್ತೊಂದು ಚಿತ್ರ ಆರಂಭವಾಗಲು ಹದಿನೈದು ದಿನ ಇದೆ, ನಮ್ಮ ಅಕ್ಕನನ್ನು ನೋಡಿಕೊಂಡು ಹೋಗಬೇಕೆಂದು ಬಂದೆ ಅಂತ ಹೇಳಿದರೆ ಅವರಿಗೆ ನಂಬಿಕೆಯೇ ಇಲ್ಲ, ಪ್ರತಿ ಪತ್ರಿಕೆಯ ಪ್ರತಿನಿಧಿಯೂ "ತಮ್ಮನ್ನು ನಮ್ಮ ಪತ್ರಿಕೆಯ ಪರವಾಗಿ ಭೇಟಿ ಮಾಡಬೇಕಾಗಿದೆ, ಯಾವಾಗ ಬರಲಿ?'' ಅಂತ ಕೇಳಿ ನನ್ನ ಫೋಟೋ ಮುದ್ರಿಸಿ ಸ್ವಾಗತ ಕೋರಿದ ಪ್ರತಿಯನ್ನ ಕೈಯ್ಯಲ್ಲಿಟ್ಟ.''

"ಹೂಂ, ನಮ್ಮ ಮುಂದಕ್ಕೆ ಬರುತ್ತಿದ್ದಿ, ಸಂತೋಷ. ಈಗ ಕಾರಿನಲ್ಲಿ ಹೋದವರು ಯಾರು?''

"ಅವರೇ? ನಿಮ್ಮ ಉಪಾಧ್ಯಾಯಿನಿಯರ ಸಮ್ಮೇಳನದ ಕಾರ್ಯದರ್ಶಿ, ನಿಮ್ಮ ಇಲಾಖೆಯ ಅಧಿಕಾರಿಗಳು.''

"ಅದೇನು ಅವರು ಬಂದದ್ದು?''

"ನಿನ್ನೆಯಿಂದ ನಿಮ್ಮೂರಿನಲ್ಲಿ ಉಪಾಧ್ಯಾಯಿನಿಯರ ಸಮ್ಮೇಳನ ನಡೆಯುತ್ತಿದೆಯಂತಲ್ಲ. ನಾನು ನಾಳೆ ಸಂಜೆ ಅಲ್ಲಿ ಮಾತನಾಡಬೇಕಂತೆ. "ನೀವೂ ಉಪಾಧ್ಯಾಯಿನಿಯಾಗಿದ್ದವರು, ನಮ್ಮ ದೇಶಕ್ಕೆ, ಭಾಷೆಗೆ ಸಂಸ್ಕೃತಿಗೆ ಕೀರ್ತಿ ತಂದವರು, ಖಂಡಿತ ಭಾಷಣಮಾಡಬೇಕು. ಆಗಲೇ ನಾವು ಪ್ರಕಟಿಸಿ ಬಿಟ್ಟಿದ್ದೇವೆ ನೀವು ಮಾತನಾಡುತ್ತೀರಿ ಅಂತ" ಅಂತ ಹೇಳಿದರು."

"ಏನು ಹೇಳಿದೆ?''

"ಆಗಲಿ ಎಂದೆ. ಉಪಾಧ್ಯಾಯರ ಸಮ್ಮೇಳನದಲ್ಲಿ ಮಾತನಾಡುವುದು ಸುಲಭವಲ್ಲವೆ? ವೃತ್ತಿಯ ಘನತೆ, ಗೌರವ, ಪಾವಿತ್ರ್ಯ, ತ್ಯಾಗಕ್ಕೆ ಅವಶ್ಯಕತೆ–ಇಷ್ಟು ಹೇಳಿದರೆ ಮುಗಿಯಿತು. ಅಂದ ಹಾಗೆ, ನಿಮ್ಮ ಮಂತ್ರಿಗಳು ಸಮ್ಮೇಳನಕ್ಕೆ ಬಂದಿದ್ದಾರಂತೆ.''

"ಹೌದು.''

"ನಾಳೆ ನಾಲ್ಕು ಗಂಟೆಗೆ ಟೀಗೆ ಬರಬೇಕೆಂದು ಪ್ರಾರ್ಥನೆ ಕಳುಹಿಸಿದ್ದಾರೆ.''

"ಹೌದಮ್ಮ, ನೀನೀಗ ಸುಪ್ರಸಿದ್ಧ ನಟಿಯಾಗಿದ್ದೀಯೆ. ಸಹಜವೆ!''

"ಅಂದ ಹಾಗೆ, ನಾನು ಒಳಗೆ ಬಂದಾಗ ಪತ್ರಿಕೆಯನ್ನು ಅಷ್ಟು ಕುತೂಹಲದಿಂದ ನೋಡ್ತಾ ಇದ್ಯಲ್ಲ, ಏನು ವಿಷಯ?''

"ಏನಿಲ್ಲ, ನಮ್ಮ 'ಡಿಯರ್‌ನೆಸ್ ಅಲೋಯೆನ್ಸ್' ಮೂರು ರೂಪಾಯಿ ಹೆಚ್ಚಿಸ್ತಾರೆ ಅಂತ ಸುದ್ದಿ. ನಿಜವೇನೋ ಅಂತ ನೋಡ್ತಾ ಇದ್ದೆ.''

★ ಕಳೆದ ನಾಲ್ಕು ವರ್ಷಗಳು ★

ಲೇಖಕರು: ಶ್ರೀ। ದೇವುಡು ನರಸಿಂಹ ಶಾಸ್ತ್ರಿಗಳು

ಜೋಯಿಸ ಬಲ್ಲವರು ಇಂಡಿಯಕ್ಕೂ ಕನ್ಯಾರಾಶಿಗೂ ಗಂಟುಕಟ್ಟಿದ್ದಾರೆ. ಕನ್ಯಾರಾಶಿಗೆ ಕಳೆದ ನಾಲ್ಕು ವರ್ಷಗಳಿಂದ ಏಳರಾಟ. ಇಂಡಿಯದ ಅವಸ್ಥೆ ಕಂಡವರು ಏಳರಾಟವನ್ನೂ ಜೋಯಿಸರನ್ನೂ ನಂಬುತ್ತಾರೆ. ಹೈದರ್ ಖಂಡೇರಾಯನಿಗೆ ಹೇಳಿದ್ದರಂತೆ "ಅನ್ನ ಬಟ್ಟೆ ಕೇಳಬೇಡ, ಗಿಣಿ ಸಾಕಿದಹಾಗೆ ಸಾಕುತ್ತೇನೆ" ಎಂದು. ಅದರಂತೆ ಪಂಜರದಲ್ಲಿಟ್ಟು ಬಟ್ಟಲನ್ನ ಬಟ್ಟಲು ನೀರು ಕೊಟ್ಟು ಸಾಕಿದನಂತೆ! ಈಗ ರಾಜ್ಯಸೂತ್ರಗಳನ್ನು ಹಿಡಿದಿರುವವರೂ ಹಾಗೆಯೇ ಬಟ್ಟಲನ್ನ! ಕೊಟ್ಟು ಸಾಕುತ್ತಿದ್ದಾರೆ ಸ್ವತಂತ್ರ ಭಾರತವನ್ನು.

ಭಾರತವು ಒಂದು ವಿಚಿತ್ರ ದೇಶ. ಸೈಕಾಲಜಿ ಮನುಷ್ಯನಿಗೆ ಎರಡು ಕಾಂಪ್ಲೆಕ್ಸ್ ಎಂದು ಹೇಳಿ ಮನಸ್ಸು ಯಾವಾಗಲೂ ಅರ್ಥ (Power) ಕಾಮ (Sex) ಈ ಎರಡನ್ನೇ ಕುರಿತು ಚಿಂತಿಸುತ್ತದೆ ಎಂದರು. ಭಾರತದ ಬಲ್ಲವರು "ಅರ್ಥ ಕಾಮಗಳೆರಡನ್ನೂ ಒಂದೇ ಮಾಡಿ ಅದನ್ನು ಪ್ರೇಯಸ್ಸು" ಎಂದರು. "ಅದರಿಂದಾಚಿನದು ಶ್ರೇಯಸ್ಸು" ಎಂದರು. ಹೀಗೆ ಶ್ರೇಯಃ ಪ್ರೇಯ, ಎಂಬುದು ಸಾವಿರಾರು ವರ್ಷಗಳಿಂದ ಅಂಗೀಕೃತವಾಗಿದೆ. ಈ ಗುರಿಗಳು ನಾಡಿನ ಮುಂದಿತ್ತು. ಅದರಿಂದ ಕ್ರಾಸ್ ಕ್ರೆಸೆಂಟ್‌ಗಳು, ಶಿಲುಬೆ ಚಾಂದ್ ಧ್ವಜಗಳು ಇಲ್ಲಿ ನೆಲಸಿದರೂ ನಮ್ಮನ್ನು ತಿನ್ನಲಿಲ್ಲ. ಮಿಕ್ಕ ದೇಶಗಳ ಕಡೆ ನೋಡಿ, ಎಲ್ಲೆಲ್ಲಿ ಕ್ರಾಸ್ ಕ್ರೆಸೆಂಟ್‌ಗಳು ಹೋಗಿವೆ. ಅಲ್ಲಲ್ಲೆಲ್ಲಾ ಆಯಾ ದೇಶಗಳೆಲ್ಲಾ ಗೆದ್ದಲು ಹಿಡಿದ ಮರ ಆಗಿವೆ. ಇಂಡಿಯದಲ್ಲಿ ಗೆದ್ದಲು ಹಿಡಿದರೂ ತೇಗದ ಮರ ಜಗ್ಗಲಿಲ್ಲ. ಈ ತೇಗದ ಮರವನ್ನೇ ನಾವು ಸನಾತನ ಧರ್ಮ ಎನ್ನುವುದು.

ನಾಡಿನ ನಾಡಿ ಬಲ್ಲವರೆಲ್ಲಾ ಇದನ್ನು ಗುರ್ತಿಸಿದರು. ನಾಡಿನಲ್ಲಿ ಸ್ವಾತಂತ್ರ್ಯಯುದ್ಧ ಆರಂಭವಾದುದು ೬೦೦ ವರ್ಷದ ಹಿಂದೆ. ವಿದ್ಯಾರಣ್ಯರು, ಸ್ವಾಮಿ ರಾಮದಾಸರು, ಗುರು ನಾನಕ್‌ರು, ಇವರೆಲ್ಲ ಧರ್ಮವೀರರಾಗಿ ದೇಶದ ಹಿತವನ್ನು ಸಾಧಿಸಿದವರು. ಈ ಪರಂಪರೆಯಲ್ಲಿ ಬಂದ ಕೊನೆಯ ತರಂಗ ರಾಮಕೃಷ್ಣ—ವಿವೇಕಾನಂದರಿಂದ ಆರಂಭವಾಗಿ, ತಿಲಕ್ ಬೆಸೆಂಟ್ ಗಾಂಧಿಯವರಲ್ಲಿ ಮುಗಿಯಿತು. ಗಾಂಧಿಯವರು ನಾಡಿನ ಕಣ್ಣಿನಲ್ಲಿ ಕಬೀರ್ ಮೊದಲಾದವರಂತಹ ಸಾಧು ಸಂತರಾಗಿ ಮಹಾತ್ಮರ ವರ್ಗಕ್ಕೆ ಸೇರಿಹೋದರು. ರಾಮನಾಮವು ನನ್ನ ಜೀವ, ಗೀತೆಯು ನನ್ನ ತಾಯಿ, ಒಳಗಿನ ಬೆಳಕು ನನ್ನ ಗುರು, ಎಂದ ಮಹಾತ್ಮರ ಅನುಯಾಯಿಗಳಿಗೆ, ರಾಮನಾಮ ಬೇಕಿಲ್ಲ; ಗೀತೆ ಅವಶ್ಯಕವಿಲ್ಲ; ಒಳಗಿನ ಬೆಳಕು ಕಂಡಿಲ್ಲ. ಅದರಿಂದ ಇವೊತ್ತು ಗಾಂಧಿಯವರ ಹೆಸರಿನಲ್ಲಿ ನಡೆಯುತ್ತಿರುವ ವ್ಯಭಿಚಾರ, ಅತ್ಯಾಚಾರ. ಈಗ ಗಾಂಧಿ ಇದ್ದಿದ್ದರೆ, ಅವರು ನಿಜವಾಗಿ ಉಪವಾಸ ಮಾಡಿ ಸಾಯುತ್ತಿದ್ದರು. ಗಾಂಧಿಯವರ ಅದೃಷ್ಟ ಚೆನ್ನಾಗಿತ್ತು; ಬದುಕಿದ್ದಾಗ ಭಕ್ತರು ಅವರನ್ನು ಕೊಲ್ಲಲಿಲ್ಲ.

ಸ್ವಾತಂತ್ರ್ಯ ಗೆದ್ದು ತಂದುದು ನಾವು ಎಂದು ಕಾಂಗ್ರೆಸ್ಸಿನ ಹೆಮ್ಮೆ. ತಿಳಿದವರು ಅವರಿಗೆ ಕಿವಿ ಹಿಂಡಿ ಹೇಳಬೇಕು ನೀವಲ್ಲ ಹಿಟ್ಲರ್ ಎಂದು. ಹಿಟ್ಲರ್ ಹೊಡೆತಕ್ಕೆ ಬ್ರಿಟನ್ ಸೋತಿತು. ಅದರಿಂದ ಇಂಡಿಯ ಹಿಡಿದಿದ್ದ ಕಪಿ ಮುಷ್ಟಿ ಸಡಲಿತು. ಆದರೆ, ಅದರ ನೀತಿ, ಒಡೆದು ಆಳು ಎಂಬ ಆ ವಿಷಮಯ ಕೂಟನೀತಿ ಕಾಂಗ್ರೆಸ್ಸನ್ನು ಬಲಿ ತೆಗೆದುಕೊಂಡಿತು.

ವಂಗ ವಿಭಜನದಿಂದ (ಸನ್. ೧೯೦೫) ಕಾಂಗ್ರೆಸ್ಸಿಗೆ ತೇಜಸ್ಸು ಬಂತು. ತೇಜಸ್ವಿಯಾದ ಕಾಂಗ್ರೆಸ್ಸು, ವಂಗವೊಂದನ್ನೆ ಅಲ್ಲ ಇಂಡಿಯವನ್ನೇ ಆಹುತಿ ತೆಗೆದುಕೊಂಡು ಎರಡು ಪಾಲು ಮಾಡಿತು. ಹಿಂದೆ ಸುಮಾರು ನೂರು ವರ್ಷಗಳ ಹಿಂದೆ ಲಿಂಕನ್ ಹೇಳಿದ್ದಂತೆ, "War or no war, Southern States shall remain within America" ಎಂದ ಧೀರನಂತೆ, ಕಾಂಗ್ರೆಸ್ಸು ಮುಸ್ಲಿಂ ಲೀಗಿಗೆ ಹೇಳಬೇಕಾಗಿತ್ತು. ಗಂಗಾತೀರಭೂಮಿಯಲ್ಲಿ ಹಿಂದೂಗಳು ಎದ್ದಾಗ ಸೈನ್ಯ ಬಿಟ್ಟು ಷೂಟ್ ಮಾಡಿಸುತ್ತೇನೆಂದ ಧೀರ ಮುಖ್ಯ ಮಂತ್ರಿ ಸಿಂಧೂತೀರದಲ್ಲಿ ಹಿಂದೂಗಳ ಕೊಲೆಯಾಗುತ್ತಿದ್ದರೆ ಕೈಕಟ್ಟಿ ಕುಳಿತಿದ್ದ. ಅಷ್ಟೇನು! ತನ್ನ ಮೇಲೆ ಕಲ್ಲು ಹೊಡೆದರೆ ಸುಮ್ಮನಿದ್ದು ಹಿಂತಿರುಗಿ ಬಂದ. ಅಂದು ಭಾರತಕ್ಕೆ ಶನಿ ಹಿಡಿಯದಿದ್ದರೆ, ಕಾಂಗ್ರೆಸ್ಸು ಹೆದರಿ ಹೇಡಿಯಾಗಿ ವಿಭಾಗಕ್ಕೆ ಹೆದರುತ್ತಿರಲಿಲ್ಲ. ವಿಭಾಗವಿಲ್ಲದಿದ್ದರೆ ನಿರಾಶ್ರಿತರ ಸಮಸ್ಯೆ, ಆಹಾರ ಸಮಸ್ಯೆ, ಕಾಶ್ಮೀರ ಸಮಸ್ಯೆ,

ಎಂದು ಹಿಂದೂಗಳನ್ನು ತುಳಿದು ನಾನ್ ಹಿಂದೂಗಳನ್ನು ತಲೆಯ ಮೇಲಿರಿಸಿಕೊಂಡರು. ಆದದ್ದೇನು? ಹಿಂದೂಗಳು ಹಿಂದೂಸ್ಥಾನದಲ್ಲಿ ತಬ್ಬಲಿಗಳಾದರು.

ನೆಹ್ರೂ ಅವರ ಸ್ವಂತ ವೈಯಕ್ತಿಕ ವರ್ಚಸ್ಸು ಬಹಳ ಹಿರಿದು. ಅದನ್ನು ಅವರೂ ಬಲ್ಲರು. ಅದರಿಂದಲೇ ಅವರು ಪಾರ್ಲಿಮೆಂಟಿನಲ್ಲಿ ವಿರೋಧ ಬಂದಾಗ, ಇಕೋ! ನನ್ನ ರಾಜೀನಾಮೆ ಎಂಬ ಮಹಾಸ್ತ್ರ ಪ್ರಯೋಗಿಸಿ ಗೆಲ್ಲುತ್ತಿರುವುದು. ಜೊತೆಗೆ ಮಾತೆತ್ತಿದರೆ, ಎಂಥ ವಿಷ ಬಂದರೂ—ಪ್ರೆಸ್ ಬಿಲ್ಲ್ ನಿಜವಾಗಿ ಕಾಲಕೂಟ—ಇರಲಿ, ನೀವು ಕುಡಿಯಿರಿ, ನಾನು ಇರುವಾಗ ನಿಮಗೇನು? ಎಂದು ಧೈರ್ಯ ಹೇಳಿ ಕುಡಿಸುತ್ತಾರೆ.

ಕೊಂಗ್ರೆಸ್ಸ್ ಹೆಮ್ಮೆಕೊಚ್ಚಿಕೊಳ್ಳುವುದು ನಾವು ಒಂದೂವರೆ ಕೋಟಿ ಜನಕ್ಕೆ ಮನೆಬಾಗಿಲು ಅನ್ನ ಬಟ್ಟೆ ನೋಡಬೇಕಾಯಿತು ಎಂದು. ಈ ವಿಪತ್ತು ಬಂದದ್ದು ಯಾರಿಂದ? ಕೊಂಗ್ರೆಸ್ ವಿಭಜನಕ್ಕೆ ಒಪ್ಪಿದ್ದರಿಂದ ಅಲ್ಲವೆ? ಬ್ರಿಟಿಷ್ ಸರಕಾರದ ಪ್ರತಿಪಕ್ಷವಾಗಿ ಮುಂಡಿಸಿದ್ದ ಕಾಂಗ್ರೆಸ್ ಪ್ರತಿಭಟನೆಯೊಂದು ಬಿಟ್ಟು, ಅಡ್ಡಗಾಲು ಹಾಕುವುದೊಂದು ಬಿಟ್ಟು, ಮುಂದೆ ದೇಶದ ಆಡಳಿತ ನಮ್ಮ ಕೈಗೆ ಬಂದರೆ ಉಳಿದುಕೊಳ್ಳುವುದು ಹೇಗೆ ಎನ್ನುವುದನ್ನು ಕಾಣದೆ ಕಣ್ಣು ಮುಚ್ಚಿಕೊಂಡಿದ್ದರಿಂದಲ್ಲವೆ? ಜನಬಲ ಬೇಕೆಂದು ಕೂಟ ಸೇರಿಸಿಕೊಂಡ ಕೊಂಗ್ರೆಸ್ಸು ಕಳ್ಳರನ್ನು ಹೊರದೂಡಲಾರದೆ ಅವರಿಗೆ ಬಲಿಯಾದರೆ, ಏನು ವಿಶೇಷ?

ಆಯಿತು. ಮುಂದಕ್ಕಾದರೂ ಕೊಂಗ್ರೆಸ್ಸು ಸರಿಯಾಗುವುದೋ? ನಂಬಿಕೆಯಿಲ್ಲ "ದೇವತೆಗಳು ಕೆಡಿಸಬೇಕೆಂದರೆ ಮೊದಲು ಕೆಡುವುದು ಬುದ್ಧಿ" ಎಂಬಂತೆ, ಈಗ ಕೊಂಗ್ರೆಸ್ಸಿಗೆ ನಿಜವಾಗಿ ಬುದ್ಧಿ ಕೆಟ್ಟಿದೆ. ಅದರ ಮುಖಂಡರ ವರ್ತನ ಡೆಮೋಕ್ರೆಟಿಕ್ ಲೀಡರ್ ವರ್ತನವಲ್ಲ; ಫ್ಯಾಸಿಸ್ಟ್ ಲೀಡರ್ ವರ್ತನ. ಕೊಂಗ್ರೆಸ್ಸ್ ಹೆಚ್ಚು ಕಡಿಮೆ ರೂಪಾಯಿಗೆ ಹದಿನಾರಾಣೆಯಲ್ಲದಿದ್ದರೂ ಹನ್ನೆರಡಾಣೆ ಫ್ಯಾಸಿಸ್ಟ್ ಆಗಿದೆ. ಪಾರ್ಲಿಮೆಂಟಿನಲ್ಲಿ ಅವರದೊಂದೇ ಪಾರ್ಟಿ, ಲೀಡರ್ ಹೇಳಿದ ಮಾತು ಕೇಳಿ, ಅವರಿಗೆ ಅಭ್ಯಾಸವಾಗಿ ಹೋಗಿದೆ. ಈಗಲೂ ಹಿಂದಿನ ಯುದ್ಧದ ಸೋಲ್ಜರ್ ಮೆಂಟಾಲಿಟಿ ಎಲ್ಲೆಲ್ಲೂ ಇದೆ. ಕೊಂಗ್ರೆಸ್ ಕ್ಯಾಂಪು ಮಿಲಿಟರಿ ಕ್ಯಾಂಪಾಗಿದೆ. ಈ ಕ್ಯಾಂಪ್ ಬ್ರೇಕಾಗದಿದ್ದರೆ ದೇಶಕ್ಕೆ ಕ್ಷೇಮವಿಲ್ಲ.

ಸಾಲದೆ, ಇಂದು ಕಾಂಗ್ರೆಸ್ಸಿಗರು ತಮ್ಮ ಸ್ವಂತ ಹಿತ ಸಾಧನೆಗೆ ಇಳಿದಿದ್ದಾರೆ. ಹೆಸರು ದೇಶದ್ದು; ಆದಾಯ ತಮ್ಮದು. ಫ್ರುಳೆಬ್ ವಿಚಾರ, ಹೀರಾಕುಂಡ ವಿಚಾರ, ಸಿಂಗ್ರೆಣಿ ವಿಚಾರ, ಇವೆಲ್ಲ ಸಾಕ್ಷಿಗಳು. ದೆಹಲಿಯಲ್ಲಿ ಕೊಂಚ, ನಾಲ್ಕಾಣೆಯಷ್ಟಾದರೂ ವಿವೇಕವಿದೆ. ಪ್ರಾವಿನ್ಸ್‌ಗಳಲ್ಲಿ ಅದೂ ಇಲ್ಲ. ಅಲ್ಲಿನ ಅವಿವೇಕ ಇಲ್ಲಿ ಪೂರ್ಣವಾಗಿದೆ. ಅನನುಭವಿಗಳ, ಅವಿವೇಕಿಗಳ, ಸರಕಾರ ದೇಶಕ್ಕೆ ಆಪತ್ತು ತಂದೊಡ್ಡಿದೆ. ಗಾಂಧಿಯವರು "Anarchy is better than foreign rule" ಎಂದಿದ್ದರು. ಅದನ್ನು ನಿಜಮಾಡುವುದಕ್ಕೆ ಅವರ ಶಿಷ್ಯರು ಹೆಣಗುತ್ತಿದ್ದಾರೆ, ಗೆದ್ದಿದ್ದಾರೆ.

ಮುಖ್ಯಮಂತ್ರಿಗಳು ಸ್ವಂತವಾಗಿಟ್ಟುಕೊಂಡಿರುವ ಫಾರಿನ್ ಅಫೇರ್ಸ್‌ನಲ್ಲಿಯಾದರೂ ಅಂತಹ ವೈಚಕ್ಷಣ್ಯ ಕಂಡುಬಂದಿದೆಯೋ? ಇಲ್ಲ. ಅಲ್ಲಿಯೂ ಬೆಳೆದಿರುವುದು ವ್ಯಕ್ತಿಯ ವರ್ಚಸ್ಸು. ದೇಶದ ವರ್ಚಸ್ಸಲ್ಲ. ಒಂದು,–ಫ್ರಾನ್ಸ್ ಪೋರ್ಚ್‌ಗಲ್‌ಗಳು ಇಂಡಿಯಾ ಬಿಟ್ಟುಹೋಗಿಲ್ಲ. ಎರಡು,–ಸೌತ್ ಆಫ್ರಿಕದಲ್ಲಿ ಇಂಡಿಯನ್ನರ ಪರಿಸ್ಥಿತಿಯು ಉತ್ತಮವಾಗಿಲ್ಲ. ಮೂರು ಸಿಲೋನ್ ಇಂಡಿಯನ್ನರನ್ನು ಸಿಂಡ್ರೆಲ್ಲಾ ಮಾಡಿದೆ. ನಾಲ್ಕು,–ಪಾಕಿಸ್ಥಾನ ಇಂಡಿಯದ ಮುಸ್ಲಿಂರ ಹಿತವನ್ನು ಗಮನಿಸುತ್ತಿರುವಂತೆ ಇಂಡಿಯು ಪಾಕಿಸ್ಥಾನದ ಹಿಂದೂಗಳ ಹಿತವನ್ನು ಗಮನಿಸುತ್ತಿಲ್ಲ. ಐದು ಅನ್ನಕ್ಕಾಗಿ ತಿರುಪತೆತ್ತುತ್ತಿರುವುದು ನಿಲ್ಲಲಿಲ್ಲ. ಆರು,—ಕೊಲಂಬೋ ಪ್ಲಾನ್ ಆ ಪ್ಲಾನು ಈ ಪ್ಲಾನೂ ಇದ್ದರೂ ಇಂಡಿಯಕ್ಕೆ ದೃಢವಾಗಿ ಯಾರೂ ಸಹಾಯ ಮಾಡಲು ಮುಂದೆ ಬಂದಿಲ್ಲ. ಇದೇ ಗೆಲುವೇನು?

ಕೊನೆಯ ಮಾತು ಅನ್ನ. ಕದ್ದವನಿಗುಂಟು; ಕದಿಯದವನಿಗೆ ಇಲ್ಲ ಎನ್ನುವಂತಾಗಿದೆ. ಎಲ್ಲರೂ ಬಯ್ಯುತ್ತಿದ್ದರೂ, ಎಲ್ಲರೂ ಬೇಡವೆನ್ನುತ್ತಿದ್ದರೂ ನೆಹ್ರೂ ಸರ್ಕಾರ ಮಾತ್ರ ರೇಷನ್ ಇರಬೇಕು ಎನ್ನುತ್ತಿದೆ. ಬಲ್ಲವನೇ ಬಲ್ಲ ಬೆಲ್ಲದ ಸವಿ. ಈ ಹಟ ಯಾಕೆ? ಕಾರಣವಿಲ್ಲವೇನು?

ಈ ಮೂರೂ ಇರುತ್ತಿರಲಿಲ್ಲ. ಜೊತೆಗೆ ಕಾಂಗ್ರೆಸ್, ಮುಸ್ಲಿಂ ಲೀಗ್, ಎರಡು ಸುಸಂಘಟಿತ ಪಾರ್ಟಿಗಳು ದೇಶದಲ್ಲಿದ್ದು ಆಗ ಸರಕಾರಕ್ಕೆ ಪ್ರತಿಭಟನೆ ಇರುತಿದ್ದು ದೇಶ ಸುಖವಾಗಿರುತ್ತಿತ್ತು. ಆಗ ಕಾಂಗ್ರೆಸ್ಸಿನ ಮುತ್ಸದ್ದಿತನವು ಮಣ್ಣು ಮುಕ್ಕಿತು ದೇಶಕ್ಕೂ ಮಣ್ಣು ಮುಕ್ಕಿಸುತ್ತಿದೆ.

ಇದು ರಾಜ್ಯಸೂತ್ರವನ್ನು ಹಿಡಿಯುತ್ತಿದ್ದಾಗಲೇ, ಕಾಂಗ್ರೆಸ್ ದೇಶಕ್ಕೆ ಕೊಟ್ಟ ವರ. ಅಲ್ಲಿಂದ ಮುಂದೆ ಮುಖ್ಯ ಮಂತ್ರಿಗಳು ಒಂದೇ ಸಮನಾಗಿ ದೇಶವನ್ನೂ ದೇಶದ ಆತ್ಮವನ್ನೂ ಅಪಮಾನಗೊಳಿಸುತ್ತಿದ್ದಾರೆ. ವಿಚಾರಿಗಳು, ವಿದ್ಯಾವಂತರು, ಇದಕ್ಕಾಗಿ ನೊಂದುಕೊಳ್ಳುತ್ತಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸಿಗೆ ಮೆಜಾರಿಟಿ ಶೇ. ೬೦ಕ್ಕಿಂತ ಹೆಚ್ಚಾಗಿ ಬಂದರೆ ನೆಹ್ರೂ ಸರಕಾರ ಬರುತ್ತದೆ. ಮುಂದಿನ ಸರಕಾರ ಭಾರತವನ್ನು ಹರಿದು ತಿಂದು ಕೈ ವರೆಸಿಕೊಂಡರೆ ಆಶ್ಚರ್ಯವಿಲ್ಲ.

ಪಾಕಿಸ್ಥಾನವು ತನ್ನ ರಣರಂಗದ ಕೀಲುಗಳನ್ನೆಲ್ಲ ಅಮೇರಿಕ್ಕೆ ಮಾರಿತು ಎಂದು ಆಕ್ಷೇಪಿಸುವವರು ಇದ್ದಾರೆ. ಆದರೆ ಅದರಿಂದ ಅವರಿಗೆ ಇಂಡಿಯದ ಮೇಲಿನ ದ್ವೇಷ ತೀರಿಸಿಕೊಳ್ಳಲು ತಮ್ಮ ದೇಶಕ್ಕೆ ಬೇಕಾಗುವ ಹಣ ತಂದುಕೊಂಡು ತಮ್ಮ ಬಿದ್ದಿರುವ ಎಕಾನಮಿ ಕಟ್ಟಿಕೊಳ್ಳಲು ಅನುಕೂಲವಾಗಿದೆ. ಇಂಡಿಯ ಅಮೇರಿಕೆಯನ್ನು ಪ್ರತಿಭಟಿಸಿ, ರಷ್ಯಾಕ್ಕೆ ವಿರೋಧವಾಗಿ ಸಾಧಿಸಿದ್ದೇನು? ಪಾಕಿಸ್ಥಾನದ ಬೆದರಿಕೆಗೆ ಹೆದರಿ ಮೈನಾರಿಟಿಗಳನ್ನು ತಲೆಯ ಮೇಲೆ ಕೂರಿಸಿಕೊಂಡು, ಇಂಡಿಯದ ಆತ್ಮವಾದ ಧರ್ಮಕ್ಕೆ ವಿಷ ಹಾಕಿರುವುದು.

ಸಾಕ್ಷಿ ಬೇಕೇನು? ಮೊದಲನೆಯದು ಸೆಕ್ಯುಲರ್ ಸ್ಟೇಟ್ ಎಂದುಕೊಂಡ ಸರಕಾರದ ಅಧ್ಯಕ್ಷರು ಸೋಮನಾಥ ದೇವಾಲಯದ ಪುನರುದ್ಧಾರ ಮಾಡಲು ಹೊರಟರೆ, ಮುಖ್ಯಮಂತ್ರಿ ಕಿಚನ್ ರಿಲಿಜನ್ ಎಂದು ತಿರಸ್ಕಾರ ಮಾಡಿ ಮೂವತ್ತು ಕೋಟಿ ಜನಗಳ ಹೃದಯವನ್ನು ಬಾಕಿನಿಂದ ತಿವಿದಿದ್ದಾರೆ. ಇಂದು ಕಿಚನ್ ರಿಲೀಜನ್ ಎಂದು ತಿರಸ್ಕಾರಮಾಡುವ ಧೀರರೇ ಡೆಸರ್ಟ್ ರಿಲೀಜನ್‌ಗೆ ಪೂರ್ವ ಪಶ್ಚಿಮಗಳಲ್ಲಿ ರಾಜ್ಯ ಕೊಟ್ಟವರು. This is the first time that a convert claims nationhood ಎಂದ ಮಹಾತ್ಮರ ಮಾತು ಏನಾಯಿತು? ಮಹಾತ್ಮರು ವೇದ ಶಾಸ್ತ್ರ ಪುರಾಣ ಪಾರಂಗತರಲ್ಲ; ವಿದ್ಯಾಪರಿಣತರಲ್ಲ; ಕಿಚನ್ ರಿಲಿಜನ್‌ನ ಪ್ರಪ್ರಥಮ ಮೊಮ್ಮೊದಲ ಮಾತಾದ ಶ್ರದ್ಧೆಯಿಂದ "ರಘುಪತಿ ರಾಘವ ರಾಜಾ ರಾಮ್ ಪತಿತ ಪಾವನ ಸೀತಾರಾಂ" ಎಂದು ಮಹಾತ್ಮರಾಗಿ ಜನವನ್ನು ಒಲಿಸಿಕೊಂಡು ಕಾಂಗ್ರೆಸ್ ಕಟ್ಟಿದರು ಎನ್ನುವುದು ಪಂಡಿತರು ಮರೆತರು. ಅದು ಅವರ ತಪ್ಪಲ್ಲ. ಡೆಲ್ಲಿಯ ಸಿಂಹಾಸನದಲ್ಲಿ ಧರ್ಮಾಭಿಮಾನವಿಲ್ಲದವರು ಯಾರು ಕುಳಿತರೂ ಅವರಿಗೆ ಅಂಥಾ ಮೋಹ ಬರುತ್ತದೆ. ಭ್ರಾಂತಿ ಹಿಡಿಯುತ್ತದೆ. ಹಾಗಿಲ್ಲದಿದ್ದರೆ ಅವರ ಪತನವಾಗುವುದೆಂತು?

ಎರಡನೆಯದು ಭಾರತದಲ್ಲಿ, ಸನಾತನ ಧರ್ಮದ ಮೂಲ ಕ್ಷೇತ್ರದಲ್ಲಿ ಹಿಂದೂ ಕೋಡ್ ಬಿಲ್ಲ್. ಇದನ್ನು ತಂದವರಿಗೆ ಹಿಂದೂಗಳ ಮೇಲೆ ಎಷ್ಟು ಅಭಿಮಾನ ಎನ್ನುವುದನ್ನು ಬಾಬೂ ಭಗವಾನ್‌ದಾಸರ ಒಂದು ಮಾತು ಚೆನ್ನಾಗಿ ಬಿತ್ತರಿಸಿದೆ. ಆ ಮಹರ್ಷಿಯು "The authors of the bill seem to be afraid of everything Hindu" ಎಂದರು. ಆ ದೇಶಭಕ್ತರು, ಇಂಡಿಯಕ್ಕೆಲ್ಲಾ ಅನ್ವಯಿಸುವ ಇಂಡಿಯನ್ ಕೋಡ್ ತರಬೇಕಾಗಿತ್ತು; ಅದಿಲ್ಲ; ಹಿಂದೂಗಳಿಗೆ ಈ ವರದಾನ. ಹಿಂದೂ ಅಲ್ಲ ಎಂದರೆ ಆ ಕೋಡ್ ಅನ್ವಯಿಸುವಂತಿಲ್ಲ. ಅಷ್ಟೇ ಅಲ್ಲ ಆ ಘಾತ ಯಾರ ಮೇಲೆ? ಧರ್ಮ ವಿವಾಹವನ್ನು ಬೇಕೆನ್ನುವವರ ಮೇಲೆ, ಹೆಣ್ಣು ಸತಿಯಾಗಿ ಪತಿವ್ರತೆಯಾಗಿ ಗಂಡನ ಪ್ರಭಾವದ ದೈವವೋ ಆಗಬಲ್ಲಳು ಎಂದು ದೃಷ್ಟಾಂತ ಸಿದ್ಧಾಂತಗಳಿರುವ ನಾಡಿನಲ್ಲಿ ಹೆಣ್ಣು ಅಸತಿಯಾಗಿ ನಾರಿಯು ಮಾರಿಯಾಗುವುದಕ್ಕೆ ಅವಕಾಶ!

ಆಯಿತು. ಇದರ ಜೊತೆಯಲ್ಲಿ ಇನ್ನೊಂದು ನೋಡಿ. ನೆಹ್ರೂ ಸಾಹೇಬರು ಮದ್ರಾಸಿನವರ ಮಾತಿಗೆ ಸೋತು ಕಾನ್‌ಸ್ಟಿಟ್ಯೂಷನ್ ಬದಲಾಯಿಸಿದರು. ತಮ್ಮ ದರ್ಪದಿಂದ ಕಾಂಗ್ರೆಸ್ ಸಂಪ್ರದಾಯ ಮುರಿದು ಗದ್ದುಗೆ ಹಿಡಿದರು. ನಮ್ಮಲ್ಲಿ ಕೋಮುವಾರು ಜಗಳವಾದರೆ ಹೊರಗಡೆಯವರು ಏನೆಂದಾರು

‘ಅಭಿನವ ಮುದ್ದಣ’

ದಿವಂಗತ ಶ್ರೀ ಮುಳಿಯ ತಿಮ್ಮಪ್ಪಯ್ಯನವರು

(ಒಂದು ಸಂಸ್ಮರಣೆ)

[ಲೇಖಕರು: ಜಿ. ಆರ್. ಪಾಂಡೇಶ್ವರ್, ಹುಬ್ಬಳ್ಳಿ.]

ಹೊಸಗನ್ನಡ ನುಡಿಬಾನಲ್ಲಿ ಹಳಗನ್ನಡದ ಬಣ್ಣ—ಬೆಡಗುಗಳಿಂದ ತಳತಳಿಸಿದ ತಾರೆ, ಪಂಡಿತ ಕವಿ ಮುಳಿಯ ತಿಮ್ಮಪ್ಪಯ್ಯನವರು ಕಣ್ಮರೆಯಾದರು. ಕನ್ನಡ ತಾಯಿಯ ಪೂಜೆಯನ್ನವರು ಈ ಶತಮಾನದ ಆದಿಯಿಂದಲೇ ಸುರುಮಾಡಿದ್ದರು. ‘ಮುದ್ದಣ’ ಕವಿತಿಲಕವು ಅಳಿಸಿ ಹೋಗಿದ್ದ ಆ ಕಾಲದಲ್ಲಿ ದಕ್ಷಿಣ ಕನ್ನಡ ಸಾಹಿತ್ಯ ಕಾಂತೆಯ ಹಣೆ ಬರಿದಾಗಿತ್ತು, ಕನ್ನಡಿ ಕದಪು ಕಂದಿತ್ತು. ‘ಸುವಾಸಿನೀ’ ‘ಬೋಧಿನೀ’ ಮತ್ತು ‘ಕೃಷ್ಣಸೂಕ್ತಿ’ ಪತ್ರಿಕೆಗಳು ನಿಂತುಹೋಗಿದ್ದುವು. ಶ್ರೀ। ಬೆನಗಲ್ ರಾಮರಾಯರೂ, ಪಂಜೆ ಮಂಗೇಶರಾಯರೂ ‘ನವಕರಿ’ಗಳಲ್ಲಿ ತೊಡಗಿ, ಸಾಹಿತ್ಯ ವಿಮರ್ಶೆಯ ರಸಜ್ಞತೆಯಲ್ಲಿಯೇ ತೃಪ್ತರಾಗಿದ್ದರು.



ಲೇಖಕರು.

ಮಂಜೇಶ್ವರ ಗೋವಿಂದ ಪೈಗಳು ಇಂದಿನಂತೆ ಅಂದೂ ಅಲಿಪ್ತ ಸಾಹಿತ್ಯ ಕೃಷಿಯಲ್ಲಿಯೇ ನಿಮಗ್ನರಾಗಿದ್ದರು. ಅಂತಹ ವೇಳೆಯಲ್ಲಿ ದಿವಂಗತ ತಿಮ್ಮಪ್ಪಯ್ಯನವರು ‘ಚಂದ್ರಾವಲೀ ವಿಲಾಸಂ’ ಎಂಬ ಹಳಗನ್ನಡ ಗದ್ಯ ಗ್ರಂಥ ರಚಿಸಿ, ಕಡಲ್ತಡಿಯ ಕನ್ನಡ ನುಡಿದಾಯಿಯ ಹಣೆಗೆ ತಿಲಕವಿಟ್ಟರು; ಅಭಿನವ ಪಂಪನಂತೆ ಅಭಿನವ ಮುದ್ದಣರಾದರು. “ಇದು ಅದ್ಭುತ ರಾಮಾಯಣ, ರಾಮಾಶ್ವಮೇಧಗಳೆಂಬ ಆರಾಮಗಳಲ್ಲಿ ವಿಹರಿಸಲಿಚ್ಛಿಸುವವರಿಗೆ ಪ್ರವೇಶದ್ವಾರವಾಗಿದೆ” ಎಂದು ಅವರು ಆ ಕೃತಿಯ ಮುನ್ನುಡಿಯಲ್ಲಿ ನುಡಿದಿದ್ದಾರೆ.

“ಓಹೋ ತಣ್ಗಾಳಿಯ ಪೆಂಪೇ! ಅದೋ, ವೇಣುವಿನ ಮಧುರ ಸ್ವರದಿಂ ಓರೊರ್ಮೆ ತಿರುಗುತ್ತುಂ, ದಾಕ್ಷಿಣ್ಯಯುಕ್ತಂ ಪರಿಮಳಮಂ ಬೀರುತ್ತುಂ, ಮೆಲ್ಲನೆ ಸಂಚರಿಸುಗುಂ. ಇದೋ ಬಳ್ಳಿವೆಣ್ಗಳ್ ಚಂಚಲಾಂಗಿಯರಪ್ಪರ್. ಸೂಕ್ಷ್ಮಮತಿ ಸೂಕ್ಷ್ಮಂ ಚಿಗುರ್ವೆರಲ್ಗಳಿಂ ಬಾ ಬಾಯೆಂದು ಸನ್ನೆ ಗೈವರ್! ॥........ಈ ರೀತಿ ಗ್ರಂಥ ಪ್ರಾರಂಭಿಸಿದೆ. ಮುದ್ದಣ–ಮನೋರಮೆಯರಂತೆ ಕಬ್ಬಿಗಂ—ಭಾರತಿಯರ ಸಲುಗೆಯ ಸಲ್ಲಾಪಗಳಿಂದ ಕತೆ ಹೇಳಲ್ಪಡುವುದು.

“ವಿಮದಂತಂ ತುಂಬುಗೆ ಕೃತಿ- ।
ಗೆ ಯಶಂ ಶ್ರೀ ವೇಣುನಾಥ ದಯದೆ
ಸುಧರ್ಮ- ॥
ಪ್ರಿಯತಂ ಸಂತಸದೆ ಬಿಲೇ- ।
ಶಯ ಭೂಷಿತ ವೇಷನೀಗೆ ಭೂತಿಯ
ನೀಶಂ ॥
ಕಾಲದೆ ಮಳೆ ಬರ್ಕೆ, ನೆಲಂ ।
ಲೀಲೆಯ ಬೆಳೆ ಬಾಳ್ಕೆಗಳನೆ ತುಂಬುಗೆ,
ಭೂಪಂ ॥
ಮೇಲೆಸಗುಗೆ ಲೋಕಕೆ ಕವಿ- ।
ಲೋಲ ಮುಖಾಂಬುಜದೆ ವಾಣಿ
ನೆಲಸುಗೆ ನಿಚ್ಚಂ ।

........ಇಂತು ಮನಂಬುಗುವ ಹಳಗನ್ನಡ ಕಂದ ಪದ್ಯಗಳಿಂದ ಎಂಬತ್ತೈದು ಪುಟ ವಿಸ್ತಾರವಾದ “ಚಂದ್ರಾವಲೀ ವಿಲಾಸಂ” ಮುಗಿವುದು. ಮುದ್ದಣ ಕೃತ “ರಾಮಾಶ್ವಮೇಧ”ದಂತೆ ಈ ಕೃತಿಯೂ ಅಜರಾಮರವಾಗಿ ಬಾಳಿ ಬೆಳಗುವುದು.

ಕನ್ನಡ ಕೋಗಿಲೆ

ಈ ಕೃತಿಯನ್ನು ಬರೆದಾಗ ಅವರು “ಕೆನರಾ ಹೈಸ್ಕೂಲಿ”ನಲ್ಲಿ ಕನ್ನಡ ಶಿಕ್ಷಕರಾಗಿದ್ದರು. ಮೊದಲಿನ ಮಹಾಯುದ್ಧವು ಆಗ ತಾನೇ ಪ್ರಾರಂಭವಾಗಿದ್ದಿತು. ಆ ಯುದ್ಧ ಕೊನೆಗೊಂಡ ೧೯೧೯ರಲ್ಲಿ ಅವರು ಪತ್ರಿಕಾ ವೃತ್ತಿಗೆ ಪದಾರ್ಪಣ ಮಾಡಿ “ಕನ್ನಡ ಕೋಗಿಲೆ” ಎಂಬ ಮಾಸ ಪತ್ರಿಕೆಯನ್ನು ಸಂಪಾದಿಸಿದರು. ಹೊಸಗನ್ನಡ ಹೂದೋಟದಲ್ಲಿ ವಸಂತಾಗಮನ



ದಿವಂಗತ ಮುಳಿಯ ತಿಮ್ಮಪ್ಪಯ್ಯನವರು

ವಾಗಿದೆಂದೂ, ಈ ಶುಭವಾರ್ತೆಯನ್ನು ಸುಸ್ವರದಿಂದ ಸಾರುವ ಕೋಗಿಲೆವಕ್ಕಿ ಬಂದಿದೆಯೆಂದೂ ಅವರದರಲ್ಲಿ ಧ್ವನಿಸಿದರು. ಕಡು ಬಡತನದಲ್ಲಿದ್ದರೂ ಈ "ಕೋಗಿಲೆ'ಯನ್ನು ಕುಕಿಲ ಬಿಟ್ಟು ಕನ್ನಡದ ಸೇವೆಮಾಡಿದರು. ಆಗಿನ ಕಾಲದಲ್ಲಿ ಆಂಗ್ಲ ವಿದ್ಯಾವಿಭೂಷಿತರಾದವರು, ಬಹುಮಟ್ಟಿಗೆ, ಕನ್ನಡದ ಬಗೆಗೆ ಅನಾದರ ಉಳ್ಳವರಾಗಿರುತ್ತಿದ್ದರು. ಅಂದಿನ ಕನ್ನಡ ಪಂಡಿತರ ಅದೂರ ದೃಷ್ಟಿಯೂ, ಅವಿಮರ್ಶಬುದ್ಧಿಯೂ, ಅಸುಧಾರಕ ಸಂಪ್ರದಾಯ ಶರಣತೆಯೂ ಆ ಪರಿಸ್ಥಿತಿಗೆ ಬಹುಮಟ್ಟಿಗೆ ಕಾರಣವಾಗಿದ್ದುವೆನ್ನಬಹುದು. ಪಂಡಿತ ತಿಮ್ಮಪ್ಪಯ್ಯನವರು ಹಳಬರಿಗೆ ಹಳಬರಾಗಿಯೂ, ಹೊಸಬರಿಗೆ ಹೊಸಬರಾಗಿಯೂ, ಇತ್ತಡಿಗಳ ನಡುವೆ ಹರಿವ ನದಿಯಂತೆ, ಇಕ್ಕಡೆಗಳಿಗೂ ನೀರುಣಿಸಿದರು.

'ಕೋಗಿಲೆ' ಕೆಲಕಾಲ ಹಾಡಿ ಮೌನವಾಯಿತು. ಅದರ ಫಲವಾಗಿ ಬಂದಿದ್ದ ಋಣಭಾರ ಒಂದೆಡೆಯಿಂದಲೂ ಚಿಕ್ಕ ತಮ್ಮಂದಿರನ್ನು ಕೃತವಿದ್ಯರಾಗಿಸಿ, ದೊಡ್ಡ ಸಂಸಾರವನ್ನು ನಿರ್ವಹಿಸಿಕೊಂಡು ಹೋಗುವ ಜವಾಬ್ದಾರಿಯ ಭಾರ ಮತ್ತೊಂದೆಡೆಯಿಂದಲೂ ಹೆಚ್ಚುತ್ತ ಹೋಯಿತು. ಅವರು ಸ್ವಲ್ಪವೂ ಅಧೀರರಾಗದೆ, "ಸೈಂಟ್ ಅಲೋಸಿಯಸ್ ಕಾಲೇಜಿ"ನ ಕನ್ನಡ ಪಂಡಿತ ಪದವಿ ಸ್ವೀಕರಿಸಿದರು. ಈ ಆಚಾರ್ಯಪೀಠದಿಂದವರು ನುಡಿದಾಯಿಯ ಸೇವೆಯನ್ನು ಇಮ್ಮಡಿ ಹುರುಪಿನಿಂದ ಮಾಡಿದರು. ರಾಗ-ತಾಳ ಬದ್ಧವಾದ ಅವರ ಓದಿನಿಂದಲೂ, ನಯವಿನಯ ಭರಿತವಾದ ಮೃದುಭಾಷಣದಿಂದಲೂ, ಕಾಲೇಜಿನ ವಿದ್ಯಾರ್ಥಿವೃಂದ ಅವರ ವಿಷಯದಲ್ಲಿ ಭಕ್ತಿಪರವಶವಾಗುತ್ತಿದ್ದಿತು. ವಿದ್ಯಾರ್ಥಿಗಳನ್ನವರು "ನೀವು" ಎಂಬ ಗೌರವ ಸೂಚಕ ಬಹುವಚನದಿಂದ ಕರೆಯುತ್ತಿದ್ದರಲ್ಲದೆ, ಅವರೊಡನೆ ಆಪ್ತಮಿತ್ರನಂತೆ ವರ್ತಿಸುತ್ತಿದ್ದರು.

ಗ್ರಂಥ ಕಾಣಿಕೆ

ಕನ್ನಡಕ್ಕೆ ಅವರು ಸಲ್ಲಿಸಿರುವ ಗ್ರಂಥರತ್ನಗಳು ಅವರ ವಿಶಿಷ್ಟ ವ್ಯಕ್ತಿತ್ವದಿಂದ ತುಂಬಿ ತುಳುಕುತ್ತಿವೆ. ೧೯೨೦ನೇ ಇಸವಿಯೊಳಗೆಯೇ ಅವರು "ಹಗಲಿರುಳು" ಸೊಬಗಿನ ಬಳ್ಳಿ" "ಪಶ್ಚಾತ್ತಾಪ" ಎಂಬಿವೇ ಮೊದಲಾದ ಕಾವ್ಯ-ಕಾದಂಬರಿಗಳನ್ನು ಬರೆದು ಪ್ರಕಟಿಸಿಬಿಟ್ಟಿದ್ದರು. ಪಂಪ ಕವಿಯ ನಿಷ್ಠಾವಂತ ರಸಿಕ ಭಕ್ತರಲ್ಲಿ ಅವರು ಅಗ್ರೇಸರರು. "ನಾಡೋಜ ಪಂಪ" ಎಂಬ ಅವರ ೫೦೦ ಪುಟಕ್ಕೆ ಮಿಕ್ಕಿದ ಉದ್ಗ್ರಂಥವು ಪಂಪನಿಗೆ ಅವರೆತ್ತಿದ ಮುತ್ತಿನಾರತಿಯಾಗಿದೆ.

"ಪಂಪನ ಗಾದೆ, ಪಂಪನೊಲವಿಂ ಬಲಿದಾ
ನುಡಿಗಟ್ಟು, ಪಂಪನೊಂ ।
ದಿಂಪಿನ ಗೆಯ್ಮೆ, ಪಂಪನುಸುರಿಂದೊಸ
ರೆದ್ದು ತಿರುಳ್ದ ಬಾಸೆಯಾ ॥
ಪಂಪನದೇಸಿಯಿಂ ದೆಸೆಯನಪ್ಪುವ
ಕಂಪಿನ ದಾರಿ ವಸ್ತು ರೂ- ।
ಪಂಪೆಣೆವಂದಮುಂ ಬಗೆಯೆ ಪಂಪನ
ಕನ್ನಡಮಲ್ತೆ ಕನ್ನಡಂ ।"

ಎಂದು ಅವರು ಪಂಪನ ಕುರಿತು ಬರೆದ ಭಕ್ತಿಭರಿತ ಪದ್ಯಾವಳಿಯು ಪಂಪನ ಕೀರ್ತಿಕಂಠಿಕೆಯಾಗಿ, ಪಂಡಿತರ ಮೆಚ್ಚುಗೆಗೆ ಪಾತ್ರವಾಗಿದೆ.

ಸಕ್ಕದ ನುಡಿಗೆಡೆಗುಡದೆ ಅಚ್ಚಗನ್ನಡದಲ್ಲಿಯೇ "ಕಾವನಗೆಲ್ಲ" ಬರೆಯೆ ಪೂಣ್ದ ಆಂಡಯ್ಯನಲ್ಲಿ ಅವರ ಅಕ್ಕರೆ ಅತಿಯಾಗಿತ್ತು. "ಆಂಡಯ್ಯನೂ ಕನ್ನಡವೆನಿಪ್ಪಾ ನಾಡೂ" ಎಂಬ ಶಿರೋನಾಮೆಯ ಡೆಮಿ ಅಷ್ಟಪತ್ರ ೩೦ ಪುಟದ ಅವರ ಸುದೀರ್ಘ ಲೇಖನವು ೧೯೨೮ರಲ್ಲಿಯೇ ಪ್ರಕಟವಾಗಿ ಆಂಡಯ್ಯನ ಬಗ್ಗೆ ಮತ್ತು ಬನವಸೆ ನಾಡಿನ ಬಗ್ಗೆ ಆಧುನಿಕ ಕನ್ನಡ ಭಾಷಾಭಕ್ತರಲ್ಲಿ ಉತ್ಸಾಹವನ್ನುಂಟುಮಾಡಿತು. ಆದಿಪುರಾಣವನ್ನವರು ತಿಳಿಗನ್ನಡಕ್ಕಿಳಿಸಿ, ಮೂಲಗ್ರಂಥದ ಸಾರವನ್ನು ಅರಸಿಕರು ಕೂಡಾ ಸವಿಯಲಾಪಷ್ಟು ಸುಲಭಮಾಡಿಕೊಟ್ಟರು.

ಅವರು ಆಧುನಿಕ 'ಬೋಳು ಪದ' (blank verse) ದಲ್ಲಿ ಬರೆದ 'ನವನೀತ ರಾಮಾಯಣ'ವು ಹೊಸಗನ್ನಡ ಕಾವ್ಯಾರಾಮಕ್ಕೊಂದು ಹೆಮ್ಮರದಂತಿದೆ. ಈ ಕೃತಿಯ ಪುಟ ಪುಟವೂ ರಸದ ಬುಗ್ಗೆಯಾಗಿದೆ; ದೇಸಿ ಪದ ಪ್ರಯೋಗದಿಂದ, ಫಲ

ಪುಷ್ಪಭರಿತ ಮರದಂತೆ, ತುಂಬಿ ತುಳುಕುತ್ತಿದೆ. ಅಚ್ಚಗನ್ನಡದ ಸವಿ ಸವಿವವರಿಗೆ ಅದೊಂದು ಜೇನಿನ ಕೊಡದಂತಿದೆ.

"ಅಪ್ಪುದಪ್ಪುದು, ಬರಿದೆ ಹಗರಣಂಗೊಳ್ಳುವೆನೆ?
ಕಣ್ಮನಂಗಳ ಹಬ್ಬದೂಟವಂ ನೂಕುವೆನೆ?
ನೂಕೆನದೊ ತೋರುವಳು, ಮಿರುಗುವಳು ಭಾವನಾ
ಶೈಲೂಷಿಯಂತರಂಗದ ರಂಗವೇರುವಳು!

....

....

ತನ್ನೋಲಗದ ಹಗಲ ಸಿಂಹಾಸನವನಿಳಿದು,
ರವಿಯೆ ಪಶ್ಚಾನ್ಮುಖಂಬಡೆದವೋಲಾತಪದ
ವೈಮೆಯುಳಿಯದೆ ನೆಲಸಿ ನಿಲ್ವುದೇ!

....

ಈ ರೀತಿ ತಡೆ ಇಲ್ಲದೆ ಹರಿದಿದೆ ಅವರ ರಾಮಕಥಾ ಸ್ರೋತ!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನತಾಸಾಮಾನ್ಯಕ್ಕೆ ರಸಾನಂದವನ್ನುಣ್ಣಿಸುತ್ತ, ಅಚ್ಚಳಿಯದೆ ನೆಲೆನಿಂತಿರುವ 'ದೇಸಿ ನಾಟಕ'ವಾದ 'ಯಕ್ಷಗಾನ'ದ ಕವಿಪಂಙ್ತಿಯಲ್ಲಿ ಅಗ್ರಗಣ್ಯನೆನಿಸಿದ ಪಾರ್ತಿ ಸುಬ್ಬನ ಬಗ್ಗೆ ಅವರು ಬರೆದಿರುವ ಸುದೀರ್ಘವಾದ ಕವಿಕಾವ್ಯ ಪರಿಚಯ ಪ್ರಬಂಧವು ಈ ವಿಷಯದಲ್ಲಿಯೇ ಮೊದಲ ಹೊತ್ತಗೆಯಾಗಿದೆ. ಅವರ "ವೀರ ಬಂಕೆಯ" ಎಂಬ ಕನ್ನಡ ವೀರನ ಚಾರಿತ್ರಿಕ ಕಥೆಯು ಅವರ ಸಾಹಿತ್ಯ ಸೇವೆಗೆ ಸಮಗ್ರತೆಯುಂಟುಮಾಡುವಂತಿದೆ.

ಪರಿಷದಧ್ಯಕ್ಷ ಪಟ್ಟ

ಇಂತಹ ವಿದ್ವನ್ಮಣಿಗಳು ೧೯೩೧ರಲ್ಲಿ ಕಾರವಾರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದರೆಂಬುದು ಸೋಜಿಗದ ಮಾತಲ್ಲ. ಆ ವರುಷದ ಮೇ ತಿಂಗಳಲ್ಲಿ ಕುಮಟೆಗೆ ಹೋಗಿದ್ದ ನಾನು "ಕಾನಡಾ ಧುರೀಣ"ದ ಸಂಪಾದಕರೂ ದೇಶಭಕ್ತರೂ ಭಾಷಾಭಕ್ತರೂ ಆದ ಶ್ರೀ| ಗಣೇಶರಾಮ ಯಾಜಿಯವರ ಅತಿಥಿಯಾಗಿ ಕೆಲದಿನವಿದ್ದೆನು. ಕನ್ನಡ ಸಾಹಿತ್ಯ ಪರಿಷತ್ತಿನ ಆಗುಹೋಗುಗಳ ಬಗ್ಗೆ ಆಸಕ್ತಿಯುಳ್ಳವರಾಗಿದ್ದ ಶ್ರೀ| ಪೋತದಾರ ರಂಗಪ್ಪನವರು ಕಾರವಾರದ ಹೈಸ್ಕೂಲಿನ ಶಿಕ್ಷಕರಾಗಿದ್ದರು. ಕಾರವಾರದಲ್ಲಿ ಅದೇ ಡಿಸೆಂಬರದಲ್ಲಿ ಕೂಡಲಿದ್ದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟವನ್ನು ಯಾರಿಗೆ ಕಟ್ಟಬೇಕು? ಯಾರನ್ನು ಆಮಂತ್ರಿಸಬೇಕು? ಎಂಬ ಬಗ್ಗೆ ಅವರು ವಿಚಾರ ವಿನಿಮಯ ಮಾಡಲು ಅವರು ಸ್ವಾಗತ ಸಮಿತಿಯ ಹಿರಿಯರಾದ ಶ್ರೀ| ಯಾಜಿಯವರಲ್ಲಿ ಬಂದಿದ್ದರು. ಆಂಗ್ಲವಿದ್ಯಾವಿಭೂಷಿತರಾದವರ ನಾಮಾವಳಿಯನ್ನೇ ಅವರು ಮುಂದಿಟ್ಟರು. ಪಂಡಿತ ತಿಮ್ಮಪ್ಪಯ್ಯನವರ ಹೆಸರನ್ನು ಸೂಚಿಸಿ, ಅವರ ವಿದ್ಯಾವಿನಯಸಂಪನ್ನತೆಯನ್ನು ಬಣ್ಣಿಸಿ, ಅವರನ್ನೇ ಆಮಂತ್ರಿಸತಕ್ಕದ್ದೆಂದು ನಾನು ಸೂಚಿಸಿದೆನು. ಈಗಿನಂತೆ ಆಗ್ಗೆ ಚುನಾವಣೆಯ ಗೊಂದಲವಿದ್ದಿಲ್ಲ. ಪರಿಷದಧ್ಯಕ್ಷ ಸ್ಥಾನಮಾನವು ಪಂಡಿತ ತಿಮ್ಮಪ್ಪಯ್ಯನವರಿಗೆ ಅದೆಂದೋ ಸಂದುಹೋಗಬೇಕಿತ್ತು. ನನ್ನ ಸೂಚನೆಯು ಸ್ವೀಕೃತವಾಯಿತು. ಮುಂದೆ ಆ ವರ್ಷದ ಅಧ್ಯಕ್ಷರಾಗಿದ್ದ ಶ್ರೀ| ಆಲೂರರ ಮುಖೇನ ಶ್ರೀ| ತಿಮ್ಮಪ್ಪಯ್ಯನವರಿಗೆ ಆಮಂತ್ರಣ ಹೋಯಿತು. ಈ ಪರಿಷತ್ಸಮ್ಮೇಳನಾನಂತರವೇ ಅವರ ಹೆಸರು ಕನ್ನಡ ನಾಡಿನ ಹಲವೆಡೆ ಕೇಳಬಂದಿತೆಂದರೆ ಅತ್ಯುಕ್ತಿಯಾಗದು! ಕೀರ್ತಿಭೀರುಗಳೂ, ಮೃದುಪದಗತಿಯುವರೂ ಆಗಿದ್ದ ಪಂ| ತಿಮ್ಮಪ್ಪಯ್ಯನವರ ಮರಣದಿಂದ ಕನ್ನಡ ಭಾಷಾಭಕ್ತರಿಗೆಲ್ಲ ದುಃಖವಾಗಿದೆ. ಅವರ ಶಿಷ್ಯಮಂಡಳಿ ವಿಸ್ತಾರವಾಗಿದೆ. ಅವರ ಗ್ರಂಥಗಳೇ ಅವರ ದಿವ್ಯ ಸ್ಮಾರಕವಾಗಿರುವುದಾದರೂ, ಅವರ ನಲ್ಮೆಯ ಹಳೆಗನ್ನಡದ ಅಭ್ಯಾಸವು ವಿದ್ಯಾರ್ಥಿವೃಂದದಲ್ಲಿ ನಿರಂತರ ನಡೆಯುವಂತೆ ಉತ್ತೇಜಕ ಪಾರಿತೋಷಕದ ಸ್ಮಾರಕ ಒಂದನ್ನೇರ್ಪಡಿಸುವುದು ಉಚಿತವಾಗಿದೆ.

ಅಧ್ಯಕ್ಷರು

[ಲೇಖಕರು: ಶ್ರೀ ಮಧುಗಿರಿ ವಾಸುದೇವ ಮೂರ್ತಿ]

ನಮ್ಮ ಹುಡುಗ 'ಚಿಕ್ಕಪ್ಪಾ, ಚಿಕ್ಕಪ್ಪಾ, ಒಂದು ಉಪನ್ಯಾಸ ಹೇಳುತೇನೆ ಕೇಳಿ' ಎಂದ. 'ಆಗಲಿ' ಎಂದೆ. 'ಅಧ್ಯಕ್ಷರೇ' ಎಂದು ಪ್ರಾರಂಭಿಸಿ, ಆ ಮೇಲೆ ಏನು ಹೇಳಬೇಕು ಎಂದು ಪ್ರಶ್ನಿಸಿದ. ಸ್ನೇಹಿತರೇ, ಎನ್ನಬಹುದು. ಮಹನೀಯರೇ, ಎನ್ನಬಹುದು. ಮಹಿಳೆಯರೇ ಮತ್ತು ಮಹನೀಯರೇ, ಎನ್ನುವುದು ಚೆಂದ. ತಾಯಂದಿರೇ, ಹಿರಿಯರೇ, ಹೀಗೆ ಏನಾದರೂ ಹೇಳಬಹುದು. ಹೇಗಾದರೂ ಮೊಟ್ಟ ಮೊದಲು ಉಪನ್ಯಾಸಕ್ಕೆ ಹುರುಪು ಬರಬೇಕಾದರೆ ಒಂದು ಸಂಬೋಧನೆ ಆವಶ್ಯಕ ಎಂದ ಹಾಗಾಯಿತು. ಈ ಸಂಬೋಧನೆಯಲ್ಲಿ ಅಗ್ರ ಸ್ಥಾನ ಅಧ್ಯಕ್ಷರಿಗೆ. ಅಧ್ಯಕ್ಷರ ಸಂಕಟವನ್ನು ಅರಿತೋ, ಅಥವಾ ಅಧ್ಯಕ್ಷರ ಹಿಂಸೆಯನ್ನು ಸಹಿಸಲಾರದೆಯೋ, ಸಭೆಗೊಬ್ಬರು ಅಧ್ಯಕ್ಷರು ಇರಬೇಕಾದುದೇ ಇಲ್ಲ, ಉಪನ್ಯಾಸಕರ ಪರಿಚಯ ಮಾಡಿಕೊಡುವವರು, ಉಪನ್ಯಾಸಕರು ಇದ್ದರೆ ಸಾಕು ಎಂದು ನಮ್ಮ ಹಿರಿಯರೊಬ್ಬರು ಕಡ್ಡಾಯವಾಗಿ ಹೇಳಿದ್ದರು. ಪಾಪ ಅವರಿಗಾದರೂ ಗೊತ್ತಿದ್ದಿರಬೇಕು, ಉಪನ್ಯಾಸಗಳಿಗೆ ಹುರುಪುಕೊಡುವ ಅಧ್ಯಕ್ಷರ ಇರುವಿಕೆ ಪಾರಂಪರ್ಯವಾಗಿ ನಡೆಯತಕ್ಕದ್ದು ಎಂದು. ತಿರುಗಿ ನೋಡಿದಾಗ ಪೀಠದಲ್ಲಿ ಯಾರೂ ಇಲ್ಲದಿದ್ದರೂ ಸರಿಯೇ, ಅಧ್ಯಕ್ಷರೇ ಎಂದು ಬಿಟ್ಟರೆ ಸಾಕು. ಆ ಮೇಲೆ ಉಪನ್ಯಾಸದ ಪ್ರವಾಹ ನಿರರ್ಗಳ.

ಅಧ್ಯಕ್ಷ ಸ್ಥಾನದ ಮುಳ್ಳು ಅದಕ್ಕೆ ಇದ್ದೇ ಇದೆ. ಕೆಲವರು 'ನಾನು ಈ ಅಧ್ಯಕ್ಷ ಸ್ಥಾನಕ್ಕೆ ಒಪ್ಪಿಕೊಳ್ಳುವವನಾಗಿರಲಿಲ್ಲ. ಆದರೆ ಇಷ್ಟು ಹತ್ತಿರ ಕುಳಿತುಕೊಂಡು ಉಪನ್ಯಾಸಕರ ಮಾತನ್ನು ಕೇಳುವ ಅವಕಾಶಕ್ಕಾಗಿ ಇದನ್ನು ಒಪ್ಪಿಕೊಂಡೆ' ಎಂದು ಹೇಳುವುದುಂಟು. 'ಈ ಹರಟೆಯನ್ನು ಕೇಳುವ ಬಂಧನಕ್ಕೆ ಏಕೆ ಸಿಕ್ಕಿಕೊಂಡೆನೋ' ಎಂದು ಸಂಕಟ ಪ್ರಾಪ್ತಿಯ ಕಾಲದಲ್ಲಿ ವೆಂಕಟರಮಣನನ್ನು ಸ್ಮರಿಸಿದವರು ಎಷ್ಟೋ ಮಂದಿ. ಹೆಚ್ಚಾಗಿ ಮಾತನಾಡಿದರೆ 'ಆ ಅಧ್ಯಕ್ಷ ಹಾಳಾಗ, ಉಪನ್ಯಾಸದ ಸ್ವಾರಸ್ಯವನ್ನೆಲ್ಲ ಕೆಡಿಸಿದ' ಎನ್ನುವರುಂಟು. ಕಡಿಮೆ ಮಾತನಾಡಿದರೆ, 'ತಿಳಿದವನನ್ನು ಅಧ್ಯಕ್ಷನನ್ನಾಗಿ ಕೂಡಿಸಬಾರದಾಗಿತ್ತೆ?' ಎನ್ನುವರುಂಟು. ಉಪನ್ಯಾಸದನಡುವೆ 'ಹೊತ್ತಾಯಿತು' ಎಂದು ಗಂಟೆ ಬಾರಿಸಿದರೆ 'ಈ ಅಧ್ಯಕ್ಷನಿಗೆ ಏನು ದರ್ಪ?' ಎನ್ನುವರು. ಸುಮ್ಮನೇ ಕುಳಿತಿದ್ದರೆ 'ಅಧ್ಯಕ್ಷನಿಗೆ ಉಪನ್ಯಾಸದ ಹುಚ್ಚುಹೊಳೆಯನ್ನು ತಿದ್ದುವುದಕ್ಕೆ ಕೈಲಾಗಲಿಲ್ಲ' ಎನ್ನುವರು. ಆ ಮೇಲೆ ಅಧ್ಯಕ್ಷನು ಏನಾದರೂ ಹೇಳಿದರೆ, ನಾನು ಹೇಳಿದ್ದು ಅದಲ್ಲ. 'ನೀನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ' ಎಂದು ಹೇಳುವ ಕೆಚ್ಚು ಕೆಲವು ಉಪನ್ಯಾಸಕರಿಗೆ. ಅಧ್ಯಕ್ಷನಿಗೆ ತನ್ನ ತನ್ನ ಸಾಮಾಜಿಕ ಅಂತಸ್ತಿಗೆ ತಕ್ಕಂತೆ ಈ ಪ್ರತಿಭಟನೆಯ ಉರಿ ಹೆಚ್ಚು-ಕಡಮೆ ತಾಗುವುದುಂಟು. ಅಂತೂ ಅಧ್ಯಕ್ಷ ಮಾತನಾಡುವವನಾಗಿರಬೇಕೆ, ಮೌನವ್ರತಾಚಾರಿಯಾಗಿರಬೇಕೆ? ಇದು ಒಂದು ದೊಡ್ಡ ವಾದ. ಅಧ್ಯಕ್ಷಸ್ಥಾನ ವಹಿಸಬೇಕೆಂಬ ಕುತೂಹಲವುಳ್ಳವರು ಬಹಳ ಜಾಗರೂಕತೆಯಿಂದ ಆಲೋಚನೆಮಾಡಬೇಕೆಂಬುದಕ್ಕೆ ಬೇಕಾದಷ್ಟು ಉದಾಹರಣೆ ಕೊಡಬಹುದು.

ಚೆನ್ನಾಗಿ ತಿಳುವಳಿಕೆಯುಳ್ಳವರು, ಮಿತಭಾಷಿಗಳಾದವರು, ತಾವು ಹೇಳಬೇಕೆಂದಿರುವ ವಿಷಯದ ಪರಿಚಯವುಳ್ಳವರು, ಹಿರಿಯರು ಆದವರೊಬ್ಬರು ಅಧ್ಯಕ್ಷರಾಗುತ್ತಾರೆ ಎಂದು ಅರಿತು ಅವರಿಂದ ಹೇಳಿಸಿಕೊಳ್ಳದ ರೀತಿಯಲ್ಲಿ ಒಬ್ಬ ಉಪನ್ಯಾಸಕ ತನ್ನ ಭಾಷಣವಸ್ತುವನ್ನು ಪ್ರತಿಪಾದಿಸುತ್ತಾನೆ ಎಂಬ ವಾತಾವರಣವಿದ್ದರೆ ಆ ಸಭೆಯ ಸೊಗಸೇ ಒಂದು ಸೊಗಸು. ತಮ್ಮ ತಮ್ಮ ವಿಷಯಗಳನ್ನು ಬರೆದುಕೊಂಡು ಓದಿ ಏಕೆ ಮರ್ಯಾದೆ ತಂದುಕೊಳ್ಳಬಾರದು ಎಂದು ನಾನು ನನ್ನ ಕೆಲವು ಮಿತ್ರರಿಗೆ ಹೇಳಿರುವುದುಂಟು. ಆದರೆ ಭಾಷಣ ಸ್ವಾತಂತ್ರ್ಯ ಯುಗ ವಿಚಿತ್ರಯುಗ. ಈ ಯುಗದಲ್ಲಿ ಸೃಷ್ಟಿಯಾಗುವ ಅಧ್ಯಕ್ಷ ಮಹಾನುಭಾವರು ಹೇಗಿರಬೇಕು? ಮರತೆ, ಮತ ಕೊಡುವುದು ಎಂಬುದೊಂದು ಬೆಳೆದಿದೆಯಲ್ಲವೆ? ಅಧ್ಯಕ್ಷಪೀಠಕ್ಕಾದರೂ ಮತಪ್ರಾಬಲ್ಯದ ನಡವಳಿಕೆ ಉಂಟು. ಮತಕೊಡುವವರು ಭಾಷಣಕಾರರು; ಅಥವಾ ಹೇಳುವವರು ಕೇಳುವವರು ಎಂಬ ಇಬ್ಬರಲ್ಲಿ ಕೇಳುವವರಾದ ಪ್ರತಿಯೊಬ್ಬರಲ್ಲೂ ಭಾಷಣ ಮಾಡಬೇಕು ಎಂಬ ವ್ಯಕ್ತಿತ್ವದ ಒಂದು ಅಂಶ ಉಂಟೇ ಉಂಟು; ಆದ್ದರಿಂದ, ಬಹುಮತ ಎನ್ನುವುದು ಭಾಷಣಕಾರರಿಗೇ ಒಲಿಯತಕ್ಕದ್ದು. ಸಮ ಸಂಖ್ಯೆಯ ಮತ ಬಂದಲ್ಲಿ ಯಾವ ಕಡೆಗೆ ಇರಬೇಕೆಂಬುದಕ್ಕೆ ಅಧ್ಯಕ್ಷರೆಂಬುವರಿದ್ದರೆ ಅವರ ಮತವಾದರೂ ಭಾಷಣಕಾರರ ಕಡೆಗೇ. ಭಾಷಣ

ಕಾರರ ಮಾತಿಗೆ ತುಂಬು, ನೂರಕ್ಕೆ ನೂರು, ಪ್ರಾಶಸ್ತ್ಯ ಬರಬೇಕಾದರೆ ಅಧ್ಯಕ್ಷರ ದನಿ ನೂರಕ್ಕೆ ನೂರು ಸುಮ್ಮನಾಗಬೇಕು. ಇದು ಲೆಕ್ಕಾಚಾರ. ಆದುದರಿಂದ ಜೈ ಸುಮ್ಮನಿರುವ ಅಧ್ಯಕ್ಷರಿಗೆ! ಅತಿ ಸುಮ್ಮನಿರುವ ಅಧ್ಯಕ್ಷರಿಂದ ಪ್ರಯೋಜನ? ಭಾಷಣಕಾರರಿಗೆ ಒಂದು ಸಂಬೋಧನೆ ಇಲ್ಲದಿದ್ದರೆ ಮಾತು ಹೊರಡುವುದಿಲ್ಲವಾದ್ದರಿಂದ ಆ ಸಂಬೋಧನೆಯನ್ನು ಸ್ವೀಕರಿಸುವುದಕ್ಕೆ, ಸ್ವೀಕೃತ ಎಂದು ಸಭಿಕರು ಊಹಿಸಲವಕಾಶವಿರುವಂತೆ, ಒಂದು ವ್ಯಕ್ತಿ, ಒಂದು ಗೊಂಬೆ ಅಧ್ಯಕ್ಷಪೀಠದಲ್ಲಿ ಇರತಕ್ಕದ್ದು. ನಾನೇನಾದರೂ ಅಧ್ಯಕ್ಷನಾಗಿದ್ದರೆ ಸರಿಯಾಗಿ ಹೇಳುತ್ತಿದ್ದೆ' ಎನ್ನುವ ವ್ಯಕ್ತಿಗೆ ಆ ಸ್ಥಾನದ ಹಂಬಲು ಇನ್ನು ಮೇಲೆ ಸಲ್ಲದು. ಅವರಿಗೆ ಬಹುಮತ ಖಂಡಿತ ದೊರೆಯಲಾರದು. ವಿಮರ್ಶೆಯ ಕುತೂಹಲವಿದ್ದರೆ ಅಧ್ಯಕ್ಷ ಸ್ಥಾನದ ಸಂಕಟಕ್ಕೆ ಸಿಕ್ಕಿ ಅದನ್ನು ಪೂರ್ಣಮಾಡಿಕೊಳ್ಳಬೇಕಾಗಿಲ್ಲ. ಪತ್ರಿಕೆಯಲ್ಲಿ ಆಕ್ಷೇಪಣೆಯನ್ನು ಬರೆದು ತೃಪ್ತಿಹೊಂದಬಹುದು, ಪತ್ರಿಕೆಗಳು ಆಕ್ಷೇಪಣೆಯ ಲೇಖನವನ್ನು ಸ್ವೀಕರಿಸಿದರೆ, ಒಂದು ವೇಳೆ ಅವರು ಪ್ರಕಟಿಸಿದ ಲೇಖನವನ್ನು ಭಾಷಣಕಾರರು ಓದುವುದಾದರೆ? ಇಂತಹ ವಿಮರ್ಶೆ ಬರುವುದೆಂಬ ಭಯವಿದ್ದರೆ ಭಾಷಣಕಾರರು ಭಾಷಣಕಾರರಾಗುತ್ತಿದ್ದರೋ ಇಲ್ಲವೋ! ನಾನು ಎಷ್ಟೋ ಮಂದಿ ಮಿತ್ರರಿಗೆ 'ಒಂದೆರಡು ಮಾತು ಹೇಳುತ್ತೇನೆ ಎನ್ನಿ' ಎಂದು ಸಲಹೆ ಕೊಟ್ಟದ್ದೇನೆ; ಹಾಗೇಕೆಂದಾರು? 'ನಾನು ಭಾಷಣ ಮಾಡುತ್ತೇನೆ' ಎಂದೇ ಹೇಳುವರು. ಈ ಗೊಂದಲದ ಪರಿಣಾಮ **ಅಧ್ಯಕ್ಷ ಮೌನ ನಿರ್ಮಾಣ.**

ಹಾಗೆಂದ ಕೂಡಲೆ ಆ ನೆನಪು ಬಂತು. ಹೇಳುತ್ತೇನೆ, ಕೇಳಬೇಕು.

ಆಗಿನ್ನೂ ನಾನು ಹುಡುಗ. ಒಂದು ರಾತ್ರೆಯ ಪಾಠಶಾಲೆಗೆ ಹೋಗುತ್ತಿದ್ದೇನೆ. ದೊಡ್ಡ ಪಟ್ಟಣ; ಪಟ್ಟಣದ ಯಾವುದೋ ಭಾಗ. ಸುತ್ತಿ ಸುತ್ತಿಕೊಂಡು ಹೋಗುವ ಗಲ್ಲಿಗಳು. ಆ ಗಲ್ಲಿಗಳ ನಡುವೆ ಎಲ್ಲೋ ಸ್ವಲ್ಪ ಬಯಲಿದೆ. ಬಯಲಿನಲ್ಲಿ ಒಂದು ಗುಡಿ. ಗುಡಿ ಯಾವುದೋ ಮಾರಿಯ ಗುಡಿ ಇರಬೇಕು. ಆ ಗುಡಿಯ ಬಳಿಯಿಂದ ಕೇಳಿಬರುತ್ತಿರುವ ತಮಟೆಯ ದನಿ ಇದನ್ನು ಸಾರುತ್ತಿದೆ. ಪಾಠಶಾಲೆಗೆ ಹೋಗಿ ಸೇರುವುದರೊಳಗೆ ಇನ್ನೂ ಸಂದಿಗಳಲ್ಲಿ ಹೋಗಬೇಕು. ಆಗಲೇ ಕತ್ತಲು. ಪಾಠಶಾಲೆಯಿಂದ ಹಿಂತಿರುಗುವುದರೊಳಗಾಗಿ ಇನ್ನೂ ಕತ್ತಲಾಗುವುದು. ತಮಟೆಯ ದನಿ ಇನ್ನೂ ವಿವರವಾಗಿ ಇನ್ನೂ ದೂರಕ್ಕೆ ಕೇಳುವುದು. ಸದ್ಯ, ಬೆಳಕಾಗಿರುವ ದೊಡ್ಡ ಬೀದಿಗೆ ಬಂದೆ. ನಮ್ಮ ಪಾಠಶಾಲೆಯನ್ನು ಸೇರಿದ್ದೇನೆ. ನನ್ನ ಜೊತೆಯ ಬಾಲಕ ಬಾಲಕಿಯರು ಇದ್ದಾರೆ; ಉಪಾಧ್ಯಾಯರೂ ಇದ್ದಾರೆ.

ಪಾಠ ನಡೆಯಿತು. ಉಪಾಧ್ಯಾಯರ ಪ್ರಶ್ನೆ, ನನ್ನ ಉತ್ತರ:

'ದೇವರ ಸಂಖ್ಯೆ ಎಷ್ಟು?'

'ಭಗವಂತನಿರುವವನೊಬ್ಬನೇ.'

'ಆತನ ಮುಖ್ಯ ಗುಣವೇನು?'

'ಭಗವಂತನು ಅಪಾರ ಕರುಣಾಸಾಗರನು.'

'ನಾವು ಯಾವ ಕಾರ್ಯವನ್ನಾದರೂ ಹೇಗೆ ಪ್ರಾರಂಭಿಸಬೇಕು?'

'ಕರುಣಿಗಳ ಕರುಣಿಯಾದ ಭಗವಂತನ ಹೆಸರಿನಲ್ಲಿ ಎಂದು ಪ್ರಾರಂಭಿಸಬೇಕು.'

'ಭಗವಂತನು ನಮಗೆ ಮಾಡಿರುವ ದೊಡ್ಡ ಉಪಕಾರವೇನು?'

'ನಮಗೊಬ್ಬ ಆಚಾರ್ಯನನ್ನು ಕಳಿಸಿರುವುದು.'

'ಆಚಾರ್ಯನು ನಮಗೆ ಬೋಧಿಸಿರುವ ಮುಖ್ಯ ಪಾಠಗಳ್ಯಾವುವು?'

'ದಾನ, ಯಾತ್ರೆ, ಪ್ರಾರ್ಥನೆ.'

'ದಿನಕ್ಕೆ ಎಷ್ಟು ಸಲ ಪ್ರಾರ್ಥನೆ ಮಾಡಬೇಕು?'

'ಐದು ಸಲ.'

'ಪ್ರಾರ್ಥನೆಯ ಕಾಲ ಹೇಗೆ ಗೊತ್ತಾಗುವುದು?'

'ಪ್ರಾರ್ಥನಾಲಯದಿಂದ ಪ್ರಾರ್ಥನೆಗೆ ಕರೆಯುವವನ ದನಿ ಕೇಳಿಸುವದು.'

'ನಾವು ಯಾವ ಪ್ರಾರ್ಥನಾ ಮಂದಿರಕ್ಕೆ ಹೋಗಿ ಪ್ರಾರ್ಥನೆ ಮಾಡಬೇಕು?'

'ನಮ್ಮ ಮನೆಗೆ ಹತ್ತಿರದಲ್ಲಿರುವ ಮಂದಿರಕ್ಕೆ ಹೋಗಿ ಪ್ರಾರ್ಥನೆ ಮಾಡಬೇಕು.'

'ಎರಡು ಮಂದಿರಗಳು ಒಂದೇ ದೂರದಲ್ಲಿದ್ದರೆ?'

'ಯಾವುದಾದರೊಂದಕ್ಕೆ ಹೋಗಿಬರಬಹುದು.'

'ಮಂದಿರವೇ ಹತ್ತಿರದಲ್ಲಿಲ್ಲದಿದ್ದರೆ?'

'ಎಲ್ಲಿದ್ದರಲ್ಲಿ ಪ್ರಾರ್ಥನೆ ಮಾಡಬಹುದು.'

'ನಮ್ಮ ಆಚಾರ್ಯನು ಬೋಧಿಸಿದ ಇನ್ನೂ ಇತರ ಪಾಠಗಳ್ಯಾವುವು?'

'ಸಂಘ ಜೀವನ.'

'ನಾವು ಸಂಘಜೀವಿಗಳೆಂಬುದು ತಿಳಿಯುವುದು ಯಾವಾಗ?'

'ಊಟ ಮಾಡುವಾಗ, ಮಂದಿರದಲ್ಲಿ ಸೇರಿದಾಗ.'

'ಮತ್ತೂ?'

'ಶವದ ಹಿಂದೆ ಹೋಗುವಾಗ!'

ಈ ಕಡೆಯ ಉತ್ತರ ನನಗೆ ಏಕೆ ಹೊಳೆಯಿತೋ ಹೇಳಲಾರೆ. ಪಾಠ ಮುಗಿಯಿತು. ಶಾಲೆ ಹಾಕಿತು. ಬಾಲಕ ಬಾಲಕಿಯರು ಅವರವರ ಮನೆಗಳಿಗೆ ಹೊರಟುಹೋದರು. ನನ್ನ ಎದುರಿಗೆ ದೊಡ್ಡ ಬೀದಿಯ ಬೆಳಕೂ ಸುಳಿಯುತ್ತಿದೆ. ಕಿವಿಯಲ್ಲಿ ತಮಟೆಯ ಶಬ್ದ.

ಅಷ್ಟು ಹೊತ್ತಿಗೆ ನನ್ನ ಅಣ್ಣ ನನ್ನನ್ನು ಹುಡುಕಿಕೊಂಡು ಅಲ್ಲಿಗೆ ಬಂದರು. ಸ್ವಲ್ಪ ಕತ್ತಲು ದಿನವೇ ಆಗಿದೆ; ಪಾಠ ಹೊತ್ತಾಗಿದೆ; ಹೆದರಿಕೊಂಡಾನು, ಹೋಗಿ ಕರೆದುಕೊಂಡು ಬರೋಣ ಎಂದು ಅನಿಸಿರಬೇಕು. ಆ ಪಟ್ಟಣದಲ್ಲಿ ಒಂದು ವೈದ್ಯ ವಿದ್ಯಾಲಯ. ಅಲ್ಲಿ ನನ್ನ ಅಣ್ಣ ಓದುತ್ತಿದ್ದರು. ಇಷ್ಟು ಪರಿಚಯ ನಾನು ಹೇಳಿಕೊಳ್ಳಬಹುದು. ನನ್ನನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕೆ ಬಂದವರಿಗೆ ಇನ್ನೊಂದು ಕಾರ್ಯಕ್ರಮ ಒಂದು ಗಂಟೆ ಕಾಲದ್ದು ಗಂಟುಬಿದ್ದಿತು 'ನಾವೆಲ್ಲ ಸಭೆ ಸೇರಿದ್ದೇವೆ, ಸ್ವಲ್ಪ ಬಂದು ಹೋಗಿ' ಎಂದು ಆ ಬೀದಿಯಲ್ಲಿ ಒಂದು ನಿವಾಸವನ್ನು ಏರ್ಪಡಿಸಿಕೊಂಡಿದ್ದ ಅವರ ಸ್ನೇಹಿತರು ಬಂದು ಕರೆದರು.

ಈ ರಾತ್ರಿಯ ಸಮಯದಲ್ಲಿ ಏತಕ್ಕೆ ಕರದಾರು! ಏನು ಸಭೆಯೋ ಏನೊ? ಅಥವಾ ಸಿಕ್ಕಿದರೆ ಮೆಲ್ಲುವುದಕ್ಕೆ ಸ್ವಲ್ಪ ಚೆರುಪು ಸಿಕ್ಕಬಹುದು. ಸಿಹಿಯಾಗಿಯೇ ಇರುತ್ತದೆ. ಸಿಹಿ ಸಿಕ್ಕಿದರೆ ಬೇಡ ಏಕೆ? ಇಲ್ಲ, ಅಣ್ಣನ ಜೊತೆಯಲ್ಲಿ ಅವರ ಸ್ನೇಹಿತರ ಬಿಡಾರಕ್ಕೆ ಹೋಗಿ ಬಂದ ಹಾಗಾಯಿತು. ಹೇಗಿದ್ದರೂ ಅಣ್ಣ ಜೊತೆಯಲ್ಲಿದ್ದಾರೆ. ಎಷ್ಟು ರಾತ್ರಿಯಾದರೂ ಮನೆಗೆ ಕರೆದುಕೊಂಡು ಹೋಗಿಬಿಡುತ್ತಾರೆ. ಹೀಗೆಂದುಕೊಂಡು ನಾನೂ ಅವರ ಜೊತೆಯಲ್ಲಿ ಹೊರಟೆ. 'ಇವನಿಗೆ ಇಂಗ್ಲೀಷು ಬರುತ್ತದೆಯೇ?' ಎಂದು ಸ್ನೇಹಿತರು ಕೇಳಿದರು. 'ಈಗೀಗ ಓದುತ್ತಿದ್ದಾನೆ. ಹೇಳಿದ್ದು ತಿಳಿದುಕೊಳ್ಳಬಹುದು' ಎಂದರು ನನ್ನ ಅಣ್ಣ. 'ಈಗೊಂದು ಸಭೆ ನಡೆಸುತ್ತಿದ್ದೇವೆ. ಇವನೂ ಬರಬಹುದು. ಅದಕ್ಕೇ ಕೇಳಿದೆವು' ಎಂದರು ಸ್ನೇಹಿತರು. 'ಕುಳಿತಿರುತ್ತೇನೆ' ಎಂದುಕೊಂಡೆ.

ಅವರು ನಿಜವಾಗಿ ಸಭೆ ನಡೆಸುತ್ತಿದ್ದರು. ಮನೆ ಅಂದ ಮೇಲೆ ದೀಪವಿದ್ದುದರಿಂದ ಬೀದಿಗಿಂತಲೂ ಬೆಳಕಾಗಿಯೇ ಇತ್ತು. ಒಬ್ಬಿಬ್ಬರು ಬಂದವರನ್ನು 'ಬನ್ನಿ, ಬನ್ನಿ, ಹೀಗೆ, ಇಲ್ಲಿ, ಕುಳಿತುಕೊಳ್ಳಿ' ಎಂದು ಕೂಡಿಸುತ್ತಿದ್ದರು. ಸೇರಿದ್ದವರೆಲ್ಲ ನನಗಿಂತಲೂ ದೊಡ್ಡವರು ಎಂದುಕೊಂಡು ನಾನು ನೆಲದ ಕಡೆ ಮುಖ ಮಾಡಿಕೊಂಡು ಒಂದೆಡೆ ಕುಳಿತುಕೊಂಡೆ. 'ಹುಡುಗ' ಎಂದರು ಒಬ್ಬರು. 'ಅವರ ಅಣ್ಣನ ಹಿಂದೆ ಬಂದಿದ್ದಾನೆ' ಎಂದರು ಇನ್ನೊಬ್ಬರು. 'ವಿಶಾಲವಾಗಿ ಕುಳಿತುಕೊ' ಎಂದರು ಮೂರನೆಯವರು. 'ಸ್ಥಳ ಇಕ್ಕಟ್ಟು' ಎಂದರು ನಾಲ್ಕನೆಯವರು. 'ಕುಳಿತುಕೊಳ್ಳಲಿ ಬಿಡು' ಎಂದರು ಇನ್ನೊಬ್ಬರು. 'ಇರಲಿ, ಇರಲಿ' ಎಂದರು ಮತ್ತೊಬ್ಬರು. ಎಲ್ಲರೂ ಒಂದೊಂದು ಮಾತನಾಡಿದ ಹಾಗೆ ಆಯಿತಲ್ಲ ಎಂದುಕೊಂಡೆ ನಾನು. ಮುಂದಿನ ಮಾತುಗಳೆಲ್ಲಾ ಒಮ್ಮಿಂದೊಮ್ಮೆ ಕೇಳಿಸಿದವು.

'ದಯವಿಟ್ಟು ನಿಶ್ಶಬ್ದವಾಗಬೇಕು.'

'ನಮ್ಮ ಇವರು ಭಾಷಣಮಾಡುತ್ತಾರೆ.'

'ನೋಡಿ, ನೋಡಿ.'

'ಈಕಡೆ, ಈಕಡೆ.'

'ಅಧ್ಯಕ್ಷರೇ,' ಭಾಷಣಕಾರರ ಸಂಬೋಧನೆ.

ಎಲ್ಲರೂ ಅಧ್ಯಕ್ಷರ ಕಡೆ ನೋಡಿದರು. ನಾನೂ ನೋಡಿದೆ. ಎದೆ ಝಲ್ ಎಂದಿತು. ನರಗಳು ನುರಿನುರಿಗುಟ್ಟಿದವು. ಭಾಷಣಕಾರರು ಯಥಾಸಾವಕಾಶವಾಗಿ ತಮ್ಮ ಮಾತನ್ನು ಮುಂದುವರಿಸಿದರು. ಆದರೆ ಅವರ ಭಾಷಣ ಸಭಿಕರ ಕರತಾಡನದಲ್ಲಿ, ಅಧ್ಯಕ್ಷರಿಗಾಗಿ ಅವರು ಎತ್ತಿದ ಜೈಕಾರದಲ್ಲಿ ಮುಳುಗಿಹೋಯಿತು. ಅಧ್ಯಕ್ಷರು ಒಂದು ಚುಟ್ಟಾವನ್ನು ಬಾಯಲ್ಲಿ ಇಟ್ಟುಕೊಂಡು ತಮ್ಮದೇ ಆದ ರೀತಿಯಲ್ಲಿ ನಗುತ್ತ ಈ ವಿನೋದವನ್ನು ಮೌನವಾಗಿ ನೋಡುತ್ತಿದ್ದರು.

'ಆ ನಮ್ಮ ಅಂತೋಣಿ ಜವಾನ ಅನಾಮತ್ತಾಗಿ ಇದನ್ನು ಎಲ್ಲಿಂದಲೋ ತಂದುಕೊಟ್ಟ' ಎಂದು ಒಬ್ಬರು ಪ್ರಾರಂಭಿಸಿದರು.

'ಈ ಒಂದೊಂದು ಎಲುಬನ್ನೂ ಅದರದರ ಸ್ಥಳದಲ್ಲಿ ಸೇರಿಸಿ ತಂತಿಯಿಂದ ಬಿಗಿಬದ್ಧಿದೆಯೆಲ್ಲ ನಮ್ಮ ಅನಾಟಮಿ ಪಾಠಕ್ಕೆ ಒಳ್ಳೆ ರಿವಿಷನ್ ಆಯಿತು' ಎಂದು ಎರಡನೆಯವರು.

'ಎಷ್ಟು ಗಂಭೀರವಾಗಿ ನಿಂತಿದೆ ಆ ತಲೆ' ಎಂದರು ಮೂರನೆಯವರು.

'ಹಲ್ಲುಗಳೂ ಇವೆ. ಆ ನಗುವಿನಲ್ಲೂ ಒಂದು ಚಮತ್ಕಾರ ಇದೆ' ಎಂದರು ಇನ್ನೊಬ್ಬರು.

'ಚುಟ್ಟಾ ಎಷ್ಟು ವಾಸ್ತವಿಕವಾಗಿ ಕಚ್ಚಿಕೊಂಡಿದೆ' ಎಂದರೊಬ್ಬರು.

'ಕೈಯಲ್ಲಿ ಚಿತ್ತ ಇದೆ ನೋಡಿ' ಎಂದು ಒಬ್ಬರು ತೋರಿಸಿದರು.

'ಕೂಡಿಸುವುದು ಸ್ವಲ್ಪ ಕಷ್ಟವಾಯಿತು' ಎಂದರು ಮಗುದೊಬ್ಬರು.

'ನನ್ನ ಅಂಗಿ ಷರಾಯಿಗಳನ್ನೇ ತೊಡಿಸಿರುವುದು' ಎಂದರು ಒಬ್ಬರು.

'ಕಾಲಿಗೆ ಹಾಕಿರುವುದು ನನ್ನದು' ಎಂದರು ಇನ್ನೊಬ್ಬರು.

'ಯಾರೋ ಈಗತಾನೇ ಒಳಕ್ಕೆ ಬಂದು ಕುಳಿತುಕೊಂಡಿರುವ ಹಾಗಿದೆಯಲ್ಲವೆ?' ಎಂದರು ಕಡೆಗೊಬ್ಬರು.

ಆಗಿನ್ನೂ 'ಅಧ್ಯಕ್ಷ ಮಹಾಶಯಕೀ ಜೈ' ಎನ್ನುವ ಒಕ್ಕಣೆ ರೂಢಿಗೆ ಬಂದಿರಲಿಲ್ಲ. 'ತ್ರೀ ಚೀಯರ್ಸ್ ಟು ಅವರ್ ಚೇರ್ಮನ್, ಹಿಪ್ ಹಿಪ್ ಹುರ್ರೇ!' ಎಂದು ಎಲ್ಲರೂ ಕೂಗಿಕೊಂಡರು. ಮೂವತ್ತೈದು ಮೂವತ್ತಾರು ವರುಷಗಳೇ ಉರುಳಿಹೋದವು. ಅಂದಿನ ಅಧ್ಯಕ್ಷರ ಚಿತ್ರ ಇನ್ನೂ ನನ್ನ ಕಣ್ಣಿಗೆ ಕಟ್ಟಿದೆ.

ಪಾಪ, ಎಷ್ಟು ಒಳ್ಳೆಯ ಅಧ್ಯಕ್ಷರು!

ಕನ್ನಡ ಜನಜೀವನದಲ್ಲಿ ನವಚೈತನ್ಯ

[ಲೇಖಕರು: ಶ್ರೀ। ಎಲ್. ಗುಂಡಪ್ಪ, ಎಂ. ಎ.]

ಜನಜೀವನ ಬಹು ಪುರತನವಾದ್ದು. ಅದು ಯಾವಾಗ ಮೊದಲಾಯಿತೋ ಹೇಗೆ ಬೆಳೆಯುತ್ತ ಬಂತೋ ಹೇಳುವುದು ಕಷ್ಟ. ಎಷ್ಟೋ ಹಿಂದಿನಿಂದ ಬಗೆಬಗೆಯಾಗಿ ರೂಪಾಂತರ ಹೊಂದುತ್ತ ಇಂದಿನ ವರೆಗೂ ಹರಿದು ಬಂದಿದೆ. ಗಹನವಾದ ಯಾವುದೋ ಮಹಾರಣ್ಯದಲ್ಲಿ ಹುಟ್ಟಿ ಹರಿದು ಬರುತ್ತಿರುವ ಮಹಾನದಿಯಂತೆ ಒಂದೇ ಸಮನೆ ಹರಿದು ಬರುತ್ತಿದೆ. ಈ ಜನಜೀವನ ಹೀಗೆ ಪುರಾತನವಾದರೂ ಚಿರ ನೂತನವಾಗಿದೆ. 'ಇದು ನಿಚ್ಚಂ ಪೊಸತು, ಅರ್ಣವಂಬೊಲ್, ಅತಿ ಗಂಭೀರಂ'– ಎಂದು ಆದಿಕವಿ ಪಂಪನ ಕವಿತೆಯನ್ನು ಕುರಿತು ಆಡಿರುವ ಮಾತು ಇದಕ್ಕೆ ಪೂರ್ಣವಾಗಿ ಅನ್ವಯಿಸುತ್ತದೆ. ಸಮುದ್ರವನ್ನು ದಿನದಿನವೂ ನೋಡುತ್ತಿದ್ದರೂ ನೋಡಿದಾಗಲೆಲ್ಲ ಅದು ಹೊಸದಾಗಿಯೇ ತೋರುತ್ತಿರುತ್ತದೆ. ಅದೇ ತೆರೆ, ಅದೇ ನೊರೆ, ಅದೇ ಅಗಾಧ ಜಲರಾಶಿ. ಆದರೂ ನಿಮಿಷನಿಮಿಷಕ್ಕೂ ಅದರಲ್ಲಿ ಆಗುವ ಏರುಪೇರುಗಳು ಹೊಸಹೊಸವೇ. ಹಾಗೆಯೇ ಜೀವನವೂ. ವ್ಯಕ್ತಿಯ ಜೀವನ ಒಂದು ತೆರೆಯಂತಾದರೆ, ಜನತೆಯ ಒಟ್ಟು ಜೀವನ ಲೆಕ್ಕವಿಲ್ಲದಷ್ಟು ತೆರೆಗಳನ್ನೊಳಗೊಂಡು ಏರಿಳಿತಗಳಿಂದ ಕೂಡಿ ಸದಾ ಭೋರ್ಗರೆಯುತ್ತಿರುವ ಮಹಾಸಾಗರದಂತೆ. ಸಮುದ್ರದ ಹಾಗೆ ಜನಜೀವನವೂ ಅತಿ ಗಂಭೀರವಾದ್ದು. ಅದರ ಆಳ ಹೀಗೇ ಸರಿಯೆಂದು ಹೇಳಹೋಗುವುದು ಸಾಹಸವಾದೀತು. ಇಂಥ ಜನಜೀವನವನ್ನು ಬಹು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿ ಅರಿಯಬೇಕು.

ಕನ್ನಡ ಜನ ಭಾರತಜನತೆಯ ಒಂದು ಭಾಗ, ಅದರ ಒಂದು ಅಂಗ. ಹಿಂದಿನಿಂದ ಇಂದಿನ ವರೆಗೂ ಭಾರತ ಜನತೆಯಲ್ಲಿ ಯಾವ ಯಾವ ಏರಿಳಿತಗಳು ಆಗಿಹೋಗಿವೆಯೋ ಅವೆಲ್ಲ ಸಾಮಾನ್ಯವಾಗಿ ಕನ್ನಡ ಜನತೆಯನ್ನೂ ವ್ಯಾಪಿಸಿಯೇ ಇವೆ. ಈಗಲೂ ಅಖಿಲ ಭಾರತದ ಸಮಸ್ಯೆಗಳೆಲ್ಲ ಕನ್ನಡ ನಾಡಿನಲ್ಲೂ ನೆಲೆಗೊಂಡಿವೆ. ಜೊತೆಗೆ, ತನ್ನವೇ ಆದ ಕೆಲವು ವಿಶೇಷ ಸಮಸ್ಯೆಗಳೂ ಕನ್ನಡಕ್ಕಿವೆ. ಭಾರತ ಜನದ ಒಂದು ಅಂಶವಾಗಿರುವ ಕನ್ನಡ ಜನಕ್ಕೆ ಈಗಿನ ಕಾಲದ ಹೊಸ ಪರಿಸ್ಥಿತಿಯಲ್ಲಿ ತಲೆದೋರಿರುವ ಸಮಸ್ಯೆಗಳು, ಅವುಗಳಿಂದ ಆಗುತ್ತಿರುವ ಪ್ರತಿಕ್ರಿಯೆಗಳು, ಕನ್ನಡ ಜನದ ಆದರ್ಶ ಆಕಾಂಕ್ಷೆಗಳು, ಅವುಗಳನ್ನು ಸಾಧಿಸುವಲ್ಲಿ ಅವರಲ್ಲಿ ಮೂಡುತ್ತಿರುವ ನವಚೈತನ್ಯ–ಇವನ್ನು ಹೆಗ್ಗುರುತಾಗಿ ಸೂಚಿಸಲು ಮಾತ್ರ ಇಲ್ಲಿ ಪ್ರಯತ್ನ ಮಾಡಿದೆ.

'ಹೊಸ ಕಾಲ, ಹೊಸ ಆದರ್ಶ' ಎಂದರೇನೆಂಬುದನ್ನು ಸ್ವಲ್ಪ ವಿಶದಪಡಿಸಬೇಕು. ಭರತಖಂಡದ ಜನಜೀವನ ಬಹು ಪುರಾತನ ಕಾಲದಿಂದಲೂ ತನ್ನದೇ ಆದ ಒಂದು ರೀತಿಯಲ್ಲಿ ನಡೆದುಬರುತ್ತಿತ್ತು. ಪ್ರಪಂಚದ ಇತರ ಭಾಗಗಳ ಪ್ರಭಾವಕ್ಕೆ ವಿಶೇಷ ಒಳಗಾಗದೆ ತನ್ನ ಮಾರ್ಗದಲ್ಲೇ ಮುಂದುವರಿಯುತ್ತಿತ್ತು. ಮುಸಲ್ಮಾನರು ಇಲ್ಲಿ ಬಂದು ನೆಲಸಿದ ಬಳಿಕ ಜನಜೀವನದ ಹಲವು ರಂಗಗಳಲ್ಲೂ ಪರಿವರ್ತನೆಗೆ ಪ್ರಾರಂಭವಾಯಿತು. ಆ ಘರ್ಷಣೆ ಮುಗಿದು ಬಗೆಯ ಸಮರಸಭಾವವುಂಟಾಗುತ್ತಿರುವಷ್ಟರಲ್ಲಿ ಪಾಶ್ಚಾತ್ಯರ ಸಂಪರ್ಕವುಂಟಾಯಿತು. ಈ ಸಂಪರ್ಕದಿಂದ ಪ್ರಾರಂಭವಾದ ಘರ್ಷಣೆ ಬಹು ಪ್ರಬಲವಾದ್ದು. ಹಿಂದಿನ ಸಮಸ್ತ ಶಕ್ತಿಗಳೂ ಈ ಹೊಸ ಆಘಾತವನ್ನು ಎದುರಿಸಿ ನಿಲ್ಲಲಾರದೆ ಕುಸಿದೊರಗಿದವು. ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯಾದಂದಿನಿಂದ ಪಾಶ್ಚಾತ್ಯ ಪ್ರಭಾವ ತಾನೇ ತಾನಾಗಿ ನೆಲಸಿತು. ಅಲ್ಲಿಂದೀಚೆಗೆ ನೂತನ ಪುರಾತನಗಳಲ್ಲಿ ಹಿಂದೆಂದೂ ಆಗಿರದಂಥ ಘರ್ಷಣೆಯಾಗತೊಡಗಿತು. ಅದರ ಪರಿಣಾಮವಾಗಿ ಜನಜೀವನವೆಲ್ಲ ಸರ್ವ ವಿಧದಲ್ಲಿಯೂ–ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಸಂಸ್ಕೃತಿ ಕ್ಷೇತ್ರಗಳೆಲ್ಲದರಲ್ಲಿಯೂ—ತೀವ್ರ ಪರಿವರ್ತನೆಗೆ ಈಡಾಯಿತು. ಈ ಪರಿವರ್ತನೆಯ ವೇಗವೂ ಹಿಂದಿನ ಕಾಲಕ್ಕಿಂತ ಹಲವು ಮಡಿ ಹೆಚ್ಚಿತು. ಈ ಕಾಲವನ್ನೇ ನಾವು ಸ್ಥೂಲವಾಗಿ ಹೊಸ ಕಾಲವೆಂದು ಕರೆಯುವುದು. ಈ ಕಾಲದಲ್ಲಿ ಹೊಸದಾಗಿ ರೂಪುಗೊಂಡ ಜನದ ಆಸೆ ಆಕಾಂಕ್ಷೆಗಳೇ ಹೊಸ ಹೊಸ ಧ್ಯೇಯಗಳು; ಈಗಿನ ದೃಷ್ಟಿಯೇ ಹೊಸ ದೃಷ್ಟಿ. ಈ ಧ್ಯೇಯ ಸಾಧನೆಗಾಗಿ ಹೊಮ್ಮುತ್ತಿರುವ ಉತ್ಸಾಹವೇ ಜನದ ನವಚೈತನ್ಯ. ಈ ಧ್ಯೇಯಗಳ ಸ್ವರೂಪವನ್ನು ಅರಿತುಕೊಂಡಲ್ಲದೆ ನಾಡಿನ ಮಂಗಳವನ್ನು ಸಾಧಿಸಲು ಸಾಧ್ಯವಾಗಲಾರದು.

ಭರತಖಂಡದಲ್ಲಿ ಈ ರೀತಿಯ ಹೊಸ ದೃಷ್ಟಿ ಮೊದಲು ತಲೆದೋರಿದ್ದು ಬಂಗಾಳದಲ್ಲಿ ಎನ್ನಬಹುದು. ಬ್ರಿಟಿಷರ ಅಧಿಕಾರ ಭದ್ರವಾಗಿ ಬೇರು ಬಿಟ್ಟದ್ದೂ ಅಲ್ಲಿ; ರಾಜಾ ರಾಮಮೋಹನರಾಯ, ಶ್ರೀ ರಾಮಕೃಷ್ಣ–ವಿವೇಕಾನಂದ ಮೊದಲಾದ ಮಹಾಪುರುಷರ ಪ್ರಭಾವದಿಂದ ಭಾರತ ಶಕ್ತಿ ಹೆಡೆಯೆತ್ತಿ ನಿಂತದ್ದು ಅಲ್ಲಿಯೇ. ಕನ್ನಡ ನಾಡಿನಲ್ಲಿ ಈ ಹೊಸ ಚೈತನ್ಯ ಹೊಮ್ಮುವುದು ಬಹು ನಿಧಾನವಾಯಿತು. ಆಳಿದ ಶ್ರೀ ಚಾಮರಾಜ ಒಡೆಯರ ಕಾಲದಲ್ಲೇ ನಮ್ಮ ನಾಡಿನಲ್ಲೂ ಹೊಸ ಕಾಲದ ಮುನ್ ಸೂಚನೆ ತೋರಿಬಂತು. ಆದರೂ ಕ್ರಿ. ಶ. ೧೯೦೦ದಿಂದೀಚೆಗೆ ಅದು ಸ್ಪಷ್ಟವಾಗಿ ಮೂಡಿತೆಂದು ಹೇಳಬಹುದು. ಜನಜೀವನದ ನಾನಾ ಕ್ಷೇತ್ರಗಳಲ್ಲಿ ಈ ಹೊಸ ಚೈತನ್ಯದ ಕುರುಹುಗಳು ಹೇಗೆ ಕಾಣುತ್ತಿವೆಯೆಂದು ನೋಡೋಣ.

ರಾಜಕೀಯವಾಗಿ ಕನ್ನಡನಾಡು ತನ್ನ ಪುರಾತನ ಪ್ರಭಾವವನ್ನು ಈಗ ಕಳೆದುಕೊಂಡಿದೆ. ನವೀನ ಭಾರತದಲ್ಲಿ ತನ್ನ ಸಹಜ ಸ್ಥಾನವನ್ನು ಪಡೆಯಲೂ ಬಹಳ ಹೆಣಗಬೇಕಾಗಿದೆ. ಸಾವಿರ ವರ್ಷಕ್ಕೆ ಹಿಂದೆ ಕನ್ನಡಿಗರು ಉತ್ತರ ಹಿಂದೂಸ್ಥಾನದ ರಾಜಕೀಯದಲ್ಲಿಯೂ ತಮ್ಮ ಪ್ರಭಾವವನ್ನು ಬೀರುತ್ತಿದ್ದರು. ಗುಜರಾತು ಮುಂತಾದ ಕಡೆಗಳಲ್ಲಿ ಕನ್ನಡ ಮನೆತನದ ರಾಜರು ಆಳುತ್ತಿದ್ದರು. ಗಂಗಾ ಯಮುನೆಗಳಲ್ಲಿ ತಮ್ಮ ದಂಡಿನ ಆನೆ ಕುದುರೆಗಳನ್ನು ಮೀಯಿಸಿದುದಾಗಿ ಕೆಲವು ರಾಜರ ಶಾಸನಗಳಿಂದ ತಿಳಿಯಬರುತ್ತದೆ. ಕಾಲಕ್ರಮದಲ್ಲಿ ಆ ಪ್ರಭಾವ ದಕ್ಷಿಣ ಭಾರತದಲ್ಲಿ ಮಾತ್ರ ಉಳಿಯಿತು. ಹೊಯ್ಸಳರೂ ವಿಜಯನಗರದರಸರೂ ಭಾರತ ಸಂಸ್ಕೃತಿಯ ರಕ್ಷಣೆಗೆ ವಿಶೇಷ ನೆರವಾಗಿ ಚಿರಸ್ಮರಣೀಯರಾಗಿದ್ದಾರೆ. ಈಚೆಗೆ ಬರಬರುತ್ತ ರಾಜಕೀಯದಲ್ಲಿ ಕನ್ನಡಿಗರ ಪ್ರಭಾವ ಕುಗ್ಗುತ್ತ ಬಂತು. ಅಲ್ಲದೆ, ಕನ್ನಡನಾಡಿನೊಳಗೂ ಹೊರಗಿನವರ ಪ್ರಭಾವ ಬೇರೂರಿತು. ೧೦ನೆಯ ಶತಮಾನದಲ್ಲಿ ಗೋದಾವರಿಯ ವರೆಗೂ ವ್ಯಾಪಿಸಿದ್ದ ಕನ್ನಡನಾಡು ಕುಗ್ಗುತ್ತ ಕುಗ್ಗುತ್ತ ಕೃಷ್ಣಾನದಿಯನ್ನು ಮುಟ್ಟತೊಡಗಿತು. ಅದೂ ವಿಜಯನಗರ ಮುರಿದುಬಿದ್ದ ಮೇಲೆ ಚೂರುಚೂರಾಯಿತು. ಈಚೆಗೆ ಹೈದರ್ ಟಿಪ್ಪೂ ಸುಲ್ತಾನರ ಕಾಲದಲ್ಲಿ ಕನ್ನಡನಾಡಿನ ಬಹು ಭಾಗ ಮತ್ತೆ ಒಂದು ಆಳಿಕೆಗೆ ಸೇರಿದಂತಾಗಿತ್ತು. ಟಿಪ್ಪೂ ಸುಲ್ತಾನನ ಪತನವಾಗಿ ರಾಜ್ಯ ಇಂಗ್ಲಿಷರಿಗೆ ಸೇರಿದ ಮೇಲೆ ಈ ನಾಡು ಮತ್ತೆ ಚೂರುಚೂರಾಗಿ ಹಲವು ಆಡಳಿತಗಳಲ್ಲಿ ಹಂಚಿಹೋಯಿತು. ರಾಜಕೀಯವಾಗಿ ಜನ ಒಂದಾಗಲು ಅವಕಾಶವೇ ಇಲ್ಲವಾಯಿತು. ೨೦-೨೨ ಆಡಳಿತಗಳಲ್ಲಿ ಸೇರಿ ಕನ್ನಡ ಜನ ಪರಸ್ಪರ ದೂರವಾಗುತ್ತ ಬಂದರು. ನೂರಾರು ವರ್ಷಕಾಲ ಹೀಗೆ ಸೀಳು ಹೋಳುಹೋಳಾದ ಕನ್ನಡನಾಡು ಮತ್ತೆ ಒಂದಾಗಿ ಕೂಡುವುದು ಇಂದಿನ ಸಮಸ್ಯೆ.

ಕನ್ನಡನಾಡಿನ ಈ ಹಲವು ಹೋಳುಗಳಲ್ಲಿ ಕೊಡಗು, ಮದರಾಸು ಬೊಂಬಾಯಿ ಪ್ರಾಂತಗಳ ಕನ್ನಡ ಜಿಲ್ಲೆಗಳು— ಇವು ಮಾತ್ರ ನೇರವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದವು. ಉಳಿದ ಭಾಗಗಳೆಲ್ಲಾ ಮೈಸೂರು, ಹೈದರಾಬಾದು, ಮುಂತಾದ ಹಲವಾರು ದೇಶೀಯ ಸಂಸ್ಥಾನಗಳಲ್ಲಿ ಸೇರಿದ್ದವು. ಮೈಸೂರನ್ನು ಬಿಟ್ಟರೆ ಉಳಿದ ಸಂಸ್ಥಾನಗಳಲ್ಲಿ ಮುಕ್ಕಾಲು ಮೂರುವೀಸ ಪಾಲು ರಾಜರು ಕನ್ನಡಿಗರಲ್ಲ; ಅನ್ಯಭಾಷೆಯವರು. ಆ ರಾಜರು ತಮ್ಮ ಮಾತೃಭಾಷೆಗೇ ವಿಶೇಷ ಗಮನ ಕೊಟ್ಟು ಕೇವಲ ಪ್ರಜೆಗಳ ಭಾಷೆಯಾದ ಕನ್ನಡವನ್ನು ಕಡೆಗಣಿಸಿದ್ದರು. ಮೈಸೂರಿನಲ್ಲಿ ಮಾತ್ರ ಪರಿಸ್ಥಿತಿ ಮೇಲಾಗಿತ್ತು. ಇಲ್ಲಿನ ರಾಜರು ಅಚ್ಚಕನ್ನಡಿಗರು. ದೇಶವಿಸ್ತಾರ ಪ್ರಜಾ ಸಂಖ್ಯೆಗಳಲ್ಲಿಯೂ ಮೈಸೂರು ಗಣ್ಯವಾಗಿದೆ. ಒಟ್ಟು ಕನ್ನಡನಾಡಿನಲ್ಲಿ ಅರ್ಧ ಭಾಗದಷ್ಟು ಇಡಿಯಾಗಿ ಮೈಸೂರಿನಲ್ಲಿ ಸೇರಿದೆ. ಇದೊಂದು ಸುಯೋಗವೆನ್ನಬೇಕು. ಇಲ್ಲಿನ ಪುರಾತನ ರಾಜಮನೆತನದವರು ಮೊದಲಿನಿಂದಲೂ ಕನ್ನಡತನವನ್ನು ಕಾದುಕೊಂಡು ಬಂದಿದ್ದಾರೆ; ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಸಾಂಕುಶ ಪ್ರಭುತ್ವವನ್ನು ರೂಢಿಗೆ ತಂದು ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಸ್ಥಾಪಿಸಿ ಬೆಳಸಿ, ಜನಕ್ಕೆ ರಾಜ್ಯಾಡಳಿತದ ಅನುಭವವನ್ನೂ ಒದಗಿಸುತ್ತಾ ಬಂದಿದ್ದಾರೆ. ಹೀಗೆ ಮೈಸೂರು ದೊಡ್ಡ ಕನ್ನಡ ರಾಜ್ಯವಾಗಿ ಉಳಿದದ್ದು ಅಖಿಲ ಕರ್ನಾಟಕದ ಏಳಿಗೆಗೂ ಎಷ್ಟೋ ನೆರವಾಗಿದೆಯೆಂದು ಹೇಳಬಹುದು.

ಮೈಸೂರು ಹೊರತು ಬೇರೆ ಸಂಸ್ಥಾನಗಳಲ್ಲಿ ಪ್ರಜೆಗಳು ಅರಸರ ಸ್ವಭಾಷಾ ಬಂಧುಗಳಲ್ಲವಾದ್ದರಿಂದ ಅನಾದರಣೆಗೆ ಗುರಿಯಾಗಿದ್ದರು. ಪರ ಭಾಷೆಯ ಹೊರ ಜನರ ಪ್ರಭಾವಕ್ಕೆ ಸಿಕ್ಕಿ ಕುಗ್ಗಿದ್ದರು. ಬ್ರಿಟಿಷರ ನೇರ ಪ್ರಭುತ್ವದಲ್ಲಿದ್ದ ಪ್ರದೇಶಗಳಲ್ಲಿ ಕೂಡ ಕನ್ನಡಿಗರ ಸ್ಥಿತಿ ಅಷ್ಟೇನು ಮೇಲಾಗಿರಲಿಲ್ಲ. ಆ ಒಂದೊಂದು ಪ್ರದೇಶದಲ್ಲಿಯೂ ಕನ್ನಡ ಜನ ಅತ್ಯಂತ

ಅಲ್ಪ ಸಂಖ್ಯೆಯವರಾಗಿ ತಮ್ಮ ಯಾವೊಂದು ಕಾರ್ಯಕ್ಕೂ ಬೇರೆಯವರನ್ನು ಅವಲಂಬಿಸಲೇ ಬೇಕಾದ ದೈನ್ಯ ಸ್ಥಿತಿಯಲ್ಲಿದ್ದರು. ಇದರಿಂದ, ಕನ್ನಡ ಜನ ಒಂದುಗೂಡಿ ಸಂಘಟಿತರಾಗುವುದು ಕಷ್ಟವಾಯಿತು. ಪ್ರಬಲವಾದ ಬೇರೆ ಬೇರೆ ಭಾಷೆಗಳ ಜನರ ನಡುವೆ ತಕ್ಕ ಸ್ಥಾನ ಗಳಿಸಲು ಕನ್ನಡಿಗರು ಬಹಳ ಹೆಣಗಬೇಕಾಗಿದೆ.

ಬ್ರಿಟಿಷರು ಭರತಖಂಡವನ್ನು ಬಿಟ್ಟು ಹೊರಟು ಹೋಗಿ ನಮಗೆ ಸ್ವರಾಜ್ಯ ಲಭಿಸಿದ ಮೇಲೂ ಕನ್ನಡದ ಸಮಸ್ಯೆ ಪರಿಹಾರವಾಗಿಲ್ಲ. ಸಮಸ್ಯೆಯ ಉಗ್ರತೆ ಸ್ವಲ್ಪ ಕಡಮೆಯಾಗಿದೆ; ಅಷ್ಟೇ ದೇಶೀಯ ಸಂಸ್ಥಾನಗಳು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಸ್ವತಂತ್ರ ಭಾರತದೊಡನೆ ಸೇರಿಹೋದ ಬಳಿಕ, ಮೊದಲು ೨೦-೨೨ ಭಾಗಗಳಾಗಿದ್ದ ಕನ್ನಡನಾಡು ಈಗ ೪-೫ ಭಾಗ ಮಾತ್ರ ಆಗಿದೆ. ಆದರೂ ಹಿಂದಿನಿಂದ ಬೆಳೆದು ಬಂದ ಪ್ರತ್ಯೇಕತಾ ಭಾವನೆ ಸುಲಭವಾಗಿ ಅಳಿಯುವ ಹಾಗಿಲ್ಲ. ಈ ಪ್ರತ್ಯೇಕತಾ ಭಾವನೆಯಿಂದ ಕನ್ನಡನಾಡಿನ ಏಕೀಕರಣಕ್ಕೆ ಚಿತ್ರವಿಚಿತ್ರವಾದ ಅಡ್ಡಿ ಆತಂಕಗಳು ತಲೆಯೆತ್ತುತ್ತಲೇ ಇವೆ. ಎಷ್ಟೇ ಅಡ್ಡಿ ಬಂದರೂ ಎದುರಿಸಿ ಪರಿಹರಿಸಿಕೊಂಡು ಕನ್ನಡ ನಾಡಿನ ಏಕೀಕರಣವನ್ನು ಸಾಧಿಸಲೇ ಬೇಕೆಂದು ಜನದ ಸಂಕಲ್ಪ. ಕನ್ನಡ ಜನದ ಸರ್ವತೋಮುಖವಾದ ಏಳಿಗೆಗೆ ಕನ್ನಡನಾಡು ರಾಜಕೀಯವಾಗಿಯೂ ಒದಗಬೇಕೆಂಬುದು ಇಂದಿನವರ ದೃಢವಾದ ನಂಬಿಕೆ. 'ಕರ್ನಾಟಕ ಏಕೀಕರಣ ಚಳವಳಿ'ಯಲ್ಲಿ ಈ ನಂಬಿಕೆ ಸ್ಪಷ್ಟವಾಗಿ ರೂಪುಗೊಂಡಿದೆ.

ಈ ಸಂಧಿ ಕಾಲದಲ್ಲಿ ಗಡಿನಾಡಿನ ಕನ್ನಡಿಗರ ಹೊಣೆ ಹೆಚ್ಚಾಗಿದೆ. ಹಿಂದಿನಂತೆಯೇ ಈಗಲೂ ಕನ್ನಡನಾಡು ಕುಗ್ಗಿ ಹೋಗದಂತೆ ಗಡಿಗಳನ್ನು ಪ್ರಯತ್ನಪಟ್ಟು ಉಳಿಸಿಕೊಳ್ಳ ಬೇಕಾಗಿದೆ. ಈ ಪ್ರಯತ್ನದಲ್ಲಿ ಮರಾಠಿ, ತೆಲುಗು, ತಮಿಳು ಮಲೆಯಾಳ ಭಾಷಾ ಬಂಧುಗಳೊಡನೆ ಸ್ವಲ್ಪಮಟ್ಟಿಗೆ ತಿಕಾಟಕ್ಕೂ ಸಿದ್ಧರಾಗಬೇಕಾಗಿದೆ. ಇದು ಕನ್ನಡದ ವಿಶೇ ಸಮಸ್ಯೆ.

ಇರುವ ತೊಡಕುಗಳು ಪರಿಹಾರವಾಗಿ ಕನ್ನಡನಾಡ ಒಂದಾದರೆ, ಬಹು ಭದ್ರವಾದ ಸ್ವಸಂಪೂರ್ಣವಾದ ಒಂದ ಪ್ರಾಂತವಾಗುತ್ತದೆ. ನಾಡು ಏಳಿಗೆ ಹೊಂದಿ ಹಿಂದಿನಂತೆಯೆ ಮುಂದೂ ಕೂಡ ಸ್ವತಂತ್ರ ಭಾರತದ ಮತ್ತು ಭಾರತ ಸ ಸ್ಕೃತಿಯ ಆಧಾರಸ್ತಂಭವಾಗುತ್ತದೆ. ಹಾಗಾಗಲೆಂಬ ಪವಿತ್ರ ಧ್ಯೇಯದಿಂದ ಕನ್ನಡಿಗರು ದುಡಿಯುತ್ತಿದ್ದಾರೆ.

ಸಾಮಾಜಿಕ ಸಮಸ್ಯೆಗಳು ಇಷ್ಟು ಸುಲಭವಾಗಿ ಹಿ ತಕ್ಕೆ ಸಿಕ್ಕುವವುಗಳಲ್ಲ. ಅವುಗಳ ಸಂಖ್ಯೆಗೂ ಮಿತಿಯಿಲ್ಲ ಅವೆಲ್ಲ ಮುಕ್ಕಾಲು ಪಾಲು ಭರತಖಂಡದ ಸಮಸ್ತ ಪ್ರದೇ ಗಳಿಗೂ ಸಮಾನವಾದವೇ? ಸ್ಥೂಲವಾಗಿ ಕೆಲವನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ.

ಹಿಂದೆ ಸಮಾಜ ಜೀವನದಲ್ಲಿ ಒಂದು ಬಗೆಯ ಕಟ್ಟು ಇತ್ತು. ಸಾಧಾರಣವಾಗಿ ಸರ್ವರೂ ಅದನ್ನು ಮನ್ನಿಸ ತ್ತಿದ್ದರು. ಈಗ ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಮುಖ ಸ್ಥಾ ಬಂದಿದೆ. ಆದರಿಂದ ಅಂದಿನ ಕಟ್ಟು ಸಡಿಲವಾಗಿದೆ. ಉದ ಹರಣೆಗೆ, ಕುಟುಂಬ ಜೀವನವನ್ನು ತೆಗೆದುಕೊಳ್ಳೋಣ ಹಿಂದಿನ ಕಾಲದಲ್ಲಿ ತಂದೆತಾಯಿ, ಅಣ್ಣತಮ್ಮಂದಿರು, ಮಕ್ಕಳ ಮೊಮ್ಮಕ್ಕಳು, ಅವರ ಹೆಂಡಿರು ಮಕ್ಕಳು—ಹೀಗೆ ಒಂದ ಕುಟುಂಬಕ್ಕೆ ಸೇರಿದವರೆಲ್ಲ ಏಕ ಗೃಹಕೃತ್ಯದಲ್ಲೇ ಇರುತ್ತಿದ್ದದ ಸರ್ವಸಾಮಾನ್ಯವಾಗಿತ್ತು. ಈಗ ಈ ರೀತಿಯ ಒಟ್ಟು ಕುಟುಂ ಜನಕ್ಕೆ ಬೇಡವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ 'ಗಂಡ-ಹೆಂಡತಿ-ಮಕ್ಕಳು' ಇಷ್ಟು ಮಂದಿ ಮಾತ್ರ ಅವರಷ್ಟಕ್ಕವರ ಸ್ವತಂತ್ರವಾಗಿರಬಹುದಾದ ಪ್ರತ್ಯೇಕ ಕುಟುಂಬ ಪದ್ಧತಿ ಜನಾದರಣೀಯವಾಗಿದೆ. ಒಟ್ಟು ಕುಟುಂಬದಲ್ಲಿ ಅಶಕ್ತರಿಗೂ ಸಂಪಾದನೆಯಿಲ್ಲದವರಿಗೂ ಆಶ್ರಯ, ರಕ್ಷಣೆ ತಾನಾಗಿಯೆ ದೊರಕುತ್ತಿತ್ತು. ಈಗ ಅದು ಇಲ್ಲ. ಅದರೂ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆ ಕೊಡುವ ಈಗಿನವರಿಗೆ, ಹಿಂ ನವರಂತೆ ಬೇರೆಯವರಿಗಾಗಿ ಕಡ್ಡಾಯವಾಗಿ ದುಡಿಯುವುದು ಬಲವಂತದ ಸ್ವಾರ್ಥತ್ಯಾಗ–ರುಚಿಸುವುದಿಲ್ಲ. ಕುಟುಂಬದ ಆಶ್ರಯ ತಪ್ಪಿದ್ದರಿಂದ ವ್ಯಕ್ತಿಹಿತ ಸಾಧನೆಗಾಗಿ ಸಹಕಾರ ವಿಮೆ ಮುಂತಾದ ಹೊಸ ಹೊಸ ಹಂಚಿಕೆ ಆಗಬೇಕಾಗಿದೆ.

ಇದೇ ಮಾತು ಗ್ರಾಮ ಜೀವನಕ್ಕೂ ಅನ್ವಯಿಸುತ್ತದೆ ಹಿಂದಿನ ಗ್ರಾಮಗಳಲ್ಲಿ ಎಲ್ಲರೂ ಒಂದು ಕುಟುಂಬಕ್ಕೆ ಸೇ ದವರಂತೆ ಇರುತ್ತಿದ್ದರು. ಊರಿಗೆಲ್ಲ ಹಿರಿಯರಾಗಿ ಯಾರೊ ಕೆಲವರನ್ನು ಒಪ್ಪಿ ಅವರ ಮಾತಿನಂತೆ ನಡೆಯುತ್ತಿದ್ದರು ಸಮಾಜದ ಮುಂದಾಳುಗಳು, ಕುಲದ ಹಿರಿಯರು, ಯ ಮಾನರು–ಊರಿನ ಎಲ್ಲ ವ್ಯವಸ್ಥೆಗಳನ್ನೂ ನೋಡಿಕೊಳ್ತ ತ್ತಿದ್ದರು. ಒಬ್ಬ ವ್ಯಕ್ತಿಗೆ, ಒಂದು ಕುಟುಂಬಕ್ಕೆ ಅಥವಾ

ಒಟ್ಟು ಊರಿಗೆ ಸಂಬಂಧಪಟ್ಟ ಯಾವುದೇ ಸಂಗತಿಯಾದರೂ ಅವರ ತೀರ್ಮಾನಕ್ಕೆ ಒಳಪಟ್ಟೇ ಇರುತ್ತಿತ್ತು. ಈಗ ಹಾಗಿಲ್ಲ. ಈ ಹಿರಿಯರ ಮಾತಿಗೆ ಬೆಲೆಯಿಲ್ಲ. ಅವರ ಕಟ್ಟು ಯಾರಿಗೂ ಬೇಕಿಲ್ಲ. ಮಠಗಳ, ಸಭೆಗಳ ವ್ಯವಸ್ಥೆಯಲ್ಲಿ ಆದರ ತಪ್ಪಿದೆ. ಕಾನೂನು, ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ಬಳಕೆ ಹೆಚ್ಚಿದೆ. ವ್ಯಕ್ತಿಹಿತ ಈಗಿನ ಸ್ಥಿತಿಯಲ್ಲಿ ಇದರಿಂದಲೇ ಹೆಚ್ಚಾಗಿ ಸಿದ್ಧಿಸಬಹುದೋ ಏನೋ! ಹೀಗೆ ಸಮಾಜ ಜೀವನ ಒಡೆದಿರುವುದಾದರೂ ಎಲ್ಲರೂ ಒಟ್ಟುಗೂಡಿದಲ್ಲದೆ ಪೂರ್ಣಹಿತ ಸಾಧಿಸುವುದಿಲ್ಲ. ಈ ಅರಿವೂ ಈಗಿನವರಿಗಿದೆ. ಸಮಷ್ಟಿಹಿತ ಸಾಧನೆಗಾಗಿ ಗ್ರಾಮ ಪಂಚಾಯಿತಿ, ಪೌರ ಸಭೆ, ಸಹಕಾರ ಸಂಘ ಮುಂತಾದ ಸಾರ್ವಜನಿಕ ಸಂಸ್ಥೆಗಳು ತಲೆದೋರಿವೆ. ಆದರೆ ಈ ಸಹಕಾರದ ಪಾಠ ನಮ್ಮವರಿಗೆ ಇನ್ನೂ ಚೆನ್ನಾಗಿ ಅರ್ಥವಾದಂತೆ ತೋರುವುದಿಲ್ಲ.

ಹಿಂದೆ ಬೇರೆ ಬೇರೆ ವೃತ್ತಿಗಳವರು ಕೂಡ ತಮ್ಮ ತಮ್ಮ ಸೇವೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಬಾಳುತ್ತಿದ್ದರು. ಆ ವೃತ್ತಿಗಳೂ ವಂಶಪರಂಪರೆಯಾಗಿ ಬರುತ್ತಿದ್ದುವು. ಈಗ ಯಾವ ಒಂದು ವೃತ್ತಿಯನ್ನೂ ಅವಲಂಬಿಸುವುದೂ ವ್ಯಕ್ತಿಯ ಇಷ್ಟ. ಯಾರು ಯಾವ ವೃತ್ತಿಯನ್ನು ಬೇಕಾದರೂ ಅವಲಂಬಿಸಬಹುದು. ಇದರಿಂದ ವ್ಯಕ್ತಿ ವಿಕಾಸಕ್ಕೆ ಹೆಚ್ಚು ಅವಕಾಶವಾಗಿದೆ; ಕಾರ್ಯಕ್ಷೇತ್ರ ವಿಸ್ತಾರವಾಗಿದೆ. ಆದರೆ ಎಷ್ಟೋ ವೇಳೆ, ವಂಶಪರಂಪರೆಯಿಂದ ಬರಬಹುದಾದ ಯೋಗ್ಯತಾ ಸಿದ್ಧಿ ಕಡಮೆಯಾಗಿದೆ.

ಜಾತಿ ಪದ್ಧತಿಯ ಕಟ್ಟುಗಳು ಹಿಂದೆ ಮೀರಲಾರದವಾಗಿದ್ದವು. ಈಗ ಅವನ್ನು ಅನೇಕ ರೀತಿಗಳಲ್ಲಿ ಮೀರುತ್ತಿರುವುದು ಸರ್ವಸಾಧಾರಣವಾಗಿದೆ. ಜಾತಿ ಜಾತಿಗಳಲ್ಲಿ ಕೀಳು ಮೇಲು ಭಾವನೆಗಳೂ ಪರಸ್ಪರ ದ್ವೇಷಾಸೂಯೆಗಳೂ ಅಂತಃಕಲಹಗಳೂ ಹಿಂದೆ ಹೆಚ್ಚಾಗಿದ್ದವು. ಈಗ ಅವೆಲ್ಲ ಮಾಯವಾಗುತ್ತ ಬರುತ್ತಿವೆ. ಕೇವಲ ರಾಜಕೀಯ ಕಾರಣಗಳಿಗೆಂದು ಕಾಣುತ್ತದೆ, ಹಿಂದು-ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರ ಭೇದಭಾವಗಳು ಮಾತ್ರ ಇನ್ನೂ ಉಳಿದಿವೆ. ಇದರಿಂದಲೂ ಆಗುತ್ತಿರುವ ಅನರ್ಥವೇನು ಕಡೆಗಣಿಸುವ ಹಾಗಿಲ್ಲ.

ಒಟ್ಟಿನಲ್ಲಿ ಕನ್ನಡನಾಡು ಮತಸಹಿಷ್ಣುತೆಯ ಬೀಡು, ಜೈನ-ಬೌದ್ಧ, ಶೈವ-ವೈಷ್ಣವ, ದ್ವೈತ-ಅದ್ವೈತ-ವಿಶಿಷ್ಟಾದ್ವೈತ, ಹಿಂದೂ-ಮುಸಲ್ಮಾನ-ಕ್ರೈಸ್ತ ಮೊದಲಾದವರೆಲ್ಲ ಸಮರಸವಾಗಿ ಹೊಂದಿಕೊಂಡಿರುವುದು ಇಲ್ಲಿನ ವೈಶಿಷ್ಟ್ಯ. ಜಾತಿಮತಗಳ ಈ ಸಮತೂಕ ಎಲ್ಲೋ ಕೆಲವು ಕಡೆ ತಪ್ಪಿದೆಯೆಂದೋ, ತಕ್ಕಷ್ಟು ಸಾಮರಸ್ಯ ಇಲ್ಲವೆಂದೋ ಸುಧಾರಣೆಯ ಪ್ರಯತ್ನ ನಡೆಯುತ್ತಿದೆ. ಅಸ್ಪೃಶ್ಯತಾ ನಿವಾರಣೆಯನ್ನು ಉದಾಹರಣೆಯಾಗಿ ಹೇಳಬಹುದು. ಕೋಮುವಾರು ಭಾವನೆ ತಾತ್ಕಾಲಿಕವಾಗಿ ಹೆಚ್ಚಾಗಿ ಕಂಡರೂ, ರಾಷ್ಟ್ರಭಾವನೆ ಬೆಳೆಯುತ್ತಾ ಬಂದಂತೆಲ್ಲ ಅದರ ಉಗ್ರತೆ ಕಡಮೆಯಾಗುತ್ತದೆ. ಪ್ರತ್ಯೇಕ ಕೋಮುಗಳ ಸಂಘಟನೆಯಾದರೆ ರಾಷ್ಟ್ರ ಹಿತ ಸಾಧನೆಯಾಗುವುದು ಸುಲಭ. ಆ ಪ್ರಯತ್ನವೂ ತಕ್ಕಮಟ್ಟಿಗೆ ಆಗುತ್ತಿದೆ.

ಈಗ ಗ್ರಾಮಗಳು ಹೀನ ದೆಸೆಗೆ ಬಂದು ಪಟ್ಟಣಗಳು ಜೇಗಬೇಗ ಬೆಳೆಯುತ್ತಿವೆ. ಕೈಗಾರಿಕೆಗಳು ಬೆಳೆಯುತ್ತಿರುವುದೇ ಇದಕ್ಕೆ ಕಾರಣ. ವ್ಯವಸಾಯಕ್ಕೆ ಲಾಭವಿಲ್ಲವಾಗಿದೆ; ಸಣ್ಣಪುಟ್ಟ ಕೈಗಾರಿಕೆಗಳೂ ನಶಿಸುತ್ತಿವೆ. ಹಳ್ಳಿಯ ಜೀವನದ ಅಸೌಕರ್ಯ ಹೇಳತೀರದು. ಈ ಪರಿಸ್ಥಿತಿಗೆ ಕಾರಣವೇನೆಂದು ತಿಳಿದು ಪರಿಹಾರ ಕಾರ್ಯ ಕೈಕೊಳ್ಳಬೇಕಾಗಿದೆ.


ಸದ್ಯದ ಪರಿಸ್ಥಿತಿಯನ್ನರಿತು ಮುಂದಿನ ಏಳಿಗೆಯನ್ನು ಸಾಧಿಸಬೇಕಾದರೆ ಬಹಳ ಕೆಲಸಮಾಡಬೇಕು. ಜನರಲ್ಲಿ ತಿಳಿವಳಿಕೆ ಹರಡಬೇಕು; ಪ್ರಯತ್ನಮಾಡುವ ಮನಸ್ಸು ಬರಬೇಕು; ತಕ್ಕ ಸಾಧನ ಸಂಪತ್ತು ಒದಗಬೇಕು. ಈಗ ಅಧಿಕಾರಕ್ಷೇತ್ರಗಳಲ್ಲಿ, ಸಾರ್ವಜನಿಕ ಪ್ರಭಾವಿಸ್ಥಾನಗಳಲ್ಲಿ, ಕೈಗಾರಿಕೆ ವ್ಯಾಪಾರಾದಿಗಳಲ್ಲಿ—ಎಲ್ಲ ಕಡೆಯಲ್ಲೂ ಒಟ್ಟಿನಲ್ಲಿ ಕನ್ನಡಿಗರು ಹಿಂದುಳಿದಿದ್ದಾರೆ. ರಾಜಕೀಯವಾಗಿ ದೇಶ ತುಂಡಾಗಿರುವುದೂ ಇದರ ಜೊತೆಗೆ ಇತ್ತೀಚಿನ ವರೆಗೂ ನಾಡಿಗೆ ಸ್ವಾತಂತ್ರ್ಯವಿಲ್ಲದಿದ್ದದ್ದೂ ಈ ಸ್ಥಿತಿಗೆ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದಾದರೂ ಜನದ ಸ್ವಭಾವದೋಷವೂ ತಕ್ಕಮಟ್ಟಿಗೆ ಕಾರಣವೆಂದು ಧಾರಾಳವಾಗಿ ಹೇಳಬಹುದು. ಸಾಧಾರಣವಾಗಿ ಕನ್ನಡಿಗರು ತಮ್ಮ ಸ್ಥಳ ಮನೆ ಬಿಟ್ಟು ಹೋಗಲು ಹಿಂದೆಗೆಯುತ್ತಾರೆ; ಅಲ್ಪತೃಪ್ತರು; ಸಾಹಸಪರರಲ್ಲ. ತಮಿಳುನಾಡಿನಿಂದ, ಉತ್ತರ ದೇಶದಿಂದ, ಕಡೆಗೆ ದೂರದ ಕಾಂದಹಾರ್ ಅಫ್ಘಾನಿಸ್ಥಾನಗಳಿಂದ ಜನ ಬಂದು ಇಲ್ಲಿ ದುಡಿದು ಸುಖ ಸಾಧಿಸುತ್ತಿರುವಾಗ, ಅದನ್ನು ಸದಾ ನೋಡುತ್ತ ನಮ್ಮ ಜನ ನಿರಾತಂಕವಾಗಿ ಸುಮ್ಮನಿದ್ದುಬಿಡುತ್ತಾರೆ. ಉದ್ಯೋಗ ತತ್ಪರರಾಗಿ ಮುಂದಕ್ಕೆ ಬರಲು ತಕ್ಕಷ್ಟು ಪ್ರಯತ್ನಮಾಡುವುದಿಲ್ಲ. ಈ ಉದಾಸೀನ ಸ್ವಭಾವ—ಸ್ವಲ್ಪ ಮಟ್ಟಿಗೆ ಸೋಮಾರಿತನವೆಂದರೂ ಒಪ್ಪುತ್ತದೆ—ಮೈಸೂರಿನವರಾದ ಕನ್ನಡಿಗರಲ್ಲಿ ಉಳಿದವರಿಗಿಂತಲೂ ಹೆಚ್ಚಾಗಿ ಕಂಡು ಬರುತ್ತದೆ. ಸರ್ಕಾರದ ಅಧಿಕಾರಕ್ಷೇತ್ರಗಳೂ ಕೋಟ್ಯಂತರ ರೂಪಾಯಿ ಬಂಡವಾಳದ ಕೈಗಾರಿಕೆಗಳೂ ಹಾಗಿರಲಿ, ಕೇವಲ ಪ್ರಜಾಸಂಸ್ಥೆಯಾದ ಮತ್ತು ಸೇವಾಕ್ಷೇತ್ರವೆನಿಸಿದ ಅಖಿಲ ಭಾರತ ಕೊಂಗ್ರೆಸ್ಸಿನಲ್ಲಿ ಕೂಡ ಪ್ರಧಾನ ಸ್ಥಾನಗಳಿಗೆ ಪ್ರಭಾವಶಾಲಿಗಳಾದ ಕನ್ನಡಿಗರು ಕೇವಲ ಇತ್ತೀಚಿನ ವರೆಗೂ ಯಾರೂ ಬಂದಿರಲಿಲ್ಲ. ಈ ಬಗೆಯ ನಿಷ್ಪ್ರಯತ್ನ ಅಥವಾ ಔದಾಸೀನ್ಯ ಈಗೀಗ ಕಡಿಮೆಯಾಗುತ್ತಿದೆ. ವಿದ್ಯೆ ಹೆಚ್ಚಿ ಜನಕ್ಕೆ ನಿಜವಾದ ಪರಿಸ್ಥಿತಿಯ ಅರಿವು ಆದಂತೆಲ್ಲ ಸ್ಥಳೀಯವಾದ, ವೈಯಕ್ತಿಕವಾದ ಮತ್ತು ಕೋಮುವಾರು ಭಾವನೆಯ ದೃಷ್ಟಿ ಹೋಗಿ

ಅಖಿಲ ಕರ್ನಾಟಕ ದೃಷ್ಟಿ ಬರುವುದರಲ್ಲಿ ಸಂದೇಹವಿಲ್ಲ. ಆ ಸೂಚನೆ ಸ್ವಲ್ಪಸ್ವಲ್ಪವಾಗಿ ಕಾಣುತ್ತಿದೆ. ಹೊರನಾಡಿನಲ್ಲಿ ನೆಲಸಿದ ಕನ್ನಡಿಗರೂ 'ಮೈಸೂರಿನವರು, ಮಂಗಳೂರಿನವರು, ಧಾರವಾಡದವರು' ಎಂಬ ಭೇದವನ್ನು ಮರೆತು 'ಕರ್ನಾಟಕ ಸಂಘ'ಗಳಲ್ಲಿ ಸೇರಿ ಒಂದಾಗುವ ಮನೋಭಾವವನ್ನು ತೋರಿಸುತ್ತಿದ್ದಾರೆ. ಒಳನಾಡಿನಲ್ಲಿ ಕೂಡ ಮೇಲೆ ಸೂಚಿಸಿದ ಕುಂದುಕೊರತೆಗಳನ್ನು ಪರಿಹರಿಸಿ ಅಭಿವೃದ್ಧಿಯನ್ನು ಸಾಧಿಸುವ ಪ್ರಯತ್ನ ಹಲವು ಬಗೆಯಲ್ಲಿ ನಡೆಯುತ್ತಿದೆ. ಇದರಿಂದ ಇದುವರೆಗಾಗಲೆ ಕನ್ನಡನಾಡಿನಲ್ಲಿ ನೆಲಸಿ ಬೇರೂರಿರುವ ಕನ್ನಡೇತರ ಜನರೊಡನೆ ಸ್ವಲ್ಪ ತೊಡಕು ತಲೆದೋರುವ ಸಂಭವವೂ ಬಂದೀತು. ಆದರೆ ಪೂರ್ವಾಪರಗಳನ್ನು ಚೆನ್ನಾಗಿ ಪರಿಶೀಲಿಸಿ, ರಾಷ್ಟ್ರಹಿತವನ್ನು ಗುರಿಯಾಗಿಟ್ಟುಕೊಂಡು ತಾಳ್ಮೆಯಿಂದ ಮುಂದುವರಿದರೆ, ಸರ್ವಸಮಂಜಸವಾಗುವಂತೆ ಸಮಸ್ಯೆಗಳನ್ನು ಬಗೆಹರಿಸಿಕೊಂಡು ನಾಡಿನ ಮಂಗಳವನ್ನು ಸಾಧಿಸಬಹುದು.

ಈ ಹೊಸ ದೃಷ್ಟಿಗೆ ಕನ್ನಡದ ಆಧುನಿಕ ಸಾಹಿತ್ಯವೇ ಪ್ರಧಾನ ಕಾರಣವೆನ್ನಬಹುದು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ಶ್ರೀ ಚಾಮರಾಜ ಒಡೆಯರ ಕಾಲದಲ್ಲಿ ಹಿಂದಿನ ಸಂಪ್ರದಾಯದ ಮಹಾ ಪಂಡಿತರುಗಳು ಸಂಸ್ಕೃತ ಸಾಹಿತ್ಯದ ಸಾರವನ್ನು ತಿಳಿಗನ್ನಡಕ್ಕೆ ತಂದರು. ಇಂಗ್ಲಿಷಿನ ಪ್ರಭಾವವನ್ನೂ ಅರಿತು ಅದನ್ನೂ ಕನ್ನಡಕ್ಕೆ ತರಲು ಪ್ರಯತ್ನಿಸಿದರು. ನಾಟಕ ಸಂಘಗಳು ಮೊಟ್ಟಮೊದಲು ರಾಜಾಶ್ರಯದಲ್ಲಿ ರೂಪುಗೊಂಡವು; ರಾಜಪೋಷಣೆಯಿಂದ ಬೆಳೆಯುತ್ತ ಬಂದವು. ಕೇವಲ ಪೌರಾಣಿಕ ವಸ್ತುಗಳನ್ನು ಕುರಿತು ಮಹಾ ಕಾವ್ಯಗಳ ಮೂಲಕವೇ ಹರಿಯುತ್ತಿದ್ದ ಕಾವ್ಯಸಾರ ಸಾಧಾರಣ ಜನಕ್ಕೆ ಮುಟ್ಟಬಹುದಾದ ಸುಲಭ ಕಾವ್ಯಪ್ರಬಂಧಗಳ ಮೂಲಕವೂ ಪ್ರವಹಿಸತೊಡಗಿತು. ಹಳೆಯ ಓಲೆಗರಿಗಳಲ್ಲಿ ಅಡಗಿ ಹುರಿಯಾಗಿದ್ದ ಪುರಾತನ ಗ್ರಂಥಗಳು ಒಂದೊಂದಾಗಿ ಅಚ್ಚಾಗಿ ಬೆಳಕಿಗೆ ಬಂದವು. ಇವೆಲ್ಲ ಜನರಲ್ಲಿ ಹರಡಿ ಹೊಸ ಬೆಳಕು ಮೂಡತೊಡಗಿತು. ಅಷ್ಟರಲ್ಲಿ ಶ್ರೀ ಗಳಗನಾಥರೂ ವೆಂಕಟಾಚಾರ್ಯರೂ ಮರಾಠಿ ಮತ್ತು ಬಂಗಾಳಿ ಸಾಹಿತ್ಯಗಳಿಂದ ಜನಜಾಗೃತಿ ಸಾಧಕವಾದ ಅನೇಕ ಕಾದಂಬರಿಗಳನ್ನು ಕನ್ನಡಕ್ಕೆ ತಂದರು. ಶ್ರೀ ಎಂ. ಎಸ್. ಪುಟ್ಟಣ್ಣನವರು ಮೈಸೂರಿನ ಹಿಂದಿನ ಜೀವನವನ್ನು ಚೆನ್ನಾಗಿ ಚಿತ್ರಿಸುವ ಕಾದಂಬರಿ ಮತ್ತು ಜೀವನಕಥೆಗಳನ್ನು ಸ್ವತಂತ್ರವಾಗಿಯೇ ರಚಿಸಿ ಪ್ರಚುರಪಡಿಸಿದರು. ಇನ್ನೂ ಹಲವರು ಹಿರಿಯರು ಸಾಹಿತ್ಯಕ್ಷೇತ್ರದಲ್ಲಿ ಗದ್ಯ, ಪದ್ಯ, ನಾಟಕ, ಕಥೆ, ಕಾದಂಬರಿ ಮುಂತಾದ ನಾನಾ ಪ್ರಕಾರಗಳಲ್ಲಿಯೂ ಹೊಸ ಹೊಸ ಪ್ರಯತ್ನಗಳನ್ನು ನಡಸಿ ನವಚೈತನ್ಯವನ್ನು ಪ್ರಚೋದಿಸಿದರು. ವಿಷಯ ಜನಸಾಮಾನ್ಯಕ್ಕೆ, ಇಂದಿನ ಜೀವನಕ್ಕೆ ಸಂಬಂಧಪಟ್ಟಿರುವುದು. ಭಾಷಾಶೈಲಿ ಜನರ ಬಳಕೆ ಮಾತಿಗೆ ಹತ್ತಿರ ಹತ್ತಿರ ಬರುವುದು; ಛಂದಸ್ಸಿನಲ್ಲಿ ಸರಳತೆ, ವೈವಿಧ್ಯ, ಸ್ವಾತಂತ್ರ್ಯ—ಇವು ಈ ಹೊಸ ಸಾಹಿತ್ಯದ ಲಕ್ಷಣವೆಂದು ಸ್ಥೂಲವಾಗಿ ತಿಳಿಯಬಹುದು. ದೇಶಪ್ರೇಮವನ್ನು ಉಕ್ಕಿಸುವ ಬರವಣಿಗೆಯೇ ನವೀನ ಸಾಹಿತ್ಯದಲ್ಲಿ ಹೆಚ್ಚು ಭಾಗ. ಭಾವಗೀತ, ಸಣ್ಣ ಕಥೆ, ಗೀತ ನಾಟಕ, ವಿಡಂಬನ ಮುಂತಾದ ತೀರ ಹೊಸ ರೂಪಗಳೂ ಕಾಣಿಸಿಕೊಂಡವು. ಈ ನವ ಸಾಹಿತ್ಯ ಈಗ ಹಲವು ಮುಖವಾಗಿ ಹರಿಯುತ್ತಿದೆ.

ಹಿಂದಿನ ಕಾಲದಲ್ಲಿ ಸಾಹಿತ್ಯಕ್ಕೆ ರಾಜಾಶ್ರಯವಿತ್ತು. ಈಗಿನ ಸಾಹಿತ್ಯ ಜನಾಶ್ರಯದಲ್ಲಿ ಬಾಳಬೇಕಾಗಿದೆ, ಬೆಳೆಯಬೇಕಾಗಿದೆ. ಯಾವುದನ್ನೇ ಆದರೂ ಜನಸಾಮಾನ್ಯಕ್ಕೆ ನಿಲುಕುವಂತೆ ವಿವರಿಸುವ ಸಾಹಿತ್ಯಕ್ಕೇ ಈಗ ಬೆಲೆ. ಅಲ್ಲದೆ, ಸಾಹಿತ್ಯ ಕೇವಲ ಆತ್ಮಸಂತೋಷ ವಿದ್ವತ್ಪ್ರದರ್ಶನಗಳಿಗೆ ಮಾತ್ರವೇ ಅಲ್ಲದೆ ಜೀವನಸಾಧನವಾದ ವೃತ್ತಿಯೂ ಆಗಿದೆ. ಸಾಹಿತ್ಯವನ್ನೇ ಮುಖ್ಯ ವೃತ್ತಿಯಾಗಿ ಕೈಕೊಂಡ ಕನ್ನಡಿಗರೂ ಇದ್ದಾರೆ. ಲೇಖಕರು, ಮುದ್ರಕರು, ಪ್ರಕಾಶಕರು, ಪುಸ್ತಕವ್ಯಾಪಾರಿಗಳು—ಇವರೆಲ್ಲ ಈಗಿನ ಸಾಹಿತ್ಯ ಪ್ರಚಾರದ ಅವಶ್ಯ ಅಂಗಗಳು. ಈ ಅಂಗಗಳೆಲ್ಲ ಹೊಂದಿಕೆಯಾಗಿ ಕೆಲಸಮಾಡಿ ಸಾಹಿತ್ಯ ಮುಂದುವರಿಯಬೇಕಾಗಿದೆ.

ಸಂಗೀತ, ನಾಟ್ಯ, ಶಿಲ್ಪ, ಚಿತ್ರ–ಈ ಕುಶಲ ಕಲೆಗಳ ಸ್ಥಿತಿ ಈಗ ಹೇಗಿದೆಯೆಂಬುದನ್ನು ಪರಿಶೀಲಿಸೋಣ. 'ಕರ್ಣಾಟಕ ಸಂಗೀತ'ವೆಂದು ಹೆಸರುಹೊಂದಿದ ಸಂಗೀತಪದ್ಧತಿಯಲ್ಲಿ ಆಧುನಿಕ ಪ್ರಗತಿಯೇನಾಗಿದೆಯೆಂಬುದು ಇನ್ನುಮೇಲೆ ನಿರ್ಧರವಾಗಬೇಕು. ಸಂಗೀತ ವಿದ್ವಾಂಸರೂ ಸಂಘ ಸಂಸ್ಥೆಗಳನ್ನು ಕಟ್ಟಿ ಸಂಘಟಿತರಾಗಿ ಕಾರ್ಯತತ್ಪರರಾಗಿರುವುದು ಶುಭಸೂಚನೆ. ಕರ್ಣಾಟಕ ಶಿಲ್ಪ ಪದ್ಧತಿ ಎಂದೋ ಅಳಿದುಹೋಯಿತು. ಮೈಸೂರು ರಾಜಮನೆತನದ ಕೃಪೆಯಿಂದ ಕರ್ಣಾಟಕ ಶಿಲ್ಪದ ಉತ್ತಮ ಮಾದರಿಗಳು ಇನ್ನೂ ಉಳಿದುಕೊಂಡಿವೆ. ಶ್ರೀ। ವೆಂಕಟಪ್ಪನವರಂಥ ಲೋಕಪ್ರಸಿದ್ಧ ಚಿತ್ರಕಲಾ ನಿಪುಣರು ನಮ್ಮಲ್ಲಿ ಹುಟ್ಟಿ ನಮ್ಮ ನಡುವೆಯೇ ನೆಲಸಿರುವರಾದರೂ ಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ನಮ್ಮ ನಾಡಿನಲ್ಲಿ ಇಲ್ಲ. 'ಕರ್ಣಾಟಕ ಚಿತ್ರ ಕಲೆ' ಎನ್ನಬಹುದಾದ ಚಿತ್ರ ಪದ್ಧತಿ ಬೆಳೆದು ಬರಲಿಲ್ಲ. ಕನ್ನಡಿಗರಲ್ಲಿ ಕೆಲವು ನಾಟ್ಯ ರೀತಿಗಳು ಮೊದಲಿನಿಂದಲೂ ನಡೆದು ಬಂದಿವೆ. ಶ್ರೀ। ಕುಲಕರಣಿ ಶ್ರೀನಿವಾಸರೂ ಶ್ರೀ। ಶಿವರಾಮ ಕಾರಂತರೂ ಹಳೆಯ ಪದ್ಧತಿಗೆ ಒಪ್ಪಕೊಟ್ಟು ನವೀನ ಸುಧಾರಣೆಗಳನ್ನು ಮಾಡಿದ್ದಾರೆ. ಶ್ರೀ। ಕಾರಂತರದ್ದು ಸ್ವಸಂತೋಷದ ಕಾರ್ಯ; ವೃತ್ತಿಯಲ್ಲ. ವೃತ್ತಿಯಾಗಿ ಮಾಡಿಕೊಂಡು ಬಯಸುವವರಿಗೆ ಶಿಕ್ಷಣ ಕೊಡಬೇಕೆಂದು ಪ್ರಯತ್ನಿಸಿದ ಶ್ರೀ। ಕುಲಕರಣಿಯವರು ಕನ್ನಡ ನಾಡನ್ನು ಬಿಟ್ಟು ಹೋಗಿ ಮದರಾಸಿನಲ್ಲಿ ನೆಲಸಬೇಕಾಯಿತು.



1951ನೇ ಎಪ್ರಿಲ್ ತಿಂಗಳಲ್ಲಿ, ಕಾರ್ಕಳದಲ್ಲಿ ಮಹಾಮಸ್ತಕಾಭಿಷೇಕ ನಡೆದಾಗ, ಗೊಮ್ಮಟೇಶ್ವರ ವಿಗ್ರಹದ ಸುತ್ತಲೂ ಕಟ್ಟಿಸಿದ ಅಟ್ಟವಳಿಗೆ.



ಕಾರ್ಕಳದ ಗೊಮ್ಮಟೇಶ್ವರ ವಿಗ್ರಹ

ಬಾಹುಬಲಿ ಮೂರ್ತಿಯ ಸ್ಥಾಪನೆಯ ಬಗ್ಗೆ



ಜೈನ ಸಿದ್ಧಾಂತದ ಪ್ರಕಾರ ಎಂಟು ವಿಧವಾದ ಕರ್ಮಗಳಲ್ಲಿ ಜ್ಞಾನಾವರಣವೇ ಮೊದಲಾದ ನಾಲ್ಕು ವಿಧನಾದ ಘಾತಿಯ ಕರ್ಮಗಳು ನಷ್ಟವಾದೊಡನೆ ಪ್ರತಿಯೊಬ್ಬ ಮುಕ್ತಾತ್ಮನಿಗೆ ಕೇವಲ ಜ್ಞಾನ(ಪೂರ್ಣ ಜ್ಞಾನ)ವು ಪ್ರಾಪ್ತವಾಗುವುದು. ಆಗಲೇ ಆ ಪರಮಯೋಗಿಯು ಸರ್ವಜ್ಞನೆಂದು ಕರೆಯಲ್ಪಡುವನು. ಮುಕ್ತಿಯನ್ನು ಪಡೆಯುವ ಪ್ರತಿಯೊಬ್ಬ ಆತ್ಮನು ಮೊದಲು ಅನಿವಾರ್ಯರೂಪದಿಂದ ಕೇವಲ ಜ್ಞಾನವನ್ನು ಪಡೆಯಲೇಬೇಕು. ಜೈನ ಧರ್ಮದಲ್ಲಿ ಕೇವಲ ಜ್ಞಾನವನ್ನು ಪಡೆದ ಪ್ರತಿಯೊಬ್ಬ ಆತ್ಮನಿಗೆ ಕೇವಲಿಯೆಂಬ ಸಂಕೇತ. ಈ ಕೇವಲಿಗಳಲ್ಲಿ ಇಪ್ಪತ್ತನಾಲ್ಕು ಮಂದಿ ತೀರ್ಥಕರರನ್ನು ಬಿಟ್ಟು ಉಳಿದ ಕೇವಲಿಗಳಿಗೆ ಸ್ವರ್ಗದ ದೇವತೆಗಳಿಂದ ವೈಭವಪೂರ್ವಕ ಆಚರಿಸಲ್ಪಡುವ ಗರ್ಭಾವತರಣವೇ ಮೊದಲಾದ ಐದು ಕಲ್ಯಾಣಗಳಿಲ್ಲ. ಅಂದರೆ ಗರ್ಭಾವತರಣ ಕಲ್ಯಾಣ ಜನ್ಮಾಭಿಷೇಕ ಕಲ್ಯಾಣ, ದೀಕ್ಷಾ ಕಲ್ಯಾಣ, ಕೇವಲ ಜ್ಞಾನ ಕಲ್ಯಾಣ ಮತ್ತು ನಿರ್ವಾಣ ಕಲ್ಯಾಣ ಇವು ಐದು ಕಲ್ಯಾಣ, ಗಳು ಸ್ವರ್ಗೀಯ ದೇವತೆಗಳಿಂದ ತೀರ್ಥಕರರಿಗೆ ಮಾತ್ರ ಜರಗಿಸಲ್ಪಡುವುವು. ದೇವತೆಗಳು ಈ ಕಲ್ಯಾಣಗಳನ್ನು ಇತರ ಕೇವಲಿಗಳಿಗೆ ಜರಗಿಸಿರುವ ಉಲ್ಲೇಖವು ನಮಗೆ ಜೈನ ಗ್ರಂಥಗಳಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ತೀರ್ಥಕರರ ಹಾಗೆಯೇ ಇತರ ಕೇವಲಿಗಳಿಗೂ ಗರ್ಭಾವತರಣವೇ ಮೊದಲಾದ ಕಲ್ಯಾಣಗಳು ತಮ್ಮ ಸಂಬಂಧಿಗಳಿಂದ ಹಾಗೂ ಮಹಾಜನರಿಂದ ಜರಗಿಸಲ್ಪಟ್ಟರಬೇಕೆಂಬುದು ನಿರ್ವಿವಾದವಾಗಿದ್ದರೂ ರೂಢಿಯಲ್ಲಿ ದೇವತೆಗಳು ಬಂದು ಅವರ ಮೂಲಕ ಜರಗಿಸ

ಒಟ್ಟನಲ್ಲಿ ಸಾಹಿತ್ಯವನ್ನುಳಿದು ಇತರ ಕುಶಲ ಕಲೆಗಳಿಗೆ ಕನ್ನಡನಾಡಿನಲ್ಲಿ ಸದ್ಯಕ್ಕೆ ಪ್ರೋತ್ಸಾಹ ಸಾಲದಾಗಿದೆ.

ಹೀಗಿದ್ದರೂ ಮೈಸೂರು ರಾಜಾಸ್ಥಾನದ ಕೃಪಾಶ್ರಯದಲ್ಲಿ ಈ ಸಮಸ್ತ ಕುಶಲ ಕಲೆಗಳೂ ತಕ್ಕಮಟ್ಟಿಗೆ ಪೋಷಣೆ ಹೊಂದುತ್ತಲೇ ಬಂದಿವೆ; ಎಂಥ ಕಠಿನ ಪರಿಸ್ಥಿತಿಯಲ್ಲೂ ಅಳಿಯದೆ ಉಳಿದಿವೆ. ಕುಶಲ ಕಲೆಗಳನ್ನು ಪೋಷಿಸಿಕೊಂಡು ಬಂದು ಸಂಸ್ಕೃತಿಯ ನಿಧಿಯನ್ನು ಉಳಿಸಿಕೊಟ್ಟಿರುವ ಈ ರಾಜಮನೆತನಕ್ಕೆ ನಾಡಿಗೆ ನಾಡೇ ಕೃತಜ್ಞವಾಗಿರಬೇಕು. ಇನ್ನು ಮುಂದೆ ಜನಪ್ರಭುತ್ವದ ಸ್ವತಂತ್ರ ವಾತಾವರಣದಲ್ಲಿ ಕುಶಲ ಕಲೆಗಳು ಅತಿಶಯವಾಗಿ ವಿಕಾಸ ಹೊಂದಿ ಆನಂದ ನೀಡುವುವೆಂದೂ ನಾಡು ಸರ್ವತೋಮುಖವಾಗಿ ಏಳಿಗೆಹೊಂದಿ ಸುಖದ ಬೀಡಾಗುವುದೆಂದೂ ಹಾರಯಿಸೋಣ.



ಲೇಖಕರು.

ಲ್ಪಡುವ ಕಲ್ಯಾಣಗಳೇ ಪಂಚ ಕಲ್ಯಾಣಗಳೆಂದು ಪ್ರಸಿದ್ಧವಾಗಿವೆ. ಆದುದರಿಂದ ಈಗಲೂ ಭಕ್ತರು ವೃಷಭಾದಿ ಮಹಾವೀರಾಂತ ಇಪ್ಪತ್ತನಾಲ್ಕು ಮಂದಿ ತೀರ್ಥಕರ ಕೇವಲಿಗಳಿಗೆ ಮಾತ್ರ ಪಂಚ ಕಲ್ಯಾಣಗಳನ್ನು ಜರಗಿಸುವ ಪದ್ಧತಿ ಮತ್ತು ದೇವಾಲಯಗಳಲ್ಲಿ ಈ ಇಪ್ಪತ್ತನಾಲ್ಕು ಮಂದಿ ತೀರ್ಥಕರ ಕೇವಲಿಗಳ ಮೂರ್ತಿಗಳನ್ನೇ ಸ್ಥಾಪಿಸುವ ರೂಢಿ.

ಬಾಹುಬಲಿಸ್ವಾಮಿ ಓರ್ವ ಸಾಮಾನ್ಯ ಕೇವಲಿಗಳಾಗಿರುವುದರಿಂದ ಇವರಿಗೆ ಪಂಚಕಲ್ಯಾಣಗಳು ಜರಗಿಸುವುದು ಶಾಸ್ತ್ರೀಯವೇ ಅಥವಾ ಅಶಾಸ್ತ್ರೀಯವೇ? ಅಶಾಸ್ತ್ರೀಯವಾಗಿರುವ ಪಕ್ಷದಲ್ಲಿ ಚಂದ್ರಮನೇ ಮೊದಲಾದ ಒಬ್ಬಿಬ್ಬರು ಕವಿಗಳು ಗರ್ಭಾವತರಣ ಜನ್ಮಕಲ್ಯಾಣಗಳ ಹೊರತು ಉಳಿದ ಮೂರು ಕಲ್ಯಾಣಗಳು ದೇವತೆಗಳಿಂದ ಇವರಿಗೆ ಜರಗಿಸಲ್ಪಟ್ಟಿದುವುವೆಂದು ಹೇಗೆ ಬರೆದರು ಎಂಬೊಂದು ಪ್ರಶ್ನೆಯು ನಮ್ಮ ಮುಂದೆ ಬಂದು ನಿಲ್ಲುವುದು. ವಿಜ್ಞಪಾಠಕರು ಈ ಸಂದರ್ಭದಲ್ಲಿ ಸ್ವಲ್ಪ ಆಳವಾಗಿ ವಿಚಾರಮಾಡುವುದು ಅತ್ಯಗತ್ಯ. ಬಾಹುಬಲಿಸ್ವಾಮಿಗೆ ಮೂರು ಕಲ್ಯಾಣಗಳು ಜರಗಿಸಲ್ಪಟ್ಟಿದ್ದುವೆಂದು ತಮ್ಮ ಗ್ರಂಥಗಳಲ್ಲಿ ಬರೆದಿರುವ ಚಂದ್ರಮನೇ ಮೊದಲಾದ ಆ ಕವಿಗಳು ತೀರ ಇತ್ತೀಚೆಯವರು ಹಾಗೂ ಸಾಮಾನ್ಯ ಗೃಹಸ್ಥರು. ಅವರ ಸಂಖ್ಯೆಯೂ ಹೆಚ್ಚಿಲ್ಲ. ಅಂದರೆ ಮತಸಂಗ್ರಹದ ದೃಷ್ಟಿಯಿಂದಲೂ ಅತ್ಯಲ್ಪ. ಹೀಗಿರುವಾಗ ನಾವು ಆಧುನಿಕ ಒಬ್ಬಿಬ್ಬರು ಕವಿಗಳ ಅಪೇಕ್ಷೆಯಿಂದ ಋಷಿಮಹರ್ಷಿಗಳೂ, ಅನೇಕ ಭಾಷೆಗಳಲ್ಲಿ ಪಂಡಿತರೂ, ಜೈನ ಸಿದ್ಧಾಂತದ ಮರ್ಮಜ್ಞರೂ, ಪೂರ್ಣ ಅನುಭವಿಗಳೂ ಆದ ಪೂರ್ವಕವಿಗಳ ಪರಂಪರಾಗತವಾದ ಶಾಸ್ತ್ರೀಯ ಮತವನ್ನು ಒಪ್ಪುವುದೇ ಯುಕ್ತಿಸಂಗತವಾಗಿದೆ.

ಒಂದು ಮಾತು. ಈ ಸಂದರ್ಭದಲ್ಲಿ ಚಂದ್ರಮಾದಿ ಕವಿಗಳು ಹಾಗೆ ಬರೆಯುವುದಕ್ಕೆ ಕಾರಣವೇನೆಂಬುದನ್ನು ನಾವು ವಿಚಾರಮಾಡುವುದೂ ಅಗತ್ಯ. ಜೈನರಲ್ಲಿ ಪರಂಪರೆಯಿಂದ ಪಂಚ ಕಲ್ಯಾಣಪೂರ್ವಕ ತೀರ್ಥಕರ ಕೇವಲಿಗಳ ಮೂರ್ತಿಗಳನ್ನೇ ದೇವಾಲಯಗಳಲ್ಲಿ ಸ್ಥಾಪಿಸುವ ಪದ್ಧತಿಯಾಗಿದ್ದರೂ ವಿಶೇಷ ಕಾರಣದಿಂದ ಸ್ಥಾಪಿಸಲ್ಪಟ್ಟ ಬಾಹುಬಲಿ ಮೂರ್ತಿಯು ಸ್ಥಾಪನಾಕಾಲದಲ್ಲಿ ತೀರ್ಥಕರ ಕೇವಲಿಗಳ ಆ ಹಿಂದಿನ ಪಂಚಕಲ್ಯಾಣಗಳನ್ನು ನೆನಸಿಕೊಂಡು ಬಾಹುಬಲಿ ಸ್ವಾಮಿಗೆ ತೀರ್ಥಕರ ಕೇವಲಿಗಳಂತೆ ಗರ್ಭಜನ್ಮಕಲ್ಯಾಣಗಳು ನಡೆಯದಿದ್ದರೂ ಉಳಿದ ಮೂರು ಕಲ್ಯಾಣಗಳು ಅವಶ್ಯ ನಡೆದಿರಬೇಕೆಂದು ತರ್ಕಿಸಿ ಪ್ರತಿಷ್ಠೆಯ ಉತ್ಸವಕ್ಕೆ ಅಲಂಕಾರವನ್ನು ತೊಡಿಸುವ ಸದುದ್ದೇಶದಿಂದ ಅವರು ಮೂರು ಕಲ್ಯಾಣಗಳನ್ನು ಕಲ್ಪಿಸಿಕೊಂಡಿರಬೇಕು. ವಸ್ತುತಃ ಜೈನ ಪೂಜೋತ್ಸವಗಳಲ್ಲಿ ಪಂಚ ಕಲ್ಯಾಣಕ್ಕಿಂತಲೂ ದೊಡ್ಡದಾದ ಪೂಜೋತ್ಸವವು ಬೇರೊಂದಿಲ್ಲ. ಪ್ರಭಾವನೆಯ ದೃಷ್ಟಿಯಿಂದಲೂ, ಪಂಚ ಕಲ್ಯಾಣ ಜೈನ ಪೂಜೋತ್ಸವಗಳಲ್ಲಿ ಅಗ್ರಸ್ಥಾನವನ್ನು ಗಳಿಸಿರುವ ಮಹತ್ತ್ವಪೂರ್ಣವಾದ ಒಂದು ಮಹೋತ್ಸವ. ಜೈನರು ತಮ್ಮ ಉತ್ಸವದ ಶೋಭೆಯನ್ನು ಹೆಚ್ಚಿಸುವ ಗುರಿಯಿಂದ ಬೇರೆ ಬೇರೆ ಉತ್ಸವಗಳಲ್ಲಿ ಬೇರೆ ಬೇರೆ ತೀರ್ಥಕರರ ಪಂಚ ಕಲ್ಯಾಣಗಳನ್ನು ವೈಭವದಿಂದ ಜರುಗಿಸುವ ಪದ್ಧತಿ.

ಇನ್ನು ನಾವು ಬಾಹುಬಲಿ ಮೂರ್ತಿಯ ಪ್ರಥಮ ಸಂಸ್ಥಾಪಕರು ಯಾರು ಯಾವ ಸದುದ್ದೇಶವನ್ನಿಟ್ಟುಕೊಂಡು ಅವರು ಈ ಮೂರ್ತಿಯನ್ನು ಪ್ರತಿಷ್ಠಿಸಿದರು ಎಂಬಂಶವನ್ನು ವಿಚಾರ ಮಾಡೋಣ. ಕ್ರಿ. ಶ. ಎಂಟನೆಯ ಶತಮಾನದ ಉದ್ದಾಮ ಸಂಸ್ಕೃತಮಹಾಕವಿಗಳೂ, ಸಿದ್ಧಾಂತವಿಶಾರದರೂ, ಮಹಾ ತಪಸ್ವಿಗಳೂ, ಪೂರ್ವ ಪುರಾಣವೇ ಮೊದಲಾದುವುಗಳ ಪ್ರಣೇತರೂ ಆದ ಆಚಾರ್ಯ ಜಿನಸೇನರ ಅಭಿಪ್ರಾಯದಂತೆ ಪ್ರಥಮ ತೀರ್ಥಕರರ ಮಗನಾದ ಚಕ್ರವರ್ತೀ ಭರತನೇ ಬಾಹುಬಲಿ ಮೂರ್ತಿಯ ಪ್ರಥಮ ಸಂಸ್ಥಾಪಕನು. ಜಿನಸೇನರ ಹೇಳಿಕೆಯಂತೆ ಭರತನು ಬಾಹುಬಲಿಯ ಆ ಮೂರ್ತಿಯನ್ನು ಪೌದನಪುರದಲ್ಲಿ ಸ್ಥಾಪಿಸಿದ್ದನು. ಆದರೆ ಜಿನಸೇನರ ಪೂರ್ವ ಪುರಾಣದಲ್ಲಿ ಹೇಳಲ್ಪಟ್ಟ ಆ ಪೌದನಪುರವೂ ಪೌದನಪುರದಲ್ಲಿ ಪ್ರತಿಷ್ಠಿಸಲ್ಪಟ್ಟಿದ್ದ ಬಾಹುಬಲಿಯ ಆ ಮೂರ್ತಿಯೂ ಈಗ ಮಾತ್ರ ಅಗೋಚರವಾಗಿವೆ. ನನಗೆ ತಿಳಿದಿರುವ ಮಟ್ಟಿಗೆ ಈಗ ನಮಗೆ ದೊರೆತಿರುವ ಬಾಹುಬಲಿಯ ಮೂರ್ತಿಗಳಲ್ಲಿ ವೀರಮಾರ್ತಂಡ ಚಾವುಂಡರಾಯನಿಂದ ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಶ್ರವಣಬೆಳ್ಗೊಳದಲ್ಲಿ ಸ್ಥಾಪಿಸಲ್ಪಟ್ಟ ಬಾಹುಬಲಿ ಮೂರ್ತಿಯೇ ಸರ್ವಪ್ರಾಚೀನವಾದುದು. ಅದನ್ನೇ ಆದರ್ಶವಾಗಿಟ್ಟುಕೊಂಡು ಕ್ರಿ. ಶ. ಹದಿನೈದರಲ್ಲಿ ವೀರಪಾಂಡ್ಯನಿಂದ ಕಾರ್ಕಳದಲ್ಲಿಯೂ ಕ್ರಿ. ಶ. ಹದಿನೇಳರಲ್ಲಿ ತಿಮ್ಮಣ್ಣಾಜಿಲನಿಂದ ವೇಣೂರಲ್ಲಿಯೂ ಬಾಹುಬಲಿಸ್ವಾಮಿಯ ಮೂರ್ತಿಗಳು ಸ್ಥಾಪಿಸಲ್ಪಟ್ಟುವು.

ಶ್ರವಣಬೆಳ್ಗೊಳದಲ್ಲಿ ಬಾಹುಬಲಿ ಮೂರ್ತಿಯನ್ನು ಸ್ಥಾಪಿಸಿದ ವೀರಮಾರ್ತಂಡ ಚಾವುಂಡರಾಯನು ಬ್ರಹ್ಮಕ್ಷತ್ರಿಯನು. ಇಷ್ಟೇ ಅಲ್ಲ; ಮಹಾವೀರನು. ಇವನು ಹಲವು ಯುದ್ಧಗಳಲ್ಲಿ ಕಾದಾಡಿ ವೀರಮಾರ್ತಂಡ, ರಣರಂಗಸಿಂಹ,

ಜಗದೇಕವೀರ, ಸಮರಧುರಂಧರ, ವೈರಿಕುಲಕಾಲದಂಡ, ಭುಜವಿಕ್ರಮ, ಸಮರಪರಶುರಾಮ, ಪ್ರತಿಪಕ್ಷರಾಕ್ಷಸ, ಭಟಮಾರಿ ಮತ್ತು ಸುಭಟಚೂಡಾಮಣಿ ಮೊದಲಾದ ಹಿರಿಯ ಉಪಾಧಿಗಳನ್ನು ಪಡೆದಿದ್ದನು. ಚಾವುಂಡರಾಯನು ಓರ್ವ ಅಪ್ರತಿಮ ವೀರನು ಮಾತ್ರವಲ್ಲ, ರಾಜನೀತಿವಿಶಾರದನೂ, ಉತ್ತಮ ಕವಿಯೂ, ಚಾರಿತ್ರನಿಷ್ಠನೂ ಆಗಿದ್ದನು. ಆದುದರಿಂದಲೇ ಇವನಿಗೆ ಕವಿಜನಶೇಖರ, ಸಮ್ಯಕ್ತ್ವರತ್ನಾಕರ, ಶೌಚಾಭರಣ, ಗುಣರತ್ನಭೂಷಣ ಮತ್ತು ಸತ್ಯಯುಧಿಷ್ಠಿರ ಮೊದಲಾದ ಬೇರೆ ಉಪಾಧಿಗಳೂ ಇದ್ದುವು. ರಾಜನೀತಿವಿಶಾರದನಾದ ಚಾವುಂಡರಾಯನು ಗಂಗವಂಶದ ಮೂರು ಮಂದಿ ಸುಶಾಸಕರ ಕೈಕೆಳಗೆ ಮಂತ್ರಿಯೂ ಸೇನಾಪತಿಯೂ ಆಗಿದ್ದನು. ಇವನು ಈ ಉತ್ತರದಾಯಿತ್ವಪೂರ್ಣವಾದ ತನ್ನ ಪದವನ್ನು ಬಹಳ ಯೋಗ್ಯತೆಯಿಂದ ನಿರ್ವಹಿಸಿದ್ದನು. ಇದಕ್ಕೆ ಆ ಶಾಸಕರಿಂದ ಬೇರೆ ಬೇರೆ ಸಂದರ್ಭಗಳಲ್ಲಿ ಸಮ್ಮಾನಪೂರ್ವಕವಾಗಿ ಕೊಡಲ್ಪಟ್ಟ ಬೇರೆ ಬೇರೆ ಉನ್ನತ ಉಪಾಧಿಗಳೇ ಸಾಕ್ಷಿಗಳಾಗಿವೆ. ಅಂತು ಇತಿಹಾಸದಲ್ಲಿ ವೀರಮಾರ್ತಂಡ ಚಾವುಂಡರಾಯನ ಹೆಸರು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾಗಿದೆ.

ಇನ್ನು ನಾವು ಪ್ರಸ್ತುತ ವಿಷಯವನ್ನು ತೆಗೆದುಕೊಳ್ಳೋಣ. ಚಾವುಂಡರಾಯನು ಧರ್ಮವಾತ್ಸಲ್ಯದಿಂದ ಪರಂಪರಾಗತ ಪದ್ಧತಿಯಂತೆ ಯಾವನಾದರೊಬ್ಬ ತೀರ್ಥಕರ ಕೇವಲಿಯ ಬಿಂಬವನ್ನು ನಿರ್ಮಾಣಮಾಡಿಸಿ ಹಾಗೂ ಪ್ರತಿಷ್ಠಿಸಿ ತನ್ನ ಆದರ್ಶ ಜೀವನವನ್ನು ಸಫಲಮಾಡಿಕೊಳ್ಳಬಹುದಾಗಿದ್ದರೂ ಆವನು ಹಾಗೆ ಮಾಡದೆ ಪರಂಪರಾಗತ ಪದ್ಧತಿಗೆ ಪ್ರತಿಕೂಲವಾಗಿ ಓರ್ವ ಸಾಮಾನ್ಯ ಕೇವಲಿಯಾದ ಶ್ರೀ ಬಾಹುಬಲಿಸ್ವಾಮಿಯ ಬಹುವ್ಯಯ ಮತ್ತು ಶ್ರಮಸಾಧ್ಯ ವಿಶಾಲಕಾಯ ಮೂರ್ತಿಯನ್ನು ನಿರ್ಮಾಣಮಾಡಿಸಿ ಪ್ರತಿಷ್ಠಿಸಿದುದರ ಕಾರಣವೇನೆಂಬುದನ್ನು ನಾವು ಕಂಡು ಹಿಡಿಯುವುದು ಅತ್ಯಗತ್ಯ. ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹೀಗಿದೆ– ಚಾವುಂಡರಾಯನು ಒಬ್ಬ ಅನುಪಮ ಕ್ಷತ್ರಿಯ ವೀರನು ಹಾಗೂ ತನ್ನ ಜೀವನದಲ್ಲಿ ತಾನು ಕೈಹಾಕಿದ ಪ್ರತಿಯೊಂದು ಭಯಂಕರ ಯುದ್ಧದಲ್ಲಿ ವಿಜಯಲಕ್ಷ್ಮಿಯನ್ನು ಕೈಹಿಡಿದ ಮಹಾವ್ಯಕ್ತಿ. ಇಂತಹ ಮಹಾವ್ಯಕ್ತಿಗೆ ಸಂಸಾರ ವಿಜಯಿಯೂ, ಕ್ಷತ್ರಿಯ ಪುಂಗವನೂ, ಮಹಾವೀರನೂ, ಲೌಕಿಕ ಪಾರಲೌಕಿಕಗಳೆರಡರ ಮಾರ್ಗದರ್ಶಕನೂ ಆದ ಓರ್ವ ಆದರ್ಶ ಮಹಾವ್ಯಕ್ತಿಯು ಬೇಕಾಗಿತ್ತು. ಚಾವುಂಡರಾಯನ ಸೂಕ್ಷ್ಮ ದೃಷ್ಟಿಯಲ್ಲಿ ಬಾಹುಬಲಿಯನ್ನು ಬಿಟ್ಟು ಇತರರಾರೂ ಈ ಸ್ಥಾನಕ್ಕೆ ಅರ್ಹರಾಗಿ ತೋರಲಿಲ್ಲ. ವಸ್ತುತಃ ಚಾವುಂಡರಾಯನಂತಹ ವೀರಕ್ಷತ್ರಿಯನಿಗೆ ಸಂಸಾರ ವಿಜಯಿಯಾದ ಬಾಹುಬಲಿಯೇ ಮಾರ್ಗದರ್ಶಕನಾಗಲು ಯೋಗ್ಯನು. ಬಾಹುಬಲಿಯು ನಿಜವಾಗಿ ಭರತಚಕ್ರಿಯಂತಹ ಷಟ್ಖಂಡಾಧಿಪತಿಯನ್ನು ಗೆದ್ದ ಅಪ್ರತಿಮ ವೀರನು. ಅಷ್ಟೇ ಅಲ್ಲ; ಗೆದ್ದ ಉತ್ತರ ಕ್ಷಣದಲ್ಲಿಯೇ ಸಂಸಾರದಿಂದ ವಿರಕ್ತನಾಗಿ ಸರ್ವಸ್ವವನ್ನು ಪರಿತ್ಯಾಗಮಾಡಿ ಮುಕ್ತಿಲಕ್ಷ್ಮಿಗಾಗಿ ಹೋರಾಡಿದ ಆದರ್ಶತ್ಯಾಗಿ ಹಾಗೂ ವೀರನು. ಇವನ ಲೌಕಿಕ ಪಾರಲೌಕಿಕ ಗುಣಗಳಿಗೆ ಮೆಚ್ಚಿಯೇ ಉಭಯಗುಣಕಾಂಕ್ಷಿಯಾದ ಚಾವುಂಡರಾಯನು ಬಾಹುಬಲಿಯನ್ನೇ ಆದರ್ಶವಾಗಿಟ್ಟುಕೊಂಡಿರಬೇಕು. ಇದು ಸರ್ವಥಾ ಸ್ವಾಭಾವಿಕವೂ ಆಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಜೈನರ ಅರವತ್ತಮೂರು ಮಹಾಪುರುಷರಲ್ಲಿ ಬಾಹುಬಲಿಯಿಂದ ದೊಡ್ಡ ವೀರ ಆದರ್ಶ ವ್ಯಕ್ತಿ ಬೇರೆ ಸಿಗಲಾರ.

ಈ ಪ್ರಕಾರ ಚಾವುಂಡರಾಯನಿಂದ ಸ್ಥಾಪಿಸಲ್ಪಟ್ಟ ಶ್ರವಣಬೆಳ್ಗೊಳದ ಬಾಹುಬಲಿ ಮೂರ್ತಿಯನ್ನು ನೋಡಿ ಕಾರ್ಕಳದ ಭೈರರಸವಂಶದ ದೊರೆಯಾದ ವೀರಪಾಂಡ್ಯನಿಗೂ ವೇಣೂರಿನ ಅಜಲವಂಶದ ದೊರೆಯಾದ ತಿಮ್ಮಣ್ಣಾಜಿಲನಿಗೂ ತಮ್ಮ ತಮ್ಮ ರಾಜಧಾನಿಯಾದ ಕಾರ್ಕಳ—ವೇಣೂರುಗಳಲ್ಲಿ ಶ್ರವಣಬೆಳ್ಗೊಳದಂತಹ ಬಾಹುಬಲಿಯ ಸಂಸಾರವಿಖ್ಯಾತ ವಿಶಾಲಕಾಯ ಮೂರ್ತಿಯನ್ನು ಪ್ರತಿಷ್ಠಿಸಬೇಕೆಂಬ ಹಿರಿಯ ಆಶೆಯು ಮೂಡಿತು. ಇದರ ಪರಿಣಾಮಸ್ವರೂಪವಾಗಿ ಕಾರ್ಕಳ ಮತ್ತು ವೇಣೂರಲ್ಲಿಯೂ ಬೇರೆ ಬೇರೆ ಶತಮಾನಗಳಲ್ಲಿ ಬಾಹುಬಲಿಯ ಚಿತ್ತಾಕರ್ಷಕವಾದ ವಿಶಾಲಕಾಯ ಮೂರ್ತಿಗಳು ಸ್ಥಾಪಿಸಲ್ಪಟ್ಟುವು. ಕ್ಷತ್ರಿಯ ವೀರರಾದ ಅಜಲ ಪಾಂಡ್ಯರು ವೀರಮಾರ್ತಂಡ ಚಾವುಂಡರಾಯನನ್ನು ಅನುಸರಿಸಿದುದು ಸರ್ವಥಾ ಉಪಯುಕ್ತವೇ ಆಗಿದೆ.

ಶ್ರೀ ರಾಮಕೃಷ್ಣ ದೇವರ ಸಂಕ್ಷಿಪ್ತ ಜೀವನ

ಶ್ರೀ ರಾಮಕೃಷ್ಣ ದೇವರು (ಕ್ರಿ. ಶ. ೨೦-೨-೧೮೩೬— ೧೬-೮-೧೮೮೬) ಇವರು ವಂಗದೇಶದ ಹುಗಲೀ ಜಿಲ್ಲೆಯ ಕಾಮಾರಪುಕುರು ಎಂಬ ಗ್ರಾಮದಲ್ಲಿ ಜನ್ಮವೆತ್ತಿದ್ದರು. ಇವರ ತಂದೆ ಕ್ಷುಧಿರಾಮ ಚಟ್ಟೋಪಾಧ್ಯಾಯರು ಅತಿ ನಿಷ್ಠಾವಂತ ಸದ್ಬ್ರಾಹ್ಮಣರು; ಅವರಲ್ಲಿ ಸತ್ಯನಿಷ್ಠೆ, ಸಂತೋಷ, ಕ್ಷಮೆ, ತ್ಯಾಗ ಮೊದಲಾದ ಗುಣಗಳು ಸ್ವಭಾವಸಿದ್ಧವಾಗಿದ್ದುವು. ಅವರು ರಘುವೀರನ ಉಪಾಸಕರಾಗಿದ್ದರು. ತಾಯಿಯ ಹೆಸರು ಚಂದ್ರಾಮಣೀ ದೇವೀ; ಇವರು ಸುರೂಪವತೀ, ಸರಳೆ ಹಾಗೂ ದೇವದ್ವಿಜಪರಾಯಣೆಯಾಗಿದ್ದರು; ನಿಸ್ಸೀಮ ಶ್ರದ್ಧೆ, ಸ್ನೇಹ ಹಾಗೂ ಪ್ರೀತಿಗಳೇ ಇವರ ವಿಶಿಷ್ಟಗುಣಗಳೆಂದು ನಿರ್ದೇಶಿಸಬಹುದು. ಶ್ರೀ ರಾಮಕೃಷ್ಣದೇವರು ಇವರ ತೃತೀಯ ಅಥವಾ ಕಿರಿಯ ಪುತ್ರರು.

ಕ್ರಿ. ಶ. ೧೮೩೫ರಲ್ಲಿ ಕ್ಷುಧಿರಾಮರು ಗಯಾಧಾಮ ತೀರ್ಥಯಾತ್ರೆಗೆ ಹೋಗಿದ್ದಾಗ ಅಲ್ಲಿಯ ಅಧಿಷ್ಠಿತ ದೇವತೆ ಗದಾಧರಸ್ವಾಮಿ ಅವರ ಅನನ್ಯ ಭಕ್ತಿಗೆ ಪ್ರಸನ್ನನಾಗಿ ಅವರಿಗೆ ಸ್ವಪ್ನದಲ್ಲಿ ದರ್ಶನಕೊಟ್ಟು ತಾನು ಅವರ ಮನೆಯಲ್ಲಿ ಜನ್ಮಗ್ರಹಣಮಾಡಿ ಬರುತ್ತೇನೆಂದು ವಾಗ್ದಾನ ಕೊಟ್ಟಿದ್ದನು. ಅವರು ಗಯಾಧಾಮದಿಂದ ಮರಳಿ ಬಂದ ಮೇಲೆ ಶ್ರೀರಾಮಕೃಷ್ಣರು ಅವರ ಮನೆಯಲ್ಲಿ ಜನ್ಮವೆತ್ತಿ ಬಂದುದರಿಂದ ಅವರಿಗೆ 'ಗದಾಧರ'ರೆಂದು ಹೆಸರುಕೊಟ್ಟರು.

ಶ್ರೀ ರಾಮಕೃಷ್ಣರು ಚಿಕ್ಕಂದಿನಿಂದಲೇ ಶ್ರುತಿಧರರಾಗಿದ್ದರು. ಭಾಗವತ, ರಾಮಾಯಣ, ಮಹಾಭಾರತಾದಿ ಗ್ರಂಥಗಳನ್ನು ಒಂದು ಬಾರಿ ಕೇಳಿಯೇ, ಅವರು ಅವನ್ನೆಲ್ಲ ಅಕ್ಷರಶಃ ಸ್ಮರಣೆಯಲ್ಲಿಡುತ್ತಿದ್ದರು. ಸಂಗೀತಜ್ಞಾನದಲ್ಲಿ ಕೂಡ ಅವರು ನಿಪುಣರಾಗಿದ್ದರು. ಅವರ ಇಂಪಾದ ಹಾಡನ್ನು ಒಂದು ಬಾರಿ ಕೇಳಿದವರು ಅದನ್ನೆಂದಿಗೂ ಮರೆಯುತ್ತಿದ್ದಿಲ್ಲ. ಅವರ ಇವೆಲ್ಲ ಗುಣಗಳಿಗೂ, ಸರಳ ವ್ಯವಹಾರ, ತೀಕ್ಷ್ಣಬುದ್ಧಿಗಳಿಗೂ ಆ ಗ್ರಾಮದ ಆಬಾಲವೃದ್ಧ ವನಿತೆಯರು ಮುಗ್ಧರಾಗಿ ಅವರನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ಅವರು ಬಾಲ್ಯದಿಂದಲೂ ಮನೋಹರವಾದ ದೃಶ್ಯವನ್ನು ಕಂಡೊಡನೆ ಅಥವಾ ಕರುಣಾತ್ಮಕವಾದ ಪ್ರಸಂಗವನ್ನು ಕೇಳಿದೊಡನೆ ಭಾವಸಮಾಧಿ ಭೂಮಿಗೆ ಆರೂಢರಾಗುತ್ತಿದ್ದರು. ಅವರ ಜೀವನದ ಉತ್ತ[ರ] ಕಾಲದಲ್ಲಿ ಸಮಾಧಿಯೆಂಬುದು ಒಂದು ಸ್ವಾಭಾವಿಕ ಅವಸ್[ಥೆ]ಯಾಗಿತ್ತು. ಅವರು ಬ್ರಾಹ್ಮಣಕುಟುಂಬದಲ್ಲಿ ಜನ್ಮವೆತ್[ತಿ] ಬಂದಿದ್ದರೂ, ಆಧುನಿಕ ಸನಾತನೀ ಬ್ರಾಹ್ಮಣರಿಗೆ ಸಮ್ಮ[ತ]ವಲ್ಲದ ತಮ್ಮ ಜಾತಿಯ ಗಡಿ ದುರ್ಗವನ್ನು ಅವರು ಚಿಕ್ಕಂ[ದಿ]ನಿಂದಲೇ ದಾಟಿದ್ದರು. ಅವರು ಕಾಮಾರಪುಕುರ ಗ್ರಾಮದಲ್[ಲಿ] ನೆರೆದ ಒಂದು ಬ್ರಾಹ್ಮಣ ಪಂಡಿತರ ಸಭೆಯಲ್ಲಿ ಏಸುಕ್ರಿಸ್[ತ]ನಂತೆ ಚಿಕ್ಕ ವಯಸ್ಸಿನಲ್ಲಿ ತಮ್ಮ ತೀಕ್ಷ್ಣಬುದ್ಧಿಯ ಪರಿಚಯವನ್ನು ಕೊಟ್ಟಿದ್ದರು. ಅವರು ಧ್ಯಾನಮಗ್ನ ಮೂರ್ತಿಯಾದ[ು]ದರಿಂದ ಅಂತರ್ಯದ ಅನಂತ ಜ್ಞಾನಾಶಯಕ್ಕೆ ಅವರಿಗೆ ಪ್ರವೇಶಾಧಿಕಾರವಿತ್ತೆಂದು ತೋರುತ್ತದೆ. ಅವರು ಸ್ಪಷ್ಟವಾದಿಗಳ[ಾ]ಗಿದ್ದರು. ಆಧುನಿಕ ವಿದ್ಯೆ 'ಹೊಟ್ಟೆ ಬಟ್ಟೆಯ ವಿದ್ಯೆ' ಎಂದ[ು] ಅವರು ಅದರ ಅಭ್ಯಾಸದಲ್ಲಿ ಉದಾಸೀನರಾಗಿದ್ದರು. ಅದ[ರಿಂ]ದ ಆಧುನಿಕ ವಿದ್ಯೆಯನ್ನು ಕಲಿಯದಿದ್ದರೂ ಉತ್ತರಕಾಲಕ್[ಕೆ] ಸ್ವಾಮಿ ವಿವೇಕಾನಂದರಂತಹ ಪ್ರವೀಣ ಅರ್ವಾಚೀನ ವಿದ್ವಾಂಸರು ಅವರ ಶಿಷ್ಯತ್ವವನ್ನು ಗ್ರಹಿಸಿದ್ದರು. ಹಿಂದೂಗಳ ವೇದವೇದಾಂತ ಶಾಸ್ತ್ರಗಳಿಂದ ಮೊದಲ್ಗೊಂಡು ಬೇರೆ ಬೇ[ರೆ] ಮತಸ್ಥರ ಗ್ರಂಥಗಳಲ್ಲಿದ್ದ ಆಧ್ಯಾತ್ಮಿಕ ಅವಸ್ಥೆಗಳ ವಿಷಯವ[ು] ಸತ್ಯವೆಂದೂ, ವಾಸ್ತವಿಕವಾಗಿ ಮನುಷ್ಯನು ಆ ಪಥಗಳನ್[ನು] ಅನುಸರಿಸಿದರೆ, ಆ ಅವಸ್ಥೆಗಳನ್ನು ಅನುಭವಿಸಬಹುದೆಂದೂ ಪ್ರಮಾಣೀಕರಿಸಲೋಸುಗವೇ ಈ ಬಾರಿ ಠಾಕೂರರು ನಿರಕ್ಷ[ರ]ರಾಗಿ ಅವತರಿಸಲು ಕಾರಣವೆಂದು ಸ್ವಾಮಿ ವಿವೇಕಾನಂದರ[ು] ಹೇಳಿದ್ದರು.

ಕ್ರಿ. ಶ. ೧೮೫೨ರಲ್ಲಿ ಶ್ರೀ ರಾಮಕೃಷ್ಣರು ಅಗ್ರಜ ರಾಮ[ಕುಮಾರ]... ಕುಮಾರರೊಂದಿಗೆ ಕಲ್ಕತ್ತೆಗೆ ಬಂದರು. ಕಲ್ಕತ್ತೆಯಿಂ[ದ] ಸುಮಾರು ಐದು ಮೈಲು ಉತ್ತರಕ್ಕಿರುವ ದಕ್ಷಿಣೇಶ್ವರದಲ್[ಲಿ] ರಾಣೀ ರಾಸಮಣಿಯಿಂದ ಪ್ರತಿಷ್ಠಿತವಾದ ಶ್ರೀ ಭವತಾರಿಣಿ ಕಾಳೀ ಮಂದಿರದ ಪೂಜಾರಿಯ ಕೆಲಸವನ್ನು ಕೈಕೊಂಡರು. ಇಲ್ಲಿಯೇ ಶ್ರೀ ರಾಮಕೃಷ್ಣರ ಆಧ್ಯಾತ್ಮಿಕತೆಯ ಅಪೂರ್ವವಾದ ಸ್ಫೂರ್ತಿ ಕಾಣಬಂದಿತ್ತು. ಇಲ್ಲಿ ಅವರು ಜಗನ್ಮಾತೆಯ ದರ್ಶನವನ್ನು ಪಡೆದುದಲ್ಲದೆ ಸುಮಾರು ೧೨ ವರುಷ ಎಲ್ಲ ಪ್ರಕಾರದ ದೈವ, ವೈಷ್ಣವ ಹಾಗೂ ತಾಂತ್ರಿಕ ಸಾಧನೆಗಳಲ್ಲಿ ಸಿದ್[ಧಿ]



ದಕ್ಷಿಣ ಕನ್ನಡ ಜಿಲ್ಲೆಯ ವೇಣೂರಿನಲ್ಲಿರುವ ಗೊಮ್ಮಟೇಶ್ವರ ವಿಗ್ರಹ.

ಯನ್ನು ಹೊಂದಿ ಕೊನೆಗೆ ವೇದಾಂತದ ಅದ್ವೈತಸಾಧನೆಯಿಂದ ನಿರ್ವಿಕಲ್ಪ ಸಮಾಧಿಯನ್ನು ಕೂಡ ಅನುಭವಿಸಿದ್ದರು. ಅನಂತರ ಇಸ್ಲಾಂ ಧರ್ಮಸಾಧನೆಯನ್ನು ಕೈಕೊಂಡು ಒಬ್ಬ ಜ್ಯೋತಿರ್ಮಯ ಪುರುಷಪ್ರವರನ ದಿವ್ಯದರ್ಶನವನ್ನು ಹೊಂದಿ ಸಗುಣ ವಿರಾಟಬ್ರಹ್ಮನ ಉಪಲಬ್ಧಿಯನ್ನು ಪಡೆದು ತುರೀಯ ನಿರ್ಗುಣ ಬ್ರಹ್ಮನಲ್ಲಿ ಅವರ ಮನಸ್ಸು ಲೀನವಾಗಿತ್ತು. ಆ ಬಳಿಕ ಏಸುಕ್ರಿಸ್ತನ ದರ್ಶನಮಾಡುವ ಇಚ್ಛೆ ಅವರ ಮನಸ್ಸಿನಲ್ಲಿ ಹುಟ್ಟುತ್ತಲೇ ಅದು ಅದ್ಭುತವಾದ ಉಪಾಯದಿಂದ ನೆರವೇರಿತು. ಈ ರೀತಿಯಾಗಿ ಶ್ರೀ ರಾಮಕೃಷ್ಣರು ಜಗತ್ತಿನಲ್ಲಿ ಪ್ರಚಲಿತ ಮುಖ್ಯವಾದ ಎಲ್ಲ ಧರ್ಮಮತಗಳಲ್ಲಿ ಸಿದ್ಧಿಯನ್ನು ಹೊಂದಿ ಅವರಿಗೆ ಕೆಲ ಅಸಾಧಾರಣವಾದ ಅನುಭವಗಳು ಉಂಟಾಗಿದ್ದುವು. ಅವು ಯಾವುವೆಂದರೆ—

(೧) ಅವರು ಈಶ್ವರ ಅವತಾರರೆಂದೂ, ಅವರ ಸಾಧನೆಗಳು ಇತರ ಜನರಿಗೋಸ್ಕರ ಸಾಧಿತವಾಗಿವೆ ಎಂದೂ ಅವರು ತಿಳಿದಿದ್ದರು.

(೨) ಇತರ ಜೀವಿಗಳಂತೆ ಅವರಿಗೆ ಮುಕ್ತಿಯಿಲ್ಲವೆಂಬುದು ಅವರ ಧಾರಣೆಯಾಗಿತ್ತು. 'ಸರಕಾರೀ ಹುದ್ದೇದಾರನು ರಾಜ್ಯದಲ್ಲಿ ಎಲ್ಲಿ ಹಾವಳಿಯಾಗುತ್ತದೋ ಅಲ್ಲಿ ಹೋಗಲೇ ಬೇಕು' ಎಂದು ಠಾಕೂರರು ಹೇಳುತ್ತಿದ್ದರು. ಉತ್ತರ-ಪಶ್ಚಿಮದಿಕ್ಕನ್ನು ತೋರಿಸಿ ಇನ್ನೊಮ್ಮೆ ಅವರಿಗೆ ಅಲ್ಲಿ ಅವತರಿಸಬೇಕಾಗುವುದೆಂದು ಅವರು ತಮ್ಮ ಶಿಷ್ಯರಿಗೆ ಅನೇಕಾವರ್ತಿ ಹೇಳಿದ್ದರು. 'ಇನ್ನೂರು ವರ್ಷಗಳ ಮೇಲೆ ಆ ದಿಕ್ಕಿಗೆ ಬರಬೇಕಾಗುತ್ತದೆ. ಆಗ ಅನೇಕರು ಮುಕ್ತಿಹೊಂದುವರು. ಆಗ ಯಾರಾದರೂ ಮುಕ್ತಿಪಡೆಯದಿದ್ದರೆ ಅವರು ಅದಕ್ಕೋಸ್ಕರ ಇನ್ನು ದೀರ್ಘ ಕಾಲ ಕಾದಿರಬೇಕು' ಎಂದು ಅವರು ಹೇಳಿದ್ದರು.

(೩) ಯೋಗಾರೂಢರಾಗಿ ಠಾಕೂರರು ತಮ್ಮ ದೇಹತ್ಯಾಗದ ಸಮಯವನ್ನು ಬಹು ಪೂರ್ವದಿಂದಲೇ ತಿಳಿದಿದ್ದರು.

(೪) ಸರ್ವಧರ್ಮಮತಗಳ ಸಾಧನೆಗಳಲ್ಲಿ ಸಿದ್ಧರಾಗಿ 'ಸಕಲ ಧರ್ಮಮತಗಳು ಸತ್ಯ. ಎಷ್ಟು ಮತಗಳಿವೆಯೋ ಅಷ್ಟೇ ಪಥಗಳು' ಎಂದು ಠಾಕೂರರಿಗೆ ದೃಢನಂಬಿಕೆಯಾಗಿತ್ತು. ಈ ಅನುಭವವನ್ನು ಪ್ರಚಾರಿಸಿ ಧರ್ಮವಿರೋಧವನ್ನೂ ಧರ್ಮಗ್ಲಾನಿಯನ್ನೂ ನಿವಾರಿಸುವುದಕ್ಕಾಗಿಯೆ ಠಾಕೂರರ ಆಗಮನ. ಯಾವ ಅವತಾರಪುರುಷರಾದರೂ ಈ ಮೊದಲು ಸಾಧನೆಯ ಸಹಾಯದಿಂದ ಆ ವಿಷಯವನ್ನು ತಮ್ಮ ಸ್ವಂತ ಜೀವನದಲ್ಲಿ ಸಂಪೂರ್ಣವಾಗಿ ಅನುಭವಿಸಿ ಅದನ್ನು ಜಗತ್ತಿಗೆ ಉಪದೇಶಿಸಲಿಲ್ಲ. ಆಧ್ಯಾತ್ಮಿಕಮತದ ಉದಾರತೆಯನ್ನು ಕಂಡು ಅವತಾರಪುರುಷರ ಸ್ಥಾನವನ್ನು ನಿರ್ದೇಶಿಸುವುದಾದರೆ ಶ್ರೀ ರಾಮಕೃಷ್ಣರಿಗೆ ನಿಸ್ಸಂದೇಹವಾಗಿ ಸರ್ವೋತ್ಕೃಷ್ಟವಾದ ಸ್ಥಾನವನ್ನು ಕೊಡಬೇಕು.

(೫) ದ್ವೈತ, ವಿಶಿಷ್ಟಾದ್ವೈತ ಅಥವಾ ಅದ್ವೈತಮತವನ್ನು ಮಾನವನು ಅವಸ್ಥಾಭೇದದಿಂದ ಅವಲಂಬಿಸಬೇಕು. ಈ ಅನುಭವಗಳು ಪ್ರತಿಯೊಬ್ಬ ಮನುಷ್ಯನ ಆಧ್ಯಾತ್ಮಿಕ ಉನ್ನತಿಯೊಂದಿಗೆ ತಾವಾಗಿಯೇ ಬಂದೊದಗುವುವು. ಅವುಗಳು ಪರಸ್ಪರ ವಿರೋಧವಲ್ಲ.

(೬) ಕರ್ಮಯೋಗದ ಅವಲಂಬನದಿಂದ ಸಾಧಾರಣ ಮಾನವನ ಉನ್ನತಿ ಸಾಧಿತವಾಗುವುದು.

(೭) ಶ್ರೀಜಗದಂಬೆಯ ಯಂತ್ರಸ್ವರೂಪರಾಗಿ ತಮ್ಮ ಜೀವನದಲ್ಲಿ ಪ್ರಕಾಶಿತವಾದ ಉದಾರಮತದ ಒಂದು ಸಂಪ್ರದಾಯವನ್ನು ಸ್ಥಾಪಿಸಬೇಕೆಂದು ಠಾಕೂರರು ಅನುಭವಿಸಿದ್ದರು. ಈ ಉದಾರಮತವನ್ನು ಪಡೆಯಲು ಅನೇಕ ಭಕ್ತರು ಅವರ ಬಳಿಗೆ ಬರುವರೆಂದು ಶ್ರೀಜಗದಂಬೆ ಅವರಿಗೆ ಕಾಣಿಸಿ ಕೊಟ್ಟಿದ್ದಳು. ಆ ವಿಷಯವು ನಿಜವಾಗಿಯೂ ನೆರವೇರಿತ್ತೆಂದು ಹೇಳುವುದು ಅನಾವಶ್ಯಕ. ಅವರು ಒಂದು ದಿನ ತಮ್ಮ ಛಾಯಾಚಿತ್ರವನ್ನು ನೋಡು ನೋಡುತ್ತ 'ಇದು ಅತ್ಯುಚ್ಚ ಯೋಗಾವಸ್ಥೆಯ ಚಿತ್ರ. ಇನ್ನು ಈ ತಸಬೀರನ್ನು ಪ್ರತ್ಯೇಕ ಮನೆಯಲ್ಲಿಯೂ ಪೂಜಿಸುವರು' ಎಂದು ಠಾಕೂರರು ಹೇಳಿದ್ದರು.

(೮) 'ಯಾರ ಜನ್ಮ ಕೊನೆಯದೋ ಅವರೆಲ್ಲ ನನ್ನ ಬಳಿಗೆ ಧರ್ಮವನ್ನು ಗಳಿಸಲು ಬರುವರು' ಎಂದು ಯೋಗದೃಷ್ಟಿಯಿಂದ ತಿಳಿದು ಅದರಲ್ಲಿ ಠಾಕೂರರು ವಿಶ್ವಾಸವುಳ್ಳವರಾಗಿದ್ದರು.

ಪೂರ್ವೋಕ್ತ ಅನುಭವಗಳನ್ನು ಹೊಂದಿದ ಕೆಲದಿನಗಳ ಬಳಿಕ ಅನೇಕಾನೇಕ ಭಕ್ತರೆಲ್ಲರೂ ಒಬ್ಬೊಬ್ಬರಾಗಿ ಬರಲಾರಂಭಿಸಿದರು. ಹಾಗೂ ಅವರ ಕೃಪೆಯನ್ನು ಹೊಂದಿ ಇಲ್ಲಿ ಧನ್ಯರಾಗಿದ್ದರು. ಕೆಲವು ಮುಖ್ಯ ಗೃಹಸ್ಥ, ಸನ್ಯಾಸೀ ಹಾಗೂ ಸನ್ಯಾಸಿನೀ ಭಕ್ತರ ಹೆಸರುಗಳನ್ನು ಉಲ್ಲೇಖಿಸುತ್ತೇವೆ:

ಗೃಹಸ್ಥ ಭಕ್ತರು—ಭಾರತವರ್ಷೀಯ ಬ್ರಾಹ್ಮಸಮಾಜದ ಮುಂದಾಳುವಾದ ಕೇಶವಚಂದ್ರಸೇನ, ಡಾಕ್ಟರ ರಾಮಚಂದ್ರ ದತ್ತ, ಮನಮೋಹನ ಮಿತ್ರ, ಸುರೇಂದ್ರನಾಥ ಮಿತ್ರ, ಕೇದಾರನಾಥ ಚಟರ್ಜಿ, ಬಲರಾಮ ಬಸು, 'ಶ್ರೀ ರಾಮಕೃಷ್ಣ ಕಥಾಮೃತ'ದ ಲೇಖಕ ಮಹೇಂದ್ರನಾಥ ಗುಪ್ತ.

ಗ್ರಹಸ್ಥ ಭಕ್ತರು—ದುರ್ಗಾಚರಣ ನಾಗ, ವಂಗದೇಶದ ಪ್ರಖ್ಯಾತ ನಟನಾಟಕಕಾರರಾದ ಗಿರೀಶಚಂದ್ರ ಘೋಷ, ದೇವೇಂದ್ರನಾಥ ಮಜುಮದಾರ ಇತ್ಯಾದಿ.

ಸಂನ್ಯಾಸೀ ಭಕ್ತರು—ಸ್ವಾಮೀ ವಿವೇಕಾನಂದ (ಇವರು ಶ್ರೀ ರಾಮಕೃಷ್ಣ ಸಂಘದ ಸ್ಥಾಪಕಾಚಾರ್ಯರು), ಬ್ರಹ್ಮಾನಂದ, ಶಿವಾನಂದ, ಶಾರದಾನಂದ (ಇವರು ಶ್ರೀ ರಾಮಕೃಷ್ಣ ಲೀಲಾಪ್ರಸಂಗದ ಲೇಖಕರು), ಪ್ರೇಮಾನಂದ, ರಾಮಕೃಷ್ಣಾನಂದ, ತುರೀಯಾನಂದ, ಯೋಗಾನಂದ, ಅದ್ಭುತಾನಂದ, ಅದ್ವೈತಾನಂದ, ನಿರಂಜನಾನಂದ, ಅಖಂಡಾನಂದ, ತ್ರಿಗುಣಾ

ತೀತಾನಂದ, ವಿಜ್ಞಾನಾನಂದ, ಅಭೇದಾನಂದ, ಸುಬೋಧಾನಂದ.

ಸಂನ್ಯಾಸಿನೀ ಭಕ್ತರು—ಶ್ರೀ ಶಾರದಾಮಣಿ ದೇವೀ (ಇವರು ಶ್ರೀ ರಾಮಕೃಷ್ಣರ ಧರ್ಮಪತ್ನಿ), ಗೋಪಾಲನ ಮಾತೆ, ಯೋಗಿನ್ ಮಾತೆ, ಗುಲಾಬ ಮಾತೆ, ಗೌರೀಮಾತೆ ಇತ್ಯಾದಿ.

ಶ್ರೀ ರಾಮಕೃಷ್ಣರ ಸಂನ್ಯಾಸೀ ಭಕ್ತರಲ್ಲ ಸ್ವಾಮಿ ವಿವೇಕಾನಂದರು ಅವರ ಬೋಧನೆಗಳ ಸತ್ಯಾಂಶವನ್ನು ಸ್ವಸಾಧನೆಯಿಂದ ಅರಿತುಕೊಂಡು ತದನಂತರ ಆಧುನಿಕ ಭಾಷಾ ಸರಣಿಯಲ್ಲಿ ಪ್ರಪಂಚದಲ್ಲೆಲ್ಲ ಈ ಸ್ವತಸ್ಸಿದ್ಧವಾದ ಹಿಂದೂ ಧಾರ್ಮಿಕ ವಿಷಯಗಳನ್ನು ಹರಡಿದರು. ತಮ್ಮ ಗುರುದೇವರ ತತ್ವಗಳ ಮೂಲಕ ಸ್ಪಷ್ಟವಾಗಿಯೂ, ಸಮಂಜಸವಾಗಿಯೂ, ಕ್ರಮಬದ್ಧವಾಗಿಯೂ ಹಿಂದೂ ಮತವನ್ನು ಬೋಧಿಸಿ, ಸ್ವಾಮಿ ವಿವೇಕಾನಂದರು ಆ ಮತಕ್ಕೆ ಒಂದು ಸೌಜನ್ಯವನ್ನೂ ಸ್ವಾಸ್ಥ್ಯವನ್ನೂ ಕಲ್ಪಿಸಿದರು. ಇದರಿಂದ ಹಿಂದೂ ಸಮಾಜವು ಶ್ರೀ ರಾಮಕೃಷ್ಣರನ್ನು ನಿರ್ವಿವಾದವಾಗಿ ಹಿಂದೂ ಧರ್ಮದ ಉದ್ಧಾರಕರೆಂದೂ, ಹಿಂದೂ ಚರಿತ್ರೆಯಲ್ಲಿ ಒಂದು ಹೊಸ ಯುಗವನ್ನು ಪ್ರಾರಂಭಿಸಿದವರೆಂದೂ ಪರಿಗಣಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಖ್ಯಾತ ಫ್ರೆಂಚ ಪ್ರಾಜ್ಞರಾದ ರೋಮೋ ರೋಲಂಡರು (Romain Rolland) ಶ್ರೀ ರಾಮಕೃಷ್ಣ ಜೀವನ ವಿಷಯಕವಾದ ಕ್ರಿ. ಶ. ೧೯೨೯ರಲ್ಲಿ ಬರೆದ ಗ್ರಂಥದಲ್ಲಿ ಠಾಕೂರರ ಕುರಿತು ಹೀಗೆಂದು ಬರೆದಿದ್ದಾರೆ–"ನಾನು ಧ್ಯಾನಿಸುವ ಮೂರ್ತಿಯು ಮೂವತ್ತು ಕೋಟಿ ಜನರ ಎರಡು ಸಾವಿರ ವರ್ಷಗಳ ಧಾರ್ಮಿಕ ಜೀವನದ ಪರಿಪೂರ್ಣ ಸಿದ್ಧಿಯ ಸ್ವರೂಪರು. ಅವರು ನಾಲ್ವತ್ತು ವರ್ಷಗಳ ಹಿಂದೆ ಮುಕ್ತರಾದರೂ ಅವರ ಆತ್ಮವು ಈಗಲೂ ನವೀನ ಭಾರತವನ್ನು ಚೇತನಗೊಳಿಸುತ್ತಿದೆ."

ಶ್ರೀ ರಾಮಕೃಷ್ಣ ಸಂಘದಿಂದ ಪ್ರಕಟಿಸಿದ 'ಶ್ರೀ ರಾಮಕೃಷ್ಣ ಜೀವನ'ವೆಂಬ ಇಂಗ್ಲಿಷ ಭಾಷೆಯ ಗ್ರಂಥದ ಮುನ್ನುಡಿಯಾಗಿ ಮಹಾತ್ಮಾ ಗಾಂಧಿ ಹೀಗೆಂದು ಬರೆದಿದ್ದಾರೆ, ಏನೆಂದರೆ—'ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರವೆಂಬುದು ವ್ಯಾವಹಾರಿಕ ಧಾರ್ಮಿಕ ಚರಿತ್ರವಾಗಿದೆ. ಅವರ ಜೀವನವು ನಮಗೆ ಈಶ್ವರನನ್ನು ಸಾಕ್ಷಾತ್ಕರಿಸಲು ಶಕ್ತಿಯನ್ನೀಯುತ್ತದೆ. ಈಶ್ವರನೊಬ್ಬನೇ ನಿತ್ಯನೆಂದೂ ಮಿಕ್ಕ ವಸ್ತುಗಳೆಲ್ಲ ಅನಿತ್ಯವೆಂದೂ ಅವರ ಜೀವನ ಚರಿತ್ರದ ವಾಚಕರಿಗೆ ಖಚಿತವಾಗದಿರದು. ಶ್ರೀ ರಾಮಕೃಷ್ಣರು ಜೀವಂತ ಧರ್ಮಸ್ವರೂಪರು. ಅವರು ಕೊಟ್ಟ ಉಪದೇಶಗಳು ಕೇವಲ ಜಾಣರ ನುಡಿಗಳಲ್ಲ, ಅವು ಜೀವನ ಗ್ರಂಥದ ಪುಟಗಳು—ಅವರ ಸ್ವಾನುಭವದ ದಿವ್ಯ ತತ್ವಗಳು. ಆದ್ದರಿಂದ ಅವುಗಳು ವಾಚಕರ ಮನಸ್ಸಿನಲ್ಲಿ ಅಳಿಸಲಾಗದ ಸಂಸ್ಕಾರವನ್ನುಂಟುಮಾಡುತ್ತವೆ. ಆಧುನಿಕ ನಾಸ್ತಿಕ್ಯ ಯುಗದಲ್ಲಿ ಅವು ಸಾವಿರಾರು ನರನಾರಿಯರಿಗೆ ಸಾಂತ್ವನೆಯನ್ನೀಯುವ ಒಂದು ದಿವ್ಯ ಜೀವಂತ ಧರ್ಮವನ್ನು ಪ್ರದಾನಿಸುತ್ತವೆ, ಅನ್ಯಥಾ ಈ ನರನಾರಿಯರು ಆಧ್ಯಾತ್ಮಿಕ ಬೆಳಕನ್ನು ಕಾಣದೆ ಇರಬೇಕಾಗುತ್ತಿತ್ತು. ಶ್ರೀ ರಾಮಕೃಷ್ಣ ಜೀವನವು ಅಹಿಂಸಾ ತತ್ವದ ಒಂದು ನಿದರ್ಶನವಾಗಿದೆ. ಅವರ ಅನುರಾಗದಲ್ಲಿ ಭೂಗೋಲ ಶಾಸ್ತ್ರ ವಿಷಯಕವಾದ ಅಥವಾ ಬೇರೆ ಯಾವ ಪ್ರತಿಬಂಧಕವಾದರೂ ಇಲ್ಲ. ಅವರ ದಿವ್ಯ ಅನುರಾಗವು ಈ ಗ್ರಂಥದ ವಾಚಕರಿಗೆ ಸ್ಫೂರ್ತಿಯನ್ನೀಯಲಿ!'

ಶ್ರೀ ರಾಮಕೃಷ್ಣರ ಸವಿಸ್ತಾರವಾದ ದಿವ್ಯಜೀವನವು ವಂಗಭಾಷೆಯಲ್ಲಿ ಐದು ಭಾಗವಾಗಿ 'ಲೀಲಾಪ್ರಸಂಗ'ವೆಂಬ ಗ್ರಂಥದಲ್ಲಿ ಮುದ್ರಿತವಾಗಿದೆ. ಅದರ ಕನ್ನಡ ಪರಿವರ್ತನವು ಕನ್ನಡಿಗರ ಸಲುವಾಗಿ 'ಪ್ರಭಾತ' ಪತ್ರಿಕೆಯಲ್ಲಿ ಈಗ ಪ್ರಕಟಿತವಾಗುತ್ತಿದೆ. 'ಪ್ರಭಾತ'ದ ವಾಚಕರು ಈ ದಿವ್ಯ ಚರಿತ್ರವನ್ನು ಓದಿ ತಂತಮ್ಮ ಆಧ್ಯಾತ್ಮಿಕ ಜೀವನವನ್ನು ಸಾಫಲ್ಯಗೊಳಿಸಲಿ ಎಂದು ಸರ್ವಾಂತಃಕರಣದಿಂದ ಕೋರುವ,

ತಾ. ೨೨-೫-೧೯೫೧. **ಸ್ವಾಮಿ ಪ್ರಣವೇಶಾನಂದ**

ಶ್ರೀ ರಾಮಕೃಷ್ಣರೂ ಆಧ್ಯಾತ್ಮಿಕ ಪುನರುಜ್ಜೀವನವೂ

ಲೇಖಕರು: ಶ್ರೀ ಸ್ವಾಮಿ ಪ್ರಣವೇಶಾನಂದ

ವೈದಿಕ, ಔಪನಿಷದಿಕ, ಪೌರಾಣಿಕ, ದಾರ್ಶನಿಕ, ಬೌದ್ಧ ಹಾಗೂ ಜೈನ ಕಾಲಗಳಲ್ಲಿ ನಮ್ಮ ಪೂರ್ವಿಕರು ಸಾಧಿಸಿದ ಮಹಾಸಿದ್ಧಿಗಳೂ, ಮಾಧ್ಯಮಿಕ ಭಾರತದ ಚರಿತ್ರೆಯಲ್ಲಿ ಉದ್ಭವಿಸಿದ ಸಂನ್ಯಾಸಿಗಳೂ; ಜ್ಞಾನಿಗಳೂ ಮತ್ತು ಇತರ ಚರಿತ್ರಾರ್ಹ ಆಧ್ಯಾತ್ಮಬೋಧಕರೂ, ನಮ್ಮ ಪೂರ್ವ ಪುರುಷರ ಬುದ್ಧಿಸಾಮರ್ಥ್ಯವನ್ನು ಪ್ರಶಂಸಿಸುವಂತೆಯೂ, ಗೌರವಿಸುವಂತೆಯೂ ಪ್ರೇರೇಪಿಸುತ್ತವೆ. ರಾಜಕೀಯ ಪ್ರಭುತ್ವವು ಬ್ರಿಟಿಷರಿಂದ ಅಪಹರಿಸಲ್ಪಟ್ಟು ೧೮ನೆಯ ಶತಮಾನದ ಮೊದಲಿನಿಂದ ೧೯ನೆಯ ಶತಮಾನದ ನಡುವಿನ ವರೆಗೂ ಪಾಶ್ಚಾತ್ಯ ಪ್ರಭಾವಗಳಿಗೆ ಮನಸೋತು ಆಧುನಿಕ ಭಾರತವು ಅಧೋಗತಿಗೆ ಇಳಿಯಿತು. ಈ ಪ್ರಭಾವವು ಆಗಿನ ಶಿಕ್ಷಣ ಕ್ರಮದಿಂದ ಪುಷ್ಟೀಕರಿಸಲ್ಪಟ್ಟು ಭಾರತೀಯರ ಬುದ್ಧಿ ಮತ್ತು ಅಭಿಲಾಷೆಗಳನ್ನು ಆಂಗ್ಲೇಯವನ್ನಾಗಿ ಮಾಡಿ, ಕೇವಲ ರಕ್ತದಲ್ಲಿ ಮಾತ್ರ ಅವರನ್ನು ಭಾರತೀಯರನ್ನಾಗಿ ಮಾಡಿತು. ಇದು ನಿಸ್ಸಂದೇಹವಾಗಿ ಅವರನ್ನ ದೇಶೀಯ ಸಂಕಲ್ಪಗಳಿಂದ ದೂರ ಕೊಂಡೊಯ್ಯಿತು ಮತ್ತು ಕೆಲ ಶಿಕ್ಷಿತರು ಪಾಶ್ಚಾತ್ಯ ಸಾಹಿತ್ಯದಲ್ಲಿ ನಿರತರಾಗಿ ಮಹಾನಾಸ್ತಿಕರ , ಲೌಕಿಕರೂ ಆದರು. ಇದನ್ನು ಜಯಿಸಿ, ಚೇತನಗೊಂಡವರು ಕ್ರೈಸ್ತ ಪಾದ್ರಿಗಳ ವಿನಾಶಕ ಪ್ರಭಾವಕ್ಕೆ ತುತ್ತಾಗಿ, ನಮ್ಮ ಜನಗಳೇ ನಕೇರು ಇವರ ಬಲೆಗೆ ಸಿಕ್ಕಿ ಕ್ರೈಸ್ತಮತವನ್ನವಲಂಬಿಸಿದರು.

೧೯ನೆಯ ಶತಮಾನದ ಮಧ್ಯಭಾಗದಲ್ಲಿ ಭಾರತವು ಈ ಸಾಂಸ್ಕೃತಿಕ ಘರ್ಷಣೆಗಳಿಂದ ಸ್ವಾಸ್ಥ್ಯವನ್ನು ಕಳೆದುಕೊಳ್ಳುತಿದ್ದಾಗ, ಸಾಮಾಜಿಕ ಹಾಗೂ ಧಾರ್ಮಿಕ ಧ್ಯೇಯಗಳಿಂದ ಕೂಡಿದ ಬಲಿಷ್ಠ ಸುಧಾರಣಾ ಚಳುವಳಿಗಳು ಒಂದರ ಮೇಲೊಂದು ಭಾರತದ ಪ್ರಾಚೀನ ಸಂಸ್ಕೃತಿಯನ್ನು ಪುನರುಜ್ಜೀವಿಸಿ ಮತ್ತೊಮ್ಮೆ ಪ್ರಭಾವಪೂರಿತ ಭವಿಷ್ಯವನ್ನು ನಿರ್ಮಾಪಿಸಿಕೊಳ್ಳಲು ಸಹಾಯಕಾರಿಗಳಾದವು.

೧೮೨೮ರಲ್ಲಿ ರಾಜಾರಾಮ ಮೋಹನ ರಾಯರಿಂದ ಸ್ಥಾಪಿತವಾಗಿ, ನಂತರ ದೇವೇಂದ್ರನಾಥ ಠಾಕೂರರಿಂದಲೂ, ಕೇಶವಚಂದ್ರ ಸೇನರಿಂದಲೂ ವರ್ಧಿಸಲ್ಪಟ್ಟು ಬ್ರಾಹ್ಮ ಸಮಾಜವು ಪಾಶ್ಚಾತ್ಯ ನಾಸ್ತಿಕತೆಯನ್ನೂ, ಕ್ರೈಸ್ತಮತವನ್ನೂ, ಹಿಂದೂ ಮೂಢಾಚರಣೆಗಳನ್ನೂ ಬಂಗ ದೇಶದಲ್ಲಿ ನಿರ್ಮೂಲ ಮಾಡಿ ನೂರಾರು ಯುವಕರನ್ನು ಈ ದುಷ್ಟಪ್ರಭಾವದಿಂದ ದೂರಮಾಡಿತು. ದೇವರು ರೂಪರಹಿತನೆಂದೂ ಅದ್ವಿತೀಯನೆಂದೂ ಈ ಸಮಾಜದ ಸಿದ್ಧಾಂತ. ಈ ಧ್ಯೇಯವು ಪಾಶ್ಚಾತ್ಯ ಅದ್ವೈತಸಿದ್ಧಾಂತಗಳೊಡನೆ ಪ್ರತಿಸ್ಪರ್ಧಿಸಲು ಶಕ್ತವಾಯಿತು. ಸಮಾಜ ಸಂಪ್ರದಾಯಗಳನ್ನು ರೂಪುಗೊಳಿಸುವುದರಲ್ಲಿ ಒಂದು ಸಾಮ್ಯತೆಯನ್ನೂ ಸ್ವಾತಂತ್ರ್ಯವನ್ನೂ ನೀಡಿತು. ಸ್ತ್ರೀಯರನ್ನು ಸಾಮಾಜಿಕ ಅನ್ಯಾಯಗಳಿಂದ ಬಿಡಿಸಿತು. ಬಾಲ್ಯ ವಿವಾಹವನ್ನೂ ಬಲವಂತ ವೈಧವ್ಯವನ್ನೂ ವಿರೋಧಿಸಿತು. ಆಧುನಿಕ ಸ್ತ್ರೀ ವಿದ್ಯಾಭ್ಯಾಸವನ್ನು ಉತ್ತೇಜಿಸಿತು. ಈ ಚಳುವಳಿಯು ವಿಶೇಷವಾಗಿ ವಂಗದೇಶದ್ದು. ರಾಮಮೋಹನರು ಪ್ರಾಟಸ್ಟೆಂಟ್ (Protestant) ಮತದ ಸಹಾಯದಿಂದ ಔಪನಿಷದಿಕ ತತ್ತ್ವಗಳನ್ನು ಸ್ಪಷ್ಟಗೊಳಿಸಿದರು; ಕೇಶವಚಂದ್ರರು ಅದಕ್ಕೆ ಕ್ರೈಸ್ತ ತತ್ತ್ವಗಳನ್ನು ಬೆರೆಸಿದರು. ಸಮಾಜದ ಪದ್ಧತಿಗಳು ಪಾಶ್ಚಾತ್ಯರೂಪವನ್ನು ತಾಳಿದವು. ಆದ್ದರಿಂದ ಈ ಸಂಸ್ಥೆಯು ಹಿಂದೂ ಮತಕ್ಕೆ ವಿಜಾತೀಯವಾಗಿ ಕಂಡು, ಹಿಂದೂ ಸಮಾಜದ ನ್ಯೂನತೆಗಳನ್ನು ತೆಗೆದು ಹಾಕಲು ಸಹಕಾರಿಯಾಯಿತು.

೧೮೭೫ರಲ್ಲಿ ಸ್ವಾಮಿ ದಯಾನಂದರಿಂದ ಮುಂಬಾಯಿ ನಗರದಲ್ಲಿ ಸ್ಥಾಪಿಸಲ್ಪಟ್ಟು ಆರ್ಯ ಸಮಾಜವು ಉತ್ತರ ಭಾರತದಲ್ಲೆಲ್ಲ (ಪಂಜಾಬಿನಲ್ಲಿ ವಿಶೇಷವಾಗಿ) ಬಲಗೊಂಡಿತು. ಈ ಚಳುವಳಿಯು ಕೂಡ ಅನೇಕ ಸ್ಥಳಗಳಲ್ಲಿ ವಿದೇಶ ಸಂಸ್ಕೃತಿಯ ಘರ್ಷಣವನ್ನು ನಿಲ್ಲಿಸಿತು. ಈ ಧರ್ಮದಲ್ಲಿ ಅದ್ವೈತಿಗಳ ಸರ್ವಶಕ್ತ ಬ್ರಹ್ಮಸ್ವರೂಪಕ್ಕಾಗಲಿ, ದ್ವೈತಿಗಳ ವಿವಿಧ ಪೂಜ್ಯ ನಾಮರೂಪಗಳಿಗಾಗಲಿ ಸ್ಥಾನ ಸಿಗಲಿಲ್ಲ. ಸಮಾಜದ ನಡವಳಿಕೆಗಳಲ್ಲಿ ಗಹನವಾದ ಬದಲಾವಣೆಗಳನ್ನು ಉಂಟುಮಾಡಿತು. ವರ್ಣ ಭೇದಗಳನ್ನು ತೊಡೆದು ಹಾಕಿತು. ಬ್ರಾಹ್ಮಣರಿಗೆ ವೇದಗಳ ಮೇಲಿದ್ದ ಸರ್ವಾಧಿಕಾರವನ್ನು ವಿರೋಧಿಸಿತು. ಹೆಂಗಸರನ್ನು ಅನೇಕ ಸಾಮಾಜಿಕ ಅನಾನುಕೂಲಗಳಿಂದ ಬಿಡಿಸಿತು. ಪ್ರಜಾಹಿತಕಾರ್ಯಗಳನ್ನು ಮಾಡುವುದೂ, ವಿದ್ಯಾ ಪ್ರಚಾರವೂ ಈ ಸಮಾಜದ ಮುಖ್ಯ ಉದ್ದೇಶವಾಯಿತು. ಇದು ಕೇವಲ ಹಿಂದೂ ಸ್ವರೂಪದಲ್ಲಿ ರೂಪು

ಗೊಂಡುದರಿಂದ ನಮ್ಮ ಜನತೆಯ ಧಾರ್ಮಿಕ ಮನಸ್ಸಿಗೆ ಗ್ರಾಹ್ಯವಾಯಿತು. ವಿಗ್ರಹ ಆರಾಧನೆಯನ್ನು ತ್ಯಜಿಸಿದುದರಿಂದ ಆಧುನಿಕ ಶಿಕ್ಷಿತ ಸಂಗಡಕ್ಕೆ ಅನುಕೂಲವಾಯಿತು. ವೈದಿಕ ಯಜ್ಞಯಾಗಾದಿಗಳ ಬದಲಾಗಿ ಅಗ್ನಿಯ ಆರಾಧನೆಯನ್ನು ಕಲ್ಪಿಸಿದುದರಿಂದ ಸಮಾಜಕ್ಕೆ ಒಂದು ವೀರ್ಯವತ್ತಾದ ಸೊಬಗನ್ನು ಉಂಟುಮಾಡಿತು. ಸಮಾಜ ನಿಯಮಗಳ ಬದಲಾವಣೆಗಳು ಸಂಪೂರ್ಣವಾಗಿ ಆ ಕಾಲದ ಮನೋಭಾವನೆಗಳನ್ನು ಅನುಸರಿಸಿದ್ದುವು.

ಥಿಯಸಾಫಿಕಲ್ ಸೊಸೈಟಿ ಎಂಬ ಮತ್ತೊಂದು ಬ್ರಹ್ಮವಿದ್ಯಾ ಚಳುವಳಿಯು ಸ್ವೀಡನ್ ಬರ್ಗ್ ಮೊದಲಾದವರಿಂದ ಯೂರೋಪಿನಲ್ಲಿ ಯೋಚಿಸಲ್ಪಟ್ಟು, ೧೮೭೫ರಲ್ಲಿ ನ್ಯೂಯಾರ್ಕಿನಲ್ಲಿ ಸ್ಥಾಪಿಸಲ್ಪಟ್ಟಿತು. ಬ್ಲ್ಯಾವಟ್ಸ್ಕಿ ಎಂಬ ರಷ್ಯಾ ಮಹಿಳೆಯಿಂದಲೂ ಕರ್ನಲ್ ಆಲ್‌ಕಾಟ್ ಎಂಬ ಆಂಗ್ಲೇಯ ಮಾಜಿಯೋಧನಿಂದಲೂ ಪ್ರಚಾರಿಸಲ್ಪಟ್ಟು ಹಿಂದೂಗಳನ್ನು ನಾಸ್ತಿಕಧಾಳಿಯಿಂದಲೂ ಕ್ರೈಸ್ತಮತದಿಂದಲೂ ವಿಶೇಷವಾಗಿ ದಕ್ಷಿಣಭಾರತದ ಹಿಂದೂಗಳನ್ನು ರಕ್ಷಿಸಿತು. ಈ ಧರ್ಮವು ಟಿಬೆಟ್ಟಿನ ಬೌದ್ಧಮತದ ಕೆಲ ಅಂಶಗಳನ್ನೂ, ಹಿಂದೂ ತತ್ವದ ಕೆಲ ಭಾಗಗಳನ್ನೂ ಆಧುನಿಕರ ಕೆಲ ಅಭಿಪ್ರಾಯಗಳೊಡನೆ ಸೇರಿಸಿ ನಿರ್ಮಿತವಾದದ್ದಾಗಿದೆ. ಇದು ಸಾಮಾಜಿಕ ಕಟ್ಟಳೆಗಳನ್ನು ಅತಿಯಾಗಿ ಮಾರ್ಪಡಿಸಲು ಪ್ರಯತ್ನಿಸಲಿಲ್ಲ. ಕೆಲ ಹಿಂದೂ ಶಾಸ್ತ್ರಗಳನ್ನು ಭಾಷಾಂತರಿಸಿ ಹಿಂದೂ ಧರ್ಮಕ್ಕೆ ವಾಸ್ತವಿಕ ಕೆಲಸವನ್ನು ಮಾಡಿದೆ.

ಈ ಚಳುವಳಿಗಳಿಂದ ಹಿಂದೂಗಳಿಗೆ ಸ್ವಾನುಭವ ಉಂಟಾಗಿ ವಿರುದ್ಧ ಪ್ರಭಾವಗಳನ್ನು ಎದುರಿಸಲು ಸಾಧ್ಯವಾಯಿತು; ಅಲ್ಲದೆ ಹಿಂದೂ ಸಂಸ್ಕೃತಿಗೆ ಒಂದು ಹೊಸ ಚೇತನವನ್ನು ಕೊಟ್ಟಿತು. ಇಷ್ಟೇ ಅಲ್ಲದೆ ಹಿಂದೂ ಧರ್ಮವನ್ನು ಪುನರುಜ್ಜೀವಿಸಲು ಇನ್ನೂ ಹೆಚ್ಚಿನ ಕೆಲಸಗಳು ನಡೆಯಬೇಕಾಗಿದ್ದುವು. ಈ ಚಳುವಳಿಗಳು ಹಿಂದೂ ಸಮಾಜದ ಕೆಲ ಭಾಗವನ್ನು ಮಾತ್ರ ಮುಟ್ಟಿದುವು. ಅಂದರೆ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದು ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಆಕರ್ಷಿಸಲ್ಪಟ್ಟವರನ್ನು ಮಾತ್ರ ಪರಿವರ್ತಿಸಿತು. ಆದರೆ ಅವರ ಸಂಖ್ಯೆಯನ್ನು ಅಸಂಖ್ಯಾತ ವೈದಿಕ ಗುಂಪಿನೊಡನೆ ಹೋಲಿಸಿ ನೋಡಿದರೆ ಕೇವಲ ನಿಕೃಷ್ಟವಾಗಿದ್ದಿತು. ಈ ವೈದಿಕರು ಯಾವ ವಿಧವಾದ ಸುಧಾರಣೆಗಳಿಂದಲೂ ಉತ್ತಮಗೊಳ್ಳಲು ಒಡಂಬಡುತ್ತಿರಲಿಲ್ಲ. ಆದ್ದರಿಂದ ಈ ಸುಧಾರಣಾ ಚಳುವಳಿಗಳು ಅತ್ಯಲ್ಪ ಅನುಯಾಯಿಗಳ ಸಂಖ್ಯೆಯಿಂದ ಕೂಡಿದ್ದಾಗಿತ್ತು. ಆದರೆ ಬಹು ಸಂಖ್ಯಾತರಾದ ಸಾಂಪ್ರದಾಯಿಕರು ಪುರಾತನ ಋಷಿಗಳಿಂದಲೂ ಪಂಡಿತರುಗಳಿಂದಲೂ ನಿಶ್ಚಿತವಾದ ಧರ್ಮಕರ್ಮಗಳಲ್ಲೇ ನಿರತರಾಗಿದ್ದರು. ಅವುಗಳನ್ನು ಮೂಢಭಾವದಿಂದ ಅನುಸರಿಸುತ್ತಿದ್ದರೇ ಹೊರತು ಸುಧಾರಕರ ಯಾವ ಸಮಂಜಸವಾದ ಭಾವನೆಗಳನ್ನೂ ಅಂಗೀಕರಿಸುತ್ತಿರಲಿಲ್ಲ. ಆದರೆ ವೈದಿಕರು ತಮ್ಮ ಕೆಲ ಭಾವನೆಗಳನ್ನಾದರೂ ಬದಲಾಯಿಸಿಕೊಂಡು ವಿವೇಚನಾಪೂರ್ವಕವಾದ, ನೂತನ ಸಿದ್ಧಾಂತಗಳನ್ನು ಒಪ್ಪಿಕೊಳ್ಳದೆ ಇದ್ದಲ್ಲಿ ಹಿಂದೂ ಸಮಾಜದ ಬಹು ಭಾಗವು ನಿಸ್ಸಂದೇಹವಾಗಿಯೂ ನಶಿಸಿ ಹೋಗುತ್ತದೆಂಬ ಭೀತಿಯು ಈ ಸುಧಾರಕರಿಗೆ ಇದ್ದಿತು. ಹಿಂದೂ ಮತವನ್ನೂ ಅದರ ಸಂಸ್ಕೃತಿಯನ್ನೂ ಸಮಗ್ರವಾಗಿ ಭದ್ರಪಡಿಸಲು ಏನಾದರೂ ಸಹಾಯಮಾಡದೆ ಇದ್ದಲ್ಲಿ ಅನೇಕಾನೇಕ ಸಂಪ್ರದಾಯಗಳಿಂದ ಕೂಡಿದ ಹಿಂದೂಧರ್ಮವು ಜೀವಿಸಲಾರದೆಂದೂ ಹಿಂದೂ ಸಮಾಜವನ್ನು ಪಾಶ್ಚಿಮಾತ್ಯ ದುರ್ಭಾವನೆಗಳ ಸೆಳೆತದಿಂದ ಯಾವುದೂ ಕಾಪಾಡಲಾರದೆಂದೂ ವಿವೇಕ ದೃಷ್ಟಿಯಿಂದ ಅವಲೋಕಿಸುವವರಿಗೆಲ್ಲ ತಿಳಿದೇ ಇದ್ದಿತು.

ಈ ಸಮಯದಲ್ಲಿ ಶ್ರೀರಾಮಕೃಷ್ಣದೇವರು ಅವತರಿಸಿದರು. ಅವರು ತಮ್ಮ ಮಹತ್ತರವಾದ ತಪೋಜೀವನದಿಂದಲೂ, ವಿಶಾಲವಾದ ಹಿಂದೂ ಭಾವನೆಗಳಿಂದಲೂ ಅತಿ ಸುಲಭವಾಗಿ ಪ್ರಜ್ಞಾಕಾರಕ ರೀತಿಯಿಂದ ಹಿಂದೂಧರ್ಮದ ಗಾಢ ತತ್ತ್ವಗಳನ್ನು ತಿಳಿಯಪಡಿಸುವ ಮೂಲಕವೂ ಹಿಂದೂ ಸಮಾಜವನ್ನು ಸಮೀಪಿಸುತ್ತಿದ್ದ ದುರ್ಘಟನೆಯಿಂದ ಅತ್ಯಾಶ್ಚರ್ಯರೀತಿಯಿಂದ ಪಾರುಮಾಡಿದರು.

ಅವರ ಜೀವನವೂ ಉಪದೇಶಗಳೂ ಸಂಪೂರ್ಣವಾಗಿ ಹಿಂದೂಸ್ವಭಾವವನ್ನೂ ಅಭಿಲಾಷೆಗಳನ್ನೂ ಅನುಸರಿಸಿದ್ದುವು. ಆದ್ದರಿಂದ ಅವರಿಗಿಂತ ಹಿಂದೆ ಅವತರಿಸಿದ ಮಹಾಪುರುಷರ ಮತ್ತು ಜ್ಞಾನಿಗಳ ಬೋಧನೆಗಳೊಡನೆ ಸಾಮ್ಯವನ್ನು ಹೊಂದಿಕೊಂಡವು. ವೈದಿಕರೂ ಆಧುನಿಕ ತಾರ್ಕಿಕರೂ ಇವರನ್ನು ಹಿಂದೂಧರ್ಮವನ್ನು ಉದ್ಧರಿಸುವ ಮಹಾವ್ಯಕ್ತಿಯೆಂದು ತಿಳಿದುಕೊಂಡರು. ಸಾಂಪ್ರದಾಯಿಕರು ಶ್ರೀರಾಮಕೃಷ್ಣರನ್ನು ಮಹಾಜ್ಞಾನಿಯೆಂದೂ, ಹಿಂದೂ ಸನಾತನಧರ್ಮವನ್ನು ಪುನರುಜ್ಜೀವಿಸುವ ಚೈತನ್ಯಾತ್ಮರೆಂದೂ ಪರಿಗಣಿಸಿದರು. ಜ್ಞಾನಮಾರ್ಗಾವಲಂಬಿಗಳು ಇವರ ಸಿದ್ಧಿಗಳಿಂದ ತಮ್ಮ ಅನುಮಾನಗಳೆಲ್ಲ ಸ್ಪಷ್ಟಗೊಂಡವೆಂದು ಅಭಿಪ್ರಾಯಪಟ್ಟರು. ಆದ್ದರಿಂದಲೇ ವಿವೇಕಾನಂದರಂತಹ ಉಗ್ರನಾಸ್ತಿಕ ವಾಙ್ಮಿಗಳೂ, ಆಧುನಿಕ ಅಭಿಪ್ರಾಯಗಳ ಪ್ರಚಾಲಕರೂ ಸಂಪೂರ್ಣವಾಗಿ ಈ ಮಹಾಪುರುಷರ ಪ್ರಭಾವಕ್ಕೆ ವಶರಾದರು. ರೊಮೆನ್ ರೋಲೆಂಡರು ಹೇಳುವುದೇನೆಂದರೆ: "ಈ ಸಾಧಾರಣ ವ್ಯಕ್ತಿಯ ಮುಂದೆ ಮಹಾಪ್ರತಿಭಾಶಾಲಿಗಳೂ, ದರ್ಪವುಳ್ಳವರೂ, ನವೀನ ಯೋಚನೆಗಳ ಪ್ರಚಾಲಕರೂ ಆದ ವಿವೇಕಾನಂದರು ತಮ್ಮ ಆತ್ಮವನ್ನು ನಿವೇದಿಸಿದರು." ಇದು ಬಹು ಮುಖ್ಯವಾದ ಅಂಶ. ಈ ಮೂಲಕ ಶ್ರೀರಾಮಕೃಷ್ಣರ ಸಿದ್ಧಿಗಳು ವಿವೇಕಾನಂದ ಪ್ರಚಂಡ ಪ್ರಾತಿನಿಧ್ಯದಲ್ಲಿದ್ದ ನವೀನ ತಾರ್ಕಿಕ ಸಂಪ್ರ

ದೇಶಗಳ ಮೇಲೆ ಯಾವ ರೀತಿಯ ಪರಿಣಾಮವನ್ನುಂಟು ಮಾಡಿತೆಂಬುದನ್ನು ತಿಳಿದುಕೊಳ್ಳಬಹುದು.

ತಮ್ಮ ಗುರುಗಳೊಡನೆ ಸೇರಿದೊಡನೆ ವಿಚಾರಪರರಾದ ಸ್ವಾಮಿ ವಿವೇಕಾನಂದರ ತೀಕ್ಷ್ಣ ಬುದ್ಧಿಗೆ ಒಂದು ಪ್ರಾಮುಖ್ಯವಾದ ವಿಷಯವು ಗೋಚರವಾಯಿತು. ಅದೇನೆಂದರೆ "ಯಾವುದಾದರೂ ಧರ್ಮವನ್ನೂ ಅಥವಾ ಧರ್ಮಗಳನ್ನೂ ತಿಳಿಯಬೇಕಾದರೆ, ವಿಮರ್ಶಿಸಬೇಕಾದರೆ ಅಥವಾ ದೂಷಿಸಬೇಕಾದರೆ ಅಂತಹವರು ಮೊಟ್ಟಮೊದಲು ತಾವೇ ಆಧ್ಯಾತ್ಮಿಕ ವಿಷಯಗಳನ್ನು ಪರಿಶೀಲಿಸಿರಬೇಕು." ಅವರು ವಿಚಾರಪರರಾಗಿದ್ದುದರಿಂದ ಈ ವಿಷಯ ಶೀಘ್ರದಲ್ಲಿ ಸ್ಪಷ್ಟವಾಗಿ ಅರಿತು, ಶ್ರೀರಾಮಕೃಷ್ಣರ ಬೋಧನೆಗಳ ಸತ್ಯಾಂಶಗಳನ್ನು ಸ್ವಸಾಧನೆಯಿಂದ ಅರಿತುಕೊಂಡು ನಂತರ ಆಧುನಿಕರ ಭಾಷಾಸರಣಿಯಲ್ಲಿ ಜಗತ್ತಿನಲ್ಲೆಲ್ಲ ಈ ಸ್ವತಸಿದ್ಧವಾದ ವಿಷಯಗಳನ್ನು ಹರಡಿದರು.

ಈ ಪುನರುಜ್ಜೀವಿತ ನವೀನ ಹಿಂದೂಧರ್ಮವು ಮಹಾಪ್ರಭಾವಯುತ ಭವಿಷ್ಯವನ್ನು ವರ್ಧಿಸಲು ಅವಶ್ಯವಾದ ಶಕ್ತಿಯನ್ನು ಹೊಂದಿದೆ. ಭಾರತವು ಇನ್ನೆಂದಿಗೂ ಕೇವಲ ಯಶಸ್ವಿಯಾದ ಪ್ರಾಚೀನ ಸಮಾಧಿಗಳಂತೆ ಕಾಣಿಸಿಕೊಳ್ಳಲಿಕ್ಕಿಲ್ಲ. ಭಾರತವು ಒಂದು ಹೊಸಜೀವದಿಂದ ಕೂಡಿದೆ. ತನ್ನ ಸಂದೇಶದಿಂದ, ಸ್ವಕೀಯ ಸಂಸ್ಕೃತಿಯ ಹಾಗೂ ಆಧ್ಯಾತ್ಮಿಕತೆಯಿಂದ ಪ್ರಪಂಚವನ್ನೇ ಪರಿವರ್ತಿಸಬಲ್ಲದಾಗಿದೆ.

ಶ್ರೀರಾಮಕೃಷ್ಣರ ಈ ಅಸದೃಶವಾದ ಸಂದೇಶವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಹರಡಲು ಸ್ವಾಮಿ ವಿವೇಕಾನಂದರು ಮೊಟ್ಟಮೊದಲಿನ ಉಲ್ಕಾಧಾರಿಗಳಾದರು. ಅವರ ಗುರುಗಳ ಸಂದೇಶವನ್ನು ಹರಡುವ ಸಲುವಾಗಿ ತಮ್ಮ ದಿವ್ಯ ಜೀವನದ ಅತಿ ಮುಖ್ಯ ಕಾಲದಲ್ಲಿ ಮೂರು ವರ್ಷಗಳಿಗಿಂತಲೂ ಹೆಚ್ಚಾಗಿ ಅಮೇರಿಕಾ ಮತ್ತು ಯೂರೋಪು ದೇಶಗಳಲ್ಲಿ ಕಳೆದರು. ಆ ದೇಶಗಳ ಕೆಲ ಮುಖ್ಯವಾದ ನಗರಗಳಲ್ಲಿ ಶ್ರೀರಾಮಕೃಷ್ಣ ಸಂಘದ ಕೇಂದ್ರಗಳು ಸ್ಥಾಪಿತವಾಗಿ ಕೆಲ ಸಂನ್ಯಾಸಿಗಳ ಮೂಲಕ ಈ ಸಂದೇಶವು ಈಗಲೂ ಹರಡುತ್ತಲಿದೆ.

ಸ್ವಾಮಿ ವಿವೇಕಾನಂದರು ಪಾಶ್ಚಿಮಾತ್ಯ ಸಭಿಕರಿಗೆ ಹಿಂದೂಧರ್ಮವನ್ನೂ, ಅದರ ಸರ್ವಸಾಮಾನ್ಯತೆಯನ್ನೂ, ಅದರ ಸೌಜನ್ಯತೆಯನ್ನೂ, ಅದರ ದೈವಭಾವಗಳ ವೈವಿಧ್ಯವನ್ನೂ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮಾರ್ಗಗಳನ್ನೂ, ಜ್ಞಾನಯೋಗ, ರಾಜಯೋಗ, ಭಕ್ತಿಯೋಗ, ಕರ್ಮಯೋಗ ಎಂಬ ವಿವಿಧ ಜನಗಳ ಶಕ್ತಿಸಾಮರ್ಥ್ಯಗಳನ್ನು ಅನುಸರಿಸಿದ್ದ ಪಥಗಳನ್ನೂ ಕೂಡ ಸ್ಪಷ್ಟಪಡಿಸಿದರು. ಕರ್ಮಸಿದ್ಧಾಂತವನ್ನೂ ಪುನರ್ಜನ್ಮ ವಿಚಾರವನ್ನೂ ವಿಶದಪಡಿಸಿ, ಸರ್ವಶಕ್ತನಾದ ಬ್ರಹ್ಮನೊಡನೆ ಐಕ್ಯವನ್ನು ಹೊಂದುವುದೇ ಹಿಂದೂಧರ್ಮದ ಮುಕ್ತಿಮಾರ್ಗವೆಂದು ತಿಳಿಸಿದರು. ಇವೆಲ್ಲವನ್ನೂ ಪಾಶ್ಚಿಮಾತ್ಯರ ವೈಜ್ಞಾನಿಕ ಮನಸ್ಸಿಗೆ ಸಮರ್ಪಕವಾಗಿ ಕಾಣುವ ರೀತಿಯಲ್ಲಿ ಹೇಳಿದರು. ವೇದಾಂತವು ವಿಜ್ಞಾನಕ್ಕೆ ವಿರುದ್ಧವಲ್ಲವೆಂಬುದೇ ಅವರ ವಾದ. ಅದು ಸರ್ವ ಧರ್ಮಗಳ ವಿಜ್ಞಾನವೆಂದು ಹೇಳಿದರು. ಹಿಂದೂಮತವು ಎಲ್ಲ ಧರ್ಮಗಳ ಐಕ್ಯತೆಯನ್ನು ತೋರಿಸಿ ವಿಶ್ವಧರ್ಮದ ಯಶೋಮಂಟಪದಲ್ಲಿ ಮಾನವ ವರ್ಗವೇ ಒಗ್ಗಟ್ಟಿನಿಂದ ಬಾಳಬಹುದೆಂದು ತೋರಿಸಿದರು. ಶ್ರೀರಾಮಕೃಷ್ಣರಿಂದ ಸಾಧಿಸಲ್ಪಟ್ಟ ಈ ಔಪನಿಷದಿಕ ಸಂದೇಶವು ಹಿಂದೂಗಳನ್ನು ಎಚ್ಚರಿಸಿ ಎಲ್ಲ ಕೋಮಿನವರನ್ನು ಒಟ್ಟುಗೂಡಿಸಿ ಒಂದು ಭ್ರಾತೃತ್ವವನ್ನುಂಟು ಮಾಡುವುದೆಂಬುದೇ ಅವರ ನಂಬಿಕೆ. ಹಿಂದೂ ಪುನರುಜ್ಜೀವನವು ವಿಶ್ವ ಧರ್ಮಸ್ಥಾಪನೆಯ ಉಪಕ್ರಮಣವೆಂದು ಅವರು ಸಮರ್ಥಿಸಿದರು.

ಅವರು ತಮ್ಮ ಗುರುಗಳು ಕೊಟ್ಟ ಉಪದೇಶದಿಂದಲೂ ಸ್ವಾನುಭವದಿಂದಲೂ ಜ್ಞಾನವನ್ನು ಹೊಂದಿ, ಹಿಂದೂಧರ್ಮತತ್ತ್ವಗಳನ್ನು ಆಧುನಿಕರು ಒಪ್ಪುವ ರೀತಿಯಲ್ಲಿ ಪ್ರಚಾರ ಮಾಡಿದರು. ಅವರ ವಚನಗಳಿಂದ ಪಾಶ್ಚಿಮಾತ್ಯರು ಧರ್ಮವನ್ನು ಸ್ವಾಭಾವಿಕವಾದ ದಿನಚರ್ಯೆಯ ವಿಷಯವೆಂದೂ ಅಮಾನುಷೀಯವಲ್ಲವೆಂದೂ ತಿಳಿದು, ಮೂಢಭಾವನೆಗಳನ್ನೆಲ್ಲ ತೊರೆದರು. "ಧರ್ಮವು ಮಾನವನಲ್ಲಿದ್ದ ಪರಮಾತ್ಮನ ಆವಿರ್ಭಾವ" ಎಂದು ಹೇಳಿದರು. ಅದನ್ನು ಪುಸ್ತಕಗಳಲ್ಲಾಗಲಿ, ಬುದ್ಧಿಚಾತುರ್ಯದಲ್ಲಾಗಲಿ, ತರ್ಕದಲ್ಲಾಗಲಿ ಕಾಣಲಾರೆವು. ತರ್ಕ, ವಿಧಿಗಳು, ಶಾಸ್ತ್ರಗಳು, ಗ್ರಂಥಗಳು, ವ್ರತಗಳು ಇವೆಲ್ಲವೂ ಧರ್ಮಮಾರ್ಗಗಳು ಮಾತ್ರ, ಆತ್ಮಸಾಕ್ಷಾತ್ಕಾರವೇ ಧರ್ಮದ ಯಥಾರ್ಥಸ್ವರೂಪವೆಂದರು.

ಮಾನವಜೀವನಕ್ಕೂ ಆಧ್ಯಾತ್ಮಿಕ ವಿಚಾರಗಳಿಗೂ ನಿಕಟ ಸಂಬಂಧವಿದೆ ಎಂಬುದನ್ನು ಸ್ಪಷ್ಟೀಕರಿಸಿದರು. ಮನುಷ್ಯನು ವಿವೇಕಶೂನ್ಯನಾಗಿ ನಿಶ್ಚೇತನನಾದರೇನೇ ಆಧ್ಯಾತ್ಮಿಕತೆಯಿಂದ ಬೇರೆಯಾಗಬಹುದು. ಆದ್ದರಿಂದ ಮಾನವನಿಗೆ ಸ್ವಾಭಾವಿಕವಾಗಿಯೇ ತನ್ನ ನಷ್ಟ ಸಚ್ಚಿದಾನಂದ ಸ್ವರೂಪವನ್ನು ಪುನಃ ಲಭಿಸಿಕೊಳ್ಳಬೇಕೆಂಬ ಆಕಾಂಕ್ಷೆ ತಲೆದೋರುತ್ತದೆ; ಆತನು ಇಂದ್ರಿಯಗಳಲ್ಲಿ ಯಾವ ಸುಖವನ್ನೂ ಕಾಣಲಾರನು. ಆತನು ಇಂದ್ರಿಯಪ್ರಪಂಚವೇ ಸತ್ಯವೆಂದೂ ಶಾಶ್ವತವೆಂದೂ ಭ್ರಾಂತಿಯಿಂದ ಕೆಲಕಾಲ ನಂಬಬಹುದು, ಆದರೆ ಆತನಿಗೂ ಕೊನೆಯಲ್ಲಿ ಮರಣವು ಒದಗಿ, ಆತನೂ ಬಲಾತ್ಕಾರದಿಂದಲಾದರೂ "ಇದು ನಿಜವೇ?" ಎಂದು ಕೇಳಬೇಕಾಗುವುದು. ಈ ಪ್ರಶ್ನೆಯಿಂದ ಧರ್ಮವು ಪ್ರಾರಂಭವಾಗಿ, ಅದರ ಉತ್ತರದಲ್ಲಿಯೇ ಪರಿಸಮಾಪ್ತಿಯನ್ನು ಹೊಂದುತ್ತದೆ.

ಧರ್ಮವನ್ನು ವಿಜ್ಞಾನದ ಅಥವಾ ಅಧ್ಯಯನದ ದೃಷ್ಟಿಯಿಂದ ಪರೀಕ್ಷಿಸಿದರೆ ಅದೊಂದು ಮಹತ್ತರವಾದ ಶಕ್ತಿವರ್ಧಕ ವ್ಯಾಯಾಮವೇ ಸರಿ. ಮಾನವ ಮನಸ್ಸಿಗೆ ಈ ಅನಂತಾತ್ಮನ

ಅನ್ವೇಷಣೆಯೇ, ಈ ಇಂದ್ರಿಯಾತೀತ ವಸ್ತುವನ್ನು ಗ್ರಹಿಸಲು ಪಡುವ ಸಾಹಸವೇ, ವಸ್ತು ಪ್ರಪಂಚವನ್ನೇ ಹಿಮ್ಮೆಟ್ಟಿ, ಪಾರಮಾರ್ಥಿಕ ಮಾನವತೆಯನ್ನು ಕಲ್ಪಿಸಬೇಕೆಂಬ ಪ್ರಯತ್ನವೇ, ಆ ಅನಂತ ಸ್ವರೂಪದಲ್ಲಿ ಐಕ್ಯತೆಯನ್ನು ಹೊಂದಲು ಹಗಲಿರುಳೂ ಪಡುವ ಶ್ರಮವೇ ಒಂದು ಅತಿಶಯವಾದ ಸ್ತುತ್ಯ ಸಾಹಸವೆಂದು ತಿಳಿಸಿದರು.

ಧರ್ಮಾವಲಂಬನೆಯು ಅತ್ಯುತ್ತಮವಾದ ಸುಖವನ್ನು ಕೊಡುತ್ತದೆ. ನಮ್ಮ ಮಾನಸಿಕ ಸ್ಥಿತಿಗಳು ಕೀಳಾಗಿದ್ದಷ್ಟೂ ಇಂದ್ರಿಯಗಳಲ್ಲಿ ಹೆಚ್ಚಿನ ಸೌಖ್ಯ ಕಂಡುಬರುತ್ತದೆ. ನಾಯಿ ತೋಳಗಳಂತೆ ಊಟಮಾಡುವ ಮನುಷ್ಯರು ಬಹಳ ವಿರಳ. ಅವುಗಳ ಸುಖವೆಲ್ಲವೂ ಕೇವಲ ಇಂದ್ರಿಯಗಳಲ್ಲಿಯೇ ಅಡಗಿವೆ. ನಿಮ್ಮ ಪಂಗಡದವರು ಯಾವ ರಾಷ್ಟ್ರದವರೇ ಆಗಲಿ, ಇಂದ್ರಿಯಗಳಲ್ಲಿ ಮಾತ್ರ ಸುಖವನ್ನು ಕಾಣುತ್ತಾರೆ. ಶಿಕ್ಷಿತರೂ, ಶಿಷ್ಟರೂ ಅದನ್ನು ಸಚ್ಚಿಂತೆಯಲ್ಲಿಯೂ, ತತ್ತ್ವಶಾಸ್ತ್ರದ ಅಧ್ಯಯನದಲ್ಲಿಯೂ, ಕಲೆಯಲ್ಲಿಯೂ, ವಿಜ್ಞಾನದಲ್ಲಿಯೂ ಕಾಣುವರು. ಆಧ್ಯಾತ್ಮಿಕ ಪ್ರಕೃತಿಯು ಇನ್ನೂ ಹೆಚ್ಚಿನ ಮಟ್ಟದ್ದು. ಅಲ್ಲಿನ ವಿಷಯವು ಅಪಾರವಾದುದರಿಂದ ಅದೇ ಅತ್ಯುನ್ನತ ಸ್ಥಾನ ಮತ್ತು ಅಲ್ಲಿನ ಸುಖವೇ, ಅದನ್ನು ತಿಳಿದವರಿಗೆ ಅತ್ಯುತ್ಕೃಷ್ಟವಾದದ್ದಾಗಿದೆ. ಆದ್ದರಿಂದ ಪ್ರತಿಫಲಾಪೇಕ್ಷಕರ ದೃಷ್ಟಿಯಿಂದಲೂ ಮನುಷ್ಯನು ಧರ್ಮ ಪ್ರವರ್ತಕನಾಗಬೇಕು; ಏಕೆಂದರೆ ಅದೇ ಸರ್ವೋತ್ಕೃಷ್ಟವಾದ ಸುಖ. ಆದಾಗ್ಯೂ ಧರ್ಮವನ್ನು ಪ್ರತಿಫಲದ ಮಟ್ಟಕೋಲಿನಿಂದ ನಿರ್ಧರಿಸಕೂಡದು. ಪ್ರತಿಫಲವು ಸತ್ಯದ ಪ್ರಮಾಣವಲ್ಲ. ಸತ್ಯವನ್ನು ಸತ್ಯಕ್ಕಾಗಿಯೇ ಅನ್ವೇಷಿಸಬೇಕು. ನಿತ್ಯಸತ್ಯದ ಅರಿವೇ ಅದರ ಪಾರಿತೋಷಿಕ. ಪ್ರತಿಫಲಾಕಾಂಕ್ಷಿಗಳಿಗಾಗಿಯೇ ಅವರು ಧರ್ಮಾವಲಂಬನವು ಅತಿಶಯ ಸುಖದಾಯಕವೆಂದು ಹೇಳಿದರು.

ಧರ್ಮಾಚರಣೆಯಿಂದ ಕೇವಲ ವ್ಯಕ್ತಿಗಳು ಮಾತ್ರವಲ್ಲದೆ ಅವರನ್ನೊಡಗೊಂಡ ಸಮಾಜವು ಕೂಡ ಅನುಕೂಲವನ್ನು ಪಡೆಯುತ್ತದೆ. ಮಾನವವರ್ಗದ ವಿಧಿಯನ್ನು ನಿರ್ಮಾಪಿಸುವುದಕ್ಕೆ ಪ್ರಯತ್ನಿಸಿದ ಹಾಗೂ ಪ್ರಯತ್ನಿಸುತ್ತಿರುವ ಪ್ರಭಾವಗಳಲ್ಲೆಲ್ಲಾ ಧರ್ಮವೇ ಅತಿ ಬಲಿಷ್ಠವಾದುದು ಎಲ್ಲ ಸಮಾಜಸೂತ್ರಗಳೂ ಅದರ ವಿಶೇಷ ಪ್ರಭಾವದಿಂದ ನಡೆಯುತ್ತಿವೆ. ಮಾನವಬುದ್ಧಿಯನ್ನು ಉತ್ತೇಜಿಸುವ ಈ ಶಕ್ತಿಯೇ ಮಾನವವರ್ಗಗಳನ್ನು ಒಟ್ಟುಗೂಡಿಸಲು ಪ್ರಯತ್ನಿಸುವುದು. ಆಧ್ಯಾತ್ಮಿಕ ಧ್ಯೇಯಗಳು ನಮ್ಮನ್ನು ಉಜ್ವಲಿಸುವ ಹಾಗೆ ಮತ್ತಾವುದೂ ಮಾಡಲಾರದು. ಮಾನವಚರಿತ್ರೆಯಲ್ಲೆಲ್ಲಾ ಇದೇ ಸ್ಪಷ್ಟಗೊಂಡಿರುವ ಅಂಶ, ಅದು ಅಳಿದು ಹೋಗಿಲ್ಲ. ಪ್ರತಿಫಲಾನ್ವೇಷಕರಲ್ಲಿ ಸಜ್ಜನರೂ, ನೀತಿಶೀಲರೂ ಇರಬಹುದು, ಆದರೆ ವಿಶ್ವೋದ್ಧಾರಕರೂ, ಮಹಾ ಓಜಸ್ವಿಗಳೂ, ಸಾವಿರಾರು ಜನರನ್ನು ಆಧ್ಯಾತ್ಮಿಕ ಕಾರ್ಯಮಗ್ನರಾಗುವಂತೆ ಉದ್ದೀಪಿಸುವವರೂ, ಆಧ್ಯಾತ್ಮಿಕ ಜ್ವಾಲೆಯಿಂದ ಪ್ರಪಂಚವನ್ನೇ ಪ್ರಜ್ವಲಿಸುವ ಜೀವನವುಳ್ಳವರೂ—ಇವರೆಲ್ಲ ಆಧ್ಯಾತ್ಮಿಕ ಹಿನ್ನೆಲೆಯುಳ್ಳವರು. ಅವರ ಚೇತನಾಶಕ್ತಿಯು ಧರ್ಮದಿಂದ ಉದ್ಭವಿಸುತ್ತದೆ. ಪ್ರತಿಯೊಬ್ಬ ಮಾನವನಲ್ಲಿಯೂ ಅಡಗಿರುವ ಅನಂತ ಚೈತನ್ಯವನ್ನು ತಿಳಿಯಬೇಕಾದರೆ ಧರ್ಮವೇ ಅತ್ಯುನ್ನತವಾದ ಚೇತನಶಕ್ತಿ. ಗುಣ ರಚನೆಯಲ್ಲಿಯೂ, ಮಹತ್ತಾದ ಸತ್ಕಾರ್ಯಗಳನ್ನೆಸಗುವುದರಲ್ಲಿಯೂ, ಸ್ವಂತಕ್ಕೂ ಇತರರಿಗೂ ಸೌಖ್ಯವನ್ನು ಕಲ್ಪಿಸುವುದರಲ್ಲಿಯೂ ಧರ್ಮವೇ ಅತಿ ಮುಖ್ಯವಾದ ಚೇತನಶಕ್ತಿ.

ಪಾಶ್ಚಿಮಾತ್ಯ ದೇಶಗಳಲ್ಲಿ ಈ ಆಧ್ಯಾತ್ಮಿಕ ಶಕ್ತಿಯ ಅಭಾವವನ್ನು ಕಂಡು ಸ್ವಾಮಿಗಳು ತಮ್ಮ ಋಷಿವಾಣಿಯಿಂದ ಯೂರೋಪು ಖಂಡವು ಒಂದು ಜ್ವಾಲಾಮುಖಿಯ ಮೇಲೆ ಕುಳಿತಂತಿದೆ; ಅದು ಯಾವ ಕ್ಷಣದಲ್ಲಿಯೋ ಉಕ್ಕಿ ಬರುವುದು ಖಂಡಿತ ಎಂದು ಹೇಳಿದರು. ಸುಮಾರು ೫೦ ವರ್ಷಗಳ ಹಿಂದೆ ಹೇಳಿದ ಅವರ ಮಾತು ಕಳೆದ ಎರಡು ಜಗದ್ವ್ಯಾಪೀ ಮಹಾ ಸಂಗ್ರಾಮಗಳಿಂದಲೂ, ಇನ್ನೊಂದಕ್ಕಾಗಿ ಈಗ ನಡೆಯುತ್ತಿರುವ ಸಾಧಕಗಳಿಂದಲೂ ಸತ್ಯವೆಂದು ತೋರುತ್ತದೆ. ಡಾ| ವಿಲ್ ಡ್ಯೂರಂಟರೂ ಅದೇ ಎಚ್ಚರಿಕೆಯನ್ನು ಕೊಟ್ಟು ಹೀಗೆ ಹೇಳಿದರು—"ಅಮೇರಿಕಾದಲ್ಲಿ (ಧರ್ಮವನ್ನೂ ಈಶ್ವರನನ್ನೂ ತ್ಯಜಿಸಿದ ಅಮೇರಿಕಾದಲ್ಲಿ) ಇರುವ ನಾವು ಸಾಮಾಜಿಕ ವ್ಯವಸ್ಥೆಯನ್ನೂ ಜನತೆಯ ದಾರ್ಢ್ಯವನ್ನೂ ಲೌಕಿಕ ರೀತಿಯಿಂದ ಕಾಪಾಡುವ ಮಹಾಯೋಜನೆಗಳಲ್ಲಿ ನಿರತರಾಗಿದ್ದೇವೆ. ಆ ಯೋಜನೆಯು ಅಥೆನ್ಸ್‌ನಲ್ಲಿಯೂ (Athens), ಪುನರುಜ್ಜೀವಿತ ಇಟಲಿಯಲ್ಲಿಯೂ (Italy) ವ್ಯರ್ಥವಾಯಿತು. ಸಾಹಿತ್ಯದಲ್ಲಿಯೂ, ನೀತಿಶಾಸ್ತ್ರದಲ್ಲಿಯೂ, ಪೌರ ರೀತಿಯಲ್ಲಿಯೂ ಆಂಗ್ಲೇಯ ಶ್ರೇಷ್ಠತೆಯನ್ನು ಕುಗ್ಗಿಸಲಾಗಿದೆ. ಇನ್ನೂ ಇದೇ ರೀತಿ ನಡೆದರೆ ಪಶ್ಚಿಮ ಯೂರೋಪು ಹಾಗೂ ಉತ್ತರ ಅಮೇರಿಕದ ಜನಾಂಗಗಳನ್ನೆಲ್ಲ ಅಬಲರನ್ನಾಗಿ ಮಾಡಿ ಕೊನೆಗೆ ತಣ್ಣಗಾದ ಜ್ವಾಲಾಮುಖಿಯಂತೆ ಆಗುತ್ತೇವೆ." ಆದ್ದರಿಂದ ಪರಿಶುದ್ಧವಾದ ಸ್ವಭಾವವನ್ನೂ, ದೈವಭಕ್ತಿಯನ್ನೂ, ನಮ್ರತೆಯನ್ನೂ, ನಿಷ್ಕಾಪಟ್ಯವನ್ನೂ, ಅಸ್ವಾರ್ಥತೆಯನ್ನೂ, ಪ್ರೇಮವನ್ನೂ ಅಭ್ಯಸಿಸುವುದೊಂದೇ ಉಪಸ್ಥಿತ ದುರ್ಘಟನೆಯಿಂದ ಪರಿಪಾಲಿಸುವ ದಾರಿ. ಈ ಪ್ರೇಮಭಾವನೆಯೇ ಲೌಕಿಕ ಹಾಗೂ ಮಾನಸಿಕ ಪ್ರಗತಿಯನ್ನಲ್ಲದೆ, ವೈಯಕ್ತಿಕ ಅಥವಾ ಸಾಮಾಜಿಕ ಪ್ರಗತಿಯನ್ನೂ ನಿಷ್ಕರ್ಷಿಸುವ ಸಾಧಕ. ಏಕೆಂದರೆ, ಅದರ ಮೂಲಕ, ಈ ಉದಾರ ಸ್ವಭಾವಗಳ ಅಭಾವದಿಂದುಂಟಾದ ವಿನಾಶಕಾರಕ ವಿಭಜನಾ ಪ್ರಭಾವಗಳನ್ನೂ ವ್ಯಾಜ್ಯಗಳನ್ನೂ, ಭಿನ್ನಾಭಿಪ್ರಾಯಗಳನ್ನೂ, ಹೋರಾಟಗಳನ್ನೂ ನಿವಾರಿಸಬಹುದು. ಧರ್ಮಾಧಾರದಿಂದಲೇ ಈ ಶಕ್ತಿ ಬರುವುದು.

ಈ ಧರ್ಮವು ಸರ್ವದಾ ನಾಸ್ತಿಕತೆಯಿಂದ ದೂರವಾಗಿರಬೇಕು. ಈ ನಾಸ್ತಿಕತೆಯೇ ಹಿಂದಿನ ಯುದ್ಧಗಳ ಧರ್ಮದ ಹೆಸರಿನಲ್ಲಿ ನಡೆದ ಹಾನಿಗಳಿಗೆ ಮುಖ್ಯ ಕಾರಣ. ಧರ್ಮವನ್ನಾಗಲಿ, ವಿಜ್ಞಾನವನ್ನಾಗಲಿ ಸುಮ್ಮನೆ ದೂಷಿಸಬಾರದು. ವಿಜ್ಞಾನವನ್ನೇನೋ ನೃಶಂಸ ಸ್ವಭಾವಿಗಳು ಸಂಗ್ರಾಮದಲ್ಲಿ ಪ್ರಯೋಗಿಸುವ ವಿನಾಶಕ ಶಸ್ತ್ರಗಳನ್ನು ತಯಾರಿಸುವ ಸಾಧಕವನ್ನಾಗಿ ಮಾಡಿಕೊಂಡಿದ್ದಾರೆ. ಅದು ವಿಜ್ಞಾನದ ತಪ್ಪಲ್ಲ.

ಅನೇಕ ವೇಳೆ ಜನರು ಧರ್ಮದ ಮುಖ್ಯಾಂಶಗಳನ್ನು ಬಿಟ್ಟು ಅಮುಖ್ಯ ವಿಷಯಗಳಿಗಾಗಿ ಕಾದಾಡುತ್ತಾರೆ. ಈ ಅಮುಖ್ಯ ವಿವರಗಳ ಮೇಲೆ ಒತ್ತಾಯಪಡಿಸುವುದೇ ಧಾರ್ಮಿಕ ಜಗಳಗಳಿಗೆ ಮುಖ್ಯ ಕಾರಣ. ಎಲ್ಲ ಮತಗಳೂ ತಂತಮ್ಮ ಪರಮಧ್ಯೇಯಗಳೂ ಉದ್ದಿಶ್ಯಗಳೂ ಒಂದೇ ಎಂದು ಒಪ್ಪಿಕೊಳ್ಳುತ್ತವೆ. ಇದನ್ನು ಸ್ವಾಮಿಗಳು ಸಂಕ್ಷಿಪ್ತವಾಗಿ ಹೀಗೆ ಹೇಳಿದರು—"ನಮ್ಮ ಮೇಲೆ ಪ್ರಕೃತಿಗಿರುವ ಅಧಿಕಾರದಿಂದ ವಿಮುಕ್ತಿಗೊಳ್ಳುವುದೇ ನಮ್ಮ ಗುರಿ. ಇದೇ ಎಲ್ಲ ಮತಗಳ ಉದ್ದಿಶ್ಯ. ಅಂತರಂಗವಾಗಿಯೂ ಬಹಿರಂಗವಾಗಿಯೂ ಪ್ರಕೃತಿಯನ್ನು ವಶಪಡಿಸಿಕೊಂಡು ಗುಪ್ತದೇವತ್ವವನ್ನು ಹೊರಪಡಿಸುವುದೇ ಧರ್ಮದ ಲಕ್ಷ್ಯ. ಇದನ್ನು ಕರ್ಮಯೋಗದಿಂದಲೋ, ಭಕ್ತಿಯೋಗದಿಂದಲೋ, ರಾಜಯೋಗದಿಂದಲೋ, ಜ್ಞಾನಯೋಗದಿಂದಲೋ, ಅಥವಾ ಇವೆಲ್ಲ ವಿಧಾನಗಳಿಂದಲೋ ಸಾಧಿಸಿ ಮುಕ್ತರಾಗಿರಿ. ಇದೇ ಧರ್ಮದ ಸಾರ. ನಿಯಮಗಳು, ಸಂಪ್ರದಾಯಗಳು, ಕರ್ಮಗಳು, ಗ್ರಂಥಗಳು, ದೇವಸ್ಥಾನಗಳು, ವಿಗ್ರಹಗಳು—ಇವೆಲ್ಲ ಅಮುಖ್ಯ ವಿವರಣಗಳು ಮಾತ್ರ. ದೇವರಲ್ಲಿ ನಂಬಿಕೆ, ಅಂತರಾತ್ಮನ ದೇವತ್ವ, ಸ್ವಾನುಭವದಿಂದ ಮುಕ್ತರಾಗುವ ಸಾಧ್ಯತೆ ಇವುಗಳನ್ನು ಲಕ್ಷಿಸುವ ಪಕ್ಷದಲ್ಲಿ ಎಲ್ಲ ಧರ್ಮಗಳೂ ಒಂದೇ. ಎಲ್ಲ ಮಹಾಧರ್ಮಗಳು ಒಂದೆರಡು ಸಿದ್ಧ ಮಹಾಪುರುಷರಿಂದ ತಮ್ಮ ನಿರ್ಮಾಣವನ್ನೂ ಸೌಜನ್ಯವನ್ನೂ ಹೊಂದುತ್ತವೆ. ಇವೆಲ್ಲವೂ ಕೆಲ ಗ್ರಂಥಗಳನ್ನು ತಮ್ಮ ಪವಿತ್ರಶ್ರುತಿಗಳೆಂದು ನಂಬುತ್ತವೆ ಮತ್ತು ದೇವರನ್ನು ಪ್ರತ್ಯಕ್ಷಪಡಿಸಿಕೊಂಡು ಮುಕ್ತಿಪಡೆಯುವಂತೆ ಉತ್ತೇಜಿಸಿ ಆ ದೇವರನ್ನು ಆರಾಧಿಸಲು ಕೆಲ ಪ್ರತೀಕಗಳನ್ನೂ ವಿಗ್ರಹಗಳನ್ನೂ ಕಲ್ಪಿಸುತ್ತವೆ. ಆದ್ದರಿಂದ ಧರ್ಮಗಳು ಬಾಹ್ಯದಲ್ಲಿ ಬೇರೆ ಬೇರೆ ರೂಪಗಳನ್ನು ತಾಳಿದ್ದರೂ ಅವೆಲ್ಲವೂ ಸಾರಾಂಶದಲ್ಲಿ ಒಂದೇ ಆಗಿವೆ. ಸ್ವಾಮಿಗಳು ಹೀಗೆಂದರು—"ರಾಷ್ಟ್ರಗಳ ಭಾಷೆಗಳು ವಿವಿಧವಾಗಿವೆ; ಆತ್ಮನ ಭಾಷೆಯು ಒಂದಾಗಿದೆ. ಅವರ ಭಾವನೆಗಳೂ ನಡತೆಗಳೂ, ಬೇರೆ ಬೇರೆಯಾಗಿವೆ. ಧರ್ಮವೆಂಬುದು ಆತ್ಮ ಸಂಬಂಧಿ; ಅದು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಭಾಷೆಯಲ್ಲಿಯೂ ನಡತೆಯಲ್ಲಿಯೂ ಆವಿರ್ಭವಿಸುತ್ತದೆ. ಆದ್ದರಿಂದ ಧರ್ಮಕ್ಕಿರುವ ವೈವಿಧ್ಯತೆಯು ಬಾಹ್ಯದಲ್ಲಿಯೇ ಹೊರತು ಸಾರಾಂಶದಲ್ಲಿ ಇಲ್ಲ. ಅದರ ಸಾಮ್ಯತೆ ಹಾಗೂ ಐಕ್ಯತೆಯ ಅಂಶಗಳು ಆತ್ಮಕ್ಕೆ ಸೇರಿದವುಗಳು, ಅವು ಆಂತರಿಕವಾಗಿವೆ. ವಿವಿಧ ವಾದ್ಯಗಳಲ್ಲಿರುವ ಮಧುರ ಸಾಮರಸ್ಯವು ಅದರಲ್ಲಿಯೂ ಕಾಣಬರುತ್ತದೆ.

ಎಲ್ಲ ಧರ್ಮಗಳಲ್ಲಿಯೂ ಪುರಾಣ, ಕರ್ಮಪದ್ಧತಿ, ತತ್ತ್ವಬೋಧನೆ—ಎಂಬ ಮೂರು ಭಾವಗಳಿದ್ದರೂ ತತ್ತ್ವಭಾಗವೇ ಅತಿ ಮುಖ್ಯವಾದ ಸತ್ಯಾಂಶ. ಮಿಕ್ಕವೆರಡೂ ಅಮುಖ್ಯ ವಿವರಣೆಗಳು. ಅವನ್ನು ಸತ್ಯಾಂಶಕ್ಕೆ ಲೋಪಬಾರದ ರೀತಿಯಲ್ಲಿ ಬದಲಾಯಿಸಿಕೊಳ್ಳುವ ಅವಕಾಶವಿದೆ. ಆದರೆ ಸಂಪ್ರದಾಯಬದ್ಧರಾದ ಜನರು ಅಮುಖ್ಯ ವಿಷಯಗಳಿಗಾಗಿ ಹೋರಾಡಿ ಗಲಭೆಹೆಚ್ಚುತ್ತಾರೆ. ಭಾವನೆಯಲ್ಲಿಯೂ, ಪ್ರಯೋಗದಲ್ಲಿಯೂ ಸರ್ವಸಾಧಾರಣವಾಗಿದ್ದರೂ ಈ ವೈರೂಪ್ಯವು ಆವಶ್ಯಕವಾಗಿ ಉಂಟಾದುವೆಂದು ಸ್ವಾಮಿಗಳ ಅಭಿಪ್ರಾಯ. ಅವರು ಇನ್ನೂ ಹೇಳಿದ್ದೇನೆಂದರೆ—"ಬಾಹ್ಯ ಸಹಾಯಗಳು, ವಿಧಾನಗಳು, ರೂಪಗಳು, ವ್ರತಗಳು, ಕರ್ಮಗಳು, ನಿಯಮಗಳು—ಇವೆಲ್ಲಕ್ಕೂ ನ್ಯಾಯವಾದ ಸ್ಥಾನವುಂಟು. ಅವು ನಮಗೆ ಒತ್ತಾಯ ಕೊಟ್ಟು ನಮ್ಮನ್ನು ಪುಷ್ಟೀಕರಿಸುವ ಸಾಧಕಗಳು. ನಾವು ಪುಷ್ಟರಾದ ಮೇಲೆ ಅವುಗಳು ಅನಾವಶ್ಯಕ. ಅವುಗಳು ನಮ್ಮ ದಾದಿಯರು. ಆದ್ದರಿಂದ ಬಾಲ್ಯದಲ್ಲಿ ಅವುಗಳು ಅತ್ಯಾವಶ್ಯಕವಾಗಿವೆ. ನಿರಾಕಾರ ಬ್ರಹ್ಮನನ್ನು ಸಗುಣ ಆರಾಧನೆಯಿಂದಲೇ ಅರಿಯಲು ಸಾಧ್ಯವೆಂದು ಹಿಂದೂಗಳ ನಂಬಿಕೆ. ಆದ್ದರಿಂದ ವಿಗ್ರಹಗಳು, ಶಿಲುಬೆಗಳು, ಅರ್ಧಚಂದ್ರಾಕೃತಿಗಳು, ಬರಿಯ ಚಿಹ್ನೆಗಳು ಆಧ್ಯಾತ್ಮಿಕ ಭಾವಗಳ ಆಧಾರ ಮಾತ್ರ. ಈ ಸಹಾಯೋಪಾಯಗಳು ಎಲ್ಲರಿಗೂ ಆವಶ್ಯಕವೆಂದಲ್ಲ; ಆದರೂ ಆವಶ್ಯಕವಿಲ್ಲದಿರುವವರು ಅವು ಅಸಾಧುವೆಂದು ಹೇಳುವ ಅಧಿಕಾರವಿಲ್ಲ." ಈ ರೀತಿಯಾಗಿ ಎಲ್ಲ ಧರ್ಮಗಳ ಮುಖ್ಯ ಧ್ಯೇಯವನ್ನು ನಿರೂಪಿಸಿ, ಅವುಗಳ ಸಾಮ್ಯ ಹಾಗೂ ವೈರೂಪ್ಯ ಅಂಶಗಳನ್ನು ವಿವರಿಸಿ ಬೇರೆ ಬೇರೆ ಧರ್ಮಗಳಿಗೆ ಸೌಹಾರ್ದವನ್ನು ಕಲ್ಪಿಸಿದರು.

ವಿವಿಧ ಧರ್ಮಗಳು ಮಾನವರ ವಿವಿಧ ಅಭಿರುಚಿಗಳಿಗೂ ತಿಳಿವಿಗೂ ತಕ್ಕಂತೆ ನಿರ್ಮಿತವಾಗಿವೆ. "ನಮ್ಮ ಸ್ವಭಾವಗಳು ಬೇರೆ ಬೇರೆಯಾಗಿರುವುದರಿಂದ ಒಂದೇ ವಿಧಾನವನ್ನು ಒಂದೇ ರೀತಿಯಲ್ಲಿ ಯಾರೊಬ್ಬರಿಗೂ ಪ್ರಯೋಗಿಸಲಾಗುವುದಿಲ್ಲ. ನಮ್ಮಲ್ಲಿ ಕೆಲವರು ರಸಭಾವಸಮನ್ವಿತರು, ಕೆಲವರು ವಿಚಾರಪೂರಿತರು, ಕೆಲವರು ವಿವೇಕಿಗಳು, ಕೆಲವರು ವಿವಿಧ ವ್ರತಾಚಾರಿಗಳು—ಇವರು ವಾಸ್ತವಿಕವನ್ನು ಆಶಿಸುತ್ತಾರೆ. ಇವೆಲ್ಲರೂ ಒಂದೇ ಮಾರ್ಗವನ್ನನುಸರಿಸಲಾರರು. ಒಂದೇ ಮಾರ್ಗವಿದ್ದ ಪಕ್ಷದಲ್ಲಿ ಅದಕ್ಕನುಗುಣವಾದ ಮನೋಭಾವವಿಲ್ಲದವರೆಲ್ಲ ಸತ್ತಂತೆಯೇ ಆಗುತ್ತಿದ್ದರು. ಈ ದೃಷ್ಟಿಯಿಂದ ನೋಡಿದರೆ ಪ್ರಪಂಚದಲ್ಲಿರುವ ಬೇರೆ ಬೇರೆ ಧರ್ಮಗಳು

ಬೇರೆ ಬೇರೆ ಆಚಾರ್ಯರೂ ಋಷಿಗಳೂ ಇರುವುದೇ ಸಮಂಜಸವೆಂದು ತೋರುತ್ತದೆ. ಎಲ್ಲರನ್ನೂ ಒಂದೇ ಭಾವನೆಗೆ ಒಮ್ಮನಸ್ಸು ಮಾಡಲು ಸಾಧ್ಯವಾಗುವುದಿಲ್ಲ, ಇದು ನೈಜಾಂಶ. ಹೀಗಿರುವುದೇ ಒಂದು ಸುಕೃತವೆಂದು ನನ್ನ ಭಾವನೆ. ವಿಚಾರ ಘರ್ಷಣೆಯೇ ಪ್ರಜ್ಞಾಕಾರಕ. ನಾವೆಲ್ಲರೂ ಒಂದೇ ರೀತಿಯಿಂದ ಯೋಚನೆಮಾಡಿದ ಪಕ್ಷದಲ್ಲಿ ಈಜಿಪ್ಟಿನ ರಕ್ಷಿತ ಶವಗಳಂತೆ(Egyptian Mummies) ಒಬ್ಬರ ಮುಖವನ್ನೊಬ್ಬರು ನೋಡುತ್ತ ಕುಳಿತಿರಬೇಕಾಗಿದ್ದಿತು. ಶಾಖೆಗಳು ಹೆಚ್ಚಿದ ಹಾಗೆಲ್ಲ ಧರ್ಮಾವಲಂಬನೆಯು ಹೆಚ್ಚಾಗುತ್ತದೆ. ಹೊಟೇಲುಗಳಲ್ಲಿ ವಿವಿಧ ಆಹಾರಗಳಿರುವುದರಿಂದ ಎಲ್ಲರೂ ತಂತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಬಹುದು. ಆದ್ದರಿಂದ ಪ್ರತಿಯೊಂದು ದೇಶದಲ್ಲಿಯೂ ಶಾಖೆಗಳು ಹೆಚ್ಚಿ ಆಧ್ಯಾತ್ಮಿಕ ಜೀವನಕ್ಕೆ ಸಹಾಯವಾಗಲೆಂದೇ ನನ್ನ ಹಾರೈಕೆ.

ಆತ್ಮಸಾಕ್ಷಾತ್ಕಾರಕ್ಕೆ ಧರ್ಮಗಳ ವೈರೂಪ್ಯವು ನಿರಾತಂಕವೆಂಬುದನ್ನು ಸ್ಪಷ್ಟಪಡಿಸಿ, ಎಲ್ಲ ಶಾಖೆಗಳು ಸನಾತನ ಧರ್ಮದ ರೂಪಪ್ರಭೇದವೆಂದು ತಿಳಿಸಿದರು. ಈ ಸಂದರ್ಭವಾಗಿ ಅವರು ಹೇಳಿದ್ದೇನೆಂದರೆ—"ಪ್ರಪಂಚದಲ್ಲಿರುವ ಧರ್ಮಗಳು ಬೇರೆ ಬೇರೆಯಾಗಿಲ್ಲ, ವಿರುದ್ಧವಾಗಿಲ್ಲ. ಅವು ಸನಾತನ ಧರ್ಮದ ವಿವಿಧಾಕಾರಗಳು ಮಾತ್ರ. ಆ ಸನಾತನ ಧರ್ಮವು ಜೀವನದ ಬೇರೆ ಬೇರೆ ಅಂತಸ್ತುಗಳಿಗೂ, ಬೇರೆ ಬೇರೆ ಅಭಿಪ್ರಾಯಗಳಿಗೂ, ಬುದ್ಧಿಕುಶಲತೆಗೂ, ಜನಾಂಗಗಳಿಗೂ ತಕ್ಕಂತೆ ಮಾಡಲಾಗಿದೆ" ವಿಶೇಷ ಹೆಸರುಗಳನ್ನೂ ರೂಪಗಳನ್ನೂ ವಿಧಾನಗಳನ್ನೂ ನಿರ್ಲಕ್ಷಿಸಿ, ಎಲ್ಲ ಧರ್ಮಗಳ ಮೂಲಾಧಾರಗಳನ್ನು ಸ್ವಾಮಿಗಳು ಸನಾತನ ಧರ್ಮವೆಂದು ಗ್ರಹಿಸಿದರು. ಈ ಸೂತ್ರದಿಂದಲೇ ಪ್ರಪಂಚದ ವಿವಿಧ ಧರ್ಮಗಳೂ ರೂಪುಗೊಂಡಿರುವುವು. ಬೇರೆ ಬೇರೆ ಜನಸಮೂಹಗಳಿಗೆ ಬೇರೆ ಬೇರೆ ಸತ್ಯಸಾಧನಾಮಾರ್ಗಗಳನ್ನು ತೋರಿಸಿಕೊಡುವುದೇ ಇವುಗಳ ಕರ್ತವ್ಯ. ಇದೇ ಸ್ವಾಮಿಗಳು ಮಾನವಕೋಟಿಯ ಮುಂದೆ ಇಟ್ಟ ವಿಶ್ವಧರ್ಮ ಸಿದ್ಧಾಂತ. ಜನರು ಮೌಢ್ಯದಿಂದ ಕೂಡಿದ ಕೋಮುವಾರು ಭಿನ್ನಾಭಿಪ್ರಾಯಗಳನ್ನೂ ವ್ಯಾಜ್ಯಗಳನ್ನೂ ತ್ಯಜಿಸಿ ಏಕಮನಸ್ಕರಾಗಲೆಂದು ಅವರ ಅಭಿಪ್ರಾಯ. ಈ ವಿಶ್ವಧರ್ಮದ ಅರಿವಿನಿಂದ ಪ್ರತಿಯೊಬ್ಬನೂ ಸ್ವಪರಧರ್ಮಗಳಲ್ಲಿ ಸಮನಾದ ಭಕ್ತಿ ಆದರಗಳನ್ನು ತೋರಿಸುವವನಾಗುತ್ತಾನೆ. ಸ್ವಾಮಿಗಳು ತಮ್ಮ ಗುರುಗಳಿಂದ ಶ್ರೀ ರಾಮಕೃಷ್ಣರನ್ನು ಈ ವಿಶ್ವಧರ್ಮದ ಸ್ವರೂಪವೆಂದು ಮನಗಂಡು ಅದನ್ನು ಗ್ರಹಿಸಿ ಪ್ರಪಂಚದಲ್ಲಿ ಸಾರಿದರು. ಯಾವ ಧರ್ಮದಲ್ಲಿ ಪರಧರ್ಮವನ್ನು ದೂಷಿಸುವುದಕ್ಕೂ, ಶಿಕ್ಷಿಸುವುದಕ್ಕೂ ಅವಕಾಶವಿಲ್ಲವೆ, ಎಲ್ಲ ಸ್ತ್ರೀ-ಪುರುಷರಲ್ಲಿಯೂ ದೈವಾಂಶವನ್ನು ಕಾಣುತ್ತದೆಯೋ ಮತ್ತು ಯಾರ ಪರಮೋದ್ದಿಶ್ಯವು ಜನತೆಯ ಆತ್ಮಸಾಕ್ಷಾತ್ಕಾರಕ್ಕೆ ಸಹಾಯಮಾಡುವುದಾಗಿರುವುದೋ ಅದೇ ನಿಜವಾದ ಧರ್ಮ. ಅದನ್ನು ಈ ರೀತಿಯಿಂದ ಸಿದ್ಧಾಂತಪಡಿಸಿದರು—"ಕಾಲದೇಶಗಳಲ್ಲಿ ಅದಕ್ಕೆ ಸ್ಥಾನವಿಲ್ಲ. ಅದು ಪ್ರಚಾರಿಸುವ ದೇವರಂತೆ ಅನಂತಾತ್ಮವಾಗಿರುವುದು. ಅದರ ಸೂರ್ಯನು ಕೃಷ್ಣನ ಮತ್ತು ಕ್ರಿಸ್ತನ ಅನುಯಾಯಿಗಳ ಮೇಲೆಯೂ, ಸಂತರ ಮತ್ತು ಪತಿತರ ಮೇಲೆಯೂ ನಿರ್ಭೀದದಿಂದ ಪ್ರಕಾಶಿಸುವನು. ಅದು ಬೌದ್ಧ, ಬ್ರಾಹ್ಮಣ, ಕ್ರೈಸ್ತ, ಮಹಮ್ಮದೀಯ ಮತಗಳಂತೆ ಬೇರೆಯಾಗಿ ಕಾಣದೆ, ಎಲ್ಲದರ ಮೊತ್ತದಂತೆ ತೋರಿ, ಇನ್ನೂ ಮುಂದುವರಿಯಲು ಅಪಾರ ಅವಕಾಶಗಳನ್ನು ಹೊಂದಿ ಅದರ ಅನಂತ ವ್ಯಾಪ್ತಿಯಲ್ಲಿ ಪ್ರತಿಯೊಂದು ವ್ಯಕ್ತಿಗೂ ಸ್ಥಾನವನ್ನು ಕಲ್ಪಿಸಿಕೊಡುವುದು." ಈ ವಿಶ್ವಧರ್ಮದಲ್ಲಿ ಅವರಿಗಿದ್ದ ಉಜ್ವಲ ನಂಬಿಕೆಯನ್ನು ಈ ರೀತಿಯಾಗಿ ವರ್ಣಿಸಿದರು: "ನಾನು ಪ್ರಾಚೀನ ಧರ್ಮಗಳನ್ನೆಲ್ಲ ಮರ್ಯಾದಿಸುತ್ತೇನೆ ಹಾಗೂ ಪೂಜಿಸುತ್ತೇನೆ. ಅವುಗಳು ಯಾವ ಯಾವ ರೀತಿಯಿಂದ ದೇವರನ್ನು ಪೂಜಿಸುವುವೋ ಆಯಾ ರೀತಿಗಳಿಂದೆಲ್ಲ ನಾನೂ ಪೂಜಿಸುವೆನು. ಮಹಮ್ಮದೀಯನ ಮಸೀದಿಗೆ ಹೋಗುವೆನು, ಕ್ರೈಸ್ತ ದೇವಸ್ಥಾನಕ್ಕೆ ಹೋಗಿ ಶಿಲುಬೆಯ ಮುಂದೆ ಅಡ್ಡಬೀಳುವೆನು; ಬೌದ್ಧ ದೇವಾಲಯಗಳಿಗೆ ಹೋಗಿ ಬುದ್ಧನಲ್ಲಿಯೂ, ಧರ್ಮದಲ್ಲಿಯೂ ಮರೆಹೊಗುವೆನು; ಅರಣ್ಯವನ್ನು ಹೊಕ್ಕು ಅಲ್ಲಿ, ಎಲ್ಲರ ಹೃದಯದಲ್ಲಿ ಬೆಳಗುವ ದಿವ್ಯಜ್ಯೋತಿಯನ್ನು ಅನುಭವಿಸಲು ದೀಕ್ಷಿಸಿರುವ ಹಿಂದೂ ಯತಿಯ ಜೊತೆ ಕುಳಿತು ಧ್ಯಾನಪರವಶನಾಗುವೆನು. ಇಷ್ಟನ್ನೆಲ್ಲ ಮಾಡುವುದಲ್ಲದೆ ಇನ್ನು ಮುಂದೆ ಬರುವ ಹೊಸ ವಿಧಾನಗಳಿಗೆಲ್ಲ ನನ್ನ ಹೃದಯದಲ್ಲಿ ಸ್ಥಾನವನ್ನು ಕಲ್ಪಿಸಿರುವೆನು. ಬೈಬಲ್, ವೇದಗಳು, ಕೊರಾನ್ ಮತ್ತು ಇತರ ಪವಿತ್ರ ಗ್ರಂಥಗಳು ಬಹು ವಿಸ್ತಾರವಾಗಿವೆ; ಇನ್ನೂ ಎಷ್ಟೋ ವಿಷಯಗಳನ್ನು ಹೊರಗೆಡಹಬೇಕಾಗಿವೆ. ಅವುಗಳನ್ನೆಲ್ಲ ಸಮ್ಮತಿಸುವೆನು."

ಈ ವಿಧವಾದ ವಿಚಾರಪೂರಿತ ವಾಣಿಯಿಂದ ಧರ್ಮದ ಆವಶ್ಯಕತೆಯನ್ನೂ, ಪ್ರಾಮುಖ್ಯತೆಯನ್ನೂ ವಿವರಿಸಿಯೂ, ವಿಶ್ವಧರ್ಮದ ಮಹಾಭಾವವನ್ನು ವಿಶದಪಡಿಸಿಯೂ, ಶ್ರೀ ರಾಮಕೃಷ್ಣರ ಮತ್ತು ಸ್ವಂತ ಅನುಭವಗಳ ಆಧಾರದಿಂದಲೂ ವೇದಗಳ ಸಂದೇಶವನ್ನೂ, ಪ್ರಪಂಚದ ನಾನಾ ಧರ್ಮಗಳನ್ನೂ ಪುನರುಜ್ಜೀವಿಸಿ, ಅವುಗಳಿಗೆ ಪ್ರಜ್ಞಾನಿಕರ ಧಾಳಿಯಿಂದ ಚೇತರಿಸಿಕೊಳ್ಳುವ ಶಕ್ತಿಯನ್ನು ಕೊಟ್ಟು ಅವುಗಳನ್ನು ಕಾಪಾಡಲು ಪ್ರಯತ್ನಿಸಿದರು. ಈ ವಿಷಯಗಳು ಪ್ರಾಚ್ಯ ಪಾಶ್ಚಿಮಾತ್ಯದೇಶಗಳಲ್ಲೆಲ್ಲ ಹಬ್ಬುತ್ತಿವೆ. ಕ್ರಮೇಣ ಅವು ಜನಾಂಗಗಳ ಮೇಲೆ ಉದ್ದಿಷ್ಟ ಪರಿಣಾಮವನ್ನುಂಟುಮಾಡಿ ಅವರನ್ನೆಲ್ಲ ಭ್ರಾತೃಭಾವದಲ್ಲಿ ವರ್ತಿಸುವಂತೆ ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ.

ಭಾರತದಲ್ಲಿ ಪ್ರಾಣಿಗಳ ಕಾದಾಟ ಸ್ಪರ್ಧೆ



ಫೊಟೋ: ಬರ್ನಾರ್ಡ್ ಕ್ವಾರಿಚ್.

ಒಂಟೆಗಳೊಳಗೆ ಕಾದಾಟ (ಹದಿನೇಳನೆ ಶತಮಾನದ ಪರ್ಶಿಯನ್ ಚಿತ್ರಕಾರರೊಬ್ಬರಿಂದ)

[ಪ್ರಾಚೀನ ಭಾರತದಲ್ಲಿ ವಿಶೇಷ ಉತ್ಸವ ಸಂಭ್ರಮಗಳಲ್ಲಿ ಪ್ರಾಣಿಗಳ ಕಾದಾಟ ಸ್ಪರ್ಧೆ ಏರ್ಪಡಿಸುವುದು ಪ್ರಸಿದ್ಧಿಯಲ್ಲಿತ್ತು. ಇದು ಜನರ ಮೆಚ್ಚಿನ ವಿನೋದವಾಗಿತ್ತು. ಇಂದು ಅಂತಹ ಕಾದಾಟಗಳು ಅಪರೂಪ. ಕೆಲವರ್ಷಗಳ ಹಿಂದೆ ಬರೋಡಾ ಜುಬಿಲಿ ಸಮಾರಂಭ ಕಾಲದಲ್ಲಿ ಒಮ್ಮೆ ಅವುಗಳು ನಡೆದಿದ್ದುವು.]

"ನಿಮ್ಮ ಒಂಟೆಯನ್ನು ಎಷ್ಟು ಬಗೆಯಾಗಿ ಕಟ್ಟಲು ಸಾಧ್ಯವಿದೆಯೋ ಅಷ್ಟು ಬಗೆಯಾಗಿ ಕಟ್ಟು; ಮತ್ತು ಅದೃಷ್ಟದಲ್ಲಿ ಭರವಸೆಯಿಡು" ಎಂಬ ಗಾದೆ ಅರಬ್ಬಿ ಭಾಷೆಯಲ್ಲಿ ಪ್ರಸಿದ್ಧಿಯಲ್ಲಿದೆ. ಅರಬರ ಆ ಗಾದೆಯ ಅರ್ಥವೇನೇ ಇರಲಿ, ಆದರೆ ಬರೇ ಉಪಚಾರ ವ್ಯತ್ಯಾಸ ಮಾತ್ರದಿಂದ ಎಷ್ಟೇ ಕೋಮಲವಾಗಿ ಸಾಕಿದ ಒಂಟೆ ಕದಡಬಲ್ಲುದೆಂಬುದು ಅದರಿಂದ ವ್ಯಕ್ತವಾಗುತ್ತದೆ.

ಕೋಪಕ್ಕೆ ಮತ್ತು ಸಿಟ್ಟಿಗೆ ಒಂಟೆಗಳು ಹೆಸರುಹೋಗಿವೆ. ಹೋರಾಟಕ್ಕೆ ತೊಡಗಿದುವೆಂದರೆ ಅವುಗಳಷ್ಟು ಭಯಂಕರ ಪ್ರಾಣಿಗಳು ಬೇರೆ ಇರಲಾರವು. ವಂಶಪಾರಂಪರ್ಯದ ದೊಡ್ಡ ಐತಿಹ್ಯವನ್ನೇ ಅವು ಕಟ್ಟಿಕೊಂಡಿವೆ; ಅತ್ಯಂತ ಪ್ರಾಚೀನ ಕಾಲದ ಪ್ರಾಣಿಗಳಲ್ಲಿ ಒಂಟೆಯು ಒಂದು. ಪ್ರಾಯಃಶಃ ಆ ಪರಂಪರೆಯೇ ಬಿರುಸಿನ ಹೋರಾಟಗಳಲ್ಲಿ ಅವುಗಳಿಗೆ ಹೆಗ್ಗಳಿಕೆ ತಂದಿರುತ್ತದೆ. ಹದಿನೇಳನೇ ಶತಮಾನದ ಪ್ರಸಿದ್ಧ ಪರ್ಶಿಯನ್ ಚಿತ್ರಗಾರ ಮಾಯ್ನ್ ಮುಸಾವೀರನು ಒಂಟೆಗಳ ಕಾದಾಟಕ್ಕೆ ಸಂಬಂಧಪಟ್ಟ ಅನೇಕ ಚಿತ್ರಗಳನ್ನು ಬರೆದಿದ್ದಾನೆ.

ಅದೇ ರೀತಿ ಹದಿನೇಳನೇ ಶತಮಾನದಲ್ಲಿ ಭಾರತದಲ್ಲಿ ಪ್ರಸಿದ್ಧಿಯಲ್ಲಿದ್ದ ಆನೆಗಳ ಹೋರಾಟದ ಕುರಿತಾದ ಚಿತ್ರಗಳೂ ಇವೆ. ಆನೆಗಳ ಹೋರಾಟ ಈಗಲೂ ಭಾರತದ ಕೆಲವು ಸಂಸ್ಥಾನಗಳಲ್ಲಿ ಪ್ರಸಿದ್ಧಿಯಲ್ಲಿದೆ. ದೊಡ್ಡ ದೊಡ್ಡ ಬಿದಿರ್ಗಳಿಗೆ ಸುಡುಮದ್ದುಗಳನ್ನು ಕಟ್ಟಿ, ಹೋರಾಡುವ ಪ್ರಾಣಿಗಳನ್ನು ಪರಸ್ಪರ ಬೇರ್ಪಡಿಸುವ ಚಿತ್ರಗಳೂ ಇವೆ.

ಭಾರತದಲ್ಲಿ ಆಳ್ವಿಕೆ ನಡೆಸಿದ ಅಕ್ಬರ್ ಮತ್ತು ಇತರ ಮುಸ್ಲೀಮ್ ಅರಸರು ಪ್ರಾಣಿಗಳ ಕಾದಾಟವನ್ನು ವಿಶೇಷವಾಗಿ ಮೆಚ್ಚುತಿದ್ದರು. ಲಕ್ನೋದಲ್ಲಿ ಈ ಹೋರಾಟಗಳು ಅತ್ಯಂತ ಪ್ರಸಿದ್ಧವಾಗಿದ್ದುವು. 'ಒರಿಯಂಟಲ್ ವಾರ್ಷಿಕ' ಒಂದರಲ್ಲಿ ಪ್ರಕಟವಾದಂತೆ, ಅಯೋಧ್ಯೆಯ ಅರಸರು ಮೃಗಗಳ ಕಾದಾಟ ನಡೆಯುವ ಅಂಗಣದ ನಡುವೆ ಒಂದು ಹೆಣ್ಣಾನೆಯನ್ನು ನಿಲ್ಲಿಸುವ ಕ್ರಮವಿತ್ತೆಂದು ಕೇಳಿಬರುತ್ತದೆ.

ಎರಡು ಗಂಡಾನೆಗಳನ್ನು ರಂಗದ ಎರಡು ಮೂಲೆಗಳಿಂದ ಕಾಳಗದ ಕಳಕ್ಕೆ ಕಳಿಸುವರು. ಎರಡೂ ಆನೆಗಳು ಹೆಣ್ಣಾನೆಯ ಕಡೆಗೆ ದೃಷ್ಟಿಯಿಟ್ಟು ಮುಂದುವರಿಯುವವು. ತೀರಾ ಹತ್ತಿರದ ವರೆಗೆ ಬರುವ ತನಕ ಒಂದಿನ್ನೊಂದನ್ನು ನೋಡುವುದಿಲ್ಲ. ಪರಸ್ಪರ ದೃಷ್ಟಿ ಮಿಲನವಾಯಿತೆಂದೊಡನೆ ದೊಡ್ಡ ಶಬ್ದವೊಂದು ಎಷ್ಟೇ ಮಾರು ಗಜಗಳ ವರೆಗೆ ಕೇಳಿಸುವುದು. ಆನೆಗಳು ಒಂದಿನ್ನೊಂದರೊಡನೆ ತಲೆ ಬಡೆಯುವ ಶಬ್ದವದು.

ಕಾಳಗ ಮುಗಿಯುವ ತನಕ ಹೆಣ್ಣಾನೆಯು ಕೇಂದ್ರಸ್ಥಳದಲ್ಲೇ ಇರುತ್ತದೆ. ಅದನ್ನು ಮೆಚ್ಚಿಸಲು ರಣಕಳಕ್ಕೆ ಬಂದ ಗಂಡಾನೆಗಳು ಆವೇಶದಿಂದ ಸೆಣಸಾಡುವವು. ಸೆಣಸಾಟವು ಕೊನೆಗೊಳ್ಳುವ ಸ್ಥಿತಿ ಉಂಟಾಯಿತೆಂದೊಡನೆ ಮಾವುತನು ಹೋರಾಡುವ ಆನೆಗಳನ್ನು ಬೇರ್ಪಡಿಸುವನು. ಎರಡು ಹೋರಾಡುವ ಆನೆಗಳ ನಡುವೆ ಸುಡುಮದ್ದನ್ನು ಬಿಸಾಡಿ ಹೋರಾಟ ನಿಲ್ಲಿಸುವರು.



ಆನೆಗಳ ಕಾದಾಟ. ಮನುಷ್ಯರು ಉರಿವ ಕೊಳ್ಳಿಗಳಿಂದ ಆ ಮೃಗಗಳನ್ನು ಬೇರ್ಪಡಿಸಲು ಯತ್ನಿಸುತಿದ್ದಾರೆ. (ಹದಿನೇಳನೇ ಶತಮಾನದ ಭಾರತೀಯ ಚಿತ್ರ ಸಂಗ್ರಹದಿಂದ)

ಬರೋಡದಲ್ಲಿ

ಲಾರ್ಡ್ ರೀಡಿಂಗರು ವೈಸ್ರಾಯರಾಗಿ ಇಲ್ಲಿ ಆಳುತ್ತಿದ್ದಾಗ ಇಂತಹದೇ ಕಾದಾಟಗಳು ಬರೋಡದಲ್ಲಿ ನಡೆಯುತ್ತಿದ್ದುವು. ಇಲ್ಲಿ ಕಾಳಗದ ಕಳದಲ್ಲಿ ಹೆಣ್ಣಾನೆಯನ್ನು ನಿಲ್ಲಿಸುವ ಕ್ರಮವಿರಲಿಲ್ಲ. ಹೋರಾಟದ ಕೆಲವು ದಿನಗಳ ಮುಂಚೆ ಗಂಡಾನೆಗಳಿಗೆ ಅತ್ಯಲ್ಪ ಆಹಾರ ಕೊಟ್ಟು, ಹಸಿವೆಯಿಂದ ಅವು ಕಿಡಿಕಿಡಿಯಾಗುವಂತೆ ಮಾಡುವರು. ಆ ರೀತಿ ಆನೆಗಳಲ್ಲಿ ರೋಷವನ್ನು ಹೆಚ್ಚಿಸಿ ಹೋರಾಟಕ್ಕೆ ಅವುಗಳನ್ನು ಪ್ರೇರೇಪಿಸುವರು.

ಆದರೆ ಆ ರೀತಿಯ ಹೋರಾಟದಲ್ಲಿ ಆನೆಗಳು ಡಿಕ್ಕಿ ಬಡೆವ ಶಬ್ದ ವಿಶೇಷವಾಗಿ ಕೇಳಿಸುವುದಿಲ್ಲ. ಅದರ ಬದಲು ಎರಡು ಕೋಣಗಳನ್ನು ಕಾಳಗಕ್ಕೆ ಬಿಟ್ಟಾಗ, ಆ ಹೋರಾಟ ಇನ್ನಷ್ಟು ಭಯಂಕರವೆನಿಸುವುದು. ಒಂದಕ್ಕೊನ್ನೊಂದು ಕೋಡುಗಳಿಂದ ಹಾಯುವಾಗ ಉಂಟಾಗುವ ಶಬ್ದ ಸಿಡಿಲಿನ ಶಬ್ದದಂತೆ ಕೇಳಿಸುತ್ತದೆ.

ನಿಜವಾಗಿ ನೋಡುವುದಿದ್ದರೆ ಪ್ರಾಣಿಗಳ ಕಾದಾಟ ಸ್ಪರ್ಧೆ ಅಷ್ಟೊಂದು ಸುಧಾರಿತ ವಿನೋದವಲ್ಲ. ಅದು ಕ್ರೂರ ಸ್ಪರ್ಧೆ. ಕಾಳಗದ ಕಳದಲ್ಲಿ ಸುಳಿಯುವ ಮಾವುತರಿಗೆ ಮತ್ತು ಇನ್ನಿತರರಿಗೆ ತುಂಬಾ ಅಪಾಯಕರ. ಜೀವವನ್ನು ಕೈಯಲ್ಲಿಟ್ಟುಕೊಂಡು ಅವರು ಅತ್ತಿತ್ತ ಚಲಿಸಬೇಕಾಗುವುದು. ಈ ಕಾದಾಟಗಳು ಅತ್ಯಂತ ಜನಪ್ರೀತವಾಗಿದ್ದರೂ ನಾಗರಿಕ ಪ್ರಪಂಚದಲ್ಲಿ ಅವುಗಳಿಗೆ ಪ್ರೋತ್ಸಾಹ ಹೆಚ್ಚಿಗೆ ದೊರೆಯುವ ಆಶೆಯಿಲ್ಲ. "ಪ್ರಾಣಿಗಳನ್ನು ಹಿಂಸಿಸಬಾರದು; ಕ್ರೂರ ರೀತಿಯಿಂದ ಅವುಗಳನ್ನು ಕಾಣಬಾರದು. ಪ್ರಾಣಿಹಿಂಸೆಯನ್ನು ಕಠಿಣ ಶಾಸನದಿಂದ ದಂಡಿಸಲಾಗುವುದು" ಎಂಬ ಅಹಿಂಸಾ ನೀತಿ ಪ್ರಚಾರವಾದ ಹಾಗೆಲ್ಲಾ ಈ ವಿನೋದಗಳು ಅಡಗಬೇಕಾಗುತ್ತದೆ. ನಮ್ಮಲ್ಲಿ ಈಗ ವಿಶೇಷವಾಗಿ ಬಳಕೆಯಲ್ಲಿರುವುದೆಂದರೆ ಕೋಳಿ ಜೂಜು. ಅದನ್ನೂ ನಿಲ್ಲಿಸುವ ಪ್ರಯತ್ನಗಳು ಬಿರುಸಿನಿಂದ ನಡೆಯುತ್ತಿವೆ.

ಆದರೆ ಒಂಟಿಯು ಸಂದರ್ಭ ಸಿಕ್ಕಿದಾಗಲೆಲ್ಲಾ ಹೋರಾಡುತ್ತ ಹೋಗುವುದು. ಆವೇಶದಿಂದ ಅದು ಹೋರಾಟ ಬಯಸುತ್ತಿದೆ ಎಂದು ಮಂದಟ್ಟಾದೊಡನೆ ಬಳಿಯಲ್ಲಿರುವ ಪ್ರೇಕ್ಷಕನು ಆದಷ್ಟು ದೂರಕ್ಕೆ ಹಿಂದೆ ಸರಿಯುವುದು ಲೇಸು.

ಒಂಟಿಗಳ ಹೋರಾಟವೆಂದರೆ ಅದೊಂದು ತೀರಾ ಖಾಸಗಿ ಹೋರಾಟವೆಂದು ಐರಿಷ್ ಜನರ ಅರ್ಥವಾಗಿದೆ; ಕಾಳಗಕ್ಕೆ ಯಾವುದೇ ವಿಷಯದಲ್ಲಿ ಸಂಬಂಧಪಡದ ಪ್ರೇಕ್ಷಕನಿಗೆ ಹಾನಿತರುವಂತಹದಲ್ಲ.

ಭಾಷಾ ಸಮಸ್ಯೆ



ಲೇಖಕರು:

ಶ್ರೀ. ಸಿ. ಕೆ. ನಾಗರಾಜ ರಾವ್.

ನಮಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ನಾಲ್ಕು ವರ್ಷಗಳು ಕಳೆದುಹೋಗಿವೆ. ಈಗ ನಮ್ಮದೇ ಆದ ರಾಜ್ಯಾಂಗ ಸಹ ಆಚರಣೆಗೆ ಬಂದಿದೆ. ಅದರ ಪ್ರಕಾರ ಪ್ರತಿಯೊಬ್ಬ ಪ್ರಜೆಗೂ ಸ್ವಾತಂತ್ರ್ಯ ಲಭಿಸಬೇಕು. ವಾಕ್ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ಭಾಷಾ ಸ್ವಾತಂತ್ರ್ಯ, ಮತಾವಲಂಬನ ಸ್ವಾತಂತ್ರ್ಯ ಇತ್ಯಾದಿ, ಇತ್ಯಾದಿ ಅವನಿಗೆ ದೊರೆತ ಹಕ್ಕುಗಳು. ಮೂಲ ಗುರಿಯಾದ, ದೇಶದ ಒಟ್ಟು ಹಿತಕ್ಕೆ ಸಾಧಕವಾಗುವಂತೆ ಈ ಸ್ವಾತಂತ್ರ್ಯಗಳನೆಲ್ಲ ಉಪಯೋಗಿಸಬಹುದು—ಉಪಯೋಗಿಸಬೇಕು.

ವಿವಿಧ ಜಾತಿಯವರನ್ನು ಸೇರಿಸಿಕೊಂಡಿರುವ ವಿವಿಧ ಜನಾಂಗಗಳನ್ನು ಒಳಗೊಂಡಿರುವ, ವಿವಿಧ ಭಾಷೆಗಳನ್ನು ಮೈಗೂಡಿಸಿಕೊಂಡಿರುವ ಈ ದೊಡ್ಡ ದೇಶದ ಹಿತಸಾಧನೆಯಾಗಬೇಕಾದರೆ ಯಾವ ವಿಧವಾದ ಘರ್ಷಣೆಗಳಿಗೂ ಅವಕಾಶವಿಲ್ಲದಂತಹ ವಾತಾವರಣ ಇರಬೇಕು. ಹೃದಯದಿಂದ ಹರಿದುಬಂದಂತಹ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಲು ಅವಕಾಶವಿರಬೇಕು.

ಪ್ರತಿಯೊಬ್ಬರಲ್ಲಿಯೂ ಭಾವನೆಗಳು ಮೂಡುತ್ತವೆ. ಒಳಗೆ ಕಂಡುಕೊಂಡುದನ್ನು ಬಾಯಲ್ಲಿ ಆಡಿ, ಕೇಳಿದವರಿಗೆ ಸಹ ಆ ಅನುಭವವಾಗುವಂತೆ ಮಾಡಬೇಕಾದರೆ, ಮಾತೃಭಾಷೆಗಿಂತ ಬೇರೊಂದು ಸಾಧನವಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ—ನಿರ್ವಿವಾದವಾದುದು ಸಹ. ಆದರೂ ಕೆಲವರು ಇದ್ದಾರೆ ನನ್ನ ಭಾಷೆಯಲ್ಲಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬರುವುದಿಲ್ಲ. ಇಂಗ್ಲಿಷ್‌ನಲ್ಲಿ ಚೆನ್ನಾಗಿ ಹೇಳುತ್ತೇನೆ ಎಂದು. ಅಂತಹ ಕನ್ನಡಿಗರು ಇದ್ದಾರೆ. ಇತರ ಭಾಷೆಯವರೂ ಇರಬೇಕು! ಆದರೆ ಅವರು ಆಡುವ ಈ ಮಾತು ಆತ್ಮವಂಚನೆಯ ಮಾತು.

ಜನತೆಯ ಅಭಿಪ್ರಾಯವನ್ನು ಪಡೆದುಕೊಂಡು ರಾಜ್ಯ ನಡಸುವುದೇ ಪ್ರಜಾರಾಜ್ಯ. ಈಗ ನಮ್ಮಲ್ಲಿ ವಯಸ್ಕರ ಮತದಾನ ಪದ್ಧತಿಯನ್ನು ಪ್ರಯೋಗಿಸುವ ಹವಣಿಕೆಯಲ್ಲಿದ್ದೇವೆ. ನೂರರಲ್ಲಿ ಹತ್ತು-ಹದಿನೈದು ಜನಕ್ಕೆ ಮಾತ್ರ ಓದು-ಬರಹ ಗೊತ್ತು. ಉಳಿದ ಬಹು ಬಹು ಬಹುಸಂಖ್ಯಾಕರು ಬರೀ ಭಾಷೆಯನ್ನು ಆಡಬಲ್ಲ ಜನ. ಅವರ ಅಭಿಪ್ರಾಯ ಈಗ ನಮಗೆ ಪ್ರಧಾನವಾದುದು—ಅಂದರೆ ಅವರಾಡುವ ಭಾಷೆ ಪ್ರಧಾನವಾದುದು. ಈ ದೃಷ್ಟಿಗಳಿಂದ ಮಾತೃಭಾಷೆಗೆ ಎಲ್ಲ ಪುರಸ್ಕಾರವೂ ಬೇಕು. ಅದಿಲ್ಲದಿದ್ದರೆ ಪ್ರಜಾರಾಜ್ಯಕ್ಕೆ ಅರ್ಥ ದೊರೆಯುವುದು ಕಷ್ಟ.

ಒಂದು ಭಾಗದ ಜನತೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾದರೆ, ಅವರಿಗೆ ತಿಳಿವಳಿಕೆ ಕೊಡಬೇಕಾದರೆ ಅವರು ಆಡುವ ಭಾಷೆಯಲ್ಲಿಯೇ ಸಾಧ್ಯ. ಅಂದರೆ ಆ ಭಾಗದ ಆಡಳಿತ ಭಾಷೆ ಜನ ಆಡುವ ಭಾಷೆಯಲ್ಲದೆ ಬೇರೆ ಆಗಲು ಸಾಧ್ಯವಿಲ್ಲ ಎಂದ ಹಾಗೆ ಆಯಿತು. ಈಗ ನಾಲ್ಕು ಭಾಷೆ ಆಡುವ ಜನ ಒಂದು ಪ್ರಾಂತದಲ್ಲಿ ಇದ್ದಾರೆ ಎನ್ನೋಣ. ಅಲ್ಲಿ ಸರಿಯಾದ ಪ್ರಜಾರಾಜ್ಯ ನಡೆಯುತ್ತಿದೆ ಎಂದು ನಾವು ಅರಿಯಬೇಕಾದರೆ ಸರ್ಕಾರ ಎಲ್ಲ ತಿಳಿವಳಿಕೆಗಳನ್ನೂ ಆ ನಾಲ್ಕು ಭಾಷೆಗಳಲ್ಲಿ ಕೊಡಬೇಕು. ಜೊತೆಗೆ ಸರ್ಕಾರ ನಡಸುವ ಎಲ್ಲ ಜನ ಆ ನಾಲ್ಕೂ ಭಾಷೆಗಳನ್ನು ಅರಿಯಬೇಕು. ಇಲ್ಲದೆ ಹೋದರೆ ಸರ್ಕಾರ ನಡೆಸುವವನಿಗೂ ಜನತೆಗೂ ಸರಿಯಾದ ಮೇಳ ಬರುವುದಿಲ್ಲ. ಏಕೆಂದರೆ ಒಬ್ಬರನ್ನೊಬ್ಬರು ಸರಿಯಾಗಿ ಅರ್ಥಮಾಡಿಕೊಳ್ಳಲಾರರು. ಅದರಿಂದ ಜನತೆಗೂ-ಸರ್ಕಾರಕ್ಕೂ ಸರಿಯಾದ ಮೇಳವಿರಬೇಕಾದರೆ ಅಧಿಕಾರ ನಡಸುವ ಪ್ರತಿಯೊಬ್ಬನೂ ಆ ಪ್ರಾಂತದಲ್ಲಿರುವ ವರೆಗೆ ಆ ನಾಲ್ಕು ಭಾಷೆ

ಗಳನ್ನು ಕಲಿತುಕೊಳ್ಳಲೇಬೇಕು. ಹಾಗೆ ಸರ್ಕಾರ ಆಜ್ಞೆ ಸಹ ಹೊರಡಿಸಬಹುದು. ಅದು ಪ್ರಜಾರಾಜ್ಯದ ತತ್ವ. ಕಾಗದದ ಮೇಲೆ ಬಹಳ ಸಮಂಜಸವಾಗಿ ಕಾಣುತ್ತದೆ. ಆಚರಣೆಗೆ ತರುವುದು ಬಹಳ ಕಷ್ಟವಷ್ಟೇ ಅಲ್ಲ-ಅಸ್ವಾಭಾವಿಕ ಸಹ.

ಇದಕ್ಕೆ ಒಂದು ನಿದರ್ಶನ ಸಿಗುತ್ತದೆ. ಈಗ ಬೊಂಬಾಯಿ ಸರ್ಕಾರ ಹೊರಡಿಸಿರುವ ಆಜ್ಞೆ (ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯೂ ಹಿಂದೀ ಪರೀಕ್ಷೆನಮಾಡಬೇಕು) ಎಷ್ಟು ತಳಮಳ ಉಂಟುಮಾಡಿದೆ ಎಂಬುದನ್ನು ಅಲ್ಲಿಯೇ ನೋಡಬೇಕು. ಅಲ್ಲಿ ಗುಜರಾತಿ ಜನ ಇದ್ದಾರೆ, ಮರಾಠಿ ಜನ ಇದ್ದಾರೆ, ಕನ್ನಡಿಗರು ಇದ್ದಾರೆ. ಬೊಂಬಾಯಿ ಪಟ್ಟಣದಲ್ಲಿ ನಾಲ್ಕು ಲಕ್ಷ ಕನ್ನಡಿಗರು, ಸುಮಾರು ಅಷ್ಟೇ ತಮಿಳರು, ಸಾಕಷ್ಟು ಸಂಖ್ಯೆ ತೆಲುಗರು ಸಹ ಇದ್ದಾರೆ. ಇವರುಗಳೆಲ್ಲರನ್ನೂ ಅರ್ಥಮಾಡಿಕೊಳ್ಳಬೇಕು. ಅವರಿಗೆ ತಿಳಿವಳಿಕೆ ಕೊಡಬೇಕು. ರಾಜ್ಯ ನಡಸಬೇಕು. ಈಗ ಹಿಂದಿಯನ್ನು ಬೇರೆ ಕಡ್ಡಾಯವಾಗಿ ಕಲಿಯಬೇಕು; ಎಷ್ಟು ಕಷ್ಟ! ಕನ್ನಡದವನ ಕೈಗೆ ಮರಾಠಿ ಪ್ರಕಟನೆ ಹೋಗುತ್ತದೆ. ಮರಾಠಿಯವನ ಕೈಗೆ ಗುಜರಾತಿ ಪ್ರಕಟನೆ ಹೋಗುತ್ತದೆ. ಈ ಕಷ್ಟಗಳು ಬೇರೆ.

ಕೆಲಸ ಮಾಡುವವರ ಸಮಯವನ್ನು, ಶಕ್ತಿಯನ್ನು ಈ ಭಾಷೆ ಕಲಿಯುವುದರಲ್ಲಿ ದಂಡ ಮಾಡಿದರೆ ಏನು ಪ್ರಯೋಜನ? ಇವುಗಳಿಗೆ ಕಾಲ, ಶಕ್ತಿ ಕಳೆದುಕೊಂಡವನು ದಿನವಹಿ ಕೆಲಸ ಎಷ್ಟು ಉತ್ಸಾಹದಿಂದ ಮಾಡಬಲ್ಲ? ಸರ್ಕಾರದ ಕೆಲಸ ಇನ್ನೆಷ್ಟು ಚನ್ನಾಗಿ ನಡೆದೀತು? ಯೋಚನೆ.

ಭಾಷೆಗಳನ್ನು ಬಲವಂತಕ್ಕೆ ಕಲಿಯಲು ಸಾಧ್ಯವೆ? ಹಾಗೆ ಕಲಿತರೂ ಅದು ಸರಿಯಾದ ಭಾಷೆಯಾಗಿರಲು ಸಾಧ್ಯವೆ? ಭಾಷೆಯೇ ಆಗಲಿ, ಕಲೆಯೇ ಆಗಲಿ, ಮೈಗೂಡಬೇಕಾದರೆ ಅದರಲ್ಲಿ ಉತ್ಸಾಹ, ಆಸಕ್ತಿ ಇದ್ದು ಸತತವಾಗಿ ಅಭ್ಯಾಸ ಮಾಡುತ್ತಿರಬೇಕು. ಹಾಗೆ ಉತ್ಸಾಹವಿರುವವರು ಹತ್ತೂ ಭಾಷೆಯನ್ನು ಕಲಿಯಬಹುದು. ನಮ್ಮ ಈ ಸಮಸ್ಯೆ ಜನ ಸಾಮಾನ್ಯರ ದೃಷ್ಟಿಯಿಂದ.

ಸ್ವಾತಂತ್ರ್ಯ ಗಳಿಸಿದ ಈ ದೇಶವನ್ನು ಭವ್ಯವಾಗಿ ಕಟ್ಟ ಹೊರಟಿರುವ ನಾವು ಕೆಲಸಕ್ಕೆ ಬಾರದ ವಿಚಾರಗಳಿಗಾಗಿ ಕಾಲವನ್ನ, ಹಣವನ್ನ ಹಾಳುಮಾಡುವುದು ಅಪವ್ಯಯವಲ್ಲವೆ? ಇಂತಹ ಅಪವ್ಯಯ ದೇಶದ ಹಿತಕ್ಕೆ ಧಕ್ಕೆ ತರುತ್ತದೆಯಲ್ಲವೆ? ದೇಶವನ್ನು ಸುಭದ್ರವಾದ ತಳಹದಿಯ ಮೇಲೆ ಕಟ್ಟಬೇಕಾದ ನಾವು ಈಗ ಒಂದು ಕಾಸನ್ನಾಗಲಿ, ಒಂದು ನಿಮಿಷವನ್ನಾಗಲಿ ಹಾಳುಮಾಡಬಾರದು. ಎಲ್ಲೆಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟನ್ನೂ ಉಳಿಸಬೇಕು. ಈ ಹಿನ್ನೆಲೆಯಲ್ಲಿ ನಮ್ಮ ಭಾಷಾ ಸಮಸ್ಯೆಯನ್ನು ನೋಡಬೇಕಾಗಿದೆ.

ರಾಜ್ಯಾಂಗ ಹದಿನಾಲ್ಕು ಭಾಷೆಗಳಿಗೆ ಮನ್ನಣೆ ಕೊಟ್ಟಿದೆ. ಪ್ರಾಂತ ಭಾಷೆ ಒಂದು ಬಂದುಬಿಟ್ಟರೆ ಸಾಲದು. ಪ್ರಾಂತಗಳಿಗೂ, ಕೇಂದ್ರಕ್ಕೂ ಸಂಬಂಧ ಸಂಪರ್ಕ ಇರಬೇಕಾಗಿರುವುದರಿಂದ ಇಡೀ ದೇಶಕ್ಕೆ ಒಂದು ರಾಜಭಾಷೆ ಬೇಕೇ ಬೇಕು. ಹಿಂದಿ, ಅಂತಹ ಭಾಷೆಯಾಗಿರಲೆಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈ ಭಾಷೆ ಯಾರು ಯಾರಿಗೆ ಎಷ್ಟು ಎಷ್ಟರ ಮಟ್ಟಿಗೆ ಬೇಕು, ಪ್ರಾಂತಗಳಲ್ಲಿ ಅದರ ಸ್ಥಾನವೇನು, ಎಂದು ನಾವು ಯೋಚಿಸಬೇಕಾಗಿದೆ.

ಪ್ರಾರಂಭದ ಶಿಕ್ಷಣ ಅಂದರೆ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಆಗಬೇಕೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಅಲ್ಲಿಂದ ಮುಂದೆ ಶಿಕ್ಷಣ ಯಾವ ಮಾಧ್ಯಮದ ಮೂಲಕ ಆಗಬೇಕೆಂಬ ವಿಚಾರದಲ್ಲಿ ಪಂಗಡಗಳು ಹುಟ್ಟಿಕೊಂಡಿವೆ.

ಮೊದಲನೆಯ ಪಂಗಡ ಎಲ್ಲ ವಿದ್ಯಾಭ್ಯಾಸ ಮೊದಲಿನಿಂದ ಕಡೆಯ ವರೆಗೆ ಮಾತೃಭಾಷೆಯಲ್ಲೇ ಆಗಬೇಕು ಎಂದು ಹೇಳುತ್ತದೆ.

ಎರಡನೆಯ ಪಂಗಡ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಹೇಳಿ ಅಲ್ಲಿಂದ ಮುಂದೆ ರಾಜಭಾಷೆಯಾದ ಹಿಂದಿಯಲ್ಲಿ ಆಗಲಿ ಎಂದು ಹೇಳುತ್ತದೆ.

ಮೂರನೆಯ ಪಂಗಡ, ಈಗ ಇರುವಂತೆಯೇ ಏಕೆ ಇದ್ದುಬಿಡಬಾರದು; ಇಂಗ್ಲಿಷ್ ಅಂತರ್ರಾಷ್ಟ್ರೀಯ ಭಾಷೆಯಾಗಿದೆ; 'ಒನ್ ವರ್ಲ್ಡ್' ಯೋಚಿಸುವ ಜನ ನಾವು; ಹೇಗೂ ಮಾತೃಭಾಷೆಯಲ್ಲದೆ ಬೇರೆ ಭಾಷೆಯಲ್ಲಿ ವ್ಯವಹರಿಸಬೇಕಾದ ಸಂಭವ ಇರುವುದರಿಂದ ಇಂಗ್ಲಿಷೇ ಇದ್ದುಬಿಡಲಿ ಎನ್ನುತ್ತಿದೆ.

ರೈಲು ಹತ್ತದ ಜನ–ನೋಡದ ಜನ ಇರುವ ಈ ದೇಶದಲ್ಲಿ 'ಒನ್ ವರ್ಲ್ಡ್' ದೃಷ್ಟಿಯನ್ನು ಇಟ್ಟುಕೊಳ್ಳಬೇಕಾದರೆ ಇನ್ನೂ ಅನೇಕ ಶತಮಾನಗಳು ಬೇಕು. ಉದ್ದೇಶ ಒಳ್ಳೆಯದು. ನಾವೂ ಆ ದಾರಿಯಲ್ಲಿ ಪ್ರಯತ್ನಿಸಬಹುದು. ಆದರೂ ಆತುರದಿಂದ ಪ್ರಯೋಜನವಾಗುವುದಿಲ್ಲ. ಇದು ಗೊತ್ತಿದ್ದೂ ಆತುರ ಪಡುವವರ ಕೈಗೆ ರಾಜ್ಯಸೂತ್ರ ಸೇರಿದೆ. ಅವರು ತಾವು ಜನತೆಯ ಪ್ರತಿನಿಧಿಗಳು ಎಂದು ತಿಳಿದಿದ್ದಾರೆ. ಜನತೆಯ ಅಭಿಪ್ರಾಯವೇನೆಂದು ಅವರಿಗೆ ಸ್ಪಷ್ಟವಾಗಿ ಗೊತ್ತಿಲ್ಲ. ತಿಳಿಯಬಯಸಿದ್ದರೆ ತಾನೆ ಗೊತ್ತಾಗುವುದು. ಪ್ರಜಾಭಿಪ್ರಾಯ ರೂಪಿಸುವವರು ರಾಜ್ಯಸೂತ್ರ ತೆಗೆದುಕೊಳ್ಳಲಾರರು. ರಾಜ್ಯಸೂತ್ರತೆಗೆದುಕೊಂಡವರಿಗೆ ಸ್ವಾರ್ಥ ಮುಖ್ಯ. ಹೀಗಾಗಿ ಜನತೆಗೆ ಕಷ್ಟವಾಗಿದೆ.

ಒತ್ತಾಯದಿಂದ ನಮ್ಮಮೇಲೆ ಇಂಗ್ಲಿಷನ್ನು ಬ್ರಿಟಿಷರು ಹೇರಿ ಮಾತೃಭಾಷೆಯ ಸ್ಥಿತಿ ಏನಾಗಿದೆ ಎಂಬುದು ನಮಗೆ ಗೊತ್ತು–ಎಂತಹ ಪೆಟ್ಟು ಬಿದ್ದಿದೆ ಎನ್ನುವುದು ನಮಗೆ ಗೊತ್ತು. ಮಾತೃಭಾಷೆಯಲ್ಲಿಯೇ ಎಲ್ಲ ವಿದ್ಯಾಭ್ಯಾಸವು ಏರ್ಪಾಡಾಗದ ವಿನಾ ಈಗ ಪ್ರಾಂತೀಯ ಭಾಷೆಗಳಿಗೆ ಆಗಿರುವ ಹುಣ್ಣು ಮಾಯಲಾರದು.

ಭಾಷೆ ಸಂಸ್ಕೃತಿ ಒಂದನ್ನು ಬಿಟ್ಟು ಇನ್ನೊಂದು ಇಲ್ಲ.

ಯಾವ ದೇಶದ ಭಾಷೆ ಸಂಸ್ಕೃತಿ ಸ್ಪಷ್ಟರೂಪ ಪಡೆಯುತ್ತದೆಯೋ ಆ ದೇಶಕ್ಕೆ ಸ್ವಾತಂತ್ರ್ಯದ ಸಂಪೂರ್ಣ ಪ್ರಯೋಜನ ಆಗಿದೆ ಎಂದು ತಿಳಿಯಬಹುದು—ಅಲ್ಲಿ ಪ್ರಜಾರಾಜ್ಯ ಸ್ಥಾಪನೆಯಾಗಿದೆ ಎಂದು ಹೇಳಬಹುದು.

ಸ್ವತಂತ್ರ ದೇಶದಲ್ಲಿ ಮಾತೃಭಾಷೆಗೆ ಅಗ್ರಪೂಜೆ ಸಲ್ಲಬೇಕು. ಇದು ಜನ್ಮಸಿದ್ಧವಾದ ಹಕ್ಕು. ಆ ಹಕ್ಕನ್ನು ಬಯಸಿದರೆ ಅದು ಪ್ರಾಂತೀಯ ದುಷ್ಟ ಭಾವನೆ ಎಂದು ಎತ್ತಿ ಆಡುವ ರಾಜಕೀಯ ಜನ ಇದ್ದಾರೆ. ಭಾಷೆ ಬೆಳೆಯಬೇಕು ಎನ್ನುವ ತತ್ವವನ್ನು ಒಪ್ಪುವ ಜನ ಭಾಷಾ ಪ್ರಾಂತ ಯಾಕೆ ಪ್ರಾಂತೀಯ ಎನ್ನುತ್ತಾರೆ ತಿಳಿಯದು. ಪ್ರಾಂತವಾಗದೆ ಬರೀ ಬಾಯಿಮಾತಲ್ಲಿ ಭಾಷೆ ಬೆಳೆಯುವುದಿಲ್ಲ. ಅದು ಒಂದನ್ನೊಂದು ಅವಲಂಬಿಸಿಕೊಂಡಿರುವ ಪ್ರಶ್ನೆ. ಒಂದಕ್ಕೆ ಹೌದೆಂದು ಒಪ್ಪಿ, ಇನ್ನೊಂದಕ್ಕೆ ರಾಜಕೀಯ ರಂಗು ಬಳಿದರೆ ಸ್ವಾರ್ಥ ಎನ್ನೋಣವೋ—ಆತ್ಮ ವಂಚನೆ ಎನ್ನೋಣವೋ? ಈಚೆಗೆ ರಾಜಕೀಯಕ್ಕೆ ಸೇರಿದ ಅಂದರೆ ಸುಳ್ಳಿಗೆ ಒಂದು ಆಗರ ನಿರ್ಮಾಣವಾಯಿತು ಎಂಬುದು ವಾಡಿಕೆಯಾಗಿದೆ. ಈ ವಾಡಿಕೆಯ ಮಾತನ್ನು ಸುಳ್ಳು ಮಾಡುವ ರಾಜಕೀಯ ಜನವನ್ನು ದೀಪ ಹಿಡಿದು ಹುಡುಕಬೇಕಾಗಿದೆ. ದೇಶದ ಹಿತಕ್ಕೆ ದುಡಿಯುತ್ತೇವೆ ಎಂದು ಸುಳ್ಳು ಹೇಳಿ ಈಗ ಸ್ವಾರ್ಥಸಾಧಿಸುತ್ತಾರೆ ಎಂದು ಯಾರಾದರೂ ಕಟುವಾಗಿ ಟೀಕಿಸಿದರೆ, ರಾಜಕಾರಣಿಗಳ ಚೇಲರಿದ್ದಾರೆ, ಅವರು,—'ಪಾಪ! ಅವರಿಗೆ ಎಷ್ಟೋ ಕಷ್ಟ. ಕಷ್ಟ ನಿವಾರಿಸಿಕೊಳ್ಳಲು ಹಾಗೆ ಮಾಡದೆ ವಿಧಿಯಿಲ್ಲ. ನೀವು ರಾಜಕಾರಣಿಯಾದರೆ ನೀವೂ ಹಾಗೆ ಮಾಡಬೇಕಾಗುತ್ತೆ' ಎಂದು ಅವರು ವಕಾಲತ್ತು ವಹಿಸುತ್ತಾರೆ.

ಅವರು ದೇಶಕ್ಕೆ ಹಿತವಾಗುತ್ತದೆ ಎಂದು ಸುಳ್ಳು ಹೇಳುತ್ತಾರೆಂದು ನಂಬುವುದು ಕಷ್ಟ. ಏಕೆಂದರೆ ಅವರಿಗೆ ಕ್ಷಣ ಕ್ಷಣಕ್ಕೂ ಗೊತ್ತು ತಮ್ಮ ಸ್ವಾರ್ಥಕ್ಕೆ ಈ ಭಾಷೆಗಳನ್ನು, ಭಾಷಾ ಪ್ರಾಂತಗಳನ್ನು ಜಗ್ಗಾಡುತ್ತಿದ್ದೇವೆ, ಅದರಿಂದ ದೇಶಕ್ಕೆ ಕೆಡಕು ಎಂದು. ಸ್ವಾರ್ಥಕ್ಕೆ ದೇಶ ಬಲಿ ಕೊಡುವುದು ಸರಿಯಲ್ಲವೆಂದು ಎಚ್ಚರಿಕೆ ಕೊಡಬೇಕು. ಮಾತೃಭಾಷೆಗೆ ಅಗ್ರಸ್ಥಾನ ಪಡೆಯಬೇಕು. ಅದೇ ಶಿಕ್ಷಣಮಾಧ್ಯಮವಾಗಬೇಕು.

ನಮ್ಮ ಭಾಷೆಗಳ ಬೆಳವಣಿಗೆಗೆ ಆಣಿ ಮುತ್ತಿನ ಖನಿಯಾದ ಸಂಸ್ಕೃತ ಬಿಟ್ಟರೆ ದೇಶಭಾಷೆಗಳ ಬೆಳವಣಿಗೆ ಕುಂಠಿತವಾಗುತ್ತದೆ. ಅದರಿಂದ ಅದನ್ನು ಪ್ರತಿಯೊಬ್ಬ ಭಾರತೀಯ ಕಡ್ಡಾಯವಾಗಿ ಕಲಿಯಲೇಬೇಕು.

ಆಸೇತು ಹಿಮಾಚಲದ ವರೆಗೆ ನಾವೆಲ್ಲ ಒಂದು ಜನ, ಒಂದು ಸಂಸ್ಕೃತಿಯುಳ್ಳವರು ಎಂದು ಪ್ರಪಂಚಕ್ಕೆ ತೋರಿಸದಿದ್ದರೆ ನಮ್ಮಲ್ಲಿ ಒಗ್ಗಟ್ಟಿಲ್ಲವೆಂದು ಇತರರು ತಿಳಿದಾರು. ಒಂದು ಜನ, ಒಂದು ಸಂಸ್ಕೃತಿ ಎಂಬ ಭಾವನೆ ಹುಟ್ಟಲು ಭಾಷೆ ಮುಖ್ಯವಾದ ಸಾಧನ. ಈ ಭಾವನೆ ಹುಟ್ಟಿಸಲು, ಆಡಳಿತವನ್ನು ನಡೆಸಲು ಸೌಕರ್ಯವಾಗುವ ದೃಷ್ಟಿಯಿಂದ ನಾವು ಭಾರತದ ರಾಜಭಾಷೆ-ಹಿಂದಿ ಕಲಿಯಬೇಕು-ಸಾಮಾನ್ಯ ವ್ಯವಹಾರಕ್ಕೆ ಎಷ್ಟೋ ಅಷ್ಟು. ಪಂಡಿತರಾಗಬಯಸುವವರಿಗೆ ನನ್ನ ಅಡ್ಡಿಯಿಲ್ಲ.

ವಿಶಾಲ ಪ್ರಪಂಚದ ಓಡಾಟವಿದ್ದವರು, ವಿಜ್ಞಾನ ಪ್ರಪಂಚದಲ್ಲಿ ವಿಹರಿಸುವವರು, ಭಾಷೆಗಳ ವಿಚಾರದಲ್ಲಿ ಭಾವೋದ್ರೇಕವುಳ್ಳವರು, ವ್ಯವಹಾರಕ್ಕೆ ಅವಶ್ಯಕವೆಂದು ಕಂಡುಕೊಂಡವರು ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಷನ್ನು ಕಲಿಯಲಿ.

ಹೀಗೆ ನಾಲ್ಕು ಭಾಷೆಯ ಸಂಪರ್ಕ ಬಾಳುವೆಗೆ ಬೇಕಾಗುತ್ತದೆ. ಎಲ್ಲರಿಗೂ ಎಲ್ಲ ಭಾಷೆಗಳು ಬರಬೇಕಾಗಿಲ್ಲ. ಅದರಿಂದ ಯಾವ ಅನುಕ್ರಮದಲ್ಲಿ ಯಾವ ಯಾವ ದರ್ಜೆಯಲ್ಲಿ ಯಾವ ಯಾವ ಭಾಷೆ ಕಲಿಯಬೇಕೆಂದು ನಾವು ಯೋಚಿಸಬೇಕು. ನನ್ನ ಅಭಿಮತ ಹೀಗೆ: ಪ್ರಾಥಮಿಕ ಮಾಧ್ಯಮಿಕ ದರ್ಜೆಯಲ್ಲಿ ಎಲ್ಲ ಮಾತೃಭಾಷೆಯಲ್ಲಿ—ಅರ್ಥಾತ್ ಪ್ರಾಂತ ಭಾಷೆಯಲ್ಲಿ. ಪ್ರೌಢ ತರಗತಿಗಳಲ್ಲಿ ಮತ್ತು ಮುಂದೆ ಸಂಸ್ಕೃತ ಮತ್ತು ಹಿಂದಿಯ ಒತ್ತಾಯದ ಅಥವಾ ಐಚ್ಛಿಕ ಶಿಕ್ಷಣ. ವಿಶ್ವವಿದ್ಯಾಲಯದ ದರ್ಜೆಯಲ್ಲಿ ಇಂಗ್ಲಿಷ್. ಶಿಕ್ಷಣ ಮಾಧ್ಯಮ ಮಾತ್ರ ಪ್ರಾಂತ ಭಾಷೆಯಲ್ಲಿಯೇ ಆಗಬೇಕು. ತಜ್ಞರು ಯೋಚಿಸಬೇಕು, ವಿವೇಚಿಸಬೇಕು, ತೀರ್ಮಾನಿಸಬೇಕು.

ಇದು ಬಹುಮಟ್ಟಿಗೆ ಒಪ್ಪಿಗೆಗೆ ಅನುವಾದೀತು. ಜನತೆ ಒಪ್ಪೀತು ಅಂದುಕೊಳ್ಳಬಹುದು. ಆದರೆ ಕೆಲವೊಂದು ಹೆದರಿಕೆ ಜನರಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ, ಹುಟ್ಟಿದೆ. ಅದಕ್ಕೆ ಕಾರಣವಿಲ್ಲದೆ ಇಲ್ಲ. ಇಂಗ್ಲಿಷ್‌ನವರು ತಮ್ಮ ರಾಜಭಾಷೆ ಇಂಗ್ಲಿಷ್ ಹೇರಿ ನಮ್ಮ ಭಾಷೆ ಕುಂಠಿತಮಾಡಿದರು. ಹಿಂದೀ ಜನ ಹಿಂದಿ ಹೇರಿ ನಮಗೆ ಉಳಿಗಾಲ ಇಲ್ಲದಂತೆ ಮಾಡುತ್ತಾರೆ ಎಂದು. ಈ ಹೆದರಿಕೆ ಹುಟ್ಟಲು ಕಾರಣವಿಲ್ಲದೆ ಇಲ್ಲ. ರಾಜಕೀಯದವರು ಅಲ್ಲೂ ಇದ್ದಾರೆ. ಇಂಗ್ಲಿಷ್ ಕಿತ್ತೊಗೆಯಬೇಕು. ಹಿಂದಿ ಅಲ್ಲಿ ಕೂಡಿಸಬೇಕು ಎಂದು ಉದ್ರೇಕಿಸುತ್ತಾರೆ—ಉದ್ರೇಕ ಭಯಕ್ಕೆ ಎಡೆಗೊಟ್ಟಿದೆ. ಈ ಭಯ ಬೊಂಬಾಯಿ ಸರ್ಕಾರದ ಆಜ್ಞೆ ನೋಡಿದರೆ ಮೂರ್ತೀಭವಿಸುತ್ತದೆಯೋ ಎನ್ನಿಸುತ್ತದೆ. ತತ್ಪರಿಣಾಮವಾಗಿ ಈ ಭಯ—ಉದ್ರೇಕಗಳು ವಿರೋಧಿ ಗುಂಪುಗಳಾಗುತ್ತವೆ. ಜಗಳ ಪ್ರಾರಂಭವಾಗುತ್ತದೆ. ಗಾದೆಯ ಮಾತು ನೆನಪಾಗುತ್ತದೆ. ಈ ಗಂಡ ಹೆಂಡತಿ ಜಗಳದಲ್ಲಿ ಭಾಷೆ ಎಂಬ ಮಗು ಬಡವಾಗುತ್ತದೆ. ಅದರಿಂದ ಘರ್ಷಣೆಗೆ ಅವಕಾಶವಿಲ್ಲದಂತೆ, ಭಯಕ್ಕೆ ಎಡೆಗೊಡದಂತೆ, ಒಲವಿನಿಂದ ಕೆಲಸ ಸಾಧಿಸಬೇಕು. ದೇಶದ ಹಿತಕ್ಕೆ ತ್ಯಾಗ ಮಾಡಲು ಸಾಮಾನ್ಯ ಜನ ಸಿದ್ಧವಾಗಿದ್ದಾರೆಂದು ತೋರಿಸಿಕೊಟ್ಟಿದ್ದಾರೆ. ಹೆದರಿಸಬಾರದು, ಒಲಿಸಿಕೊಳ್ಳಬೇಕು. ಅದು ಜಾಣತನ.

ಇಂಗ್ಲಿಷ್ ತೆಗೆದು ಹಿಂದಿ ಬರಬೇಕು ಎಂದರೆ ಆಡಳಿತ ಸೌಕರ್ಯಕ್ಕಾಗಿ ಮಾತ್ರ. ಪ್ರಾಂತ ಭಾಷೆಗಳ ಬೆಳವಣಿಗೆಗೆ ತೊಂದರೆ ಹಿಂದಿಯಿಂದ ಆಗುವುದಿಲ್ಲ. ಎಲ್ಲ ಭಾಷೆಗಳ ಬೆಳವಣಿಗೆಗೂ ಸಮಾನ ಅವಕಾಶ ದೊರೆಯುತ್ತದೆ ಎಂದು ಸಾರಿ ಹೇಳುವುದರ ಜೊತೆಗೆ ಉತ್ತರ ಭಾರತದ ಜನ, ದಕ್ಷಿಣ ಭಾರತದವರ ಭಯ ನಿವಾರಿಸಲಿ, ಅವರು ನಂಬಿಕೆ ಹುಟ್ಟಿಸಲಿ, ಸೌಹಾರ್ದ್ರ ಬೆಳೆಸಲಿ, ನಾವೂ ಸಮಭಾಗಿಗಳೆಂದು ತೋರಿಸಲು ತಮ್ಮ ಮೆಚ್ಚಿಗೆಗೆ ಪಾತ್ರವಾದ ಯಾವುದಾದರೂ ಒಂದು ದಕ್ಷಿಣ ಭಾರತದ ಭಾಷೆಯನ್ನು ಕಲಿಯಬೇಕು. ಇದು ನಿರಾಕರಿಸಿದರೆ ದಕ್ಷಿಣದ ಜನತೆಯ ಭಯ ಹೆಚ್ಚಾಗುತ್ತದೆ. ಏಕೆಂದರೆ ಬಾಯಿ ಮಾತಿಗೆ ಈಗ ಬೆಲೆ ಇಲ್ಲದಂತಾಗಿದೆ. 'ಆಡುವುದೊಂದು—ಮಾಡುವುದಿನ್ನೊಂದು' ಕಾಲ ಇದು.

ಈ ಸಲಹೆ ಅಸಾಧುವಾದುದೇನಲ್ಲ. ಹಿಂದೀ ಸಾಹಿತ್ಯ ಸಮ್ಮೇಳನದ ಶಿಷ್ಟಮಂಡಳದವರು 'ಸೌಹಾರ್ದ ನಿಯೋಗ' ಬಂದಿದ್ದರು ದಕ್ಷಿಣಕ್ಕೆ. ಅವರು ಬೆಂಗಳೂರಿಗೆ ಬಂದಾಗ ಈ ಸಲಹೆ ಅವರಿಗೆ ಕೊಡಲಾಯಿತು. ಅವರು ಸಾಧುವೆಂದು ಒಪ್ಪಿಕೊಂಡರು. ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನವಾದ ಸಂದರ್ಭದಲ್ಲಿ ದೆಹಲಿಗೆ ಇಲ್ಲಿಂದ ಹೋದ ನಾವು ಅಲ್ಲಿಯ ಹಿಂದೀ ಕೆಲಸಗಾರರ ಮುಂದೆ ಈ ಸಲಹೆ ಇಟ್ಟೆವು. ಅವರೂ ಒಪ್ಪಿಗೆ ಕೊಟ್ಟರು. ಭಾಷಾ ಸಮಸ್ಯೆ ಬಿಡಿಸುವುದೆಂದರೆ ಒತ್ತಾಯ ಹೇರದೆ ಇರುವುದು. ಒಲವನ್ನು ಹರಿಸುವುದು, ಸೌಹಾರ್ದ ಹಬ್ಬಿಸುವುದು, ಎಲ್ಲ ಭಾಷೆಗಳೂ ತನ್ನ ತನ್ನ ವೈಶಿಷ್ಟ್ಯದೊಡನೆ ಬೆಳೆಯಲು ಸಮಾನಾವಕಾಶಕೊಡುವುದು ಅಂದರೆ ಭಾಷಾ ಪ್ರಾಂತ ಮಾಡುವುದು. ಹೀಗೆ ಮಾಡಿದರೆ ಎಲ್ಲ ಭಾಷೆಗಳು ಬೆಳೆದು ಸಾಹಿತ್ಯದ ಮೂಲಕ ತನ್ನ ಪ್ರಭಾವವನ್ನು ನೆರೆ ಪ್ರಾಂತಗಳಿಗೆ, ಪರರಾಷ್ಟ್ರಗಳಿಗೆ ಬೀರಲು ಅವಕಾಶ ದೊರೆತೀತು.

ಭಾಷಾ ಸಮಸ್ಯೆಯ ಒಂದು ಮುಖ ಇದು. ಇನ್ನೊಂದು ಮುಖವೂ ಇದೆ; ಹೆಚ್ಚು ತೊಡಕಿನದು. ನಾವು ಸ್ವತಂತ್ರ ರಾಷ್ಟ್ರವಾದುದರಿಂದ ನಿಜವಾಗಿ ಆಲೋಚನೆ ಮಾಡಬೇಕಾದ ವಿಷಯ. ಅದು ರಾಷ್ಟ್ರದ ಹಿತದ ದೃಷ್ಟಿಯಿಂದ-ಭಾಷಾ ಬೆಳವಣಿಗೆಯ ದೃಷ್ಟಿಯಿಂದ. ಅದನ್ನು ಕಾರ್ಯಗತ ಮಾಡಿಕೊಂಡರೆ ಭಾಷಾ ಸಮಸ್ಯೆ ಬಹುಮಟ್ಟಿಗೆ ನಿವಾರಣೆಯಾಗುತ್ತದೆ. ಜೊತೆಗೆ ಮನಸ್ಸಿನಲ್ಲಿ ಎದ್ದಿರುವ ಭಯದ ಭೂತ ಸಹ ದೂರವಾಗುತ್ತದೆ.

ಬಹು ವೇಗವಾಗಿ ಓಡುತ್ತಿರುವ ಯಂತ್ರಯುಗದಲ್ಲಿ ನಾವು ಈಗ ಇದ್ದೇವೆ. ಆ ಓಟದ ವೇಗ ಎಷ್ಟೆಂಬುದು ಬಹು ಜನಕ್ಕೆ ಗೊತ್ತಿಲ್ಲ. ನಾವು ಇಷ್ಟಪಡದಿದ್ದರೂ ಓಡದೆ ವಿಧಿಯಿಲ್ಲ. ಅದು ಯಂತ್ರಯುಗದ ಪ್ರಭಾವ. ಇದು ಎಷ್ಟರ ಮಟ್ಟಿಗೆ ಯಂತ್ರಯುಗವೋ ಅಷ್ಟೇ ಪ್ರಚಾರ ಯುಗವೂ

ಹೌದು. ನಮ್ಮ ಅಸ್ತಿತ್ವವನ್ನು ಪ್ರಕಟಗೊಳಿಸಬೇಕ
ಪ್ರಚಾರ ಪ್ರಚಂಡವಾಗಿ ಚಂಡಮಾರುತನ ವೇಗದಲ್ಲಿ ಸ
ಬೇಕು. ಒಂದು ನಿಮಿಷ ಹಿಂದೆ ಬಿದ್ದರೆ ಆಗುವ
ತುಂಬಿಕೊಳ್ಳಲು ದಿನಗಳು ಬೇಕಾಗುತ್ತವೆ. ಆದರಿಂದ
ಬೀಳುವುದು ಹಾನಿಕರ. ನಾವೂ ಪ್ರಚಾರಕ್ಕೆ ಗ
ಕೊಡಬೇಕು.

ಪ್ರಚಾರದ ಮುಖ್ಯ ವಾಹನ ಭಾಷೆ. ಭಾಷೆಗೆ
ಯೋಗಿಸುವ ಲಿಪಿ, ಪ್ರಪಂಚ ಸಾಗುತ್ತಿರುವ ವೇಗದಲ್ಲಿ ಅ
ಯಂತ್ರದಿಂದ ಹೊಮ್ಮಿ ಬರಲು ಅಳವಡಬೇಕು. ನಮ್ಮ
ಗಳು ಆ ವೇಗಕ್ಕೆ ಅಳವಡುತ್ತವೆಯೇ? ಇಲ್ಲ. ಅದಕ್ಕೆ ತಜ್ಞ
ಲಿಪಿ ಸುಧಾರಿಸಬೇಕೆಂದರು. ಎಷ್ಟು ಲಿಪಿಗಳ ಸುಧಾ
ಆಗಬೇಕು? ಅದಕ್ಕೆ ಎಷ್ಟು ಅಡ್ಡಿ ಆತಂಕಗಳು?

ಭಾಷೆಯ ವೈಶಿಷ್ಟ್ಯ ಲಿಪಿಯಲ್ಲಿ ಇದೆಯೆಂದು ವಾದಿ
ವವರು ಇದ್ದಾರೆ. ಇದು ಹುರುಳಿಲ್ಲದ ವಾದ. ಈಗ ಪ್ರಪ
ದಲ್ಲಿರುವ ಬಹಳ ಭಾಷೆಗಳು ರೋಮನ್ ಲಿಪಿಯನ್ನೇ ಬಳ
ತ್ತಿಲ್ಲವೆ? ಆದರೆ ಆಯಾ ಭಾಷೆಗಳ ವೈಶಿಷ್ಟ್ಯಕ್ಕೆ ಧಕ್ಕೆ ಬಂ
ಯೇ? ಸೌಂದರ್ಯ ಮಸುಕಾಗಿದೆಯೇ? ಬೆಳವಣಿಗೆ ಕ
ಠಿತವಾಗಿದೆಯೇ? ನಿಜವಾಗಿ ಇದರಿಂದ ಬಹಳ ಅನುಕೂ
ವಾಗಿದೆಯೆಂದ ಮೇಲೆ ಈ ಪ್ರಶ್ನೆಗಳೇತಕ್ಕೆ? ನಾವು
ದೃಷ್ಟಿಯಲ್ಲಿ ನಮ್ಮ ಅನುಕೂಲವನ್ನು ಹುಡುಕಬೇಕು. ಮ
ಸ್ಸಿನ ಸಂಕೋಚ ಮನೋಭಾವ ಬಿಟ್ಟು ವಿಶಾಲತನ ಪ್ರ
ರ್ಶನಮಾಡಬೇಕು. ಕೊಟ್ಟು ತೆಗೆದುಕೊಳ್ಳುವ ವ್ಯಾವಹಾ
ಮಾರ್ಗ ಅನುಸರಿಸಬೇಕು. ಅಂದರೆ ನಾವು ಬೆಳೆಯುತ್ತೇ
ಈ ದೃಷ್ಟಿಯಿಂದ ನನ್ನದೊಂದು ಸೂಚನೆ.

ನಮ್ಮ ಈ ಎಲ್ಲ ಭಾಷೆಗಳ ಲಿಪಿಗಳ ಸಂಸ್ಕಾರ ಮಾಡು
ಗೋಜಿಗೆ ಹೋಗದೆ—ಅದಕ್ಕಾಗಿ ದುಡ್ಡು ಸಮಯ ದ
ಮಾಡದೆ ಅಖಿಲ ಭಾರತಕ್ಕೆ ಅನ್ವಯಿಸುವಂತೆ ಎಲ್ಲ ಭಾ
ತೀಯ ಭಾಷೆಗಳಿಗೂ ಒಂದೇ ಲಿಪಿ(ದೇವನಾಗರಿ)ಯನ
ಉಪಯೋಗಿಸುವುದು ಒಳ್ಳೆಯದು. ಒಂದೇ ಏಟಿಗೆ ಮನಸ
ಒಗ್ಗುವುದಿಲ್ಲ. ಪ್ರಯತ್ನಪೂರ್ವಕವಾಗಿ ಒಗ್ಗಿಸಿಕೊಂ
ಅನೇಕ ಅನುಕೂಲಗಳು ಇವೆ. ಜೊತೆಗೆ ಒಂದುತನವನ
ಸಹ ಪ್ರದರ್ಶನ ಮಾಡಿದಂತೆ ಆಗುತ್ತದೆ. ಈ ವಿಚಾರದ
ರಾಜಕಾರಣಿಗಳ ಕುಹಕಕ್ಕೆ ಅವಕಾಶವಿರಬಾರದು.

ನಮಗೆ ನಮ್ಮ ಭಾಷೆ ಇರಬೇಕು. ಒಂದುತನ
ಭಾಷೆಯನ್ನು ಬಲಿಕೊಡುವುದೆಂದರೆ ಸಾಧ್ಯವಾಗದ ಮಾತಷ್ಟೆ
ಅಲ್ಲ—ಹುಚ್ಚುತನದ ಪ್ರದರ್ಶನವೂ ಆದೀತು. ಲಿಪಿ ಬ
ಬಹುದು. ಏಕೆಂದರೆ ಮನುಷ್ಯ ಬಟ್ಟೆ ಬದಲಾಯಿಸಿದಾಕ್ಷ
ಬಣ್ಣ ಬದಲಾಯಿಸುವುದಿಲ್ಲ. ಈಗ ರೂಢಿಯಲ್ಲಿರುವ ಲಿ
ಅಭ್ಯಾಸಮಾಡಿದವನಿಗೆ, ಹೊಸದಕ್ಕೆ ಹೊಂದಿಕೊಳ್ಳುವು
ಕೊಂಚ ಕಷ್ಟವಾಗುತ್ತದೆ. ಆದರೆ ಹೊಸ ಲಿಪಿಯಲ್ಲಿಯ

ಭಾಷೆ ಕಲಿತವನಿಗೆ ಈ ಕಷ್ಟದ ಅರಿವು ಸಹ ಉಂಟಾಗುವುದಿಲ್ಲ. ಬದಲಾವಣೆಯಾಗುವ ಕಾಲದಲ್ಲಿ ಇಂತಹ ತೊಡಕುಗಳು ಬಂದೇ ಬರುತ್ತವೆ. ದೇಶದ, ಜನತೆಯ ಹಿತದೃಷ್ಟಿಯಿಂದ ನಾವು ಸಹಿಸಬೇಕು.

ಒಂದು ಲಿಪಿಯನ್ನು ಒಪ್ಪಿಕೊಳ್ಳುವುದರಿಂದ ಇರುವ ಅನುಕೂಲಗಳನ್ನು ನೋಡೋಣ. ಮೊದಲನೆಯದು ಒಂದುತನದ ಪ್ರತೀಕ ಅದು.

ಬೇರೆ ಭಾಷೆಗಳನ್ನು ಕಲಿಯಲು ಉತ್ಸಾಹ ಮನಸ್ಸಿನಲ್ಲಿ ಹುಟ್ಟಿದರೂ ಹೊಸದೊಂದು ಲಿಪಿ ಕಲಿಯಬೇಕಲ್ಲಾ, ಎಂಬ ಹೆದರಿಕೆ, ಮಕ್ಕಳ ಹಾಗೆ ತಿದ್ದಬೇಕಲ್ಲ ಎಂಬ ನಾಚಿಕೆ ಬೇರೂರಿ ಭಾಷೆ ಕಲಿಯುವುದಕ್ಕೇ ತಿಲಾಂಜಲಿಕೊಡುತ್ತೇವೆ. ಕಲಿತೇ ಕಲಿಯಬೇಕಾದವರು ವಿಧಿಯಿಲ್ಲದೆ ಬೇಜಾರುಮಾಡಿಕೊಂಡು ಕಾಲ ದಂಡ ಮಾಡಿಕೊಂಡು ಕಲಿಯುತ್ತಾರೆ. ಈ ಲಿಪಿಯ ತೊಡಕು ಇಲ್ಲದಿದ್ದರೆ, ಕಾಲ ಉಳಿಯುತ್ತದೆ. ಉತ್ಸಾಹ ಬರಡಾಗುವುದಿಲ್ಲ. ಕಲಿತೇ ಕಲಿಯಬೇಕಾದವನಿಗೂ ಉಪಕಾರ ಭಾಷೆಗಳನ್ನು ಕಲಿಯಬೇಕೆಂಬ ಉತ್ಸಾಹಿಗಳ ಪ್ರೋತ್ಸಾಹಕರ.

ಭಾರತದ ಎಲ್ಲ ಭಾಷೆಗಳು ಮೈಗೂಡಿಕೊಂಡು ಬೆಳೆದಿರುವುದು ಸಂಸ್ಕೃತದಿಂದ. ಅದರಿಂದ ಎಲ್ಲ ಭಾರತದ ಭಾಷೆಗಳಲ್ಲೂ ಅನೇಕಾನೇಕ ಸಂಸ್ಕೃತ ಪದಗಳು ಬಳಕೆಯಲ್ಲಿ ಇವೆ. ಕೊಂಚ ಶ್ರಮವಹಿಸಿದರೆ ಬೇರೆ ಭಾಷೆ ಕಲಿಯುವುದು ಅಷ್ಟು ಕಷ್ಟವಾಗುವುದಿಲ್ಲ. ಲಿಪಿ ಒಂದಾಗಿ ಬಿಟ್ಟರೆ ಭಾಷೆ ಕಲಿಯುವುದು ಸುಲಭ ಏಕೆಂದರೆ ಕಲಿಯಲು ಉಳಿದಿರುವುದು ಬಹಳ ಕೊಂಚ. ಒಂದು ಲಿಪಿಯನ್ನು ವಿರೋಧಿಸಿ, ಲಿಪಿಯ ದುರಭಿಮಾನದ ಅತಿರೇಕಕ್ಕೆ ಎಡೆಗೊಡುವುದೆಂದರೆ ಈ ಅನುಕೂಲ ಕಳೆದುಕೊಳ್ಳಲು ನಾವು ಪ್ರಯೋಗಿಸುವ ಮಂಕುತನ ...ನ್ನಬೇಕಾಗುತ್ತದೆ.

ಇದಲ್ಲದೆ ಯಂತ್ರೋಪಕರಣಗಳು, ಟೈಪ್‌ರೈಟರ್, ಮೊಳೆ ತಯಾರಿಸುವ ಯಂತ್ರ ಇತ್ಯಾದಿ, ಇತ್ಯಾದಿ, ಅನೇಕ ಬಗೆಯಲ್ಲಿ ದೊಡ್ಡ ಪ್ರಮಾಣದ, ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸಾಧನವಾಗುವ, ಉದ್ಯಮಗಳನ್ನು ಅಖಿಲ ಭಾರತೀಯ ಪ್ರಮಾಣದಲ್ಲಿ ಸ್ಥಾಪಿಸಲು ಅನುಕೂಲವಾಗುತ್ತದೆ. ಮೊಳೆ ಜೋಡಿಸುವ ಉದ್ಯೋಗ ಸಹ ಪ್ರಾಂತೀಯತೆಯ ಮಿತಿ ಮೀರಿ ಅಖಿಲ ಭಾರತೀಯ ಮಟ್ಟಕ್ಕೆ ಉಪಯೋಗವಾಗುವ ಉದ್ಯೋಗವಾಗುತ್ತದೆ. ಅದಕ್ಕೆ ಕೈಹಾಕುವ ಕೆಲಸಗಾರನಿಗೆ ಸಹ ಇದರಿಂದ ತನ್ನ ಉದ್ಯೋಗದ ಬಗ್ಗೆ ಹೆಚ್ಚಿನ ಧೈರ್ಯ ಬರುತ್ತದೆ. ಅವನು ಇಡಿ ದೇಶದ ಯಾವ ಅಚ್ಚುಕೂಟದಲ್ಲಿಯಾದರೂ ಕೆಲಸಕ್ಕೆ ಸೇರಬಹುದು.

ಒಂದು ನಿದರ್ಶನ ಕೊಡಬಹುದು. ಸೊಲ್ಲಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇದರ ನಿಜಸ್ವರೂಪ ಗೊತ್ತಾಯಿತು. ವಿವರಿಸುತ್ತೇನೆ. ಅಲ್ಲಿನ ಕನ್ನಡಿಗರು, ಉತ್ಸಾಹಪೂರ್ವಕ ಮರಾಠಿಯನ್ನೆಲ್ಲ ಕಲಿಯಬೇಕಾಗಿ ಬಂದಿದೆ. ಇದು ರಾಜಕೀಯ ಪ್ರಭಾವ. ಇರಲಿ. ವ್ಯವಹಾರ, ಲೆಕ್ಕಪತ್ರ ಮರಾಠಿಯಾದರೂ ಅವರ ಮನೆಮಾತು ಕನ್ನಡ. ಈ ಜನ ಸಮ್ಮೇಳನದಲ್ಲಿ ಕೆಲವು ನಿರ್ಣಯಗಳನ್ನು ಮಂಡಿಸಬೇಕಾಗಿತ್ತು. ಕೆಲವು ಪ್ರಕಟನೆಗಳನ್ನು ಅಚ್ಚುಹಾಕಬೇಕಾಗಿತ್ತು. ನಾಗರಿಯಲ್ಲಿಯೇ ಅವರು ತಮ್ಮ ಕೆಲಸ ಸುಧಾರಿಸಿದರು. ಕನ್ನಡಕ್ಕೆ ಬೇರೆ ಲಿಪಿ ಇರುವುದನ್ನು ತಿಳಿದ ನಾವು, ನಕ್ಕೆವು. ಇವರೆಂತಹ ಕನ್ನಡಿಗರೆಂದು, ಮನಸ್ಸಿಗೆ ನೋವೂ ಆಯಿತು ಅವರ ಅಸಹಾಯ ಸ್ಥಿತಿ ನೋಡಿ. ನಿಜವಾಗಿ ಲಿಪಿ ಒಂದೇ ಆಗಿದ್ದಿದ್ದರೆ ಅವರು ಕನ್ನಡವನ್ನು ಮಾತನಾಡುವುದಷ್ಟೇ ಅಲ್ಲ ಸಾಹಿತ್ಯವನ್ನು ಓದುತ್ತಿದ್ದರು. ಪ್ರತಿ ಕನ್ನಡ ಮನೆಯಲ್ಲೂ ಕನ್ನಡ ಪುಸ್ತಕ ಭಂಡಾರಗಳು ಇರುತ್ತಿದ್ದವು. ಆಗ ನಾವು ನಗುತ್ತಲೂ ಇರಲಿಲ್ಲ. ನೋವಿಗೂ ಅವಕಾಶವಿರುತ್ತಿರಲಿಲ್ಲ.

ಬಹು ಭಾಷೆಗಳಿರುವ ಈ ದೇಶದಲ್ಲಿ ಎರಡು ಭಾಷೆಯಾಡುವ ಜನಗಳು ಇರುವ ಸ್ಥಳಗಳು, ಬಹು ಭಾಷೆಗಳನ್ನು ಆಡುವ ಜನಗಳು ಒಟ್ಟಿಗೆ ವಾಸಿಸುವ ಸ್ಥಳಗಳು ಪಟ್ಟಣಗಳು ಇವೆ ಸಂಪರ್ಕದಿಂದ ಭಾಷೆ ಆಡುವುದಕ್ಕೆ ಬರುತ್ತಿರುತ್ತದೆ. ಲಿಪಿ ಬೇರೆಯಾದ್ದರಿಂದ ಓದಲು ಬರೆಯಲು ಸಾಧ್ಯವಾಗುವುದಿಲ್ಲ. ಒಂದೇ ಲಿಪಿಯಾದರೆ ಅಂತಹ ಜನಕ್ಕೆ ಮಹದುಪಕಾರವಾಗುತ್ತದೆ.

ಇದನ್ನೆಲ್ಲ ಬದಿಗಿರಿಸಿ, ಹದಿನಾಲ್ಕು ಟೈಪ್‌ರೈಟರ್ ಸಮಿತಿಗಳು, ಹದಿನಾಲ್ಕು ಲಿಪಿ ಸಂಸ್ಕಾರ ಸಮಿತಿಗಳನ್ನು ನಿರ್ಮಿಸಿ ಕಾಲ, ಹಣ ದಂಡ ಮಾಡುವುದು ಜಾಣತನವೆಂದೂ, ಅದು ದೇಶಕ್ಕೆ ಅಭ್ಯುದಯ ಉಂಟುಮಾಡುತ್ತದೆಯೆಂದೂ ತಿಳಿಯುವುದು ಜಾಣತನವೆಂದು ಯಾರಾದರೂ ತಿಳಿಯಲು ಸಾಧ್ಯವೆ? ನಿಜವಾದ ಜಾಣತನ ಒಂದು ಲಿಪಿಯನ್ನು ಅನುಸರಿಸುವುದರಲ್ಲಿ ಇದೆ. ವಿರೋಧ ಸಹ ಇದೆ ಎಂಬುದು ನನಗೆ ಗೊತ್ತು. ಸ್ವಂತ ಅನುಭವವೊಂದನ್ನು ಹೇಳಿ ಈ ಲೇಖನ ಮುಗಿಸುತ್ತೇನೆ.

ಕನ್ನಡ ಲಿಪಿ ಸುಧಾರಣೆಗೆಂದು ಸೇರಿದ ಒಂದು ತಜ್ಞರ ಸಮಿತಿಯಲ್ಲಿ ನಾನು ಭಾಗವಹಿಸುವ ಸಂದರ್ಭ ಬಂದಿತ್ತು ನಾಲ್ಕು ವರ್ಷಗಳ ಕೆಳಗೆ. ನನ್ನ ಅಭಿಪ್ರಾಯಗಳನ್ನು ಹೇಳಿ, ಉತ್ತರ ಭಾರತದ ನನ್ನ ಪ್ರವಾಸದ ಅನುಭವವಿರಿಸಿ ನಾವು ಬೆಳೆಯಬೇಕು, ಬಾಳಬೇಕು ಎಂದರೆ ಒಂದು ಲಿಪಿಯನ್ನು ಒಪ್ಪಿಕೊಳ್ಳೋಣ ಎಂದು ಸಲಹೆ ಮಾಡಿದೆ. ಸಂಸ್ಕರಣದ ಬಗ್ಗೆ ಸಲಹೆ ಮಂಡಿಸಿದ್ದ ಮಹನೀಯರು ಕೊಂಚ ಕುಪಿತರಾಗಿ "ತಾವು ಆ ಬಗ್ಗೆ ಪ್ರಚಾರ ಮಾಡುತ್ತಾ ಮಾಡುತ್ತಾ ಹೋಗಿ. ನಾವು ನಮ್ಮ ಕೆಲಸ ಮಾಡುತ್ತೇವೆ" ಎಂದರು.

ನನಗೆ ಅವಕಾಶ ಸಿಕ್ಕಾಗಲೆಲ್ಲ ದೇಶಕ್ಕೆ ಒಂದು ಲಿಪಿ ಇರಬೇಕು ಎಂಬ ಮಾತನ್ನು ಹೇಳುತ್ತಾ ಬಂದಿದ್ದೇನೆ. ನಾಡಿನ, ಭಾಷೆಯ ಹಿತಚಿಂತಕರು ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು—ಯೋಚಿಸಬೇಕು—ಸಾಧಿಸಬೇಕು.

ಕುಮಾರವ್ಯಾಸ ಭಾರತದಲ್ಲಿ ವಿರಹಿಗಳ ಶೃಂಗಾರ

ಲೇಖಕಿಯರು:
ಶ್ರೀಮತಿ ಎಸ್. ರತ್ನಮ್ಮ, ಎಂ. ಎ.

"ಶುಕರೂಪನಲ್ಲವೆ? ಕವಿ ಕುಮಾರವ್ಯಾಸ!"

ಲಲಿತ ಶೃಂಗಾರ ಚಿತ್ರಸೃಷ್ಟಿಯಲ್ಲಿ ಪಂಪ ಕನ್ನಡದ ಕಾಳಿದಾಸ ಮಹಾಕವಿಯಾದಲ್ಲಿ, ರನ್ನ ಕವಿಚಕ್ರವರ್ತಿ, ಅಸಭ್ಯ ಅಶ್ಲೀಲ ರೀತಿಯಲ್ಲಿ ಅನೌಚಿತ್ಯ ಸಂದರ್ಭದಲ್ಲಿ ಹೆಣ್ಣು ದೇಹವನ್ನು ಕಾಮ ಪ್ರಚೋದಕವಾಗಿ ಪ್ರದರ್ಶಿಸಿ ಕೀಳು ಜನರ ಮನಸ್ಸನ್ನು ತೃಪ್ತಿಪಡಿಸಿ ಹಣ ಸಂಪಾದಿಸುವ ಚಲನ ಚಿತ್ರ ನಿರ್ಮಾಪಕನಂತೆ. ಆದರೆ ಯೋಗೀಂದ್ರ ಕುಮಾರವ್ಯಾಸನಿಗೆ ಪಂಪನಂತೆ ವಿಶಾಲ ಮನೋಧರ್ಮದಿಂದ ಕಾವ್ಯಪಾತ್ರಗಳ ಹೃದಯಾಂತರಾಳದಲ್ಲಿ ಚಲಿಸುವ ಆಕರ್ಷಣ ಸೂತ್ರಗಳನ್ನು ಕೈಗೊಂಡು ಪರಸ್ಪರ ಹೃದಯಗಳನ್ನು ಬಂಧಿಸುವ ಚಾಣ್ಮೆಯಿಲ್ಲದಿದ್ದರೂ ವೀರನಾರಾಯಣನ ವೀರ್ಯಶಕ್ತಿಯ ಹರಿಗೋಲಿನಲ್ಲಿ ಕುಳಿತು ಶೃಂಗಾರ ಸಮುದ್ರವನ್ನು ಮೇಲೆ ಮೇಲೆ ಹಾಯ್ದು ದಡಸೇರುವ ಚಾಕಚಕ್ಯತೆಯಿದೆ. ಸಹೃದಯ ನಾರಣಪ್ಪ ಬಾಳಿನಲ್ಲಿ ಆಜೀವ ಬ್ರಹ್ಮಚಾರಿ "ಶುಕರೂಪ!" ಮಹಾಭಾರತ ಕಾವ್ಯಾರಣ್ಯವೋ ವಾಯಾದಿ ಮಾತ್ಸರ್ಯದಿಂದ ತುಂಬಿ ಗಂಡುಗರ್ವದ ಸುಂಟರ ಗಾಳಿಗೆ ನೆಲೆಯಾದ ಮರಳುಕಾಡು. ಪಥಿಕ ಕುಡಿಯುಲೆಳಸಿದಲ್ಲಿ ಸಿಕ್ಕುವುದು ಹೆಣ್ಣಿನ ಕಣ್ಣೀರು ಇಲ್ಲವೆ ಯುದ್ಧ ಪಂಚಕದಲ್ಲಿ ಬಸಿಯುವ ಮಜ್ಜೆ. ಇಂತಹ ಮರಳುಗಾಡಿನ ಮಧ್ಯ ಸುಭದ್ರಾಪರಿಣಯ ಶೈತ್ಯಜಲ ಸರೋವರವನ್ನು ಕಲ್ಪಿಸಿದ ಸಂಸಾರ ಸಾರೋದಯನ ಪ್ರತಿಭೆ ಸ್ವಯಂ ಶ್ಲಾಘನೀಯವಾದ್ದು. ಮಹಾಭಾರತದ ಅಡಿಗಲ್ಲೆಂದರೆ ಪ್ರಣಯತಿರಸ್ಕಾರ. ಪ್ರೇಮಿಗಳ ವಿರಹ. ಭರತ ವಂಶದ ಆದಿಯಲ್ಲಿ ಶಕುಂತಲಾ ದುಷ್ಯಂತರ ಪರಸ್ಪರ ಅಗಲಿಕೆಯಿಂದ ಪ್ರಾರಂಭವಾದ ಈ ಮೌನರೋದನ ಅಭಿಮನ್ಯುವಿನ ಪತ್ನಿ ಉತ್ತರೆ ಬಾಲವಿಧವೆಯಾಗಿ, ದ್ರೌಪದಿ ಪುತ್ರಹೀನೆಯಾಗಿ, ಜ್ವಾಲೆ ಪತಿವಂಚಿತಳಾಗಿ ಕೊನೆಗೆ ಸರ್ವ ದುಃಖಸಮಾನ್ವಿತೆ ಜಾಹ್ನವಿಯ ನಿಟ್ಟುಸಿರಿನಲ್ಲಿ ಕೊನೆಗಾಣುತ್ತದೆ. ಭಾರತ ಯುದ್ಧದ ವೀರನಾಯಕರುಗಳ ಹೃದಯದಲ್ಲಿ, ಕಾಯಾವಾಚ ಪರಸ್ತ್ರೀ ಸೋದರತ್ವವುಳಿದ್ದಿದ್ದಿತೇ ಹೊರತು ಮನಃಪೂರ್ವಕವಾಗಿ ಪರಸ್ತ್ರೀಯನ್ನು ತಾಯೆಂದು ಭಾವಿಸಿದ್ದವರು ವಿರಳ. ಮಹಾವೀರರೆಲ್ಲರೂ ಮಹಾನುಭಾವತ್ವಕ್ಕೆ ಮಾರುಹೋಗಿದ್ದರು. ಮಹಾನುಭಾವತ್ವಕ್ಕೆ ಶರಣಾದ ಹೆಣ್ಣಿನಲ್ಲಿ ಕಣ್ಣೀರು ಸುರಿದೀತೇ ಹೊರತು ಪ್ರೇಮ ಪ್ರದರ್ಶನವೆಲ್ಲಿ? ಭಾರತ ಯು... ದ ವೀರನಾಯಕರ ದೃಷ್ಟಿಯಿಂದ, ಕವಿದೃಷ್ಟಿಯಿಂದ, ಸ... ದಯನ ದೃಷ್ಟಿಯಿಂದ ಮಹಾಭಾರತದ ಕೀಲೆಂದರೆ "ವಿರ... ಗಳ ಶೃಂಗಾರ".

ವಿಷಮ ಶೃಂಗಾರವರ್ಣನೆಯಲ್ಲಿ ಕುಮಾರವ್ಯಾಸ ಜ... ನಿಗೆ ಗುರು. ಪೆಣ್ಣೊಲಿದಲ್ಲಿ ಪುರುಷ ಮುಖ ತಿರುಹುವನ... ಪುರುಷ ಯಾಚಿಸಿದಲ್ಲಿ ಸ್ತ್ರೀ ಧಿಕ್ಕರಿಸುವಳು. ಹಾಗೂ ಪು... ಷನಿಗೆ ಸ್ತ್ರೀ ಮಣಿದಲ್ಲಿ, ಭಾವಚರ ನಿತ್ಯ ಸತ್ಯ, ದೈವವಿರು... ಕಾಮವೆಂದೆಣಿಸಿದಲ್ಲಿ ದುರಂತ ಮುಕ್ತಾಯ. ಉದಾ... ಪಾಂಡುಮಾದ್ರಿ.

ವಿಷ್ಣುಪಾದೋದ್ಭವೆ ಶೃಂಗಾರ ಪ್ರವಾಹದಧಿದೇವ... ಜಾಹ್ನವಿ, ಶಾಪಕರಣದಿಂದ ಭೂಲೋಕದಲ್ಲಿ ಹೆಣ್ಣಾ... ಹುಟ್ಟಿ ಮರ್ತ್ಯರಾಜ ಶಂತನುವಿನ ದೃಷ್ಟಿಗೆ ಬಿದ್ದು ನಿಯ... ಪ್ರತಿಜ್ಞೆಗಳನ್ನು ಮಾಡಿ ಪತ್ನಿಯಾಗುತ್ತಾಳೆ. 'ಮೇಘದೂತ'... ಯಕ್ಷ ರಾಮಗಿರಿಯಲ್ಲಿ ಶಾಪವರ್ಷವನ್ನು ಕಳೆದಂತೆ ಪತಿಯೊ... ದಿಗೆ ಸಂಸಾರಮಾಡುತ್ತ ನೆಪ ಸಿಕ್ಕಿದ ತಕ್ಷಣ ಪತಿಯನ... ತೊರೆದು ಗಗನಕ್ಕೆ ತೆರಳುತ್ತಾಳೆ. ಆದರೆ "ಅತ್ಯುನ್ನತಿಯೊ... ಅಮರ ಸಿಂಧೂದ್ಭವನ್" ಆದ ಸಂಸಾರ ಸುಖ ಸರ್ವಸ್ವನ... ಶಂತನುವಿಗೆ ಕಾಣಿಕೆಯಿತ್ತಳು. ಕೆಲಕಾಲ ಕಳೆದ ನಂತ... ಶಂತನುವಿನ ಸ್ಥೈರ್ಯ ಕಟ್ಟೆಕಿತ್ತು ಸತ್ಯವತಿಯಲ್ಲಿ ಲೀನವಾಗ... ತ್ತದೆ. ಪಿತನ ಈ ದ್ವಿತೀಯ ವಿವಾಹಕ್ಕಾಗಿ ಸುತನ ಮೇ... ಸದೃಶ ಭೀಷ್ಮ ಪ್ರತಿಜ್ಞೆ "ಆದರಿಲ್ಲಿಂ ಮೇಲೆ ನಾರಿಯರಾ... ವರು ಭಾಗೀರಥಿಗೆ ಸಮ" ಭೀಷ್ಮ ಪ್ರತಿಜ್ಞೆಯನ್ನು ಕೇಳಿ... ಸಹೃದಯನ ಮನಸ್ಸು ಮೇಘಲೋಕವನ್ನು ಹಾಯ್ದು ವಿಷ... ಪಾದಸ್ಪರ್ಶಿಯಾಗುತ್ತದೆ.

ಪಾಂಡುಮಾದ್ರಿಯರ ಮಿಲನ ಕುಮಾರವ್ಯಾಸನ ಒ... ತೋಟಿಯನ್ನು ಪ್ರದರ್ಶಿಸುವ ಕೈಗನ್ನಡಿ. "ವನವಿಧಿಗ... ಹೊಕ್ಕು ಮರಳಿದುದಿಲ್ಲ ವಿರಹಿಗಳು!" "ತಾವರೆಯೆಸಳ ದೊ... ಣೆಯ ಮೇಲೆ ದುಂಬಿಗಳು ಹಾಯ್ದು ಕುಸುಮ ರಸದ ತೊ... ಗಳಲ್ಲಿ ಮುಳುಗುತ್ತಿದ್ದುವು". ವಸಂತ ನೃಪಾಲ ಪಾಂಡುವಿ... ಮೇಲೆ ಹದಿನಾರನೆಯ ಸಲ ಗೆಲ್ಲಲೇಬೇಕೆಂದು ಬದ್ಧಕಂಕ... ನಾಗಿ ದಂಡೆತ್ತಿ ಬಂದಿದ್ದಾನೆ. ವಿಧಿವಶದಿಂದ ಶಾಪವನ... ಮರೆತು ಬನದೊಳಗಾಡುತ್ತಿದ್ದ ಪುಷ್ಪಾಲಂಕೃತೆ ಮಾದ್ರಿಯನ

ಕಂಡು "ಅವಳಿವಳೂರ್ವಶಿಯು" ಎಂದು ಬೆರಗಾಗಿ ಶಂಬರಾರಿಯು ಸಬಳಕ್ಕೆ ತುತ್ತಾಗಿ ಬೇಡಬೇಡೆಂದರಗಿದ ತರುಣಿಯನ್ನು ಬಲವಂತದಿಂದ ಹಿಡಿದು ಕೂಡಿದನು. ಒಡನೆಯೇ ಋಷಿ ಶಾಪರಾಹುಗ್ರಸ್ತ ಚಂದ್ರಮನಾಗಿ, ರಾಣೀವಾಸದುರದಲಿ ಮೈಮರೆದೊರಗಿದ ಪಾಂಡುವಿನೊಂದಿಗೆ ಮಾದ್ರಿ ಸಹಗಮನ ಮಾಡಿದಳು. ಶಾಂತ ತಪೋವನದಲ್ಲಿ ರತಿಭಾವ ಮನ್ಮಥನ ತೀರ್ವಬಾಣಕ್ಕೊಳಗಾಗಿ ರತಿಮಯದಲ್ಲಿ ಸಮಾಗಮದ ತುತ್ತ ತುದಿಗೇರಿ ತಕ್ಷಣ ದುರಂತ ಮರಣದಲ್ಲಿ ಪರ್ಯವಸಾನಗೊಳ್ಳುತ್ತದೆ.

ಪಂಪ ದ್ರೌಪದಿಯ ಸ್ವಯಂವರ ಸಂದರ್ಭವನ್ನು ಧ್ವನಿಪೂರ್ವಕವಾಗಿ ಸಂಗ್ರಹಿಸಿದ್ದಾನೆ. ಕುಮಾರವ್ಯಾಸ ದ್ರೌಪದಿಯ ಅಂಗನೆಟ್ಟನ ಬಣ್ಣನೆಯನ್ನು ಸಾಲಂಕಾರವಾಗಿ ವಿಸ್ತರಿಸಿದ್ದರೂ ಪಂಪನ ಕಲಾಭಿಜ್ಞತೆಯಿಲ್ಲ. ದ್ರೌಪದಿಯ ಬಾಳಿನಲ್ಲಿ ವಿವಾಹ ಮುಖ್ಯ ಮೈಲಿಗಲ್ಲಾದರೂ ಅದೇ ಅತ್ಯಂತ ಪ್ರಧಾನ ಸ್ಥಾನವನ್ನು ಪಡೆದಿಲ್ಲ. ಸುಭದ್ರೆ ಶೃಂಗಾರನಾಯಕಿ. ಶೃಂಗಾರವೇ ಆದಿ ಅಂತ್ಯ. ಅಂತಹವಳ ಬಾಳಿನಲ್ಲಿ ಪ್ರಣಯವನ್ನೆ ಪ್ರಧಾನ ಗುಣವನ್ನಾಗಿಸಿ ಪಂಪ ದೀರ್ಘವಾಗಿ ವಿಸ್ತರಿಸುವುದು ಔಚಿತ್ಯ-ಸ್ತ್ರೀದೃಷ್ಟಿಯಲ್ಲಿ ಗಂಧದ ಮರಕ್ಕೆ ಬೆಂಕಿಹಚ್ಚುವುದನ್ನು ವಿವರಿಸಿದಂತೆ ಕುಮಾರವ್ಯಾಸ "ವಿದ್ಯಾಪರಿಣಿತರಲಂಕಾರ"ಕ್ಕೆ ಉದಾಹರಣೆಯಾಗಿ ದ್ರೌಪದಿಯನ್ನು ವರ್ಣಿಸಿದ್ದಾನೆ. ಪುರುಷ ವಿಮರ್ಶಕ ಸಹೃದಯರಿಗಿಲ್ಲಿ ರಸದೌತಣ!

ದ್ರೌಪದಿ ವಸ್ತ್ರಾಪಹರಣ ಸಂದರ್ಭವೊಂದು "ವಿರಹಿಗಳ ಶೃಂಗಾರಕ್ಕೆ" ನೆಲೆಮನೆ. ವಿರುದ್ಧ ಭಾವನೆಗಳ ಖಾಡಾಖಾಡಿ. ಪರಪತ್ನಿ, ಸೋದರ ಸ್ನೇಹವನ್ನು ತೋರ್ಪಡಿಸಬೇಕಾದ ನಾದಿನಿ ದ್ರೌಪದಿಯಲ್ಲಿ ಕುರುಕುಲಾಗ್ರಣಿಗೆ ಸಲ್ಲದ ಮನಸ್ಸು. ಬಿಲ್ಗಾರನಾಗಿ ಗೆಲ್ಲಲಾಗದ ಹೆಣ್ಣನ್ನು ಕಪಟತನದಲ್ಲಿ ದಾಸಿಯನ್ನಾಗಿ ಮಾಡಿಕೊಂಡು ತನ್ನ ಮಹಾನುಭಾವತ್ವವನ್ನು ಪೂರ್ಣಗೈಯ್ಯುವ ಪ್ರಯತ್ನ. ಈ ತಳೋದರಿ ತೊತ್ತಿರಲಿ!" "ನಾರಿಗೀ ವಸ್ತ್ರಾಭರಣ ಶೃಂಗಾರವೇತಕೆ ತೆಗೆ?" ಎಂಬ ದುರ್ಯೋಧನನ ಆಜ್ಞೆಯನ್ನೆದುರಿಸಿ, ನಿತ್ಯ ಸತ್ಯ ದ್ರೌಪದಿಯ ಮಾನರಕ್ಷಣೆ ಮಾಡುತ್ತದೆ. ಅಕ್ಷಯ ವಸ್ತ್ರದ ಪವಾಡಕ್ಕೆ ಬೆದರದ ದುರ್ಯೋಧನ ದ್ರೌಪದಿಗೆ ದೇಹಾವಮಾನಕ್ಕು ಮೀರಿದ ಆತ್ಮಾವಮಾನವನ್ನೆಸಗಲು ನಿಶ್ಚಯಿಸಿ ಯತ್ನಿಸುತ್ತಾನೆ. "ಎಲಗೆ! ನಿನ್ನವರೇನ ಮಾಡಬಲ್ಲರು? ಬಲೆಯೊಳಗಿನ ಕೆಂಡಗಳು" ಎಂದು ಹೇಳುತ್ತಾ ವಸ್ತ್ರವನ್ನು ಸರಿಸಿ ತೊಡೆ ತಟ್ಟುತ್ತಾನೆ. ವೀರ ಪತ್ನಿ ದ್ರೌಪದಿಯ ತಾಳ್ಮೆಯು ಎಲ್ಲೆ ಮೀರುತ್ತದೆ ಕೋಪವಶಳಾಗಿ, ತನ್ನ ದೇಹಾವಮಾನವನ್ನು ಸಹಿಸಿದ ಹೆಣ್ಣು ಪತಿನಿಂದೆಗೆ ಮುಳಿದು ಕನಲಿ ರೋಷಾಹಿಯಾಗಿ "ಊರುಭಂಗ"ದ ಮರಣ ಶಾಸನವನ್ನು ವಿಧಿಸುತ್ತದೆ.

—ದೈವವಿರುದ್ಧ ಶೃಂಗಾರ ಸಂಹಾರದಲ್ಲಿ ಮುಕ್ತಾಯವಾಗುತ್ತದೆ. ಕುರುಕುಲಾಗ್ರಣಿ ಏಕಾದಶಾಕ್ಷೋಹಿಣೀ ವಲ್ಲಭ ದೈವವಿರುದ್ಧ ಶೃಂಗಾರದ ಸನಿಕೆಯಲ್ಲಿ ತನ್ನ ಸಮಾಧಿಯನ್ನು ತೋಡಿಕೊಂಡ ಈ ಸಂದರ್ಭವೇ ಭಾರತ ಯುದ್ಧದ ದುರಂತ ಶಿಖರವಲ್ಲವೆ?

"ನೆನೆಯದಿರು ತನುಸುಖವ" ಎಂಬ ದ್ರೌಪದಿಯ ಉಪದೇಶ ರಕ್ಷಾ ಕವಚವನ್ನು ಧರಿಸಿದ್ದ ಸಂಯಮಿ "ಭಯಭರಿತ ಭಕ್ತಿಯಲಿ ಕಾಮಾರಿಯನು ಗೆಲಿದರ್ಜುನನು ಹರವೈರಿಯನು ಗೆಲಿದನು ಧೈರ್ಯದಿಂದೂರ್ವಶಿಯ ಶಾಪದಲಿ."

ಭರತವಂಶ ಜನನಿ ಪುರೂರವನ ಪತ್ನಿ ಊರ್ವಶಿಯ ನಾಟ್ಯನಿಪುಣತೆಯನ್ನು ಗಮನಿಸುತ್ತಿದ್ದ ರಸಿಕ ಅರ್ಜುನನ ಹೃದಯದಲ್ಲಿ ತನ್ನ ವಂಶಕ್ಕೆ ಮೂಲಸ್ತ್ರೀಯಾದ ಆ ದೇವಗಣಿಕೆಯ ಮೇಲೆ ಸ್ವಾಭಾವಿಕವಾಗಿ ಮಾತೃಪ್ರೇಮ ಜಾಗೃತವಾಗಿ ಆ ಮಹಾ ದೇವಿಯನ್ನೆವೆಯಿಕ್ಕದೆ ಈಕ್ಷಿಸಿದ. ಅಹಲ್ಯಾ ಶಾಪಕಾರಣನಾದ ಇಂದ್ರ ಅರ್ಜುನನಲ್ಲಿ ಜಾಗೃತವಾದ ವಂಶಪ್ರೇಮದಿಂದ ತುಂಬಿದ ಸಾತ್ವಿಕ ಪುತ್ರನ ನೋಟವನ್ನು ತನ್ನ ಮನಸ್ಸಿನಲ್ಲಡಗಿದ್ದ ಭಾವನೆಗಳಿಗೆ ತಕ್ಕಂತೆ ಅರ್ಥಕಲ್ಪಿಸಿಕೊಂಡು, ಊರ್ವಶಿಗೆ" ಅರ್ಜುನನು ನನ್ನ ಮಗ! ಇಂದು ನೀನು ನನ್ನ ಸೊಸೆ!" ಎಂದು ಬಳಿಯಟ್ಟುವನು. ಅಪ್ಸರ ಸುಂದರಿ ಊರ್ವಶಿ ವಿಕ್ರಮನ ವಂಶೋತ್ಪನ್ನನಾದ ಕಿರೀಟಿಯಲ್ಲಿ ತನ್ನಾ ಪೂರ್ವಪತಿಯ ಹೋಲಿಕೆಯನ್ನು ಕಂಡು ಚಿತ್ರಭಿತ್ತಿಯಲ್ಲಿ ಅರ್ಜುನನ ಚಿತ್ರವನ್ನು ಬರೆದು ತನ್ನ ಹೃದಯೇಶ್ವರನನ್ನಾದರಿಸಲು ಸಕಲ ಸನ್ನಾಹಗಳೊಂದಿಗೆ ಅರ್ಜುನನ ಶಯ್ಯಾಗೃಹಕ್ಕೆ ಬರುವಳು. ಬಳ್ಳಿಮಿಂಚಿನಂತಹ ಆವಳ ಸೌಂದರ್ಯ ಕಾಂತಿಯಲ್ಲಿ ಮೈ ಪರಿಮಳ ಬೆರೆತ ನಿಶ್ವಾಸದ ಸುಗಂಧ ಮಾರುತದಿಂದ ಅರ್ಜುನನ ನಿದ್ರೆ ತಿಳಿದುದು, ಎದುರಿಗೆ ಮದನಾಲಸೆ ಊರ್ವಶಿ. "ಹಾ ಮಹಾದೇವಿಯರಲಾ?" ಎಂದು ಮೇಲೆದ್ದು ತಾಯೆಂದು ಉಪಚರಿಸಿ ಬಹುವಚನದಿಂದ ಆದರಿಸಿದನು. ಮುರಾರಿಯ ಕೈತವಕ್ಕೊಳಗಾಗಿ ತನ್ನ ಜನ್ಮವೃತ್ತಾಂತವನ್ನರಿಯುತ್ತಿದ್ದ ಕರ್ಣನ ಬಳತೋಟಿಗೆ ನೂರುಮಡಿಯಾಗಿ ಊರ್ವಶಿಯ ಹೃದಯ ಅರ್ಜುನನ ವರ್ತನೆಯಲ್ಲಿ ಮಿಡಿದು ಆಶಾ ಸೌಧ ಕಳಚಿಬಿತ್ತು. ಕುಮಾರವ್ಯಾಸ ಭಾರತದ ಅತ್ಯುನ್ನತ ಶಿಖರಗಳಲ್ಲಿ ಊರ್ವಶಿಯ ವಾದನೈಪುಣ್ಯವೂ ಒಂದು! "ಒಲಿದು ಬಂದ ಅಬಲೆಯನ್ನು ಟೆಕ್ಕರಿಗಳೆವುದೇ ವಿಟಧರ್ಮವೆ? ತಂದೆ ಸುರರಾಯನಟ್ಟಲು ಬಂದೆ! ಮಾನಿಯ ಇಚ್ಛೆಯನ್ನರಿಯದವ ಕುರಿ ಕಣಾ! ಮನ್ಮಥನ ಕೋಟಲೆ ಮೀರಿದುದು." ಪ್ರಣಯ ತಿರಸ್ಕಾರವನ್ನು ಸಹಿಸಿ ಲಜ್ಜೆಯನ್ನು ಬದಿಗೊತ್ತಿ ಅರ್ಜುನನನ್ನು ಬೇಡುವ ಸ್ವರ್ಗದ ರಾಣಿಯ ದೈನ್ಯವಾಣಿ, ಕರೂಪನೊಬ್ಬನಿಗೆ ಮಾತ್ರ ಕೇಳಲು ಸಾಧ್ಯ. ಈ ಸಂದರ್ಭ ರನ್ನನ ಕೈವಶವಾಗಿದ್ದಲ್ಲಿ ಆದೆಂತಹ ಅಂಗಾಂಗ ವರ್ಣನೆಯಲ್ಲಿ ಕಟುಕತನ

ಪ್ರದರ್ಶನದಲ್ಲಿ ಮುಕ್ತಾಯವಾಗುತ್ತಿದ್ದಿತೋ! ಪಂಪನಂತೂ ಅರ್ಜುನನಿಗೆ ಸಂಬಂಧಿಸದ ರಂಭೆಯನ್ನೇ ಪರೀಕ್ಷಾವಧುವನ್ನಾಗಿ ಮಾರ್ಪಡಿಸಿದ. ಸೋಲೇ ಸ್ವರ್ಗಸ ಖವನ್ನು ಕೈಸೂರೆಗೊಳಿಸುವ ಸಂದರ್ಭದಲ್ಲಿ ಅರ್ಜುನ ವ್ಯಾಸಶಿಷ್ಯನಾಗುತ್ತಾನೆ. ತಾಯಿ ಮಗನ ನೋಡಲು ಬಂದರೆ ತಪ್ಪೇನು? ಇನ್ನು ತೆರಳಬಹುದು" ಎಂದು ವಾದವನ್ನು ಅಡ್ಡಗಟ್ಟಿದನು. ಕಾಲಿಗೆರಗಿದ್ದ ಊರ್ವಶಿ ಪೆಣ್ಬಂಕ ಸರ್ಪ ಹೆಡೆಯೆತ್ತಿತು. ರೂಪು ಸುಮನೋಹರ ಭಯಂಕರವಾಯ್ತು. ರೌದ್ರಾಹಿಮಾಣಿಕದಂತೆ, ತಪ್ತ ಲೋಹ ರಸದಂತೆ ಈ ತಾಪ ಕುಡಿಯಿಟ್ಟಿತು. ಕ್ಷಣಕಾಲ ತನ್ನ ಬಾಳೇ ಜೇಡೆನಿಸಿತು. "ಸುಡೂ ವಧುವ!" ಎಂದು ಪ್ರಿಯನನ್ನೊಲಿಸಲಾಗದ ತನ್ನ ದೇಹ ಸೌಂದರ್ಯವನ್ನೆ ನಿಂದಿಸಿಕೊಂಡಳು. ತಕ್ಷಣ ಬುದ್ಧಿ ಪಲ್ಲಟಿಸಿತು. ಒಡೆಯನಾಜ್ಞೆಯನ್ನು ಸಲ್ಲಿಸಲು ಬಂದ ತನ್ನದೇನು ತಪ್ಪು? ಅರ್ಜುನನ ಗಂಡ ಗರ್ವವನ್ನು ನೆನೆದು ಅದನ್ನು ಶಿಕ್ಷಿಸಲು "ನರವ್ಯಾಘ್ರನು! ನಿಮ್ಮ ಭಾರತ ಭೂಮಿಯೊಳಗೊಂದು ವರ್ಷ ನಪುಂಸಕನಾಗಿ ಚರಿಸು" ಎಂದು ಅತ್ಯಂತ ಸೌಮ್ಯವಾದ ಶಾಪವನ್ನಿತ್ತು ಹಿಂತಿರುಗಿದಳು. ತನ್ನ ಪ್ರಣಯ ತಿರಸ್ಕಾರಕ್ಕಿಂತ ಹೆಚ್ಚಿನ ಸೋಲು ಅವಮಾನ ಹೆಣ್ಣ ಬಾಳಿನಲ್ಲಿಲ್ಲ. ಊರ್ವಶಿ ತನಗಾದ ಅವಮಾನಕ್ಕಾಗಿ ದ್ರೌಪದಿ ದುರ್ಯೋಧನನ್ನು ಶಪಿಸಿದಂತೆ ಕ್ರೂರನಾಗಿ ಶಪಿಸಬಹುದಾಗಿತ್ತು. ಆದರೆ ಅರ್ಜುನ ಊರ್ವಶಿಯ ವಂಶೋದ್ಭವ. ತನ್ನ ವಂಶದ ಎಳೆ ಲತೆಗೆ ಯಾವ ಪೋಷಕಿ ತಾನೆ ಕ್ರೂರವಾಗಿ ಬಿಸಿ ನೀರೆರೆಯಬಲ್ಲಳು? ಈ ಸಂದರ್ಭದಲ್ಲಿ ಊರ್ವಶಿ ಬಾಳೆಯ ಕಂದಿನ ಏಟಿಗಿಂತಲೂ ಮೃದುವಾಗಿ ಶಾಪವೀಯುವಳು.

ಘೋಷಯಾತ್ರಾ ಸಂದರ್ಭದಲ್ಲಿ ಬೆಲೆವೆಣ್ಣುಗಳ ಚೆಲ್ಲಾಟಕ್ಕೆ ಮಾನನಿಧಿ ದುರ್ಯೋಧನನ ಅಭಿಮಾನವನ್ನೇ ಒತ್ತೆಯಾಗಿಡುವ ಸಮಯ ದೊರೆಯುತ್ತದೆ. ಜಯದ್ರಥ ಪತಿವ್ರತೆ ದ್ರೌಪದಿಯನ್ನಪಹರಿಸಲು ಪ್ರಯತ್ನಿಸಿ ಪ್ರಾಣಸಹಿತ ಹಿಂತಿರುಗಿ ಮುಯ್ಯಿತೀರಿಸಲು ಶಿವನಿಂದ ಒಂದು ದಿನದ ಪರಾಕ್ರಮವನ್ನು ತಪಸ್ಸಿನ ಕಾಣಿಕೆಯೊಪ್ಪಿಸಿ ಪಡೆಯುತ್ತಾನೆ.

ಕೀಚಕ ಪ್ರಸಂಗವೊಂದು ವಿಪ್ರಲಂಭ ಶೃಂಗಾರದ ನೆಲೆಮನೆ. ರಸಿಕ ಕೀಚಕ ಸುದೇಷ್ಣೆಯ ಅಂತಃಪುರದಲ್ಲಿ ತುಂಬು ಸೌಂದರ್ಯದ ನಿಧಿ, ಕಣ್ಣಿರಿಗಾರೆ ದ್ರೌಪದಿಯನ್ನು ಕಂಡು ಮನಸ್ಸನ್ನು ಮಾರುಹೋಗುತ್ತಾನೆ. "ದ್ರೌಪದಿಯ ರೂಪಿಂಗೈದು ಮಡಿ ಚೆಲುವೆಯೆನಿಸಿದ ಸೈರಂಧ್ರಿಯ ವೃತ್ತಾಂತವನ್ನರಿತು ರಹಸ್ಯದಲ್ಲಿ ದೇವಿಯನ್ನು ಸಂಧಿಸಿ ಪ್ರಣಯಯಾಚಕನಾಗುತ್ತಾನೆ. ದ್ರೌಪದಿಯ ಧಿಕ್ಕಾರಕ್ಕೆ ಪ್ರತಿಫಲವಾಗಿ ಮತ್ತೊಮ್ಮೆ ಆಕೆ "ಕುರುಕುಲಾಗ್ರಣಿ ಸೆಳೆದ ವಸ್ತ್ರಾಕರ್ಷಣದ" ಭಯದಿಂದ ನೊಂದು ಕೀಚಕ ಭವನಕ್ಕೆ ಕಾಲಿಡುತ್ತಾಳೆ. "ಸಾಯಬೇಕೇ ಹೆಸಿದ ಶೂಲವ ಹಾಯಿ" ಎಂಬ ತಿರಸ್ಕಾರಕ್ಕೆ ಪ್ರತಿಫಲ ಪ್ರೆ[illegible] ಮುರಿಯ ಕೀಚಕನಿಂದ ಹೊಡೆತ. ಅದಕ್ಕೆ ಮಾರು ಗುದ್ದಿ[illegible] ಯುವನನು ಸೂರ್ಯದೂತ. ರಾಜಸಭೆಯಲ್ಲಿ ದ್ರೌಪದಿ ದೂ[illegible]ದರೆ "ಅಲ್ಲಿದ್ದವರು ಸುಲೋಚನಾಂಧಕರು" "ಆಕಟ ಹೆಂಗಸ[illegible] ಜನ್ಮವನು ಸುಡಲಿ" ಎಂದು ಕಲ್ಲು ಕರಗುವಂತೆ ದ್ರೌಪದಿ[illegible] ಗೋಳಾಡಿ ಕೊನೆಗೆ ಮರಣವನ್ನು ನಿಶ್ಚೈಸಿ ಭೀಮನಲ್ಲಿಗೆ ಮಾನರಕ್ಷಣಾರ್ಥವಾಗಿ ಬರುತ್ತಾಳೆ. ಜನತೆಯ ಕವಿ ಕುಮಾ[illegible]ರವ್ಯಾಸ ಸಾಮಾನ್ಯ ಜನರನ್ನೊಲಿಸಿ ನಲಿಸಿ ಕುಣಿಯುವ ಜನ[illegible] ಮೆಚ್ಚಿನ ಸಂದರ್ಭ ಭೀಮ ದ್ರೌಪದಿಯ ಸಂಭಾಷಣೆ. ಗಸ[illegible] ಮಡುವಾದರೂ ಅಶ್ಲೀಲಕ್ರಿಮಿ ಕೂಡ ಹುಟ್ಟಿಲ್ಲ. ಪಂಪನ[illegible] ಔನ್ನತ್ಯವಿಲ್ಲ. "ಭೀಮ ಕೊಟ್ಟೈ ತನಗೆ ಸಾವಿನ ನೇಮ[illegible]ವನು? ತಾಮಸದಿ ತಾ ಮೀರಿ ನಡೆದುದ್ದಾ ಮತೆಯ ಸೈರಿಸು[illegible]ವುದು" ಎಂದು ಕಾಲಿಗೆರಗಿದ ದ್ರೌಪದಿಯನ್ನಾದರಿಸಿ ಭೀಮ[illegible] ಗಂಡನಾಗಿ "ಅಣ್ಣನಾಜ್ಞೆಯ ಗಿರಿಯ ದಾಂಟಿದೆ"ನೆಂದು ಶಪಥ[illegible] ಮಾಡುತ್ತಾನೆ. ಅದರಂತೆ ಕೀಚಕನ ಮರಣ.

ವಿರಹಿಗಳ ಶೃಂಗಾರದ ಅಂತ್ಯದೃಶ್ಯ ರುದ್ರಮನೋಹರವಾದುದು. ಅನ್ಯಾಯಕ್ಕೆ ಬಲಿಯಾದ ಭೀಮ ತನ್ನ ಚಿರವೈರಿ ದುಶ್ಶಾಸನನ ಹೃದಯ ರಕ್ತವನ್ನು ಕುಡಿದು ದ್ರೌಪದಿಯ ಶ್ರೀಮುಡಿಗೆ ರಕ್ತಸೇಚನ ಮಾಡಿ "ರಾಣಿ ಹುಸಿಯದೆ ಹೇಳು ಸೊಗಸೇ ಖಳನ ದಂತಶ್ರೇಣಿ ಶ್ರೋಣಿತವಾರಿ" ಎಂದು ರುದ್ರಾಟ್ಟಹಾಸವಮಾಡುವ ಸಂದರ್ಭ! ಪ್ರಳಯ ಭೈರವ ಮತ್ತು ನೃತ್ಯಕಾಲಿಯರ ಸ್ಮಶಾನನೃತ್ಯವನ್ನು ಮೀರಿಸಿದ ರೌದ್ರತಮ ಸನ್ನಿವೇಶದಲ್ಲಿ ಭೀಮ ದ್ರೌಪದಿಯ ವೇಣಿ ಸಂಹಾರ ಸಂದರ್ಭವನ್ನು ಚಿತ್ರಿಸಿರುವ ಪ್ರತಿಭೆ ಶುಕ[illegible] ರೂಪನಲ್ಲಿ ಅತ್ಯಂತ ಔಚಿತ್ಯಪೂರ್ಣವಾದುದು. ವಿರಹಿಗಳ ಶೃಂಗಾರರಣರಂಗದಲ್ಲಿ ಶತೃನಾಶದನಂತರ ಮುಕ್ತಾಯವಾಗುತ್ತದೆ.





ಶಿಕ್ಷಣದ ತಿಳಿವಿತ್ತ ಲಕ್ಷ್ಮೀಶ

ಲೇಖಕರು: ಶ್ರೀ। ಎಮ್. ಸುಬ್ರಾಯನ್, ವಿದ್ವಾನ್.

ಪ್ರಾಚೀನ ಭಾರತ ವಿದೇಶೀಯರನ್ನು ಅವಲಂಬಿಸಿರದೆ ತನ್ನ ಹಿರಿಮೆಯನ್ನು ಸಮಸ್ತ ದಿಗಂತಗಳಲ್ಲಿಯೂ ಕಾಣಿಸಿ ಕೊಟ್ಟು ಸುವರ್ಣಭೂಮಿಯೆಂಬ ನಾಮಾಂಕಿತ ಗೊಂಡು ಉನ್ನತಿ ಪಥದಲ್ಲಿ ಸ್ವಕೀಯರನ್ನೂ ಪರಕೀಯರನೂ ಅಭೇದವಾಗಿ ನಡೆಸುತ್ತಲಿದ್ದು ಮುನ್ನಡೆಯ ವಿಶ್ವಬಂಧುತ್ವದ ಆದರ್ಶದ ಸಂಜ್ಞಾಯಲ್ಲೇ ವ್ಯವಹಾರ ವರ್ತನೆಗಳನ್ನು ಬಳಸಿ ಆಗತರಿಗೂ ಇದೇ ಬೋಧೆಗೊಟ್ಟು ಪರಮಂಡಲಗಳಲ್ಲಿಯೂ ತನ್ನ ವರ್ಚಸ್ಸನ್ನು ಹಬ್ಬಿಸಿ ಸಕಲ ರಾಷ್ಟ್ರಗಳ ಆದರಾಭಿಮಾನ ಗಳಿಗೆ ಪಾತ್ರವೆನಿಸಿತು. ಈ ಕಾರಣದಿಂದಲೇ ಭಾರತೀಯರು ಆರ್ಯರೆಂದೇ ಅನ್ಯರಿಂದ ಸಂಬೋಧನೆಗೊಂಡವರಾದರು. ವ್ಯಾಪಾರ ಶಿಕ್ಷಣ ಸಮಸ್ತ ಕಲೆಗಳಿಂದ ನಮ್ಮ ರಾಷ್ಟ್ರ ತುಂಬಿ ತುಳುಕಿ ವಿದೇಶೀಯರು ನಮ್ಮ ವ್ಯಾಪಾರ ವ್ಯವಹಾರ ಬಾಂಧವ್ಯ ಮತ್ತು ಗುರುಕುಲವಾಸಗಳನ್ನು ಬಳಸಿದರು. ಪ್ರಾಕ್ತನ ಭಾರತೀಯರು ಸ್ವಾವಲಂಬಿಗಳಾಗಿಯೇ ಬಾಳಿದ್ದು ಅನ್ನ, ವಸನ, ವಸತಿಗಳ ಇಂದಣ ಸಮಸ್ಯೆಯು ಬವಣೆಗೊಂಡವರಾಗಿರಲಿಲ್ಲ. ಇವೇ ಮೊದಲಾದ ವಿಚಾರಗಳನ್ನು ಹಿಂದಣ ಪ್ರಯಾಣಿಕರ ಗ್ರಂಥಗಳನ್ನು ಓದಿದರೆ ನಮಗೆ ಮನದಟ್ಟಾಗುವುದು.

ಇಂದಣ ಭಾರತ ಸಮಸ್ತ ರೀತಿಯಿಂದಲೂ ಪರರನ್ನೇ ಆಶ್ರಯಿಸುತ್ತಲಿದೆ. ಮಾತ್ರವಲ್ಲದೆ ಪರಾಶ್ರಯದ ಹಂಬಲನ್ನು ಬಿಟ್ಟಂತೆ ಕಾಣಿಸುತ್ತಿಲ್ಲ. ಆಹಾರ ಸಾಮಗ್ರಿ ವಸ್ತ್ರ ಸಮಸ್ಯೆ ಮಾತ್ರವಲ್ಲ. ಶಿಕ್ಷಣ ವಿಷಯದಲ್ಲೂ ನಾವು ಅನ್ಯರನ್ನೇ ಅಪೇಕ್ಷಿಸುತ್ತೇವೆ. ಇದನ್ನು ನೆನೆದಾಗ ಯಾವ ಭಾರತೀಯನಿಗೆ ತನ್ನ ಇಂದಣ ಕೀಳು ನೆಲೆಯ ಕುರಿತು ಲಜ್ಜೆ ಶೋಕಗಳುಂಟಾಗಲಾರವು? ಕೇವಲ ಲಜ್ಜೆ ಶೋಕಗಳೆರಡನ್ನೂ ತಾಳಿ ಮೌನವಾಗಿ ಕುಳಿತರೆ ಅದರಿಂದ ಅಂತಹದನ್ನು ಪುರುಷನ ಗಣನೆಗೆ ತರಲಾಗುವುದಿಲ್ಲ. ಹಿಂದಣ ಹಿರಿಮೆಯನ್ನು ಸಾಧಿಸಿ ಮೆರೆಯಲು ಪ್ರಯತ್ನಿಸದ ವಿನಾ ತನ್ನ ಜೀವನವನ್ನು ಸಾರ್ಥಕವೆಂದು ಬಗೆಯಲೂ ಸಾಧ್ಯವಿಲ್ಲ. ಪಶುಗಳೂ ಹೊಟ್ಟೆ ಹೊರೆದು ಜೀವನವನ್ನು ಸಾಗಿಸುತ್ತಿವೆ. ಇಂತಹ ಪಶು ಜೀವನಕ್ಕಿಂತಲೂ ಕೀಳಾದ ಜೀವನವನ್ನು ನಡೆಸಿ ಇಂದು ನಾವು ಬಾಳುತ್ತಿರುವುದು ನಮ್ಮ ಮಾನವತೆಗೆ ಕೊರತೆಯಾದ ವಿಷಯವಾಗಿದೆ. ಈ ಮಾನವತೆಯನ್ನು ಬುದ್ಧಿ ಶಕ್ತಿಯ ಮನನದ ಮೂಲಕ ಬಲಿಯಿಸಿ ಪುನಃ ಮಾನುಷಾವಸ್ಥೆಗೆ ತರುವ ಭಾರ ಇಂದಣ ಭಾರತವಾಸಿಯದು.

ಭಾರತ ಭೂಮಿಯು ಬಹಳ ವಿಶಾಲವಾದ ಭೂಮಿ. ಸಸ್ಯ ಶ್ಯಾಮಲೆಯೆಂದೇ ರಾಷ್ಟ್ರ ಗೀತದಲ್ಲಿ ಹಾಡಿ ಸಂತೋಷಗೊಳ್ಳುತ್ತಿರುವೆವು! ಸುಜಲಾಂ ಸುಫಲಾಂ ಎಂಬ ನುಡಿಗಳನ್ನು ಅದರೊಂದಿಗೇ ಜೊತೆಗೊಂಡು ಹಾಡುತ್ತಿರುವೆವು! ಇಷ್ಟು ವಿಶಾಲವಾದ ಭಾರತಭೂಮಿಯಲ್ಲಿ ಜಲದ ಕೊರತೆಯಿಲ್ಲ. ಬೆಳೆಗೊಡದ ಭೂಮಿಯಿಲ್ಲ. ಲಕ್ಷೋಪಲಕ್ಷ ಜನಗಳಿದ್ದರೂ ಕೃಷಿ ಸಂಪತ್ತನ್ನು ಹೆಚ್ಚಿಸುವ ಆಶೆಗೊಳ್ಳುವವರಾಗುವುದಿಲ್ಲ. ಸರಕಾರ ಆಹಾರ ಸಾಮಗ್ರಿಯನ್ನು ಬೆಳೆಸಲಿರುವ ಯೋಜನೆಯ ವಿಚಾರಕ್ಕೆ ಹೊರಟರೆ ಸರಕಾರ ಅನ್ಯದೇಶಗಳಿಂದ ಅನ್ನ ಸಾಮಾಗ್ರಿಗಳನ್ನು ವ್ಯಾಪಾರಕ್ಕೆ ಕೊಂಡುಕೊಳ್ಳದೆ ಈ ಹುಚ್ಚು ದಾರಿಯನ್ನೇಕೆ ಹಿಡಿಯಿತೆಂದು ಟೀಕೆಗೊಳ್ಳಲು ಹೊರಡುತ್ತೇವೆ. ಸ್ವಾವಲಂಬನದ ವಿಚಾರ ವರ್ತನೆಗಳಾವುವೂ ನಮ್ಮಲ್ಲಿ ಮೊಳೆಯಲಾರವು. ಪದೇ ಪದೇ ಅಡಿಯಾಳುತನಕ್ಕೆ ದುಮುಕುವ ವರ್ತನೆ ಜನತೆಗೊಳ್ಳುತ್ತಲಿದೆ. ಭಾರತವನ್ನು ಸಸ್ಯ ಶ್ಯಾಮಲೆ ಸಜಲೆ ಸುಫಲೆಯನ್ನಾಗಿ ಮಾಡುವ ಯತ್ನ ಬೇಕೆಂದು ವಿಚಾರವಾಣಿ ಎದ್ದಂತೆ ಕಂಡುಬರುವುದಿಲ್ಲ. ಕೇವಲ ಅವಿಚಾರಧೋರಣೆಗಳೇ ಕಾಣುತ್ತಲಿವೆ.

ಹಿಂದೆ ಗುರುಕುಲದ ವಿದ್ಯಾರ್ಥಿಗಳು ಸಕಲ ವಿಧದಿಂ

ದಲೂ ಸ್ವಾವಲಂಬನದ ಶಿಕ್ಷಣವನ್ನೇ ಪಡೆಯುತಿದ್ದರು. ಈ ಕಾರಣದಿಂದಲೇ ಗುರುಕುಲದಲ್ಲಿ ವಿದ್ಯಾರ್ಥಿಗಳು ಹದಿನಾಲ್ಕು ವರ್ಷಗಳ ತನಕ ಉಳಿಯಬೇಕಾಗುತಿದ್ದಿತು. ಗುರು ಜನರಿಗೂ ಅತಿ ಗೌರವವಿದ್ದಿತು. ದಶರಥನು ವಸಿಷ್ಠನ ವಚನದಂತೆ ಕಿರುಹರೆಯದ ರಾಮ ಲಕ್ಷ್ಮಣರನ್ನು ವಿಶ್ವಾಮಿತ್ರನ ಕೈಗೊಪ್ಪಿಸುವ ರಾಮಾಯಣದ ಕಥಾನಕದ ಚಿತ್ರ ಗುರು ಜನರಿಗೆ ಇರುವ ಮಹತ್ವದ ಚಿತ್ರವನ್ನು ತೋರುತ್ತದೆ. ಅಂದಣ ಉಪಾಧ್ಯಾಯರು ಶಿಷ್ಯರ ಚಿತ್ತಾಪಹಾರಕರಾಗಿದ್ದರು. ಇಂದಣ ಅಧಿಕ ಸಂಖ್ಯಾಕ ಬೋಧಕರು ಶಿಷ್ಯರ ವಿತ್ತಾಪಹಾರಿಗಳಾಗಿಯೇ ಕಂಡುಬರುತ್ತಿರುವರು. ವಿದೇಶೀಯರ ಆಳಿಕೆ ಬಂದಂತೆ ನಮ್ಮ ಬೋಧಕರ ಮನೋವೃತ್ತಿಯಲ್ಲಿ ಮಾರ್ಪಾಟುಗಳುಂಟಾಗಿವೆ. ವಿದೇಶದ ರಾಜಸತ್ತೆಯು ನೆಲೆಗಿರುವ ಸ್ವಾವಲಂಬನವಿರದ ಅಧಿಕಾರಿಯು ಅಡಿಯಾಳಾಗಿ ಆಜ್ಞೆಯನ್ನು ಹೊತ್ತು ನಡೆಯಲಿಕ್ಕಿರುವ ಗುಮಾಸ್ತಗಿರಿಯ ಬೋಧೆಯೇ ಆಚಾರ್ಯರ ಬೋಧೆ. ಆಚಾರ್ಯರ ಅಂತೇ ಋಷಿಗಳ ಆಚಾರ್ಯರ ಬೆಲೆ ಗೌರವಗಳನ್ನು ವಿದೇಶ ಭಾಷೆ ವಾಸಗಳಿಂದಲೇ ಅಂಕಿಸುವಂತಾಯಿತು. ಆಶ್ರಮ ಶಿಕ್ಷಣ ಯಾಕೆ? ನಮ್ಮ ಮಕ್ಕಳು ಕೆಲಸವನ್ನು ಮಾಡಲಿಕ್ಕಿಲ್ಲ. ಆಜ್ಞೆಯ ಅಧಿಕಾರಿಗಳಾಗಿ ನಡೆಯಲಿರುವುದಕ್ಕೆಂದು ಸಕಲ ಸಂಪತ್ತುಗಳನ್ನೂ ಕಳಕೊಳ್ಳುವ ಬುದ್ಧಿ ಹೆತ್ತವರಲ್ಲಿ ಅಧಿಕವಾಯಿತು. ಇಂದೂ ಇದೆ. ಶಾಲೆಗಳಲ್ಲಿ ಬುನಾದಿ ಶಿಕ್ಷಣವಾಗಬೇಕು. ಅವರ ತರಬೇತಿ ಉಪಾಧ್ಯಾಯರಿಗಾಗಬೇಕು; ಎಂದು ಸರಕಾರ ಹೇಳಿದರೆ ಆ ಕಡೆ ಗೌರವಗೊಟ್ಟು ಬೋಧಕರೂ ವಿದ್ಯಾರ್ಥಿಗಳೂ ನಡೆದಂತೆ ಕಾಣಿಸುತ್ತಿಲ್ಲ. ಬುನಾದಿ ಶಿಕ್ಷಣ ಮನುಷ್ಯನ ಸ್ವಾವಲಂಬನವನ್ನು ಹೆಚ್ಚಿಸುವುದಕ್ಕೆ, ಗುಲಾಮತನವನ್ನು ತೊಲಗಿಸುವುದಕ್ಕೆ. ಈ ಉದ್ದೇಶದಿಂದಲೇ ಬಾಪೂಜಿ ವರ್ಧಾ ಶಿಕ್ಷಣ ಕೇಂದ್ರವನ್ನು ಮಾಡಿದರು. ಠಾಗೂರರ ಶಾಂತಿನಿಕೇತನ ಶ್ರೀನಿಕೇತನ ಇವೆರಡೂ ಭಾರತದ ಗುಲಾಮತನವನ್ನು ತೊಲಗಿಸುವ ಉದ್ದೇಶಕ್ಕಾಗಿಯೇ ತೆರೆದ ವಿದ್ಯಾಲಯಗಳು.

ಪ್ರಾಚೀನ ಭಾರತೀಯರು ಶಿಕ್ಷಣವನ್ನು ಯಾವುದಕ್ಕಾಗಿ ನಡೆಯಿಸುತಿದ್ದರು; ಶಿಕ್ಷಣದಿಂದ ಯಾವುದನ್ನು ಬಯಸುತ್ತಿದ್ದರೆಂಬುದು ನಾವೆಲ್ಲರೂ ಗಮನಿಸತಕ್ಕ ವಿಷಯ. ಲಕ್ಷ್ಮೀಶನು ಈ ವಿಷಯವನ್ನು ಜೈಮಿನಿ ಭಾರತದಲ್ಲಿ ಹೇಳಿರುತ್ತಾನೆ.

ಸೀತೆ ವಾಲ್ಮೀಕಿಯ ಆಶ್ರಮದಲ್ಲಿ ಲವಕುಶರನ್ನು ಪಡೆದಳು. ಅವರು ದಿನೇ ದಿನೇ ಬಳೆಯತೊಡಗಿದರು. ವಾಲ್ಮೀಕಿ ಆ ಮಕ್ಕಳಿಗೆ ತನ್ನ ಆಶ್ರಮದಲ್ಲಿ ಶಿಕ್ಷಣವನ್ನೀಯತೊಡಗಿದನು. ವಿದ್ಯಾಭ್ಯಾಸದ ಮೂಲಕ ವಾಲ್ಮೀಕಿ ಕುಶಲವರಲ್ಲಿ ಯಾವುದನ್ನು ಬಯಸಿದನು, ವಿದ್ಯಾಭ್ಯಾಸದಿಂದ ಬಯಸತಕ್ಕ ವಿಚಾರ ಯಾವುದೆಂದು ಈ ಕೆಳಗಣ ಪದ್ಯದಿಂದ ನಮಗರಿಯುವುದು.

ಬಿಸದೆ ಪಾಲ್ವೆರೆವುದಂತಣಿದುಯೋರೆಗೆ ಮಕ್ಕ
ಳೊಡನೆ ಧೂಳಾಟ ಮೊದಲಾದ ಲೀಲೆಗಳ ಹರಿ
ವಿಡಿಯಿಂದ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ
ತೊಡಗಿಸಿದನಕ್ಷರಾಭ್ಯಾಸಮಂ ಬಳಿಕ ನಡೆ
ನುಡಿಯು ಜಾಣ್ಮೆಯು ಕಲೆಯು ರಾಜಲಕ್ಷಣದ ಹೆ-
ಲ್ವಿಡಿದ ಲಲಿತಾಂಗದಿಂ ಕುಶಲವರ್ ಕುಶಲವರ್ಧನರಾಗಿ ರಂಜಿಸಿದರು

ಲವಕುಶರು ಆಗಾಗ ಮೊಲೆ ಕುಡಿವುದನ್ನು ಬಿಟ್ಟರು. ತಮ್ಮ ಸರಿಸಮಾನರಾದ ಮಕ್ಕಳೊಡನೆ ಧೂಳಾಟ ಮೊದಲಾದ ಆಟಗಳನ್ನು ಆಡತೊಡಗಿದರು. ಈ ರೀತಿಯಿಂದ ಬಳೆಯುತಿದ್ದ ಲವಕುಶರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿದನು. ಆತನು ಓದಿನಲ್ಲಿ ಬಯಸಿದ್ದು ನಡೆ ನುಡಿ ಜಾಣ್ಮೆಯು ಕಲೆ. ಮಕ್ಕಳಿಗೆ ಶಿಕ್ಷಣದ ಮೂಲಕ ಉಂಟಾಗತಕ್ಕದು ಮೊತ್ತಮೊದಲು ನಡೆ. ನಡತೆ ಉತ್ತಮವಾಗಬೇಕು. ನಡೆಯೊಂದಿಗೆ ನುಡಿ ಚೆನ್ನಾಗಿರಬೇಕು. ನಡತೆ ಮಾತುಕತೆಗಳೊಂದಿಗೆ ಜಾಣ್ಮೆಯೂ ನೆಲಸಬೇಕು. ಬುದ್ಧಿವಂತಿಕೆಯ ಚಾತುರ್ಯ ಹೆಚ್ಚಬೇಕು. ನಡೆನುಡಿ ಜಾಣ್ಮೆಯು ಕಲೆಗಳು ಮಕ್ಕಳಿಗೆ ಶಿಕ್ಷಣದಿಂದೊದಗಬೇಕು. ಇದರಿಂದವರು ರಾಜ ಲಕ್ಷಣದ ಮನೋಹರವಾದ ಅಂಗದಿಂದ ಕೂಡಿದವರಾಗುತ್ತಾರೆ. ಇದರಿಂದ ಮಕ್ಕಳ ಕುಶಲ (ಕ್ಷೇಮ) ವರ್ಧನೆಯಾಗುತ್ತದೆ.

ಶಾಲೆಯಲ್ಲಿ ಹೊಂದಿದ ಶಿಕ್ಷಣದ ಮೂಲಕ ನಾವು ಮಕ್ಕಳಲ್ಲಿ ಕಾಣತಕ್ಕ ಮುಖ್ಯ ವಿಷಯಗಳು ನಡೆನುಡಿ ಕಲಾ ಜಾಣ್ಮೆ. ಇದಕ್ಕಾಗಿಯೇ ನಾವು ಮಕ್ಕಳನ್ನು ಶಾಲೆಗಳಿಗೆ ಕಳುಹುವೆವು. ಇವನ್ನು ಅವರು ಪಡೆದರೆ ಅವರಲ್ಲಿ ರಾಜಲಕ್ಷಣದ ಲಲಿತಾಂಗ ಕಾಣುವುದು. ಸೈನಿಕ ಶಿಕ್ಷಣ ಮಕ್ಕಳಿಗೆ ಬೇಕಾದ ಇನ್ನೊಂದು ವಿಷಯ. ಅದನ್ನು ಯಾವಾಗ ಕೊಡುವುದೆಂದು ಲಕ್ಷ್ಮೀಶನೇ ಹೇಳುವನು.

ಸರ್ವ ಕರ್ಮದ ವಿಧಿಯನಖಿಳ ನಿಗಮದ ಕಡೆಯ
ನುರ್ವ ಶಾಸ್ತ್ರದ ಬಗೆಯ ನುಡಿದ ಧರ್ಮದ ನೆಲೆಯ
ನುರ್ವೀಶ ನೀತಿಗಳ ನಿಶ್ಚಯವನೈದೆ ಸಾಂಗೋಪಾಂಗವಾಗಿ ಬರಿಸಿ |
ತರ್ವಾಯೊಳಾ ಕುಮಾರರ್ಗೆ ಮುನಿನಾಥಂ ಧ-
ನುರ್ವೇದಮಂ ಶಿಕ್ಷೆಗೈದು ರಾಮಾಯಣವ
ನೀರ್ವರುಂ ಪಾಡುವಂತತಿಮಧುರ ಭಾವದಿಂ ತುದಿಮೊದಲ್ಗೆ ||

ವಾಲ್ಮೀಕಿಯು ಧನುರ್ವೇದವನ್ನು ಕುಶಲವರಿಗೆ ಯಾವಾಗ ಉಪದೇಶಮಾಡಿದನೆಂದು ಇದರಿಂದ ತಿಳಿಯಬರುತ್ತದೆ. ಎಲ್ಲಾ ಕೆಲಸಗಳ ಕ್ರಮ, ಎಲ್ಲಾ ಶಾಸ್ತ್ರಗಳ ಕೊನೆ, ಹಿರಿಯ ಶಾಸ್ತ್ರಗಳ ವಿಚಾರ, ನುಡಿದ ಧರ್ಮಗಳ ನೆಲೆ, ರಾಜ ನೀತಿ, ಇವುಗಳನ್ನು ಸಾಂಗೋಪಾಂಗವಾಗಿ ಬರಿಸಿದನಂತರ ಕುಶಲವರಿಗೆ ಸೈನಿಕ ಶಿಕ್ಷಣ (ಧನುರ್ವೇದ)ವನ್ನು ಕೊಟ್ಟನು. ಇವುಗಳನ್ನು ಬರಿ

ಯಾರ ಪ್ರೀತಿ ಹೆಚ್ಚು?

ಲೇಖಕರು: ಶ್ರೀ. ಕೈವಾರ ರಾಜಾರಾವ್

ಪಾತ್ರಗಳು:

೧. **ಗೀತ:** ೨೦ ವರ್ಷದ ಯುವತಿ.
೨. **ಯಶೋಧೆ:** ಗೀತಳ ಅಕ್ಕ.
೩. **ಜಯ:** ಗೀತಳ ತಾಯಿಯ ತಮ್ಮ; ೨೪ ವರುಷ.
೪. **ಮೋಹನ:** ಜಯನ ಸಹಪಾಠಿ, ಅದೇ ವಯಸ್ಸು.

[ಯಶೋಧೆಯ ಮನೆಯ ಹಜಾರ. ರಂಗದ ಎಡಬಲಕ್ಕೆ ಒಂದೊಂದು ಕೊಟಡಿಯ ಬಾಗಿಲೂ ಎದುರಿಗೆ ಒಳಕ್ಕೆ ಹೋಗುವ ಬಾಗಿಲೂ ಕಾಣಿಸುತ್ತಿದೆ. ಶ್ರೀಮಂತರ ಮನೆಯಂತೆ ಸುತ್ತ ಸೋಫ ಕುರ್ಚಿಗಳಿವೆ. ಮಧ್ಯೆ ಒಂದು ದುಂಡು ಟೇಬಲು. ಅದರ ಮೇಲೆ ವೃತ್ತಪತ್ರಿಕೆಗಳೂ ಮಾಸ ಪತ್ರಿಕೆಗಳೂ ಇವೆ. ತೆರೆ ಮೇಲೇಳುವ ಕಾಲಕ್ಕೆ ಗೀತ ವೃತ್ತಪತ್ರಿಕೆಯನ್ನೋದುತ್ತ, ಎದುರು ಗಡೆ ಒಂದು ಸೋಫದ ಮೇಲೆ ಕುಳಿತಿದ್ದಾಳೆ. ಅವಳು ಒಳ್ಳೆ ಚೆಲುವೆ. ಇಪ್ಪತ್ತು ವರ್ಷದವಳು. ವಿದ್ಯಾವಂತೆ. ಕ್ಷಣಹೊತ್ತಿನ ಮೇಲೆ ಮೋಹನ ಪ್ರವೇಶಿಸುವನು. ಅವನಿಗೆ ಸುಮಾರು ಇಪ್ಪತ್ತ ಮೂರು–ಇಪ್ಪತ್ತನಾಲ್ಕರ ವಯಸ್ಸು. ಎಣ್ಣೆಗೆಂಪಿನ ಬಣ್ಣ. ಮೈ ಕೈ ತುಂಬಿಕೊಂಡು ಒಳ್ಳೆ ಆರೋಗ್ಯವಂತನಂತೆ ಕಾಣುತ್ತಾನೆ. ಮಧ್ಯಾಹ್ನ ಸುಮಾರು ನಾಲ್ಕು ಘಂಟೆಯ ಸಮಯ.]

ಗೀತ: ಪರೀಕ್ಷೆ ಮುಗಿಯಿತೆ?

ಮೋಹನ: ಹೂ, ಮುಗಿಯಿತು (ಇನ್ನೊಂದು ಸೋಫದ ಮೇಲೆ ಕೂಡುವನು.)

ಗೀತ: ಹೇಗೆ ಮಾಡಿದ್ದಿ ಪೇಪರು ಸುಲಭವಾಗಿತ್ತೆ?

ಮೋಹನ: ಪೇಪರು ಸುಲಭವಾಗಿರಲಿಲ್ಲ, ಆದರೆ ನಾನೇನೋ ಚೆನ್ನಾಗಿಯೇ ಮಾಡಿದ್ದೇನೆ. ಒಟ್ಟಿನಲ್ಲಿ ಫಸ್ಟ್ ಕ್ಲಾಸಿನಲ್ಲೇ ಪಾಸಾಗಬಹುದು.

ಗೀತ: ಜಯ ಹೇಗೆ ಮಾಡಿದ್ದಾನಂತೆ?

ಮೋಹನ: ಅವನು ನನಗೆ ಸಿಗಲಿಲ್ಲ. ಚೆನ್ನಾಗಿಯೇ ಮಾಡಿದ್ದೇನೆ ಅಂತ ಅವನ ಸ್ನೇಹಿತ ಶಂಕರನ ಮುಂದೆ ಹೇಳಿದನಂತೆ. ಆವನು ನನ್ನ ಮುಂದೆ ಹೇಳಿದ. ಚೆನ್ನಾಗಿಯೇ ಮಾಡಿರಬಹುದು. ಆದರೆ ಅವನಿಗೆ ಈ ದಿನದ ಪ್ರಶ್ನೆಗಳು ಅಷ್ಟು ಸುಲಭವಾಗಿದ್ದಿರಲಾರದು. ನಾನು ಇವನ್ನು ಓದಿಕೋ ಅಂದಾಗ ಅದೇನು ಅಷ್ಟು ಮುಖ್ಯವಲ್ಲ ಎಂದುಬಿಟ್ಟಿದ್ದ.

ಗೀತ: ಹಾಗಿದ್ದರೆ........

ಮೋಹನ: ಗಾಬರಿಯೇನೂ ಇಲ್ಲ. ಬೇರೆ ಪ್ರಶ್ನೆಗಳು ಸ್ವಲ್ಪ ಸುಲಭವಾಗಿಯೇ ಇದ್ದುವು. ಇಷ್ಟಕ್ಕೂ ಈ ಎಂ.ಎ.

ಸವ ವಿನಾ ಸೈನಿಕ ಶಿಕ್ಷಣವನ್ನೀಯುಲಿಲ್ಲ. ಎಲ್ಲಾ ಕೆಲಸಗಳನ್ನು ಅರಿಯದವನಿಗೆ ಸೈನಿಕ ಶಿಕ್ಷಣವನ್ನಿತ್ತರೆ ಹಾನಿಯೇ ಇದೆ. ಆತನು ಬಲಾತ್ಕರಿಸುವನು. ಸಂಪತ್ತನ್ನು ಬೆಳೆಯಿಸುವ ಎಲ್ಲಾ ವಿಜ್ಞಾನಜ್ಞನಿಗೆ ಸೈನಿಕ ಶಿಕ್ಷಣ ಕೊಡುವುದುಚಿತ. ಇತರರಿಗೆ ಕೊಟ್ಟರೆ ಹಾನಿಯೇ ಇದೆ. ವಿಜ್ಞಾನ ಸಂಪತ್ತು ಶಾಸ್ತ್ರೀಯ ವಿಚಾರ, ಧರ್ಮ ವಿಚಾರ, ರಾಜ ನೀತಿಜ್ಞರಲ್ಲಿ ಈ ಶಿಕ್ಷಣ ಉಚಿತ. ಅನ್ಯರಲ್ಲಿ ಇದನ್ನು ಕೊಟ್ಟರೆ ಜನತೆಗೆ ಹಾನಿ ಇದೆ. ಇದನ್ನರಿತ ವಾಲ್ಮೀಕಿ ಮಕ್ಕಳನ್ನು ಯೋಗ್ಯರನ್ನಾಗಿಸಿಯೇ ಧನುರ್ವೇದವನ್ನು ಕೊಟ್ಟಿರುತ್ತಾನೆ. ನಮ್ಮ ರಾಷ್ಟ್ರದವರು ಶಿಕ್ಷಣಶಾಸ್ತ್ರಜ್ಞರಾಗಿದ್ದರೆಂಬುದು ಈ ಭಾಗದಿಂದ ನಮಗೆ ತಿಳಿದುಬರುತ್ತದೆ. ಲಕ್ಷ್ಮೀಶನು ಭಾರತದ ಕಲ್ಯಾಣವನ್ನೇ ಶಿಕ್ಷಣದಿಂದ ಉದ್ದೇಶಿಸಿದ್ದಾನೆ. ಜನತೆ ರಾಮ ರಾಜ್ಯದ ಸುಖವನ್ನು ಬಯಸುತ್ತಿದೆ. ರಾಮರಾಜ್ಯ ನೀತಿಯನ್ನು ಬಯಸುತ್ತಿದೆ. ವಾಲ್ಮೀಕಿ ಅದಕ್ಕಾಗಿಯೇ ಧನುರ್ವೇದವನ್ನಿತ್ತು ರಾಮಾಯಣವನ್ನು ಆ ಬಾಲಕರೀರ್ವರೂ ತುದಿಮೊದಲು ಹಾಡುವಂತೆ ಶಿಕ್ಷಣಕೊಟ್ಟನು. ವಾಲ್ಮೀಕಿಯ ಮತ್ತು ಲಕ್ಷ್ಮೀಶನ ಈ ಭಾವನೆ ಎಷ್ಟು ಮಹತ್ವ! ಈ ಭಾವನೆಯ ಬೋಧೆ ನಮಗೆ ಬೇಡವೇ? ಪ್ರಾಕ್ತನ ಭಾರತದ ಸುಖ ಸಂಪತ್ತನ್ನು ಎಳಸುವ ನಾವು ಶಿಕ್ಷಣದ ಕಡೆಗೆ ಗಮನ ಕೊಡೆವೇ? ಭಾವೀ ನಾಗರಿಕರ ಸೃಷ್ಟಿ ಶಿಕ್ಷಣದಿಂದಾಗಬೇಕೆಂಬುದನ್ನು ಮರೆಯುವೆವೇ?

ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಫೈಲ್ ಮಾಡಿಸದಿರುವುದೇ ವಾಡಿಕೆ. ಎರಡನೇ ತರಗತಿಯಲ್ಲೋ ಮೂರನೇ ತರಗತಿಯಲ್ಲೋ ಪಾಸುಮಾಡಿಸುತ್ತಾರೆ.

ಗೀತ: ಅಂದರೆ ಎಂ.ಎ. ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ಪಾಸಾಗದಿದ್ದರೆ ವಾಸ್ತವವಾಗಿ ಫೇಲ್ ಆದ ಹಾಗೆ ಏನು?

ಮೋಹನ: ಹಾಗೆ ಸುಲಭವಾಗಿ ಹೇಳುವುದಕ್ಕಾಗುವುದಿಲ್ಲ. ಎಂ.ಎ. ಡಿಗ್ರಿ ಬರುವುದಿಲ್ಲವೆ? ಅದಕ್ಕೆ ಇರುವ ಬೆಲೆ ಇದ್ದೇ ಇದೆ.

ಗೀತ: ಅದು ಹೋಗಲಿ. ಇವತ್ತಿಗೆ ಪರೀಕ್ಷೆ ಮುಗಿಯಿತು ತಾನೆ? ಇನ್ನು ಓದೂ ಮುಗಿಯಿತು ಅನ್ನು.

ಮೋಹನ: ಹೂ, ಮುಗಿಯಿತು. ಇನ್ನು ಬೇಕಾದಷ್ಟು ಸಿನಿಮಾ ನೋಡಬಹುದು, ಹರಟೆ ಹೊಡೆಯಬಹುದು.

ಗೀತ: ಹೂ, ಊರಿಗೂ ಹೋಗಬಹುದು.

ಮೋಹನ: ಏಕೆ? ನಾನಿಲ್ಲಿರುವುದು ನಿನಗಿಷ್ಟವಿಲ್ಲವೆ?

ಗೀತ: ಹಾಗುಂಟೆ? ನೀನೆ ಹೇಳು.

ಮೋಹನ: ಮತ್ತೆ ಊರಿಗೆ ಹೋಗೆಂದು ಏಕೆ ಹೇಳುತ್ತಿ?

ಗೀತ: ಊರಿಗೆ ಹೋಗೆಂದು ಹೇಳಿದೆನೆ? ಏನೋ ಪರೀಕ್ಷೆ ಕಾಲ ಬಂದ ಮೇಲೆ ಹಾಸ್ಟೆಲಿನಲ್ಲಿ ಸ್ನೇಹಿತರ ಅವಾಂತರ ತಪ್ಪಲಿ ಅಂತ ನಿಮ್ಮ ತಂದೆ ನಿನ್ನನ್ನು ನಮ್ಮ ಮನೆಯಲ್ಲಿಟ್ಟುಕೊಳ್ಳುವಂತೆ ಹೇಳಿದರು. ಜೊತೆಗೆ ಜಯ ಕೂಡ ನಿನ್ನ ಕ್ಲಾಸಿನವನೆ. ಮೊದಲಿನಿಂದಲೂ ನೀವಿಬ್ಬರೂ ಒಟ್ಟಿಗೆ ಓದುತ್ತಿದ್ದವರು.

ಮೋಹನ: ಜೊತೆಗೆ ನೀನು ಬೇರೆ ಇದ್ದಿ.

ಗೀತ: ನನಗೂ ನಿನ್ನ ಓದಿಗೂ ಏನು ಸಂಬಂಧ?

ಮೋಹನ: ಸಂಬಂಧವಿಲ್ಲದೆ ಉಂಟೆ? ಅದು ಮಾನಸಿಕವಾದದ್ದು. ಹಸುಗಳು ಹಾಲು ಕರೆಯುವಾಗ ಸಂಗೀತ ಬಾರಿಸಿದರೆ ಹೆಚ್ಚು ಹಾಲು ಕೊಡುತ್ತೆ ಅಂತ ಪೇಪರಿನಲ್ಲಿ ಓದಿಲ್ಲವೆ? ಹಾಗೆ ಅಥವಾ ಹಿಂದಿನ ಪ್ರಣಯ ಕಥೆಗಳಲ್ಲಿ ಹೇಳಿರುವ ಹಾಗೆ ರಾಣಿಯರು ಅಥವಾ ಪ್ರೇಯಸಿಯರು ಎದುರಿಗಿದ್ದಾಗ ಯೋಧರು ಹೆಚ್ಚು ಶೌರ್ಯವನ್ನೂ ಜಾಣತನವನ್ನೂ ಪ್ರದರ್ಶಿಸುತ್ತಿದ್ದರಲ್ಲವೆ? ಹಾಗೆ ಅಂತಿಟ್ಟುಕೋ.

ಗೀತ: ಹಾಗಾದರೆ ನಾನು ರಾಣಿಯೋ.

ಮೋಹನ: ರಾಣಿಯೂ ಹೌದು, ಪ್ರೇಯಸಿಯೂ ಹೌದು.

ಗೀತ: ಹಾಗಾಗಲಾರದು. ನೀನು ಮನಸ್ಸಿನಲ್ಲಿ ಮಂಡಿಗೆಯನ್ನುಂಡ ಹಾಗಾಯಿತು ಅಷ್ಟೆ. ಆದರೂ ನಿನ್ನ ಪರೀಕ್ಷೆ ಪಾಸಿನಲ್ಲಿ—ಅದೂ ಮೊದಲನೆಯ ತರಗತಿಯಲ್ಲಿ ಪಾಸಾಗುವುದರಲ್ಲಿ ನಾನೇನಾದರೂ ಅಪರೋಕ್ಷವಾಗಿ ಕಾರಣಳಾಗಿದ್ದರೆ ಅದು ನನಗೆ ಸಂತೋಷದ ವಿಷಯ. ಆ ಮಾತಿರಲಿ. ಊರಿಗೆ ಹೋಗುವ ಮಾತೆತ್ತಿದೆನಲ್ಲಾ, ಅದಕ್ಕೆ ಅಪಾರ್ಥ ಮಾಡಿಕೊಳ್ಳಬೇಡ. ನೀನು ಊರಿಗೆ ಬೇಗನೆ ಹೋಗಬೇಕು ಅನ್ನುವುದು ನನ್ನ ಇಷ್ಟವಲ್ಲ. ಒಂದೆರಡು ದಿನ ಹಾಯಾಗಿ ತಮಾಷೆಯಾಗಿ ಸಿನಿಮಾಗಿನಿಮಾ ನೋಡಿಕೊಂಡು ಇರೋಣ ಅಂತಲೇ ಇದ್ದೆ; ಆದರೆ ಈ ಮಧ್ಯಾಹ್ನವೇ ನಿನ್ನ ತಂದೆಯವರು ಕಾಗದ ಬರೆದಿದ್ದಾರೆ- 'ಇವತ್ತಿಗೆ ಪರೀಕ್ಷೆ ಮುಗಿಯುತ್ತೆ. ಮೋಹನನನ್ನು ಬೇಗನೆ ಊರಿಗೆ ಕಳುಹಿಸುವುದು'—ಅಂತ.

ಮೋಹನ: ಓಹೋ! ಅದಕ್ಕೋ ಈ ಮಾತು. ಆಗಲಿ ಹೋದರಾಯಿತು; ಕೆಲವು ದಿನ ಕಳೆದ ಮೇಲೆ ಹೋದರಾಯಿತು. ಏನವಸರ?

ಗೀತ: ಸಂತೋಷ; ಹಾಗೇ ಮಾಡು.

ಮೋಹನ: ಪರೀಕ್ಷೆಯ ಗಲಾಟೆಯಲ್ಲಿ ಒಂದು ಸಿನಿಮಾಕ್ಕೂ ಹೋಗಿಲ್ಲ. ಈ ಸಂಜೆ ಹೋಗೋಣ, ಏಳು.

ಗೀತ: ಅಕ್ಕ, ಯಶೋಧೆ?

ಮೋಹನ: ಅವರೂ ಬರಲಿ.

ಗೀತ: ಆಗಲಿ, ಅಕ್ಕನಿಗೆ ಹೇಳುತ್ತೇನೆ.. ಹೋಗು ಕೈಕಾಲು ತೊಳೆದುಕೊಂಡು ಏಳು. ಕಾಫಿ ತಿಂಡಿ ಸಿದ್ಧವಾಗಿದೆ.

ಮೋಹನ: ಹೂ, ಆಗಲಿ (ಒಳಗೆ ಹೋಗುವುದರಲ್ಲಿರಲು, ಅಷ್ಟರಲ್ಲಿ ಜಯ ಬರುವನು).

ಜಯ: ಏನಯ್ಯಾ ಆಗಲೇ ಬಂದುಬಿಟ್ಟಿದ್ದಿ? ನಿನಗೆ ಪ್ರಶ್ನೆಗಳು ಸುಲಭವಾಗಿತ್ತು ಅಂತ ತೋರುತ್ತೆ.

ಗೀತ: ಹೌದು ಸುಲಭವಾಗಿತ್ತಂತೆ. ಅವನು ಅದನ್ನೇ ಚೆನ್ನಾಗಿ ಓದಿಕೊಂಡಿದ್ದನಂತೆ. ನೀನು ಅದು ಮುಖ್ಯವಲ್ಲ ಅಂದುಬಿಟ್ಟೆಯಂತೆ.

ಜಯ: ಓಹೋ, ಎಲ್ಲಾ ವರದಿ ಆಗಿದೆಯೋ? ಹೌದು ನಾನದನ್ನು ಓದಿರಲಿಲ್ಲ.

ಮೋಹನ: ಆದರೇನು—ನಿನಗೆ ತಿಳಿದುದ್ದೇ ಬೇರೆ ಪ್ರಶ್ನೆಗಳೂ ಇತ್ತಲ್ಲ. ನೀನೂ ಚೆನ್ನಾಗಿಯೇ ಮಾಡಿರಬೇಕು.

ಜಯ: ಪಾಸಾಗುವುದಕ್ಕೆ ಅನುಮಾನವಿಲ್ಲ. ಆದರೆ ಫಸ್ಟ್‌ಕ್ಲಾಸು ಬರುತ್ತೋ ಇಲ್ಲವೋ ಅಂತ ಅನುಮಾನ.

ಮೋಹನ: ಒಟ್ಟಿನಲ್ಲಿ ಬರುತ್ತೆ ಬಿಡು. ಯೋಚಿಸಬೇಡ.

ಜಯ: ಪರೀಕ್ಷೆ ಮುಗಿದ ಮೇಲೆ ಯೋಚನೆ ಮಾಡಿ ಏನು ಪ್ರಯೋಜನ?

ಗೀತ: ಯೋಚನೆ ಏಕೆ? ದೇವರು ಮಾಡಿಸಿದ ಹಾಗಾಗುತ್ತೆ.

ಜಯ: ಅದು ನಿಜ ಅನ್ನು.

ಗೀತ: ಹೋಗಲಿ ಏಳಿ. ಕೈಕಾಲು ತೊಳೆದುಕೊಳ್ಳಿ. ಕಾಫಿ ತಿಂಡಿ ಸಿದ್ಧವಾಗಿದೆ. ನಮ್ಮದೆಲ್ಲಾ ಆಯಿತು.

ಜಯ, ಮೋಹನ: ಹೂ.

[ಇಬ್ಬರೂ ಒಳಗೆ ಹೋಗುವರು. ಗೀತ ಪುನಃ ಬಂದು ಪೇಪರನ್ನು ಓದುತ್ತಾ ಕುಳಿತುಕೊಳ್ಳುವಳು. ಕ್ಷಣ ಹೊತ್ತಿನ ಮೇಲೆ ಅವಳ ಅಕ್ಕ ಯಶೋಧೆ ಬರುವಳು].

ಯಶೋಧೆ: ಜಯ ಮೋಹನ ಯಾರೂ ಬರಲಿಲ್ಲವೇನೆ?

ಗೀತ: ಇಬ್ಬರೂ ಬಂದರು. ಕೈಕಾಲು ತೊಳೆದುಕೊಳ್ಳಲು ಒಳಗೆ ಹೋಗಿದ್ದಾರೆ.

ಯಶೋಧೆ: ಸರಿ. ಮಾಣೀಗೆ ತಿಂಡಿ ಕೊಡುವಂತೆ ಹೇಳಿದ್ದೇನೆ. ಕಾಫಿ ಆ ದೊಡ್ಡ ಥರ್ಮಾಸ್ ಫ್ಲಾಸ್ಕಿನಲ್ಲಿ ಹಾಕಿಟ್ಟಿದ್ದಾನೆ.

ಗೀತ: ಸರಿ; ಹಾಗಾದರೆ ಕುಳಿತುಕೋ.

ಯಶೋಧೆ: ಪರೀಕ್ಷೆಯಲ್ಲಿ ಹೇಗೆಮಾಡಿದ್ದಾರಂತೆ? ಪೇಪರು ಸುಲಭವಾಗಿತ್ತೋ ಕಷ್ಟವಾಗಿತ್ತೋ ವಿಚಾರಿಸಿದೆಯಾ?

ಗೀತ: ಹೂ. ಪೇಪರು ಕಷ್ಟವಾಗೇ ಇತ್ತು. ಮೋಹನನಷ್ಟು ಜಯ ಚೆನ್ನಾಗಿ ಮಾಡಿಲ್ಲವಂತೆ. ಆದರೆ ಯಾರಿಗೂ ಪಾಸಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ಯಶೋಧೆ: ಅಷ್ಟಾದರೆ ಸರಿ. ಜಯಾ ಯಾವಾಗಲೂ ಒಂದು ಕೈ ಕೆಳಗೇ. ಮೋಹನನಷ್ಟು ಬುದ್ಧಿವಂತನಲ್ಲ. ಮೋಹನನಿಗೆ ಆವರ ತಂದೆ ಬರೆದ ಕಾಗದದ ವಿಷಯವನ್ನು ಹೇಳಿದೆಯಾ?

ಗೀತ: ಹೂ. ಆದರೆ ಅವನು ಇನ್ನು ಕೆಲವು ದಿನದ ವರೆಗೆ ಊರಿಗೆ ಹೋಗುವುದಿಲ್ಲವಂತೆ. ಈಗ ನನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿದ್ದಾನೆ.

ಯಶೋಧೆ: ನೀನೊಬ್ಬಳೇ ಅವನ ಜೊತೆ ಹೋಗಬಾರದೆಂದು ನಾನು ಹೇಳಿರಲಿಲ್ಲವೇ?

ಗೀತ: ಜೊತೆಗೆ ನೀನೂ ಬರಬೇಕೆಂದು ಹೇಳಿದ್ದಾನೆ.

ಯಶೋಧೆ: ಅದು ಸರಿ.

ಗೀತ: ಅಪ್ಪನಿಂದ ಕಾಗದ ಬಂತಲ್ಲ. ಅದನ್ನು ನೀನು ನನಗೆ ತೋರಿಸಲೇ ಇಲ್ಲ. ಏನು ಬರೆದಿದ್ದಾನೆ?

ಯಶೋಧೆ: ಏನು ಬರೆದಿದ್ದಾನೆ ಮಹಾ. ಎಲ್ಲಾ ಆರೋಗ್ಯವಾಗಿದ್ದೇವೆ ಅಂತ ಬರೆದಿದ್ದಾನೆ. ಅದೆಲ್ಲೋ ಬಿದ್ದಿರಬೇಕು. ತೋರಿಸುತ್ತೇನೇಳು…………ಮತ್ತೆ ಇನ್ನೊಂದು ವಿಚಾರ ನಿನ್ನನ್ನು ಕೇಳಬೇಕು ಅಂತಿದ್ದೆ. ನೀನು ಹೀಗೇ ಇರುವುದಕ್ಕೆ ಆಗುವುದಿಲ್ಲ. ನಿನ್ನ ಮದುವೆ ವಿಚಾರ ನೀನು ನಿರ್ಧರಮಾಡಬೇಕು.

ಗೀತ: ನಾನೇನು ನಿರ್ಧರಮಾಡೋದು? ನೀವೇ ಅದನ್ನೆಲ್ಲಾ ನಿರ್ಧರಮಾಡಿಬಿಟ್ಟರೋ ಹಾಗಿದೆಯಲ್ಲಾ.

ಯಶೋಧೆ: ಹೌದು ನಿರ್ಧಾರಮಾಡಿದ್ದೆವೆ ನಿಜ. ಜಯ ನಿನಗೆ ತಾಯಿಯ ತಮ್ಮನಾಗಬೇಕು. ಸೋದರ ಕಡೆ ಕೊಟ್ಟು ತರುವುದು ಮೊದಲಿನಿಂದ ಬಂದ ವಾಡಿಕೆ. ಇಲ್ಲದಿದ್ದರೆ ತನ್ನ ಕಡೆಯ ಬಳಗ, ಸಂಬಂಧ ತಪ್ಪಿಹೋಗುವುದೆಂದು ಅಮ್ಮ ಹೇಳುತ್ತಾಳೆ. ಜಯನೂ ಬುದ್ಧಿವಂತ. ಈ ಸಲ ಎಂ. ಎ. ಪರೀಕ್ಷೆಗೆ ಕಟ್ಟಿದ್ದಾನೆ. ನೋಡುವುದಕ್ಕೂ ಸುಂದರನಾಗಿದ್ದಾನೆ. ಅವನಿಗಿಂತ ಒಳ್ಳೆಯ ವರ ಎಲ್ಲಿ ಸಿಗುತ್ತೆ ಹೇಳು……..ನೀನು ಮಾತೇ ಆಡುವುದಿಲ್ಲವಲ್ಲ ಮತ್ತೆ.

ಗೀತ: ಏನು ಮಾತಾಡಬೇಕು? ನೀವು ಮಾಡಿರುವ ಏರ್ಪಾಟಿಗೆ ನನಗೂ ಒಪ್ಪಿಗೆ ಇದೆ. ಯಾವ ಕಾರಣದಿಂದ ನಾನು ಬೇಡ ಅಂತ ಹೇಳಲಿ.

ಯಶೋಧೆ: ನೀನೂ ವಯಸ್ಸಿಗೆ ಬಂದ ಹುಡುಗಿ. ಇಂತಹ ವಿಷಯಗಳಲ್ಲಿ ಒಪ್ಪೋದಕ್ಕೂ ಬಿಡೋದಕ್ಕೂ ಕಾರಣ ಹೇಳುವುದಕ್ಕೆ ಬರುವುದಿಲ್ಲ. ಕಾರಣವೇ ಇಲ್ಲದೆ ಮನಸ್ಸು ಒಪ್ಪಬಹುದು ಅಥವಾ ಬಿಡಬಹುದು. ನಾವು ನಿನ್ನ ಇಷ್ಟಕ್ಕೆ ವಿರೋಧವಾಗಿ ಹೋಗಬೇಕೆನ್ನುವುದಿಲ್ಲ. ನೀನು ಸಂಕೋಚಪಡದೆ ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು.

ಗೀತ: ನೀನು ಹಾಗೆ ಹೇಳಿದರೆ ನನಗೆ ಏನು ಹೇಳುವುದಕ್ಕೂ ತೋಚುವುದೇ ಇಲ್ಲ.

ಯಶೋಧೆ: ನೀನೇನೋ ಮನಸ್ಸಿನಲ್ಲಿಟ್ಟುಕೊಂಡಿದ್ದಿ ಅಂತ ಕಾಣುತ್ತೆ. ಸಂಕೋಚವಿಲ್ಲದೆ ಹೇಳು.

ಗೀತ: ಉಹು, ನನಗೇನು ಹೇಳುವುದಕ್ಕೂ ಬಾಯೇ ಬರದು.

ಯಶೋಧೆ: ಹಾಗಂದರೆ ಹೇಗೆ? ಇನ್ನು ನಿನ್ನ ಮದುವೆ ಮುಂದೆ ಹಾಕುವುದಕ್ಕಾಗುವುದಿಲ್ಲ. ಜಯನ ಪರೀಕ್ಷೆ ಮುಗಿಯಲಿ ಅಂತ ಅಪ್ಪ ಅಮ್ಮ ಕಾದಿದ್ದರು. ಈಗ ಅದೂ ಮುಗಿಯಿತು.

ಗೀತ: ಹೌದು. ಅವರು ಅಷ್ಟು ಆಸೆಪಟ್ಟು ಗೊತ್ತು ಮಾಡಿರುವಾಗ?

ಯಶೋಧೆ: ಗೊತ್ತುಮಾಡಿರೋದೇ ಅಲ್ಲ. ಇದುವರೆಗೂ ನಿನ್ನನ್ನು ನೋಡಿದ್ದರಲ್ಲಿ ನಿನಗೂ ಜಯ ಒಪ್ಪಿಗೆ ಇರುವ ಹಾಗೇ ತೋರಿತು. ಅದಕ್ಕೇ ಅವರೂ ಸುಮ್ಮನಿದ್ದರು. ಈಗ ನಿನಗೆ ಅವನು ಇಷ್ಟವಿಲ್ಲ ಅಂತ ಹೇಳಿದರೆ…………

ಗೀತ: ಇಲ್ಲ ಅಕ್ಕ. ಮೊದಲಿನಿಂದಲೂ ಜಯನಿಗೂ ಗೊತ್ತು. ನಾನೇ ಅವನ ಹೆಂಡತಿ ಅಂತ ಅವನೂ ಒಪ್ಪಿಕೊಂಡಿದ್ದಾನೆ. ಆ ಆಸೆಯಲ್ಲೇ ಇದ್ದಾನೆ. ಅವನಿಗೂ ಅಸಮಾಧಾನವಾಗಬಾರದು.

ಯಶೋಧೆ: ಅವನನ್ನು ಸಮಾಧಾನಪಡಿಸುವ ವಿಚಾರ ನನಗೆ ಬಿಡು.

ಗೀತ: ನಿಜವಾಗಿಯೂ ಅವನು ನನಗೆ ಬೇಡ ಅಂತ ಅನಿಸಿಲ್ಲ.

ಯಶೋಧೆ: ನಿನ್ನ ಬಾಯಲ್ಲಿ ನಿಜಾಂಶ ಹೊರಡಿಸೋದೆ ಕಷ್ಟ. ಅಲ್ಲವೆ? ನಾನೀಗ ಎರಡು ತಿಂಗಳಿಂದ ನಿನ್ನನ್ನು ನೋಡುತ್ತಿಲ್ಲವೆ? ನಿನ್ನ ಮನಸ್ಸು ಮೊದಲಿನಂತಿಲ್ಲ. ಹೌದೋ

ಅಲ್ಲವೋ ನೀನೇ ಹೇಳು. ಇರೋ ವಿಚಾರವನ್ನು ಹೇಳೇ ಅಂದರೆ............

ಗೀತ: ನೀನೇ ಹೇಳು.

ಯಶೋಧೆ: ಆಗಲಿ ನಾನೇ ಹೇಳುತ್ತೇನೆ. ಮೋಹನ ಬಂದಾಗಿನಿಂದ ನಿನ್ನ ಮನಸ್ಸಿನಲ್ಲಿ ಹೊಸ ಬದಲಾವಣೆಯಾಗಿಲ್ಲವೇನೆ?

ಗೀತ: ಅಕ್ಕ, ನಿನ್ನ ಹತ್ತಿರ ಯಾವುದನ್ನೂ ಮುಚ್ಚು ಮರೆ ಮಾಡುವ ಹಾಗಿಲ್ಲ. ಹೊಟ್ಟೇಲೆಲ್ಲಿ ಹುದುಗಿಕೊಂಡಿದ್ದರೂ ಬಗೆದು ತೆಗೆದುಬಿಡುತ್ತೀಯೆ.

ಯಶೋಧೆ: ಈಗ ಹೇಳು ನಿಜಾನ.

ಗೀತ: ನಿಜವನ್ನು ಹೇಳಿದರೆ ನಂಬುತ್ತೀಯೇನಕ್ಕಾ?

ಯಶೋಧೆ: ನಿಜ ಹೇಳಿದರೇ ನುತ್ತೆ. ಮರಿಮಾಜಿದೆಯೋ ನೋಡಿಕೋ.

ಗೀತ: ಇಲ್ಲ ನಿಜವಾಗಿ ಹೇಳಬೇಕೆಂದರೆ ನೀನು ಹೇಳಿದ ಮಾತು ಸತ್ಯ. ಮೊದಲಿನಿಂದ ಜಯನೇ ನನ್ನ ಗಂಡ ಅಂತ ಎಲ್ಲರೂ ಹೇಳಿದ್ದಾರೆ. ನನಗೂ ಅವನಲ್ಲಿ ಪ್ರೇಮವಿದೆ. ನನ್ನನ್ನೂ ಅವನು ಪ್ರೀತಿಸುತ್ತಾನೆ. ನೀನು ಹೇಳುವ ಹಾಗೆ ಮೋಹನ ಬರುವ ವರೆಗೂ ನಾನು ಅನ್ಯಥಹ ಭಾವಿಸಿರಲಿಲ್ಲ. ಅವನು ಬಂದು ನನ್ನ ಹೃದಯದಲ್ಲಿ ಒಂದು ಆಂದೋಲನವನ್ನೇ ನಡೆಸಿದ್ದಾನೆ. ಅನೇಕ ವೇಳೆ ಅವನು ನನ್ನಲ್ಲಿ ಪ್ರೇಮಭಿಕ್ಷೆ ಬೇಡಿದ್ದಾನೆ. ಅನೇಕ ವೇಳೆ ನನ್ನ ಮನಸ್ಸು ಅವನ ಕಡೆವಾಲುತ್ತದೆ. ಆದರೆ ನಾನು ಯಾವುದನ್ನೂ ಖಂಡಿತವಾಗಿ ನಿರ್ಧರಮಾಡಲಾರದವಳಾಗಿದ್ದೇನೆ. ಇಬ್ಬರೂ ವಿದ್ಯಾವಂತರು, ಶ್ರೀಮಂತರು, ರೂಪವಂತರು. ನಾನು ಯಾರನ್ನು ಮದುವೆಯಾಗಲಿ ಹೇಳು.

ಯಶೋಧೆ: ನೀನು ಯಾರನ್ನು ಹೆಚ್ಚಾಗಿ ಪ್ರೀತಿಸುತ್ತಿ ಹೇಳು.

ಗೀತ: ನನ್ನ ಮನಸ್ಸಿನಲ್ಲಿ ಯಾರೂ ಹೆಚ್ಚಿಲ್ಲ–ಯಾರೂ ಕಡಿಮೆಯಿಲ್ಲ.

ಯಶೋಧೆ: ಹಾಗಾದರೆ ಯಾರನ್ನು ಮದುವೆಯಾಗುವುದಾದರೂ ನಿನ್ನ ಮನಸ್ಸು ನೊಂದುಕೊಳ್ಳುವುದಿಲ್ಲ ತಾನೆ?

ಗೀತ: ಇಲ್ಲ.

ಯಶೋಧೆ: ಹಾಗಾದರೆ ಇನ್ನೊಂದು ವಿಷಯವನ್ನು ಈಗ ತಿಳಿಯಬೇಕು.

ಗೀತ: ಏನದು?

ಯಶೋಧೆ: ಇವರಿಬ್ಬರಲ್ಲಿ ಯಾರ ಪ್ರೀತಿ ಹೆಚ್ಚು ಯಾರು ನಿನ್ನನ್ನು ಹೆಚ್ಚಾಗಿ ಪ್ರೀತಿಸುತ್ತಾರೆ, ಯಾರ ಗುಣ ಹೆಚ್ಚು—ಎಂಬುದನ್ನು ತಿಳಿಯಬೇಕು.

ಗೀತ: ನೀನು ಅಷ್ಟು ತಿಳಿಸಿದರೆ....(ನಿರಾಶೆಯಿಂದ) ಅಷ್ಟು ಸುಲಭವೆ ಅದು?

ಯಶೋಧೆ: ಆದರ ಯೋಚನೆ ನಿನಗೇಕೆ? ಹೇಗಿ ಅಂತೂ ಯಾರ ಪ್ರೀತಿ ಹೆಚ್ಚು ಎನ್ನುವುದನ್ನು ನಿನಗೆ ತಿಳಿ ಪಡಿಸಿದರೆ ಆಯಿತೋ ಇಲ್ಲವೋ? ಅಂಥವರನ್ನು ನೀ ಮದುವೆಯಾಗುತ್ತೀ ತಾನೆ?

ಗೀತ: ಹೂ!

ಯಶೋಧೆ: ಈ ಮಾತಿಗೆ ನಿನ್ನ ಮನಸ್ಸಿನ ಒಪ್ಪಿಗೆಯು ಇದೆ ತಾನೆ?

ಗೀತ: ಖಂಡಿತವಾಗಿ ಖಂಡಿತವಾಗಿ ಇದೆ!

ಯಶೋಧೆ: ಹಾಗಾದರೆ ನೀನು ಆ ಎಡಗಡೆ ಕೊಠ ಯೊಳಕ್ಕೆ ಹೋಗಿ ಬಾಗಿಲು ಹಾಕಿಕೋ. ನಾನು ಕೂಗು ವರೆಗೂ ಬರಬೇಡ.

ಗೀತ: ಹಾಗೇ ಆಗಲೀ (ಎಂದು ಹೇಳಿ ಎಡ ಕೋ ಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಳ್ಳುವಳು).

ಯಶೋಧೆ: (ಒಳಕ್ಕೆ ಹೋಗಿ) ಜಯಾ! ಮೋಹನಾ ಅದೇನು ಇನ್ನೂ ತಿಂಡಿತೀರ್ಥ ಮುಗಿಯಲಿಲ್ಲವೆ? (ಎನ್ನುವಳು

ಜಯ: (ಒಳಗಿನಿಂದಲೇ) ಮುಗಿಯದೇ ಏನು (ಎಂದ ಹೇಳುತ್ತಾ ಹೊರಗೆ ಬರುವನು. ಅವನೊಡನೆ ಮೋ ನನೂ ಯಶೋಧೆಯೂ ಬಂದು ಸೋಫಗಳ ಮೇ ಕೂಡುವರು).

ಮೋಹನ: ಪರೀಕ್ಷೆ ಪ್ರಶ್ನಪತ್ರಿಕೆ ವಿಚಾರ ಮಾ ನಾಡುತ್ತಾ ನಿಧಾನವಾಗಿ ತಿಂಡಿ ತಿನ್ನುತ್ತಿದ್ದೆವು; ಅದಕ್ಕೆ ತಡವಾಯಿತು.

ಯಶೋಧೆ: ಆದರಾಯಿತು. ಅವಸರವೇನು? ಪರೀ ಹೇಗಿದ್ದರೂ ಮುಗಿದು ಹೋಯಿತು. ಇನ್ನು ಬಿಡುವೇ.

ಮೋಹನ: ಹೌದು........ಕೂಗಿದಿರಲ್ಲ; ಏನಾದರ ಕೆಲಸವಿದೆಯೇನು?

ಯಶೋಧೆ: ಇಲ್ಲ. ನಿನಗೇನಾದರೂ ಕೆಲಸವಿದೆಯೇ

ಮೋಹನ: ಇವತ್ತಿನ ಪರೀಕ್ಷೆಯ ವಿಷಯವಾಗಿ ಒಂದು ಕಾರ್ಡು ಬರೆದು ತಂದೆಯವರಿಗೆ ತಿಳಿಸಬೇಕು. ಅವರಿ ನಾಳೆ ಕಾಗದ ತಲುಪದಿದ್ದರೆ, ಕಾಗದ ತಲುಪುವ ವರೆಗೂ ಅವರ ಮನಸ್ಸು ತಳಮಳಗೊಳ್ಳುತ್ತಿರುತ್ತದೆ. ಒಂದು ಕ್ಷಣ ಮಹಡಿಯ ಮೇಲೆ ಹೋಗಿ ಒಂದು ಕಾಗದ ಬರೆದು ಬಂದು ಬಿಡುತ್ತೇನೆ. ಇನ್ನೂ ಪೋಸ್ಟಿಗೆ ಹೊತ್ತಿದೆ.

ಯಶೋಧೆ: ಹೂ, ಹಾಗೇ ಮಾಡು.

[ಮೋಹನ ಹೋಗುವನು. ಮಹಡಿ ಮೆಟ್ಟಲು ಹತ್ತಿ ಸದ್ದಾಗುವುದು.]

ಯಶೋಧೆ: ಜಯ! ನಿನ್ನನ್ನು ಒಂದು ಪ್ರಶ್ನೆ ಕೇ ಬೇಕು ಅಂತಿದ್ದೇನೆ. ಅತಿ ಮಹತ್ವದ ಪ್ರಶ್ನೆ ಅದು. ನಿನ ಜೀವನದ ರೀತಿಯನ್ನೇ ಬದಲಾಯಿಸುವಂತಹುದು.

ಜಯ: ಅದೇನು ಅಂತಹ ಮಹತ್ವದ ಪ್ರಶ್ನೆ ಹೇಳು.

ಯಶೋಧೆ: ನಿನ್ನ ಮದುವೆಯ ವಿಚಾರ. ನೀನು ಮದುವೆಯಾಗಲಿರುವ ಹೆಣ್ಣಿನ ವಿಚಾರ.

ಜಯು: (ನಗುತ್ತಾ) ಇಷ್ಟೇ ತಾನೇ? ಇದರಲ್ಲಿ ಮಹತ್ವವೇನು ಬಂತು? ಹತ್ತು ವರುಷದಿಂದ ಗೊತ್ತಾಗೇ ಇದೆ. ನನ್ನ ಹೆಂಡತಿ ಗೀತ ಅಂತ.

ಯಶೋಧೆ: ನೀನವಳನ್ನು ಪ್ರೀತಿಸುತ್ತೀಯಾ?

ಜಯು: ಚೆನ್ನಾಗಿ ಕೇಳುತ್ತಿ. ಪ್ರೀತಿಸದೆ ಏನು?

ಯಶೋಧೆ: ಅವಳು ನಿನ್ನನ್ನು ಪ್ರೀತಿಸುತ್ತಾಳೆಯೇ?

ಜಯು: ಪ್ರೀತಿಸದೆ ಏನು? ಅದೇನೋ ನಿನ್ನ ಪ್ರಶ್ನೆ ನನಗೆ ಅರ್ಥವಾಗುವುದಿಲ್ಲ. ಕರೆ ಅವಳನ್ನು; ಕೇಳು, ನನ್ನೆದುರಿಗೇ ಕೇಳು, ಪ್ರೀತಿಸುತ್ತಾಳೋ ಇಲ್ಲವೋ ಅಂತ.

ಯಶೋಧೆ: ಅವಳು ಮನೆಯಲ್ಲಿಲ್ಲ. ಎಲ್ಲೋ ಹೊರಗೆ ಹೋಗಿದ್ದಾಳೆ. ನೀನೇನು ತಿಳಿದುಕೊಂಡಿದ್ದೀಯೋ ಅಂತ ಕೇಳಿದೆ ಅಷ್ಟೆ. ಅವಳೂ ನಿನ್ನನ್ನು ಪ್ರೀತಿಸುತ್ತಾಳೆ, ನಿಜ.

ಜಯು: ಮತ್ತೆ ನನ್ನನ್ನು ರೇಗಿಸಬೇಕು ಅಂತ ಹಾಗೆ ಕೇಳಿದೆಯಾ?

ಯಶೋಧೆ: ಅದಕ್ಕಲ್ಲ ಜಯು, ನಮ್ಮ ತಂದೆ ಕಾಗದ ಬರೆದಿದ್ದಾರೆ. ಈಗ ಊರಿಗೆ ಬಂದ ತಕ್ಷಣ ಮದುವೆ ಮಾಡಿ ಬಿಡಬೇಕು ಅಂತ.

ಜಯು: ಹೂಂ, ಆಗಲಿ. ನಾನೂ ಸಿದ್ಧವಾಗಿಯೇ ಇದ್ದೇನೆ.

ಯಶೋಧೆ: ಸರಿ, ಹಾಗಂತ ನಾಳೆ ಕಾಗದ ಬರೆದು ಬಿಡುತ್ತೇನೆ ಬಿಡು. ಅಲ್ಲ ಜಯು, ಎಷ್ಟೋ ವೇಳೆ ನೀನೂ, ಅವಳೂ ವಾಕಿಂಗ್ ಹೋಗಿದ್ದೀರಲ್ಲ....ಅವಳು ನಿನಗೆ ಎಷ್ಟು ಎತ್ತರಕ್ಕೆ ಬರುತ್ತಾಳೆ ಹೇಳು.

ಜಯು: ಕುತ್ತಿಗೆ ಅಥವಾ ಕಿವಿಯ ವರೆಗೆ ಬರಬಹುದು. ನಾನಾವಾಗಲೂ ಅದನ್ನು ಗಮನಿಸಿಲ್ಲ.

ಯಶೋಧೆ: ಸರಿ. ಏತಕ್ಕೆ ಗಮನಿಸಬೇಕು ಹೇಳು. ಸುಮ್ಮನೆ ಕೇಳಿದೆ ಅಷ್ಟೆ. ಅಲ್ಲಿ ನೀನೊಂದು ವೇಳೆ ಅವಳಿಗೆ ಒಂದು ಹೂವೋ ಸೆಂಟು ಬಾಟಲನ್ನೋ ತಂದುಕೊಟ್ಟೆ ಅಂತ ಇಟ್ಟುಕೋ. ಎಂತಹ ಹೂ, ಸೆಂಟು ಬಾಟಲನ್ನು ತಂದು ಕೊಡುತ್ತೀ ಹೇಳು.

ಜಯು: ರೋಜಾ ಹೂ ಎಂತಹವರಿಗಾದರೂ ಪ್ರಿಯವಾದದ್ದೇ. ಅದನ್ನೇ ತಂದುಕೊಡುತ್ತೇನೆ ಸೆಂಟು ಬಾಟಲಿಗೇನು ಅವಳನ್ನೇ ಕೇಳುವುದು ನಿನಗೆ ಯಾವ ವಾಸನೆಯದು ಬೇಕು ಅಂತ. ಅವಳು ಹೇಳಿದ್ದು ತಂದುಕೊಡುವುದು ಅದೇ ಸರಿ ಅಲ್ಲವೆ?

ಯಶೋಧೆ: ಅದೇ ಸರಿ. ಹೆಂಗಸಿಗೆ ಎಂತಹುದು ಬೇಕು ಎಂತ ಗಂಡಸಿಗೆ ಹೇಗೆ ಗೊತ್ತಾಗಬೇಕು? ಅವಳನ್ನೇ ಕೇಳಿ ಅವಳು ಬೇಕೆಂದುದನ್ನೇ ತಂದುಕೊಟ್ಟರಾಯಿತು.... ನಾನು ಹೀಗೆಲ್ಲಾ ಕೇಳುತ್ತೇನೆ ಅಂದುಕೋ ಬೇಡ ಜಯು .... ಅವಳಿಗೆ ಎಂತಹ ಸೀರೆ ಯಾವ ಬಣ್ಣದ್ದು ಒಪ್ಪುತ್ತೆ ಹೇಳಬಲ್ಲೆಯಾ? ನಾಳೆ ಮದುವೆಗೆ ಜವಳಿ ತರಬೇಕಲ್ಲ.

ಜಯು: ನೋಡು. ಗೀತ ಒಳ್ಳೆ ಚೆಲುವೆ. ಚೆಲುವೆಯರಿಗೆ ಯಾವ ಬಣ್ಣದ ಸೀರೆಯಾದರೂ ಒಪ್ಪಿಯೇ ಒಪ್ಪುತ್ತೆ.

ಯಶೋಧೆ: ಅದು ನಿಜ ಅನ್ನು. ಆದರೂ ನಿನ್ನ ಶಿಫಾರಸು?

ಜಯು: ನನ್ನ ಅಭಿರುಚಿಯನ್ನು ಅವಳ ಮೇಲೆ ಹೇರಲು ನನಗಿಷ್ಟವಿಲ್ಲ ಸೀರೆ ಬಾಬು ಹೆಂಗಸರಿಗೆ ಸೇರಿದ್ದು. ಅವರು ಒಪ್ಪಿದ್ದು ಅವರಿಗೆ.

ಯಶೋಧೆ: ಅದು ನಿಜ ಅನ್ನು. ಆದರೆ ಈಗ ಕೆಲವು ದಿವಸಗಳಿಂದ ಏಕೋ ಗೀತಳಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ನೀನದನ್ನ ಗಮನಿಸಿಲ್ಲವೆ?

ಜಯು: ಇಲ್ಲ.

ಯಶೋಧೆ: ಎಲ್ಲೋ ಪರೀಕ್ಷೆ ಕಾಲ. ಓದಿನಲ್ಲಿ ಅದೆಲ್ಲಾ ಎಲ್ಲಿ ಗಮನಕ್ಕೆ ಬರುತ್ತೆ ಹೇಳು.

ಜಯು: ನಿಜ ನನ್ನ ಗಮನಕ್ಕೆ ಅಂಥದೇನೂ ಬಂದಿಲ್ಲ.

ಯಶೋಧೆ: ಇಲ್ಲ ಜಯು! ಅವಳು ಸ್ವಲ್ಪ-ಸ್ವಲ್ಪವೇನು ಹೆಚ್ಚಾಗಿಯೇ ಅನ್ನ-ಬದಲಾಯಿಸಿಬಿಟ್ಟಿದ್ದಾಳೆ. ಮೋಹನ ಕ್ರಮೇಣ ಅವಳ ಮನಸ್ಸನ್ನು ಒಲಿಸಿಕೊಂಡಿರುವ ಹಾಗಿದೆ.

ಜಯು: (ರೇಗಿ) ಯಾರು ಮೋಹನನೇ? ಏನೋ ಪರೀಕ್ಷೆಯ ಕಾಲ, ಯಾರೊಬ್ಬರ ಹವ್ಯಾಸವಿಲ್ಲದೆ ಓದಿಕೊಂಡಿರಲಿ ಅಂತ ಈ ಮನೆಯಲ್ಲಿ ಅವನನ್ನ ಸೇರಿಸಿದ್ದಕ್ಕೆ........ ಚೆನ್ನಾಯಿತು; ಅವನಿಗೆ ತಕ್ಕ ಶಿಕ್ಷೆಯನ್ನೇ ಮಾಡಬೇಕು.

ಯಶೋಧೆ: ಹಾಗೆ ರೇಗಬೇಡ ಜಯು! ನಿನ್ನಲ್ಲಿರುವ ಗುಣ ಅವನಲ್ಲೇನಿದೆ ಹೇಳು. ಏನೋ ಹುಚ್ಚು ಹುಡುಗಿ. ಅವನೊಳ್ಳೆ ಮಾತುಗಾರ. ಅವನ ಮಾತಿಗೆ ಮರುಳಾಗಿದ್ದಾಳೆ-ಅಂತ ತೋರುತ್ತೆ. ಅದಕ್ಕೇ ಅವನನ್ನು ಊರಿಗೆ ಕಳುಹಿಸಿ ಬೇಗನೆ ನಿನ್ನ ಮದುವೆ ಗೊತ್ತುಮಾಡಿ ಬಿಡೋಣ.

ಜಯು: ಅದು ಸರಿ. ಆ ಮೇಲಾದರೂ ಅವನಿಗೆ ತಕ್ಕ ಶಿಕ್ಷೆ ಮಾಡಲೇಬೇಕು.

ಯಶೋಧೆ: ಅದಿರಲಿ. ನೀನು ಗೀತಳನ್ನು ಪ್ರೀತಿಸುವುದಾಗಿ ಹೇಳಲಿಲ್ಲವೆ?

ಜಯು: ಹೂ.

ಯಶೋಧೆ: ನಿನ್ನ ಪ್ರೀತಿ ಮೋಹನನ ಪ್ರೀತಿಗಿಂತ ಹೆಚ್ಚಲ್ಲವೆ?

ಜಯು: ಹೌದು.

ಯಶೋಧೆ: ಈಗ ಅವನು ಬರುತ್ತಾನಲ್ಲ. ಸುಮ್ಮನೆ ತಮಾಷೆಗೆ ಅವನನ್ನು ಹೀಗೇ ಪ್ರಶ್ನಿಸುತ್ತೇನೆ. ಅವನೇನು ಹೇಳುತ್ತಾನೆ ಎನ್ನುವುದನ್ನು ಕೇಳೋಣ. ಅವನ ಮನಸ್ಸೂ ಗೊತ್ತಾದ ಹಾಗಾಗುತ್ತೆ. ಏನಂತಿ?

ಜಯ: ಹೊ.

ಯಶೋಧೆ: ಹೌದು. ಆದರೆ ನೀನು ಎದುರಿಗಿರಬಾರದು. ಆದರೂ ಅವನು ಏನು ಹೇಳುತ್ತಾನೆ ಎನ್ನುವುದನ್ನು ನೀನೂ ಕೇಳಲೇಬೇಕು— ಏನಂತಿ?

ಜಯ: ಹೌದು ಹೌದು.

ಯಶೋಧೆ: ನಾನು ಹೇಳುವ ಹಾಗೆ ಮಾಡು. ನೀನೂ ಈ ಬಲಗಡೆ ಕೋಣೆಯಲ್ಲಿ ಅವಿತುಕೊಂಡಿರು. ಅವನೇನು ಹೇಳುತ್ತಾನೋ ಎಲ್ಲಾ ಕೇಳಿಕೊಂಡಿರು. ಆದರೆ ಒಂದು ಮಾತ್ರ ಭಾಷೆಕೊಡಬೇಕು. ನಾನು ಕರೆಯುವವರೆಗೂ ನೀನು ಹೊರಗೆ ಬರಬಾರದು. ಸ್ವಲ್ಪವೂ ಸದ್ದು ಮಾಡಬಾರದು.

ಜಯ: ಆಗಲಿ (ಬಲಗಡೆ ಕೊಟಡಿಯೊಳಕ್ಕೆ ಹೋಗಿ ಚಿಲಕ ಹಾಕಿಕೊಳ್ಳುವನು. ಯಶೋಧೆ ಪೇಪರನ್ನು ಓದುತ್ತಿರುವವಳಂತೆ ಪೇಪರನ್ನು ಕೈಲಿಡಿದುಕೊಂಡಿರುವಳು. ಕ್ಷಣ ಹೊತ್ತಿನ ಮೇಲೆ ಮಹಡಿ ಮೆಟ್ಟಲು ಇಳಿದ ಸದ್ದಾಗಿ ಮೋಹನ ಬರುವನು)

ಮೋಹನ: ಎಲ್ಲಿ ಜಯ?

ಯಶೋಧೆ ಎಲ್ಲೋ ಹೊರಗೆ ಹೋದ. ಬೇಗನೆ ಬರುತ್ತೇನೆಂದು ಹೇಳಿ ಹೋಗಿದ್ದಾನೆ. ಕೂತುಕೋ (ಮೋಹನ ಕೂಡುವನು)

ಮೋಹನ: ಈ ಸಂಜೆ ಗೀತಳನ್ನು ಒಂದು ಸಿನೀಮಾ ಕರಕೊಂಡು ಹೋಗೋಣ ಅಂತಿದ್ದೇನೆ.

ಯಶೋಧೆ: ಆಗಲಿ ಅದಕ್ಕೇನು?

ಮೋಹನ: ಏನೂ ಇಲ್ಲ. ನೀವೂ ಅವಳೊಡನೆ ಬ ಬೇಕು ಅಂತ ನನ್ನ ಪ್ರಾರ್ಥನೆ.

ಯಶೋಧೆ: ಆಗಲೇಳು. ನೀನು ಅಷ್ಟು ಅಭಿಮಾ ದಿಂದ ಕರೆದರೆ ನಾನೇಕೆ ಬೇಡ ಅನ್ನಲಿ. ಆದರೆ ಇನ್ನೊಂದ ವಿಚಾರ ನಿನ್ನನ್ನು ಕೇಳಬೇಕು ಅಂತ ಬಹಳ ದಿವಸದಿಂ ಅಂದುಕೊಂಡಿದ್ದೇನೆ.

ಮೋಹನ: ಅದಕ್ಕೆ ಬಹಳ ದಿವಸಗಳಿಂದ ಏಕೆ ಕಾಯ ಬೇಕು? ಯಾವಾಗ ಕೇಳಬೇಕು ಅನಿಸಿತೋ ಆಗಲೇ ದಿನವೇ ಕೇಳಬಹುದಾಗಿತ್ತಲ್ಲ ಹೋಗಲಿ, ಏನದು ಹೇಳಿ.

ಯಶೋಧೆ: ಗೀತಳಿಗೆ ಮದುವೆಮಾಡಬೇಕು ಅಂ ನಮ್ಮ ತಂದೆ ಕಾಗದ ಬರೆದಿದ್ದಾರೆ.

ಮೋಹನ: ಸರಿಯೇ.

ಯಶೋಧೆ: ಅವಳ ಮದುವೆಯ ವಿಚಾರದಲ್ಲಿ ನಿನಗೇನ ಆಸಕ್ತಿ ಇಲ್ಲವೆ?

ಮೋಹನ: ಹಾಗೇಕೆ ಕೇಳುತ್ತೀರಿ?

ಯಶೋಧೆ: ಎರಡು ತಿಂಗಳಿಂದ ಒಂದೇ ಮನೆಯಲ್ಲಿ

ಮಾಸ ಮಾಡಿದ ಮೇಲೆ ಲೋಕಾಭಿರಾಮವಾಗಿ ಒಂದು ಬಗೆಯ ಸ್ನೇಹ ಅಭಿಮಾನ ಬೆಳೆಯುವುದು ವಾಡಿಕೆ. ಹಾಗೇ–ಸ್ನೇಹಿತರ ಮದುವೆ ಮುಂಜಿ ಕಷ್ಟ ಸುಖಗಳನ್ನು ತಿಳಿಯುವುದರಲ್ಲಿರುವ ಕುತೂಹಲದ ಹಾಗೆ, ಗೀತಳಿಗೆ ಮದುವೆಯೆಂದರೆ ಅದರ ವಿವರಗಳನ್ನು ತಿಳಿಯಬೇಕು ಎನ್ನುವ ಆಸಕ್ತಿ ಇರಬಹುದೇನೋ ಅಂತ ಹಾಗೆ ಕೇಳಿದೆ ಅಷ್ಟೆ. ಅಂತಹುದೇನೂ ಇಲ್ಲದಿರುವುದಾದರೆ ಕೇಳಿದ್ದು ತಪ್ಪಾಯಿತು ಅಂದುಕೊಳ್ಳುತ್ತೇನೆ.

ಮೋಹನ: ಛೆ, ನನ್ನ ಮನಸ್ಸಿಗೆ ತುಂಬಾ ನೋವಾಗುವಂತೆ ಮಾತನಾಡುತ್ತೀರಿ. ಗೀತಳ ವಿಷಯದಲ್ಲಿ ನನಗೆ ಬರಿಯ ಅಭಿಮಾನವಲ್ಲ, ಸ್ನೇಹವಲ್ಲ, ಪ್ರೀತಿಯೇ ಬೆಳೆದಿದೆ. ಅದನ್ನು ನಿಮ್ಮ ಮುಂದಲ್ಲದೆ ಯಾರ ಮುಂದೆ ಹೇಳಲಿ? ಅವಳನ್ನು ನೋಡಿದಾಗಿನಿಂದ ನನ್ನ ಮನಸ್ಸೇ ನನ್ನದಲ್ಲದಾಗಿದೆ. ದೇವರು ಹೇಗಾದರೂ ಅವಳ ಕೈಹಿಡಿಯುವ ಸೌಭಾಗ್ಯವನ್ನು ಕರುಣಿಸಲಿ ಅಂತ ಹಗಲಿರುಳೂ ಪ್ರಾರ್ಥಿಸುತ್ತೇನೆ.

ಯಶೋಧೆ: ಆದರೆ ಅವಳನ್ನು ಜಯನಿಗೆ ಕೊಟ್ಟು ಮದುವೆ ಮಾಡುವುದೆಂದು ಗೊತ್ತಾಗಿರುವ ವಿಷಯ ನಿನಗೆ ತಿಳಿಯದೆ? ಜಯನಿಗೆ ಗೊತ್ತಾದ ಹೆಣ್ಣಿಗೆ ನೀನು ಆಸೆ ಪಡಬಹುದೆ?

ಮೋಹನ: ಆ ವಿಷಯ ಗೊತ್ತು. ನಾನದನ್ನು ಯೋಚಿಸದೆ ಇಲ್ಲ. ನನ್ನ ಮನಸ್ಸನ್ನು ನಾನೆಷ್ಟು ತಡೆದರೂ ಅದು ಹತೋಟಿಯಲ್ಲಿ ನಿಲ್ಲದಾಗಿದೆ. ಕಡೆಗೆ ಮದುವೆಯಾದರೆ ಅವಳನ್ನು ಮದುವೆಯಾಗಬೇಕು. ಇಲ್ಲದಿದ್ದರೆ ಬ್ರಹ್ಮಚಾರಿಯಾಗಿಯೇ ಇರಬೇಕೆಂದು ಸಂಕಲ್ಪಿಸಿದ್ದೇನೆ.

ಯಶೋಧೆ: ಹಾಗೆಲ್ಲಾದರೂ ಮಾಡುತ್ತಾರೆಯೇ? ನಿನಗೇನು ರೂಪ, ವಿದ್ಯೆ, ಧನ...ಯಾವುದಕ್ಕೆ ಕಡಿಮೆ ಇದೆ? ಗೀತಳಂತಹ ಹೆಣ್ಣುಗಳು ಹತ್ತಾರು ಸಿಗುತ್ತವೆ.

ಮೋಹನ: ಅಂತಹವು ಸಿಗಬಹುದು. ಆದರೆ ಅವಳು ಬಂದ ಹಾಗಾಗುವುದೇನು? ಈ ವಿಚಾರದಲ್ಲಿ ನನ್ನ ನಿರ್ಧಾರವನ್ನು ಎಂದಿಗೂ ಬದಲಾಯಿಸಲಾರೆ, ಅದು ಖಂಡಿತ.

ಯಶೋಧೆ: ಈಗ ನೋಡು, ನೀನೂ ಅವಳನ್ನು ಮದುವೆಮಾಡಿಕೊಳ್ಳಬೇಕೆಂದಿದ್ದಿ. ಜಯನೂ ಹಾಗೇ ಅನ್ನುತ್ತಾನೆ. ಈ ಸಮಸ್ಯೆಯನ್ನು ಬಿಡಿಸುವವರು ಯಾರು?

ಮೋಹನ: ಗೀತಳೇ.

ಯಶೋಧೆ: ಅಂದರೆ?

ಮೋಹನ: ನನ್ನ ಅಥವಾ ಜಯನ ಇಷ್ಟವನ್ನು ಗೀತಳ ಮೇಲೆ ಹೇರಬಾರದು. ಅದರಿಂದ ಅವಳನ್ನು ನಿರ್ಬಂಧಪಡಿಸಬಾರದು. ಅವಳೇ ಹೇಳಲಿ. ಅವಳಿಗೆ ಯಾರ ಮೇಲೆ ಪ್ರೀತಿ ಇದೆ ಅಂತ. ಅದರಂತೆ ನಾನು ಒಪ್ಪಿಕೊಳ್ಳಲು ಸಿದ್ಧ.

ಯಶೋಧೆ: ಒಂದು ವೇಳೆ ಅವಳು ಜಯನನ್ನೇ ವರಿಸಿದರೆ?

ಮೋಹನ: ಸಂತೋಷ. ಮುಖ್ಯ ಅವಳು ಸುಖವಾಗಿರುವುದೇ ನನಗೆ ಬೇಕಾದುದು. ನಾನು ಪ್ರೀತಿಸುವುದು ಎಂದರೆ ಅವಳನ್ನು ಸುಖವಾಗಿಡುವುದು ಎಂದರ್ಥ. ಅವಳು ಜಯನನ್ನು ವರಿಸಿದರೆ ನಾನು ಸಂತೋಷದಿಂದ ಅವಳಿಗೆ ಶುಭವನ್ನು ಕೋರುತ್ತೇನೆ. ಆದರೆ ನಾನು ಮಾತ್ರ ದೇವರು ನನ್ನ ಮೇಲೆ ದಯೆಯನ್ನು ಬೀರಲಿಲ್ಲವೆಂದುಕೊಂಡು ಬ್ರಹ್ಮಚಾರಿಯಾಗಿಯೇ ಉಳಿಯುತ್ತೇನೆ.

ಯಶೋಧೆ: ನಿನ್ನ ಪ್ರೀತಿ ಅಷ್ಟು ಗಾಢವಾದುದೆ?

ಮೋಹನ. ಎಷ್ಟು ಗಾಢವಾದುದು ಎಂದು ಹೇಳಲಾರೆ. ಅದು ಮಾತಿಗೆ ಮೀರಿದ್ದು.

ಯಶೋಧೆ: ಒಂದು ವೇಳೆ ಅವಳು ನಿನ್ನನ್ನೇ ಮದುವೆಯಾಗುವೆನೆಂದು ಹೇಳಿದರೆ........

ಮೋಹನ: ರೆ.......ಅಂದರೇ ಮೈಮರೆಯುತ್ತೇನೆ. ನಾನೇ ಪುಣ್ಯವಂತನೆಂದುಕೊಳ್ಳುತ್ತೇನೆ.

ಯಶೋಧೆ: ನಿಮನಿಮಗೆ ಈಡು ಜೋಡು ಸರಿಯಾಗಿರುವುದೆ?

ಮೋಹನ: ಈಡು ಜೋಡು—ನಮ್ಮಂತಹ ಜೊತೆ ಇನ್ನೊಂದಿರಲಾರದು. ಅವಳು ಸರಿಯಾಗಿ ನನ್ನ ಕಿವಿಗೆ ಬರುತ್ತಾಳೆ. ಅವಳು ತಲೆಯೆತ್ತಿದರೆ ನನ್ನ ಮುಖ ಅವಳ ಮುಖಕ್ಕೆ ಎದುರು ನಿಲ್ಲುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಇಬ್ಬರ ಮೈ ಬಣ್ಣವೂ ಒಂದೇ. ಅವಳು ರೋಜಾ ಬಣ್ಣದ ಸೀರೆಯುಟ್ಟು ಆ ಹೂವಿನ ಜಾಕೀಟು ತೊಟ್ಟು ಮಲ್ಲಿಗೆಯ ಮೊಗ್ಗನ್ನು ತುರುಬಿಗೆ ಸುತ್ತಿ ಮಂದಹಾಸವನ್ನು ಬೀರುತ್ತಾ ನನ್ನ ಎದೆಗೆ ಒರಗಿ ನಿಂತರೆ ರಾಮ ಸೀತೆಯರ ಹಾಗೆ ಚಂದವೇ ಚಂದ. ಆನಂದವೇ ಆನಂದ........ಕ್ಷಮಿಸಿ ಇದೇನೇನೋ ಸ್ವಪ್ನದಲ್ಲಿ ಕಂಡ ಹಾಗೆ ಏನೇನೋ ಮಾತನಾಡುತ್ತಿದ್ದೇನೆ. ಅವಳನ್ನು ನೆನೆಸಿದಾಗಲೆಲ್ಲಾ ಈ ಚಿತ್ರ ನನ್ನ ಕಣ್ಣಿಗೆ ಕಟ್ಟುತ್ತದೆ. ಏನು ಮಾಡಲಿ? ಮೊನ್ನೆ ಪೇಟೆಗೆ ಹೋಗಿದ್ದಾಗ ನನ್ನ ಸ್ನೇಹಿತ ಹೆಂಡತಿಗೆಗೊಂದು ಸೆಂಟುಬಾಟಲು ಕೊಂಡ. ನಾನೂ ಯೋಚಿಸಿದೆ. ಗೀತಳಿಗೆ ಮಲ್ಲಿಗೆ ಹೂ ಎಂದರೆ ಪ್ರಾಣ. ಅದರಿಂದ ಮಾಡಿದ 'ಜಾಸ್ಮಿನ್ ಸೆಂಟು' ಅವಳಿಗೆ ತುಂಬಾ ಪ್ರಿಯವಾದುದೆಂದು ಕೊಂಡುಕೊಂಡೆ. ಆದರೆ ಏನು ತಿಳಿದುಕೊಳ್ಳುತ್ತಾಳೋ ಎಂದು ಇನ್ನೂ ಅವಳಿಗೆ ಕೊಟ್ಟೇ ಇಲ್ಲ.

ಯಶೋಧೆ: ಏನು ತಿಳಿದುಕೊಳ್ಳುತ್ತಾಳೆ? ಕೊಡು ಇಲ್ಲಿ. ನಾನವಳಿಗೆ ಕೊಡುತ್ತೇನೆ. ಜಯಾ! ಗೀತಾ! ಇಬ್ಬರೂ ಬನ್ನಿ.

[ಇಬ್ಬರೂ ಎರಡು ಕಡೆ ಕೊಟಡಿಗಳ ಬಾಗಿಲು ತೆಗೆದು ಕೊಂಡು ಬರುವರು. ಮೋಹನನಿಗೆ ದಿಗ್ಭ್ರಮೆಯಾಗುವುದು]

ಮೋಹನ: ಇದೇನೋ ಆಟ ಹೂಡಿರುವ ಹಾಗಿದೆ ನೀವು.

ಯಶೋಧೆ: ಆಟವಲ್ಲ. ಎಲ್ಲಿ ನಿಮ್ಮ ಸೆಂಟು ಬಾಟಲು ಕೊಡಿ.

ಮೋಹನ: ಮಹಡಿಯ ಮೇಲಿದೆ, ತರುತ್ತೇನೆ. (ಹೋಗುವನು.)

ಯಶೋಧೆ: ಜಯ, ಮೋಹನನೇ ಗೀತಳಿಗೆ ತಕ್ಕ ಗಂಡ. ನೀನು ಕಣ್ಣಿದ್ದೂ ಕುರುಡನಾದಿ. ಅವನ ಪ್ರೀತಿಯೇ ಹೆಚ್ಚು. ಗೀತಳು ನಿನ್ನನ್ನು ಮದುವೆಯಾಗುವಳೆಂದು ಹೇಳಿದಾಗ ಅವನ ಮನಸ್ಸು ಹೇಗೆ ಔದಾರ್ಯವನ್ನು ತೋರಿತು ನೋಡು. ನೀನು ಅಸೂಯೆ ಪಡಬೇಡ, ಗೀತಳು ಮೋಹನನನ್ನೇ ಮದುವೆಯಾಗಲಿ. ಅವಳಿಗೂ ಅದೇ ಇಷ್ಟ.

ಜಯ: ಅವಳಿಗೂ ಅದೇ ಇಷ್ಟವಾದ ಮೇಲೆ ಅವಳ ವಿರೋಧವಾಗಿ ನಾನವಳನ್ನು ಮದುವೆಯಾದರೆ ತಾನೇ ಏನು ಸುಖ? ಹಾಗೇ ಆಗಲಿ.

ಯಶೋಧೆ: ಏನೇ ಗೀತ, ಒಪ್ಪಿಗೆ ತಾನೆ?

ಗೀತ: ಒಪ್ಪಿಕೇನೇ, ಆದರೆ........

ಯಶೋಧೆ: ಏನು, ರೇ........ಅಂತ ರಾಗ ತೆಗೀತಿದ್ದೀಯಲ್ಲಿ ತಿರುಗಿ?

ಗೀತ: ಅಪ್ಪ ಏನಂತಾನೋ?

ಯಶೋಧೆ: ನಾನಾಗಲೇ ಈ ಸೂಕ್ಷ್ಮ ಅವನಿಗೆ ತಿಳಿಸಿದ್ದೆ. ಗೀತ ಒಪ್ಪಿದ ವರ ಆಗಲಿ ಅಂತ ಅವನು ಕಾಗದದಲ್ಲಿ ಬರೆದಿದ್ದಾನೆ, ಅದಕ್ಕೇ ಕಾಗದ ತೋರಿಸಲಿಲ್ಲ. ಈಗ ನೋಡುವೆಯಂತೆ. (ಅಷ್ಟು ಹೊತ್ತಿಗೆ ಮೋಹನ ಸೆಂಟು ಬಾಟಲು ತರುವನು.)

ಮೋಹನ: (ಯಶೋಧೆಯ ಕಡೆ ಕೈಚಾಚಿ) ತೊಗೊಳ್ಳಿ;

ಯಶೋಧೆ: ನನಗೇಕೆ ಕೊಡುತ್ತೀಯಪ್ಪಾ, ಯಾರು ಹಕ್ಕುದಾರರೋ ಅವರಿಗೆ ಕೊಡು. ಇಸುಕೊಳ್ಳೆ ಗೀತ.

[ಮೋಹನ, ಗೀತ ಇಬ್ಬರೂ ಒಬ್ಬರನ್ನೊಬ್ಬರು ನೋಡಿ ನಗುತ್ತಾ, ಗೀತ ಸೆಂಟು ಬಾಟಲನ್ನು ತೆಗೆದುಕೊಂಡು ಮೂಸಿ ನೋಡುವಳು.]

ಯಶೋಧೆ: ಗೀತ, ಸಿನಿಮಾಕ್ಕೆ ಹೊತ್ತಾಗುತ್ತೆ ಏಳು. ಹೆರಳು ಹಾಕಿಕೊಂಡು ತುರುಬು ಕಟ್ಟಿಕೋ. ರೋಜಾ ಬಣ್ಣದ ಸೀರೆ ಉಟ್ಟುಕೊಂಡು ಹೂವಿನ ಜಾಕೀಟು ಹಾಕಿಕೋ ಹೋಗು. ಹಾಗೇ ಹೋಗುವಾಗ ಹೂವಿನ ಅಂಗಡಿಯಲ್ಲಿ ಮಲ್ಲಿಗೆಯ ತುರುಬೊಂದನ್ನು ಕಟ್ಟಿಕೊಂಡು ಹೋಗು.

ಗೀತ: ನೀನು ಬರೋದಿಲ್ಲವೆ?

ಯಶೋಧೆ: ಇನ್ನು ನಾನೇಕೆ ಬರಬೇಕು? ನೀನು, ಮೋಹನ ಇಬ್ಬರೇ ಹೋಗಿ ಬನ್ನಿ.

ಗೀತ: (ನಗುತ್ತಾ) ಹೂ.

[ಎಲ್ಲರೂ ನಗುತ್ತಾ, ಗೀತಳು ಒಳಗೆ ಹೋಗುತ್ತಿರುವ ಹಾಗೆ ತೆರೆ ಬೀಳುವುದು.]

ಚೀಣಾದ ತಲೆಗೂದಲಿನ ವ್ಯಾಪಾರ

ಲೇಖಕರು: ವೀ. ಪುಟ್ಟಮಾದಪ್ಪ ಬಿ. ಎ., (ಆನರ್ಸ್)

ರಾಜಕೀಯ ವಿಷಯಗಳಿಂದಾಗಿ ಚೀಣ ಮತ್ತು ಅಮೆರಿಕಾಗಳ ನಡುವೆ ಉದ್ಭವಿಸಿರುವ ಹಗೆತನ ಚೀಣದ ವಾಣಿಜ್ಯ ವಿಸ್ತರಣೆಯನ್ನು ಬಹುತೇಕ ಮೊಟಕು ಮಾಡಿದೆ. ಚೀಣದ ಪ್ರಮುಖ ವ್ಯಾಪಾರವಾದ ತಲೆಗೂದಲಿಗೆ ಇಂದು ಬೇಡಿಕೆಯೇ ಇಲ್ಲವಾಗಿದೆ. ತಲೆಗೂದಲಿನ ವ್ಯಾಪಾರದಲ್ಲಿ ಚೀಣ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ತಲೆಗೂದಲಿಂದ ಮುಖ್ಯವಾಗಿ ಕೂದಲಿನ ಬಲೆಗಳನ್ನು(Hair Nets) ಮಾಡಿ ಚೀಣೀಯರು ಮಾರುತ್ತಾರೆ.

ಹಿಂದೆ ಅಮೆರಿಕ ಈ ಬಲೆಗಳನ್ನು ಬಹಳ ಕೊಳ್ಳುತಿತ್ತು. ಈ ವ್ಯಾಪಾರದಿಂದ ಚೀಣಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಆದಾಯವೂ ಇದ್ದಿತು. ಆದರೆ ಈಗ ಅಮೆರಿಕಾ ಚೀಣಾಗಳ ನಡುವೆ ಈ ವ್ಯಾಪಾರ ಕುಸಿದು ಬಿದ್ದಿದೆ. ಅಮೆರಿಕದ ಆಸೆ ಬಿಟ್ಟು ಚೀಣ ಈಗ ತನ್ನ ಆಶಾಪೂರ್ಣ ದೃಷ್ಟಿಯನ್ನು ಬ್ರಿಟನ್ನಿನತ್ತ ಹೊರಳಿಸಿದೆ.

ಕಳೆದ ಐವತ್ತು ವರುಷಗಳಲ್ಲಿ ತಲೆಗೂದಲಿನ ವ್ಯಾಪಾರದಿಂದ ಚೀಣ ಅಪಾರ ಹಣ ಗಳಿಸಿದೆ ಎಂದರೆ ಜನರಿಗೆ ಆಶ್ಚರ್ಯವಾಗಬಹುದು, ನಿಜ. ಚೀಣದಲ್ಲಿ ಈ ವ್ಯಾಪಾರ ದಿನಗಳೆದಂತೆ ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ. ಬಹಳ ಚೀಣೀ ಹೆಂಗಸರು ಈ ವ್ಯಾಪಾರದಲ್ಲಿ ಕೈ ಹಾಕಿದ್ದಾರೆ.

ತಲೆಗೂದಲಿನ ವ್ಯಾಪಾರದಲ್ಲಿ ಚೀಣದ ಸುತ್ತಮುತ್ತಲ ಹಳ್ಳಿಗಳೆಲ್ಲ ಭಾಗವಹಿಸುತ್ತವೆ. ಸಣ್ಣ ಪುಟ್ಟ ಹಳ್ಳಿಗಳಲ್ಲೆಲ್ಲ ತಲೆಗೂದಲು ಸಂಗ್ರಹಿಸುವ ಶಾಖೆಗಳಿವೆ. ಈ ಶಾಖೆಗಳ ಸಂಖ್ಯೆ ಅಸಂಖ್ಯಾತ. ಪ್ರತಿ ದಿನವೂ ತಲೆ ಬಾಚುವಾಗ ಉದುರುವ ತಲೆಗೂದಲನ್ನು ಶೇಖರಿಸಿ ಈ ಶಾಖೆಗಳಿಗೆ ಜನರು ತಂದು ಕೊಡುತ್ತಿದ್ದಾರೆ. ಹಣಕ್ಕೋಸುಗ ಹೆಂಗಸರು ತಲೆಗೂದಲನ್ನು ಕತ್ತರಿಸುವ ಹಾಗೂ ಬೇಕೆಂತಲೇ ತಲೆಯಿಂದ ಕೂದಲು ಕೀಳುವ ಪ್ರಸಂಗಗಳು ಚೀಣಾದಲ್ಲಿ ತೀರಾ ಸಾಮಾನ್ಯ. ಒಬ್ಬ ಹಾಂಗ್‌ಕಾಂಗ್ ವ್ಯಾಪಾರಿಯ ಹೇಳಿಕೆಯ ಮೇರೆಗೆ ಚೀಣಾ ಈ ವ್ಯಾಪಾರವನ್ನು ನಲವತ್ತು ವರುಷಗಳ ಹಿಂದೆ ಪ್ರಾರಂಭಿಸಿತು. ಆಗಿನ ಕಾಲದಲ್ಲಿ ಗಂಡಸರೂ ತಮ್ಮ ತಲೆಗೂದಲನ್ನು ಮಾರುತ್ತಿದ್ದರು. ಮಾಂಡುಸ್ ಎಂಬಾತನ ನಿರಂಕುಶ ಆಡಳಿತಕ್ಕೆದುರು ನಿಂತು ಹೋರಾಡಿ ತಮ್ಮ ಜನ್ಮಹಕ್ಕಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಈ ಜನ ತಮ್ಮ ತಲೆಗೂದಲನ್ನು ಕತ್ತರಿಸಿ ಹಾಕಿದರು; ಇದರಿಂದ ಹಳೆಯ ಸಂಪ್ರದಾಯಗಳನ್ನೆಲ್ಲ ಕಿತ್ತೊಗೆಯುವುವೆಂದು ಅವರು ಸಾಧಿಸಿದರು. ಹೀಗೆ ಶೇಖರಿಸಿದ ತಲೆಗೂದಲನ್ನು ಚೀಣ ಇಂಗ್ಲೆಂಡಿಗೆ ಕಳುಹಿಸಿ, ಅಲ್ಲಿ ಆ ಕೂದಲನ್ನು ಶುಭ್ರಪಡಿಸಿ, ಬಣ್ಣ ಹಾಕಿಸಿ ಬಳಿಕ ಅವನ್ನು ಹಿಂದಕ್ಕೆ ತರಿಸಿ ಅನಂತರ ಅದರಲ್ಲಿ ಬಲೆಗಳನ್ನು ಮಾಡುತ್ತಿತ್ತು. ಆದರೆ ಇದರಿಂದ ತಮ್ಮ ಆದಾಯದ ಬಹುಭಾಗ ಪೋಲಾಗುತ್ತಿದೆಯೆಂದು ಚೀಣೀಯರಿಗೆ ತಿಳಿಯಿತು. ಆದುದರಿಂದ ಅವರು ತಾವೇ ಕೂದಲನ್ನು ಶುಭ್ರಪಡಿಸಿ ಅದಕ್ಕೆ ಬಣ್ಣ ಕಟ್ಟುವುದನ್ನು ಕಲಿತರು. ಸನ್ ಎಂಬುವ ಚೀಣೀಯನು ಪ್ರಥಮ ಬಾರಿಗೆ ಈ ಉದ್ಯಮಕ್ಕೆ ಕೈ ಹಾಕಿದ. ಇವನ ಉದ್ಯಮ ಜಯವಾಗಿ ಇತರರೂ ಇವನನ್ನು ಹಿಂಬಾಲಿಸಿದರು. ತತ್ಪರಿಣಾಮವಾಗಿ ಬಹು ಬೇಗ ಚೀಣೀಯರು ಇಂಗ್ಲೆಂಡಿಗೆ ಕೂದಲು ಕಳುಹಿಸುವುದನ್ನು ಬಿಟ್ಟುಬಿಟ್ಟರು.

ಇತರ ವ್ಯಾಪಾರಗಳಂತೆ ಕೂದಲಿನ ವ್ಯಾಪಾರವೂ ಚೀಣದಲ್ಲಿ ಇಂದು ಮುಖ್ಯ ಸ್ಥಾನ ಗಳಿಸಿದೆ. ಇತರ ವ್ಯಾಪಾರಗಳಿಗೆ ಎಷ್ಟು ಗಮನ ಕೊಡುತ್ತಿರುವರೋ ಅಷ್ಟೇ ಗಮನವನ್ನು ಕೂದಲಿನ ವ್ಯಾಪಾರಕ್ಕೂ ಚೀಣೀಯರು ಕೊಡುತ್ತಿದ್ದಾರೆ. ಚೀಣದ ವಾಣಿಜ್ಯ ಸುಧಾರಣೆಗೆ ಕೂದಲಿನ ವ್ಯಾಪಾರ ಬಹುತೇಕ ಸಹಕಾರಿಯಾಗಿದೆ.

ಉತ್ತಮ ತರಗತಿಯ ಕೂದಲು ಹೊನಾನ್ ಎಂಬ ಪ್ರದೇಶದಲ್ಲಿ ಹಾಗೂ ಅದರ ಸುತ್ತಮುತ್ತಲಿರುವ ಪ್ರದೇಶಗಳಲ್ಲಿಯೂ ಸಿಗುತ್ತದೆ. ದಕ್ಷಿಣದಲ್ಲಿ ಹ್ಯೂನಾನ್ ಎಂಬ ಪ್ರದೇಶದಲ್ಲಿ ಸಿಗುವ ಕೂದಲು ಸಹ ಉತ್ತಮ ಮಟ್ಟದ್ದು. ಹ್ಯೂನಾನ್ ಪ್ರದೇಶದಲ್ಲಿ ವಾಸಿಸುವ ಜನ ಗೋಧಿ ತಿನ್ನುತ್ತಾರೆ. ಗೋಧಿ ತಿಂದರೆ ಅದರ ಸಾರದಿಂದ ಕೂದಲು ದಟ್ಟವಾಗಿಯೂ ಉದ್ದವಾಗಿಯೂ ಬೆಳೆಯುತ್ತದೆ. ಹ್ಯೂನಾನ್ ಪ್ರದೇಶದ ಜನರು ತಲೆಗೆ ಹೆಚ್ಚು ಎಣ್ಣೆ ಬಳಿಯುವರೆಂದೂ, ತತ್ಪರಿಣಾಮವಾಗಿ ಕೂದಲಿನ ಮೇಲೆ ಹೆಚ್ಚು ಧೂಳು ಕುಳಿತು, ಕೂದಲು ನುಣುಪಾಗಿಯೂ ನವುರಾಗಿಯೂ ಇರುವುದಿಲ್ಲವೆಂದೂ ತಜ್ಞರ ಹೇಳಿಕೆ.

ಇಪ್ಪತ್ತನಾಲ್ಕು ಇಂಚುಗಳಿಂದ ಇಪ್ಪತ್ತಾರು ಇಂಚುಗಳು ಉದ್ದವಿರುವ ಕೂದಲಿಗೆ ವ್ಯಾಪಾರ ಹೆಚ್ಚು. ಈ ಕೂದಲನ್ನು ಬಲೆಮಾಡುವುದಕ್ಕೆ ಮಾತ್ರ ಉಪಯೋಗಿಸುತ್ತಾರೆ.

ಬಹಳ ಚಿಕ್ಕ ಕೂದಲೆಂದರೆ ಹದಿನಾರು ಇಂಚಿನದು. ಕೃತಕ ಗಡ್ಡಗಳನ್ನು ಮಾಡುವುದಕ್ಕೂ ಮುಖ ಕ್ಷೌರದ ಬ್ರಷ್‌ಗಳನ್ನು ತಯಾರಿಸುವುದಕ್ಕೂ ಈ ಕೂದಲನ್ನು ಚೀಣೀಯರು ಉಪಯೋಗಿಸುತ್ತಾರೆ. ಚೀಣೀಯರು ವ್ಯಾಪಾರದಲ್ಲಿ ಬಹಳ ನಿಷ್ಣಾತರು. ಕ್ಷೌರದಂಗಡಿಯಲ್ಲಿ ಪ್ರತಿದಿನವೂ ಹಾಳಾಗುತ್ತಿರುವ ಪುಡಿಗೂದಲುಗಳನ್ನುಪಯೋಗಿಸಿಕೊಳ್ಳುವ ಒಂದು ಮಾರ್ಗವನ್ನು ಈಗಾಗಲೇ ಅವರು ಯೋಚಿಸಿದ್ದಾರೆ. ಇಷ್ಟರಲ್ಲೇ ನಾಯಿಂದನೂ ಒಳ್ಳೇ ಹಣಗಾರನಾಗಬಹುದು!

ಪಿಕಿಂಗ್-ಹಾಂಕೋ ರೈಲ್ವೆ ದಾರಿಯಲ್ಲಿರುವ ಹೂಷಾಂಗ್ ಎಂಬ ಪಟ್ಟಣ ತತ್ಕಾಲಕ್ಕೆ ಚೀಣಾದಲ್ಲಿ ಕೂದಲು ವ್ಯಾಪಾರಕ್ಕೆ ಮುಖ್ಯ ಸ್ಥಳ. ಚೀಣದ ಸುತ್ತು ಮುತ್ತಲ ಹಳ್ಳಿಗಳಲ್ಲಿ ಶೇಖರಿಸಿದ ತಲೆಗೂದಲು ಈ ಪಟ್ಟಣಕ್ಕೆ ಬಂದು ಸೇರುತ್ತದೆ. ಮಂಚೂರಿಯಾ ಹಾಗೂ ಸಿಕಿಯಾಂಗ್ ಪ್ರದೇಶಗಳ ಕೂದಲು ಮಾತ್ರ ಈ ಪಟ್ಟಣಕ್ಕೆ ಬರುವುದಿಲ್ಲ. ಆರಕ್ಕಿಂತಲೂ ಮಿಕ್ಕಿದ ದೊಡ್ಡ ದೊಡ್ಡ ಕಾರ್ಖಾನೆಗಳ ಪ್ರತಿನಿಧಿಗಳು ಚೀಣಾ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಸಂಚರಿಸಿ ಆದಷ್ಟೂ ಹೆಚ್ಚಿನ ಪ್ರಮಾಣದಲ್ಲಿ ಕೂದಲನ್ನು ಶೇಖರಿಸುತ್ತಾರೆ. ಹೆಂಗಸರು, ರಿಕ್ತರು, ಭಾಗ್ಯವಂತರು ಎಂಬ ಭೇದವಿಲ್ಲದೆ ಜನ ತಮ್ಮ ಕೂದಲನ್ನು ಮಾರುತ್ತಾರೆ. ಚೀಣೀಯರ ಈ ಉದ್ಯಮದಲ್ಲಿ ನಾವು ಕಾಣುವ ಒಂದು ವೈಶಿಷ್ಟ್ಯವೆಂದರೆ ಆ ಜನ ಈ ವ್ಯಾಪಾರದಲ್ಲಿ ನಿಜವಾಗಿಯೂ ಆಸಕ್ತಿಯಿಟ್ಟು ಭಾಗವಹಿಸುತ್ತಾರೆ. ಜನ ವ್ಯಾಪಾರಿಗಳಿಗೆ ತಮ್ಮ ಕೈಲಾದಷ್ಟು ನೆರವು ಕೊಡುತ್ತದೆ. ಜನ ಈ ವ್ಯಾಪಾರವನ್ನು ವಾಣಿಜ್ಯದೃಷ್ಟಿಯಿಂದ ನೋಡುವುದೇ ಹೊರತು ವೈಯಕ್ತಿಕ ದೃಷ್ಟಿಯಿಂದ ನೋಡುವುದಿಲ್ಲ.

ಈ ವ್ಯಾಪಾರದಲ್ಲಿನ ಮತ್ತೊಂದು ವಿಶೇಷತೆಯೆಂದರೆ ಜನ ದುಡ್ಡಿಗೆಂದು ಕೂದಲನ್ನು ಕಾರ್ಖಾನೆಗೆ ಮಾರುವುದಿಲ್ಲ. ಚೀಣೀ ಹೆಂಗಸರು ತಮ್ಮ ಕೂದಲನ್ನು ಮಾರಿ ಅದಕ್ಕೆ ಬದಲಾಗಿ ಸೂಜಿಗಳನ್ನು ಕೊಳ್ಳುತ್ತಾರೆ. ಚೀಣೀ ಹೆಂಗಸರಿಗೆ ಸೂಜಿಗಳೆಂದರೆ ಬಹಳ ಆಸೆ. ಈ ಸೂಜಿಗಳನ್ನು ಕೊಳ್ಳಲು ಸಹಜ ರೀತಿಯಲ್ಲಿ ಕೂದಲು ಸಿಗದಿದ್ದಾಗ ಮಾತ್ರ ಈ ಹೆಂಗಸರು ಕೂದಲನ್ನು ಕಿತ್ತು ಅಥವಾ ಕತ್ತರಿಸಿ ಮಾರುತ್ತಾರೆ.

ಚೀಣಾದ ಸುತ್ತಮುತ್ತಲಿರುವ ಹಳ್ಳಿಗಳು ತಾವು ಶೇಖರಿಸಿದ ಕೂದಲನ್ನು ಸುಮಾರು ಹತ್ತು ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಮಾರುತ್ತವೆ. ಈ ಕಾರ್ಖಾನೆಗಳಲ್ಲಿ ಕೂದಲಿನ ಬಲೆಗಳನ್ನು ತಯಾರಿಸಲಾಗುತ್ತದೆ. ಇಂತಹ ಕಾರ್ಖಾನೆಗಳು ಮುಖ್ಯವಾಗಿ ಟ್ಸಿಂಗ್ಟ್ಸೆ, ಷಾಂಟಗ್ ಮುಂತಾದ ಪ್ರದೇಶಗಳಲ್ಲಿ ಸ್ಥಾಪಿತವಾಗಿವೆ. ಮೊದಲು ಈ ಕಾರ್ಖಾನೆಗಳು ಚೆಫೂ ಎಂಬ ಪಟ್ಟಣದಲ್ಲಿದ್ದುವು. ಆದರೆ ಚೆಫೂ ಬಂದರು ಹಾಳುಬಿ[illegible] ಮೇಲೆ ಈ ಕಾರ್ಖಾನೆಗಳನ್ನು ಮೇಲೆ ಸೂಚಿಸಿದ ಸ್ಥಳಗಳಿ[illegible] ಬದಲಾಯಿಸಲಾಯಿತು.

ಸಹಜವಾದ ಬಿಳುಪು ಅಥವಾ ಕಪ್ಪು ಮಿಶ್ರಿತ ಬಿಳು[illegible] ಕೂದಲಿಗೆ ಬೆಲೆ ಹೆಚ್ಚು. ಅಲ್ಲದೆ ಈ ಕೂದಲಿಂದ ತಯಾ[illegible]ಸಿದ ಬಲೆಗಳು ಹೆಚ್ಚು ಖರ್ಚಾಗುತ್ತವೆ. ಉಳಿದ ಎಲ್ಲ ಕೂ[illegible]ಲಿನ ಬಣ್ಣ ಕಪ್ಪು. ಚೀಣದ ರಾಜಕೀಯ ಹೇಗೂ ಇರಲಿ[illegible] ಒಬ್ಬ ವ್ಯಾಪಾರಿ ಹೇಳಿದ ಹಾಗೆ, ಸಹಜವಾದ ಕೆಂಪು ಕೂದಲ[illegible] ಚೀಣದಲ್ಲಿ ಸಿಗುವುದಿಲ್ಲ!

ಹಲವಾರು ವಿಜ್ಞಾನ ಸಲಕರಣೆಗಳನ್ನುಪಯೋಗಿ[illegible] ಚೀಣೀಯರು ಸುಮಾರು ಆರು ಬಣ್ಣಗಳ ಕೂದಲಿನ ಬ[illegible]ಗಳನ್ನು ತಯಾರಿಸುತ್ತಾರೆ. ಬ್ರಿಟಿಷ್ ಜನರು ಚಿಕ್ಕ ಚಿ[illegible] ಬಲೆಗಳನ್ನು ಬಹಳ ಉಪಯೋಗಿಸುತ್ತಾರೆ. ಈ ಬಲೆಗ[illegible] ಧಾರಣೆಯೂ ಹೆಚ್ಚು. ಏಕೆಂದರೆ ಇವುಗಳನ್ನು ಮಾಡಲ[illegible] ಹೆಚ್ಚು ಕೂದಲು ಬೇಕಾಗುತ್ತದೆ.

ಬಲೆಗಳನ್ನು ತಯಾರಿಸಿದ ಮೇಲೆ ಅವುಗಳನ್ನು ಟ್ಸಿಂಗ[illegible] ಟೋನಲ್ಲಿ ಮತ್ತೂ ಶೇಖರಿಸಿ ಅನಂತರ ಗ್ರೋಸ್‌ಗಳ ಲೆಕ್ಕ[illegible]ದಲ್ಲಿ ವಿವಿಧ ದೇಶಗಳಿಗೆ ಕಳುಹಿಸಲಾಗುತ್ತದೆ.

ಇದುವರೆವಿಗೂ ಚೀಣೀಯರು ತಮ್ಮ ಕೂದಲಿ[illegible] ಬಲೆಗಳನ್ನು ವಿದೇಶಗಳಿಗೆ ಮಾರುವುದನ್ನು ನಿಲ್ಲಿಸಿಲ್ಲ; ಮುಂ[illegible] ನಿಲ್ಲಿಸುವಂತೆಯೂ ಇಲ್ಲ. ಏಕೆಂದರೆ ಈ ವ್ಯಾಪಾರದಿಂ[illegible] ಅವರಿಗೆ ಬಹಳ ಲಾಭ ಸಿಗುತ್ತಿದೆ.

ಚೀಣೀ ಹೆಂಗಸರು ಈ ವ್ಯಾಪಾರದಲ್ಲಿ ತಮ್ಮ ದೇಶಕ್ಕೆ ಬಹಳ ಉಪಕಾರ ಮಾಡುತ್ತಿದ್ದಾರೆ. ಕೂದಲು ಒದಗಿಸ[illegible]ವುದು ಮಾತ್ರವಲ್ಲ, ಹಸಿಯಾಗಿ ಕಾರ್ಖಾನೆಯಿಂದ ಬಂ[illegible] ಕೂದಲನ್ನು ಮರದ ಲೂಮುಗಳಲ್ಲಿ (Looms) ನೇಯು[illegible]ವವರೂ ಇವರೇ. ಮುಖ್ಯವಾಗಿ ಐದು ತರಹೆಯ ಕೂದಲಿನ ಬಲೆಗಳನ್ನು ಚೀಣದಲ್ಲಿ ತಯಾರಿಸಲಾಗುತ್ತದೆ. ಈ ಬಲೆಗಳನ್ನು ಮಾಡುವ ಮೊದಲು ಚೀಣೀಯರು ವಿವಿಧ ರೀತಿಯ ಬಲೆಗಳಿಗಿರುವ ಬೇಡಿಕೆಯನ್ನು ತಿಳಿದು ಆ ಬಲೆಗಳನ್ನೇ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸುತ್ತಾರೆ.

ಈ ಉದ್ಯಮದಲ್ಲಿ ಹೆಚ್ಚು ಹೆಚ್ಚು ಲಾಭ ಸಿಗುತ್ತಿರುವ ಚೀಣಾದ ಮುಂದೆ ಇಂದು ಒಂದು ದೊಡ್ಡ ಸಮಸ್ಯೆ ಎದ್ದಿದೆ. ಇತ್ತೀಚೆಗೆ ಚೀಣೀ ಹೆಂಗಸರು ತಮ್ಮ ಉದ್ದನೆಯ ಕೂದಲನ್ನು ಕತ್ತರಿಸಿ ಮೊಟಕು ಮಾಡುತ್ತಿದ್ದಾರೆ–ಬೆಳೆ ಬೆಳೆಯುವ ನಾಡಿಗೆ ಬಾಂಬು ಹಾಕಿ ಹಾಳುಮಾಡಿದಂತೆ.

ಚೀಣಾದ ವ್ಯಾಪಾರಿಗಳಿಗೆ ತಾವು ಇನ್ನೆಷ್ಟು ಕಾಲ ಕೂದಲಿನ ಬಲೆಗಳ ವ್ಯಾಪಾರ ನಡೆಸಬಹುದು ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ವ್ಯಾಪಾರವನ್ನುಳಿಸಿಕೊಳ್ಳಲು ಚೀಣಾ ಏನು ಮಾಡುವುದೋ ಕಾದು ನೋಡಬೇಕು.

(ಆಧಾರದಿಂದ)

ಶೈಶವ ಲೈಂಗಿಕತೆ

ಮಕ್ಕಳ ಕಾಮಜೀವನ

(ಲೇಖಕರು: ಶ್ರೀ. ಟಿ. ಶೀನಪ್ಪ ಹೆಗ್ಡೆ, ಎಮ್. ಎ., ಎಲ್. ಟಿ.)

ಶಿಶುಗಳಲ್ಲಿಯೂ ಕಾಮ ಪ್ರವೃತ್ತಿ ಇದೆ ಎಂದು ಹೇಳಿದರೆ ಅನೇಕ ಓದುಗರು ಆಶ್ಚರ್ಯಪಡಬಹುದು; ಅಥವಾ ಇದು ಸುಳ್ಳೆಂದು ಹೇಳಬಹುದು-ಯಾಕೆಂದರೆ ಹೆಚ್ಚಿನ ಜನರು ಮನುಷ್ಯನಲ್ಲಿ ಕಾಮ ಜೀವನವು ಪ್ರಾಯ ಬಂದ ಮೇಲೆ ಮಾತ್ರ ತಲೆದೋರುತ್ತದೆ ಎಂಬ ಅಭಿಪ್ರಾಯ ಉಳ್ಳವರಾದರೂ ಡಾ. ಸಿಗ್ಮಂಡ್ ಫ್ರೂಡನು (Dr. S. Frued) ಅದು ತಪ್ಪೆಂದು ಅಲ್ಲಗಳೆಯುತ್ತಾನೆ. ಶಿಶುವಿನಲ್ಲಿ ಲೈಂಗಿಕ ಪ್ರವೃತ್ತಿಯು ಹುಟ್ಟಿದ ದಿನದಿಂದಲೇ ಕಂಡುಬರುತ್ತದೆ ಎಂದು ಅವನು ಹೇಳುತ್ತಾನೆ. ಈ ಶೈಶವ ಲೈಂಗಿಕ ಗುಣವೇ ಮುಂದೆ ಪ್ರೌಢಾವಸ್ಥೆಯಲ್ಲಿ ವಿಕಸನಗೊಂಡು ಕ್ರಮಬದ್ಧ ರೂಪಕ್ಕೆ ಬರುತ್ತದೆ. ಸಾಮಾನ್ಯವಾಗಿ ಪ್ರೌಢಾವಸ್ಥೆಯಲ್ಲಿ ಈ ಗುಣವು ಸಂಕೀರ್ಣವೂ (Complex) ಜಟಿಲವೂ ಆಗಿರುತ್ತದೆ. ಆದರೆ ಶೈಶವದಿಂದಲೇ ಈ ಪ್ರವೃತ್ತಿಗೆ ಸರಿಯಾದ ತರಬೇತಿಯು ದೊರೆಯದೆ ಇದ್ದರೆ ಇದು ವಿರೂಪವನ್ನು ತಾಳಿ ಅನೇಕ ತರದ ಮನಸ್ಸಿನ ವಿಕಾರ, ಅನಾರೋಗ್ಯಕ್ಕೆ ಕಾರಣವಾಗಬಹುದು.

ಮಗುವು ಹುಟ್ಟುವಾಗಲೇ ಲೈಂಗಿಕ ಪ್ರವೃತ್ತಿಯುಳ್ಳದಾಗಿದೆ ಎಂದ ಮಾತ್ರಕ್ಕೆ ಈ ಲೈಂಗಿಕ ವಿಚಾರವು ಪ್ರೌಢ ವ್ಯಕ್ತಿಗಳಲ್ಲಿರುವಂತೆ ಜನನೇಂದ್ರಿಯ ಮತ್ತು ಮೈಥುನ ಕ್ರಿಯೆಗಳಿಗೆ ಸಂಬಂಧಿಸಿದೆ ಎಂದು ತಿಳಿಯಲಾಗದು. ಶಿಶುವಿನಲ್ಲಿ ಮೊದಲು ಬಾಯಿಯ ಚಟುವಟಿಕೆಯಲ್ಲಿ ಈ ಪ್ರವೃತ್ತಿಯು ತೋರಿಬರುತ್ತದೆ. ತಾಯಿಯ ಮೊಲೆ ಇಲ್ಲದಾಗ ರಬ್ಬರಿನ ತೊಟ್ಟನ್ನು ಚೀಪುವುದರಿಂದ ತೃಪ್ತಿಪಡುತ್ತದೆ. ಇಲ್ಲಿ ಹಸಿವನ್ನು ತೃಪ್ತಿಪಡಿಸುವ ಹಾಲು ದೊರೆಯದಿದ್ದರೂ ಅದರ ಲೈಂಗಿಕ ಪ್ರವೃತ್ತಿಯು ಬರೇ ತೊಟ್ಟು ಚೀಪುವುದರಿಂದ ತೃಪ್ತಿಹೊಂದುತ್ತದೆ. ಹೀಗೆ ಈ ಗುಣವು ಬೆರಳು ಚೀಪುವುದು, ಇತರ ಮಕ್ಕಳನ್ನು ಅಥವಾ ಆಟದ ಸಾಮಾನನ್ನು ಕಚ್ಚುವುದು ಇತ್ಯಾದಿ ಕೆಲಸದಲ್ಲಿ ತೃಪ್ತಿಗೊಳ್ಳುತ್ತದೆ. ಇಂಥ ಕೆಟ್ಟ ಚಟಗಳನ್ನು ಬಿಡಿಸಲು ಮಗುವಿಗೆ ಕೂಡಲೇ ಶಿಕ್ಷೆಕೊಡುವುದು, ಇಲ್ಲವೆ ಇವನ್ನು ನಿರ್ಬಂಧದಿಂದ ತಡೆಯುವುದು ಸರಿಯಲ್ಲ. ಈ ಪ್ರವೃತ್ತಿಯ ತೃಪ್ತಿಗೆ ಬೇರೆ ಸರಿಯಾದ ದಾರಿಯನ್ನು ಒದಗಿಸುವದು ಅಗತ್ಯ. ಯಾಕೆಂದರೆ ಮಕ್ಕಳ ಕೆಟ್ಟ ಚಟಬಿಡಿಸಲು ಕೊಟ್ಟ ಶಿಕ್ಷೆ, ಒಡ್ಡಿದ ಪ್ರತಿ ಬಂಧಗಳಿಂದ ಮಕ್ಕಳಲ್ಲಿ ಹತಾಶೆ, ನಿರ್ವೇದ ಅನುಭವಕ್ಕೆ ಬಂದರೆ ಅವುಗಳ ಮನಸ್ಸು ಶೈಶವದಲ್ಲೇ ವಿಷಮಯವಾಗಿ ಕೆಟ್ಟುಹೋಗಬಹುದು. ಜಗತ್ತಿನ ಮೇಲೆ ಪ್ರೇಮ ಜೀವನದಲ್ಲಿ ಆಶೆಗಳು ಹುಟ್ಟುವ ಬದಲು, ದ್ವೇಷ, ನಿರಾಶೆಗಳು ತಲೆದೋರಿ, ತಮ್ಮ ಮುಂದಿನ ಜನ್ಮವನ್ನೇ ಹಾಳುಮಾಡಿಕೊಳ್ಳಬಹುದು.

ಶಿಶು ಲೈಂಗಿಕತೆಯ ಎರಡನೆ ಅವಸ್ಥೆಯು ಆತ್ಮಕಾಮಾವಸ್ಥೆ (Anto eroteim—self love) ಹಿಂದೆ ಮಕ್ಕಳ ಬೆಳವಣಿಗೆಯ ಸ್ಥಳಗಳ ವಿಚಾರದಲ್ಲಿ ಹೇಳಿದ ಈ ಅಂಶವನು ಗಮನಿಸಿರಿ—ಈ ಅವಸ್ಥೆಯಲ್ಲ ಮಗುವು ತನ್ನನ್ನು ತಾನು ಕಾಮಿಸುವುದು; ಪ್ರೀತಿಸುವುದು. ತನ್ನ ಅವಯವಗಳನ್ನು ನೋಡಿಯೇ ಕಾಮಪ್ರವೃತ್ತಿಯನ್ನು ತೃಪ್ತಿಪಡಿಸಿಕೊಳ್ಳುವುದು. ಮಗುವಿಗೆ ಹೀಗೆ ತೃಪ್ತಿಕೊಡುವ ಶರೀರದ ಅಂಗಗಳನ್ನು ಉದ್ದೀಪನಾಕ್ಷೇತ್ರ (Erotogenic Zones) ಎಂದು ಹೇಳುತ್ತಾರೆ. ಈ ಭಾಗಗಳಲ್ಲಿ ಜನನೇಂದ್ರಿಯಗಳೂ ಕೂಡಿರಬಹುದು; ಆದರೆ ಅವು ಪ್ರೌಢರಿಗೆ ಅನುಭವಕ್ಕೆ ಬರುವಂತಿಲ್ಲ. ಮತ್ತು ಅವು ಮುಖ್ಯವಾಗಿಯೂ ಇರುವುದಿಲ್ಲ. ಈ ಸ್ವರತಿಯ ಮುಂದಿನ ಅವಸ್ಥೆಯು ಆತ್ಮಸಮ್ಮೋಹನ. ಇದು ಸ್ವರತಿ—ಸ್ವಕಾಮದಂತೆಯೇ ಇದ್ದರೂ ಇಲ್ಲಿ ಮಗುವು ಮೊದಲು ತನ್ನ ಕುರಿತು 'ನಾನ' ಎಂದು ಹೇಳದೆ ಅನ್ಯನಂತೆ ಸಂಬೋಧಿಸುತ್ತದೆ. ಉದಾಹರಣೆಗಾಗಿ ಮಗುವಿಗೆ ಹಾಲುಬೇಕು—ಹಣ್ಣು ಬೇಕು ಎಂಬಿತ್ಯಾದಿಯಾಗಿ ತನಗೆ ಬೇಕಾದಾಗ ಹೇಳುತ್ತದೆ. ಮುಂದೆ ತುಸುಕಾಲದಲ್ಲೇ ಅದು ತನ್ನನ್ನು ತಾನು ಪ್ರೀತಿಸಲು ಆರಂಭಿಸುತ್ತದೆ. ಅಖಂಡವಾಗಿ—ಅಂಗಗಳಾಗಿ ವಿಂಗಡಿಸದೆ ಈ ಆತ್ಮಸಮ್ಮೋಹನನ್ನು ನಾರ್ಸಿಸ್ಮ್ (Narsism) ಎಂದು ಆಂಗ್ಲಭಾಷೆಯಲ್ಲಿ ಹೇಳುತ್ತಾರೆ. ಈ ಹೆಸರಿಗೆ ಕಾರಣ ಹೀಗಿದೆ: ಗ್ರೀಕರ ಪುರಾಣದಲ್ಲಿ ನಾರ್ಸಿಸನೆಂಬ ಯುವಕನು ಕೊಳ ಒಂದರ ತಡಿಯಲ್ಲಿ ನಿಂತಿರುವಾಗ ತನ್ನ ಪಡಿನೆಳಲನ್ನು ಕಂಡು ಅದನ್ನು ಮೆಚ್ಚಿ ಅಲ್ಲೆ ಆ ಕೊಳದ ದಂಡೆಯಲ್ಲಿ ತನ್ನ ನೆರಳನ್ನು ನೋಡಿ ಕದಲದೆ ಇದ್ದು ಅಲ್ಲೆ ಸತ್ತನೆಂದೂ ದೇವತೆಗಳು ಅವನನ್ನು ಒಂದು ಹೂವಾಗಿ ಮಾಡಿದರೆಂದೂ ಕತೆಯಿದೆ.

ಗೌದ-ಪೀಡಾಭೋಗಿ ಅವಸ್ಥೆ [Anal-Sadistic]

ಮಗುವು ತನ್ನ ಶರೀರವನ್ನು ಅಖಂಡವಾಗಿ ಪ್ರೀತಿಯ ವಸ್ತುವೆಂದು ತಿಳಿದ ಕೆಲವು ಸಮಯದಲ್ಲಿ ಅಂದರೆ ಪರಿಶೀಲನೆ, ಪರೀಕ್ಷೆಮಾಡಲು ಆರಂಭಿಸುತ್ತದೆ. ಆಗ ಅದು ತನ್ನ ಶರೀರದ ಕಾಮಪ್ರವೃತ್ತಿಯ ಉದ್ದೀಪನಾ ಕೇಂದ್ರಗಳನ್ನು ಹುಡುಕಲಾರಂಭಿಸುತ್ತದೆ. ಈ ಅವಸ್ಥೆಯಲ್ಲಿ ಮಗುವು ದೇಹದ ಬೇರೆ ಬೇರೆ ಭಾಗಗಳಲ್ಲಿ ಅನುಭವಿಸುತ್ತಿದ್ದ ಲೈಂಗಿಕ ಪ್ರವೃತ್ತಿಯ ಸುಖವನ್ನು ಈಗ ರೇಚನೇಂದ್ರಿಯಗಳಲ್ಲಿ ಮಾತ್ರ ಅನುಭವಿಸುವುದು–ಅಂದರೆ ಅದು ಮಲಮೂತ್ರ ವಿಸರ್ಜಿಸುವ ಕೆಲಸದಲ್ಲಿ ಸುಖಿಸುತ್ತದೆ. ಇದರೊಂದಿಗೆ ಬೇರೆ ಮಕ್ಕಳೊಂದಿಗೆ ಹೊಡೆದಾಟ, ಬಡಿದಾಟ ಮಾಡುತ್ತಾ ಇದರಿಂದ ತೃಪ್ತಿಪಡಿಯುತ್ತದೆ. ಹೀಗೆ ಪೀಡಾಪ್ರವೃತ್ತಿ (Sandistic)ಯಿಂದಲೂ ಅದು ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳುತ್ತದೆ. ದೊಡ್ಡವರಿಗೆ ಮಲಮೂತ್ರ ವಿಸರ್ಜನೆಯು ಅಸಹ್ಯ ಕೆಲಸವಾಗಿ ಕಂಡರೂ ಅವರಿಗೆ ಹಾಗೆ ತೋರುವುದಿಲ್ಲ. ಬದಲಾಗಿ ಅವರು ಈ ಕರ್ಮದಲ್ಲೆ ಬಹುಕಾಲ ಕಳೆಯಲು ಆಶಿಸುತ್ತಾರೆ, ಅಂತೆಯೇ ಹೊಡೆದಾಟ, ಬಡಿದಾಟ, ಹಿರಿಯರನ್ನು ಗೇಲಿಮಾಡುವುದರಿಂದಲೂ ಸಂತೋಷಪಡುತ್ತಾರೆ. ಈ ಗುಣಗಳು ಸಹಜವಾಗಿ ಪ್ರಬುದ್ಧರಿಗೆ ಸರಿಯಲ್ಲವೆಂದು ತೋರಿದರೂ ಅವನ್ನು ತಡೆದು ನಿರ್ಬಂಧಿಸಿದರೆ ಮಕ್ಕಳಿಗೆ ಮುಂದೆ ಅನೇಕ ತರದ ಮಾನಸಿಕ ಅಡಚಣೆ ವಿಕೃತ ಅವಸ್ಥೆ ಒದಗಬಹುದು; ಇಲ್ಲಿ ಸಹಜ ಪ್ರವೃತ್ತಿಗಳಿಗೆ ತೃಪ್ತಿದೊರಕದೆ ಮನಸ್ಸಿನ ಒಳಗೆ ಅದುಮಿಇಟ್ಟುದರಿಂದ ಅವು ವಿಷಮಯವಾಗಿ ಪರಿಣಮಿಸಿ ಮನಸ್ಸನ್ನೆ ಕೆಡಿಸುವ ಭಯವಿದೆ ಎಂಬುದನ್ನು ಲಕ್ಷಿಸಬೇಕು. ಇಲ್ಲಿಯೂ ಹಿಂದೆ ಹೇಳಿದಂತೆ ಈ ಗುಣಗಳಿಗೆ ಸರಿಯಾದ ಬೇರೆ ದಾರಿಯೊದಗಿಸಿ ಕೊಟ್ಟು ಅವನ್ನು ತೃಪ್ತಿಪಡಿಸಬೇಕು. ಈ ಎಲ್ಲಾ ಅವಸ್ಥೆಗಳು ಮಗುವಿನ ನಾಲ್ಕೈದು ವರ್ಷ ಪ್ರಾಯದಲ್ಲಿ ತೋರಿಸಿಕೊಂಡು ಮುಗಿಯುತ್ತದೆ.

ಋತುಪ್ರಾಪ್ತಿ-ಪ್ರೌಂಗಡ ವರ್ತನ(Adolescence)

ಮಕ್ಕಳ ವಯಸ್ಸಿನಲ್ಲಿ ೧೨–೧೬ ವರ್ಷಗಳ ನಡುವಿನ ಅವಸ್ಥೆಯು ಲೈಂಗಿಕ ವಿಚಾರದಲ್ಲಿ ಬಹುಮಹತ್ವವುಳ್ಳದು. ಈ ಸಮಯದಲ್ಲಿ ವಿವೇಕಿಗಳಾದ ಹೆತ್ತವರು ತಮ್ಮ ಮಕ್ಕಳ ವಿಚಾರದ ವಿಶೇಷ ವ್ಯಾಕುಲ ತಾಳುತ್ತಾರೆ. ಈ ಅವಸ್ಥಾಂತರದಲ್ಲಿ ಯುವಕ ಯುವತಿಯರನ್ನು ಬಹು ಜಾಗೃತೆಯಿಂದ ನೋಡಿಕೊಂಡಿದ್ದು ಅವರ ಮಾನಸಿಕ ಹಾಗೂ ದೈಹಿಕ ಆರೋಗ್ಯವು ಕೆಡದಂತೆ ನೋಡಿಕೊಂಡಿರಬೇಕು. ಮಾನಸಿಕ ಆರೋಗ್ಯ ಪಾಲನೆಗೆ ಯೋಗ್ಯ ವಿದ್ಯಾಭ್ಯಾಸ, ಸಹವಾಸ, ದೃಶ್ಯ ಇತ್ಯಾದಿ ಕಲ್ಪಿಸಿಕೊಡಬೇಕು. ದೈಹಿಕಹಿತ, ಆರೋಗ್ಯ ರಕ್ಷಣೆಗಾಗಿ ಪೌಷ್ಟಿಕ ಆಹಾರವನ್ನು ಕೊಡಬೇಕು. ಆತ್ಮ ಕಾಮ, ಆತ್ಮಸಮ್ಮೋಹಗಳ ಅವಸ್ಥೆ ಮುಗಿದ ಮೇಲೆ ಸುಮಾ ಎಂಟು-ಹತ್ತು ವರ್ಷಗಳ ಕಾಲದ ಮೇಲೆ ಒದಗಿದ ಈ 'ಋ ಪ್ರಾಪ್ತಿ'ಯ ಅವಸ್ಥೆಯು ಹಿಂದಣ ಕಾಮಜೀವನದ ತರ ತಿಯ ಹಂತಗಳನ್ನು ತಿರುಗೊಮ್ಮೆ ಏರಬೇಕಾಗುತ್ತದೆ. ಅ ದರೆ ಪ್ರೌಂಗಡಾವಸ್ಥೆಯು ಕಾಮ ವಿಚಾರದಲ್ಲಿ ತಿರುಗೊಮ್ಮೆ ವಿಕಾಸನಗೊಳ್ಳುತ್ತದೆ. ಎಳೆಯ ಯುವಕ ಯುವತಿಯ ತಮ್ಮ ೧೦–೧೪ನೇ ಹರೆಯದಲ್ಲಿ ಶೈಶವದ ಎಲ್ಲಾ ವರ್ತನೆ ಳನ್ನು ಪುನರಭಿನಯಮಾಡುವರು. ಈ ಪುನರಾವರ್ತನೆ ಕೆಲಸವು ಈ ಅವಸ್ಥೆಯ ಆರಂಭಕಾಲದಲ್ಲೇ ನಡೆದು ಕಡೆ ಒಂದು ನಿಶ್ಚಿತ ರೂಪವನ್ನು ತಾಳುತ್ತದೆ. ಈ ನಿಶ್ಚಿತ ರೂಪವ ಲೈಂಗಿಕ ಪ್ರವೃತ್ತಿಯು ಜನನೇಂದ್ರಿಯಗಳಲ್ಲಿ ಕ್ರತವಾಗಿ ವುದು. ಇಲ್ಲಿ ಲೈಂಗಿಕ ಪ್ರವೃತ್ತಿಯು ಸಂತಾನಾಭಿವೃದ್ಧಿಯ ಉದಾತ್ತ ಧ್ಯೇಯದಲ್ಲಿ ಐಕ್ಯಗೊಳ್ಳುತ್ತದೆ. (ಸ್ತ್ರೀಯರ ಇದು ಮುಖ್ಯವಾಗಿ) ಲೈಂಗಿಕ ಪ್ರವೃತ್ತಿಯು ಇಷ್ಟರ ವರೆ ತನ್ನ ದೇಹದ ವಿಚಾರದಲ್ಲಿದ್ದುದು ವಿಕಾಸನಗೊಂಡು ಅನ ದೇಹಗಳ ಮೇಲೆ ಹೊರಳುವುದು—ಅಂದರೆ ಅದು ವಿರೋ ಲಿಂಗದ ಮೇಲಿನ ಅನುರಾಗವಾಗಿ ಬದಲಾಗುತ್ತದೆ.

ಒಡಿಪಸ್ ಮತ್ತು ಇಲೆಕ್ಟ್ರಾ ಕೊಂಪ್ಲೆನ್ಸ್
ಮಾತೃಗಾಮಿ ಪಿತೃಗಾಮಿ ಗಂಡ
(Oedepus and Electra Complex)

ವಿರೋಧ ಲಿಂಗವನ್ನು ಪ್ರೀತಿಸುವ ಪ್ರವೃತ್ತಿಯು ಶೈಶ ದಲ್ಲೆ ಆರಂಭವಾಗುತ್ತದೆ ಎಂದು ಕೆಲವು ತಜ್ಞರ ಮತವಾಗಿದೆ ಈ ಗುಣವನ್ನು ವಿಶೇಷ ಗುಣವೆಂದು ಪರಿಗಣಿಸಿ ಮಾತೃಗಾಮಿ ಗಂಡ, – ಪಿತೃಗಾಮಿ ಗಂಡವೆಂದು ಕರೆಯುತ್ತಾರೆ. ಇದನ್ನ ಗ್ರೀಕರ ಕತೆಗಳ ಮೇಲೆ ಹೊಂದಿಸಿ 'ಒಡಿಪಸ್ ಕೊಂಪ್ಲೆನ್ಸ್'- ಇಲೆಕ್ಟ್ರಾ ಕೊಂಪ್ಲೆನ್ಸ್ ಎಂದು ಹೆಸರಿಸಿರುವರು. ಒಡಿಪಸ ನೆಂಬ ರಾಜಕುಮಾರನು ಚಿಕ್ಕ ಶಿಶುವಾಗಿರುವಾಗಲೇ ಜ್ಯೋ ಷ್ಯರ ಮಾತಿನ ಪ್ರಕಾರ ಮುಂದೆ ತಂದೆಯನ್ನು ಕೊಂದು ತಾಯನ್ನು ಮದುವೆಯಾಗುವನೆಂಬ ಭಯದಿಂದ ಹೆತ್ತವರಿಂದ ನಿರ್ಜನ ಅರಣ್ಯ ಪ್ರದೇಶದಲ್ಲಿ ಬಿಸಾಡಿಸಿಕೊಂಡು ಮುಂದೆ ಅಲ್ಲಿಂದ ನೆರೆಯ ಅನ್ಯರಾಜನೊಬ್ಬನಿಂದ ರಕ್ಷಿತನಾಗಿ ಪ್ರಾ ಯಕ್ಕೆ ಬಂದ ಮೇಲೆ ತನ್ನ ತಂದೆಯನ್ನು ಕೊಂದು ಅರಾಜಕ ವಾದ ಆ ರಾಜ್ಯಕ್ಕೆ ರಾಜನಾಗಿ, ವಿಧವೆಯಾಗಿದ್ದ ರಾಣಿ ತನ್ನ ತಾಯನ್ನೇ ಮದುವೆಯಾದನೆಂದೂ, ಮುಂದೆ ಇದು ತಿಳಿದು ಬಂದು ಅವರಿಬ್ಬರೂ ಪಶ್ಚಾತ್ತಾಪದಿಂದ ಆತ್ಮಹತ್ಯೆ ಮಾಡಿ ಕೊಂಡರೆಂದೂ ಒಂದು ಐತಿಹ್ಯವಿದೆ — ಇದೇ ಮಾತೃಗಾಮಿ ಗಂಡ. ಹೀಗೆ ಇಲೆಕ್ಟ್ರಾ ಎಂಬ ಹೆಮ್ಮಕ್ಕಳು ಚಿಕ್ಕ ಶಿಶುವಾಗಿ ರುವಾಗಲೇ ಕಾಡುಪಾಲಾಗಿ ಮುಂದೆ ಪ್ರಾಯಕ್ಕೆ ಬಂದ ಮೇಲೆ ತನ್ನ ತಂದೆಯನ್ನು ನೋಡಿ ಮೆಚ್ಚಿ ತಂದೆಯೆಂದು ತಿಳಿಯದೆ

ಮದುವೆಯಾದಳೆಂಬ ಕತೆಯೂ ಇದೆ.—ಇದೇ ಇಲೆಕ್ಟ್ರಾ ಕೊಂಪ್ಲೆಕ್ಸ್, ಇದನ್ನು ಕೇಳುವ ನಿಷ್ಠಾವಂತ, ಸನಾತನಿಗಳು ಇದು ನಂಬಲಾಗದ, ಎಣಿಸಲಾಗದ ಕಾರ್ಯವೆಂದು ಇದನ್ನು ಹೀನಯಿಸಬಹುದು.

ಚಿಕ್ಕ ಮಕ್ಕಳಾಗಿರುವಾಗ ಗಂಡು ಮಕ್ಕಳು ತಾಯನ್ನು ಹೆಣ್ಮಕ್ಕಳು ತಂದೆಯನ್ನು ವಿಶೇಷವಾಗಿ ಪ್ರೀತಿಸುತ್ತಾರೆ-ಇದಕ್ಕೆ ಕಾರಣ, ಅವರಲ್ಲಿರುವ ಹುಟ್ಟು ಲೈಂಗಿಕ ಪ್ರವೃತ್ತಿಯೆಂದು ಮನಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಆದರೆ ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ನಾವು ಮುಖ್ಯ ಹಿಂದೂ ದೇಶದವರು ಪ್ರಯೋಗಗಳಿಂದ ಕಂಡು ನಿಶ್ಚೈಸಿಕೊಳ್ಳಬೇಕಾಗಿದೆ.—ಒಮ್ಮೆ ಪರೀಕ್ಷೆಗಾಗಿ ೧೬-೨೫ ವರ್ಷ ಪ್ರಾಯದ ಅಧ್ಯಾಪಕ—ವಿದ್ಯಾರ್ಥಿಗಳಲ್ಲ (ಎಲ್ಲರೂ ಗಂಡು) ಈ ಪ್ರಶ್ನೆಯನ್ನು ಹಾಕಿದಲ್ಲಿ ೧೯ ಮಂದಿಯಲ್ಲಿ ೧೨ ಮಂದಿ ತಾಯನ್ನೂ ೭ ಮಂದಿ ತಂದೆಯನ್ನೂ ಪ್ರೀತಿಸುವರಾಗಿ ತಿಳಿಸಿದರು. ಕಡೆಯ ೭ ಮಂದಿಯಲ್ಲಿ ೬ ಮಂದಿ ಅಳಿಯ ಸಂತಾನ ಕಟ್ಟನ್ನು (ಹೆಂಗಸು ಪ್ರದಾನ ಕಟ್ಟಳೆ) ಆಚರಿಸುವರೆಂಬುದನ್ನು ಗಮನಿಸಬೇಕು—(೧೩-೭-೫೧) ತಿರುಗಿ ೧೭—೭—೫೧ರಲ್ಲು ಒಂದು ಪ್ರಾಥಮಿಕ ಶಾಲೆಯ ೯-೧೧ ಪ್ರಾಯದ ೧೦ ಹೆಣ್ಮಕ್ಕಳು ೨೪ ಗಂಡು ಮಕ್ಕಳಲ್ಲಿ ಈ ಪ್ರಯೋಗ ನಡಿಸಿದಲ್ಲಿ ೧೦ ಹೆಣ್ಮಕ್ಕಳಲ್ಲಿ ೬ ತಾಯನ್ನು ೪ ತಂದೆಯನ್ನು, ೨೪ ಗಂಡು ಮಕ್ಕಳಲ್ಲಿ ೨೧ ತಾಯನ್ನು ೩ ತಂದೆಯನ್ನು ಪ್ರೀತಿಸುವರಾಗಿ ತಿಳಿಯಿತು. ಇದರಿಂದ ಮುಖ್ಯವಾಗಿ ತೋರುವುದೇನೆಂದರೆ ಹೆಚ್ಚಾಗಿ ನಮ್ಮ ದೇಶದ ಮಕ್ಕಳು,(ಮದುವೆಯಾಗದ)ಯುವಕರು ತಾಯನ್ನೇ ಹೆಚ್ಚು ಪ್ರೀತಿಸುತ್ತಾರಲ್ಲದೆ, ಗಂಡು ಮಕ್ಕಳು ತಾಯನ್ನು ಹೆಣ್ಮಕ್ಕಳು ತಂದೆಯನ್ನು ಮಾತ್ರ ಪ್ರೀತಿಸುತ್ತಾರೆಂಬ ಮಾತು ನಿಜವಲ್ಲವೆಂದು ಹೇಳಬಹುದು. ಆದರೆ ಸಾಮಾನ್ಯವಾಗಿ ಲೈಂಗಿಕ ಪ್ರವೃತ್ತಿಯು ದೊಡ್ಡವರಂತೆ ಚಿಕ್ಕವರಲ್ಲಿಯೂ ಬಾಲ್ಯದಲ್ಲೆ ವಿರೋಧ ಲಿಂಗದ ಮೇಲೆ ಇರುವ ಕುರುಹು ಕಾಣುತ್ತದೆ ಎಂದು ಮಾತ್ರ ಹೇಳಬಹುದು.

ಫ್ರೂಡನ ಅನುಯಾಯಿಯಾದ ಅರ್ನೆಸ್ಟ್ ಜೋನ್ಸ ನೆಂಬ ಆಂಗ್ಲ ಮನಶ್ಶಾಸ್ತ್ರಜ್ಞನ ಅಭಿಪ್ರಾಯವು ಗಮನಾರ್ಹವಿದೆ. ಅವನು ಹೇಳುವುದೇನೆಂದರೆ 'ಮಕ್ಕಳು ತಮ್ಮ ಸಜಾತಿ ಪಾಲಕರನ್ನೆ—ಹೆಣ್ಣು ತಾಯನ್ನು—ಗಂಡು ತಂದೆಯನ್ನು—ತಮ್ಮ ಆದರ್ಶ ವ್ಯಕ್ತಿಗಳೆಂದು ಇಟ್ಟುಕೊಂಡರೆ ಅವರ ಮುಂದಿನ ಜೀವನವು ಸುಗಮವಾಗುವುದು. ಹೀಗೆ ಇದ್ದರೆ ಶಿಶುವಿನಲ್ಲಿರುವ ಸಜಾತಿ ವೈರವು ಕಡಿಮೆಯಾಗುವುದು; ಮತ್ತು ವಿರೋಧ ಲಿಂಗದ ಮೇಲಿರುವ ಲೈಂಗಿಕ ಕಾಮನೆಯು ಸಕಾಲದಲ್ಲಿ ಪವಿತ್ರರೂಪವನ್ನು ಹೊಂದಿ ಸ್ನೇಹವಾಗಿ ಪರಿಣಮಿಸುವುದು.ಅಧ್ಯಾಪಕನು ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳು ವಿಪರೀತವಾದ, ಅನಾರೋಗ್ಯಕರವಾದ ಮನೋಗಂಡಗಳನ್ನು ಬೆಳೆಯಿಸಿಕೊಳ್ಳದಂತೆ ಜಾಗರೂಕತೆಯಿಂದ ನೋಡಿಕೊಂಡಿದ್ದು ತಿದ್ದಿ ಅವರನ್ನು ಸರಿದಾರಿಗೆ ಹಚ್ಚಬೇಕು.

ಮಕ್ಕಳಿಗೆ ಎಳೆಯ ಹರೆಯದಲ್ಲೆ ಲೈಂಗಿಕ ವಿಚಾರದಲ್ಲಿ ವಿಶೇಷ ಕುತೂಹಲತೆ ಇರುತ್ತದೆ. ಈ ಕಾಲದಲ್ಲಿ ಮಕ್ಕಳಲ್ಲಿ ಇಂತಹ ಗುಣಗಳು ಕಂಡುಬಂದಲ್ಲಿ ಆರೋಗ್ಯಕ್ರಮದಲ್ಲಿ ಉಪದೇಶ ಕೊಟ್ಟು ಅವರ ಕುತೂಹಲ ಗುಣವನ್ನು ತೃಪ್ತಿಪಡಿಸಬೇಕು. ಕೆಲವು ಹೆತ್ತವರು ತಮ್ಮ ಚಿಕ್ಕ ಮಕ್ಕಳೆದುರು ಯಾವ ತರದ ಲೈಂಗಿಕ ವಿಚಾರವನ್ನೂ ಎತ್ತುವುದಿಲ್ಲ—ಕೆಲವು ವೇಳೆ ತಮ್ಮ ಮಾತಿನಲ್ಲಿ ವರ್ತನದಲ್ಲಿ ಇದನ್ನು ಅವರಿಗೆ ತಿಳಿಯುವಂತೆ ಅಡಗಿಸಿ ಇಡುವರು. ಉದಾಹರಣೆಗಾಗಿ ಗಂಡುಮಕ್ಕಳೇ ಇರುವ ಮನೆಯ ಒಂದು ಗಂಡುಮಗುವಿಗೆ ಹೆಣ್ಮಕ್ಕಳ ವಿಚಾರ—ಅವರ ದೇಹರಚನೆ ಇಂದ್ರಿಯಗಳ ವಿಷಯ ತಿಳಿಯದೆ ಇದ್ದು ಈ ವಿಚಾರದಲ್ಲಿ ಕುತೂಹಲ ತಾಳುವುದು ಸ್ವಾಭಾವಿಕವಾಗಿದೆ. ಒಂದು ವೇಳೆ ಇಂಥ ಮಕ್ಕಳು ತಮ್ಮ ಕುತೂಹಲ ತೃಪ್ತಿಗಾಗಿ ಹೆಣ್ಣೆಂದರೇನು? ಏನು ವಿಶೇಷ? ಇತ್ಯಾದಿ ಪ್ರಶ್ನೆಗಳನ್ನು ಹೆತ್ತವರಲ್ಲಿ ಕೇಳಿದರೆ ಶ್ರದ್ಧಾವಂತರಾದ ಹೆತ್ತವರು ಅವರನ್ನು ಗದರಿಸಿ ಆ ವಿಚಾರವನ್ನು ಅವರಿಗೆ ತಿಳಿಸದೆ ರಹಸ್ಯವಾಗಿ ಇಡುವರು. ಈ ಕಾರಣದಿಂದ ಮಕ್ಕಳಲ್ಲಿ ಕುತೂಹಲತೆಯು ತಲೆದೋರಿ ಅನಾರೋಗ್ಯಕರ ವರ್ತನೆಗಳೂ ಅವರಲ್ಲಿ ತಲೆದೋರಬಹುದು. ಆದುದರಿಂದ ಹೆತ್ತವರು ತಮ್ಮ ಮಕ್ಕಳಿಗೆ ಲೈಂಗಿಕ ವಿಚಾರವನ್ನು ಶಾಸ್ತ್ರೀಯ ರೀತಿಯಲ್ಲಿ ಮತ್ತು ಸರಿಯಾದ ಕ್ರಮದಲ್ಲಿ ಸಕಾಲದಲ್ಲಿ ಕಲಿಸಬೇಕು, ಮತ್ತು ಲೈಂಗಿಕ ವಿಚಾರದಲ್ಲಿ ಅವರ ಮನಸ್ಸು ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕು.

ಬಲಿಯಾದರು*

ಲೇಖಕರು: "ಸಾಹಿತ್ಯ ಭಿಕ್ಷು"

(ಏಕನಾದ ಶ್ರುತಿ)

ಗೌರಜ್ಜಿ: (ಹಾಡುತ್ತಾಳೆ) "ಮೊದಲು ನೆನೆವೆನೆ ಸ್ವಾಮಿ ಲಿಂಗನ."

(ಕ್ರಮೇಣ ಧ್ವನಿಯು ಹಿಂದೆ ಹಿಂದೆ ಸರಿದಂತೆ, ಗಂಡು-ಹೆಣ್ಣಿನ ಯುದ್ಧದ ಸ್ವರಗಳು ಮುಂದೆ ಮುಂದೆ ಬಂದು, ನಗುವಿನಲ್ಲಿ ಕೊನೆಗಾಣುತ್ತದೆ. ಅಜ್ಜಿಯು ಏಕನಾದವನ್ನು ಮೀಟುತ್ತಲೇ ಹಾಡು ನಿಲ್ಲಿಸಿ,) .

ಗೌರಜ್ಜಿ: ಲಚುಮಿ! ಚೆನಿಯಾ!

ಚೆನಿಯ: (ಹಾಸ್ಯದ ಧ್ವನಿಯಲ್ಲಿ) ಈ ಅಜ್ಜಿಯನ್ನು 'ಮಾಟಗಾತಿ'ಂತ ಅನ್ನೋದು ಸತ್ಯ ಕಾಣೆ ಲಚುಮಿ!

ಲಚುಮಿ: (ಕೆಳಧ್ವನಿಯಲ್ಲಿ) ಹುಷ್! ಕೇಳಿಸೀತು ಎಲ್ಲಾದರೂ!

ಚೆನಿಯಾ: (ಹಿಂದಿನ ಮಟ್ಟದಲ್ಲೆ) ಕೇಳಿಸಿತಾ ಅಜ್ಜಿ!............ ನೋಡಿದೆಯಾ ಲಚ್ಚಿ! ಕುಂಭಕರ್ಣನ್ ಎಬ್ಬಿಸಿದಾಗ ನಗಾರಿ ಬಡಿದರಂತೆ. ಈ ಅಜ್ಜೀಗೆ ಕೇಳಿಸಬೇಕಾದರೂ ಅಂಗೇ ಅರಚಬೇಕು!

ಗೌರಜ್ಜಿ: (ಅನುಮಾನ ಧ್ವನಿ) ಲಚಮಿ ನಕ್ಕಾಂಗ ಆತಲ್ಲ!

ಲಚಮಿ: (ಏರಿದ ಧ್ವನಿ) ನಾವೇ ಅಜ್ಜಿ!

ಗೌರಜ್ಜಿ: ಏಟಾದರೂ ಹುಡುಗರು! ನಿಮ್ ಬಾಳೇ ಬಾಳು! ನನ್ಬೇನೈತಿ! ನಾನಾಯ್ತು ನನ್ ಏಕನಾದಾಯ್ತು!

(ಮತ್ತೆ ಸಣ್ಣ ಸ್ವರದಲ್ಲಿ ಹಾಡುತ್ತಾಳೆ.)

ಚೆನಿಯಾ: (ಕುಚೇಷ್ಟೆಯ ಸ್ವರದಲ್ಲಿ) ಕಿವಿ ಕೇಳಾಕಿಲ್ಲಾ ಅಂತೀಯಲ್ಲಾ! ಈ ಏಕನಾದದ ಸ್ವರ ಮಾತ್ರ ಕೇಳಿಸ್ತದೋ ನಿಂಗೆ?

ಗೌರಜ್ಜಿ: (ಹೆಮ್ಮೆಯಿಂದ) ನನ್ ಮನಸನ್ ನಾದ ಅದು! ನನಗೆ ಕೇಳಿಸದೆ ನಿನಗೆ ಕೇಳಿಸೀತಾ.

ಲಚಮಿ: (ಹಾಸ್ಯ, ಹೆಮ್ಮೆ ಮಿಶ್ರ) ಕಣ್ ಮಂಜಾದರೂ, ಕಿವಿ ಕೆಪ್ಪಾದರೂ, ಅಜ್ಜಿ ನಾಲಗೆ ಮಾತ್ರ ಮೊಂಡಾಗಾಕಿಲ್ಲ, ಚೆನಿಯಾ!

ಚೆನಿಯ: (ಹಿಂದಿನಂತೆಯೇ) ನಿನ್ ನಾಲಗೆ ಏನ್ ಕಡಿಮೆ—ಕುಡುಗೋಲು!

ಲಚಮಿ: (ಮೈಯಾರದಿಂದ) ಊ!

ಚೆನಿಯ: (ಹೆಮ್ಮೆಯಿಂದ) ಆದರೂ—ಕೋಗಿಲೆ ದನಿ ಕಣಣೆ ನಿಂದು!

ಲಚಮಿ: (ಮೈಯಾರದಿಂದ) ಊ.... ನಿನ್ ದನಿ.... ಕಾಗೇದೇ ಇರಬೇಕು.

ಚೆನಿಯ: (ಹುಸಿಗೋಪದಿಂದ) ಏನಂದೆ? ಮಾಡ್ತೀನಿ ತಡಿ ನಿಂಗೆ!

ಗೌರಜ್ಜಿ: (ಹಾಡು-ಏಕನಾದ ನಿಲ್ಲಿಸಿ) ಅರೆ! ಏ ಲಚಮಿ! ಆಷ್ಟೊಂದ್ ಬಾರ ಆಕ್ಟೇದೇ ನನ್ನವ್ವ!

ಚೆನಿಯಾ: ಅಜ್ಜಿ ಬೆನ್ ಬಿದ್ರೆ ಬಿಟ್ಟೇನಾ ನಾನು!

ಲಚಮಿ: (ಅಣಕ) ಓ!

ಚೆನಿಯಾ: ಅಂಗೋ! "ಮಾವನ ಮಗಳೇ ಕೋಗಿಲೆ ದನಿಯೋಳೆ, ಮೈಯಾರಿ ಸಣ್ಣದನಿಯೋಳೆ! ಮಾವನ ಮಗಳೆ ಮೈಯಾರ ಬಿಟ್ಟು ತೆರ ಹೇಳೆ.

ಲಚಮಿ: (ಅಣಕಧ್ವನಿ) ಕೂಸು! ಕೂಸು!

ಚೆನಿಯಾ: "ತಾವರೆ."

ಲಚಮಿ: (ಲಜ್ಜಾ ಧ್ವನಿ) ಛೆ! ಕೇಳೋರ್ ಏನೆಂದಾರು, ನೋಡ್ದೂರ್ ಏನೆಂದಾರು?

ಚೆನಿಯಾ: (ನಕ್ಕು) ಈ ಕತ್ತಲೆ ಸಮಯದಾಗ, ಈ ಮಾಟಗಾತಿ ಮನೆ ತಾವ್ಕ. ಯಾವಾತ ಬಂದಾನೋ! (ಹೆಮ್ಮೆಯಿಂದ) ಲಚಮಿ! ಇಂಗ್ ಬಾ ಸ್ವಲ್ಪ!

ಲಚಮಿ: (ವಿಶ್ವಾಸ ಧ್ವನಿ) ಏನ್ ಚೆನಿಯಾ?

ಚೆನಿಯಾ: ಸ್ವಲ್ಪ ಆತ್ರಕ್ ಬಾ ಅಂದ್ರೆ!

ಲಚಮಿ: (ನಿಶ್ಚಿತ ಧ್ವನಿ) ಊ ಹು!

ಚೆನಿಯಾ: (ಅಣಕು ಬೆದರಿಕೆ) ಬರಾಕಿಲ್ವಾ!

ಲಚಮಿ: (ಹೆಚ್ಚಿನ ದೃಢತೆಯಿಂದ) ಬ-ರಾ-ಕಿ-ಲ್ಲ, ಅಲ್ಲಿಂದಲೇ ಹೇಳು.

* ಇದೇ ವರ್ಷ ಆಗಸ್ಟ್ ೧೫ನೇ ದಿನ "ಅಳಿಲುಸೇವೆ" ಎಂಬ ಹೆಸರಿನಲ್ಲಿ ಈ ನಾಟಕವು ಮೈಸೂರು ಆಕಾಶವಾಣಿಯಿಂದ ಪ್ರಸಾರವಾಗಿತ್ತು.

: ಧ್ವನಿ) ಲಚವಿ? ಲಚವಿ!
ಅಗೋ! ಅಗೋ! ಈಚಲು. ಮರದ ತಾಯು! ಮಾರ್ ಮಾರುದ್ದ ಜಡೆ ಬಿಡ್ಕೊಂಡು!.... ಕಣ್ಣಲ್ಲಿ ಕೆಂಡ ಕಾರ್ತಾ........ಅಬ್ಬ........ ಲಚವಿಓ!

ಲಚವಿ: (ಗಾಬರಿಯಿಂದ 'ಓ' ಎಂದು ಮುಂದೆ ಧಾವಿಸಿದ ಕಾಲ್ಗಡದ ಸದ್ದು ಕೇಳುತ್ತದೆ.)

ಚೆನಿಯಾ (ನಕ್ಕು) ಅಂಗ್ ಬರಬೇಕು!
(ಹಾಡು) "ಮನೆಯು ಮುಂದಿನ ಗೆಣವೆ
ದನಿಯು ಕೂಡಿಸು ಬಾರೆ!
ದನಿ ಸುದ್ದ ನಿನ್ನ ಗುಣ ಸುದ್ದ । ನಿನ್ನ
ಗುಣ್ಣಾಕ ಕಟ್ಟೇನಿ ಗೆಳೆತನವ ॥

(ದೂರದಿಂದ ಸ್ವಲ್ಪ ಅಸ್ಪಷ್ಟವಾಗಿ 'ಚನಿಯಣ್ಣಾ' ಎಂಬ ಕೂಗು ಎರಡು ಮೂರು ಸಲ ಕೇಳಿಬರುತ್ತದೆ.)

ಲಚವಿ: ಅಗೋ! ಜವರ ಕೂಗತವ್ನೋ ಏನೋ!

ಚೆನಿಯಾ: (ಸಂಶಯ) ಅದ್ಯಾಕೆ ಬಂದಾನೋ ಈ ಹೊತ್ನಾಗೆ!.... ಅದೂ ಈ ತಾನ್ಕೆ....ಊ....ಜವರನಂಗೇ ಕಾಣತೈತೆ.

ಲಚವಿ: (ಗೆದ್ದವಳಂತೆ) ಈಗಲಾದರೂ ಸರುಗುತೀ ಇಲ್ಲೋ ದೂರ!

ಚೆನಿಯಾ: (ಬಿದ್ದರೂ ಮೀಸೆ ಮಣ್ಣಾಗಲಿಲ್ಲೆಂಬವನಂತೆ) ಜವರ ನೇನು ದೂರೇನು........ಏಟಾದರೂ ನನ್ನ ತಮ್ಮನಲ್ಲವಾ....ಆವನಿಗೇನು ತಿಳೀದಾ...

ಲಚವಿ: (ಅವಸರದಿಂದ) ಎಂಗಾರೂ ಆಗ್ಲೀ—ಲಗ್ನಕ್ಕೆ ಮುಂಚೆ........

ಚೆನಿಯಾ: ಅಂಗೇ ಒಸಿ ದೂರ ನಿಂತ್ಕೊ—ಆ ಬಾವೀ ತಾವ ಬರ್ತಾ ಅವ್ನೆ ಜವರ.

ಜವರ. (ಹತ್ತಿರ) ಚೆನಿಯಣ್ಣಾ!

ಚೆನಿಯಾ: ಬಾರ್ಲಾ ಇಲ್ಲಿ! ಯಾಕ್ಲಾ ಅಂಗೋಡಿ ಬಂದೆ.

ಜವರ: (ತೀರ ಹತ್ತಿರ ಏದುಏದುತ್ತಾ) ನಿನ್ ಹುಡುಕ್ ಕೊಂಡು ಕಾಡೆಲ್ಲಾ ಸುತ್ ಬುಟ್ನೀ ಅಣ್ಣಾ! ಹುಷ್! (ನಿಟ್ಟುಸಿರಿಡುತ್ತಾನೆ.)

ಲಚವಿ: ಏನು ಸುದ್ದಿ ಜವರ!

ಜವರ: ಆದೇ—ಮಾರಪ್ಪನ ಪೂಜೈತಿ.

ಲಚವಿ ಚೆನಿಯಾ—ರಾಮಪ್ಪನೋರು ಏನಾದರ ಬಂದಾರೋ ಏನೋ!

ಚೆನಿಯಾ: ರಾಮಪ್ಪನೋರು ಬಂದಾರ ಜವರ?

ಜವರ: ಊ! ಸಂಜೀಗೆ ಬಂದೋರು, ನಿನ್ನ ಏಲ್ಲೆಲ್ಲೋ ಹುಡುಕಿಸಿದ್ರು........

ಚೆನಿಯಾ (ಕಾತರ) ಏನಂದ್ರೂ? ಏನಂದ್ರು........

ಜವರ: ಈ ರಾತ್ರೀನೇ ಅವರೆಲ್ಲೋ ಮರೆಯಾಗ[...] ರಂತೇ........

ಲಚವಿ! ನಿನ್ನ ದಿನಾನೆ "ಬಾವಿತಾವ"........ಅಂ[...] ಏನೇನೋ ಅಂತಿದ್ರಲ್ಲಾ ಚೆನಿಯಾ.

ಚೆನಿಯಾ: ಹೌದು ಲಚವಿ. ಅದಕ್ಕೇ ಇರಬೇಕ[...] ಜವರಾ, ಪೂಜಾರಪ್ಪನೂ ಬಂದಿದ್ನ?

ಜವರ: ಊ! ಇಬ್ಬರೂ ಬಲು ಒತ್ತು ಏನೇನೋ ಮಾತಾಡ್ತಾ ಇದ್ದರು.

ಚೆನಿಯಾ: ಮುಂದೇನಾಯ್ತೊ?

ಜವರ: ಆ ಮೇಕೆ........ರಾಮಪ್ಪನೋರ್ ನನ[...] ಕರೆದು: "ಚೆನಿಯನ್ನ ಎಲ್ಲಾದರೂ ಹುಡ[...] ಕ್ಕೊಂಡ್ ಬಾ ಈ ರಾತ್ರೀನೇ ನಾ ಮ[...] ಯಾಗಬೇಕು" ಅಂದ್ರು.

ಚೆನಿಯಾ: ಎಲ್ಲಾರಿಗೂ ತಿಳಸವ್ರ ಪೂಜೇಂತ?

ಜವರ: ಊ....ಆದೂ ಏಳೂಂದ್ರು:"ಇಲ್ಲೀದೇನ[...] ಚಿಂತೆ ಮಾಡಬೇಡ. ಪೂಜಾರಪ್ಪ ಎಲ[...] ಏರ್ಪಾಡೂ ಮಾಡಿದಾನೇಂತ ಹೇಳೂ[...] ಅಂತಂದ್ರು.

ಚೆನಿಯಾ: ಜವರಾ, ನೀನೀಗಲ್ಲೇ ಓಡಿಹೋಗಿ, ನ[...] ಹಿಂದಲಿಂದಲೇ ಬಂದೇಂತ ಹೇಳು. ಓಡು[...]

ಲಚವಿ: ಅಜ್ಜೀಗೂ ಹೇಳ್ಕೋಗೋ ಜವರ.

ಜವರ: (ಏರಿದ ಧ್ವನಿ) ಅವ್ವೊ!

ಗೌರಜ್ಜಿ: ಮಾರುಽ! ಜವರಾನಾ?

ಜವರ: ಊನವ್ವೊ....ಹೊಂಟೆ ಈಗಲೇ.

ಗೌರಜ್ಜಿ: ಅವಸರೇನು? ಕೂಕ್ಕೋ ಬಾ! ಯಾಕಿಷ್[...] ಹೊತ್ತಾದೆಯೋ ಈ ದಿನ?

ಜವರ: (ಅವಸರದಲ್ಲಿ) ಎಲ್ಲಾನೂ ಹಿಂದಲಿಂದ ಹೇಳ್ತೀನಿ[...] ಬತ್ತೀನವ್ವಾಽ!

ಗೌರಜ್ಜಿ: ಚೆನಿಯಾ....ಏನೋ ಸಂಗತೀಽ? ಏನ[...] ಸಮಾಚಾರ? ಯಾಕಂಗೆ ಓಡಿದ ಜವರ[...]

ಚೆನಿಯಾ: (ಚಿಂತಾಭಾರದಲ್ಲಿ) ಮಹಾತ್ಮರನ್ನ ಮತ್ತೆ ಜೈಲಿ[...] ಹಾಕವ್ರಂತೆ.

ಲಚವಿ: (ಸ್ವಲ್ಪ ಕಾತರತೆಯುಲ್ಲಿ) ಅಂದರೆ, ಇಂದಲಾಗೆ... ಪೋಲೀಸಿನೋರು....

ಚೆನಿಯಾ: (ಗಂಭೀರವಾಗಿ) ಹೌದು ಲಚವಿ....ಪೋಲೀಸು... ಲಾಠಿ ಏಟು....

ಗೌರಜ್ಜಿ: (ಲಚವಿ-ಚೆನಿಯರ ಮಾತು ಕೇಳಿಸದೆ) ಆ ಹರ[...] ದವ್ವನ ಹೊಟ್ಟೆ ಪುಣ್ಯ! ದೇವರಂತ[...] ಮಗನ್ ಹಡೆದಳು!

ಲಚವಿ:(ಮಗುವಿನಂತೆ)ನಾ ನಿನ್ ಕೂಡೆ ಬತ್ತೀನಿ ಚೆನಿಯಾಳ.
ಇಂದನಾಗೆ ನಾನೂ....

ಚೆನಿಯಾ: (ಹೆಮ್ಮೆ) ಊ! ಏಟಾದರೂ ನನ್ ಲಚವಿ ಅಲ್ವಾ ನೀನು!

ಲಚವಿ:(ಚಿಂತೆಯಿಂದ) ಇಂದ್ಯಾಕೋ ದಿಗಿಲಾಗ್ತದೆ ಚೆನಿಯಾಽ

ಚೆನಿಯಾ: (ನಕ್ಕುಬಿಡುತ್ತಾನೆ)

ಲಚವಿ: (ಹೆದರಿದ ಧ್ವನಿಯಲ್ಲಿ) ಅಂಗೆ ನಗಬೇಡ, ಬೇಡ ಚೆನಿಯಾ!

ಚೆನಿಯಾ: ಎಂಗಸಿನ ಮನಸೇ ಇಂಗೆ! ಇಷ್ಟಕ್ಕೆಲ್ಲ ಹೆದರೋಳು—ನನ್ ಕೂಡ 'ಬತ್ತೀನಿ' ಅಂತೀಯಲ್ಲಾ!

(ದೂರದಿಂದ ಹೆಂಡದ ಅಮಲೇರಿದವನ ಕರ್ಕಶ ಕಂಠದಲ್ಲಿ 'ಈಚಲು ಮರದವ್ವಾ' ಎಂಬ ಹಾಡು ಅರ್ಥಂಬಧವಾಗಿ ಕೇಳಿಬರುತ್ತದೆ. ಮುಂದೆ ಲಚವಿ–ಚೆನಿಯರ ಮಾತು ಮುಗಿಯುವುದರಲ್ಲಿ ಆ ಧ್ವನಿ ಅವರ ಹತ್ತಿರವೇ ಕೇಳಿಸುತ್ತದೆ.)

ಲಚವಿ: (ಹೆದರಿ) ಅಗೋ! ಜೋಗಪ್ಪ ಬೇರೆ ಬರ್ತಾವ್ನೆ!

ಚೆನಿಯ: (ಕಠೋರವಾಗಿ) ಚಂಡಾಲ! ಮನೆ ಮುರುಕ!

ಜೋಗಪ್ಪ: ಮಹವ್ವ್ಯಾಽ......ರೇ....ವ್ವಾ......ಯಾರೊ ನಿಂತಿರೋದು........(ಒಮ್ಮೆ ವಾಕರಿಸಿದ ಧ್ವನಿ) ಓ....ಲ....ಚ....ವಿಾ....

ಚೆನಿಯ: (ಕಠೋರವಾಗಿ) ಲೋ ಜೋಗ....ಎಂಡ ಕುಡುದ್ ಬಿಟ್ಟು ಇಲ್ಲೇನಾರಾ ಉಚ್ಚುಚ್ಚಾಗಿಸ....

ಜೋಗಪ್ಪ: (ಅಪಹಾಸ್ಯ-ತಿರಸ್ಕಾರ) ಓಽ! ಪಕ್ಕದಾಗೇ ಒಬ್ಬ ಊರ್ವಸೀ ನಿಂತವಳೇಂತ ಜೋರ್ ಬಂತೋ ನಿಂಗೇಽ....ವ್ವಾ....

ಚೆನಿಯ: (ಉಗ್ರನಾಗಿ) ನಾಲಗೆ ಬಿಗಿಹಿಡಿಯೊಽ! ಮತ್ತೇನಾರಾಽ........

ಜೋಗಪ್ಪ: (ಚೆನಿಯನ ಮಾತಿನ ಲಕ್ಷ್ಯವೇ ಇಲ್ಲದೆ ಹೆಂಡದ ಅಮಲಿನಲ್ಲಿಅಸ್ತವ್ಯಸ್ತವಾಗಿ) ಲಚವಿ!.... ಇಲ್ಲಿ ಬಾ....(ವಿಕಾರವಾಗಿ) ಬಾ ಬಾರೇಽ ಲಚವಿಽ....ನನ್ನ ಕಣ್ಣಾಗಿನ ಬೊಂಬೇ....

ಲಚವಿ: (ರೇಗಿ) ಥತ್! ಬಿಡೋ ನನ ಕೈಯಾಽ.

ಚೆನಿಯಾ (ಕಠೋರವಾಗಿ) ಲೋ ಜೋಗಾಽ.

(ಚೆನಿಯ ಜೋಗಪ್ಪನನ್ನು ಚೆನ್ನಾಗಿ ಥಳಿಸಿದ ಶಬ್ದವೂ, ನಡುನಡುವೆ ಇಬ್ಬರೂ ಒಬ್ಬರನ್ನೊಬ್ಬರು ದೂಷಿಸುವ ಮಾತುಗಳೂ ಕೇಳಿಬರುತ್ತವೆ.)

ಗೌರಜ್ಜ: (ಏಕನಾದದ ಧ್ವನಿ ನಿಲ್ಲಿಸಿ) ಲೋ ಚೆನಿಯಾ! ಲೋ ಜೋಗಾ! ಏನ್ರೋ ನಿಮ್ ಜಗಳಾಪಽ ನಿಲ್ಲಿಸಿರೋ.

(ಹೊಡೆಯುವ, ದೂಷಣೆಯ ಸದ್ದು ನಿಲ್ಲುತ್ತದೆ.)

ಚೆನಿಯಾ: ಲೋ ಜೋಗ, ಈ ದಿನಕ್ಕೇನೂ ಓಗಲಿಂತ ಬಿಟ್ಟದೀನಿ, ಮುಂದೇನಾದರೂ ಇಂಗಾಡ್ದೇಂದ್ರೆ, ಮೈಯಾಗೆ ಒಂದು ಎಮುಕ ಉಳಿಸಾಕಿಲ್ಲ. ನಡೀ ಇಲ್ಲಿಂದ!

ಜೋಗಪ್ಪ (ರೋಷದಲ್ಲಿ) ಹುಂ! ಇನ್ನೇಟು ದಿನಾ ಹಿಂಗಾಡುತೀಯೋ, ನೋಡುತ್ತೀನೋ, ಲೋ, ನಿನ್ನ ಮನ್ಮಥನಾಟಾ!

ಚನಿಯ: (ಅವಸರದಲ್ಲಿ) ನಡೀ ಲಚವಿಾ, ರಾಮಪ್ಪನೋರು ಕಾದಿರುತ್ತಾರೆ.

ಜೋಗಪ್ಪ (ಅಪಹಾಸ್ಯ-ತಿರಸ್ಕಾರ) ಹೋದ! ಉಂ–ಹೋಗಲೇಳು. ಮಾರೀ ಪಾಲಿನ ಕುರೀ ಅಂಗೇ ಓದ್ಳು ಅವಳು. 'ಈಚಲ ಮರದವ್ವಾಽ....'

(ಜೋಗಪ್ಪನ ತಾಳ–ಲಯವಿಲ್ಲದ ಹಾಡು ಹಾಗೆಯೇ ಕರಗುತ್ತದೆ. ಗೌರಜ್ಜಿಯು ಒಂದೆರಡು ಸಲ 'ಜೋಗಾ' 'ಜೋಗಾ' ಎಂದು ಕೂಗಿ..........'

ಗೌರಜ್ಜ: (ಸ್ವಗತ) ಏನು ಹುಡುಗರೋ? ಏನು ಕಾಲಾನೋ! (ನಿಟ್ಟುಸಿರಿಟ್ಟು) ಊ! ಕಾಳಗದ ಕಾಲ ಬೇರೆ ಆತ್ರಾಯ್ತೇನೋ!

(ಏಕನಾದದ ಶ್ರುತಿ) "ಅರಸನೂರ್ ಮನೆಯ ಮುಂದೆ,
ಸಿರಿಯಲ್ ದೇವರ ಗುಡಿಯು ಕಟ್ಟಿ,
ವರವ ಪಾಲಿಸೇ ಊರ ಚಂಗಿ ಮಲ್ಲಮ್ಮ,

(ಅಜ್ಜಿಯ ಹಾಡು ಸಾಗುತ್ತಿರುವಾಗಲೇ ಹಿನ್ನೆಲೆಯಲ್ಲಿ "ಭಾರತ ಮಾತಾಕಿ ಜೈ" "ಇಂಕಿಲಾಬ್ ಜಿಂದಾಬಾದ್!" ಮುಂತಾದ ವೀರವಾಣಿಗಳು ಕೇಳಿಸುತ್ತವೆ.)

ಲಚವಿ: (ಏದುತ್ತಾ) ಅಜ್ಜ! ಅಜ್ಜ!

ಗೌರಜ್ಜ: ಯಾರು? ಲಚವಿ....ಯಾಕೇ ಅಷ್ಟೊಂದು ಗಾಬರಿ!

ಲಚವಿ: ಅಜ್ಜೀ, ನೀನೇ ಗತಿ ನಮಗೆ.

ಗೌರಜ್ಜ: (ಕನಿಕರದಿಂದ) ನನ್ನ ಹತ್ತಿರ ಕೂತುಕೋ ಬಾ; ಅಽ! ಅಂಗೆ! ಯಾಕೆ ಮೈಯೆಲ್ಲಾ ನಡುಗತ್ತೈತೆ. ಹೆದರಿದೆಯಾ ಲಚವಿ!

ಲಚವಿ: (ತಡವರಿಸುತ್ತ) ಊರುನಾಗೆಲ್ಲಾ........ಪೋಲೀಸಿನವರು........

ಗೌರಜ್ಜ: (ಹೆದರಿ) ಪೋಲೀಸಿನೋರು!

ಲಚವಿ: ಊನಜ್ಜ....(ರೋದನ ಧ್ವನಿ) ನನ್ ಚನಿಯನ್ನ....

ಗೌರಜ್ಜ: (ಕಾತರ–ಗಾಬರಿ) ಏನಾಯ್ತು ಲಚವಿ?

ಲಚಮಿ (ರೋದನದಲ್ಲಿ) ಚನಿಯನ್‌ಗೆ—ಬಲಗೈತಾವ....

ಗೌರಜ್ಜಿ: (ಹಿಂದಿನಂತೆಯೇ) ಎಲ್ಲವನೆ ಲಚಮಿ?

ಲಚಮಿ (ಹಿಂದಿನಂತೆಯೇ) ಇಗೋ....ಇಲ್ಲಿ....ನಿನ್ ಮುಂದೇ....ಅಂಗೇ ಎಗಲ್ ಮೇಲೆ ಅವನ್ ಕೈ ಹಾಕ್ಕೊಂಡು,ಹೊಳೆ ದಂಡ್ಯಾದ ಮರಗಳ ಹಿಂದಿಂದ ಇಲ್ಲೀಗೆ ಬಂದೆ.

ಗೌರಜ್ಜಿ: ಎಲ್ಲಿ? ... ಇದೇನು ಚೆನ್ನಿ! ಚೆನಿಯಾ ಎದೆಮ್ಯಾಗೆ ಈ ಬೆಚ್ಚಗೆ ನೀರು!

ಲಚಮಿ: (ದುಃಖ ಮಿತಿಮೀರಿ) ನೀರಲ್ಲ ಅಜ್ಜೀ, ನೀರಲ್ಲ.... ರಕ್—ತಾ....

ಗೌರಜ್ಜಿ: (ಗಂಭಿರ ಧ್ವನಿಯಲ್ಲಿ) ಒಳಕ್ಕೆ ಬಾ. ಹೊತ್ ಮಾಡಬೇಡ. ಅಳ್ತಾ ಕೂಡೋಕ್ ಸಮಯಾ ಇಲ್ಲ ಲಚಮಿ, ಚೆನಿಯನ್ ಹಾಗೇ ಎಬ್ಬಿಸಿ....

ಚೆನಿಯ (ನರಳುತ್ತಾ) ನೀರು....ನೀರು....ಆಃ!....

ಗೌರಜ್ಜಿ:(ಮಗುವನ್ನು ಸಂತೈಸುವ ತಾಯಿಯ ಕರುಣೆಯಿಂದ) ನೀರು ಯಾಕೋ? ನನ ಕಂದಾ! ನಿನ್ನಜ್ಜಿ ಮನೆಯಾಗೆ ಹಾಲು ಕುಡಿಯೋ....

(ಚೆನಿಯನನ್ನ ಒಳಕ್ಕೆ ಕರೆದೊಯ್ವ ಶಬ್ದ ; ಬಾಗಿಲು ತೆರೆದ ಶಬ್ದ.)

ಗೌರಜ್ಜಿ: (ಸಮಾಧಾನದಿಂದ) ಆ! ಅಂಗೇ....ಅಂಗೇ....

(ಬಾಗಿಲು ಮುಚ್ಚಿದ ಶಬ್ದ. ಒಂದೆರಡು ಸೆಕೆಂಡ್‌ಗಳ ಕಾಲ ಮೌನ. ಅನಂತರ ಮತ್ತೆ ಬಾಗಿಲು ತೆರೆದ ಶಬ್ದ. ಗೌರಜ್ಜಿಯ ಏಕನಾದದ ಸದ್ದು ಕೇಳಿಸುತ್ತದೆ.)

ಚೆನಿಯಾ (ನರಳುತ್ತಾ) ಆ!....ಯಾರು....ಲಚಿಮಿ!

ಲಚಮಿ (ಪ್ರೇಮಪೂರ್ಣವಾಗಿ) ನಾನೇ!....ನಾನೆ ಚೆನಿಯಾ.

ಚೆನಿಯಾ: ನಾನೆಲ್ಲಿದೇನೆ ಲಚಮಿ.

ಲಚಮಿ (ಹಿಂದಿನಂತೆಯೇ) ಗೌರಜ್ಜಿ, ಗುಡಿಸಲಿನಲ್ಲಿ ಚೆನಿಯಾ....ಇನ್ನೇನೂ ಚಿಂತಿಲ್ಲ,

ಚೆನಿಯಾ (ಸ್ವಲ್ಪ ಅಸಮಾಧಾನದಲ್ಲಿ) ನೀನಿನ್ನೂ ಇಲ್ಲೇ ಇದೀಯಾ ಲಚಮಿ?

ಲಚಮಿ (ಸ್ವಲ್ಪ ಅಭಿಮಾನ ತುಂಬಿ) ಊ! ನನ್ನ ದೇವರ ತಾನೇ ಇದೀನಿ.

ಚೆನಿಯಾ (ನೊಂದ ಧ್ವನಿಯಲ್ಲಿ) ನೀನು ಪಾಪಿ ಲಚಮ್ಮಿ, ಪಾಪಿ....ನೀನು,

ಲಚಮಿ (ಆಶ್ಚರ್ಯ-ಕಾತರ ಧ್ವನಿಯಲ್ಲಿ) ಚೆನಿಯಾ?!

ಚೆನಿಯಾ: ಇಲ್ಲಿ....ನೀನು....ನನ್‌ತಾವ ಕೂತ್ರೆ.... ಅಲ್ಲಿ....ನಿನ್ನವ್ವ ಏನಾದಳೊಂತ ಚಿಂತೇನೆ ಇಲ್ಲ....ನಿನಗೆ. ಅವಳ ಮೆಲೂ ಕಣ್ಣಿಟ್ಟತೆ ಆ ರಾಕ್ಸರದ್ದು....

ಲಚಮಿ: (ಹಠಹಿಡಿದ ಮಗುವಿನಂತೆ) ಅಪ್ಪನದೇನೂ ಚಿಂತೆ ಚೆನಿಯಾ.

ಚೆನಿಯ: (ಸ್ವಲ್ಪ ಕೋಪದಿಂದಲೆ) ನಿನ್ನಪ್ಪನ್ನನೀನೇ ಕೊಲ್ಲೀ ಲಚ್ಮಿ! (ಸಮಾಧಾನ ಧ್ವನಿಯಲ್ಲಿ) ಸ ದೇನೂ ಚಿಂತೆ ಮಾಡಬ್ಯಾಡ....ಈ ಗ ಸಿಲ ತಾವ ಯಾರೂ ಬರಾಕಿಲ್ಲ..... ನಿನ್ನಪ್ಪನ್ನನೋಡಿಕೊಂಡು ಬಾ,ಹೋಗ

ಲಚಮಿ: ಆಗಲೀ ಚೆನಿಯಾ.

(ಲಚಮಾಳ ಧ್ವನಿ ಹತ್ತಿರ ಬರುತ್ತದೆ.)

ಅವ್ವಾs....ಅವ್ವಾ....

ಗೌರಜ್ಜಿ: ಏನು ಲಚಮಿ?

ಲಚಮಿ: ನಾನೋಗಿ ನನ್ನವ್ವನ್ನ ನೋಡಿಕೊಂ ಬರಬೇಕಂತೆ.

ಗೌರಜ್ಜಿ: ಓಗಪ್ಪ ಓಗು! ಚೆನಿಯನಾ ಚಿಂತೆ ನನ ಬಿಡು. ಓಗಿ ಬಾ, ಓಗು. ಒಳ್ಳೆ ಆಗ್ತದೆ ...ಓಗಿ ಬಾ.

ಚೆನಿಯಾ: (ಕಾತರದಿಂದ) ಲಚ್ಮಿ!

ಲಚಮಿ: (ಗಾಬರಿಯಾಗಿ) ಯಾಕೆದ್ದು ಬಂದೆ ಚೆನಿಯಾs.. ಆಯಾಸಾಗುತ್ತದೆ.

ಚೆನಿಯಾ: (ಅವಳ ಮಾವನ ಲಕ್ಷ್ಯವಿಲ್ಲದೆ) ಇಗೋ ನನ್ನ ಮೇಲೆ ಕೈ ಹಾಕು.

ಲಚಮಿ: ಇಗೋ...........(ಶಂಕೆಯಿಂದ) ಯಾ ಚೆನಿಯಾ?

ಚೆನಿಯಾ: (ಗಂಭೀರ ಧ್ವನಿ) ಆಣೆ ಮಾಡಿ ಹೇಳು....ಮಾ ವ್ವನ ಸಾಕ್ಷಿ, ಮಹಾತ್ಮರಾಣೆ....ಪೋಲಿ ನೋರು ಏನಾರ....ನಿನ್ನ....ಪೀಡಿಸಿದರೆ.

ಲಚಮಿ: (ನೊಂದ ಧ್ವನಿ) ಚೆನಿಯಾ....ಇಂತಾ ಮಾತಾ ನನ್ನ ಕರುಳು ಕತ್ತರಿಸಬೇಡಾ. ಇನ ನನ್ನ ನೆಚ್ಚಿಕೆ ಇಲ್ಲವಾ ಚೆನಿಯಾ ನಿಂಗೆ?

ಚೆನಿಯಾ: (ತಾತ್ಸಾರ ಮಿಶ್ರ) ಏಟಾದರೂ ಗೂಗೇ ಕೂಗಿದರ ಹೆದರೋ ಎಂಗಸು....ಇನ್ನೂ.....ಆ....

ಲಚಮಿ: (ಅಭಿಮಾನ-ಕಾತರ) ನನ್ ಪ್ರಾಣಾನೇ ಈಡ ದ್ರೇನಿ ಚನಿಯಾs! ನನ್ನೇ ಬಲಿ ಕೊಡ್ತೇನ ನಿನ್ ಮಾತ್ರ ಬಿಟ್ಟು ಕುಡಾಕಿಲ್ಲ!

ಚೆನಿಯಾ: (ಉದ್ವೇಗದಿಂದ) ನನ್ ಲಚಮಿ: ಓಗಿ ಬಾ, ಸು ವಾಗಿ ಬಾ! ಕಣ್ ತೂಗದಾ ಐತೆ....ನಿದ ಬರೋ ಅಂಗಾಗ್ತದೇ.

ಲಚಮಿ: (ವಿಶ್ವಾಸದಿಂದ) ಅಂಗೇ ಮಲಕ್ಕೋ ಚೆನಿಯಾ.. ಅವ್ವಾ!

ಗೌರಜ್ಜಿ: (ರಾಗವಾಗಿ) ಓಗೊವ್ವಾಂದ್ರೆ

ಲಚವಿ: ನಾ ಓಗ್ತೀನಜ್ಜಿ....(ಬಿಕ್ಕಿ ಬಿಕ್ಕಿ ಅಳುತ್ತಾ) ನನ್ ಈ ಪ್ರಾಣಾನ ನಿನ್ನ ಕೈಲಿ....

ಗೌರಜ್ಜಿ: (ಸಮಾಧಾನ) ಅಳಬಾರದು ಲಚವಿ....ಓಗಿ ಬಾವ್ವ ....ನೀನೇಟಾದ್ರೂ ಲಚವಿ ಅಲ್ವಾ....

ಲಚವಿ: (ಅನುಮಾನದಿಂದ) ಚೆನಿಯನ್ನ....

ಗೌರಜ್ಜಿ: ನಡೀಂದ್ರೆ.

(ಲಚವ್ಮಿ ಹೊರಟುಹೋಗುವ ಕಾಲ ಕಡಗದ ಸಪ್ಪಳ.)

ಚೆನಿಯಾ! ಪಾಪ! ಎಷ್ಟು ಸೊರಗಿದಾನೋ ಏನೋ, ಪೂರ್ವಜನ್ಮದ ಪುಣ್ಯ ಇರಬೇಕು ಇಂಥ ಮಕ್ಕಳನ್ನು ಪಡಿಯುಲಿಕ್ಕೆ....ಎಳೀ ಮಗೀನಂಗೆ ನಿದ್ದೆ ಮಾಡ್ತಾ ಅವನಲ್ಲ.....ಉ......ಬಾಕಲಲ್ಲಾದರೂ ಕೂಡೋಣ—[ಏಕನಾದ ಧ್ವನಿ]....ಇದ್ದೀತಲ್ಲ ನನ್ನ ಜೀವ ಜೀವಾಳ ಈ ಏಕನಾದ ....ಎಲ್ಲಾ ಆ ಉಚ್ಚಂಗಿ ಕೃಪೆ!

(ಹಾಡು): ಚೆಲುವಯ್ಯ ಚೆಲುವೋ ತಾನಿಂ ತಂದಾನಾ
ಚಿನ್ಮsಯ ರೂಪೇ ಕೋಲಣ್ಣ ಕೋಲೇ

(ಗೌರಜ್ಜಿಯ ಹಾಡು ಸಾಗಿರುವಾಗಲೇ, ಮೊದಮೊದಲು ಅಸ್ಪಷ್ಟವಾಗಿ, ಅನಂತರ ಸ್ಪಷ್ಟವಾಗಿ ಜನರು "ಅಲ್ಲೇ...ಅದೇ ಬಲಗಡೇಗೆ ಆ ದಿಣ್ಣೆ ಪಕ್ಕಕ್ಕೇ......"ಎಂಬ ಮಾತು ಕೇಳಿ ಬರುತ್ತದೆ.)

ಪೋ. ಇ: (ಅಧಿಕಾರೀ ಧ್ವನಿ) ಏ ಮುದುಕವ್ವs!

ಗೌರಜ್ಜಿ: ಯಾರ್ರಾ ಅದುs?

ಪೋ. ಇ: ಎದುರಿಗೇ ನಿಂತಿದೇವೆ. ಕಾಣೋದಿಲ್ಲವೆ?

ಬೋರ: ಕಣ್ಣು ಅಷ್ಟಕ್ಕಷ್ಟೇ, ಸಾಹೇಬ್! (ದೊಡ್ಡ ದನಿಯಲ್ಲಿ) ಓ ಗೌರವ್ವಾ!

ಗೌರಜ್ಜಿ: (ಸಿಡುಕಿನಿಂದ) ಯಾರ್ರಾ ಅದು. ಒತ್ತಲ್ಲ ದೂತ್ತನಾಗಿ ಮನೇ ಮುಂದೆ ಬಡಕೊಳ್ಳೊವ್ನು?

ಬೋರ: (ಹಿಂದಿನಂತೆಯೇ) ಇನ್‌ಸ್ಪೆಕ್ಟರು ಸಾಹೇಬರು ಬಂದವ್ರೇ ಅಜ್ಜೀ.

ಗೌರಜ್ಜಿ: (ಚಕಿತಳಾಗಿ) ಇನ್‌ಸ್ಪೆಕ್ಟರು? ಅವರು ಯಾರಪ್ಪೋ? ಏ ಯಾರಾದರೇನ್. ಅಲ್ಲೋ ಬೋರಪ್ಪಾ, ನಿನ್ ಪ್ರಸ್ನೆಕೇಳಾಕೇನೂ ಹೊತ್ತು ಗೊತ್ತಿಲ್ಲ?.... ಈ ಅಮಾಸೀ ರಾತ್ರಿಯಾಗಾ ಬರೋದು?

ಬೋರ: (ನಕ್ಕು) ಪ್ರಶ್ನೆ ಕೇಳಾಕಲ್ಲವ್ವೋ?

ಪೋ. ಇ: (ಅಧಿಕಾರೀ ವಾಣಿ) ಏ ಮುದುಕವ್ವ....ನಿಂದೇನಾ ಈ ಗುಡಿಸಲು.

ಗೌರಜ್ಜಿ: (ಅಣಕವಾಗಿ) ಇಲ್ಲಪ್ಪಾ ಇಲ್ಲ ...ನನ್‌ದೆಂಗಾದೀತು ಹೇಳು.

ಪೋ. ಇ: (ಹಿಂದಿನಂತೆಯೇ) ಯಾರವರೇ ಮನೆಯಾಗೆ....?

ಗೌರಜ್ಜಿ: (ಕೆಣಕಿದಂತೆ ರೇಗಿ) ನಿಂಗೇನೂ ಐಲ್‌ಪೈಲೋ.... ನನ್ ಮನೆಯಾಗ ಯಾರವರೆ?....ಉ.... ಮುದುಕರನ್ ಕಂಡ್ರೆ ನಿಮ್ಮಂಥ ಹುಡುಗರೆಲ್ಲರಿಗೂನೂ ತಮಾಷೀನೇs....

ಪೋ. ಇ: (ದರ್ಪದಿಂದ) ಬಾಯಿ ಬಿಡುತ್ತೀಯೋ, ಇಲ್ಲದಿದ್ದರೆ ಬೇಕೋ....

ಲಚವಿ: (ಗಂಭೀರವಾಗಿ ಎತ್ತರದ ಧ್ವನಿಯಲ್ಲಿ) ಅಜ್ಜೀಗೇನಾದರೂ ಕೋಲು ತಾಕ್ಸೀಯಾ, ಜೋಕೆ!

ಗೌರಜ್ಜಿ: (ಆಶ್ಚರ್ಯ, ಭೀತಿ ಮಿಶ್ರ) ಲಚವೀ!

ಪೋ. ಇ: (ದರ್ಪದಿಂದ) ವ್ಹಾ! ಇಷ್ಟು ಹೊತ್ತೂ ಮಾತಿಲ್ಲದೇ ಇದ್ದೆ! ಈಗ ಬಂತು ನಾಲಿಗೆ ನಿಂಗೆ!

(ಆಲೋಚಿಸುವವನಂತೆ)....ಊ ...ಏನೋ ಇದೆ ನಿಂಗೂ.... ಇವಳಿಗೂ ...

ಲಚವಿ: (ಅವನತ್ತ ಲಕ್ಷ್ಯವೇ ಇಲ್ಲದೆ) ಎಲ್ಲಾ ಬಿಟ್ಟು ನನ್ನ ಹಿಡಕೊಂಡ್ರುವ್ಹಾ ಈ ಪಿಶಾಚಿಗಳು.... ಆ ಗೌಡರ ಮಗ ಚೆನಿಯನ ವಿಚಾರ ಎಲ್ಲಾ ನಂಗೇ ಗೊತ್ತೈತಂತೆ.... ಗೌಡರ ಮಕ್ಕಳಿಲ್ಲಿ....ನಾವೆಲ್ಲವ್ವ? ಈಟಾದರೂ ಯೋಚನೆ ಮಾಡೋಷ್ಟು ಬುದ್ಧಿ ಐತಾ ಈ ಜನಕ್ಕೆ....!

ಪೋ. ಇ: ಬೋರಯ್ಯ ರಾತ್ರೀ ಛಳೀಗೆ ಈ ಮುದುಕೀ ಬುದ್ಧೀನೂ ತಣ್ಣಗಾಗಿದೆ. ನಾಲ್ಕು ಬಿಗಿದು ಆ ಬುರುಡೇಗೆ ಶಾಖ ಕೊಡೋ, ಏನ್ನೋಡ್ತೀಯ.

(ಬೂಡ್ಸು ಕಾಲಿನಿಂದ ಒದ್ದ ಶಬ್ದ; ಮುದುಕಿ ಗೌರಜ್ಜಿ ನರಳುತ್ತಾಳೆ.)

ಲಚವಿ: ಅಯ್ಯೋ!

ಪೋ. ಇ: ಆ ಮುದುಕೀನ ಈಚೆ ಪಕ್ಕದಲ್ಲಿ ಹಾಕಿ, ಒಳಗೆಲ್ಲಾ ಹುಡುಕೋ ಬೋರ.

ಬೋರ: Yes Sir, (ಬಾಗಿಲು ತೆಗೆದ ಶಬ್ದ. ಒಂದೆರಡು ಸೆಕೆಂಡು.)

ಪೋ. ಇ: ಎಷ್ಟು ಹೊತ್ತೋ? ಏನಾದರೂ ಕಾಣುತ್ತದೆ ಯೇನು?

ಬೋರ: ಏನೂ ಇಲ್ಲ ಸಾರ್.

ಪೋ. ಇ: ಚಾವಡಿಗೆಳೆದು ಇವಳಿಗೆ ನಾಲ್ಕು ಬಿಗಿದರೆ, ಎಲ್ಲಾ ಹೊರಬೀಳುತ್ತದೆ. (ಅನುಮಾನ ಸ್ವರ) ಹಾಗಾದರೆ, ಅವನು ಹೇಳಿದ್ದೆಲ್ಲಾ ಬರೇ ಸುಳ್ಳೆಂತೀಯಾ ಬೋರ.

ಬೋರ: ಏನೋ ಸಾರ್!

ಪೋ. ಇ: (ನಿಶ್ಚಿತ ಸ್ವರ) ಊಹು! ಇರಲಾರದು. ಇನ್ನೂ ಸ್ವಲ್ಪ ಹೊತ್ತು ನೋಡೋಣ ತಡಿ.
(ಒಳಗಿಂದ ನರಳಿದ ಶಬ್ದ.)
ಲಚಮಿ: (ಗಾಬರಿಯಾಗಿ) ಆ!
ಪೋ. ಇ: (ಥಟ್ಟನೆ) ಏನದು?....ಬೋರಾ,....ಕೇಳಿಸಿತಾ?
ಬೋರಾ: ಹೌದು....ಸಾರ್!
ಪೋ. ಇ: ಹಿಡಿದುಕೊ!
ಬೋರಾ: ಆ! ಇಲ್ಲೇ ಇದಾನಲ್ಲ ಸಾರ್. ಅವನ ಮಾತು ಸತ್ಯ ಸಾರ್.
ಲಚಮಿ: (ಉದ್ವೇಗದಿಂದ) ಚೆನಿಯಾ!
ಚೆನಿಯಾ: (ಉದ್ವೇಗದಿಂದ) ಲಚಮಿ!...ನೀನು!...ಕಡೆಗೂ... ನೀನೇ....
ಲಚಮಿ: (ಏರಿದ ಧ್ವನಿಯಲ್ಲಿ) ನಾನಲ್ಲ, ನಾನಲ್ಲ ಚೆನಿಯಾ, ನಾನಲ್ಲ.
ಚೆನಿಯಾ: (ನಿರಾಶೆ) ಇನ್ನು ಏನಾದರೇನು ಲಚಮಿ! ನೀನೇ ನನ್ನ ಕ....
(ತಾರಕವಲ್ಲಿ) ಲಚ್ಮೀ, ಇನ್ನು ಬಾಳೋಕಿಂತ, ನೇಣಿನಲ್ಲಿ ಜೀವ ಬಿಡೋದೇ ಎಷ್ಟೋ ಸುಖಾ.... ಎಂಥ ಕೆಲಸ ಮಾಡಿದೆ.
ಲಚಮಿ: ದುಡುಕಬೇಡ ಚೆನಿಯಾ. ಸ್ವಲ್ಪ ತಡಿ. ಯೋಚನೆ ಮಾಡು.
ಚೆನಿಯಾ: ಇನ್‌ಸ್ಪೆಕ್ಟರೇ, ನಿಮಗೆ ಹೇಗೆ ಗೊತ್ತಾಯ್ತು?
ಪೋ. ಇ: (ಹಾಸ್ಯಾಸ್ಪದವಾಗಿ ನಗುತ್ತಾ) ಹೇಗೆ? ಈ ನಿನ್ನ ಲಚಮಿೂನ?
ಲಚಮಿ: (ಹೆದರಿ ದಿಕ್ಕು ತೋಚದೆ) ಆ! ಏನಂದಿರಿ!
ಚೆನಿಯಾ: ನಾ ಎಡರ್‌ದಂಗೇ ಆಯ್ತು! ಏಟಾದರೂ ಎಂಗಸ! ಆದರೂ....ಲಚಮಿೂ....ನೀನು
ಲಚಮಿ: ನನ್ ಮಾತಲ್ಲಿ ವಿಶ್ವಾಸ ಇಡು ಚೆನಿಯಾ ದೇವರಾಣೆ, ಮಾತ್ಮರಾಣೆ, ನಿನ್ನಾಣೆ ಚೆನಿಯಾ, ನಾನಲ್ಲ.
ಚೆನಿಯಾ: ಊ....ನಂಬಿದೇಂತ ಅಂದರೂ ಸರಿಯೇ! ಆ! ನೋವು!
(ದೂರದಿಂದ ಜೋಗಪ್ಪನ ಕುಡಿದ ಹಾಡು "ಈಚಲು ಮರದವ್ವಾ" ಅಪಸ್ವರದಲ್ಲಿ ಕೇಳುತ್ತಾ ಹತ್ತಿರಕ್ಕೆ ಬರುತ್ತದೆ.)
ಲಚಮಿ: ಸ್ವಾಮಿ, ನಿಮ್ಮ ಪಾದಕ್ಕೆ ಬೀಳ್ತೀನೆ, ನನ್ ಸ್ವಾಮಿ ತಾವ್ ಬಿಡೊ
ಪೋ. ಇ: ಊ....ಹೋಗು.
ಲಚಮಿ: ಚೆನಿಯಾ! ನನ್ ತೊಡೇ ಅಂಗೇ ಸ್ವಲ್ಪ ತಲೆಯಿಟ್ಟು ಮಲಕ್ಕೋ!

ಚೆನಿಯಾ: (ಉದ್ವೇಗದಿಂದ) ನಿನ್ ತೊಡೆ ಮಾ... ಬೆಂಕಿ ಐತೇ ಲಚಮಿ....ನನ್ ತಲೆ ಎಲ್... ದರೂ ಸಿಡಿದು ಹೋದೀತು ಆ ಕಾವಿಗೆ... ನೀ ನಿಂಗೆ ಆ ಮಹಾತ್ಮರಿಗೆ, ದೇವರಿ... ಮೋಸ........
ಲಚಮಿ: ಬೇಡ! ಬೇಡ ಚೆನಿಯಾ.
ಜೋಗಿ: (ಜೋರಾಗಿ ನಗುತ್ತಾನೆ) ದೋಸ್ತ್, ನನ್ ಮಾ... ಸತ್ಯ ಕಂಡೆಯಾ ಈಗಲಾದರೂ!.. ಲೋ ಚೆನಿಯಾ, ಈಗಲಾದರ... ತಿಳೀತಾ ಈ ಜೋಗಪ್ಪನ ಪೌರಸಾ!
ಲಚಮಿ: ಜೋಗಪ್ಪಾ!
ಬೋರಾ: ಹೌದೋ ಜೋಗಾ! ನಿನ್ನಂತೋರು ಇ... ದಿದ್ದರೆ ಇಷ್ಟು ದಿನಾ ಉಳೀತಿತ್ತಾ ನವ... ಸರ್ಕಾರ?
ಚೆನಿಯಾ: ರಾಮಪ್ಪನೋರ ಮಾತು ಸತ್ಯ. ನಿಮ್ಮ... ತೋರು ಇದ್ದದ್ದಕ್ಕೇ ನಮ್ಮ ದೇಶ ಇಂಗ... ಯ್ತು. ಒಬ್ರು ದುಡ್ಡಿಗೆ ಮಾರ್ಕೊಂಡ್ರೆ...
ಪೋ. ಇ: (ರೇಗಿ) ಮುಚ್ಚೊ ಬಾಯಿ! ಬದ್ಮಾಷ್! ಮ... ನೀತಿವಂತ!
ಚೆನಿಯಾ: (ಅವನ ಮಾತಿನತ್ತ ಲಕ್ಷ್ಯವಿಲ್ಲದೆ) ಇನೊ... ಬ್ರು ಹೆಂಡದ ಗುಲಾಮ್ರು ಇಬ್ಬರೂ ಸೇ... ಹೆತ್ತ ತಾಯಿನೇ ಸಂತೇಲಿ ಮಾರ್ಕೊ... ಡ್ರು....
ಲಚಮಿ: (ಬಿಕ್ಕಳಿಸುತ್ತಾ) ಅಂಗೆಲ್ಲಾ ಮಾತಾಡಬೇಡ ಚೆ... ಯಾ, ಆಯಾಸಾಗುತ್ತದೆ ನಿನಗೆ.
ಚೆನಿಯಾ: (ದುಃಖದಲ್ಲಿ) ಲಚಮಿೂ, ನನ್ ಕಾಲ ತೀರ್... ಬಂತು. ಅಗೋ, ಧರ್ಮರಾಯ ಕರೀತವ್ನೆ
ಲಚಮಿ: (ಎದೆಯೊಡೆದು) ಬೇಡ, ಬೇಡ ಚೆನಿಯಾ
ಚೆನಿಯಾ: (ಮೇಲುಸಿರಿಡುತ್ತಾ) ನೀರು....ನೀರು....
ಲಚಮಿ: ಇಗೋ ಚೆನಿಯಾ, ತಗೋ! ನೀನು ಬದುಕಬೇಕ... ಚೆನಿಯಾ ನನಗಲ್ಲದಿದ್ದರೂ, ನಮ್ಮ ದೇ... ಕ್ಕಾದರೂ ಬದುಕಲೇಬೇಕು.
ಚೆನಿಯಾ: (ಗಂಭೀರ-ಶಾಂತ) ಸಾವ್ ಮುಂದೆ ಬಂದಾಗ... ಅಡ್ಡ ಬರಬಾರದೂ, ಲಚಮಿ. ನಂದ... ತೂ ತೀರ್ತು. ನಿನ್ ಹೊಟ್ಟೇಲಾದರು... ರಾಮಪ್ಪನೋರಂಥ ಮಗ ಹುಟ್ಟಲಿ... ನೋಡು....
ಲಚಮಿ: (ರೋದಿಸುತ್ತಾಳೆ).
ಚೆನಿಯಾ: (ನಗುತ್ತಾ) ಲೆ! ನಿನ್ ಕಣ್ಣಾಗೆ ನೀರಾ ಲಚಮಿ... ಊರಿಗೆ ಹೋಗೋರ್ನ ಕಣ್ಣೀರಾಗ ಕಳಿಸ...

ವರದಕ್ಷಿಣೆ

ಅಥವಾ

ಹೊರಲಾಗದ ಹೊರೆ

[ಲೇಖಕರು: ಶ್ರೀ। ಬೊಳಂತೂರು ಕೃಷ್ಣ ಪ್ರಭು, ಬಂಟ್ವಾಳ.]

ಅಪರಾಹ್ನ ನಾಲ್ಕು ಗಂಟೆಯ ಸಮಯ. ಮದ್ರಾಸ ಮೈಲ್, ಹೊಗೆ ಬಂಡಿಯು ಮಂಗಳೂರಿಗೆ ಬಂದು, ನಿಲ್ದಾಣದಲ್ಲಿ ನಿಂತುಕೊಂಡಿತು. ಪ್ರಯಾಣಿಕರು ತಮ್ಮ ತಮ್ಮ ಸಾಮಾನುಗಳನ್ನು ಹಿಡಿದುಕೊಂಡು ಹೊಗೆ ಬಂಡಿಯಿಂದ ಕೆಳಗಿಳಿದು ನಡೆದರು. ಸುಮಾರು ಇಪ್ಪತ್ತೈದು ವರ್ಷ ವಯಸ್ಸಿನ ಒಬ್ಬ ಯುವಕನೂ ಬಂಡಿಯಿಂದ ಕೆಳಗಿಳಿದನು. ಅವನು ಎಡಗೈಯಲ್ಲಿ ಒಂದು ಬೆತ್ತದ ಪೆಟ್ಟಿಗೆ—ಬಲಗೈಯಲ್ಲಿ ಒಂದು ವಸ್ತ್ರದ ಗಂಟು ಹಿಡಿದುಕೊಂಡು ಸ್ಟೇಶನಿಂದ ಹೊರಗೆ ಬಂದು ಆ ಎರಡು ಹೊರೆಗಳನ್ನು ಒಂದು ಕಡೆಯಲ್ಲಿ ಇರಿಸಿ, ಕೂಲಿ ಆಳನ್ನು ಪ್ರತೀಕ್ಷಿಸುತ್ತ ನಿಂತುಕೊಂಡನು.

ರೈಲಿನಿಂದ ಇಳಿದ ಪ್ರಯಾಣಿಕರು ಕೆಲವರು ನಡಕೊಂಡು ಕೆಲವರು ಗಾಡಿಗಳಲ್ಲಿ ಕೂತುಕೊಂಡು, ಹೋದರು. ಎಲ್ಲೆಲ್ಲಿಯೂ ಜನರ ಕೋಲಾಹಲ. ಈ ಗಲಿಬಿಲಿಯಲ್ಲಿ ಸ್ವಲ್ಪ ಶಾಂತವಾಗಲೆಂದು ಯುವಕನ ಮತ್ತೂ ಸ್ವಲ್ಪ ಸಮಯ ಅಲ್ಲೆ ನಿಂತುಕೊಂಡನು.

ಎಷ್ಟೋ ಗಾಡಿಗಳು ಪ್ರಯಾಣಿಕರನ್ನು ಮತ್ತು ಅವರ ಸಾಮಾನುಗಳನ್ನು ತುಂಬಿಸಿಕೊಂಡು ನಡೆದವು. ಕಡೆಗೆ ಒಂದು ಗಾಡಿಯು ಮಾತ್ರ ಉಳಿಯಿತು. ಅದರಲ್ಲಿ ಪ್ರಯಾಣಿಕರು ಇರಲಿಲ್ಲ. ಜನರ ಗಲಿಬಿಲಿಯೂ ನಿಂತಿತು. ಯುವಕನು ಆ ಗಾಡಿಯವನನ್ನು ಕರೆದು "ಇಲ್ಲಿ ಕೂಲಿಯಾಳುಗಳು ಸಿಕ್ಕುವುದಿಲ್ಲವೇ?" ಎಂದು ಕೇಳಿದನು.

ಗಾಡಿಯವನು ಮೋರೆಯಲ್ಲಿ ತಿರಸ್ಕಾರವನ್ನು ಸೂಸಿ "ಕೂಲಿಗಳು ಈಗ ಎಲ್ಲಿರುವರು? ಗಾಡಿಯಲ್ಲಿ ಕೂತುಕೊಳ್ಳಿರಿ! ಬೇಗನೇ ನಿಮ್ಮನ್ನು ಬಿಟ್ಟು ಬರುವೆನು. ನಿಮಗೆಲ್ಲಿಗೆ ಹೋಗಬೇಕು?" ಎಂದನು.

ಯುವಕನು—"ನನಗೆ ಕೂಳೂರಿಗೆ ಹೋಗಬೇಕು. ಬಾಡಿಗೆ ಎಷ್ಟು ಕೊಡಬೇಕು?" ಎಂದು ಕೇಳಿದನು.

ಗಾಡಿಯವನು—"ಒಂದುವರೆ ರೂಪಾಯಿ."

ಯುವಕ—"ಒಂದುವರೆ ರೂಪಾಯಿ? ಅಲ್ಲಿಗೆ ಹನ್ನೆರಡಾಣೆಯಲ್ಲವೇ?

"ಹನ್ನೆರಡಾಣೆಯ ಆ ದಿನಗಳು ಕಳೆದುಹೋದುವು." ಎಂದು ಹೇಳಿ ಗಾಡಿಯವನು ಗಾಡಿಯನ್ನು ನಡೆಸಿಕೊಂಡು ಹೋದನು.

ಗಾಡಿಯವನು ಹೋಗುವುದನ್ನು ಕಂಡು, ಯುವಕನು "ಆಗಲಿ! ಒಂದು ರೂಪಾಯಿ ಕೊಡುವೆನು" ಎಂದನು.

ಗಾಡಿಯವನು ಯುವಕನ ಮಾತಿಗೆ ಉತ್ತರ ಕೊಡದೆ ಮುಂದರಿಸಿದನು. ಯುವಕನು ಒಂದು ಕೈಯಲ್ಲಿ ವಸ್ತ್ರದರಿಸಿ ಗಂಟನ್ನು—ಮತ್ತೊಂದು ಕೈಯಲ್ಲಿ ಬೆತ್ತದ ಪೆಟ್ಟಿಗೆಯನ್ನು ಹಿಡಿದುಕೊಂಡು ಮುಂದೆ ನಡೆದನು.

"ಸಾಮಿ! ಸಾಮಿ! ಸ್ವಲ್ಪ ನಿಂತುಕೊಳ್ಳಿ!" ಯುವಕನು ಹಿಂದೆ ನೋಡಿದನು. ಅದೇ ಗಾಡಿಯವನು! ಸ್ವಲ್ಪ ಹಿಂದೆ ಸರಿದು ನಿಂತುಕೊಂಡನು.

ಗಾಡಿಯವನು ಯುವಕನ ಸಮೀಪಕ್ಕೆ ಗಾಡಿಯನ್ನು ಹೊಡೆದುಕೊಂಡುಬಂದು, "ಸಾಮಿ, ಈ ಎರಡು ಹೊರೆಗಳನ್ನು ಹೊತ್ತುಕೊಂಡು ಕೂಳೂರಿಗೆ ನೀವು ಹೋಗುವುದೆಂದರೆ—! ಇರಲಿ, ನಾನು ಹೆಚ್ಚಿಗೆ ಹೇಳಲಿಲ್ಲ ಎರಡೇ ರೂಪಾಯಿ, ಕೊಟ್ಟುಬಿಡಿ" ಎಂದನು.

ಯುವಕನು ಚಕಿತನಾಗಿ "ನೀನು ಮೊದಲು ಒಂದುವರೆ ರೂಪಾಯಿ ಹೇಳಿರಲಿಲ್ಲವೇ? ಇದೇನು—ಈಗ..........

ಗಾಡಿಯವನು, ಮೋರೆಯಲ್ಲಿ ಮುಗುಳು ನಗೆಯನ್ನು ತಂದುಕೊಂಡು. "ನಾನು ಎರಡು ರೂಪಾಯಿ ಎಂದೇ ಹೇಳಿದ್ದೆನು." ಎಂದು ನಿರ್ಲಜ್ಜಭಾವದಿಂದ ನುಡಿದನು.

	ಬಾರದೂ ಲಚಮಿ. ನಿನ್ನ ಮಕ್ಕಳಾದರೂ ಸ್ವಾತಂತ್ರ್ಯಗಳಿಸಲಿ. ನೀನಾದರೂ ನಮ್ಮ ದೇಶ ಸ್ವತಂತ್ರ ಆಗಿದ್ದನ್ನ ನೋಡು.... ಕಣೆ...
(ವಿಕಾರವಾಗಿ)	ಲಚಮೀ....ಬಂs....ದೇs....
ಲಚಮಿ:	ಚೆನಿಯಾs....
	ಪಾಪ! ದೇಶ ದೇಶಾಂತಲೇ ಜೀವ ಬಿಟ್ಟ!
ಪ್ರೋ. ಇ:	ಎಂಥ ದೇಶಭಕ್ತಿ!

ಯುವಕನು ಗಾಡಿಯವನ ಒರಟುತನವನ್ನು ಕಂಡು ಕ್ರುದ್ಧನಾದನು "ಇವನು ಕೇರಳದತ್ತ ಕಡೆಯವನಾಗಿರಬಹುದೆಂದು" ಅಂದುಕೊಂಡನು. "ನಿನ್ನ ಮಾತುಗಳು ನಿಮಿಷದೊಳಗೆ ಮಾರ್ಪಡವನ್ನು ಹೊಂದುವುವು, ನಿನ್ನ ಗಾಡಿಯಲ್ಲಿ ನಾನು ಬರುವುದಿಲ್ಲ" ಎಂದು ಯುವಕನು ಸಟಸಟನೆ ಮುಂದೆ ನಡೆದುಹೋದನು. ಮನಸ್ಸಿನ ಬಿಸಿಯೂ ಲಘುವಾಯಿತು. ಹೊರೆಗಳನ್ನು ಒಂದು ಕೈಯಿಂದ ಮತ್ತೊಂದು ಕೈಗೆ ಬದಲಾಯಿಸಿಕೊಂಡು "ಸಾಮಾನ್ಯವಾದ ಒಂದು ಮಾತಿಗಾಗಿ ಸಿಡಿದುಕೊಂಡು ಗಾಡಿಯನ್ನು ಬಿಟ್ಟುಬಂದುದು ಅಚಾತುರ್ಯವೆಂದು ಈಗ ಅನಿಸುತ್ತದೆ. ಗಾಡಿಯಲ್ಲಿ ಕೂತುಕೊಂಡು ಸುಖದಿಂದ ಹೋಗಬಹುದಾಗಿದ್ದಿತು. ಇಷ್ಟು ಕಷ್ಟಪಡಬೇಕೆಂದಿದ್ದಿಲ್ಲ" ಎಂದು ತನ್ನಲ್ಲಿ ತಾನು ಅಂದುಕೊಂಡನು. ಒಂದೊಂದು ಸಲ ಹಿಂತಿರುಗಿ ನೋಡುತ್ತ ಮುಂದೆ ನಡೆದನು. ಗಾಡಿಯವನು ಒಂದುವರೆ ರೂಪಾಯಿ ಬಾಡಿಗೆ ಹೇಳಿದ್ದರೂ ಒಂದೇ ರೂಪಾಯಿಗೆ ಒಪ್ಪಿ ಗಾಡಿಯನ್ನು ಮರಳಿ ತರಬಹುದೆಂದು ಅವನೆಣಿಕೆಯಾಗಿದ್ದಿತು. ಅಂತಾದರೆ—ಒಂದೂವರೆ ರೂಪಾಯಿಯನ್ನೆ ಕೊಟ್ಟು ತನ್ನ ಔದಾರ್ಯವನ್ನು ತೋರಿಸಿಬಿಡಬೇಕೆಂದಿದ್ದನು. ಆದರೆ ಗಾಡಿಯವನಾಗಿಯೇ ಬರಲಿಲ್ಲ. ಮಾರ್ಗದ ಇಕ್ಕಡೆಗಳಲ್ಲಿಯೂ ಮಳೆಯ ನೀರು ಹೋಗುತ್ತಲಿದೆ. ಮಾರ್ಗವು ತೊಳೆದು ಹೋಗಿ ಸಣ್ಣ ಸಣ್ಣ ಕಲ್ಲುಗಳು ತಲೆಯೆತ್ತಿ ನಿಂತುಕೊಂಡು ಪಥಿಕರ ಆಗಮನವನ್ನು ಪ್ರತೀಕ್ಷಿಸುತ್ತಿವೆ. ಗಾಡಿಯ ಛಾಯೆಯೂ ಸಹ ಎಲ್ಲಿಯೂ ಕಾಣಲಿಲ್ಲ.

ಯುವಕನಿಗೆ ಹೊರೆಗಳನ್ನು ಹೊತ್ತುಕೊಂಡು ನಡೆದು ಅಭ್ಯಾಸವಿರಲಿಲ್ಲ. ಅದಲ್ಲದೆ ಅವನ ಶರೀರವೂ ಬಹು ಕಾಲದ ಆದೊಂದು ವ್ಯಸನದಿಂದ ದುರ್ಬಲವಾಗಿದ್ದಿತು. ಆದರೂ ಅತ್ಯಾಗ್ರಹದಿಂದ ಅವನು ಮುಂದರಿದು ನಡೆದನು. ನಡೆದು ನಡೆದು ದೇಹದಲ್ಲಿ ಚೈತನ್ಯವು ಕಡಿಮೆಯಾಗಿರುವಂತೆ—ಆ ಹೊರೆಗಳ ಭಾರವು ಮತ್ತೂ ಹೆಚ್ಚುವುದೆಂದು ಅವನಿಗೆ ಕಾಣುತಿದ್ದಿತು.

"ಇನ್ನು ಉಪಾಯವಾವುದು? ರೈಲ್ವೇ ಸ್ಟೇಷನಿ ಮರಳಿ ಹೋಗುವುದೇ? ಬೇಡ—ಈಗ ಮರಳಿ ಸ್ಟೇಶನಿ ಹೋಗುವುದೇ ಬೇಡ. ಹೊರೆಗಳಿಲ್ಲದಿದ್ದರೆ ಇಷ್ಟರೊಳ ಅಲ್ಲಿಗೆ ಹೋಗಿ ಮುಟ್ಟುತ್ತಿದ್ದೆನು." ಎಂದು ತನ್ನಲ್ಲೆ ತಾನ ಅಂದುಕೊಂಡು ಮತ್ತೂ ಸ್ವಲ್ಪ ದೂರದವರೆಗೆ ನಡೆದನ ಆಯಾಸವು ಹೆಚ್ಚಿತು. ಇನ್ನು ಮುಂದರಿಸಿ ನಡೆಯುವುದ ಅವನಿಗೆ ಅತೀ ಕಷ್ಟವಾಗಿ ಕಂಡಿತು. ಅವನ ಸರ್ವಾಂಗ ಲ್ಲಿಯೂ ಬೆವರು ಮೂಡಿತು. ಹೊರೆಗಳನ್ನು ಮಾರ್ಗದ ಬ ಯಲ್ಲಿ ಒಂದು ಮರದ ಕೆಳಗಿಟ್ಟು ಅವನು ವಿಶ್ರಮಿಸಿಕೊ ಡನು. ಅಷ್ಟರಲ್ಲಿ ದೂರದಲ್ಲಿ ಬರುತಿದ್ದ ಒಬ್ಬ ಹುಡುಗನನ ಕಂಡನು. ಹುಡುಗನು ಸಣ್ಣವನಲ್ಲ, ಗಟ್ಟಿಮುಟ್ಟಾಗಿರ ವನು. ಕೂಲಿಕೊಟ್ಟರೆ ಈ ಹೊರೆಗಳನ್ನು ಹಿಡಕೊಂಡ ತನ್ನೊಂದಿಗೆ ಬರಬಹುದು ಎಂದು ಯುವಕನು ಎಣಿಸಿದನು ಹುಡುಗನು ಮತ್ತೂ ಸಮೀಪಕ್ಕೆ ಬಂದನು. ಯುವಕನ ಈ ಕಡೆಗೆ ಬಾರದೆ ನಾಲ್ಕೈದು ವರ್ಷಗಳಾಗಿದ್ದವು. ಥಕ್ಕ ಹುಡುಗನನ್ನು ಕರೆದು ಕೇಳುವುದಕ್ಕೆ ಸಂಕೋಚಪಟ್ಟನ ಆದರೂ ನಿರ್ವಾಹವಿಲ್ಲದೆ ಹುಡುಗನೊಡನೆ ಹೀಗೆಂದನು "ಈ ಹೊರೆಗಳನ್ನು ಹಿಡಿದುಕೊಂಡು ನನ್ನೊಂದಿಗೆ ಬರುವ ದಕ್ಕೆ ಯಾರಾದರೊಬ್ಬನು ಇಲ್ಲಿ ಸಿಗಬಹುದೇ? ನಾನು ದುಡ್ಡ ಕೊಡುವೆನು" ಎಂದು.

ಹುಡುಗನು—"ಇಲ್ಲಿ ಆಳುಗಳು ಸಿಕ್ಕುವ ಹಾಗಿಲ್ಲ" ಎಂದು ನುಡಿದು ಸಮೀಪದ ಕಾಡಿನ ಕಡೆಗೆ ನಡೆದನು.

ಯುವಕನು ಹತಾಶನಾಗಿ ಆ ಎರಡು ಹೊರೆಗಳನ್ನ ಪುನಹಾ ಹೊತ್ತುಕೊಂಡು ಮೆಲ್ಲಮೆಲ್ಲಗೆ ಮುಂದರಿಸಿದನು ಅವನಿಗೆ ದಣಿವು ಇಮ್ಮಡಿಯಾದಂತೆ ಕಂಡಿತು. ಅಂತೆಯೆ ಹೊರೆಯನ್ನು ಇಳಿಸಿದನು.

ಮಾರ್ಗದ ಬದಿಯಲ್ಲಿ ಒಂದು ಸಣ್ಣ ಗುಡಿಸಲು ಕ ಡಿತು. ಅಲ್ಲಿ ಕಿಟಕಿಯಿಂದೊಂದು ವ್ಯಕ್ತಿಯು ಕುತೂಹ ಪೂರ್ಣ ದೃಷ್ಟಿಯಿಂದ ಯುವಕನನ್ನು ಕಂಡು "ಎರಡೂ ಕೈ

ಳಲ್ಲಿ ಹೊರೆಗಳು ಇದ್ದುದರಿಂದ ಕ್ಲಾಂತರಾಗಿರಿ! ಎಲ್ಲಿಗೆ ಹೋಗುವಿರಿ?" ಎಂದಂತೆ ಯುವಕನಿಗೆ ಕೇಳಿಸಿತು. ಅನಂತರ ನೀರವ! ಬೇರೆ ಮಾತಿಲ್ಲ! "ನೀವು ಸೋತು ಹೋಗುವಿರಿ? ಆ ಹೊರೆಗಳನ್ನು ನಾನು ಹಿಡಿದುಕೊಳ್ಳಬೇಕೆ? ಎಂದು ಕೇಳುವುದನ್ನು ಬಿಟ್ಟು ಇಂತಹ ಒಣ ಸಹಾನುಭೂತಿಯನ್ನು ತೋರಿಸಿದುದು, ಯುವಕನಿಗೆ ಸಹನವಾಗಲಿಲ್ಲ. ಅವನು ಆ ವ್ಯಕ್ತಿಯನ್ನು ಮನಸಿನಲ್ಲೇ ತುಚ್ಛೀಕರಿಸಿ ಹೊರೆಗಳನ್ನು ಹಿಡಿದುಕೊಂಡು ಮುಂದೆ ನಡೆದುಹೋದನು. ನಡೆದು ನಡೆದು ಕಾಲುಗಳು ಜತೆಗೆಟ್ಟುವು. ಹೊರೆಗಳನ್ನು ಹೆಗಲಲ್ಲಿ ಕಂಕುಳಲ್ಲಿ ಬದಲಾಯಿಸುತ್ತ ಹಿಡಿದುಕೊಂಡು ಮತ್ತೂ ನಡೆದನು. ಇನ್ನೂ ಅರ್ಧಮೈಲು ದಾರಿ ನಡೆದು ಹೋಗಲಿಕ್ಕಿದ್ದಿತು.

ಸಮೀಪದ ಕಾಡಿನಲ್ಲಿ ಕೀಟಗಳ ಝೇಂಕಾರವು ಕೇಳಿಸತೊಡಗಿತು. ಯುವಕನು" ಅದು ಕಾಡಿನ ಕ್ರಿಮಿಗಳ ಝೇಂಕಾರ ಶಬ್ದವಲ್ಲ. ಶಕ್ತಿಯು ಕುಗ್ಗಿದುದರಿಂದ ತನ್ನ ಕಿವಿಗಳಲ್ಲಿ ಸ್ವಾಭಾವಿಕವಾಗಿ ಉಂಟಾದ ಅಶಕ್ತಿಯ ಆರ್ತನಾದವಾಗಿರಬಹುದು" ಎಂದು ಗ್ರಹಿಸಿದನು. ಸಮೀಪದಲ್ಲಿ ಸಣ್ಣ ಸಣ್ಣ ಹೂಗಳನ್ನು ಕಂಡರೆ—ಅದರ ವರ್ಣವು ಯಾವುದೇ ಇರಲಿ—ಅವನಿಗವು (ಸಾಸಿವೆಯ ಹೂವಿನಂತೆ) ಅರಸಿನ ಬಣ್ಣದ್ದಾಗ ಕಾಣುತಿದ್ದುವು. ಅಂತೆಯೇ ಮರಗಳು—ಎಲೆಗಳು—ಎಲ್ಲವೂ ಹಳದಿ ಬಣ್ಣದ್ದಾಗಿ ಕಾಣಿಸತೊಡಗಿತು. ಯುವಕನು ಮುಂದರಿಸಿ ನಡೆಯಲಾರದೆ ಹೋದನು. ಸರ್ವ ಶರೀರದಲ್ಲಿಯೂ ದಣುವು ತುಂಬಿಕೊಂಡಿತು. ಬೆವರಿನ ಹನಿಗಳು ಬಟ್ಟೆಯನ್ನು ತೊಯ್ದು ಒದ್ದೆಮುದ್ದೆಯಾಗಿಸಿದವು. ಎರಡೂ ಹೊರೆಗಳನ್ನು ಮಾರ್ಗದ ಬದಿಯಲ್ಲಿ ಇಟ್ಟುಬಿಟ್ಟು ಕಲ್ಲುಮಣ್ಣಿನ ಮೇಲೆ ಆತನು ಕೂತುಬಿಟ್ಟನು.

೨

"ದಾರಿಯು ತಪ್ಪಿತೇ?"

ಯುವಕನು ನಿದ್ರೆಯಿಂದ ಎಚ್ಚೆತ್ತುಕೊಂಡವನಂತೆ ಎದ್ದು ಕೂತುಕೊಂಡು, ನಾಲ್ಕು ಕಡೆಗಳಲ್ಲಿಯೂ ವಿಸ್ಮಯದೃಷ್ಟಿಯಿಂದ ನೋಡಿದನು. ಒಬ್ಬ ಯುವತಿಯು ಮಾರ್ಗದಲ್ಲಿ ನಿಂತುಕೊಂಡಿದ್ದಳು. ಯುವಕನು ಅವಳನ್ನು ಕಂಡು ವಿಸ್ಮಿತನಾದನು. ಅವಳ ಆ ಸಹಾನುಭೂತಿ ತುಂಬಿದ ಶೀತಲ ದೃಷ್ಟಿಯು ಯುವಕನ ಮೇಲೆ ಪ್ರಸಾರಣವಾಗಿದ್ದಿತು. ಯುವತಿಯು ಸುರೂಪಿ! ದೀರ್ಘಾಕೃತಿ! ಮೋಡಗಳಲ್ಲಿ ಮರೆಯಾದ ಬೆಳದಿಂಗಳಂತೆ ಅವಳ ಉಡುಪು (ಮಲೀನವಾಗಿದ್ದಿತು) ಹರಡಿದ ಕೂದಲುಗಳು—ಇವೆಲ್ಲವೂ ಅವಳ ಸೌಂದರ್ಯವನ್ನು ಮಾಸಿ ಮಲಿನಗೊಳಿಸಿದಂತೆ ಭಾಸವಾಗುತ್ತಿದ್ದಿತು. ಆದರೂ ಅವಳ ಆ ರಮಣೀಯತೆಯು ಕುಂದಿದಂತೆ ಕಾಣುತ್ತಿರಲಿಲ್ಲ.

ಯುವಕನು ಕೂತುಕೊಂಡಿದ್ದ ಸ್ಥಳದಿಂದ ನಾಲ್ಕೈದು ಮಾರು ದೂರದಲ್ಲಿ ಒಂದು ಹಳ್ಳಿಯ ಮಾರ್ಗವು ರಾಜಮಾರ್ಗಕ್ಕೆ ಬಂದು ಕೂಡಿದ್ದಿತು. ಆ ತರುಣಿಯು ಒಂದು ನೂಲಿನ ಕಟ್ಟ ಮತ್ತು ಕೆಲವು ಸಣ್ಣ ಮಕ್ಕಳ ಮೇಲಂಗಿ—ಜಿಬ್ಬಾ-ಚಲ್ಲಣ ಮುಂತಾದ ಉಡುಗೆಗಳನ್ನು ಕೈಯಲ್ಲಿ ಹಿಡಿದುಕೊಂಡು ಆ ಹಳ್ಳಿಯ ಮಾರ್ಗದಿಂದ ಬಂದು ಅಲ್ಲಿ ರಾಜಮಾರ್ಗದಲ್ಲಿ ಇಳಿಯುವಾಗ, ದಣಿದು ವಸ್ತ್ರದ ಗಂಟಿನ ಮೇಲೆ ಆತ ಅರೆನಿದ್ರೆಯಲ್ಲಿದ್ದ ಯುವಕನನ್ನು ನೋಡಿದ್ದಳು.

ತರುಣಿಯು ಹದಿನೇಳು ಅಥವಾ ಹದಿನೆಂಟು ವರುಷ ವಯಸ್ಸಿನವಳಂತೆ ಕಾಣುತ್ತಿದ್ದಳು. ಈ ವಯಸ್ಸಿನ ತರುಣಿಯರು ಅಪರಿಚಿತನಾದ ಒಬ್ಬ ತರುಣನೊಡನೆ ನಿರ್ಜನ ಪ್ರದೇಶದಲ್ಲಿ ಮಾರ್ಗದ ಮಧ್ಯದಲ್ಲಿ ನಿಂತುಕೊಂಡು ಸಂಭಾಷಿಸುವುದು ಅನುಚಿತವೆಂದೋ ಅಥವಾ ಬೇರೆ ಯಾವುದಾದರೊಂದು ಕಾರಣದಿಂದಲೋ ಅವಳು ಸ್ವಲ್ಪ ಸಮಯ ನಿಂತುಕೊಂಡು, ಅನಂತರ ಅಸಹಾಯಕನಂತೆ ಕಾಣುವ ಯುವಕನನ್ನು ಮತ್ತೊಮ್ಮೆ ದಯಾದೃಷ್ಟಿಯಿಂದ ನೋಡಿದಳು. ಅವಳ ಹೃದಯದಲ್ಲಿ ಕನಿಕರವು ಮೂಡಿತು. ಅವಳು ಲಜ್ಜೆಯನ್ನು ಬಿಟ್ಟು ತರುಣನೊಡನೆ ಮಾತನಾಡಿದ್ದಳು. "ದಾರಿ ತಪ್ಪಿತೇ?" ಎಂದು.

ತರುಣಿಯ ಪ್ರಶ್ನೆಯನ್ನು ಕೇಳಿ ಯುವಕನು ಮೋರೆಯನ್ನು ಅವಳ ಕಡೆಗೆ ತಿರುಗಿಸಿ ನೋಡಿದನು. ಅವಳ ಮೋರೆಯಲ್ಲಿ ಮತ್ತು ಕಣ್ಣುಗಳಲ್ಲಿ ಸೋತವರಿಗೆ ಸಹಾಯಮಾಡಬೇಕೆಂಬ ಕುತೂಹಲವು ಮೂಡಿಕೊಂಡಿದ್ದಿತು. ಯುವಕನು ನುಡಿದನು: "ನನಗೆ ಕೂಳೂರಲ್ಲಿ ಮಾವನ ಮನೆಗೆ ಹೋಗಬೇಕು. ಈ ಎರಡು ಹೊರೆಗಳನ್ನು ತಂದು ಕಷ್ಟಪಡಬೇಕಾಯಿತು. ಕೂಲಿಗಳು ಸಿಗಲಿಲ್ಲ. ಕೂಳೂರಿಗೆ ಇನ್ನೆಷ್ಟು—ಒಂದು ಮೈಲು ಇರಬಹುದೇ?" ಎಂದು. "ಇಲ್ಲ ಅರ್ಧ ಮೈಲು—ಆ ಎರಡು ಹೊರೆಗಳಲ್ಲಿ ಒಂದನ್ನು ನಾನು ಹಿಡಿದುಕೊಳ್ಳುವೆನು" ಎಂದು ತರುಣಿಯು ಹೇಳಿದಳು. ಯುವಕನು ತರುಣಿಯ ಕಡೆಗೆ ಕೃತಜ್ಞತೆಯನ್ನು ಸೂಸಿ ವಸ್ತ್ರದ ಗಂಟನ್ನು ತೆಗೆದು ಸ್ವಲ್ಪ ದೂರದಲ್ಲಿಟ್ಟನು. ಅನಂತರ ಬೆತ್ತದ ಪೆಟ್ಟಿಗೆಯನ್ನು ಹಿಡಿದು ಎದ್ದು ನಿಂತು—ಹೇಳಿದನು. "ಒಂದು ಹೊರೆಯನ್ನು ಹಿಡಿದುಕೊಂಡು ನಾನು ಎಷ್ಟು ದೂರವಾದರೂ ನಡೆದು ಬರುವೆನು. ಎರಡು ಹೊರೆಗಳನ್ನು ಹಿಡಿದುಕೊಂಡುದರಿಂದ ಸೋತುಹೋದೆನು" ಎಂದು.

ತರುಣಿಯು ಬೇರೆ ಮಾತನಾಡದೆ ವಸ್ತ್ರದ ಗಂಟನ್ನು ಕಂಕುಳಲ್ಲಿ ಹಿಡಿದುಕೊಂಡು" ಬನ್ನಿರಿ!" ಎಂದು ಹೇಳಿ—ತನ್ನ ಲಘು ಕ್ಷಿಪ್ರಗತಿಯಿಂದ ಹಳ್ಳಿಯ ಮಾರ್ಗದಲ್ಲಿ ಮುಂದರಿಸಿ ನಡೆದಳು. ಯುವಕನು ಅವಳ ಹಿಂದೆಯೇ ನಡೆದನು. ಸ್ವಲ್ಪ ದೂರ ನಡೆದ ನಂತರ ಯುವಕನು--"ಕೂಳೂರಿಗೆ ಆ ದೊಡ್ಡ

ಮಾರ್ಗದಿಂದ ಹೋಗಲು ಆಗುವುದೆ?" ಎಂದು ಮುಂದೆ ನಡೆಯುವ ತರುಣಿಯೊಡನೆ ಕೇಳಿದನು.

ತರುಣಿಯು—"ಹೋಗಬಹುದು!' ಎಂದು ಹಿಂದೆ ತಿರುಗಿ ನೋಡದೆ ಉತ್ತರವನ್ನು ಕೊಟ್ಟಳು. ಅಂತೆಯೇ ಮುಂದೆ ನಡೆಯುತ್ತಿದ್ದವಳು ಒಂದು ಸಲವಾದರೂ ಹಿಂದೆ ನೋಡಲಿಲ್ಲ. ಅತ್ತಿತ್ತ ನೋಡದೆ ನೆಟ್ಟಗೆ ಮಾರ್ಗದಲ್ಲಿ ನಡೆದುಕೊಂಡು ಮುಂದೆ ಹೋಗುತಿದ್ದಳು. "ಯುವಕನು ತನ್ನ ಹಿಂದೆ ಬರುತ್ತಿರುವನೋ ಅಥವಾ ನಡೆಯಲಾರದೆ ಎಲ್ಲಾದರೂ ಕುಳಿತು ಬಿಟ್ಟನೋ" ಎಂದು ಸಹ ಹಿಂತಿರುಗಿ ನೋಡುತ್ತಿರಲಿಲ್ಲ— ಯುವಕನು ಪದೇ ಪದೇ ತನ್ನ ಮುಂದೆ ನಡೆದು ಹೋಗುತ್ತಿರುವ ಯುವತಿಯನ್ನು ನೋಡುತ್ತಿದ್ದನು. ಅವಳ ನಡೆವಳಿಯು ಅದೇ ಮೊದಲಿನಂತೇ ಇದ್ದಿತು. ಅದರಿಂದ ಯುವಕನ ಮನಸ್ಸಿನಲ್ಲಿ ಒಂದು ಬಗೆಯ ಅಸಮಾಧಾನವುಂಟಾಯಿತು ಆದರೆ ಅವನದನ್ನು ಅವಳೊಡನೆ ಬಾಯಿ ಬಿಚ್ಚಿ ಹೇಳುವುದಕ್ಕೆ ಅವಳ ವರ್ತನದಲ್ಲಿ ಅಂತಹ ವಿಶೇಷವಾದೊಂದು ಸಂಗತಿಯು ಇರಲಿಲ್ಲ. ಅಪರಿಚಿತನಾದ ಯುವಕನೊಡನೆ ಅನಾವಶ್ಯಕವಾಗಿ ಸಂಭಾಷಿಸಬೇಕೆಂಬ ಅಗ್ರಹವು ಅವಳಲ್ಲಿ ಇರಲಿಲ್ಲ. ಅವಳಲ್ಲಿ ಇಲ್ಲದ ವಸ್ತುವನ್ನು ಕಾಣಲು ಸಿಗಬೇಕೆಂದು ಹೇಗೆ ಆಶಿಸಬಹುದು?

ಯುವಕನು ತನ್ನೊಂದಿಗೆ ತಾನು ತರುಣಿಯ ವರ್ತನ ವಿಷಯವಾಗಿ ಸಲ್ಲಾಪಿಸುತ್ತಾ ಅವಳ ಹಿಂದೆಯೇ ನಡೆದು ಹೋಗುತಿದ್ದನು. ಏತನ್ಮಧ್ಯದಲ್ಲಿ ಮರಳಿ ಯುವಕನು "ನನ್ನನ್ನು ನಿರ್ದಿಷ್ಟ ಸ್ಥಾನದಲ್ಲಿ ಬಿಟ್ಟು ಈಗ ಬಂದ ದಾರಿಯಲ್ಲೆ ಮರಳಿ ನಡೆದುಕೊಂಡು ಹೋಗಬೇಕೆಂದು ತೋರುತ್ತದೆ. ಸಾಹಜಿಕವಾಗಿ ನಡೆಯಬೇಕಾಗುವುದಕ್ಕಿಂತ ಇಮ್ಮಡಿ ದಾರಿ ಇಂದು ನನಗಾಗಿ ನಡೆಯಬೇಕಾಗುವುದು. ಅಲ್ಲವೇ?" ಎಂದು ಯುವತಿಯೊಡನೆ ಕೇಳಿದನು.

ಯುವತಿಯು—ಅಂತೆಯೇ ಮುಂದೆ ನೋಡಿ ನಡೆಯುತ್ತ ಹಿಂದಿನಿಂದ ಬರುವ ಯುವಕನ ಪ್ರಶ್ನೆಗೆ ಅತಿ ಸಂಕ್ಷೇಪ... ಉತ್ತರವನ್ನು ಕೊಟ್ಟಳು. "ಇಲ್ಲ" ಎಂದು.

ಯುವತಿಯು ಈ ರೀತಿಯಲ್ಲಿ ಕೊಟ್ಟ ಉತ್ತರದಿ... ಯುವಕನು ಸಂತುಷ್ಟನಾದಂತೆ ಅವನ ಮುಖ ಭಾವದ... ಕಂಡುಬರಲಿಲ್ಲ.

ಯುವತಿಯು ಒಂದು ಮನೆಯ ಮುಂದೆ ಬಂದು ನಿಂ... ಕೊಂಡಳು. ಯುವಕನೂ ಅಲ್ಲಿಗೆ ಬಂದೊಡನೆ "ಈ ದಾರಿಯ... ಹೋಗಬೇಕು" ಎಂದು ಹೇಳಿ ವಸ್ತ್ರದ ಗಂಟನ್ನು ಕೆಳಗಿಟ್ಟ...

ಅದನ್ನಲ್ಲಿಯ ವರೆಗೆ ತಂದುಕೊಟ್ಟುದಕ್ಕಾಗಿ ಅವ... ಸ್ವಲ್ಪ (ಹಣ) ಬಹುಮಾನವನ್ನು ಕೊಡಬೇಕೆಂದು ಯು... ಕನು ಭಾವಿಸಿದ್ದನು. ಆದರೆ ಅವಳು ಸಂಭಾಷಿಸುವುದ... ಸ್ವಲ್ಪವಾದರೂ ಅವಕಾಶ ಕೊಡದೆ ವಿಶೇಷವಾದ ವ್ಯವಧಾ... ದಿಂದ ತನ್ನೊಂದಿಗೆ ನಡೆದು ಬಂದ ಅವಳ ನಡೆವಳಿಯನ... ವಿಮರ್ಶಿಸಿ ಅನೇಕ ಭಾವನಾತರಂಗಗಳಲ್ಲಿ ಬಿದ್ದುಕೊಂ... ಹೊಡೆದಾಡುತಿದ್ದನು. ಆದರಿಂದ ಬೇರೆ ವಿಷಯಗಳ ವಿಸ್... ತಿಯು ಅವನಿಗುಂಟಾಗಿದ್ದಿತು. ಸಾಹಜಿಕವಾಗಿ ಅವಳ ವರ್ತನದಲ್ಲಿ ಅಪ್ರಶಸ್ತವೆಂದು ಒತ್ತಿ ಹೇಳಬಹುದಾಗಿರು... ಯಾವದೊಂದು ವಿಷಯವೂ ಇರಲಿಲ್ಲ. ಸ್ತ್ರೀತ್ವಕ್ಕೆ ಸ್ವಾಭಾ... ವಿಕವೂ ಯೋಗ್ಯವೂ ಆದ ನಡೆವಳಿಯಲ್ಲೇ ಅವಳು ನ... ದಿದ್ದಳು. ಇದರಿಂದ ಯುವಕನು ಅಲ್ಪ ಸ್ವಲ್ಪ ಅಸಮಾಧಾ... ವನ್ನು ಅನುಭವಿಸಿದನೆಂದರೆ ಅದಕ್ಕೆ ಹೊಣೆ ಯಾರು? ಅವ... ಕರುಣಾರ್ದ್ರ ಹೃದಯವು ಅಲ್ಲದೆ ಮತ್ತೊಂದಲ್ಲವೆಂದು ಹೇ... ಬೇಕಾಗುವುದು.

ಯುವಕನು ವಸ್ತ್ರದ ಗಂಟನ್ನು ಹಿಡಿದುಕೊಂಡು ಹಿ... ದಿರುಗಿ ನೋಡಿದನು. ಅವನಾಗ ಬಂದ ಮಾರ್ಗದಲ್ಲೇ ದೂ... ದಲ್ಲಿ ಯುವತಿಯು ನಡೆದು ಹೋಗುತಿದ್ದಳು. ಯುವಕನಿಂ... ಬಹುಮಾನವಂತಿರಲಿ, ಒಂದು ಕೃತಜ್ಞತಾ ವಾಕ್ಯವನ್ನಾದರ... ಅಪೇಕ್ಷಿಸದೆ ಅವಳು ನಡದೇ ಬಿಟ್ಟಳು.

ಯುವಕನು ಒಂದು ನಿಟ್ಟುಸಿರನ್ನು ಬಿಟ್ಟು ಅವಳು ತೋರಿಸಿದ ದಾರಿಯಲ್ಲಿ ಮುಂದೆ ನಡೆದು ಹೋದನು.

೩

ಬಿ.ಎ. ಕ್ಲಾಸಿನಲ್ಲಿ ಒಂದು ವರ್ಷ ಶಿಕ್ಷಣವನ್ನು ಪಡೆದು ರಜಾ ಸಮಯ ಮನೆಗೆ ಬಂದ ಶ್ರೀಧರನಿಗೆ ವಿವಾಹವಾಗಿದ್ದಿತ್ತು. ವಿವಾಹವು ಜರಗಿದ ರಾತ್ರೆ ಶ್ರೀಧರನು ವಿಶೇಷ ಸಂತಾಪಗೊಂಡಿದ್ದನು. ಮುಂದೆ ತಾನು ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಸುಖದಿಂದ ಸಂಸಾರವನ್ನು ನಡೆಸಬಹುದೆಂಬ ಆಶೆಯು ಅಂದು ಅವನ ಮನಸ್ಸಿನಿಂದ ದೂರಕ್ಕೆ ಸರಿದು ಹೋಗಿದ್ದಿತು. ಕಾರಣ.... ...ದಿಬ್ಬಣವು ಒಂದು ದಿವಸಕ್ಕೆ ಮೊದಲೇ ವಿವಾಹ ಮಂಟಪವನ್ನು ಅಲಂಕರಿಸಿದ್ದಿತು. ಆಗ ಉಂಟಾದ ಗೊಂದಲವೇ—ಮುಂದಿನ ಸುಖದುಃಖದ ಮುನ್ನುಡಿಯಂತಿದ್ದಿತು. ವಧುವಿನ ತಂದೆಯು ಅಧ್ಯಾಪಕನಾಗಿದ್ದನು. ಆದರೂ ತನ್ನ ಏಕಮಾತ್ರ ಪುತ್ರಿ ಕಮಲೆಗೆ ಒಳ್ಳೇ ಸ್ಥಳವನ್ನು ಹುಡುಕಿ ಗೊತ್ತುಮಾಡಿ ಒಂದುವರೆ ಸಾವಿರ ರೂಪಾಯಿ ವರದಕ್ಷಿಣೆಯನ್ನು ಕೊಡುವುದಕ್ಕೆ ಒಪ್ಪಿಕೊಂಡನು. ವರದಕ್ಷಿಣೆಯ ಮಾನವು ಆಗ ಸುಧಾರಣೆಯ ಶಿಖರವನ್ನು ಹತ್ತಿಕೊಂಡಿರಲಿಲ್ಲ. ಒಂದೊಂದೇ ಹೆಜ್ಜೆಯನ್ನು ಮುಂದಿಡುವುದಕ್ಕೆ ತೊಡಗಿದ್ದಿತು ಮಾತ್ರ. ಆದರಿಂದ ಅಷ್ಟು ಕಡಿಮೆ ಹಣಕ್ಕೆ ಈ ನೆಂಟಸ್ತಿಕೆಯು ಕಮಲೆಯ ತಂದೆಗೆ ಲಭಿಸಿದ್ದಿತು. ವಾಗ್ನಿಶ್ಚಯದ ಸಮಯ ಕಮಲೆಯ ತಂದೆಯು ಆರುನೂರು ರೂಪಾಯಿಗಳನ್ನು ಶ್ರೀಧರನ ತಂದೆಯ ಕೈಗೆ ಕೊಟ್ಟು ಅನಂತರ ಒಂದೇ ತಿಂಗಳಲ್ಲಿ ಮರಳಿ ಆರುನೂರು ರೂಪಾಯಿಗಳನ್ನು ಕಳುಹಿಸಿ ಕೊಟ್ಟಿದ್ದನು. ಉಳಿದ ಮುನ್ನೂರು ರೂಪಾಯಿಗಳನ್ನು ಮದುವೆಯ ಮಂಟಪದ (ಲಗ್ನಕ್ಕೆ ಮೊದಲು) ಕೊಡುವುದಾಗಿ ಭರವಸೆ ಹೇಳಿದ್ದನು. ವರನ ದಿಬ್ಬಣವು ಮದುವೆಯ ಮಂಟಪವನ್ನು ಸೇರಿದೊಡನೆ, ಶ್ರೀಧರನ ತಂದೆಯು ಆ ಮುನ್ನೂರು ರೂಪಾಯಿಗಳನ್ನು ಕೇಳಿದನು. ಕಮಲೆಯ ತಂದೆಯು—ಅತೀ ನಮ್ರಭಾವದಿಂದ ಹೇಳಿದನು—"ಮನೆಯನ್ನು ಬರೆದುಕೊಟ್ಟರೆ ಸಾವಿರದ ಐನೂರು ರೂಪಾಯಿಗಳನ್ನು ಕೊಡುವೆನೆಂದು ಒಬ್ಬ ಶ್ರೀಮಂತರು ಹೇಳಿದ್ದರು; ಆದರೆ ಕಾರ್ಯಕಾಲದಲ್ಲಿ ಅವರು ಅಷ್ಟು ಕೊಡಲೊಪ್ಪಲಿಲ್ಲ. ಸಾವಿರದ ಇನ್ನೂರು ರೂಪಾಯಿ ಕೊಡುವೆನೆಂದರು. ಬೇರೆ ಕಡೆಯಲ್ಲಿ ಮಾತಾಡಿ ಕೊಡುವೆನೆಂದರೆ ಆಗ ಸಮಯವಿದ್ದಿಲ್ಲ. ಲಗ್ನಕ್ಕೆ ದಿನಗಳು ಸ್ವಲ್ಪ ಉಳಿದಿದ್ದವು. ಆದ್ದರಿಂದ ಅಷ್ಟೇ ರೂಪಾಯಿಗಳನ್ನು ತೆಗೆದುಕೊಂಡೆನು. ಇನ್ನೊಂದೇ ತಿಂಗಳಲ್ಲಿ ಉಳಿದ ಮುನ್ನೂರು ರೂಪಾಯಿಗಳನ್ನು ಕೊಡುವೆನು. ಆ ವಿಷಯದಲ್ಲಿ ಭರವಸೆಗಾಗಿ ನೋಟನ್ನು ಈಗಲೇ ಬರೆದು ಕೊಡುವೆನು" ಎಂದು.

ಶ್ರೀಧರನ ತಂದೆಯು—ತುಚ್ಛೀಕಾರದಿಂದ ತುಂಬಿದ ಮಾತಿನ ಜಡಿ ಮಳೆಯನ್ನು ಸುರಿಸಿ ಕಮಲೆಯ ತಂದೆಗೆ ಮಹಾಭಿಷೇಕವನಾಡಿದ್ದನು. ದಿಬ್ಬಣವನ್ನೇ ಮರಳಿಸುವ ವಿಚಾರವೂ ಶ್ರೀಧರನ ತಂದೆಗೆ ಅಂತರಂಗದಲ್ಲಿ ಹೊಳೆದಿದ್ದಿತು. ಬಹಿರಂಗದಲ್ಲಿ ಮಾತ್ರ ಪ್ರಕಟವಾಗಿರಲಿಲ್ಲ—ಅಂತೂ ವಿವಾಹ ಲಗ್ನಕ್ಕೆಂದು ಬಂದ ಗೃಹಸ್ಥರು ಎಷ್ಟೋ ಸಮಾಧಾನ ಹೇಳಿ ಶ್ರೀಧರನ ತಂದೆಯ ಹೆಸರಿಗೆ ರೂ. ೪೦೦ಕ್ಕೆ ಒಂದು ನೋಟನ್ನು ಕಮಲೆಯ ತಂದೆಯಿಂದ ಬರೆಸಿ, ತಾವು ಸಾಕ್ಷಿ ಹಾಕಿದ್ದರು. ಶ್ರೀಧರನ ತಂದೆಯು ಅಪೂರ್ಣ ಸಂತುಷ್ಟಿಯಿಂದ ಆ ನೋಟನ್ನು ತೆಗೆದುಕೊಂಡಿದ್ದನು. ಪರಮಾತ್ಮನ ಅನುಗ್ರಹದಿಂದ ಅಂದಿನ ರಾತ್ರೆಯಲ್ಲೇ ಲಗ್ನವು ಆಗಿಹೋಗಿದ್ದಿತು. ಕಮಲೆಯ ತಂದೆಯು ಕನ್ಯಾದಾನವನ್ನು ಪೂರೈಸಿದನು. ಆರು ದಿನಗಳ ವಿವಾಹ ವಿಧಿಗಳೆಲ್ಲಾ ನಡೆದ ನಂತರ ದಿಬ್ಬಣವು ಹೊರಟು ಹೋಯಿತು. ಕಮಲೆಯನ್ನು ಕರೆದುಕೊಂಡು ಹೋಗಿದ್ದರು. ಆ ಮೇಲೆ ಮೂರು ತಿಂಗಳುಗಳ ವರೆಗೆ ಕಮಲೆಯನ್ನು ತಂದೆಯ ಮನೆಗೆ ಕಳುಹಿಸಲಿಲ್ಲ.

ಒಂದು ದಿನ ಕಮಲೆಯನ್ನು ಕರೆದುಕೊಂಡು ಹೋಗುವುದಕ್ಕೆಂದು, ಕಮಲೆಯ ತಂದೆಯು ಬಂದಿದ್ದನು. ಶ್ರೀಧರನ ತಂದೆಯು ನೋಟಿನ ಹಣ ಬಾರದೆ ಕಮಲೆಯನ್ನು ಕಳುಹಿಸಲಾಗುವುದಿಲ್ಲವೆಂದು ಹಟ ಹಿಡಿದು ಕೂತುಬಿಟ್ಟನು. ಕಮಲೆಯ ಕಂಬನಿಗಳೂ ಅವಳ ತಂದೆಯ ಕರುಣಾನುರೋಧವೂ—ಶ್ರೀಧರನ ತಂದೆಯ (ವಜ್ರ ಕಠಿಣ ಹೃದಯವನ್ನು) ಸ್ವಲ್ಪವೂ ಕದಲಿಸಲಾರದೆ ಹೋದುವು. ಕೊನೆಗೆ ಕಮಲೆಯ ತಂದೆಯು—ಶ್ರೀಧರನ ತಂದೆಯ ಅನೇಕಾನೇಕ ಕಟುಕ್ತಿಗಳನ್ನು ಸಹನಶೀಲತೆಯಿಂದ ಕಿವಿಗೊಟ್ಟು ಕೇಳಿ, ಮೂರು ತಿಂಗಳುಗಳೊಳಗೆ ಬಡ್ಡಿ ಸಮೇತ ಹಣವನ್ನು ಕೊಟ್ಟು ಸಾಲವನ್ನು ತೀರಿಸುವ ಶರ್ತದ ಮೇಲೆ—ಕಮಲೆಯನ್ನು ಕರೆದುಕೊಂಡು ಹೋದನು.

ಎರಡು ತಿಂಗಳುಗಳು ಆಗುವ ಮೊದಲೇ ಶ್ರೀಧರನ ತಂದೆಯ ಕಾಗದಗಳು ಒಂದರ ಹಿಂದೆ ಮತ್ತೊಂದು ಬರುತ್ತಿದ್ದವು. ಕಮಲೆಯ ತಂದೆಗೆ ಹಣವು ಒದಗಿರಲಿಲ್ಲ. ಬೇರೆ ಉಪಾಯವಿಲ್ಲದೆ ತತ್ಕಾಲಕ್ಕೆಂದು ಕಮಲೆಯ ಒಂದೆರಡು ಆಭರಣಗಳನ್ನು ಒತ್ತೆ ಇಟ್ಟು ಹಣವನ್ನು ಪಡಕೊಂಡು ಶ್ರೀಧರನ ತಂದೆಯ ಸಾಲವನ್ನು ಬಡ್ಡಿ ಸಮೇತ ತೀರಿಸಿಬಿಟ್ಟನು.

ಆಗ ಶ್ರೀಧರನು ಮದ್ರಾಸಿನಲ್ಲಿ (ಬಿ.ಎ. II ವರ್ಷ) ಕಲಿಯುತ್ತಿದ್ದನು. ಪರೀಕ್ಷೆಯಾಗದೆ ಅವನು ಬರುವ ಹಾಗಿರಲಿಲ್ಲ. ಅವನು ಬರುವ ಮೊದಲೇ (ಒಂದೇ ತಿಂಗಳಲ್ಲಿ) ಹೇಗಾದರೂ ಹಣವನ್ನು ಸಂಗ್ರಹಿಸಿ ಕಮಲೆಯ ಆಭರಣಗಳನ್ನು ಬಿಡಿಸಿ ಕಳುವೆನೆಂದು ಕಮಲೆಯ ತಂದೆಯು ಎಣಿಸಿದ್ದನು. ಆದರೆ ದುರಾದೃಷ್ಟವು ಸುಮ್ಮನಿರಲಿಲ್ಲ. ಹಣ

LEADING THE LEADERS AND THE LEAD TO
CITY'S LEADING BOARDING & LODGING

JAYA CAFE

(LAXMINIVAS)

ADJOINING THE BUS STAND, K. S. R. ROAD, MANGALORE.

Grams:
"LAXMINIVAS"

CENTRALLY SITUATED

NEXT TO BUS STAND

TWO FURLONGS FROM RAILWAY STATION.



Telephone:
95 & 82.

LOCATED IN THE SHOPPING CENTRE

NEAREST TO COLLEGES, COURTS, CINEMAS & RECREATION GROUNDS, ETC.

Boarding & Lodging with all the Uptodate Sanitary Fittings.

COMFORTABLE—WELL FURNISHED ROOMS WITH BATH ATTACHED—DELICIOUS DISHES—EVERY COMFORT YOU WISH IN A FIRST CLASS BOARDING AND LODGING HOUSE.

ಜಯ ಕೆಫೆ (ಲಕ್ಷ್ಮಿನಿವಾಸ)

— ಭೋಜನ ಮತ್ತು ವಸತಿ ಗೃಹ —

ಮಂಗಳೂರು ಬಸ್ ಸ್ಟೇಂಡಿನ ಬಳಿ, ಹಂಪನಕಟ್ಟೆ, ಮಂಗಳೂರು.

ಸ್ನಾನಗೃಹ—ಫೇನ್‌ಗಳಿಂದೊಡಗೂಡಿದ ಸೌಕರ್ಯದ ಕೊಠಡಿಗಳು—ರುಚಿಕರ, ಶುಚಿಕರ ಭೋಜನ -ಸಿನೆಮ, ಕೊಲೇಜು, ಕೋರ್ಟು, ರೈಲ್ವೆ ಸ್ಟೇಷನು, ಇತ್ಯಾದಿಗಳಿಗೆಲ್ಲ ತೀರ ಸಮೀಪ.

H. O.:—**COIMBATORE.**

PROP: **N. V. BHAT.**

ಕೈಗೆ ಸಿಕ್ಕಿದ ಎರಡೇ ದಿನಗಳಲ್ಲಿ ಕಮಲೆಯನ್ನು ಕರೆದುಕೊಂಡು ಹೋಗುವುದಕ್ಕೆಂದು ಶ್ರೀಧರನ ತಂದೆಯು ಬಂದೇಬಿಟ್ಟನು. ಕಮಲೆಯ ತಂದೆಯು ಎಷ್ಟು-ಆತಂಕ-ತಡೆ-ಅನಾನುಕೂಲತೆಗಳನ್ನು ಹೇಳಿಕೊಂಡನು. ಎಲ್ಲವೂ ನಿಷ್ಫಲವಾದುವು. ಕಮಲೆಯು ಗಂಡನ ಮನೆಗೆ ಹೋದಳು. ಒಂದು ವಾರ ಪೂರ್ಣವಾಗಲಿಲ್ಲ. ನಿರಾಭರಣಳಾಗಿ ಮರಳಿ ಬಂದು ತಂದೆಯ ಮನೆಯನ್ನು ಸೇರಿದಳು. ಆಗ ಕಮಲೆಗೆ ಹದಿನಾರು ವರ್ಷ ವಯಸ್ಸು.

ಬಂದ ಕಮಲೆಯನ್ನು ಕಂಡು ತಂದೆ ತಾಯಿಗಳು ಕಣ್ಣೀರ ಮಳೆಯನ್ನು ಸುರಿಸಿದರು. ಕಮಲೆಯ ಮೈಮೇಲೆ ಚಿಕ್ಕಾಸಿನ ಒಂದೇ ಒಂದು ಆಭರಣವಾದರೂ ಇರಲಿಲ್ಲ. ಎಲ್ಲವನ್ನೂ ಮಾವನು ತೆಗೆದುಕೊಂಡಿದ್ದನು........

ಆಗ ಶ್ರೀಧರನ ಪರೀಕ್ಷೆಯ ಸಮಯವಾಗಿದ್ದರೂ ಅವನ ಒಂದು ಕಣ್ಣು ಮನೆಯ ಕಡೆ ನೋಡಿಕೊಂಡೇ ಇದ್ದಿತು. ತಂದೆಗೆ ಮಾವನು ಕೊಡಬೇಕಾಗಿದ್ದ ಹಣದ ಕುರಿತು ಇನ್ನು ಮುಂದೆ ಏನೇನು ಅವ್ಯವಸ್ಥೆಗಳುಂಟಾಗಲಿಕ್ಕಿರುವುದೋ? ಎಂಬ ಸಮಸ್ಯೆಯೊಂದು ಅವನ ಅಂತರಂಗದಲ್ಲಿ ಮನೆಮಾಡಿಕೊಂಡು ಬಿದ್ದಿತ್ತು. ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಭರವಸೆಯೂ ಅವನಿಗಿರಲಿಲ್ಲ. ಏತನ್ಮಧ್ಯದಲ್ಲಿ ಮಾವನ ಮನೆಯಿಂದ ಒಂದು ಪತ್ರವೂ ಬಂದು ಕೈಸೇರಿತು. ಅದರಲ್ಲಿ "ಶ್ರೀಧರನ ತಂದೆಗೆ ಸಾಲ ಲೆಕ್ಕದ್ದು ಸಾಲ ನಿವೃತ್ತಿಯಾದ ವಿಷಯವು ಮತ್ತು ಅನಂತರದ ಎಲ್ಲಾ ವಿಚಾರಗಳು ಇದ್ದಕ್ಕಿದ್ದ ಹಾಗೆ ಬರೆದಿದ್ದುವು. ಈ ಪತ್ರವು ಬಂದ ಕೆಲವೇ ದಿವಸಗಳಲ್ಲಿ ಮತ್ತೊಂದು ಪತ್ರವು—ಶ್ರೀಧರನ ತಂದೆಯು ಬರೆದ ಪತ್ರ—ಬಂದು ಮುಟ್ಟಿತು. ಅದರಲ್ಲಿ "....ನಿನ್ನ ಪರೀಕ್ಷೆಯಾದೊಡನೆ ಹೊರಟು ಬಾ! ನಿನಗೆ ಎರಡನೆ ಲಗ್ನಕ್ಕೆ ಎಲ್ಲವನ್ನೂ ಹವಣಿಸಿರುವೆನು. ವಧುವು ಅಪ್ರತಿಮ ಸುಂದರಿ......." ಎಂದಿತ್ತು.

ಪರೀಕ್ಷೆಯು ಮುಗಿಯಿತು. ತನ್ನ ಮನೆಗೆ ಹೋಗಿ ಸಂಸಾರ ತಾಪದಲ್ಲಿ ಬಿದ್ದುಕೊಂಡು ಕುದಿಯುತ್ತಿರುವುದಕ್ಕಿಂತ, ಎಲ್ಲಾದರೂ ಹೋಗಿ ಸಾಧು ಸಹವಾಸದಲ್ಲಿ ಜನ್ಮ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕೆಂಬ ಅಭಿಲಾಷೆಯು ಹುಟ್ಟಿತು ಶ್ರೀಧರನಿಗೆ. ಅವನು ಮದರಾಸಿನಿಂದ ನೆಟ್ಟಗೆ ಹೊಸಕೋಟೆಗೆ ಬಂದನು. ಅಲ್ಲಿ ಅವನ ಅಭಿಲಾಷೆಯು ಫಲಿಸುವುದಕ್ಕೆ ಸಹಾಯವು ದೊರಕಿಕೊಂಡಿತು.

ಶ್ರೀಧರನು "ನವೀನಾನಂದ ಸಾಧು"ವಿನ ಭಕ್ತವೃಂದದಲ್ಲಿ ಅಂಗೀಕೃತನಾದನು. ಆ ಸಾಧುವಿನ ಶಿಷ್ಯವೃಂದದಲ್ಲಿ ಹೆಚ್ಚಿನವರು ಧನಿಕ ಮಹಿಳೆಯರೇ ಆಗಿದ್ದರು. ಆಗತಾನೇ ತಾರುಣ್ಯದ ಮೆಟ್ಟಿಲನ್ನು ಏರಿದ ಯುವತಿಯರು— ಪ್ರೌಢ ಹೆಂಗಳೆಯರೂ-ನೆರತ ವೃದ್ಧ ವನಿತೆಯರೂ ಇದ್ದರು. ಅಲ್ಲಿ ವಿಧವೆ-ಸಧವೆಯರೆಂಬ ಭೇದಭಾವಕ್ಕೆ ಎಡೆ ಇರಲಿಲ್ಲ. ಈ ಭಕ್ತವೃಂದದ ಪರಿಚಯದ ಭಾರವು ಶ್ರೀಧರನ ಮೇಲೆ ಬಿದ್ದುಕೊಂಡಿತು. ಅದನ್ನು ಮೊದಲು ಮೊದಲು ಸ್ವಲ್ಪವೂ ನ್ಯೂನವಿಲ್ಲದೆ ಮಾಡುತ್ತಿದ್ದನು. ಒಂದೊಂದು ವೇಳೆ ಪುರುಷರು ಮಾಡುವುದಕ್ಕೆ ಹೇಸುವ ಕಾರ್ಯಗಳನ್ನೂ ಅವನು ಮಾಡಬೇಕಾಗಿದ್ದಿತು. ಅಂತೂ ಶ್ರೀಧರನು ಆ ಸಾಧುವಿನ ಆಶ್ರಮದಲ್ಲಿ ಸಹನಾಶೀಲನಾಗಿ ಒಂದು ವರ್ಷಕಾಲವನ್ನು ಬಹಳ ಕಷ್ಟದಿಂದ ಕಳೆದನು. ಬರುಬರುತ್ತ ಆ ಸಾಧುವಿನ ಮತ್ತು ಅವನ ಭಕ್ತವೃಂದದ (ಮಹಿಳೆಯರ) ಒಮ್ಮೊಗದ ಆಚರಣವು ಅವನಿಗೆ ಅಸಹ್ಯವಾಗಿ ಕಂಡಿತು.

ಒಂದು ದಿವಸ ಶ್ರೀಧರನು ಆ ಸಾಧುವಿನ ಸನ್ನಿಧಿಯನ್ನು ಬಿಟ್ಟು ಬನಾರಸಿಗೆ ಹೋದನು. ಬನಾರಸಿನಲ್ಲಿ ಶ್ರೀಧರನಿಗೆ ಸೋದರ ಮಾವನಾಗುವನೊಬ್ಬನು ಇದ್ದನು. ಅವನ ಸಹಾಯದಿಂದ ಅಲ್ಲಿ ಒಂದು ಪ್ರಸಿದ್ಧ ವಿಮೆ ಸಂಘದಲ್ಲಿ ತಿಂಗಳಿಗೆ ಐವತ್ತು ರೂಪಾಯಿ ಸಂಬಳದ ಒಂದು ನೌಕರಿಯು ಶ್ರೀಧರನಿಗೆ ಸಿಕ್ಕಿತು. ಅಲ್ಲಿ ಎರಡು ವರುಷ ಈ ಕೆಲಸದಲ್ಲಿ ಇದ್ದು ಬಹು ಜನರ ಪರಿಚಯವೂ ಸ್ನೇಹವೂ ಅವನಿಗೆ ಆಗಿದ್ದಿತು. ಪ್ರತಿ ವರ್ಷದ ಅಂತ್ಯದಲ್ಲಿ ಸಂಬಳವೂ ಹೆಚ್ಚುತಲಿದ್ದಿತು. ಅದಲ್ಲದೆ ಲಾಭದ ಅಂಶವೂ ಸಿಗುತಿದ್ದಿತು.

ಬಿಡುವಿದ್ದ ದಿವಸಗಳಲ್ಲಿ ಶ್ರೀಧರನು ಸ್ನೇಹಿತರ ಮನೆಗೆ ಹೋಗುವದಿದ್ದಿತು. ಆಗ ಸುಖಗೋಷ್ಠಿಗಳನ್ನಾಡುವ ಸಂದರ್ಭದಲ್ಲಿ ಸಂಸಾರದ ಪರಿಸ್ಥಿತಿಯನ್ನು ಇನ್ನೊಬ್ಬನಿಗೆ ಹೇಳುವುದು. ಇವೇ ಮುಂತಾದ ಸಲ್ಲಾಪಗಳು ನಡೆಯುತ್ತಲಿದ್ದುವು! ಅದರಿಂದ ಶ್ರೀಧರನ ಮನೆಯ ಪರಿಸ್ಥಿತಿಯನ್ನು ಅವನ ಸ್ನೇಹಿತರಲ್ಲಿ ಹಲವರು ತಿಳುಕೊಂಡಿದ್ದವರು. ಎಂದಿನಂತೆ (ಬಿಡುವಿದ್ದ) ಒಂದು ದಿನ ಶ್ರೀಧರನನ್ನು ಒಬ್ಬ ಸ್ನೇಹಿತನು ತನ್ನ ಮನೆಗೆ ಉಪಾಹಾರಕ್ಕೆಂದು ಕರೆದುಕೊಂಡು ಹೋಗಿದ್ದನು: ಉಪಾಹಾರ ಸಮಯದಲ್ಲಿ ಅಲ್ಲಿಯ ಇಲ್ಲಿಯ ಮಾತುಕತೆಗಳು ನಡೆದು--ಶ್ರೀಧರನ ವಿವಾಹದ ನಂತರದ ದುರ್ಘಟನೆಗಳ ವಿಷಯವಾಗಿ ಅವನ ಸ್ನೇಹಿತನು ಮಾತೆತ್ತಿದನು. "ವಿವಾಹದ ನಂತರ—ಅಥವಾ ವಿವಾಹವಾಗುವುದಕ್ಕೆ ಮೊದಲಿನ ಘಟನೆಗಳಲ್ಲಿ ಕಮಲೆಯು ಪೂರ್ಣ ನಿರ್ಲಿಪ್ತಳಾಗಿದ್ದಳೆಂದು ನಿನ್ನ ಮಾತಿನಿಂದಲೇ ಸ್ಪಷ್ಟವಾಗುತ್ತಿದೆ—ಅವಳ ತಂದೆಯ ಬಡತನ—ನಿನ್ನ ತಂದೆಯ ಲೋಭ—ಮತ್ತು ಕ್ರೋಧ--ನಿನ್ನ ವೈರಾಗ್ಯ—ಇವೆಲ್ಲವುಗಳಿಂದ ಅವಳು ಎಲ್ಲರಿಗಿಂತ ಹೆಚ್ಚಿಗೆ ದುಃಖವನ್ನು ಅನುಭೋಗಿಸಿದ್ದಳು. ಪ್ರಕೃತದಲ್ಲಿಯೂ ಅನುಭವಿಸಿಕೊಂಡಿರಬಹುದು. ಇದೊಂದು ದೊಡ್ಡ ಅವಿಚಾರದ ಸಂಗತಿಯೆಂದು ನಿಸ್ಸಂದೇಹವಾಗಿ ಹೇಳಬಹುದು. ಹೇಗಾದರೂ ಸತಿಯನ್ನು ಕಷ್ಟದಿಂದ ಉದ್ಧರಿಸುವುದು ಪತಿಯ ಕರ್ತವ್ಯವಲ್ಲವೇ? ನೀನು ಇನ್ನೂ ಅಲಕ್ಷ್ಯದಿಂದ ಸಾಗಿ ಕುಳಿತುಕೊಂಡರೆ

ಮುಂದೆ ಪಾಪದ ಬಡ ಪ್ರಾಣಿಗಳು ನಿನ್ನ ಈ ವೈರಾಗ್ಯಕ್ಕೆ ಬಲಿ ಬೀಳಬಹುದೆಂದು ನನಗೆ ಸಂದೇಹವಿದೆ........"

ಕಳೆದ ತಿಂಗಳ ಸಂಬಳವು ಶ್ರೀಧರನ ಕೈಸೇರಿತ್ತು. ಅಂದು ಕಮಲೆಗಾಗಿ ಬಗೆ ಬಗೆಯ ವಸ್ತ್ರಗಳೇ ಮೊದಲಾದ ಹಲವು ವಸ್ತುಗಳನ್ನು ಕ್ರಯಕೊಟ್ಟುಪಡಕೆಂಡು ಹೊರಟು ಶ್ರೀಧರನು ಮಂಗಳೂರು ರೈಲ್ವೆ ಸ್ಟೇಷನಿಗೆ ಇಂದು ಬಂದ. ಇಳಿದಿದ್ದನು. ಆ ಯುವಕನೇ ಈ ಶ್ರೀಧರನು. ಎರಡು ಕೈಗಳಲ್ಲಿ ಎರಡು ಹೊರೆಗಳನ್ನು ಹಿಡಿದುಕೊಂಡು ನಡೆದು ಬಳಲಿದವನೇ ಶ್ರೀಧರನು.

೪

ಶ್ರೀಧರನು ಯುವತಿಯು ತೋರಿಸಿದ ದಾರಿಯಲ್ಲೇ ಮುಂದೆ ಹೋಗಿ ಮಾವನ ಗೃಹವನ್ನು ಸೇರಿದನು. ಆಗ ಏಳು ಗಂಟೆ ಸಂಧ್ಯಾಕಾಲ. ಉಪಾಹಾರಾದಿ ಸತ್ಕಾರಗಳು ನಡೆದ ಅನಂತರ ಅವನ ಅತ್ತೆಯು ಹಿಂದಿನ ಎಲ್ಲಾ ಸಮಾಚಾರವನ್ನು ವಿಶದವಾಗಿ ಹೇಳಿದಳು. ಶ್ರೀಧರನು ಅತ್ತೆಯ ರೂಪಾಂತರವನ್ನು ಕಂಡು ಸ್ತಂಭಿತನಾದನು. ಒಂದು ವರ್ಷವಾಯಿತು. ಕಮಲೆಯ ತಂದೆಯು ದಿವಂಗತನಾಗಿ--ಹತ್ತು ವರುಷ ವಯಸ್ಸಿನ ಒಬ್ಬ ಪುತ್ರನು—ಮತ್ತು ಗಂಡನ ಮನೆಯಿಂದ ಬಹಿಷ್ಕೃತಳಾದ (ನಿರಾಭರಣೆ) ಕಮಲೆ—ಇವರಿಬ್ಬರೊಂದಿಗೆ ಶ್ರೀಧರನ ಅತ್ತೆಯು ಜೀವನ್ಮೃತಾವಸ್ಥೆಯಲ್ಲಿ—ಅತೀ ಕಷ್ಟದಿಂದ ದಿನಗಳನ್ನು ಕಳೆಯುತ್ತಲಿರುವಳು. ನೆರೆ ಗ್ರಾಮದ ಪಾಠಶಾಲೆಯಲ್ಲಿ (ಸಂಬಳವಿಲ್ಲ) ಹುಡುಗನು ಕಲಿಯುತ್ತಿರುವನು. ತಾಯಿ ಮಗಳು ಚರಕದಲ್ಲಿ ನೂಲನ್ನೆಳೆದುಕೊಂಡು ಅದನ್ನು ವಿಕ್ರಯಿಸಿ, ಧನಿಕರ ಮಹಿಳೆಯರಿಗೆ ಮಕ್ಕಳ ಸಣ್ಣ ಸಣ್ಣ ಕುಪ್ಪಸ-ನಿಲುವಂಗಿ ಮುಂತಾದ ಉಡುಗೆಗಳನ್ನು ಹೊಲಿದು ಕೊಟ್ಟು ಹೇಗಾದರೂ ಜೀವನವನ್ನು ಸಾಗಿಸುವರು. ಮನೆಯು ಮಾರಿ ಹೋಗುವುದಗಲ್ಲಿದೆ. ಕಮಲೆಯ ತಂದೆಯು ಮಾನಕ್ಕಾಗಿ ಹೊಡೆದಾಡಿ ಮನೆಯಲ್ಲಿದ್ದ ಒಡವೆ ವಸ್ತುಗಳನ್ನೆಲ್ಲಾ ವಿಕ್ರಯಿಸಿ, ಪ್ರಯತ್ನಪೂರ್ವಕ ಮುಕ್ಕಾಲಂಶ ಸಾಲವನ್ನು ತೀರಿಸಿದ್ದನು. ಮೊದಲು ಕಮಲೆಯ ನಗಗಳನ್ನು ಹಣ ಕೊಟ್ಟು ಬಿಡಿಸಿ (ಕಮಲೆಯ) ಮಾವನ ಕೈಗೆ ಮುಟ್ಟಿಸಿದ್ದನು. ಉಳಿದ ಸಾಲವನ್ನು ತೀರಿಸುವ ಪ್ರಯತ್ನದಲ್ಲಿ ಇದ್ದನು. ಆದರೆ ಅವನಿಗೆ ಈ ಲೋಕದಲ್ಲಿ ಇರುವುದಕ್ಕೆ ಸಮಯವು ಸಿಗದೆ ಹೋಯಿತು. ಅದು ಈಗ ಬಡ್ಡಿಯೊಂದಿಗೆ ವೃದ್ಧಿಯಾಗಿ ಬಂದು ಸಾವಿರದಷ್ಟಕ್ಕೆ ಬಂದು ನಿಂತುಕೊಂಡಿದೆ. ಕಮಲೆಯ ತಂದೆಯು ಸ್ವರ್ಗಗಾಮಿ[illegible] ಗುವ ವರೆಗೆ ಅವನು ಅನುಭವಿಸಿದ ಕಷ್ಟಗಳು, ಅನಂ[illegible] ಉಳಿದ ತಮಗೆ ಬಂದೊದಗಿದ ತಾಪತ್ರಯಗಳು ಇವುಗಳ[illegible] ವನ್ನೂ ಹೇಳುತ್ತಿರುವಾಗ ಕಮಲೆಯ ತಾಯಿಯ ಕಣ್[illegible] ಗಳಿಂದ ಬಿಡುವಿಲ್ಲದೆ ನೀರು ಸುರಿಯುತ್ತಿದ್ದಿತು. ಶ್ರೀಧರ[illegible] ಅದೇ ಸ್ಥಿತಿಯಲ್ಲಿದ್ದ ತಲೆಯನ್ನು ತಗ್ಗಿಸಿ ಕೂತುಕೊಂಡು ದುಃಖದ ಕತೆಗಳನ್ನು ಕೇಳುತ್ತಲಿದ್ದನು. ಇದೆಲ್ಲವೂ ತ[illegible] ವೈರಾಗ್ಯದ ಪರಿಣಾಮವಲ್ಲದೆ ಮತ್ತೊಂದಲ್ಲವೆಂದು ಅವ[illegible] ಗ್ರಹಿಸಿದನು.

೦ ೦ ೦ ೦

ರಾತ್ರೆಯ ಊಟವಾದ ನಂತರ ತನಗಾಗಿ ಹಾಸಿ[illegible] ಹಾಸುಗೆಯಲ್ಲಿ ಶ್ರೀಧರನು ಮಲಗಿಕೊಂಡನು. ಅದು[illegible] ಕೋಣೆಯಲ್ಲಿ ತನ್ನ ಅತ್ತೆಯೊಬ್ಬಳಲ್ಲದೆ ಮತ್ತೊಂದು ಪ್ರಾ[illegible] ಯು ಇರುವುದನ್ನು ಶ್ರೀಧರನು ತಿಳಿದುಕೊಂಡಿದ್ದನು. ಮ[illegible] ಗೆಲಸಗಳನ್ನು ಮಾಡಿಕೊಟ್ಟು-ಕಮಲೆಯು ಶ್ರೀಧರನ ಕೋ[illegible] ಯೊಳಗೆ ಬಂದಳು. ಶ್ರೀಧರನು ಅವಳನ್ನು ನೋಡಿ ವಿಸ್ಮಿ[illegible] ನಾದನು. ಇನ್ನೊಮ್ಮೆ ಅವಳ ಆ ಮುಖವನ್ನು ಸ್ಥಿರದೃ[illegible] ಯಿಂದ ನಿರೀಕ್ಷಿಸಿ ನೋಡಿದನು—ಸರಿ! ಅವಳೇ ಇವಳ[illegible] ಇದು ಮೊದಲು ಮಾರ್ಗಾಯಾಸದಿಂದ ಬಳಲಿ ಬಿದ್ದುಕೊಂ[illegible] ಡಿದ್ದ ಶ್ರೀಧರನಿಗೆ ಸಹಾಯಮಾಡಿದ ಆ ಯುವತಿಯೇ [illegible] ಕಮಲೆಯು.

ಶ್ರೀಧರನು ಕಮಲೆಯ ಕೈಯನ್ನು ಹಿಡಿದುಕೊಂ[illegible] 'ಕಮಲೇ! ನಾನು ನಿನ್ನ ದುಃಖದ ಹೊರೆಗಳಲ್ಲಿ ಒಂದನ[illegible] ದರೂ ತೆಗೆದುಕೊಳ್ಳಲು ಇಂದಿನ ತನಕ ಸಮರ್ಥನಾಗ[illegible] ಹೋದೆನು. ಆದರೂ ನೀನು ಹೇಳದೆ ಕೇಳದೆ ನನ್ನ (ದುಃಖದ[illegible] ಹೊರೆಗಳ ಅರ್ಧಾಂಶ ಭಾರವನ್ನು ಹೊತ್ತುಕೊಂಡು ನನ[illegible] ದಾರಿಯನ್ನು ತೋರಿಸಿದೆ. ಅದಕ್ಕಾಗಿ ನನ್ನನ್ನು ಕ್ಷಮಿಸು[illegible] ಎಂದು ನುಡಿದನು.

ಕಮಲೆಯ ಬಾಯಿಯಿಂದ ಮಾತೇ ಹೊರಡಲಿಲ್ಲ[illegible] ಅವಳು ಕಂಬನಿಗಳಿಂದ ತೊಯ್ದ ತನ್ನ ಮುಖವನ್ನು ಮ[illegible] ಪಡಿಸಿ ಶ್ರೀಧರನ ಪಾದ ಪಂಕಜಗಳಲ್ಲಿ ಪ್ರಣಾಮಪೂರ್ವ[illegible] ವಾಗಿ ಪಾದಧೂಳಿಯನ್ನು ಕಂಬನಿಗಳಿಂದ ತೊಳೆದು ಬಿಟ[illegible] ಅಭಿಷೇಕ ಮಾಡಿದಳು. ಅವಳ ಆ ಕಂಬನಿಗಳು ದುಃಖ[illegible] ಕಂಬನಿಗಳೋ ಅಥವಾ ಆನಂದದ ಕಂಬನಿಗಳೋ? ಎಂ[illegible] ದನ್ನು ಶ್ರೀಧರನು ಕಂಡುಕೊಳ್ಳಲಾಗದವನಾದನು.

ಆರ್ಯ ದೇಶಭಕ್ತನ ಗುರಿ

ಲೇಖಕರು: ಶ್ರೀ. ಸಿಂಪಿ ಲಿಂಗಣ್ಣ, ಚಡಚಣ.

ದೇಶಭಕ್ತಿಯೆಂದರೇನು?

ಹೊಲಗದ್ದೆಗಳನ್ನು ಅವುಗಳ ಒಡೆಯನು ಪ್ರೀತಿಸುತ್ತಾನೆ. ಯಾಕಂದರೆ ಅವು ತನ್ನ ವಸ್ತುಗಳು. ಅಲ್ಲದೆ ಅವನು ಅವುಗಳಿಂದ ಅತಿಶಯವಾದ ಪ್ರಯೋಜನವನ್ನು ಪಡೆಯುತ್ತಾನೆ. ತನ್ನ ವಸ್ತುವಿದ್ದರೂ ಅದರ ಪ್ರಯೋಜನವು ಕಡಿಮೆಯಾದಾಗ ಅದರಿಂದ ಮನುಷ್ಯನು, ಬೇಸರಪಡುವುದುಂಟು. ಪ್ರಯೋಜನೀಯ ವಸ್ತುವು ಕೈಬಿಟ್ಟು ಹೋಗುವಾಗ ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟವಾಡುವುದೂ ಮನುಷ್ಯನಿಗೆ ಸ್ವಾಭಾವಿಕ. ಪ್ರಾಣಿಗಳಲ್ಲಿ ಸಹ ಈ ಸ್ವಭಾವವನ್ನು ನಾವು ಕಾಣುವೆವು. ಹೋರಾಟವಾಡುವಾಗ ದ್ರವ್ಯನಾಶವಾಗಬಹುದು, ಮಾನಹಾನಿಯಾಗಬಹುದು, ಪ್ರಾಣಕ್ಕೆರವಾಗಬಹುದು. ದ್ರವ್ಯ-ಮಾನ-ಪ್ರಾಣಗಳು ಹೋದರೂ ಅಡ್ಡಿಯಿಲ್ಲ. ಇಷ್ಟವಸ್ತುವೊಂದು ತನ್ನದಾಗಿ ಉಳಿದರೆ ಸಾಕೆನ್ನುವ ಮನಃಸ್ಥಿತಿಯು ಆ ಹೋರಾಟಗಾರನಲ್ಲಿ ಉಂಟಾಗಿರುತ್ತದೆ. ಇದು ಸ್ವವಸ್ತುವಿನ ಮೇಲಿನ ಪ್ರೀತಿಯಾಯಿತು. ಮಾರುವ ಪ್ರಸಂಗವಿದ್ದರೂ ತನ್ನ ಕುದುರೆಯನ್ನು ಮಾರಲಾರದೆ ಕಣ್ಣೀರಿಟ್ಟು ತಿರುಗಿ ಮನೆಗೆ ತಂದನೆಂದು ಅರಬನ ಕಥೆಯಲ್ಲಿ ಕೇಳಿದ್ದೇವೆ. ರಾಣಾ ಪ್ರತಾಪಸಿಂಗನು ತನ್ನ ಪ್ರೀತಿಯ ದೇಶವನ್ನು ಪುನಃ ತನ್ನ ವಶಕ್ಕೆ ತಂದುಕೊಳ್ಳಬೇಕೆಂದು ಒಂದೇ ಸವನೆ ಕಷ್ಟ ಸಹಿಸುತ್ತ ಇಪ್ಪತ್ತೈದು ವರುಷ ಹೋರಾಡಿದನೆಂಬ ಇತಿಹಾಸವಿದೆ. ನಮ್ಮ ನಿಮ್ಮಲ್ಲಿ ಸ್ವವಸ್ತುವಿನ ಮೇಲೆ ಪ್ರೀತಿಯಿರುವಂತೆ ರಾಜರಿಗೆ ಸ್ವದೇಶದ ಮೇಲೆ ಪ್ರೀತಿಯಿರುತ್ತಿದ್ದಿತು. ಯಾಕಂದರೆ ಆ ರಾಜರು, ದೇಶವು ಸ್ವಾಸ್ತಿ ಅಂದರೆ ಸ್ವಂತದ ಸ್ವತ್ತೆಂದು ತಿಳಿಯುತ್ತಿದ್ದರು. ಪ್ರೀತಿ ಪ್ರಾಣಾತ್ಮಕವಾಗಿರುವದರಿಂದ ಅದರ ಹಿಂಬಲ—ಮುಂಬಲಗಳಾಗಿ ಆಶೆ ಆಕಾಂಕ್ಷೆಗಳೂ,ತ್ಯಾಗಸೇವೆಗಳೂ ಬಲಿದಾನ ಪ್ರಾಣಾರ್ಪಣಗಳೂ ಇರುವುದುಂಟು. ಆಶೆ ಆಕಾಂಕ್ಷೆಗಳಿಂದ ದೇಶವನ್ನು ಪಡೆಯುವನು. ತ್ಯಾಗಸೇವೆಗಳಿಂದ ಅದನ್ನು ಸಂರಕ್ಷಿಸುವನು. ದೇಶವು ಕೈಬಿಡುವಾಗ ಬಲಿದಾನ ಪ್ರಾಣಾರ್ಪಣಗಳಿಂದ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುವನು. ಇಷ್ಟೆಲ್ಲ ಮಾಡಿದರೂ ಅದು ದೇಶಪ್ರೀತಿಯೇ ಎನಿಸಿಕೊಳ್ಳುತ್ತದಲ್ಲದೆ ದೇಶಭಕ್ತಿಯೆನಿಸಿಕೊಳ್ಳಲಾರದು. ದೇಶಭಕ್ತಿಯು ಪಶ್ಚಿಮದೇಶಗಳಿಂದ ಬಂದ ಮಾತೆಂದು ಹೇಳುತ್ತಾರೆ. ರಾಜನ ಸ್ವತ್ತೆನಿಸಿಕೊಳ್ಳುವ ದೇಶವು "ರಾಜನದೂ ಅಹುದು; ಪ್ರಜರದೂ ಅಹುದು" ಎನ್ನುವ ನಿಲವಾಗಲಿ, ರಾಜನದಲ್ಲ ಪ್ರಜರದೇ ದೇಶವೆನ್ನುವ ನಿಲವಾಗಲಿ ಮೊದಲು ವ್ಯವಹಾರಕ್ಕೆ ಬಂದದ್ದು ಪಶ್ಚಿಮದೇಶಗಳಲ್ಲಿ. ಅಂತೆಯೇ ರಾಜಸತ್ತಾತ್ಮಕವಾದ ರಾಜ್ಯವು ರಾಜಪ್ರಜಾಸತ್ತಾತ್ಮಕ ಅಥವಾ ಪ್ರಜಾಸತ್ತಾತ್ಮಕವಾಗಿ ಮಾರ್ಪಟ್ಟ ಕಥೆಗಳು ಕೇಳಸಿಗುತ್ತವೆ. ರಾಜ್ಯವು ಪ್ರಜಾಸತ್ತಾತ್ಮಕವೆನಿಸಿದರೂ ಹೊಲಗದ್ದೆಗಳಿಗೆ ಒಡೆಯನಾಗಿರುವಂತೆ ಯಾವ ಪ್ರಜನೂ ರಾಜ್ಯದ ಎಷ್ಟೊಂದು ಅಂಶಕ್ಕೂ ಒಡೆಯನಾಗಿರಲಾರನು. ಹೊತ್ತು ಬಂದಾಗ ಅಡವು ಹಾಕುವುದಕ್ಕಾಗಲಿ ಮಾರುವುದಕ್ಕಾಗಲಿ ಯಾವ ಪ್ರಜನಿಗೂ ಬರಲಾರದು. ಹೀಗಿದ್ದರೂ ಅವನು "ಜಮ್ಮ ನಾಡಿದು ಜಮ್ಮದು, ನಮ್ಮ ನಾಡಿದು ನಮ್ಮದು" ಎಂಬ ಅಭಿಮಾನ ತಾಳುತ್ತಾನೆ. ಅದರ ಕಲ್ಯಾಣವನ್ನು ಚಿಂತಿಸುತ್ತಾನೆ. ಕಾಪಾಡುವುದಕ್ಕೆ ಹೋರಾಡುತ್ತಾನೆ, ಹೊತ್ತು ಬಂದರೆ ಮಡಿಯುತ್ತಾನೆ. ಸ್ವಹಿತಕ್ಕಿಂತ ಸ್ವದೇಶಹಿತ ಮಿಗಿಲೆಂದೂ ಸ್ವನಾಶಗೊಳಿಸಿಯಾದರೂ ಸ್ವದೇಶಹಿತವನ್ನು ಸಾಧಿಸಬೇಕೆಂದೂ ಹೇಳುವ ಪ್ರಜೆಗಳು ಅಲ್ಲಿ ಹುಟ್ಟಿದರು. ಅಂಥ ಮನೋವೃತ್ತಿಯು ಅನ್ನ-ನೀರು-ಗಾಳಿಗಳಿಂದ ಅಲ್ಲಿ ಸಾರ್ವತ್ರಿಕವಾಗಿ ಹಬ್ಬಿತು. ದೇಶವನ್ನು ಪ್ರೀತಿಸುವ ರಾಜನ ಮನೋವೃತ್ತಿಯು ಶ್ರೇಷ್ಠವೆನಿಸಿದರೆ ಈ ಹೊಸ ಮನೋವೃತ್ತಿಯು ಶ್ರೇಷ್ಠತರವೆನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಸ್ವದೇಶ ಪ್ರೀತಿಯು ಸ್ವದೇಶಭಕ್ತಿಯಾಗಿ ಪರಿಣಮಿಸಿತು. ಸ್ವದೇಶದ ಕಲ್ಯಾಣಕ್ಕಾಗಿ ಸ್ವಾರ್ಥತ್ಯಾಗವನ್ನಲ್ಲದೆ ಪರರಿಗೆ ಅಹಿತವನ್ನೂ ಮಾಡಬಹುದೆನ್ನುವುದರ ಮಟ್ಟಿಗೆ ಸ್ವದೇಶ ಭಕ್ತಿಯ ಅರ್ಥವು ವಿಶಾಲಗೊಂಡಿತು. ಸ್ವದೇಶಕ್ಕಾಗಿ ಕಳವು ಕೊಲೆಗಳು ಸಹ ಪ್ರಶಂಸನೀಯವಾದವುಗಳೆಂದು ಎಣಿಸಲಾಯಿತು. ಭಾರತಕ್ಕೆ ಬರುಹೋಗುವ ಪೋರ್ತುಗೀಜರಲ್ಲಿ ದುಡಿಯಲಿಕ್ಕೆ ನಿಂತ ಒಬ್ಬ ಸಾಮಾನ್ಯ ಬ್ರಿಟಿಷನು, ಅವರ ಹಡಗದೊಳಗಿನ ಜಲಮಾರ್ಗದ ನಕ್ಷೆಯನ್ನು ಕದ್ದೊಯ್ದು ಇಂಗ್ಲಂಡದ ಅರಸನಿಗೆ ಕೊಟ್ಟು ತನ್ನ ದೇಶಭಕ್ತಿಯಿಂದ ಇತಿಹಾಸದಲ್ಲಿ ಪ್ರಸಿದ್ಧನಾಗಿದ್ದಾನೆ. ಜೊಸೇಫ ಮ್ಯಾಝಿನಿಯು ಸ್ವಾಭಾವಿಕವಾದ ಒಲವು ಸಾಹಿತ್ಯದ ಕಡೆಗಿತ್ತೆಂದೂ ಸ್ವದೇಶಕ್ಕೆ ಬಂದ ಗಂಡಾಂತರ ಪ್ರಸಂಗವನ್ನು ಬಗೆದು ತನ್ನ ಸಾಹಿತ್ಯದೊಲವನ್ನು ಒತ್ತಿ

ಇರಿಸಿ ರಾಜಕೀಯ ಆಂದೋಲನದಲ್ಲಿ ಹೊಕ್ಕು ಶ್ರೇಷ್ಟ-ದೇಶ ಭಕ್ತನಾದನೆಂದೂ ಕೇಳುತ್ತೇವೆ. ಹೊಲಮನೆಗಳ ನೆಲೆಯಿಲ್ಲದ ಕಂಗಾಲನು ಸಹ ಸ್ವಹಿತ-ಸ್ವಪ್ರವೃತ್ತಿಗಳನ್ನು ಗೋರಿಗೊಳಿಸಿ ಆತ್ಮಬಲಿದಾನ, ಪರಾಕ್ರಮಣ ಮೊದಲಾದ ಮಾರ್ಗಗಳಿಂದ ಸ್ವದೇಶದ ಹಿತವನ್ನೇ ಸಾಧಿಸಬೇಕೆನ್ನುವ ಮನಃಪ್ರವೃತ್ತಿಗೆ ಸ್ವದೇಶಭಕ್ತಿಯೆನ್ನುತ್ತಾರೆ. ಈ ಬದುಕು ಪಾಶ್ಚಾತ್ಯದೇಶ ಗಳಲ್ಲಿ ಸಿದ್ಧವಾದದ್ದು.

ರಾಷ್ಟ್ರೀಯತ್ವ ಬೇರೆ

ಪಾಶ್ಚಾತ್ಯದೇಶಗಳ ಯಂತ್ರಗಳಲ್ಲಿ ಸಿದ್ಧವಾಗಿ ಪರದೇಶ ಗಳ ಪೇಟೆಯಲ್ಲಿ ಮಾರಾಟಕ್ಕೆ ಬರುವ ಇತರ ಸಿದ್ಧವಸ್ತುಗಳಂತೆ ಸ್ವದೇಶಭಕ್ತಿಯೂ ಗಂಟುಕಟ್ಟಿ ಭಾರತಕ್ಕೆ ಬಂದಿತು. ಪಾಶ್ಚಾತ್ಯರಲ್ಲಿದ್ದ ದೇಶಭಕ್ತಿಯ ಮನಃಪ್ರವೃತ್ತಿಯು ಅವರನ್ನು ಜಗತ್ತಿನ ಜೀವನದಲ್ಲಿ ಇಂದು ಅಗ್ರಪಟ್ಟಕ್ಕೆ ಕುಳ್ಳಿರಿಸಿಬಿಟ್ಟಿದೆ. ಆದರಿಂದ ಪಾಶ್ಚಾತ್ಯರಿಗೆ ದ್ರವ್ಯ ಸಿಕ್ಕಿತು. ರಾಜ್ಯಮಹಾರಾಜ್ಯ ಗಳು ದೊರಕೊಂಡವು. ಅವರು ವಿಜ್ಞಾನಕ್ಕೆ ಅಧಿಪತಿಗಳಾದರು. ಪೃಥ್ವಿಯೇ ಅವರ ಕೈವಶಕ್ಕೆ ಬಂದಿತು. ಪಾಶ್ಚಾತ್ಯ ದೇಶಭಕ್ತರ ಸಂಪರ್ಕದಿಂದ ನಿರಂತರವಾದ ಪಾರತಂತ್ರ್ಯ ಪ್ರವೃತ್ತಿಯು ಕೆಲವರಲ್ಲಿ ಮನೆಮಾಡಿದರೂ ಅದೇ ಸಂಪರ್ಕ ದಿಂದ ಸ್ವಾತಂತ್ರ್ಯದಾಹವೂ ತಲೆದೋರಿತು. ಅವರ ಉಸಿರು ಬಡಿದೇ ಅರೆಜೀವಿಯಾಗಿ ಬಿದ್ದ ಮಾನವನು ಅದೇ ಉಸುರು ತಗುಲಿಯೇ ಜೀವಕಳೆ ತುಂಬಿ ಸಡ್ಡುಹೊಡೆದು ನಿಂತನು. ಅವರ ಮುದ್ದಿನ ಮದಗುಣಕಿಯಿಂದ ಮಬ್ಬುಗೊಂಡು ಮಲಗಿದ ಹೇಡಿಯು ಅದೇ ಮದಗುಣಕಿಯ ಮದ್ದು ತುಂಬಿ ಪರರ ಕುತೂ ಲಕ್ಕೀಡಾದನು. ಯಾಕಂದರೆ ಪ್ರೀತಿ ಪ್ರಾಣಾತ್ಮಕ. ಪ್ರಾಣವು, ಪ್ರಾಣವನ್ನು ತಿಂದು ಪ್ರಾಣ ತುಂಬಿಕೊಳ್ಳುತ್ತದೆ. ತುತ್ತಾಗುವ ಪ್ರಾಣವು ಎಚ್ಚರಗೊಳ್ಳುವ ವರೆಗೆ ತುತ್ತುವ ಪ್ರಾಣವು ಕಬಳಿಸಿಕೊಳ್ಳುತ್ತಲೇ ಇರುತ್ತದೆ. ಎಚ್ಚತ್ತ ಪ್ರಾಣದ ಹಳೆಹಸಿವೆ ನೆಲವನ್ನೆಲ್ಲಾ ತುತ್ತುವೆನೆಂದು ಬಾಯ್ದೆರೆದು ನಿಂತು ಬಿಟ್ಟರೆ ಜಟ್ಟಿಗೊಬ್ಬ ಪ್ರತಿಜಟ್ಟಿಯೆದುರಿಸಿದಂತಾಗಿ ಕೈಗೆ ಕೈ ಹತ್ತುವುದು ಸಹಜ. ಉಭಯತರಿಗೂ ದೆವ್ವಹಸಿವೆ. ಒಬ್ಬ ರನ್ನೊಬ್ಬರು ನುಂಗಬೇಕೆನ್ನುತ್ತಾರೆ. ದೆವ್ವಹಸಿವೆಯ ಎರಡು ದೇಶಗಳು ಎದುರುಬದುರಾಗಿ ನಿಂತಾಗ ಯಾವ ದೇಶವು ತುತ್ತಾಗುವುದೋ ಯಾವುದು ತುತ್ತುವುದೋ ನಿಯಮವೆಲ್ಲಿ? ಅಲ್ಲಿಯ ವರೆಗೆ ಆ ದೆವ್ವಹಸಿವೆಗೆ ಏನು ಆಹಾರ? ಆ ದೆವ್ವ ಹಸಿವೆಯಿಂದ ಉರಿಯುವ ದೇಶಭಕ್ತಿಯುಳ್ಳವರ ದೇಶಗಳಿಗೆ ಅನ್ಯದೇಶಗಳು ದೆವ್ವಹಸಿವೆಗೆ ನಿವಾಳಿಯಂತೆ ಆಹುತಿಯಾಗ ಬೇಕು! ಪ್ರಾಣದ ತಿನೆಯಾದ ಇಂಥ ದೇಶಭಕ್ತಿಯನ್ನು ಅಂಗಿಸಿ ಕೊಂಡರೆ ಅಲ್ಲಿ ರಾಜಪ್ರವೃತ್ತಿಯು ಜಾಗ್ರತವಾಗುವದೆಂದು ನಿಬಾಧವಾಗಿದೆ. ತಾಮಸಕ್ಕಿಳಿದ ಜನಾಂಗವನ್ನು ಸಾಯ ಗೊಡಬಾರದೆಂದು ಆಶಿಸುತ್ತಿದ್ದರೆ ರಾಜಸಪ್ರವೃತ್ತಿಯನ್ನು ಎಬ್ಬಿ[illegible] ಬೇಕಂತೆ. ಶ್ರೀ ವಿವೇಕಾನಂದರು ಹಿಂದುಸ್ಥಾನದ ಮೇ[illegible] ಇದೇ ಪ್ರಯೋಗವಮಾಡಿದರು. ಲೋಕಮಾನ್ಯ ತಿಲಕ[illegible] ತನ್ನವರ ತಾಮಸಪ್ರವೃತ್ತಿಯನ್ನು ಕಳೆಯಲಿಕ್ಕೆ ಪ್ರಾಣದ [illegible] ಕಳೆಗೇ ಚುಚ್ಚುಮದ್ದು ಹಾಕಿದರು. ಅಂದರೆ ದೇಶಭಕ್ತಿಯ[illegible] ಪಾಶ್ಚಾತ್ಯರ ಅನುಕರಣವಾದರೂ ಹಿಂದುಸ್ಥಾನವು ಎಚ್ಚರಿ[illegible] ದಕ್ಕೆ ಅದನ್ನೇ ಉಪಯೋಗಿಸಲಾಯಿತೆಂದೂ ಎಚ್ಚರಾದ ಬಳಿ[illegible] ಆ ಉಪಾಯ ಸಲ್ಲದೆಂದೂ ಶ್ರೀ ಅರವಿಂದರು ಅಭಿಪ್ರಾಯ[illegible] ಪಡುತ್ತಾರೆ. ಆದರೆ ಅವರೇ ಹೇಳುವ ಇನ್ನೊಂದು ಮಾತನ್ನ[illegible] ನಾವು ಎಷ್ಟೂ ಮರೆಯಬಾರದಾಗಿದೆ. ಏನಂದರೆ—"ಇದ[illegible] ಭಾರತದ ಕೆಲಕೆಲವು ಪ್ರಾಂತಗಳಿಗೆ ಇನ್ನೂ ಅವಶ್ಯವಿದೆ.[illegible] ದೇಶದ ಜಾಗ್ರತಿಗೆ ದೇಶಭಕ್ತಿಯು ಅತ್ಯಾವಶ್ಯಕವಾಗಿರುವಂ[illegible] ಆ ಜಾಗೃತಿಯ ಸಂರಕ್ಷಣೆಗೊಂದು ಉಪಾಯ ಬೇಡವೇ[illegible] "ಇದು ರಾಷ್ಟ್ರೀಯತ್ವದ ಯುಗ"ವಂತೆ. ರಾಷ್ಟ್ರೀಯತ್ವವೆಂದ[illegible] ಪಾಶ್ಚಾತ್ಯ ಮನೋವೃತ್ತಿಯು ದೇಶಭಕ್ತಿ ಅಲ್ಲ. ಭಾರತ[illegible] ಪ್ರಾಚೀನ ಆರ್ಯಜನಾಂಗದ ಮನೋವೃತ್ತಿಯಲ್ಲಿ ಹುಟ್ಟಿ[illegible] ದೇಶಭಕ್ತಿಗೆ ನಾವೀಗ ರಾಷ್ಟ್ರೀಯತ್ವವೆಂದು ಅನ್ನಬಹುದಾಗಿದೆ[illegible] ಆದ್ದರಿಂದ ದೇಶಭಕ್ತಿ ಬೇರೆ, ರಾಷ್ಟ್ರೀಯತ್ವ ಬೇರೆಯೆಂದ[illegible] ನಾವೀಗ ವಿಂಗಡಿಸಿದಂತೆ ಕಂಡರೂ ಅವು ಬೇರೆ ಬೇರೆ ಆಗಿಲ್ಲ[illegible] ಅವು ಬೇರೆ ಬೇರೆ ಭೂಮಿಗಳಲ್ಲಿ ಬೆಳೆದ ಬೆಳಸು, ಅಷ್ಟೇ.

ಅರ್ಥಭೇದ ಉಂಟು

ದೇಶಭಕ್ತಿಯುಳ್ಳವನು ಸ್ವಹಿತಕ್ಕಿಂತ ಸ್ವದೇಶಹಿತವೆ[illegible] ಹಿರಿಯದೆಂದು ಬಗೆಯುತ್ತಾನೆ. ರಾಷ್ಟ್ರೀಯತೆಯುಳ್ಳವನ[illegible] ಸ್ವಹಿತವು ದೇಶಹಿತದಲ್ಲಿ ಅಡಕವಾಗಿದೆಯೆಂದು ತಿಳಿಯು[illegible] ತ್ತಾನೆ. ದೇಶಭಕ್ತನು ಸ್ವದೇಶದವರಿಗಾಗಿ ಬಲಿದಾನ ಪರಾ[illegible] ಕ್ರಮಣಗಳನ್ನು ಉಪಯೋಗಿಸುತ್ತಿದ್ದರೆ, ರಾಷ್ಟ್ರೀಯ ಪುರುಷ[illegible] ನು ಸ್ವದೇಶದಾತ್ಮಕ್ಕೆ ತನ್ನಾತ್ಮವನ್ನು ಸಮರ್ಪಿಸುತ್ತಾನೆ. ಬಲಿ[illegible] ದಾನಕ್ಕೆ ಇಚ್ಛಾಪೂರ್ತಿಯ ಉದ್ದೇಶವಿರುತ್ತದೆ. ಸಮರ್ಪಣವು[illegible] ದೇವನಿಚ್ಛೆಯೇ ಪೂರ್ತಿಯಾಗಲೆನ್ನುವ ಮಹೋದ್ದೇಶವಿರು[illegible] ತ್ತದೆ. ದೇಶವು ತನ್ನದೆನ್ನುವ ಅಹಂಕಾರವು ದೇಶಭಕ್ತನಿಗಿರು[illegible] ವಂತೆ, ದೇಶವು ದೇಶದ್ದೇ ಎನ್ನುವ ನಿರಹಂಕಾರವು ರಾಷ್ಟ್ರೀ[illegible] ಯತೆಯಲ್ಲಿರುತ್ತದೆ. "ರಾಜ್ಯವು ನಿನ್ನದೂ ಅಲ್ಲ, ನನ್ನದೂ[illegible] ಅಲ್ಲ, ಅದು ಶ್ರೀ ವಿರೂಪಾಕ್ಷದೇವನದು" ಎಂದು ಕರ್ನಾಟಕ[illegible] ಸಿಂಹಾಸನ ಪ್ರತಿಷ್ಠಾಪನಾಚಾರ್ಯರಾದ ವಿದ್ಯಾರಣ್ಯರು[illegible] ವಿಜಯನಗರ ಸಿಂಹಾಸನಾಧಿಪತಿಯಾದ ಹರಿಹರರಾಯನಿಗೆ[illegible] ಉಪದೇಶಿಸಿದ್ದು. ಭಾರತದ ದೇಶಭಕ್ತಿ ಅಂದರೆ ರಾಷ್ಟ್ರೀಯತ್ವವೆ[illegible] ಸರಿ. ದೇಶಭಕ್ತಿಯು ಪರಾಕ್ರಮಣಕ್ಕೆ ಪ್ರೇರಿಸುತ್ತದೆ. ರಾಷ್ಟ್ರೀ[illegible] ಯತ್ವವು ಆತ್ಮಸಂರಕ್ಷಣಕ್ಕೆ ಪ್ರೇರಿಸಿ ಶರಣಾಗತ ಸಂರಕ್ಷಣೆಗೆ[illegible] ಪ್ರೇರೇಪಿಸುತ್ತದೆ. ದೇಶಭಕ್ತಿಯು ಲೋಕನಾಶಕ ವಿಜ್ಞಾ[illegible]

ನಕ್ಕೆ ಒಲಿಯುತ್ತಿದ್ದರೆ ರಾಷ್ಟ್ರೀಯತ್ವವು ದಿವ್ಯಜ್ಞಾನಕ್ಕೆ ತಲೆದೂಗುತ್ತದೆ. ದೇಶಭಕ್ತಿಯು ಕಸಗೊಂಡು ತಿನ್ನುವ ಪ್ರವೃತ್ತಿ ಹುಟ್ಟಿಸಿದರೆ ರಾಷ್ಟ್ರೀಯತ್ವವು ಹಂಚಿಕೊಂಡು ತಿನ್ನುವ ವ್ರತವನ್ನು ತೊಡಿಸುತ್ತದೆ. ದೇಶಭಕ್ತಿಯು ದುಡಿದವನಿಗೆ ಹರಿಯಗೊಡಬೇಡವೆಂದು ಹೇಳಿದರೆ, ರಾಷ್ಟ್ರೀಯತ್ವವು ಉಂಡು ದುಡಿಯೆಂದು ಉಸುರುವದು. ದೇಶಭಕ್ತಿಯು ವ್ಯಕ್ತಿಯ ನಿಲುವೆಯನ್ನು ನೂಣೆದು ಹಾಕುವದು. ಆದರೆ ರಾಷ್ಟ್ರೀಯತ್ವವು ವ್ಯಕ್ತಿಯ ಒಲುವೆಯನ್ನು ಬಿತ್ತರಿಸುವದು. ಕೈಸೋತಾಗ ದೇಶಭಕ್ತಿಯು ವಿಶ್ವಕಲ್ಯಾಣದ ಮಾತೆತ್ತಿದರೆ, ಕೈ ಚಾಚಿಕೊಂಡೇ ರಾಷ್ಟ್ರೀಯತೆಯು ವಿಶ್ವಕಲ್ಯಾಣವನ್ನು ಹಾರಯಿಸುತ್ತದೆ. ದೇಶಭಕ್ತನು ಸ್ವೇಚ್ಛಾಚಾರಿ—ಅತ್ಯಾಚಾರಿಯಾದಾಗಲೂ ದೇಶಕಲ್ಯಾಣ ಕುಶಲನೆಂದೂ ಲೋಕವಂದ್ಯನೆಂದೂ ಎಣಿಸಲ್ಪಡಬಹುದಾಗಿದೆ. ರಾಷ್ಟ್ರಪುರುಷನು ನಿಗ್ರಹಿಯಾಗಿದ್ದಲ್ಲದೆ ಯಾವ ತ್ಯಾಗ ಮಾಡಿದರೂ ವ್ಯರ್ಥವೆಂದು ಬಗೆಯುವನು. ಹೀಗೆ ದೇಶಭಕ್ತಿ ಹಾಗೂ ರಾಷ್ಟ್ರೀಯತ್ವ ಇವುಗಳಲ್ಲಿ ಅರ್ಥ ಭೇದವಿದ್ದರೂ ರಾಷ್ಟ್ರೀಯತ್ವವೆಂದರೆ ಭಾಗತದ ದೇಶಭಕ್ತಿಯೇ ಸರಿ. ಅದಕ್ಕೆ ಆರ್ಯದೇಶಭಕ್ತಿಯೆನ್ನುವುದು ತೀರ ಒಪ್ಪು.

ದೇಶಭಕ್ತನ ಗುರಿ

ದೇಶಭಕ್ತಿಯನ್ನರಿಯದೆ ದೇಶಭಕ್ತನ ವಿಷಯವನ್ನು ತಿಳಕೊಳ್ಳುವುದು ದುಸ್ತರವಾಗಿದ್ದಂತೆ, ದೇಶಭಕ್ತನ ಬಣ್ಣವನ್ನು ಬಗೆಯದೆ ಆತನ ಗುರಿಯನ್ನು ನಿರ್ಧರಿಸುವುದು ತೀರಾ ದುಸ್ತರವಾಗಿದೆ. ದೇಶವೆಂದರೆ ಪರ್ವತ, ನದಿ, ಅರಣ್ಯ ಮೊದಲಾದವುಗಳಿಂದ ಕೂಡಿದ ಪ್ರದೇಶವೆನ್ನುವುದು ವಾಡಿಕೆಯಾಗಿದೆ. ಬಣ್ಣಬಣ್ಣದ ಸೃಷ್ಟಿಯನ್ನು ಮೆಚ್ಚಿ ಮಾರುವೋಗುವನುಟ್ಟಿದವರಂತೆ ಪಾಶ್ಚಾತ್ಯ ದೇಶಭಕ್ತರು ದೇಶವನ್ನು ಮೆಚ್ಚುತ್ತಾರೆ. ಅಲ್ಲಿಯ ಕವಿಗಳು ದೇಶಭಕ್ತಿಯಿಂದ ಎದೆತುಂಬಿ ಹಾಡುತ್ತಾರೆ. ಬಹಳ ವರ್ಷಗಳ ತರುವಾಯ ಸೆರೆಮನೆಯಿಂದ ಹೊರಗೆ ಬಂದ ಜೊಸೇಫ ಮ್ಯಾಝಿನಿಯು ತನ್ನ ದೇಶದ ಮಣ್ಣಿನಲ್ಲಿ ಬಿದ್ದು ಎದೆಗೊತ್ತಿಕೊಂಡು ಅದರ ಬಣ್ಣವನ್ನು ಕಂಡು ಅದರ ಸ್ಪರ್ಶವನ್ನು ಉಂಡನಂತೆ. ಏನೂ ಇಲ್ಲದ ಬರಡು ಮಾನವನಲ್ಲಿ ದೇಶಪ್ರೀತಿ ಹುಟ್ಟಿದರೆ ಅದು ಕಡಿಮೆ ಆಗಲಿಲ್ಲ. ನಿರ್ಜೀವಿಯಾಗಿ ಬಿದ್ದುಕೊಂಡಿರುವುದಕ್ಕಿಂತ ಪಾಶ್ಚಾತ್ಯ ದೇಶಭಕ್ತಿಯನ್ನು ಆವೇಶಿಸಿಕೊಳ್ಳುವುದು ಸಾಮಾನ್ಯ ಮಾತಲ್ಲ. ಆದರೆ ಆರ್ಯವಂಶಜರಾದ ಭಾರತೀಯರಿಗೆ ಆ ಗುರಿಯು ಸಾಕಾಗದು. ರಾಷ್ಟ್ರೀಯತ್ವವು ಈ ಯುಗದ ಧರ್ಮವೆನ್ನುವೆವಾದರೆ, ಆರ್ಯರಾಷ್ಟ್ರೀಯತ್ವದ ತತ್ವಗಳಾದ ನಿಗ್ರಹಜೀವನ, ಜ್ಞಾನಾರ್ಜನ, ಅನಾಥ ಸಂರಕ್ಷಣ, ಸ್ತ್ರೀ ಸನ್ಮಾನ ಮೊದಲಾದವುಗಳನ್ನು ಪಾಲಿಸುವುದು. ಪಾಶ್ಚಾತ್ಯಸೇವಾ ಸುಧಾರಣೆಗಳಂತೆ ಇವುಗಳನ್ನು ಬರಿಯ ಹೆಸರ ಮೇಲೆ ಮಾತ್ರ ಪ್ರಯೋಗಬರುವಂತಿಲ್ಲ. ಆರ್ಯತತ್ವಗಳನ್ನು ಅಳವಡಿಸಿಕೊಳ್ಳದೆ, ಗಳನ್ನು ಪ್ರಸಾರಗೊಳಿಸುವುದು ಸಾಧ್ಯವೇ ಇಲ್ಲ. ಆದ್ದರಿಂದ ಅವುಗಳನ್ನು ಅಳವಡಿಸಿಕೊಳ್ಳುವ ಮೊದಲು ಅವುಗಳನ್ನು ಪಡಕೊಂಡವರನ್ನು ಸಮೀಪಿಸುವುದು ಆವಶ್ಯಕ. ಅವರ ಹತ್ತಿರಕ್ಕೆ ಹೋದ ಮೇಲೆ ಅವರು ಹೇಳಿದ್ದನ್ನು ಕೇಳಿಕೊಳ್ಳಲಿಕ್ಕೆ ಸಿದ್ಧನಾಗಿರುವವಕ್ಕೆ ತನ್ನ ಪೂರ್ವಗ್ರಹಿಕೆಗಳನ್ನು ಇಲ್ಲದಂತೆ ಮಾಡಿಕೊಳ್ಳಲಿಕ್ಕೂ ಸಿದ್ಧನಿರಬೇಕಾಗುತ್ತದೆ. ಪಾಶ್ಚಾತ್ಯದೇಶಭಕ್ತರು ತಮ್ಮ ತತ್ವಗಳನ್ನು ವೃತ್ತಪತ್ರಗಳಲ್ಲಿ ಬರೆಬರೆದು ತೂರುತ್ತಾರೆ. ಭಿತ್ತಿಪತ್ರಿಕೆಗಳನ್ನು ಅಂಟಿಸುತ್ತಾರೆ. ರೇಡಿಯೊದಲ್ಲಿ ಹಲಬುತ್ತಾರೆ. ನಿಧಿ ಸಂಗ್ರಹಿಸಿ ಪ್ರಕಟನೆಗಳನ್ನು ಅಗ್ಗವಾಗಿಯೋ ಪುಕ್ಕಟೆಯಾಗಿಯೋ ಹಂಚುತ್ತಾರೆ. ಆದರೆ ಅವೆಲ್ಲವೂ ದಣಿವಾಟದ ದಾರಿಗಳು ಮಾತ್ರವೇ. ಆದರೆ ಆರ್ಯದೇಶಭಕ್ತನು ನಿಂತನಿಂತಲ್ಲಿ ಸಹಸ್ರಾರು ಜನರನ್ನು ತನ್ನ ಪ್ರಭಾವಕ್ಕೆಳೆಕೊಳ್ಳಬಲ್ಲ ವಿದ್ಯುತ್ ಯಂತ್ರವಾಗಿರುತ್ತಾನೆ. ಆತನು ತನ್ನ ಮಾತು ಮಾಣಿಕವಾಗಿಸುತ್ತಾನೆ. ಪ್ರಚೋದಕ ವ್ಯಾಖ್ಯಾನವು ಅವನಿಗೆ ಬೇಡ. ಪ್ರಭಾವಯುತವಾದ ನಾಲ್ಕೇ ಮಾತು ಸಾಕು. ಮಹಾತ್ಮಾಗಾಂಧಿಯವರ ಆಯುಷ್ಯವೆಲ್ಲ ಭಾರತ ಸ್ವಾತಂತ್ರ್ಯ, ಹರಿಜನೋದ್ಧಾರ, ಖಾದಿ ಪ್ರಚಾರ, ಹಿಂದು ಮುಸ್ಲೀಮ ಐಕ್ಯ ಮೊದಲಾದ ಕಾರ್ಯಗಳಲ್ಲಿಯೇ ಕರಗಿ ಹೋಗುತ್ತಿದ್ದಂತೆ ಕಂಡರೂ ಅವರಿಗೆ ಸತ್ಯದರ್ಶನವು ಜೀವಿತೋದ್ದೇಶವಾಗಿತ್ತೆಂದು ಅವರೇ ಹೇಳುತ್ತಿದ್ದರು. ಶ್ರೀ ಅರವಿಂದರಾದರೋ ಗುಡ್ಡ, ಕಲ್ಲು, ಅಡವಿ, ಹೊಳೆ ಇವುಗಳಿಂದ ಕೂಡಿದ ಭಾರತಮಾತೆಯಷ್ಟೇ ತಮಗೆ ಈಪ್ಸಿತವಲ್ಲವೆಂದೂ, ಜೀವಂತ ಭಾರತಮಾತೆಯನ್ನೇ ತಾವು ಹಾರಯಿಸುವೆವೆಂದೂ ತಮ್ಮ ಒಂದು ಪತ್ರದಲ್ಲಿ ಬರೆದು ಮುಗಿಸದೆ ತಮಗಿದ್ದ ಜೀವನದ ಮೂರು ಮೂಲೋದ್ದೇಶಗಳಲ್ಲಿ ಎಷ್ಟೊಂದು ಕಠಿಣಮಾರ್ಗವಿದ್ದರೂ ದೇವನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಒಂದು ಉದ್ದೇಶವೆಂದೂ ಹೇಳಿದ್ದಾರೆ. ಅಲ್ಲದೆ ಬರಬರುತ್ತ ಆ ಮೂರು ಮೂಲೋದ್ದೇಶಗಳೂ ಕಡೆಯ ಒಂದಾದ ದೈವಸಾಕ್ಷಾತ್ಕಾರದಲ್ಲಿ ವಿಲಯನವಾಗಿ ಹೋದವೆಂದೂ ಇನ್ನೊಂದು ಕಡೆಯಲ್ಲಿ ಹೇಳಿದ್ದಾರೆ. ಆರ್ಯದೇಶಭಕ್ತಿಯ ಆದರ್ಶವ್ಯಕ್ತಿಗಳಾದ ಮ. ಗಾಂಧಿಯವರಿಗೆ ಸತ್ಯ ದರ್ಶನವೇ ಅವರ ಜೀವನದ ಗುರಿಯಾಗಿದ್ದರೆ, ದಿವ್ಯ ದೇಶಭಕ್ತಿಯ ಇನ್ನೊಬ್ಬ ಆದರ್ಶ ವ್ಯಕ್ತಿಗಳಾದ ಶ್ರೀ ಅರವಿಂದರಿಗೆ ಜೀವಂತ ಭಾರತ ಮಾತೆಯನ್ನೊಳಗೊಂಡ ದೇವಸಾಕ್ಷಾತ್ಕಾರವೇ ಗುರಿಯಾಗಿದೆ. ಈ ಇಬ್ಬರೂ ಆದರ್ಶವ್ಯಕ್ತಿಗಳು ಪರಮೋದ್ದೇಶದ ಗುರಿಯನ್ನು ತಮ್ಮ ಮುಂದೆ ಇಟ್ಟುಕೊಂಡವರು. ಆದರೆ ಅವರು ಅದಕ್ಕಾಗಿ ಜೀವನದಲ್ಲಿ ನಡೆಸಿದ ಹೋರಾಟಗಳೇ ಬೇರೆಯಾಗಿದ್ದವು. ಒಬ್ಬರಿಗೆ ಆಂದೋಲನವು ಹೊರ ಮಗ್ಗುಲಿನ

ದುಡಿಮೆ, ಒಳಗೆ ಸಾಕ್ಷಾತ್ಕಾರದ ನೋಟ. ಇನ್ನೊಬ್ಬರಿಗೆ ಹೊರಗೆ ಪ್ರಶಾಂತ ಜೀವನದ ಏಕಾಂತ, ಒಳಗೆ ದೈವಸಾನ್ನಿಧ್ಯ ಹಾಗೂ ಅದರ ವಿತರಣೆ. ಆದ್ದರಿಂದ ಆರ್ಯ ದೇಶಭಕ್ತನು ಹೊರಮುಗ್ಗುಲಿಗೆ ಯಾವ ಉದ್ದಿಮೆಯನ್ನೇ ಕೈಕೊಂಡಂತಿದ್ದರೂ ಒಳಗಿನ ನೋಟವು ದೈವಸಾಕ್ಷಾತ್ಕಾರವಾಗಿರಬೇಕೆಂದು ಸ್ಪಷ್ಟವಾಗುತ್ತದೆ. ದೈವಸಾಕ್ಷಾತ್ಕಾರವೆಂದರೆ ಸರ್ವದಲ್ಲಿ ಸರ್ವತ್ರದಲ್ಲಿ ಪರಮಾತ್ಮದರ್ಶನ. ಅಷ್ಟಾದರೆ ಈ ಜಗತ್ತಿನಲ್ಲಿ ಎಲ್ಲಿಯ ಮೋಹ, ಎಲ್ಲಿಯ ದುಃಖ ಎಂದು ಉಪನಿಷತ್ತು ಕೇಳುತ್ತದೆ. ಆ ಮೋಹ ದುಃಖಗಳಿಗೆ ಅಂಜಿಯೇ ಅವುಗಳ ನಿವಾರಣೆಗಾಗಿ ಇಷ್ಟೊಂದು ಕಾಲ ರಾಜರ ಶಾಸನ, ಅವತಾರಿಗಳ ಧರ್ಮಸ್ಥಾಪನ, ಜ್ಞಾನಿಗಳ ಉಪದೇಶ ಸಾಗಿಬಂದಿವೆ. ಅವೆಲ್ಲವೂ ಬೇರು, ಕಾಂಡ, ಎಲೆ, ಹೂಗಳಾದಂತೆ ಕಾಲಕಾಲಕ್ಕೆ ತಮ್ಮ ಕರ್ತವ್ಯಮಾಡುತ್ತ ಬಂದವು; ಅದರಿಂದ ಅವುಗಳ ಉದ್ದೇಶವೂ ಸಾಧಿಸಿತು. ಇಂದು ತೆನೆಯಾಗುವ ಸಂಧಿ ಒದಗಿ ಬಂದಿದೆ. ಆದ್ದರಿಂದ ಹೂವು ಹೂವಿಗೂ ಕಾಳು ಹಿಡಿದ ಹಾಲು ತುಂಬಬೇಕಾಗಿದೆ. ಈ ಬೆಳಸು ಮೊದಲಿಗೆ ಭಾರ ದಲ್ಲಿ ಸಮೃದ್ಧವಾಗಿ ಬೆಳೆಯಬೇಕಾಗಿದೆ. ಅಂತೆಯೇ ಆಯ ಜ್ಞಾನವನ್ನು ನಾವೆಲ್ಲರೂ ಕೈಗೂಡಿಸಿಕೊಳ್ಳಬೇಕಾಗಿದೆ; ಮೈ ಗೂಡಿಸಿಕೊಳ್ಳಬೇಕಾಗಿದೆ; ಮನಗೂಡಿಸಿಕೊಳ್ಳಬೇಕಾಗಿದೆ. ಆ ಆರ್ಯಜ್ಞಾನವೆಂದರೆ ಸರ್ವದಲ್ಲಿ ಸರ್ವತ್ರದಲ್ಲಿ ಪರಮಾತ್ಮ ದರ್ಶನ. ಇದೇ ಆರ್ಯ ದೇಶಭಕ್ತನ ಗುರಿ. ಈ ಗು ಯಿಂದ ಒಳಜೀವನವು ಶಾಂತಿತುಷ್ಟಿಗಳಿಂದ ತುಂಬಿಕೊಂಡು ಹೊರ ಜೀವನವು ವೈಯಕ್ತಿವಾಗಿಯೂ, ಸಾರ್ವತ್ರಿಕವಾ ಗಿಯೂ ಸಮೃದ್ಧವಾಗಿರುತ್ತದೆ. ಗುರಿಯ ದರ್ಶನವು ಅರ್ಧ ಸಿದ್ಧಿಯೇ ಸರಿಯೆಂದು ಹೇಳುವ ಮಾತು ತುಂಬ ಸತ್ಯ ವಾಗಿದೆ. ಗುರಿಯನ್ನು ಅರಿತ ಮೇಲೆ ಅದರ ಸಾಧನ ಮಾರ್ಗವನ್ನು ಕಂಡುಕೊಳ್ಳುವುದು ಅಷ್ಟೇನೂ ಬಿಗಿಯೆನಿಸ ಲಾರದು.

ಇದು ಸಾರ್ವಜನಿಕ ವಿಷಪ್ರಯೋಗವಲ್ಲವೆ!

ಲೇಖಕರು:
ವೈದ್ಯಗುರು ಶ್ರೀ. ಡಿ. ಕೆ. ಭಾರದ್ವಾಜರು, ಬೆಂಗಳೂರು.

ಇತ್ತೀಚೆಗೆ ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯಲ್ಲಿ ಇಂಜೆಕ್ಶನ್ ಪದ್ಧತಿಯು ಪ್ರಗತಿ ಹೊಂದುತ್ತಲಿದೆ. ಅದರ ಪ್ರಗತಿಗೆ ಮೂಲಕಾರಣ ಬಂಡವಾಳಗಾರರ ಬಂಡವಾಳ. ಬಂಡವಾಳಗಾರರ ಲಾಭ ಸಂಪಾದನೆಗಾಗಿ ಅವರ ಕೈಕೆಳಗೆ ಬ್ಯಾಕ್ಟೀರಿಯಾಲಾಜಿಕಲ್ ಅಥವಾ ಕೆಮಿಕಲ್ ಸಂಶೋಧನಾಲಯಗಳಲ್ಲಿ ಕೆಲಸಮಾಡುತ್ತಿರುವ ಬ್ಯಾಕ್ಟೀರಿಯಾಲಿಜಿಸ್ಟರು ಮತ್ತು ಕೆಮಿಸ್ಟರು (ರಸಾಯನ ಶಾಸ್ತ್ರಿಗಳು). ಇವರು ಇಲಿಗಳನ್ನೊ ಮೊಲಗಳನ್ನೊ ಹಿಡಿದು, ಅವುಗಳಲ್ಲಿ ಕೃತ್ರಿಮ ರೋಗಗಳನ್ನು ಹುಟ್ಟಿಸಿ, ಆ ಕೃತ್ರಿಮ ರೋಗ ನಿವಾರಣೆಗೆ ಕೃತ್ರಿಮ ಔಷಧೋಪಾಯಗಳನ್ನು ಹುಡುಕುವುದು, ಅವರು ಮಾಡುತ್ತಿರುವ ಕೆಲಸ. ಈ ಕೃತ್ರಿಮೋಪಾಯಗಳಲ್ಲಿ ಅವರಿಗೆ ಯಶಸ್ಸು ದೊರೆತ ಕೂಡಲೆ ಅವರಿಗೆ ಯಶಸ್ಸನ್ನು ತಂದುಕೊಟ್ಟ ಔಷಧಿಯು ಸುಂದರವಾದ ಪ್ಯಾಕಿಂಗ್‌ಗಳಲ್ಲಿ, ಅವುಗಳನ್ನು ವೈಜ್ಞಾನಿಕ ಪಾರಿಭಾಷಿಕ ಶೈಲಿಯಲ್ಲಿ ಬರೆದು ಅಂದವಾಗಿ ಮುದ್ರಿಸಿರುವ ಜಾಹಿರಾತುಗಳ ಸಹಿತ ಪ್ಯಾಕಾಗಿ ನಮ್ಮ ದೇಶದ ಡಾಕ್ಟರುಗಳ ಮೇಜಿನ ಮೇಲೆ ಬಂದು ವಿರಾಜಿಸುವುದು. ಅದರಲ್ಲಿ ಆ ಬಂಡವಾಳಗಾರ ಸಂಬಳ ಅಥವಾ ಸಂಭಾವನೆ ಪಡೆದ ಉಚ್ಚಪದವಿಯ ಡಾಕ್ಟರ ಅಭಿಪ್ರಾಯವೂ ಇರುವುದು, ಅಂದ ಮೇಲೆ ನಮ್ಮ ದೇಶದ ಡಾಕ್ಟರುಗಳು ಅವುಗಳ ವಿಚಾರವಾಗಿ ಹೆಚ್ಚಿನ ಯೋಚನೆ ಮಾಡಬೇಕಾಗಿಯೆ ಇರುವುದಿಲ್ಲ. ಏಕೆಂದರೆ, ಅವರು ಓದಿರುವುದು ಪಾಶ್ಚಾತ್ಯರ ಪಠಪುಸ್ತಕಗಳನ್ನು. ಆ ಪಾಶ್ಚಾತ್ಯ ಗುರುಗಳ ಅಭಿಪ್ರಾಯವು ಅಮೌಲ್ಯವಾದುದಲ್ಲವೆ? ಆದ್ದರಿಂದ ನಮ್ಮ ಡಾಕ್ಟರು ಕಣ್ಣು ಮುಚ್ಚಿಕೊಂಡು ಅವುಗಳನ್ನು ತಮ್ಮ ದೇಶೀಯ ಬಂಧುಗಳ ಮೇಲೆ ಪ್ರಯೋಗಿಸಲಾರಂಭಿಸುವರು. ಆ ಪ್ರಯೋಗಕ್ಕೆ ಮುಂಚೆ ರೋಗಿಯ ಸ್ಥಿತಿಯು ಹೇಗಿತ್ತು ಅವುಗಳ ಪ್ರಯೋಗದ ನಂತರ ಉಂಟಾಗಿರುವ ಬದಲಾವಣೆಗಳಾವವು ಎಂದು ಸೂಕ್ಷ್ಮವಾಗಿ ಪರಿಶೀಲಿಸಲು ನಮ್ಮವರಿಗೆ ಸಮಯವೂ ಇಲ್ಲ ಮತ್ತು ಅವರು ಅದಕ್ಕಾಗಿ ತಮ್ಮ ಸ್ವಂತ ರುಗ್ಣಾಲಯ (ಕ್ಲಿನಿಕಲ್ ಚಾರ್ಟ್)ಗಳನ್ನೂ ಇಟ್ಟುಕೊಂಡಿಲ್ಲ. ಇತ್ತೀಚೆಗೆ ಅಮೇರಿಕಾ ಇಂಗ್ಲೆಂಡ್ ದೇಶಗಳನ್ನು ಅನೇಕ ಸುಪ್ರಸಿದ್ಧ ಡಾಕ್ಟರುಗಳ ಖಂಡನೆಗೊಳಗಾಗಿ ಅವುಗಳ ಸಾರ್ವಜನಿಕ ಪ್ರಯೋಗವನ್ನು ನಿಲ್ಲಿಸಲಾಗಿರುವಂಥ ಔಷಧಿಗಳನ್ನು, ಇಲ್ಲಿ ನಮ್ಮ ದೇಶದ ಡಾಕ್ಟರುಗಳು ನೀರಿನಂತೆ ಧಾರಾಳವಾಗಿ ಉಪಯೋಗಿಸುತ್ತಿರುವರು. ಅಂಥಾ "ಆಶ್ಚರ್ಯಕರ ಗುಣ(!)" ವನ್ನೀಯುವಂತಹ ನಿಜವಾಗಿಯೂ ಮನುಷ್ಯ ದೇಹಕ್ಕೆ ಅಪಾಯಕರವಾಗಿರುವಂತಹ **ಸಲ್ಫನೊಮೈಡ್ಸ್, ಸ್ಟ್ರೆಪ್ಟೋಮೈಸಿನ್, ಬಿ. ಸಿ. ಜಿ. ವ್ಯಾಕ್ಸೀನ್, ಪೆನ್ಸಿಲಿನ್** ಇವುಗಳ ಪ್ರಯೋಗದ ಅನಂತರದ ಪರಿಣಾಮಗಳ ಕಡೆ ಸಾರ್ವಜನಿಕರ ಗಮನವನ್ನು ಸೆಳೆಯುವುದೇ ಈ ಸಂಕ್ಷಿಪ್ತ ಲೇಖನದ ಗುರಿಯಾಗಿದೆ.

ಸಲ್ಫನೋಮೈಡ್ಸ್

ಈ ಔಷಧಿಯನ್ನು ವಿವಿಧ ಬಂಡವಾಳಗಾರರ ಕಂಪೆನಿಗಳು, ವಿವಿಧ ರೂಪಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ತಯಾರಿಸಿ ನಮ್ಮ ದೇಶಕ್ಕೆ ರಫ್ತು ಮಾಡುತ್ತಿರುವುದರಿಂದ ಅವುಗಳ ಸಂಖ್ಯೆಯು ದಿನದಿನಕ್ಕೆ ಬೆಳೆಯುತ್ತಿದೆ. ಈಗ್ಗೆ ಆರು ವರುಷಗಳ ಹಿಂದೆ ಅವುಗಳ ಸಂಖ್ಯೆ ೨೦೮ ಇತ್ತು. 'ಈ ಸಂಖ್ಯೆ ಇಲ್ಲಿಗೆ ನಿಲ್ಲುವಂತಿಲ್ಲ' ಎಂದು ಲಂಡನಿನ 'ಲ್ಯಾನ್ಸೆಟ್' ಪತ್ರಿಕೆ (೧೮-೫-೧೯೪೫ ಪುಟ ೬೩೪) ಭವಿಷ್ಯ ನುಡಿದಿತ್ತು. ಈಗ ಅವುಗಳ ಸಂಖ್ಯೆಯು ಇನ್ನೂ ಹೆಚ್ಚಿರುವುದು. ಈ ಸಲ್ಫನೋಮೈಡ್ಸ್ ಚಿಕಿತ್ಸೆಯಿಂದ ವಿವಿಧ ರೋಗಿಗಳಲ್ಲಿ ಉಂಟಾಗಿರುವ ವಿವಿಧವಾದ ೧೫೦ಕ್ಕಿಂತಲೂ ಹೆಚ್ಚಾದ ದುಷ್ಪರಿಣಾಮಗಳನ್ನು* ವಿಲಾಯತಿಯ "ಮೆಡಿಕಲ್ ಜರ್ನಲ್"ಗಳಲ್ಲಿ ಪ್ರಕಟಿಸಲಾಗಿದೆ ಮತ್ತೆ ಇಂಗ್ಲೆಂಡಿನ ರಾಜರ ವೈದ್ಯರಾದ ಡಾ। ಕೆನೆತ್ ವಾಕರ್ ಎಫ್. ಆರ್. ಸಿ. ಎಸ್., ಅವರು—"ಸಲ್ಫನೋ

* The Medica Use of Sulphanomides, War Memorandum No. 10, Medical Research Council [1945].

ಮ್ಸ್ಪೈಡ್ ಚಿಕಿತ್ಸೆಯಿಂದ, ಪಾಂಡುರೋಗ (ಅನೀಮಿಯಾ), ಗಂಡಸರಲ್ಲಿ ಮಕ್ಕಳಾಗದಂತೆ ವೀರ್ಯ ಜೀವಾಣುನಾಶ, ಹೆಂಗಸರಲ್ಲಿ ಗರ್ಭಸ್ರಾವ, ಅನೇಕರಲ್ಲಿ ನರಗಳ ಮತ್ತು ಮಾನಸಿಕ ರೋಗಗಳು ಉಂಟಾಗುತ್ತಿವೆ ಎಂದು ಎಚ್ಚರಿಕೆ ಸೂಚಿಸಿರುವರು. ಆದರೆ ಆ ಪ್ರಸಿದ್ಧ ಡಾಕ್ಟರುಗಳ ಅಭಿಪ್ರಾಯಗಳು ಬ್ರಿಟಿಷ್ ಮೆಡಿಕಲ್ ಜರ್ನಲ್, ಲ್ಯಾನ್ಸೆಟ್, ಮೆಡಿಕಲ್ ವರ್ಲ್ಡ್, ಮೆಡಿಕಲ್ ಟ್ರೈಮ್ಸ್ ಮೊದಲಾದ ಪ್ರಸಿದ್ಧ ವೈದ್ಯರ ಪತ್ರಗಳಲ್ಲಿ ಪ್ರಕಟವಾಗುತ್ತಿವೆ. ಅವುಗಳಿಗೆ ಹೆಚ್ಚು ವರ್ಗಣಿಯನ್ನು ತೆತ್ತು, ಆ ಪತ್ರಿಕೆಗಳನ್ನು ತರಿಸಿ ಓದುವ ಡಾಕ್ಟರುಗಳು ಎಷ್ಟು ಜನರಿದ್ದಾರೆ? ಮತ್ತೆ ಅವರಾ 'ಬಿಜೀ ಪ್ರಾಕ್ಟೀಸ್'ನಲ್ಲಿ ಅವುಗಳನ್ನು ಓದಲು ಸಮಯವಾದರೂ ಎಲ್ಲಿದೆ? ಅವರು ದುಡ್ಡು ತೆಗೆದುಕೊಂಡು ರೋಗಿಗೆ ಔಷಧಿ ಕೊಟ್ಟ ಕೂಡಲೆ ಅವರ ಕರ್ತವ್ಯ ಮುಗಿಯಿತೆಂದು ತಿಳಿಯುವರು. ಮುಂದೆ ರೋಗಿಯನ್ನು ದೇವರೇ ಕಾಪಾಡಬೇಕು. ಪ್ರಸಿದ್ಧ ಪಾಶ್ಚಾತ್ಯ ಡಾಕ್ಟರುಗಳ ವಿರೋಧಾಭಿಪ್ರಾಯ, ಹೇಳಿಕೆಗಳೆಲ್ಲ ಕಂಪೆನಿಗಳ ಜಾಹೀರಾತಿನ ಸಾಹಿತ್ಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗ್ತುತ್ತಿವೆ! ಅಮೇರಿಕಾದಲ್ಲಿ ಈಗ ಸಲ್ಫಾ ಔಷಧಿಗಳನ್ನು ಕೊಡಲು ಡಾಕ್ಟರರು ನಿರಾಕರಿಸುತ್ತಿರುವರು! ನಮ್ಮದೇಶದ ಡಾಕ್ಟರುಗಳಿಗೆ ಇದು ಸ್ಪರ್ಶಮಣಿಯಾಗಿದೆ!

ಸ್ಟ್ರೆಪ್ಟೋಮ್ಯಾಸಿನ್

ಇಂಗ್ಲೆಂಡಿನ ಆರೋಗ್ಯ ಮಂತ್ರಿಯ ಹೇಳಿಕೆಯಂತೆ ಈ ಔಷಧಿಯಿಂದ ಈಗ್ಗೆ ೬ ವರುಷಗಳ ಮುಂಚೆ ಚಿಕಿತ್ಸೆ ಮಾಡಲು ಒಬ್ಬ ರೋಗಿಗೆ ೨೦೦೦ ಪೌಂಡು ವೆಚ್ಚವಾಗುತ್ತಿತ್ತೆಂದೂ, ಈಚೆಗೆ ಅದರ ತಯಾರಿಯನ್ನು ಹೆಚ್ಚಿಸಿರುವುದರಿಂದ ವೆಚ್ಚವು ಇನ್ನೂ ಸ್ವಲ್ಪ ಕಡಿಮೆಯಾಗಬಹುದೆಂದೂ ಅಂದಾಜಾಗಿತ್ತು. ಇದು ಕ್ಷಯರೋಗಕ್ಕೆ ಮುಖ್ಯ ರಾಮಬಾಣವೆಂದು ಹೊಗಳಲಾಗಿದೆ. ಆದರೆ ಅದರ ವಿಚಾರದಲ್ಲಿ ಪಾಶ್ಚಾತ್ಯ ದೇಶದವರ ಅಭಿಪ್ರಾಯವನ್ನು ಬಿಡಿ, ನಮ್ಮ ದೇಶದ ಒಬ್ಬ ಸುಪ್ರಸಿದ್ಧ ಕ್ಷಯರೋಗ ಚಿಕಿತ್ಸಾಲಯದ ಚೀಫ್ ಮೆಡಿಕಲ್ ಆಫೀಸರೆನಿಸಿರುವ ಡಾ| ಎಮ್. ಕೆ. ವೈದ್ಯ, ಎಮ್. ಎಸ್ (ಬಾಂಬೆ) ಇವರ ಸ್ವಂತ ಅನುಭವದ ಮಾತುಗಳನ್ನು ಕೇಳಿ: ಇವರು ಹುಕೇರಿ ರೋಡ್ (ಬೆಳಗಾವ್ ಜಿಲ್ಲೆಯಲ್ಲಿ ರೈಲ್ವೇ ಸ್ಟೇಶನ್) ಕರ್ನಾಟಕ ಹೆಲ್ತ್ ಇನ್ಸಿಟ್ಯೂಟಿನ ಮೆಡಿಕಲ್ ಆಫೀಸರು†, ಅವರ ಅನುಭವದ ನುಡಿಗಳಿವು:—"ಸ್ಟ್ರೆಪ್ಟೋಮ್ಯಾಸಿನ್ ಚಿಕಿತ್ಸೆಗೆ ಮೋಹಗೊಂಡ ಲಕ್ಷಾವಧಿ ಕ್ಷಯರೋಗಿಗಳು ತಮ್ಮ ಆಪ್ತರನ್ನು ಭಿಕ್ಷಾಧೀಶರಾಗಿ ಮಾಡಿ, ನಿರಾಶೆಯ ಕೊಳ್ಳದಲ್ಲಿ ದೂಡಿ, ಕಾಲಾಂತರದಿಂದ ಮರಣ ಹೊಂದುತ್ತಿದ್ದಾರೆ. ಇಷ್ಟೇ ಅಲ್ಲದೆ "ಸ್ಟ್ರೆಪ್ಟೋ-ಕ್ಷಯ" ರೋಗಿಗಳ ಒಂದು ವರ್ಗವೇ ಹುಟ್ಟುತ್ತಿದೆ. ಈ

---

† ಜಮುಹಿಂದ, ಹುಬ್ಬಳ್ಳಿ (೫-೨-೧೯೫೦)

ರೋಗಿಗಳ ಮೂಲಕ ಸ್ಟ್ರೆಪ್ಟೋ ಕ್ಷಯರೋಗವು ಭರದ
ಪ್ರಚಾರವಾಗುತ್ತಿದ್ದು, ಅದಕ್ಕೆ ಗುರಿಯಾದವರು ತಮ್ಮ ಬಾ
ವರನ್ನು ಆ ರೋಗಕ್ಕೆ ಗುರಿಮಾಡುತ್ತ ಯಮಪಟ್ಟಣಕ್ಕೆ ಅ
ತ್ತಿದ್ದಾರೆ. ಅದ್ದರಿಂದ ಸ್ಟ್ರೆಪ್ಟೋಮೈಸಿನ್ ಬಹಳ ಘಾತುಕವ
ಔಷಧವಾಗಿದೆ. ಮೊದಲಿನ ಅರ್ಧಭಾಗದ ಅವಧಿ
(೧) ಡಾಕ್ಟರಿಗೆ ಮೋಸ ಮಾಡಿ, ರೋಗಿಗಳಿಗೆ ಗುಣವಾದ
ತೋರಿಸುತ್ತದೆ. (೨) ರೋಗಿಗಳಿಗೆ ಮೋಸಮಾಡಿ ಅವ
ಪುನರ್ಜನ್ಮ ಕೊಟ್ಟಂತೆ ತೋರಿಸುತ್ತದೆ. (೩) ಆಪ್ತೇಷ್ಟ
ಮೋಸಮಾಡಿ ರೋಗಿಗಳ ಸಲುವಾಗಿ ಬೇಕಾದಷ್ಟು ದು
ವೆಚ್ಚಮಾಡಲು ಅವರನ್ನು ಹಚ್ಚುತ್ತದೆ. **ಉತ್ತರಾ**
ಸಮಯದಲ್ಲಿ—(೧) ಡಾಕ್ಟರು ತಮ್ಮ ಯಶಸ್ಸಿಗಾಗಿ ಆಸ
ಪಡುತ್ತಿರುವಷ್ಟರಲ್ಲಿಯೆ, ಸೊರಗುತ್ತಿರುವ ರೋಗಿಯನ್ನು
ರೆದುರಿಗೆ ನಿಲ್ಲಿಸಿ ಅವರನ್ನು ಹತಾಶಗೊಳಿಸುವುದು. ಏಕೆಂ
ಆಗ ಸ್ಟ್ರೆಪ್ಟೋಮಾಯಿಸಿನವು ರೋಗವನ್ನು ಗುಣಪಡಿಸುವ
ದೂರವೇ ಉಳಿಯಿತು, ಅದರ ಮೂಲಕ ದೈನಂದಿನ ಇ
ಉಪಾಯಗಳು ಕೂಡ ನಿರುಪಯುಕ್ತವಾಗುವವು. ರೋಗಿ
ಅಸಹಾಯನಾಗಿ ಮೃತ್ಯುಮುಖದಲ್ಲಿ ಬೀಳುತ್ತಾನೆ.
ಶಕ್ತಿ ಇರುವಾಗ್ಗೆ ರೋಗಿಯು ತನ್ನ ನಿರೋಗಿತ್ವವನ್ನು
ಮಾಡುವುದಕ್ಕಾಗಿ ಎಲ್ಲರೊಡನೆ ಉತ್ಸಾಹದಿಂದ ಮತ್ತು ಕ
ಕೊಂಡು ವರ್ತಿಸುತ್ತಾನೆ. ಮತ್ತು ಸ್ಟ್ರೇಪ್ಟೋಮೈಸಿನ
ಕೂಡ ಆಸುಗೊಳ್ಳದಂತೆ ತನ್ನಲ್ಲಿರುವ ಕ್ಷಯ ಜಂತುಗಳ
ಅವರಲ್ಲಿ ಹರಡುತ್ತಾನೆ. ಪೂರ್ವಾರ್ಧದಲ್ಲಿ ಸ್ಟ್ರೆಪ್ಟೋಮೈಸಿ
ನಿಂದ ಶಕ್ತಿಯು ಬೆಳೆಯುತ್ತಿದ್ದಂತೆ ಕ್ಷಯ ಮತ್ತು ಇ
ರೋಗಗಳ ಜಂತುಗಳ ಬೆಳವಣಿಗೆಯೂ ಸಾವಕಾಶವ
ಮತ್ತು ಗೊತ್ತಾಗದಂತೆ ಆಗುತ್ತಿರುತ್ತದೆ. ಮನುಷ್ಯ
ವರ್ಧನೆಯು ಒಂದು ಮರ್ಯಾದೆಯ ವರೆಗೆ ನಡೆದಿರುತ್ತ
ಆ ಮರ್ಯಾದೆಯು ಒಮ್ಮಿಲ್ಲೊಮ್ಮೆ ಬರಲೇಬೇಕು. ಅ
ಬರುವವರೆಗೆ ಮತ್ತು ಪೀಳಿಗೆಪೀಳಿಗೆಗಳ ವರೆಗೆ, ಸ್ಟ್ರೆ
ಮೈಸಿನ್ ಔಷಧದಿಂದ ಪುಷ್ಟವಾಗುತ್ತಿರುವ ಈ ಜಂತು
ತಮ್ಮ ಶಕ್ತಿಯನ್ನು ಕಾಯ್ದುಕೊಳ್ಳುತ್ತವೆ. ಯಾರ ಯ
ಮೇಲೆ ಅದರ ದಾಳಿಯು ನಡೆಯುವುದೊ ಅವರಿಗೆ ಅವು ತ
ಸಾಮರ್ಥ್ಯದ ಪ್ರಭಾವವನ್ನು ತೋರಿಸುತ್ತವೆ. ಈ ಮೇ
ದುಸ್ಸಾಧ್ಯ ಮತ್ತು ಅಸಾಧ್ಯವಾದ ಕ್ಷಯರೋಗ ನಿಃಸಂಶ
ನಾಗಿ ಘಾತುಕವಾಗುತ್ತ ನಡೆದಿದೆ. ಅವಿಚಾರದಿಂದ ಸ್ಟ್ರೆ
ಮೈಸಿನ್ ಔಷಧ ಕೊಡಲ್ಪಟ್ಟ ಪ್ರತಿಯೊಬ್ಬ ಮನುಷ್ಯನು
ಸಾವಿರಾರು ಬಂಧುಗಳನ್ನು ರೋಗ ಮುಕ್ತವಾಗಬಹುದ
ಸ್ಥಿತಿಯಿಂದ ದೂರ ತಳ್ಳುತ್ತಿದ್ದಾನೆ. ಇಂತಹ ಉದ್ಗಾರ
"ಬ್ರಿಟಿಷ್ ಮೆಡಿಕಲ್ ಜರ್ನಲ್"ನ ತಜ್ಞರ ಬಾಯಿಂದ ಹೆ
ಟಿವೆ. ದುರ್ದೈವದಿಂದ, ದ್ರವ್ಯಲೋಭಿ ವೈದ್ಯವರ್ಗವು
ಭಯಂಕರ ಸತ್ಯವನ್ನು ಬದಿಗೆ ಸರಿಸಿ, ಈ ಔಷಧವ

ಬೇಕಾದ ರೋಗಗಳಿಗೆ ಸ್ವಲ್ಪವೂ ಅನುಮಾನವಿಲ್ಲದೆ ಕೊಡುತ್ತಿದೆ ಅವರ ಭಯಂಕರ ಪರಿಣಾಮವು ತಜ್ಞರಿಗೆ ಎದ್ದು ಕಾಣುತ್ತಿದೆ."–ಇದರ ಮೇಲೆ ನಮ್ಮ ಟೀಕೆ ಅನಗತ್ಯ. ಈ ದುಷ್ಪರಿಣಾಮವನ್ನು ಕಂಡೂ ಕಂಡೂ ಭಾರತ ಸರಕಾರವು "ಸ್ಟ್ರೆಪ್ಟೊಮೈಸಿನ್" ಆಮದಿಗಾಗಿ "ಕ್ಷಯರೋಗದ ಮೊಹರಿನ ಚೀಟಿಗಳನ್ನು ಸಾರ್ವಜನಿಕರಲ್ಲಿ ಮಾರಿ ಹಣ ಸಂಗ್ರಹ ಮಾಡುವುದು ಶೋಚನೀಯವಾಗಿದೆ. ಇದು, ಸಾರ್ವಜನಿಕ ವಿಷಪ್ರಯೋಗಕ್ಕೆ ಸರಕಾರ ತಾನೇ ಪ್ರೋತ್ಸಾಹವಿತ್ತಂತಾಗದೆ?

ಪೆನ್ಸಿಲಿನ್—ಬಿ. ಸಿ. ಜಿ. ವ್ಯಾಕ್ಸೀನ್

ವಿಲಾಯತಿಯಲ್ಲಿ ಸುಪ್ರಸಿದ್ಧ ಡಾಕ್ಟರುಗಳು ಪೆನ್ಸಿಲಿನ್ ಚಿಕಿತ್ಸೆಯಿಂದ ಮುಂದೆ ಅನೇಕ ಚರ್ಮರೋಗಗಳು ಹುಟ್ಟುತ್ತಿವೆ ಎಂದು ಮನಗಂಡು, ಈಗ ಅಲ್ಲಿ ಇದರ ಉಪಯೋಗವನ್ನೇ ನಿಲ್ಲಿಸುತ್ತಿರುವರು. . ನಮ್ಮ ದೇಶದ ಡಾಕ್ಟರಿಗೆ ಇದು ಕಾಮಧೇನುವಿನಂತಾಗಿದೆ. ಮುಂದೆ ಪೆನ್ಸಿಲಿನ್ ರೋಗಿಯನ್ನು ದೇವರೇ ಕಾಪಾಡಬೇಕು.

ನಮ್ಮ ದೇಶದಲ್ಲಿ ಮಕ್ಕಳಿಗೆ, ಜನರಿಗೆ, ಸಾಕಷ್ಟು ಬೆಣ್ಣೆ, ತುಪ್ಪ, ಮೊದಲಾದ ಪುಷ್ಟಿಕರವಾದ ಪದಾರ್ಥಗಳು ಸಿಕ್ಕುತ್ತಿಲ್ಲವೆಂಬ ನೆಪದಿಂದ ಡಾಲ್ಡಾ, ವನಸ್ಪತಿ ಮೊದಲಾದ ಕೃತ್ರಿಮ ವಸ್ತುಗಳನ್ನು ತಯಾರಿಸಿ ತಮ್ಮ ವ್ಯಾಪಾರಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಿರುವ ನಮ್ಮ ದೇಶದ ಬಂಡವಾಳಗಾರರ ಕಂಪೆನಿಗಳಂತೆ ಯುರೋಪಿನ ಜಿನೀವಾ ನಗರದಲ್ಲಿ W. H. O. ಎಂಬ ವಿಶ್ವ ಆರೋಗ್ಯ ಸಂಸ್ಥೆಯೊಂದು ಬಂಡವಾಳಗಾರರ ಪ್ರೇರಣೆಯಿಂದ ಹುಟ್ಟಿಕೊಂಡು, ಜಗತ್ತಿನಲ್ಲಿ ಕ್ಷಯರೋಗ ನಿವಾರಣೆ ಮಾಡುವ ನೆಪದಿಂದ ಬಿ. ಸಿ ಜಿ. ವ್ಯಾಕ್ಸೀನ್ ವ್ಯಾಪಾರವನ್ನು ಹೂಡಿರುವುದು. ಪಾಶ್ಚಾತ್ಯ ದೇಶದ ಸುಪ್ರಸಿದ್ಧ ಡಾಕ್ಟರುಗಳು ಇದರ ಪ್ರಯೋಗವನ್ನು ಖಂಡಿಸಿರುವಾಗ, ಭಾರತ ಸರ್ಕಾರದವರು ಇದಕ್ಕೆ ಪ್ರೋತ್ಸಾಹವಿತ್ತಿರುವುದು ನಿಜವಾಗಿಯೂ ಬಹು ಹೇಯವಾದ, ಪ್ರಜಾದ್ರೋಹದ, ಪ್ರಜೆಗಳಲ್ಲಿ ಕ್ಷಯರೋಗದ ಬೀಜಗಳನ್ನು ಬಿತ್ತುವ ಕೆಲಸವನ್ನು ಅದನ್ನ ನೆರವೇರಿಸು[illegible] ದೌರ್ಭಾಗ್ಯ, ಈ ಬಿ ಸಿ ಜಿ ಪ್ರಚಾರಕ್ಕೆ [illegible] ಸಂಬಳ ಪಡೆದು W. H. O. ಸಂಸ್ಥೆಯ ಪ್ರಸಿದ್ಧ ತಜ್ಞ ಅಧಿಕಾರಿಯೆನಿಸಿಕೊಂಡು ಡಿಲ್ಲಿಯಲ್ಲಿ ಸುಖಾಸೀನರಾಗಿರುವ **ಡಾ|| ಪಿ. ಟಿ. ಬೆಂಜಮಿನ್** ಹೀಗೆ ಹೇಳಿರುವರು—"ಕಳೆದ ಇಪ್ಪತ್ತು ವರ್ಷಗಳಿಂದ ಅನೇಕ ದೇಶಗಳಲ್ಲಿ ಮಾಡಿರುವ ಪ್ರಯೋಗಾನುಭವಗಳಿಂದ ಬಿ. ಸಿ. ಜಿ ಯು ಕ್ಷಯರೋಗ ನಿರೋಧಕ್ಕೆ ಬಹು ಸುರಕ್ಷಿತ ಉಪಾಯವೆಂದು ಕಂಡುಬಂದಿದೆ."

ಅದೇ ಪ್ರಕಾರ, ಇಂಗ್ಲೆಂಡಿನ ಹೇಲ್ ಯುನಿವರ್ಸಿಟಿಯಲ್ಲಿ ಸೀನಿಯರ್ ಮೆಡಿಕಲ್ ಆಫೀಸರ್ [illegible] ಬ್ರ್ಯಾಡ್ಲಿ ಅವರು ಹೇಳುವುದೇನೆಂದರೆ "ಬಿ ಸಿ ಜಿ ಯ ಗುಣಕಾರಕ ಪ್ರಭಾವದ ಬಗ್ಗೆ ಇನ್ನೂ ಸಂಶಯ ಉಳಿದಿದೆ. ಮತ್ತೆ ಕಳೆದ ೨೦ ವರ್ಷಗಳ ಅದರ ಪ್ರಯೋಗದ ಅನುಭವವು ಇಂದು ವೈದ್ಯವರ್ಗದವರ ಮನಸ್ಸನ್ನು ಹೆಚ್ಚು ಗೊಂದಲಕ್ಕೆ ಸಿಕ್ಕಿಸಿದೆ. ಅದರಿಂದಾವ ಫಲವೂ ಕಾಣುತ್ತಿಲ್ಲ"

ಈ ಎರಡು ಅಭಿಪ್ರಾಯಗಳಿಂದ ವಾಚಕರು ಅದರ ಗುಣಾವಗುಣಗಳನ್ನು ನಿರ್ಣಯಿಸಿಕೊಂಡು, ಮುಂದಿನ ಚುನಾವಣೆಯಲ್ಲಿ, ನಮ್ಮ ದೇಶದಲ್ಲಿ ಕ್ಷಯರೋಗವು ಹೆಚ್ಚುವುದಕ್ಕೆ ಮೂಲ ಕಾರಣವಾದ ಕೃತ್ರಿಮ ಡಾಲ್ಡಾ, ವನಸ್ಪತಿ, ವೆಜಿಟೆಬಲ್ ಆಯಿಲ್ ಇವುಗಳ ಪ್ರಚಾರವನ್ನು ನಿರ್ಮೂಲಗೊಳಿಸಿ, ಮೇಲೆ ಹೇಳಿರುವ ಪಾಶ್ಚಾತ್ಯ ಔಷಧಿಗಳ ಆಮದಿಗೆ ಕೊಡುವ ಹಣವನ್ನು ದೇಶದಲ್ಲಿ ಎಲ್ಲರಿಗೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಕೊಡುವುದಕ್ಕಾಗಿ ಉಪಯೋಗಿಸಲು ಸರ್ಕಾರವನ್ನು ಒತ್ತಾಯ ಪಡಿಸುವೆವು ಎಂದು ಖಚಿತವಾಗಿ ಹೋರಾಡಲು ಸಾಮರ್ಥ್ಯವಿರುವವರಿಗೆ ಮಾತ್ರ ನಿಮ್ಮ ಮತದಾನ ಮಾಡಬೇಕಾಗಿ ವಿನಂತಿ.

ಜವದ ಪ್ರಪಂಚ



ಲೇಖಕರು:
ಶ್ರೀ ಬಿ. ದಯಾನಾಥ್.

ಒಂದು ಸೆಕೆಂಡ್ ಎಷ್ಟು ನೀಳ ಎಂದು ಗೊತ್ತಿದೆಯೇ? ಬಹುಶಃ ನಿಮ್ಮ ತಾತನ ಗಡಿಯಾರದಲ್ಲಿ ಒಂದು 'ಟಿಕ್'ಗೆ ಸಮವಿರಬಹುದು. ನೀವು ಬಹಳ ಮಂದಿ ಇದನ್ನೇ ಅತ್ಯಂತ ಲಘು ಅಂತರ ಎಂದು ತಿಳಿದುಕೊಂಡಿದ್ದೀರ. ಆದರೆ ನಿಮ್ಮ ಕಾಲದ ಪರಿಚಯವು ನಿಮ್ಮ ಮನಸ್ಸಿನ ಅನಂತ ಭಾವನಾ ತರಂಗದಲ್ಲಿ ಸೇರಿಕೊಂಡು ಬಿಟ್ಟಿರುವುದರಿಂದ ಆ ಒಂದೊಂದು 'ಟಿಕ್'ಗೆ ಇರುವ ಅಂತರವೆಷ್ಟು ಎನ್ನುವುದು ಗೊತ್ತಾಗಲಿಕ್ಕಿಲ್ಲ. ಯಾವ ಘಟನೆಯೇ ಆಗಲಿ, ಅದು ನಮ್ಮ ಜೀವಮಾನದ ಬಹು ಭಾಗವನ್ನು ಆಕ್ರಮಿಸಿಕೊಂಡಾಗ, ಆ ಕಾಲವು ಜಾಸ್ತಿ ಎನ್ನುವ ಭಾವನೆ. ಅದೇ ಒಂದು ಘಳಿಗೆಯನ್ನು ಒಂದು ದಿನಕ್ಕೆ ಹೋಲಿಸಿನೋಡಿದಾಗ ಅದು ನಮ್ಮ ಮನಸ್ಸಿಗೆ ಬಹಳ ಲಘುವಾದ ಕಾಲ.

ಪ್ರಕೃತಿಯಲ್ಲಿ ನಡೆಯುವ ಎಷ್ಟೋ ಘಟನೆಗಳಿಗೆ, ಮನುಷ್ಯನ ಈ ಲಘು ಮತ್ತು ದೀರ್ಘಕಾಲದ ಭಾವನೆಯು ಸರಿಹೊಂದಲಿಕ್ಕಿಲ್ಲ. ಪ್ರಕೃತಿಯು ನಿಧಾನಿಸಲೂ ಬಹುದು; ನೀವು ಯೋಚಿಸುವುದಕ್ಕಿಂತ ಹೆಚ್ಚಿನ ವೇಗ ಪ್ರಕೃತಿಗೂ ಇರಬಹುದು. ಈ ಎರಡನೆಯದನ್ನು ಕುರಿತೇ ಈ ಲೇಖನದಲ್ಲಿ ಉಲ್ಲೇಖಿಸಿದೆ.

ನಿಮ್ಮ ಸಾಧಾರಣ ಕೈಗಡಿಯಾರವನ್ನು ಕಿವಿಗೊಟ್ಟು ಕೇಳಿ. ಒಂದು ಆದರ್ಶಮಾನವಾದ ಒಂದು ಸೆಕೆಂಡಿಗೆ ಐದು ಸಲ 'ಟಿಕ್' ಶಬ್ದಮಾಡುವುದನ್ನು ಗಮನಿಸುವಿರಿ. ನಿಮಗೆ ಒಂದು ಸೆಕೆಂಡಿಗೆ ಐದು ಸಲ ಮತ್ತು ಹತ್ತು ಸಲ 'ಟಿಕ್' ಎಂದಾಗ ಗಮನಿಸುವುದು ಸುಲಭವಾಗಬಹುದು. ಏಕೆಂದರೆ ನಮ್ಮ ಕಿವಿಯ ಮೇಲೆ ಬೀಳುವ ಶಬ್ದಗಳ ಅಂತರಗಳು $\frac{1}{10}$ ಸೆಕೆಂಡಿನಷ್ಟು ಇದ್ದಲ್ಲಿ ಮಾತ್ರ, ಆ ಶಬ್ದವು ನಮಗೆ ಪ್ರತ್ಯೇಕವಾಗಿ ತಿಳಿಯಬೇಕಾದರೆ. ಆದರೆ ಒಂದು ಸೆಕೆಂಡಿಗೆ ಸಾವಿರ ಸಲ 'ಟಿಕ್' ಎಂದಾಗ? ಆ ಕಾಲವನ್ನು ನಮ್ಮ ಮಾನಸಿಕ ಅ[ನು]ಭವದಲ್ಲಿ ಕ್ಷಣಿಕವೆನ್ನುತ್ತೇವೆ. ಆದಾಗ್ಯೂ ಈ ಕ್ಷಣಿಕ ಕಾ[ಲ]ದಲ್ಲಿ ಎಂಥಾ ಹೆಚ್ಚಿನ ಘಟನೆಗಳು ನಡೆದಾವು? ಪಿಸ್ತೂಲಿನಿಂ[ದ] ಹೊರಟ ಗುಂಡು ಅದರ ಪಥದಲ್ಲಿ ಪ್ರಾಮುಖ್ಯವಾದ ಮೂರ[ು] ದೂರ ಸಂಚರಿಸಿರುತ್ತದೆ. ಒಂದು ದೊಡ್ಡ ಆಸ್ಫೋಟನ[ಕಾ]ರಿಯು, ಅದೇ ಕಾಲದಲ್ಲಿ ಅದರ ಘನರೂಪವನ್ನು ತೊರೆ[ದು] ವಾಯುರೂಪಕ್ಕೆ ಬೇರ್ಪಟ್ಟಿರುತ್ತದೆ. ಇದು ನಮ್ಮ ತಿಳುವ[ಳಿ]ಕೆಗೆ ಬರಬೇಕಾದರೆ, ಆ ಘಟನೆಯನ್ನು ನಮ್ಮ ಮನೋಂ[...]ಯವು ಗ್ರಹಿಸುವಷ್ಟು ಕಾಲ ವಿಸ್ತರಿಸಬೇಕು. ಅಂದರೆ [...] ಕ್ಷಣಿಕ ಘಟನೆಯನ್ನು ನಮಗೆ ಕಾಣಿಸುವಷ್ಟು ನಿಧಾನವಾ[ಗಿ] ನಡೆಯುವಂತೆ ಬಿಂಬಗ್ರಾಹಕದಲ್ಲಿ ತೆಗೆಯಬೇಕು.

ನೀವು ಬಹಳ ಮಂದಿ ಗಾಜು ಸೀಳಿರುವುದನ್ನು ನೋ[...]ಡಿರಬಹುದು. ಒಂದು ಚಚ್ಚೌಕದ ಗಾಜನ್ನು ತೆಗೆ[ದು]ಕೊಂಡು, ಅದರ ಮಧ್ಯದಲ್ಲಿ ಜೋರಾಗಿ ಗಟ್ಟಿಯಾದ ಘ[ನ] ವಸ್ತುವಿನಿಂದ ಜಜ್ಜಿ. ಆಗ ಅದು ಸೀಳುವುದನ್ನು ಗಮನಿ[ಸಿ.] ಆ ಗಾಜಿನ ಮಧ್ಯದಲ್ಲಿ ಸೀಳಿದ ವೇಳೆಯೂ ಮತ್ತು ಆ ಸೀಳ[...] ಪಥವು ಆ ಗಾಜಿನ ತುದಿಯ ವರೆಗೂ ಹೋದುದೂ ಒಂ[ದೇ] ಆಗಿ ನಿಮಗೆ ಕಾಣಿಸುವುದು. ಆದರೆ ಈ ಒಡೆಯುವಿಕೆಯನ[್ನು] ಒಂದು ಸೆಕೆಂಡಿಗೆ 130 ಛಾಯೆಗಳನ್ನು ತೆಗೆಯಬಲ್ಲ, ನಿಧಾ[ನ]ವಾಗಿ ಚಲಿಸುವ ಛಾಯಾಚಿತ್ರಯಂತ್ರದಲ್ಲಿ(Slow Motio[n] Movie) ನೋಡಿದಾಗ ನಿಮಗೆ ಕಾಣುವುದಾದರೂ ಏನ[ು?] ಆ ಗಾಜು ಒಡೆದ ರೀತಿಯನ್ನು ಕಾಣಲು ಶಕ್ಯವೇನು? ಇ[...] ಒಂದು ಛಾಯೆಯಲ್ಲಿ ಆ ಗಾಜು ಸರಿಯಾಗಿರುವುದು ಕಾ[ಣ] ಬರುತ್ತದೆ. ಇನ್ನೊಂದರಲ್ಲಿ ಆಗಲೇ ಆ ಗಾಜು ಸೀಳಿರು[ವು]ದನ್ನು ಗಮನಿಸುವಿರಿ. ಒಂದು ಸೆಕೆಂಡಿಗೆ 3000, 50[00] ಛಾಯೆಗಳನ್ನು ತೆಗೆಯುವ ಯಂತ್ರದಲ್ಲಿಯೂ ಕೂಡ ಅ[...] ಅಂದ ಮೇಲೆ ಆ ಬಿರುಕು ಎಷ್ಟು ಶೀಘ್ರವಾಗಿ ಆ ಗಾಜ[ಿನ] ತುದಿಗೆ ಚಲಿಸಿತು ಎಂದು ತಿಳಿದುಕೊಂಡಿದ್ದೀರಾ? ನಂಬ[...] ನಂಬಿ, ಬಿಟ್ಟರೆ ಬಿಡಿ. ಒಂದು ಸೆಕೆಂಡಿಗೆ ಒಂದು ಮೈಲಿ[...] ದೂರ ಚಲಿಸಿದೆ. ಒಂದು ಸೆಕೆಂಡಿಗೆ 10,000 ಛಾಯೆ ತೆ[ಗೆ]ಯುವ ಬಿಂಬಗ್ರಾಹಕವು ಆ ಗಾಜಿನ ಮಧ್ಯದಿಂದ ಆದ[...]

ತುದಿಗಿರುವ $\frac{1}{2}$ ಅಡಿ ಅಂತರದ ಪಯಣವನ್ನು ಗ್ರಾಹಕ ಮಾಡಲು ಎಲ್ಲೋ ತಪ್ಪಿರಬೇಕು.

ಗಾಜು ಬಿರುಕು ಬಿಟ್ಟುಕೊಳ್ಳುವುದು ಒಂದು ಹೆಚ್ಚಿನ ವೇಗದ ಘಟನೆಯೇನಲ್ಲಾ. ಆದರೆ ಅದು ಆಶ್ಚರ್ಯಕರವಾದ ಘಟನೆಯೇ ಸರಿ. ಏಕೆಂದರೆ ಆ ಬಿರುಕಿನ ಪಯಣವು, ಸೈನಿಕರ ಪಿಸ್ತೂಲಿನಿಂದ ಹೊರಟ ಗುಂಡಿನ ವೇಗಕ್ಕೆ ಇಮ್ಮಡಿಯಾಗಿರುತ್ತದೆ. ಹಾಗೆಯೇ ನಾವು ಬಹಳ ಉಗ್ರವಾದ ಆಸ್ಫೋಟನೆಗಳನ್ನು ಅತ್ಯಂತ ಶೀಘ್ರವಾಗಿ ಸಂಭವಿಸಿವೆ ಎಂದು ತಿಳಿದುಕೊಂಡಿದ್ದೇವೆ. ಇದು ಸಾಧಾರಣವಾಗಿ ತಪ್ಪುಭಾವನೆ. ನಮಗೆ ಕ್ಷಣಿಕದಲ್ಲಿ ಬಂದು ಮಾಯವಾಗುವ ಮಿಂಚಿನ ವೇಗವು, ಕೆಲವು ಮನುಷ್ಯನಿಂದ ತಯಾರಿಸಲ್ಪಟ್ಟ ಅಗ್ನಿಕಣ (Sparks)ಗಳ ವೇಗಕ್ಕಿಂತ ಬಹಳ ಕಮ್ಮಿ.

ನಾವು ಸಾಧಾರಣವಾಗಿ/ಉಪಯೋಗಿಸುವ ವಿದ್ಯುತ್ ಅಗ್ನಿವರ್ತಿಯು (Fuse) ಜೋರಾದ ವಿದ್ಯುಚ್ಛಕ್ತಿಯು ಹರಿದಾಗ, ಉರಿದುಹೋಗಿರುವುದನ್ನು ನೋಡಿರುತ್ತೇವೆ. ಈ ಅಗ್ನಿವರ್ತಿಯ ಪ್ರಾಮುಖ್ಯವಾದ ಭಾಗವೆಂದರೆ, ಒಂದು ಚಿಕ್ಕ ವ್ಯಾಸವುಳ್ಳ ಲೋಹದ ತಂತಿ. ಇದು ಒಂದು ಘಳಿಗೆಯಲ್ಲಿ ಘನ ರೂಪದಲ್ಲಿದ್ದಿತು. ಆದರೆ ಇನ್ನೊಂದು ಘಳಿಗೆಯಲ್ಲಾಗಲೇ ಹೊಗೆಯ ರೂಪದಲ್ಲಿದೆ. ಇದು ಎಷ್ಟು ಬೇಗ ನಡೆದಿರಬಹುದು?

ಇಂತಹವು ಮತ್ತು ಇದಕ್ಕಿಂತಲೂ ಶೀಘ್ರವಾಗಿ ನಡೆಯುವ ಘಟನೆಗಳನ್ನು ತಿಳಿದುಕೊಳ್ಳಲು ನಾವು ನೋಡಿರುವ ಚಲನಚಿತ್ರ ಯಂತ್ರಕ್ಕಿಂತ ಭಿನ್ನವಾದುದನ್ನು ನಿರ್ಮಿಸಿದ್ದಾರೆ. ಈ ಯಂತ್ರದ ಸಹಾಯದಿಂದ ಒಂದು ಸೆಕೆಂಡಿಗೆ ಒಂದು ಕೋಟಿ ಚಿತ್ರಗಳನ್ನು ತೆಗೆಯಲು ಸಹಾಯಕವಾಗುವುದು. ಈ ಚಿತ್ರವನ್ನು, ನಾವು ಸಾಧಾರಣವಾಗಿ ಸಿನಿಮಾ ಮಂದಿರಗಳಲ್ಲಿ ಉಪಯೋಗಿಸುವ ಚಲನ ಚಿತ್ರ ಯಂತ್ರದ ಮೂಲಕ ತೆರೆಯ ಮೇಲೆ ಪ್ರಕ್ಷೇಪಿಸಿದಾಗ, ಈ ಯಂತ್ರವು ಒಂದು ಸೆಕೆಂಡಿಗೆ ಹದಿನಾರು ಚಿತ್ರಗಳನ್ನು ಮಾತ್ರ ತೆರೆಯ ಮೇಲೆ ಹಾಯಿಸಲು ನೆರವಾಗುವುದರಿಂದ, ಇದರಲ್ಲಿ ಕಾಣುವ ಪಾತ್ರಗಳ ನಡತೆಗಳು ಆ ದೊಡ್ಡ ಯಂತ್ರಕ್ಕೆ ಹೋಲಿಸಿ ನೋಡಿದಾಗ, ೬ ಲಕ್ಷದಷ್ಟು ನಿಧಾನಿಸಿದ ಹಾಗೆ ಕಾಣುವುವು.

ವೈಜ್ಞಾನಿಕರು ಅಷ್ಟು ಭಾರಿ ವೇಗದ ಉಪಕರಣವನ್ನು ನಿರ್ಮಿಸಿದ್ದಕ್ಕೆ ತಾವೇ ನಾಚಿದರಂತೆ. ಈ ಪ್ರಪಂಚದ ಯಾವ ಘಟನೆಯನ್ನೇ ಆಗಲಿ, ಛಾಯಾಚಿತ್ರದಲ್ಲಿ ತೆಗೆದಾಗ, ಅದರ ವೇಗವು ಒಂದು ಸೆಕೆಂಡಿಗೆ ಒಂದು ಕೋಟಿ ಚಿತ್ರಗಳನ್ನು ತೆಗೆದುಕೊಳ್ಳಬಲ್ಲ ಯಂತ್ರಕ್ಕೆಹೋಲಿಸಿದಾಗ, ಬಹಳ ವ್ಯತ್ಯಾಸವಿತ್ತು.

ಈ ಹೊಸ ಬಿಂಬಗ್ರಾಹಕದಿಂದ ಆ ವಿದ್ಯುತ್ ಅಗ್ನಿವರ್ತಿಯು ಹೇಗೆ ಉರಿದುಹೋಯಿತೆಂಬುದನ್ನು ಪರಿಶೀಲಿಸಲಾಯಿತು. ಆ ತಂತಿಯ ವ್ಯಾಸವು ಮನುಷ್ಯನ ಕೂದಲಿಗೆ ಸ್ವಲ್ಪ ದಪ್ಪವಾಗಿತ್ತು. ಆ ತಂತಿಯೊಳಗೆ ಕೆಲವು ಸಹಸ್ರ ಆಂಪಿಯರ್' ಅಷ್ಟು ವಿದ್ಯುತ್‌ಶಕ್ತಿಯನ್ನು ಹರಿಸಲಾಯಿತು. ಆಗ ಆ ತಂತಿಯು ಹೊಗೆಯ ರೂಪವಾಗಲು $\frac{1}{10,000,000}$ ಸೆಕೆಂಡಿಗೂ ಕಮ್ಮಿಯ ಕಾಲ ತೆಗೆದುಕೊಂಡಿತು. ಈ ಲೋಹದ ಅನಿಲವು ಸೆಕೆಂಡಿಗೆ ಹತ್ತು ಮೈಲಿಗಳಂತೆ ಗಾಳಿಯಲ್ಲಿ ಹೊರಟಿತು. ತಾಮ್ರ ಮತ್ತು ಕಬ್ಬಿಣದ ತಂತಿಗಳ ಮೇಲೆ ಇದೇ ಪ್ರಯೋಗವನ್ನು ಮಾಡಿದಾಗಲೂ ಅಷ್ಟೇ. ವ್ಯತ್ಯಾಸವೇನೂ ಕಂಡುಬರಲಿಲ್ಲ. ಈ ನಮ್ಮ ಭಾರಿ ಬಿಂಬಗ್ರಾಹಕದಲ್ಲಾದರೋ ಅದು ಉರಿದು ಹೋಗುವ ಚಿತ್ರವೇನೊ ಬಂತು. ಆದರೆ ಆ ತಂತಿಯು ಹೇಗೆ ಉರಿಯಿತೆಂಬುದನ್ನು ವಿಶದವಾಗಿ ತಿಳಿಸುವಷ್ಟು ಬರಲಿಲ್ಲ. ಪಿಸ್ತೂಲಿನಿಂದ ಹೊರಟ ಗುಂಡಿನ ಪಥವನ್ನೂ, ಆಟಂ ಬಾಂಬ ಆಸ್ಫೋಟನೆಯಾದುದನ್ನೂ ಛಾಯಾಚಿತ್ರದಲ್ಲಿ ತೆಗೆದಿದ್ದಾರೆ. ಆದರೆ ಈ ಅಗ್ನಿವರ್ತಿಯು ವಿದ್ಯುತ್ ಹರಿದಾಗ ಆದ ಪರಿಣಾಮವನ್ನು ಚಿತ್ರರೂಪವಾಗಿ ತೆಗೆಯಲು ಆದ ಕಷ್ಟ ಬೇರೆ ಯಾವುದರಲ್ಲೂ ಆಗಲಿಲ್ಲ.

ಇಂಥಾ ಬಿಂಬಗ್ರಾಹಕವಿದ್ದಲ್ಲಿ, ಈ ಜವದ ಪ್ರಪಂಚದಲ್ಲಿ $\frac{1}{1000}$ನೇ ಸೆಕೆಂಡಿನೊಳಗೆ ನಡೆಯುವ ಘಟನೆಗಳನ್ನು ಒಬ್ಬ ಮಾನವನ ಜೀವಮಾನದ ಪರ್ಯಂತಕ್ಕೆ! ಹರಡಬಹುದು. ಆದರೆ ಈ ನೂತನ ಚಿತ್ರಪ್ರಪಂಚದಲ್ಲಿ ಕೇವಲ ಯಂತ್ರಗಳು, ಆಸ್ಫೋಟನೆಗಳು ಅಥವಾ ದುಷ್ಕೃತ್ಯ ಘಟನೆಗಳು ಮಾತ್ರವನ್ನಲ್ಲ ನೋಡುವುದು. ಒಂದು ಜಲಪಾತವೇ ಆಗಲಿ, ಒಂದು ಚಿಟ್ಟೆಯು ಹಾರಾಡುವುದನ್ನೇ ಆಗಲಿ, ಅದರ ವೇಗವನ್ನು ಸಾವಧಾನ ಮಾಡಿ ಮಾನವನ ಕಣ್ಣಿಗೆ ಗೋಚರವಾಗುವಂತೆ ಮಾಡುವ ಛಾಯಾಚಿತ್ರವಿದ್ದಲ್ಲಿ, ಅದರ ರಮ್ಯತೆ ಮತ್ತು ಸೌಮ್ಯತೆಯು ಇನ್ನಾವುದಕ್ಕೂ ಇರಲಾರದು. ಈ ಅತಿವೇಗದ ಘಟನೆಗಳನ್ನು ಕಂಡುಹಿಡಿಯಲು ನಾವು ಮನೆ ಬಿಟ್ಟು ಹೋಗಬೇಕಾಗಿಲ್ಲ. ಈವತ್ತಿನ ದಿನ ನಿಮ್ಮ ಮನೆಯಲ್ಲಿ ಈ ಜವದ ಪ್ರಪಂಚದಲ್ಲೇ ಹೋಲಿಕೆಗೆ ಅಸದಳವಾದ ಘಟನೆಯನ್ನು ನಡೆಸಬೇಕೆಂದಿದ್ದರೆ, ಒಂದು ದುಂಡಾದ ಲೋಹದ ಚೂರನ್ನು ತೆಗೆದುಕೊಂಡು, ಮನೆಯೊಳಗಿನ ರತ್ನಗಂಬಳಿಯ ಮೇಲೆ ಬಲದಿಂದ ಎಡಕ್ಕೂ ಎಡದಿಂದ ಬಲಕ್ಕೂ ಉಜ್ಜಿ, ಆ ಮೇಲೆ ಅದನ್ನು ಬಾಗಿಲಿನ ಹಿತ್ತಾಳೆಯ ಅಗಳಿಗೆ (Door knob) ಮುಟ್ಟಿಸಿ ನೋಡಿ, ಕಿಡಿಗಳು ಹಾರುವುದನ್ನು ನೋಡಬಹುದು.

ಆ ಚಿಕ್ಕ ಕಿಡಿ, ನೀವು ಆ ಲೋಹದ ಚೂರನ್ನು ಬಾಗಿಲಿನ ಆ ಲೋಹದ ಭಾಗಕ್ಕೆ ಹತ್ತಿರ ತರುವಷ್ಟರಲ್ಲೇ, ಹಾರುತ್ತದಲ್ಲಾ ಅದರ ವೇಗವು ನೀವು ಕಂಡಿರುವ ವೇಗದ ಯಾವ ಘಟನೆಯನ್ನೂ! ಅವಮಾನಿಸುವಷ್ಟು! ಶೀಘ್ರವಾಗಿರುತ್ತದೆ. ಅಂದರೆ ಎಷ್ಟು ಕಾಲದಲ್ಲಿ ಆ ಕಿಡಿಯು ಕಾಣಿಸಿಕೊಂಡಿತು, ಹೇಳಿ? ಕೇವಲ ಒಂದು ಸೆಕೆಂಡಿನ ಹತ್ತು ಕೋಟಿಯ ಭಾಗದಲ್ಲಿ ($\frac{1}{100,000,000}$ನೆಯ ಸೆಕೆಂಡಿನಲ್ಲಿ.)

ಜೀವನ ಚರಿತ್ರೆಗಳು

(ಲೇಖಕರು: ಶ್ರೀ| ಜಿ. ವರದರಾಜ ರಾವ್, ಎಂ. ಎ., ಚಿತ್ರದುರ್ಗ.)

"The History of the world is but Biography of great men"

—Thomas Carlyle.

ಸಾಹಿತ್ಯದ ನಾನಾ ವಿಧಾನಗಳಲ್ಲಿ ಜೀವನ ಚರಿತ್ರೆಗಳಿಗೆ ಒಂದು ವಿಶಿಷ್ಟವಾದ ಸ್ಥಾನವಿದೆಯೆಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಮೊದಲಿನಿಂದ ಕಡೆಯ ತನಕ ಸತ್ಯಕ್ಕೇ ಪ್ರಧಾನವಾದ ಬೆಲೆ ದೊರೆತು, ಹೆಜ್ಜೆ ಹೆಜ್ಜೆಗೂ ಹಿರಿದಾದ ಆದರ್ಶಗಳನ್ನು ಎತ್ತಿ ತೋರುವ ಈ ಬಗೆಯಾದ ಕೃತಿಗಳಿಗೆ ಬೆಲೆ ಕಟ್ಟುವುದು ಸುಲಭಸಾಧ್ಯವಾದ ಕೆಲಸವಲ್ಲ. ಸಾಹಿತ್ಯವೆಂದ ಕೂಡಲೆ ಕಾವ್ಯ, ಕತೆ, ಕಾದಂಬರಿ, ನಾಟಕಗಳ ನೆನಪಾಗುವುದೇ ಹೊರತು ಜೀವನ ಚರಿತ್ರೆಗಳು ಎಂಬ ಈ ವಿಭಾಗವನ್ನು ಅಷ್ಟಾಗಿ ಸ್ಮರಿಸದಿರುವುದು ಆಶ್ಚರ್ಯವೇ ಸರಿ. ಇದಕ್ಕೆ ಕಾರಣವೇನೆಂದರೆ, ಸಾಮಾನ್ಯ ಜನರಿಗೆ ಬಹು ಬೇಗ ಹಿಡಿಸುವ ಸಾಹಿತ್ಯದ ಇತರ ಪ್ರಕಾರಗಳಂತೆ, ಜೀವನ ಚರಿತ್ರೆಯು ಸುಲಭದಲ್ಲಿ ಅರ್ಥವಾಗುವುದಿಲ್ಲ. ನಿಷ್ಠೆಯಿಟ್ಟು ಓದಿದರೆ ಮಾತ್ರವೇ ಇದರ ಸ್ವಾರಸ್ಯ ಗೋಚರವಾದೀತು. ಪರಿಣಾಮದ ದೃಷ್ಟಿಯಿಂದ ಗಮನಿಸಿದರೆ, ಜೀವನ ಚರಿತ್ರೆ ವ್ಯಕ್ತಿವ್ಯಕ್ತಿಯನ್ನೂ ತಿದ್ದಿ ಹದನಾಗಿ ಮಾಡಬಲ್ಲುದು. ನಮ್ಮಂತೆಯೇ ಜನ್ಮವೆತ್ತಿದ ಮಾನವನೊಬ್ಬನು, ಹೇಗೆ ದಿನದಿನಕ್ಕೂ ಘನತೆಯ ಶಿಖರವನ್ನೇರುವನೆಂಬುದನ್ನು ಉದಾಹರಣೆ ಸಮೇತವಾಗಿ ನೋಡಬಹುದು. ಆತನ ಮಾರ್ಗ ಇತರರಿಗೆ ಆದರ್ಶಪ್ರಾಯವಾಗುವುದು. ಬೆಳೆಯುವ ಮಕ್ಕಳಿಗೂ, ತೊಳಲುತ್ತಿರುವ ಹಿರಿಯರಿಗೂ ಜೀವನ ಚರಿತ್ರೆಗಳ ವ್ಯಾಸಂಗದಿಂದ ಹೆಚ್ಚಾದ ಪ್ರತಿಫಲವುಂಟು. ಈ ಅಮೋಘವಾದ ಕೃತಿರಚನೆಯ ಹಿಂದೆ ಅಡಗಿರುವ ತತ್ವ, ಉದ್ದೇಶ, ಸಂವಿಧಾನ, ಇವುಗಳನ್ನೂ ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಮಾಡಿಕೊಡಲಾಗಿದೆ.

ಜೀವನ ಚರಿತ್ರೆಗಳಿಗೆ ಸ್ಫೂರ್ತಿದಾಯಕರು ಮಹಾಪುರುಷರು. ಯಾವ ದೇಶವೇ ಆಗಲಿ, ಮುಂದುವರಿದಿರಲಿ, ಇಲ್ಲದಿರಲಿ, ತಮ್ಮ ತಮ್ಮ ಮಹಾಪುರುಷರನ್ನು ಗೌರವಿಸಿ ಮುಕ್ತಕಂಠದಿಂದ ಹೊಗಳಿರುವುದು ಇತಿಹಾಸಪ್ರಸಿದ್ಧವಾಗಿದೆ. ಸಾಮಾನ್ಯ ಮಾನವನ ಮಟ್ಟವನ್ನು ಮೀರಿ, ವಿಶೇಷವಾದ ಪ್ರತಿಭೆಯಿಂದ ಕೂಡಿದ ಪುರುಷನನ್ನು ಮಹಾಪುರುಷನೆಂದು ಕರೆಯುವುದು ವಾಡಿಕೆ. ಆತನನ್ನು ದೇವನೆಂದೂ, ದೈವಾಂಶಸಂಭೂತನೆಂದೂ ಜನರೆಲ್ಲ ಭಾವಿಸುವರು. ರಾಮ, ಕೃಷ್ಣರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಇಂದು ಇವರನ್ನು ಮಾನವರಾಗಿ ಬದುಕಿ ಬಾಳಿದ ಮಹಾತ್ಮರು ಎಂದು ಹೇಳಿದರೆ ಜನತೆ ಈ ಮಾತಿಗೆ ಕಿವಿಗೊಡುವುದಿಲ್ಲ. ಅವರು ಭಗವಂತನ ಅವತಾರವೆನಿಸಿದ್ದಾರೆ. ಅಷ್ಟೇ ಅಲ್ಲ; ಅವರೇ ಭಗವಂತರೆನಿಸಿದ್ದಾರೆ. ಅವರ ಆರಾಧನೆಗಾಗಿ ದೇವಾಲಯಗಳು ನಿರ್ಮಾಣವಾಗಿವೆ. ಅವರ ಸ್ತೋತ್ರ, ಪೂಜೆಗಳು ಪುಣ್ಯಕಾರ್ಯಗಳಾಗಿವೆ. ಮಹಾಪುರುಷರು ಬಹುಮಟ್ಟಿಗೆ ಈ ಮಟ್ಟದಲ್ಲಿಯೇ ನಿಲ್ಲತಕ್ಕವರು. ಸಾಕ್ಷಾತ್ ದೇವತೆಗಳೆಂದು ಸಂಬೋಧಿಸದಿದ್ದರೂ, ಅವರನ್ನು ದೈವಾಂಶಸಂಭೂತರೆಂದು ಭಾವಿಸುವುದು ಸಹಜವಾಗಿದೆ. ದೇವರ ಅಂಶ ನಾನಾ ರೂಪಗಳಲ್ಲಿ ವ್ಯಕ್ತವಾಗಬಹುದು. ಧರ್ಮಪ್ರವರ್ತಕರಾಗಿ ಕಾಣಬಹುದು, ಮಹಾಕವಿಗಳಾಗಿ ಮೂಡಬಹುದು, ಚಕ್ರವರ್ತಿಗಳಾಗಿ ತೋರಬಹುದು, ಇಂದಿನ ವಿಜ್ಞಾನಿಗಳಾಗಿ ವ್ಯಕ್ತವಾಗಬಹುದು. ಕಾರ್ಲೈಲ್ ಮಹಾಶಯನೂ ಈ ಅಭಿಪ್ರಾಯವನ್ನೇ ಸೂಚಿಸುತ್ತಾನೆ. ಮಹಾವ್ಯಕ್ತಿಗಳು ಸಾಕ್ಷಾತ್ ಪರಮಾತ್ಮನಿಂದ ಮೊದಲ್ಗೊಂಡು ಮಹಾರಾಜನವರೆಗೆ ಕಂಡುಬರಬಹುದೆಂಬುದನ್ನು ಸಮರ್ಥಿಸಿದ್ದಾನೆ. ಈ ದೃಷ್ಟಿ ಭಾರತೀಯರಿಗೆ ಹೊಸದೇನೂ ಅಲ್ಲ. ಭಗವದ್ಗೀತೆಯಲ್ಲಿ ಈಗಾಗಲೇ ಹೇಳಿರುವ ವಿಷಯವಿದು:

ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ
ತತ್ತ ದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಂ ||

X—೪೧.

ಎಲ್ಲೆಲ್ಲಿ ಐಶ್ವರ್ಯ, ಕಾಂತಿ ಮತ್ತು ಏಳಿಗೆಗಳು ಕಂಡು ಬರುತ್ತವೆಯೋ ಅಲ್ಲೆಲ್ಲ ತನ್ನ ಅಂಶವಿದೆಯೆಂದು ಹೇಳುವ ಉಕ್ತಿ ಗಹನವಾಗಿದೆ. ಇದು ಕೇವಲ ಉಪಚಾರೋಕ್ತಿಯಲ್ಲ. ನಮ್ಮವರು ಪ್ರತಿಯೊಬ್ಬ ಮಹಾಪುರುಷನ ಬಗ್ಗೆ ಇದೇ ಅಭಿಪ್ರಾಯವನ್ನಿಟ್ಟುಕೊಂಡಿದ್ದರು ಎಂಬುದಕ್ಕೆ ಪ್ರಮಾಣವಿದೆ.

ಮಹಾಪುರುಷರ ಪಂಕ್ತಿಯಲ್ಲಿ ಮೊದಲಿನಿಂದಲೂ ಧರ್ಮಪ್ರವರ್ತಕರಿಗೆ ಅಗ್ರಸ್ಥಾನವನ್ನು ಸಲ್ಲಿಸುವುದು ನಮ್ಮ ಸಂಪ್ರದಾಯ. ದೇಶದಲ್ಲಿ ಧರ್ಮವು ಖಿಲವಾಗುವ ಕಾಲಕ್ಕೆ ದುಷ್ಟರು ಪ್ರಬಲವಾಗುವ ಕಾಲಕ್ಕೆ ಪರಮಾತ್ಮನೇ ಅವತಾರವೆತ್ತಿ ಬರುವನೆಂದು ಭಗವದ್ಗೀತೆಯೇ ಸಾರಿ ಹೇಳುತ್ತಿದೆ.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ||
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ||
VI—೭೫೮.

ಈ ಮಹತ್ತನ್ನು ಬಲ್ಲ ಭಾರತೀಯರು ತಮ್ಮ ಧರ್ಮ ಸಂಸ್ಥಾಪಕರನ್ನು ಕಾಯಾ, ವಾಚಾ, ಮನಸಾ ಗೌರವಿಸಿಕೊಂಡು ಬಂದಿದ್ದಾರೆ. ನಮ್ಮ ಔದಾರ್ಯ ಎಲ್ಲಿಯ ವರೆಗೆ ಹೋಗಿದೆಯೆಂದರೆ ಬುದ್ಧ, ಮಹಾವೀರ ಮೊದಲಾದ ಹೊಸ ಹೊಸ ಮತಸ್ಥಾಪಕರ ಬಗ್ಗೆ ಆದರವನ್ನು ವ್ಯಕ್ತಪಡಿಸದೆ ಇಲ್ಲ. ಇಂದಿಗಾದರೂ, ಯೇಸುಕ್ರಿಸ್ತ, ಮಹಮ್ಮದ್ ಪೈಗಂಬರ್, ರಾಮಕೃಷ್ಣ ಪರಮಹಂಸ, ವಿವೇಕಾನಂದ ಇವರುಗಳ ತತ್ತ್ವವನ್ನು ತಿಳಿಯಲು ಜನರು ಮುಂದೆ ಬಾರದೆ ಇಲ್ಲ. ದಿವ್ಯಚೇತನವನ್ನು ಕಾಲಭೇದ, ದೇಶಭೇದ, ಜಾತಿಭೇದಗಳಿಂದ ಅಲಕ್ಷಿಸುವುದು ಎಂದೆಂದಿಗೂ ಶ್ರೇಯಸ್ಕರವಲ್ಲ. ಇವರೆಲ್ಲರೂ ದೇವರ ಆಣತಿಯನ್ನು ಹೊತ್ತುಬಂದಿರುವ ಪ್ರವಾದಿಗಳೇ ಸರಿ.

ಮತಸ್ಥಾಪಕರಿಗೆ ಸಲ್ಲುವ ಮರ್ಯಾದೆಯೇ ಮಹಾಕವಿಗಳಿಗೂ ಸಂದಿದೆ. ಅವರೂ ಋಷಿಸದೃಶರೆಂದು ಗಣಿಸಲಾಗಿದೆ. “ನಾನೃಷಿಃ ಕುರುತೇ ಕಾವ್ಯಂ” ಎಂಬ ಮಾತೇ ಇದಕ್ಕೆ ಸಾಕ್ಷಿ. “ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ! ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ||” ಎಂಬ ಸ್ತುತಿಯೂ ಕವಿಪೂಜೆಯನ್ನು ತೋರ್ಪಡಿಸುವ ಇನ್ನೊಂದು ನಿದರ್ಶನ. ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ, ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ” ಎಂಬ ಮಾತಿನಲ್ಲಂತೂ ಕವಿಗೆ ಬ್ರಹ್ಮನ ಪಟ್ಟವನ್ನೇ ಕಟ್ಟಲಾಗಿದೆ. ಇವರು “ನಿಯತಿಕೃತಿ ನಿಯಮಃ ರಹಿತಾಂ, ಹ್ಲಾದೈಕಮಯೀಂ, ಅಗತ್ಯ ಪರತಂತ್ರಾಂ” ಎಂದು ಹೇಳುವಲ್ಲಿ, ಅವರಿಗಿರುವ ಸ್ವಾತಂತ್ರ್ಯ, ಸ್ಥಾನ, ಸನ್ಮಾನಗಳನ್ನು ಕಾಣಬಹುದು. ಕವಿತಾ ಸ್ತ್ರೀಗೆ “ಭಾಸೋ ಹಾಸಃ, ಕರ್ಣಪೂರೋ ಮಯೂರಃ, ಕವಿಕುಲಗುರು ಕಾಲಿದಾಸೋ

ವಿಲಾಸಃ, ಹರ್ಷೋ ಹರ್ಷಃ, ಹೃದಯವಸತಿಃ ಪಂಚಬಾಣ
ಬಾಣಃ” ಎಂಬ ವಿಶೇಷಣಗಳು ಅನುಪಮವಾಗಿವೆ. ಈ
ಜ್ಞತೆ ಕವಿಗಳಿಗೆ ಮಾತ್ರವೇ ವಿಾಸಲಾಗಿದೆಯೆಂದು ಅ
ಇತರ ಕಲಾವಿದರಿಗೂ ಇದೇ ಸತ್ಕಾರ ಸಲ್ಲುತ್ತದೆ.

“ನಾವಿಷ್ಣುಃ ಪೃಥಿವೀಪತಿಃ” ಎಂಬ ಉಕ್ತಿಯು ಮ
ರಾಜರ ಮಹತ್ತ್ವವನ್ನು ಸಾರಿ ಹೇಳುತ್ತದೆ “ರಾಜಾ ಪ್ರತ್
ದೇವತಾ” ಎನ್ನುವ ಮಾತೂ ಮಹೋನ್ನತವಾಗಿದೆ. ಇಂಗ್ಲ
ನವರಲ್ಲಿಯೂ ರಾಜನ ಬಗ್ಗೆ ಈ ಆದರವಿದ್ದೇ ಇದೆ. “Th
King Commits no Wrong” ಎಂದು ಹೇಳುವು
ಗಮನಾರ್ಹವಾದದ್ದು. ಇಂದು ಈ ಯೋಗ್ಯತೆಗೆ ಸರಿಸ
ಸಾದ ಗುಣ ಶೀಲಗಳು ರಾಷ್ಟ್ರದ ನಾಯಕರುಗಳಲ್ಲಿ ಇರ
ಕಾದುದು ಅನಿವಾರ್ಯ. ಇದೇ ರೀತಿಯಲ್ಲಿ ಹಿಂದಿನ ಮ
ತಪಸ್ವಿಗಳಂತೆ ಇಂದಿನ ವಿಜ್ಞಾನಿಗಳು ಗೌರವಕ್ಕೆ ಭಾಜನ
ಗಿದ್ದಾರೆ. ಧರ್ಮಪ್ರವರ್ತಕರೂ, ಮಹಾಕವಿಗಳೂ ಜೀವ
ರಹಸ್ಯವನ್ನು ಬಿಡಿಸಿ ಹೇಳುವವರಾದರೆ, ವಿಜ್ಞಾನಿಗಳು ವಿಶ್ವ
ರಹಸ್ಯವನ್ನು ಭೇದಿಸತೊಡಗಿದ್ದಾರೆ.

ಮೇಲೆ ಹೇಳಿರುವ ನಿದರ್ಶನಗಳನ್ನು ನಿರೀಕ್ಷಿಸಿದ
ಮಹಾಪುರುಷರ ಮನ್ನಣೆ ಹೇಗೆ ಸಂತತವಾಗಿ ಸಾಗಿದೆಯೆ
ಬುದನ್ನು ಗಮನಿಸಬಹುದು. ಆದರೆ, ಈ ಆರಾಧನೆ ಯಾ
ಯಾವ ರೂಪ ತಾಳಿದ್ದಿತು ಎನ್ನುವುದು ಮುಖ್ಯಾಂಶ. ಮ
ತ್ಮರ ಮಾತುಗಳು ಮಾಣಿಕ್ಯವಿದ್ದಂತೆ, ಅವರ ವಾಣಿಗೆ ಪೂ
ಸಲ್ಲಿಸುವುದು ಒಂದು ಕ್ರಮ. ಎರಡನೆಯದಾಗಿ ಅವರ ಮೂ
ಪೂಜೆಯನ್ನು ಮಾಡುವುದು, ಅವರ ವಿಗ್ರಹವನ್ನೋ, ಇಲ್ಲ
ಚಿತ್ರವನ್ನೋ ಪೂಜಿಸುವುದು, ಅವರವರ ಜನ್ಮದಿನೋತ್ಸ
ವನ್ನೋ, ಪುಣ್ಯದಿನೋತ್ಸವವನ್ನೋ ಆಚರಿಸುವು
ಇನ್ನೊಂದು ರೀತಿ. ಆದರೆ ಇದೇ ರೀತಿಯು ಇವರ ಜೀವ
ವನ್ನೇ ಆದರ್ಶವೆಂದು ಭಾವಿಸಿ, ಅದನ್ನು ಸರ್ವದಾ ಸ್ಮರಿ
ವುದೇ ಉತ್ಕೃಷ್ಟವಾದ ಮಾರ್ಗವೆಂದು ತೋರಿಬಂದಿತು. ಅಂ
ನಿಂದ ಇಂಥ ಮಹಾವ್ಯಕ್ತಿಗಳ ಜೀವನಕ್ಕೆ ಮುಡಿಪಿಟ್ಟ ಅ
ಅನುಯಾಯಿಗಳಿಂದ ಅವರ ಚರಿತ್ರೆ ರಚಿತವಾಯಿತೆ
ಬಹುದು. ಇದೇ ಜೀವನ ಚರಿತ್ರೆಗೆ ಬೀಜ ಹಾಕಿದಂ
ಜೀವನ ಚರಿತ್ರೆಯ ತಿರುಳು ವ್ಯಕ್ತಿಪೂಜೆ; ಅಷ್ಟೇ ಅ
ವಿಭೂತಿ ಪೂಜೆ.

ಈಗ “ಜೀವನ ಚರಿತ್ರೆ”ಯ ಇತಿಹಾಸವನ್ನು ಅವಲೋ
ಕಿಸಬಹುದು. ಗದ್ಯ ವಿಭಾಗದಲ್ಲಿ ಇಂದು ತಾನೇ ತಾನ
ವಿರಾಜಿಸುತ್ತಿರುವ ಜೀವನ ಚರಿತ್ರೆ ಪಾಶ್ಚಾತ್ಯ ಸಾಹಿತ್
ಲ್ಲಿಯೂ ಬಹುಮಟ್ಟಿಗೆ ಇತ್ತೀಚಿನದು ಎಂದು ಹೇಳಬಹುದ
ಇಂಗ್ಲಿಷ್ ಸಾಹಿತ್ಯದಲ್ಲಿ ಕ್ರಿ. ಶ. ೧೭ನೆಯ ಶತಮಾನದ
ಉದಯವಾಯಿತೆಂದು ತಜ್ಞರು ಅಭಿಪ್ರಾಯಪಡುತ್ತಾ
ಅದಕ್ಕೆ ಪೂರ್ವದಲ್ಲಿ ಗ್ರೀಕ್ ಸಾಹಿತ್ಯದಲ್ಲಿ ಕ್ರಿ. ಶ. ೧ನೆಯ

ಮಾನದಲ್ಲಿ ತೋರಿಬರುತ್ತದೆ ಎನ್ನುತ್ತಾರೆ.* ಮೊದಮೊದಲು ಕೇವಲ ಒಬ್ಬ ವ್ಯಕ್ತಿಯ ಸ್ತುತಿಪರವಾಗಿದ್ದದ್ದು, ಕಾಲಕಾಲಕ್ಕೆ ಮಾರ್ಪಾಟನ್ನು ಪಡೆದು ಸಾಹಿತ್ಯದ ಸ್ವರೂಪವನ್ನು ತಾಳಿತು ಎಂದು ಊಹಿಸುತ್ತಾರೆ. ವ್ಯಕ್ತಿ ಪೂಜೆಯಿಂದ ವಿಭೂತಿ ಪೂಜೆಯಾಗಿ ಪರಿವರ್ತನವಾಯಿತೆಂದು ಒಂದು ಮಾತಿನಲ್ಲಿ ಹೇಳಿ ಮುಗಿಸಬಹುದು. ಇದರಲ್ಲಿ ಎರಡು ಬಗೆಯುಂಟು. ಮೊದಲನೆಯದು ಅನುಯಾಯಿಯೊಬ್ಬನು ತನ್ನ ಆದರ್ಶ ಪುರುಷನ ಜೀವನವನ್ನು ನಯ, ಭಕ್ತಿಗಳಿಂದ ನಿರೂಪಿಸುವುದು. ಇದು "ಜೀವನ ಚರಿತ್ರೆ". ಸಂಬಂಧಪಟ್ಟ ವ್ಯಕ್ತಿಯೇ ತನ್ನ ಜೀವನವನ್ನು ಬರೆಯುವುದು ಇನ್ನೊಂದು ಬಗೆ. ಇದು "ಆತ್ಮ ಚರಿತ್ರೆ." ಈ ಎರಡು ರೀತಿಗಳೂ ಇಂದು ಎಲ್ಲ ಸಾಹಿತ್ಯಗಳಲ್ಲಿಯೂ ಕಂಡುಬರುತ್ತವೆ. ಪಾಶ್ಚಾತ್ಯ ಸಾಹಿತ್ಯದಲ್ಲಂತೂ, ಇತರ ಕೃತಿಗಳಂತೆಯೇ ಉತ್ತಮೋತ್ತಮವಾದ ಜೀವನ ಚರಿತ್ರೆಗಳು ಪ್ರಕಟವಾಗುತ್ತಿವೆ.

ಕನ್ನಡ ಸಾಹಿತ್ಯವನ್ನು ಪರಿಶೀಲಿಸಿದರೆ, ಈ ಸಂಪ್ರದಾಯ ಬಹುಮಟ್ಟಿಗೆ ಪಾಶ್ಚಾತ್ಯರ ಕ್ರಮವನ್ನನುಸರಿಸಿ ಇತ್ತೀಚೆಗೆ ಪ್ರಾರಂಭವಾಯಿತು ಎನ್ನಬಹುದು. ಹಿರಿಯರು ನಡೆದ ದಾರಿ ಹೆದ್ದಾರಿ ಎಂಬ ಭಾವನೆಯೇನೋ ಪ್ರಾಚೀನವಾದುದು. "ಯದ್ಯದಾ ಚರತಿ ಶ್ರೇಷ್ಠಃ ತತ್ತ ದೇವ ಇತರೋ ಜನಃ, ಸಯತ್ಪ್ರಮಾಣಂ ಕುರುತೇ ಲೋಕಃ ತದನುವರ್ತತೇ" ಎಂಬ ಹೇಳಿಕೆ ಪ್ರಾಚೀನ. ಆದರೆ, ಈ ತತ್ವದ ಅಡಿಗಲ್ಲಿನ ಮೇಲೆ ರಚಿತವಾಗಿರುವ ಜೀವನಚರಿತ್ರೆಗಳ ಕೃಷಿ ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬೆಳೆಯಿತೆಂದು ಹೇಳುವುದು ಸಾಧುವಾಗಿ . ಮೊದಮೊದಲು ಇಂಗ್ಲಿಷ್ ಕಲಿತ ಕೆಲವು ಹಿರಿಯರು ಅಮೇರಿಕಾ ದೇಶದ ಜೇಮ್ಸ್ ಎಬ್ರಹಾಂ ಗಾರ್‌ಫೀಲ್, ಬೆಂಜಮಿನ್ ಫ್ರಾಂಕ್ಲಿನ್, ಅಬ್ರಹಾಂ ಲಿಂಕನ್, ಮುಂತಾದವರ ಜೀವನವನ್ನು ಭಾಷಾಂತರಿಸಿ ಕೊಟ್ಟರು. ಆ ಪ್ರೇರಣೆ ನಮ್ಮ ಇತರ ಕೃತಿಗಳಿಗೆ ತುಂಬ ಸಹಾಯಕವಾಯಿತು. ಇನ್ನೂ ಈಚೀಚೆಗೆ ಬೆಳೆಯುತ್ತಿರುವ ಈ ಕೃತಿ ಸಂಪ್ರದಾಯದಲ್ಲಿ ವೈಶಿಷ್ಟ್ಯ ಹೆಚ್ಚಾಗಿ ಕಂಡುಬರದಿದ್ದರೂ, ಅಲ್ಪಸ್ವಲ್ಪವಾದರೂ ಕೃಷಿ ನಡೆದಿದೆಯೆಂದು ಹೇಳಬಹುದು. ಕೆಲವರ ಕೃತಿಗಳು ಮಾರ್ಗದರ್ಶಕವಾಗಿವೆ.

ಜೀವನಚರಿತ್ರೆಗೆ ವಿಶೇಷವಾಗಿ ಶ್ರಮಿಸುತ್ತಿರುವವರಲ್ಲ ರಾಜಸೇವಾಸಕ್ತ ಶ್ರೀ. ಸಿ. ಕೆ. ವೆಂಕಟರಾಮಯ್ಯನವರನ್ನು ಮೊದಲು ನೆನೆಯುವುದು ನಮ್ಮ ಕರ್ತವ್ಯ. ಹರ್ಷವರ್ಧನ, ಬುದ್ಧ, ಮುಹಮ್ಮದ್ ಪೈಗಂಬರ್, ಅಬ್ರಹಾಂ ಲಿಂಕನ್ ಮತ್ತು ಆಳಿದ ಮಹಾಸ್ವಾಮಿಯವರು— ಈ ಕೃತಿಗಳನ್ನು ನೀಡಿರುವ ಶ್ರೀಯುತರನ್ನು ಯಾವ ಕನ್ನಡಿಗನಾದರೂ ನೆನೆಯದೆ ಇರಲಾರ. ಓಜಃ ಪೂರ್ಣವಾದ ಶೈಲಿ, ವಿಚಾರಪುಷ್ಟಿಯಿಂದ ಕೂಡಿರುವ ಶ್ರೀಯುತರ ಗ್ರಂಥಗಳು ಮನನೀಯವಾಗಿವೆ. ಗೋಪಾಲ ಕೃಷ್ಣ ಗೋಖಲೆ, ದಿವಾನ್ ರಂಗಾಚಾರ್ಲು ಎಂಬ ಕೃತಿಗಳನ್ನು ಬರೆದ ಶ್ರೀ. ಡಿ. ವಿ. ಜಿ. ಅವರ ಕೆಲಸವೂ ಪ್ರಾರಂಭದ ಪಂಕ್ತಿಯಲ್ಲಿ ಬರತಕ್ಕದು. ಪ್ರೋತ್ಸಾಹಕ್ಕೆ ಹೆಚ್ಚು ಅವಕಾಶವಿಲ್ಲದ ಈ ಕ್ಷೇತ್ರದಲ್ಲಿ ಅನೇಕ ಹಿರಿಯರು ಉದಾತ್ತವಾದ ಧ್ಯೇಯದಿಂದ ಇದನ್ನು ಪೂರೈಸಿ ಕೊಟ್ಟಿದ್ದಾರೆ. ಹೆಸರುಗಳ ಮಾಲೆ ಹೇಳುವುದಕ್ಕಿಂತ, ಯಾವ ಯಾವ ಮಹಾಪುರುಷರ ಜೀವನಚರಿತ್ರೆಗಳು ನಮ್ಮಲ್ಲಿ ದೊರೆಯಬಲ್ಲುವು ಎನ್ನುವುದನ್ನು ಮುಂದೆ ಪರಿಶೀಲಿಸಲಾಗುವುದು.

ಅಖಂಡವಾದ ಜೀವನಚರಿತ್ರೆಯು ಒಂದು ತೆರನಾದರೆ, ಸ್ವಲ್ಪದರಲ್ಲಿಯೇ ಸಮಗ್ರ ಚಿತ್ರವನ್ನು ರೇಖಿಸುವ ಶ್ರೀ. ಸಿದ್ದವ್ವನಹಳ್ಳಿ ಕೃಷ್ಣ ಶರ್ಮರ ಕಲಾಸಿದ್ಧಿ ಗಮನಾರ್ಹವಾದುದು. ಒಂದೆರಡು ಪುಟಗಳ ಪರಿಮಿತಿಯಲ್ಲಿ ಪ್ರತಿಭಾವಂತರ ಪರಿಚಯ ಮಾಡಿಕೊಡುವ ಶಕ್ತಿ ಶ್ರೀ. ಸಿದ್ದವ್ವನಹಳ್ಳಿ ಕೃಷ್ಣ ಶರ್ಮರಿಗೆ ಸ್ವಭಾವಸಿದ್ಧವಾಗಿದೆ. ಶ್ರೀಯುತರು ಬರೆದಿರುವ "ಕನ್ನಡ ಕಿಡಿಗಳು" "ದೀಪ ಮಾಲೆ" "ಕುಲದೀಪಕರು" ಮತ್ತು "ಪರ್ಣಕುಟಿ?" ಎಂಬ ಗ್ರಂಥಗಳು ವಿಶೇಷವಾದ ಖ್ಯಾತಿಯನ್ನು ಸಂಪಾದಿಸಿವೆ. ಈ ಮಾರ್ಗ ಈಚೀಚೆಗೆ ಹೆಚ್ಚು ಪ್ರಿಯವಾಗಿ ಇತರರೂ ಅನುಸರಿಸತೊಡಗಿದ್ದಾರೆ. ಇಂಗ್ಲಿಷಿನ ಕಾರ್ನಿಗಿಯ ಬರೆವಣಿಗೆಯೂ ಕೂಡ (Five Minutes Biographies, Biographical Round-up, Little Known Facts About Well Known Pople) ಈ ಮಾರ್ಗದಲ್ಲಿಯೆ ನಡೆದಿದೆ. ಇದನ್ನು (Partial Portraits) ರೇಖಾ ಚಿತ್ರಗಳು ಎನ್ನುತ್ತಾರೆ.

ಕನ್ನಡದಲ್ಲಿ ಸ್ವತಂತ್ರವಾದ ಆತ್ಮಚರಿತ್ರೆಗಳಿಗೂ ಅಭಾವವಿಲ್ಲ. ಶ್ರೀ. ಶಿವರಾಂ ಕಾರಂತರವರ "ಹುಚ್ಚು ಮನಸ್ಸಿನ

---

*Biography hardly begins to exist in English literature until the close of the reign of Henry VIII. William Roper (1496—1578) wrote a touching life of his father-in-law, Sir Thomas More, and George Cavendish (1500—61 ?) a memoir of Cardinal Wolsey which is a masterpiece of liveliness and grace. It is with these two works, both of which remained in manuscripts until the 17th century, that biography in England begins····

Among the ancients, biography was not specifically cultivated until comparitively later times... We meet first with deliberate biography in Xenophon's memoirs of Socrates, a work of epoch-making value. Towards the close of 1st century, Plutarch wrote one of the most fascinatng books in the world's literature, his "Parallel Lives of 46 Greeks and Romans."

—ENCYCLOPEDIA BRITANNICA.

ಹತ್ತು ಮುಖಗಳು", ಶ್ರೀ. ರಂಗನಾಥ ದಿವಾಕರರ "ಸೆರೆಯ ಮರೆಯಲ್ಲಿ", ಶ್ರೀ. ಜಿ ಪಿ ರಾಜರತ್ನಂ ಅವರ "ಹತ್ತು ವರ್ಷ", ಶ್ರೀ ಅ ನ. ಕೃಷ್ಣರಾಯರ "ನನ್ನನ್ನು ನಾನೇ ಕಂಡೆ", ಶ್ರೀ. ಆಲೂರು ವೆಂಕಟರಾಯರ "ನನ್ನ ಜೀವನ ಸ್ಮೃತಿಗಳು", ಶ್ರೀ. ಅಶ್ವತ್ಥನಾರಾಯಣರವರ "ಬಿಡುಗಡೆಯ ಜೆಲೆ", ಇವುಗಳು ಮುಖ್ಯ ನಿದರ್ಶನಗಳು. ಮೇಲೆ ಹೇಳಿದ ಹಲವರು ತಮ್ಮ ಆತ್ಮಚರಿತ್ರೆಯಲ್ಲಿ ತಾತ್ಕಾಲಿಕವಾದ ರಾಜಕೀಯ ಚರಿತ್ರೆಯನ್ನೋ, ಇಲ್ಲವೇ ಸಾಹಿತ್ಯ ಚರಿತ್ರೆಯನ್ನೋ ಹಾಸುಹೊಕ್ಕಾಗಿ ಹೆಣೆದಿರುತ್ತಾರೆ. ಆಯಾ ಲೇಖಕರ ಗ್ರಂಥ ಪರಿಚಯಕ್ಕಂತೂ ಈ ಕೃತಿಗಳು ತುಂಬ ಸಹಾಯಕವಾಗುತ್ತವೆ.

"Hero-worship never dies, nor can die"—ವ್ಯಕ್ತಿ ಪೂಜೆಗೆ ಎಂದೆಂದಿಗೂ ಚ್ಯುತಿಯಿಲ್ಲ; ಚ್ಯುತಿ ಬರಲಾರದು ಎಂಬ ಕಾರ್ಲೈಲಿನ ಮಾತು ಸತ್ಯವಾದುದು. ಇದಕ್ಕೆ ಕನ್ನಡದಲ್ಲಿ ಇತ್ತೀಚೆಗೆ ಒಂದೆರಡು ಸೊಗಸಾದ ನಿದರ್ಶನಗಳನ್ನು ಕೊಡಬಹುದು. ದಿವಂಗತ ಕೈಲಾಸಂ ಅವರ ಬಗ್ಗೆ ರಚಿತವಾಗಿರುವ ಗ್ರಂಥಗಳೂ, ಬರೆಹಗಳೂ ಇದಕ್ಕೆ ಸಾಕ್ಷಿ. ಶ್ರೀ. ಜಿ. ಪಿ. ರಾಜರತ್ನಂ ಅವರ "ಕೈಲಾಸಂ ಕಥನ" ಮತ್ತು "ಕೈಲಾಸಂ ನೆನಪು", ಶ್ರೀ. ಅ. ನ. ಕೃ. ಅವರ "ಕೈಲಾಸಂ", ಶ್ರೀ. ಕಂದಾಡೆ ಕೃಷ್ಣ ಐಯಂಗಾರ್ಯರ "ನಾನು ಕಂಡ ಕೈಲಾಸಂ", ಹಲ ಕೆಲವು ಲೇಖಕರು ಬರೆದಿರುವ "ಕೈಲಾಸಂ ದರ್ಶನ" ಇವುಗಳು ಮನನೀಯವಾದುವು. ಹೀಗೆಯೇ ಶ್ರೀ. ಬೇಂದ್ರೆಯವರನ್ನು ಕುರಿತು ಕೆಲವು ಕೃತಿಗಳು ಬಂದಿವೆ. ಶ್ರೀ. ಎಸ್. ವಿ. ರಂಗಣ್ಣನವರು ದಿವಂಗತ "ಶ್ರೀ"ಯವರನ್ನು ಕುರಿತು, "ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ" ಎಂಬ ಗ್ರಂಥದ ಮೊದಲನೆಯ ಭಾಗದಲ್ಲಿ ಬರೆದಿರುವ ಪೀಠಿಕೆಯೂ ಇದೇ ರೀತಿಯದು. ಶ್ರೀ. ತ. ರಾ. ಸು. ಅವರ "ಅ. ನ. ಕೃ." ಶ್ರೀ. ನೆರಂಗರವರ "ಶ್ರೀರಂಗ" ಎಂಬುವೂ ನಮ್ಮ ಕುತೂಹಲವನ್ನು ಕೆಣಕುವಂಥವು. ಇಂಗ್ಲಿಷ್ ಸಾಹಿತ್ಯದ ಪರಿಚಯವಿರುವವರು ಬಾಸವೆಲ್ ಮತ್ತು ಜಾನ್‌ಸನ್ನರನ್ನು ಇಲ್ಲಿ ನೆನೆಯಬಹುದು.

ಕನ್ನಡ ಸಾಹಿತ್ಯದಲ್ಲಿ ಧಾರ್ಮಿಕ ಪುರುಷರನ್ನು ಕುರಿತು ಬರೆದಿರುವ ಉತ್ಕೃಷ್ಟವಾದ ಜೀವನಚರಿತ್ರೆಗಳಿವೆ. ಶ್ರೀ. ಕೆ. ವಿ. ಪುಟ್ಟಪ್ಪನವರ "ವಿವೇಕಾನಂದ", "ರಾಮಕೃಷ್ಣ ಪರಮಹಂಸ"ಗಳು ಮಹಾಕಾವ್ಯದ ಮಾದರಿಯಲ್ಲಿವೆ. ಶ್ರೀ. ಎಂ. ಆರ್. ಶ್ರೀ.ಗಳ 'ಭಕ್ತಿ ಭಂಡಾರಿ ಬಸವಣ್ಣ'ನಂತೂ ಒಂದು ಕಾವ್ಯವೋ ಎಂಬಂತಿದೆ. ಇದೇ ರೀತಿಯಲ್ಲಿ ದಯಾನಂದ ಸರಸ್ವತಿ, ಸ್ವಾಮಿ ರಾಮ ತೀರ್ಥರು, ವಿದ್ಯಾರಣ್ಯರು ಮೊದಲಾದವರನ್ನು ಕುರಿತು ಗ್ರಂಥಗಳಿವೆ. ಮಹಾಕವಿಗಳಾದ ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರ ವ್ಯಾಸ,
ಲಕ್ಷ್ಮೀಶ, ಭಾಸ, ವಾಲ್ಮೀಕಿ ಮೊದಲಾದವರ ಕವಿಕಾ
ಚಯ ಗ್ರಂಥಗಳಿವೆ. ಇತ್ತೀಚಿನ ರಾಷ್ಟ್ರ ಸೇವಕರನ್ನು
ಬರೆದ ಕೃತಿಗಳಿವೆ. ವಿಜ್ಞಾನಿಗಳ ಜೀವನಚರಿತ್ರೆಗಳೂ
ತ್ತಿವೆ. ಶ್ರೀ. ಎನ್. ಎಸ್. ವೀರಪ್ಪನವರು ಬರೆ
'ಚಾರಲ್ಸ್ ಡಾರ್ವಿನ್' ಮತ್ತು 'ಐಸಾಕ್ ನ್ಯೂ
ಗ್ರಂಥಗಳು ಬಹು ಉತ್ತಮವಾದ ಉದಾಹರಣೆಗಳು.
ಮಹಾಪುರುಷರ ಜೀವನ ಪರಿಚಯವನ್ನು ಸಣ್ಣ ಸಣ್ಣ
ರೂಪದಲ್ಲಿ ಮಾಡಿಕೊಟ್ಟಿರುವ ಸುಬೋಧ ಕುಸುಮ
ಲಿಯ ಸಂಪಾದಕರಾದ ಶ್ರೀ. ಎಂ. ರಾಮರಾಯರನ್ನು ಯ
ಮರೆಯುವಂತಿಲ್ಲ.

ಈ ವರೆಗೆ ಜೀವನಚರಿತ್ರೆಗಳ ಕೃಷಿಯನ್ನು ಕಂ
ಇವುಗಳಿಗೆ ನಮ್ಮಲ್ಲಿರುವ ಸಾಧನಗಳ ಬಗ್ಗೆ ಸ್ವಲ್ಪ ಆಲೋ
ಬೇಕಾಗಿದೆ. ಜೀವನಚರಿತ್ರೆಯನ್ನು ಬರೆಯುವವರಿಗೆ ವ
ಪುರುಷರ ಲೇಖನಗಳು, ಭಾಷಣಗಳು, ದಿನಚರಿ, ಆತ್ಮ
ಗಳೇ ಮುಖ್ಯ ಆಧಾರಗಳು. ಪಾಶ್ಚಾತ್ಯರಲ್ಲಿ ಪ್ರತಿಯ
ಪ್ರತಿಭಾವಂತನೂ ಇವುಗಳ ಬಗ್ಗೆ ವಿಶೇಷವಾದ ಆಸಕ್ತಿ ವ
ವನು. ಭಾರತೀಯರಲ್ಲಿ ಈ ಸಂಪ್ರದಾಯ ಇನ್ನೂ ಬೆ
ಬೇಕಾಗಿದೆ. ಈಚೀಚೆಗೆ ಕೆಲವರು ಆತ್ಮಚರಿತ್ರೆಗ
ಬರೆಯತೊಡಗಿರುವುದು ಶುಭ ಸೂಚನೆ.

ಸಾಹಿತ್ಯದ ದೃಷ್ಟಿಯಲ್ಲಿ ಜೀವನಚರಿತ್ರೆಗಳಿಗೆ
ಮಾನ್ಯವಾದ ಸ್ಥಾನವಿದೆ. ಮಹಾಪುರುಷರ ಜೀವನ ವ
ಕಾವ್ಯವಿದ್ದಂತೆ. ಆತನ ಸಾಧನಮಾರ್ಗ ಉಳಿದ
ಸರ್ವದಾ ಆದರ್ಶಪ್ರಾಯವಾದುದು. ಒಬ್ಬೊಬ್ಬ ಮ
ಪುರುಷನ ಮಹತ್ಕಾರ್ಯವೂ ದೇಶದ ಉನ್ನತಿಯನ್ನು
ಸುವುದರಲ್ಲಿ ಒಂದೊಂದು ಮೆಟ್ಟಲಿದ್ದಂತೆ. ಬೆಳೆಯಲಿ
ವಿದ್ಯಾರ್ಥಿಗಳಿಗೆ ಜೀವನಚರಿತ್ರೆಗಳು ಬಹು ಪರಿಣಾಮ
ಯಾದವುಗಳು. ಏಕೆಂದರೆ, ಅವರವರ ಅಭಿರುಚಿಯ
ಅರಿತುಕೊಳ್ಳಲು ಈ ಸದ್ಗ್ರಂಥಗಳಷ್ಟು ಸಹಾಯಕವಾ
ಗಳು ಬೇರೊಂದಿಲ್ಲ. ವಯಸ್ಕರಿಗೂ ಸಹ ಜೀವನಚ
ಗಳು ನಂದಾದೀವಿಗೆಗಳಿದ್ದಂತೆ. ನಮ್ಮ ಜೀವನದ ಸ
ಯನ್ನು ಬಿಡಿಸಲು ಇವು ನೆರವಾಗಬಲ್ಲವು. ಮಹಾಪು
ನನ್ನು ಕುರಿತು ಬರೆದ ಗ್ರಂಥ ನಿಜವಾಗಿಯೂ ಅಮ
ವೆನಿಸಬೇಕಾದರೆ ಆತನ ಶ್ರೇಷ್ಠವಾದ ಅನುಯಾಯಿಯ
ಅದು ರಚಿತವಾಗಬೇಕು. ಈ ಕ್ಷೇತ್ರದಲ್ಲಿ ಈ ಎಚ್ಚರಿಕೆ
ಗತ್ಯ. ಜೀವನಚರಿತ್ರೆ, ಕಾದಂಬರಿ, ಕಾವ್ಯಗಳಷ್ಟೇ ಸ್ಥಾ
ದಿಂದಿರಬೇಕಾದರೆ ಈ ದೃಷ್ಟಿಯನ್ನು ಮರೆಯಬಾರದು. ಜೀ
ಚರಿತ್ರೆಗಳ ವ್ಯಾಸಂಗದಿಂದ ಉದಾತ್ತವಾದ ಧ್ಯೇ
ಅಪೂರ್ವವಾದ ಸಂಸ್ಕಾರ, ಅಂತರ್ಗತವಾದ ಅಭಿರುಚಿ
ಸಿದ್ಧಿಸುವುವು. ಕಡೆಯದಾಗಿ, ಆಂಗ್ಲ ಕವಿಯ ಒ
ಮಾತನ್ನು ಹೇಳಿ ಈ ಪ್ರಬಂಧವನ್ನು ಮುಗಿಸಬಹುದು.

ರಾಷ್ಟ್ರೀಯ ಪಂಚವಾರ್ಷಿಕ ಯೋಜನೆ

[ಲೇಖಕರು: ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು, ಬೆಂಗಳೂರು]

ದೇಶದ ಅಭಿವೃದ್ಧಿ ಉತ್ತಮವಾದ ಯೋಜನೆಯ ಮಾರ್ಗ ನ್ನು ಹೊಂದಿಕೊಂಡಿದೆ. ದೇಶದ ಬೆಳವಣಿಗೆಗೆ ಯೋಜನಾ ಮ ನಿಶ್ಚಿತವಾದ ಮಾರ್ಗ. ಇಂಡಿಯಾ ಸರಕಾರ ತನ್ನ ಂಚವಾರ್ಷಿಕ ಯೋಜನೆಯನ್ನು ಜನತೆಗೆ ಒಪ್ಪಿಸಿದೆ. ಈ ೋಜನೆಯನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಟ್ಟು ಯೋಜನೆ ೧೭೯೩ ಕೋಟಿ ರೂಪಾಯಿಯ ವೆಚ್ಚವನ್ನು ಳಗೊಂಡಿದೆ. . ಮೊದಲನೆ ಭಾಗಕ್ಕೆ ರೂ. ೧೪೯೩ ಕೋಟಿ, ರಡನೆಯ ಭಾಗಕ್ಕೆ ರೂ. ೩೦೦ ಕೋಟಿ ಮೊದಲನೆಯ ಾಗದ ವೆಚ್ಚಕ್ಕೆ ದೇಶದ ಸಾಧನ, ಸಂಪತ್ತಿನಿಂದ ಒದಗಿಸಿಕೊ ಬೇಕು. ಎರಡನೆಯ ಭಾಗದ ಖರ್ಚಿಗಾಗಿ ಪರದೇಶದ ಂಪತ್ತಿಕ ಸಹಾಯದ ಕಡೆ ಕೈನೀಡಬೇಕು, ಹೀಗಿದೆ ರಾಷ್ಟ್ರೀ ು ಯೋಜನೆಯ ಸ್ಥಿತಿ. ಒಟ್ಟು ವೆಚ್ಚದಲ್ಲಿ ಕೇಂದ್ರ ಸರಕಾ ರ ಖಜಾನೆಯಿಂದ ೭೩೪ ಕೋಟಿ ರೂಪಾಯಿ ಖರ್ಚು ಆಗು ದು; ಇನ್ನುಳಿದ ೭೫೯ ಕೋಟಿ ರೂಪಾಯಿಯಷ್ಟು ಸಂಸ್ಥಾ ಗಳು ಪಾಲುಕೊಡಬೇಕು.

ಯೋಜನೆಯಲ್ಲಿ ಮೊದಲು ಗಮನ ಕೊಡಬೇಕಾದ ಂಶಗಳು ಹೀಗಿವೆ:

೧. ಕೈಯಲ್ಲಿ ಈಗಿರುವ ಕಾರ್ಯಕ್ರಮಗಳು ಮೊದಲು ುಗಿಯಬೇಕು (ಅರ್ಧಮರ್ಧವಾಗಿ ಉಳಿದಿರುವ ಅನೇಕ ಯೋಜ ಳನ್ನು ಮುಗಿಸುವುದು)

೨. ಅತೀ ಶೀಘ್ರವಾಗಿ ಆಹಾರದ ಬೆಳವಣಿಗೆ ಮತ್ತು ಕಚ್ಚಾ ಲುಗಳ ತಯಾರಿಕೆ ಕಡೆ ಗಮನಕೊಡುವುದು.

೩. ತಾಂತ್ರಿಕ ಮತ್ತು ಭೌತಿಕ ಪದಾರ್ಥಗಳ ಆಶ್ರಯಗ ್ನು ಹೆಚ್ಚಿಸಲು, ಬೆಳೆಸಲು, ಮತ್ತು ಉದ್ಯೋಗ ಹೆಚ್ಚಿಸುವ ರ್ಯಕ್ರಮಗಳನ್ನು ಅತೀ ಬೇಗ ಆಚರಣೆಗೆ ತರುವುದು.

೪. ಸಾಮಾಜಿಕ ಅಭಿವೃದ್ಧಿ ಮತ್ತು ಬೆಳವಣಿಗೆ ಕಡೆ ಈಗಾಗಲೇ ಕೊಂಡಿರುವ ಕ್ರಮಗಳನ್ನು ಇನ್ನಷ್ಟು ಬಲಪಡಿಸುವುದು ಮತ್ತು ಕ್ರಮವಾಗಿ ಅವುಗಳನ್ನು ಅಭಿವೃದ್ಧಿಗೊಳಿಸುವುದು.

೫. ಸಾಮಾಜಿಕ ಚಟುವಟಿಕೆ, ಅಭಿವೃದ್ಧಿಯ ಕಡೆ ಗಮನ ಕೊಡದೆ ಹಿಂದುಳಿದ ಸಂಸ್ಥಾನಗಳಲ್ಲಿ ಇವುಗಳನ್ನು ಹೆಚ್ಚಿಸುವುದು

ಗ್ರಾಮಾಭಿವೃದ್ಧಿ ಮತ್ತು ಭೂವ್ಯವಸಾಯಕ್ಕೆ ಹೆಚ್ಚು ಪ್ರಾಧಾನ್ಯವನ್ನು ಈ ಯೋಜನೆಯಲ್ಲಿ ಕೊಟ್ಟಿದೆ ಎಂದು ಹೇಳಲಾಗಿದೆ. ಭೂವ್ಯವಸಾಯವೇ ಗುರಿಯಾಗಿ ಶಾಶ್ವತವಾದ ನೀರಾವರಿ ಮತ್ತು ವಿದ್ಯುತ್ ಶಕ್ತಿ ಉತ್ಪಾದನೆಯ ಕಾರ್ಯಕ್ರಮಗಳನ್ನು ರಚಿಸಿದೆ. ಗ್ರಾಮಾಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ಗುಡಿಕೈಗಾರಿಕೆಗಳಿಗೆ ಪ್ರಾಶಸ್ತ್ಯ ಕೊಟ್ಟಿದೆ ಎಂದೂ ಹೇಳಲಾಗಿದೆ

ಕೈಗಾರಿಕೆಯ ಬೆಳವಣಿಗೆಯಲ್ಲಿನ ಉದ್ದೇಶ್ಯವನ್ನು ಈ ಕೆಳಗಿನಂತೆ ಈ ಯೋಜನೆಯಲ್ಲಿ ವಿವರಿಸಿದೆ.

೧. ವ್ಯವಸಾಯ ಬೆಳವಣಿಗೆ ಮತ್ತು ನೀರಾವರಿ ಹಾಗೂ ಶಕ್ತಿ ಉತ್ಪಾದನಾ ಯೋಜನೆಗಳಿಗೆ ಅವಶ್ಯವಿರುವ ಕೈಗಾರಿಕಾ ಸಲಕರಣೆಗಳನ್ನು ಬೇಗ ಒದಗಿಸುವುದು.

೨. ಉತ್ಪನ್ನಕಾರಕ ಕೈಗಾರಿಕೆಗಳಾದ, ಉದಾ: ಸೆಣಬು ತಯಾರಿಕೆ ಮತ್ತು ಬಳಕೆಗೆ ಬೇಕಾದ ಪದಾರ್ಥಗಳ ಕೈಗಾರಿಕೆ ಉದಾ: ಹತ್ತಿ, ನೆಯಿಗೆ, ಸಕ್ಕರೆ, ಸಾಬೂನು, ಇವುಗಳ ಧಾರಣ ಶಕ್ತಿಯನ್ನು ಸಂಪೂರ್ಣ ಬಳಸಿಕೊಳ್ಳುವುದು.

೩. ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸುವ ಕೈಗಾರಿಕೆಗಳು ಉದಾ: ಕಬ್ಬಿಣ, ಉಕ್ಕು, ರಸಾಯನಿಕ ಪದಾರ್ಥಗಳ ತಯಾರಿಕೆ, ಇವುಗಳ ಧಾರಣ ಶಕ್ತಿಯನ್ನು ಹೆಚ್ಚಿಸುವುದು.

೪. ಈಗಾಗಲೇ ಬಂಡವಳ ಹಾಕಿ ಪ್ರಾರಂಭಿಸಿದ ಕೈಗಾರಿಕಾ ಕೇಂದ್ರಗಳ ಕೆಲಸವನ್ನು ಬೇಗ ಮುಗಿಸುವುದು.

೫. ಈಗ ಇರುವ ಕೈಗಾರಿಕೆಗಳಲ್ಲಿ ಸಾಮೋಪದೋಷಗಳನ್ನು ನಿವಾರಿಸಲು ಪ್ರಯತ್ನಿಸುವುದು.

ಯೋಜನೆಯ ಪ್ರಕಾರ ಮುಖ್ಯವಾದ ಖರ್ಚುಗಳು ಹೀಗಿವೆ.

೧.	ಭೂವ್ಯವಸಾಯ	ರೂ. ೧೯೧·೭ ಕೋಟಿ.
೨.	ನೀರಾವರಿ ಯೋಜನೆ	ರೂ. ೪೫೦·೨೬ „
೩.	ಸಾಗಣೆ, ಸುದ್ದಿ ಸಮಾಚಾರಗಳಿಗೆ	ರೂ. ೩೮೮·೨೨ „
೪.	ಕೈಗಾರಿಕೆ	ರೂ. ೧೦೦·೯೯ „
೫.	ಸಾಮಾಜಿಕ ಸಮಾಚಾರ	ರೂ. ೨೫೪·೦೮ „
೬.	ಪುನರ್ವಸತಿ(ನಿರಾಶ್ರಿತರಿಗೆ)	ರೂ. ೭೯·೦೦ „
೭.	ಇತರ	ರೂ. ೨೮·೫೪ „

Lives of great men all remind us
We may make our lives sublime.
And, departing, leave behind us
Footprints on the sands of time.
—LONGFELLOW.

ಈ ಯೋಜನೆಯು ಯಶಸ್ಸು ಅದನ್ನು ಆಚರಣೆಗೆ ತರುವ ಕ್ರಮವನ್ನು ಹೊಂದಿಕೊಂಡಿದೆ ಮತ್ತು ಜನತೆಯ ಸಹಕಾರವನ್ನು ಅವಲಂಬಿಸಿದೆ. ಜನತೆಯ ದೃಷ್ಟಿಯಿಂದ ಲೆಖ್ಖ ಹಾಕಿದರೆ ದೇಶದಪ್ರತಿಯೊಬ್ಬ ಪ್ರಜೆಯೂ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಐದು ವರ್ಷಗಳ ಕಾಲ ತಲಾ ೧೦ದರ ೪೦ ರೂ.ಯಂತೆ, ಯೋಜನೆ ಯಶಸ್ವಿಯಾಗಲು, ತೆರಬೇಕಾಗುತ್ತದೆ. ಈ ಹಣವನ್ನು ಸರಕಾರ ನೇರವಾಗಿ ತೆರಿಗೆಯ ಮೂಲಕ ಅಥವಾ ಇತರ ವಿಧಾನದಿಂದ ವಸೂಲಿ ಪಡೆಯಬಹುದು. ಜನಕ್ಕೆ ಬೇಕೋ ಬೇಡವೋ,-ಯೋಜನೆಯಂಶೂ ಜ್ಯಾರಿಗೆ ಬಂದೇ ಬರುತ್ತದೆ.

ಯೋಜನೆಯ ಕ್ರಮ ಆಚರಣೆಗೆ ತರುವ ವಿಧಾನ ಅನ್ನುವಾಗ ಗೋರವಾಲ ಸಮಿತಿಯ ವರದಿ ನೆನಪಿಗೆ ಬರುತ್ತದೆ. ಶ್ರೀ. ಗೋರವಾಲರು ಆ ವರದಿಯಲ್ಲಿ ಹೀಗೆ ಹೇಳಿದ್ದರು: "ಯೋಜನೆ ಯಾವ ಭಗ್ನವಿಲ್ಲದೆ ಕೈಗೂಡಿ ಬರಬೇಕಾದರೆ ಸರಕಾರದ ಆಡಳಿತ ಯಂತ್ರ ಸ್ವಚ್ಛವಾಗಿರಬೇಕು. ಭದ್ರವಾದ ತಳಪಾಯದ ಮೇಲೇನೇ ಯೋಜನೆ ಮುಂದುವರಿಯಲು ಸಾಧ್ಯ. ಪ್ರಜಾ ಪ್ರಭುತ್ವದಲ್ಲಿ ಯೋಜನೆಗಳೆಲ್ಲ ಕೈಗೂಡಿ ಬರಬೇಕಾದರೆ ಶುದ್ಧ, ಸ್ವಚ್ಛ, ದಕ್ಷ, ನಿಸ್ವಾರ್ಥ, ಮತ್ತು ನಿಸ್ಪೃಹ ಆಡಳಿತ ಅತೀ ಅವಶ್ಯ." ಗೋರವಾಲರ ಈ ಸಲಹೆ ಎಲ್ಲರೂ ಒಪ್ಪತಕ್ಕದ್ದೇ ಆಗಿದೆ. ಆಡಳಿತದ ಈ ನಾಲ್ಕು ವರ್ಷದಲ್ಲಿ ಕೊಟ್ಯಂತರ ರೂಪಾಯಿ ಧ್ವಂಸಮಾಡಿದ ಇಂಡಿಯ ಸರಕಾರದ ಕೆಲವು ಯೋಜನೆಗಳು ನಮ್ಮ ನಿದರ್ಶನದಲ್ಲಿವೆ. ಉದಾ: ದಾಮೋದರ ಕಣಿವೆ ಯೋಜನೆ, ಸಿಂದ್ರಿ ಕಾರ್ಖಾನೆ, ಫ್ಯಾಬ್ರಿಕೇಟ್ ಮನೆಗಳ ಕಾರ್ಖಾನೆ, ಮುಂತಾದುವು. ಪಂಚವಾರ್ಷಿಕ ಯೋಜನೆಯ ಗತಿಯೂ ಇದೇ ಆದರೆ ಜನಕ್ಕೆ ಸ್ವರಾಜ್ಯದ ಲಾಭ ದೊರಕಿದ ಹಾಗೆಯೇ ಸರಿ. ಸರಕಾರಿ ಅಧಿಕಾರಿಗಳ, ಭಂಡವಾಳ ಶಾಹಿಗಳ ಚೀಲ ತುಂಬುವಲ್ಲಿ ಅಡ್ಡಿ ಇಲ್ಲ. ದೇಶದ ಬಡತನ ಮಾತ್ರ ಇನ್ನಷ್ಟು ಹೆಚ್ಚೀತು.

ಯೋಜನೆಯ ವಿಚಾರದ ವಿಮರ್ಶೆ ಮಾಡುವುದಕ್ಕಿಂತ ಮೊದಲು ಈ ಯೋಜನೆಯ ತಯಾರಿಕೆ ಯಾವ ಆಧಾರವನ್ನು ಹೊಂದಿಕೊಂಡಿರಬೇಕಿತ್ತು ಎಂಬ ಅಂಶ ಪರಿಶೀಲಿಸೋಣ. ನಮ್ಮ ಜನಜೀವನದ ಕನಿಷ್ಠ ತರಗತಿ ಯಾವುದು? ನಮ್ಮ ಕನಿಷ್ಠ ಬೇಡಿಕೆಗಳೇನು? ಆವಶ್ಯಕತೆಗಳೇನು? ಇವುಗಳ ಪೂರ್ತಿಕೆಗೆ ಈ ಯೋಜನೆಯಲ್ಲಿ ಅವಕಾಶವಿದೆಯೆ? ಐದು ವರ್ಷದ ಯೋಜನೆ ಫಲಿಸಿದರೆ, ಭಾರತದ ಬಡರೈತ, ಬಡ ಬೋರೆಗೌಡ ಸ್ವರಾಜ್ಯದ ಕನಿಷ್ಠ ಲಾಭವನ್ನಾದರೂ ಹೊಂದುವನೆ ಎಂಬ ಕಡೆ ಸ್ವಲ್ಪ ವಿಚಾರ ಮಾಡಬೇಕು.

ದೇಶದ ಸಂಪತ್ತನ್ನು ಹೆಚ್ಚಿಸುವುದೇ ಯಾವದೇ ಯೋಜನೆಯ ಮೊದಲ ಗುರಿ ಆಗಿರಬೇಕು. ದೇಶದಲ್ಲಿಯೇ ಒದಗುವ ಎಲ್ಲ ಪ್ರಕೃತಿಜನ್ಯ ಪದಾರ್ಥಗಳ ಉಪಯೋಗ ಪಡೆದು ಚೆನ್ನಾಗಿ ಪಡೆದು, ಒಂದಿಷ್ಟನ್ನು ಹಾಳುಮಾಡದೆ, ಜನಜೀವನದ ಮ... ಹೆಚ್ಚಿಸಲು ಪ್ರಯತ್ನಿಸಬೇಕಾದುದು ಯೋಜನೆಯ ಮ... ಉದ್ದೇಶವಾಗಿರಬೇಕು.

ಪ್ರತಿಯೊಬ್ಬ ಮಾನವ ಸುಖದಿಂದ ಬದುಕಬೇಕಾ... ೧. ಆಹಾರ, ೨. ಬಟ್ಟೆ, ೩. ವಸತಿ ಇವು ಮೂರು ಅ... ಅವಶ್ಯ. ಇನ್ನು ಇದರ ಜತೆಗೆ ಕಾಹಿಲೆ ಬಂದಾಗ ಔಷ... ವಿದ್ಯಾಭ್ಯಾಸದ ಸೌಕರ್ಯ ಇವೆಲ್ಲ ಬೇಕೇಬೇಕು.

ನಮ್ಮ ದೇಶದ ಪ್ರಧಾನ ಕಸಬು ಕೃಷಿ ಆದರೂ, ನ... ಜನಕ್ಕೆ ಸಾಕಷ್ಟು ಆಹಾರ ಇಲ್ಲ. ಉತ್ಪತ್ತಿಗೂ ತ... ಅನ್ಯಾಯವಾಗಿದೆ. ಎಷ್ಟೋ ಜನಕ್ಕೆ ಸರಿಯಾದ ಆಹಾರ... ಸಿಗುವುದಿಲ್ಲ. ಪ್ರಾಜ್ಞರ ಸಮಿತಿಯೊಂದು ತನ್ನ ವರದಿಯ... ಒಬ್ಬ ಪ್ರಾಯಸ್ಥನಿಗೆ ಒಂದು ದಿನಕ್ಕೆ ಇಷ್ಟು ಆಹಾರ ಅ... ಎಂದು ಲೆಖ್ಖ ಹಾಕಿ ಪ್ರಕಟಿಸಿದೆ.

ಒಂದು ದಿನಕ್ಕೆ ಒಬ್ಬ ಪ್ರಾಯಸ್ತನಿಗೆ ಔನ್ಸ್ ಲೆಕ್ಕದ...

೧.	ಧಾನ್ಯಗಳು:	೧೬ ಔನ್ಸ್.
೨.	ಬೇಳೆಕಾಳು:	೩ "
೩.	ಸಕ್ಕರೆ	೨ "
೪.	ತರಕಾರಿ	೬ "
೫.	ಹಣ್ಣು ಹಂಪಲು	೨ "
೬.	ಕೊಬ್ಬು ಮತ್ತು ತೈಲ	೧.೫ "
೭.	ಹಾಲು ಅಥವಾ ಮಾಂಸ	.
	ಮೊಟ್ಟೆ, ಮೀನು	೨.೩ "

ಇಷ್ಟು ಆಹಾರದ ಉತ್ಪಾದನಾ ಶಕ್ತಿ ೨,೬೦೦ ಕೆಲೊ... ಗಳು, ಇನ್ನು ಅಡಿಗೆಯ ಮನೆಯಲ್ಲಿ ಆಗುವ ಹಾಳು, ಇತ... ಲೆಕ್ಕ ಹಾಕಿ ಅಂತೂ ಪ್ರತಿ ಒಬ್ಬನಿಗೆ ಒಂದು ದಿನಕ್ಕೆ ೨,೮... ಕೆಲೋರಿಗಳಷ್ಟು ಶಕ್ತಿ ಉತ್ಪಾದನವಾಗುವ ಆಹಾರ ಅ... ಎಂದಾಯಿತು. ಅಂದರೆ ನಮ್ಮ ಯೋಜನೆಯಲ್ಲಿ ಆಹಾ... ಬೆಳವಣಿಗೆಗೆ ಹೆಚ್ಚು ಪ್ರಾಶಸ್ತ್ಯವಿರಬೇಕೆಂಬುವು ನಿಶ್ಚ... ವಷ್ಟೇ. ವರ್ಷಂಪ್ರತಿ ರೂ. ೨,೧೦೦ ಕೋಟಿಯ... ಹಣ ನಮ್ಮ ದೇಶದ ಪ್ರಜೆಗೆ ಪೌಷ್ಟಿಕ ಆಹಾರ ಒದಗಿಸಬೆ... ಗುತ್ತದೆ ಎಂದು ೧೯೪೮ರಲ್ಲಿ ಲೆಕ್ಕ ಹಾಕಿದ್ದರು. ಈಗ ಇ... ಹೆಚ್ಚಿದೆ.

ಆಹಾರದ ನಂತರ ಬಟ್ಟೆಯ ಪ್ರಶ್ನೆ. ಬಟ್ಟೆ ಅನ್ನುವ... ಎರಡುಪ್ರಶ್ನೆ ಮುಖ್ಯವಾಗಿ ಎದುರು ನಿಲ್ಲುತ್ತದೆ. ಕನಿಷ್ಠ ಅ... ಎಷ್ಟು? ಯಾವ ತರಗತಿಯದಾಗಿರಬೇಕು ಎಂದು ಬಟ್ಟೆ... ಪ್ರಶ್ನೆ ಆಯಾ ಪ್ರದೇಶಗಳನ್ನು ಹೊಂದಿಕೊಂಡಿದೆ. ಸಿಮ... ನೀಲಗಿರಿ, ಕೊಡಯಕನಲ್ ಮುಂತಾದ ಗುಡ್ಡ ಪ್ರದೇಶಗ... ಹಿಮ ಜಾಸ್ತಿ. ಅಲ್ಲಿ ಹೊದಿಕೆಗಾಗಿ ಜಾಸ್ತಿ ಬಟ್ಟೆಬೇ... ಮುಖ್ಯವಾಗಿ ಉಣ್ಣೆ ಬಟ್ಟೆ ಅಲ್ಲಿ ಅತೀ ಅವಶ್ಯ. ಮದರಾ... ಕರಾವಳಿ ಮುಂತಾದ ಉಷ್ಣ ಪ್ರದೇಶದಲ್ಲಿ ಮಾನ ಮು...

ವಷ್ಟು ಬಟ್ಟೆ ಇದ್ದರೂ ಸಾಕು. ಆದರೂ ನಾಗರಿಕತೆಯ ಲಕ್ಷಣದಂತೆ ಕನಿಷ್ಠವಾಗಿ ಮೈಯ ಬಹ್ವಂಶದಷ್ಟು ಭಾಗವನ್ನು ಮುಚ್ಚಲು ಬಟ್ಟೆ ಬೇಕೇಬೇಕು. ಒಬ್ಬನಿಗೆ ಸುಮಾರು ಮೂವತ್ತು ಗಜದಷ್ಟು ಬಟ್ಟೆಬೇಕು ಎಂದು ಅಂದಾಜುಮಾಡಲಾಗಿದೆ. ಅಂದರೆ ೧೯೪೧ರ ಜನಸಂಖ್ಯೆಯ ಲೆಕ್ಕದಲ್ಲಿ ದೇಶಕ್ಕೆ ವರ್ಷಕ್ಕೆ ಒಟ್ಟು ೧೧,೬೭೦ ಮಿಲಿಯ ಗಜ ಬಟ್ಟೆಬೇಕು. ಇದರ ಬೆಲೆ ಸರಾಸರಿ ಗಜಕ್ಕೆ ೩॥ ಆಣೆಯಂತೆ ಲೆಕ್ಕ ಹಾಕಿದರೂ (ಈಗ ಗಜಕ್ಕೆ ಮೂರುವರೆ ಆಣೆಯಂತೆ ಯಾವ ಬಟ್ಟೆಯೂ ದೊರೆಯುವುದಿಲ್ಲ) ಬಟ್ಟೆಯ ಪೂರೈಕೆಗಾಗಿ ರೂ. ೨೫೫ಕೋಟಿ ಬೇಕಾಗುತ್ತದೆ.

ಬಟ್ಟೆಯ ಆವಶ್ಯಕತೆ ಹೇಗೆ ಪ್ರಾದೇಶಿಕ ಭೇದಗಳನ್ನು ಹೊಂದಿಕೊಂಡಿದೆಯೊ ವಸತಿಯೂ ಬೇರೆ ಬೇರೆ ಪ್ರದೇಶಗಳಿಗೆ ತಕ್ಕಂತೆ ಇರಬೇಕು. ಹೀರ ಮಳೆ ಸುರಿವ ಪ್ರಾಂತದಲ್ಲಿ ಗಟ್ಟಿ ಮುಟ್ಟಾದ ಮನೆಬೇಕು. ಇಂತಹ ಕಡೆ ಸಿಮೆಂಟ್ ಕಾಂಕ್ರೀಟ್ ನಿಲ್ಲಲಾರದು. ಕರಾವಳಿ ಪ್ರದೇಶದಲ್ಲಿ ಮನೆಯ ರೂಪ ಬೇರೆಯೇ ಇರಬೇಕು. ಸಮಾಜದ ಕೂಡುಕಟ್ಟಲೆಗಳಿಗೂ ಅನುಕೂಲವಾಗಿ ಮನೆ ಇರಬೇಕಾಗುತ್ತದೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಪಟ್ಟಣದಲ್ಲಿ ತಮ್ಮ ಆಯುಷ್ಯವನ್ನೆಲ್ಲ ತಮ್ಮ ಸ್ವಂತ ಮನೆಯಿಲ್ಲದೆ ಸಾರ್ವಜನಿಕ ವಸತಿಗಳಲ್ಲೂ, ಬೀದಿಯ ಜಗುಲಿಗಳಲ್ಲೂ, ಕಳೆದ ಸಂಸಾರಗಳು ಎಷ್ಟೋ ಇವೆ. ೧೯೪೧ರಲ್ಲಿ ಲೆಕ್ಕಹಾಕಿದಂತೆ ನಮ್ಮಲ್ಲಿ ಒಟ್ಟು ೬೬ ಮಿಲಿಯ ಮನೆಗಳು ಹಳ್ಳಿಗಳಲ್ಲೂ ೧೦ ಮಿಲಿಯ ಮನೆಗಳು ಪಟ್ಟಣಗಳಲ್ಲೂ ಇವೆ. ಸುಮಾರಾಗಿ ಈ ಗೃಹನಿರ್ಮಾಣ ಕಾರ್ಯಕ್ಕಾಗಿ ವರ್ಷಕ್ಕೆ ನಮ್ಮ ದೇಶದಲ್ಲಿ ೧,೪೦೦ ಕೋಟಿ ರೂಪಾಯಿಬೇಕು. ಈ ಖರ್ಚು ವರ್ಷೇ ವರ್ಷೇ ಅಗತ್ಯವಿದ್ದಲ್ಲ. ವರ್ಷದ ಸುಣ್ಣ ಬಣ್ಣ, ರಿಪೇರಿ ಖರ್ಚಿಗಾಗಿ ಸುಮಾರು ೨೫೮ ಕೋಟಿ ರೂಪಾಯಿಬೇಕು ಎಂದು ಅಂದಾಜು ಮಾಡಲಾಗಿದೆ.

ಇವಲ್ಲದೆ ಆರೋಗ್ಯ ವಿದ್ಯಾಭ್ಯಾಸ, ಮುಂತಾದ ಅನೇಕ ಸಮಸ್ಯೆಗಳಿವೆ. ಇವೆಲ್ಲವುಗಳ ಪರಿಹಾರಕ್ಕೆ ಕೋಟ್ಯಂತರ ಹಣ ವೆಚ್ಚಮಾಡಬೇಕಾಗಿದೆ

ಮಾನವನ ಜೀವನದ ಪ್ರಾಮುಖ್ಯ ಆವಶ್ಯಕತೆಗಳಗೆ ಈ ಹಿಂದೆ ವಿವರಿಸಿದಂತೆ ವರ್ಷಕ್ಕೆ ಈ ಕೆಳಗಿನಷ್ಟು ಹಣ ಅತೀ ಅವಶ್ಯ ಎಂದು ಅಂದಾಜು ಮಾಡಲಾಗಿದೆ.

ಆಹಾರ	೨,೧೦೦	ಕೋಟಿ
ಬಟ್ಟೆ	೨೬೦	”
ವಸತಿ ಖರ್ಚು	೨೬೦	”
ಔಷಧ ಆರೋಗ್ಯ	೧೯೦	”
ಪ್ರಾಥಮಿಕ ವಿದ್ಯಾಭ್ಯಾಸ	೯೦	”
ಒಟ್ಟು	೨,೯೦೦	ಕೋಟಿ ರೂಪಾಯಿ

ಬದುಕಿನ ಕನಿಷ್ಠ ಆವಶ್ಯಕತೆಗಾಗಿ ಪ್ರತಿಯೊಬ್ಬನಿಗೆ ಯುದ್ಧಪೂರ್ವದಲ್ಲಿ ಮೇಲಿನ ಸಂಖ್ಯೆಗಳಂತೆ ರೂ. ೭೪ ಬೇಕಾಗುತ್ತಿತ್ತು. ನಮ್ಮ ವರಮಾನ ಇಷ್ಟಿಲ್ಲ. ಡಾಕ್ಟರ್ ವಿ. ಕೆ. ಆರ್. ವಿ. ರಾವ್ (ದ. ಕನ್ನಡಿಗರಾದ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು) ಅವರು ೧೯೩೧ರ ಹೊತ್ತಿಗೆ ಅಂದಾಜು ಮಾಡಿದಂತೆ ನಮ್ಮ ವರಮಾನ ವರ್ಷಕ್ಕೆ ತಲಾ ರೂ. ೬೫/- ೧೯೪೧ಕ್ಕೆ ಈ ಸಂಖ್ಯೆ ಇನ್ನೂ ಇಳಿಯುತ್ತದೆ. ವಿಶೇಷವಾಗಿ ಬೆಳೆದ ಜನಸಂಖ್ಯೆ, ಮತ್ತು ಇತರ ಕಾರಣಗಳಿಂದ ಈಗ ಈ ವರಮಾನ ಇನ್ನೂ ಇಳಿದಿದೆ. ಆದ್ದರಿಂದ ನಮ್ಮ ಯಾವತ್ತು ಯೋಜನೆ ಈ ಇಳಿಮುಖವನ್ನು ಎತ್ತುವದಾಗಿರಬೇಕು. ದೇಶದ ಸಾಂಪತ್ತಿಕ ಅಭಿವೃದ್ಧಿ ಹೆಚ್ಚಿಸುವ ಕಡೆ ಲಕ್ಷ್ಯ ಕೊಡಬೇಕು; ಸಾಮಾಜಿಕ ಜೀವನದಲ್ಲಿ, ವ್ಯವಹಾರದಲ್ಲಿ ಹಣಕ್ಕೆ ಕೊಡುವ ಮರ್ಯಾದೆ, ಸ್ಥಾನ ಕಮ್ಮಿ ಮಾಡಿದರೂ ಈ ಕಷ್ಟ ನಿವಾರಣೆ ಆಗದೆ ಇಲ್ಲ.

ಇಂಡಿಯ ಸರಕಾರ ಈಗ ಪ್ರಕಟಿಸಿರುವ ಯೋಜನೆಯಲ್ಲಿರುವ ಮುಖ್ಯ ಲೋಪವೇ ಇದು ಎನ್ನಬೇಕು. ಸಾಂಪತ್ತಿಕ ಬೆಳವಣಿಗೆ ಕಡೆ ಹೆಚ್ಚು ಗಮನ ಈ ಯೋಜನೆಯಲ್ಲಿ ಕೊಟ್ಟಿಲ್ಲ. ಇವತ್ತಿನ ಕೊಂಗ್ರೆಸ್ ಸರಕಾರದ ಅಂದರೆ ಬಂಡವಳ ಶಾಹಿಗಳ ಪ್ರಭಾವವೇ ಈ ಯೋಜನೆಯಲ್ಲಿ ಹೆಚ್ಚಾಗಿ ಕಾಣುತ್ತಿದೆಯೇ ಹೊರತು, ಈ ಯೋಜನೆ ರೈತನಿಗಾಗಿಯೂ, ಗ್ರಾಮಶಿಲ್ಪಿಗಾಗಿಯೂ ಅಲ್ಲ. ಸಾರ್ವತ್ರಿಕ ಉದ್ಯೋಗ ಹೆಚ್ಚಿಸಲು ಈ ಯೋಜನೆಯಲ್ಲಿ ಅವಕಾಶ ಇಲ್ಲದ ಮೇಲೆ ಈ ಯೋಜನೆ ದೇಶದ ಸಾಂಪತ್ತಿಕ ಜೀವನದಲ್ಲಿ ಹೇಗೆ ಉತ್ತಮಗೊಳಿಸೀತು? ಎಲ್ಲರ ಕೈಗೂ ಕಸಬು ದೊರೆತರೇನೇ ದೇಶದ ಔದ್ಯೋಗಿಕ ಜೀವನ ಹೆಚ್ಚಿ, ನಮ್ಮ ಆವಶ್ಯ ಪದಾರ್ಥಗಳ ಕೊರತೆ ನೀಗಿ ನಮ್ಮ ದೇಶದ ಹಣ ನಮ್ಮಲ್ಲಿಯೇ ಉಳಿಯಲು ಅವಕಾಶವಾಗುವುದಿಲ್ಲವೆ? ಆಹಾರಕ್ಕಾಗಿ ಮಿಲಿಯಕಟ್ಟಲೆ ಡಾಲರ್ ಅಮೇರಿಕೆ ಮತ್ತೂ ಇತರ ದೇಶಗಳಿಗಾಗಿ ಸುರಿಯುತ್ತಿದ್ದೆವು. ನಮಗಿಂತ ಹಿಂದುಳಿದ ರಾಷ್ಟ್ರ, ಯುದ್ಧಪೀಡಿತ ರಾಷ್ಟ್ರ ಚೈನಾ! ಕೂಡ ನಮಗೆ ಆಹಾರ ಒದಗಿಸುತ್ತಿದೆ. ಪಾಕೀಸ್ತಾನವೂ ಕೊಡುತ್ತಿದೆ. ನಾವು ಕೊಳ್ಳುವವರಾಗಿದ್ದೇವೆಯೇ ಹೊರತು ಕೊಡುವವರಾಗಿಲ್ಲ. ೧೯೫೧ರಿಂದ ಹೊರಗಿನಿಂದ ಆಹಾರ ಆಮದು ಮಾಡುವುದು ನಿಲ್ಲಿಸುತ್ತೇವೆಂದು ಹೇಳಿದ ಸರಕಾರ ಇನ್ನು ಮೂರು ವರ್ಷ ಆ ಕಾಲ ಮುಂದುವರಿಸಿದೆ. ಯೋಜನೆಯಲ್ಲಿಯೂ ಹೊರದೇಶಕ್ಕೆ ಆಹಾರಕ್ಕಾಗಿ ಹಣ ಸುರಿಯಲು ಅವಕಾಶ ಇಟ್ಟಿದೆ. ವಸ್ತುಸ್ಥಿತಿ ಹೀಗಿದ್ದೂ ನಮ್ಮ ಸಾಂಪತ್ತಿಕ ಸ್ಥಿತಿ ಹೇಗೆ ಉದ್ಧಾರ ಆದೀತು?

ಇನ್ನೊಂದು ಲೋಪವೆಂದರೆ ಕೈಗಾರಿಕೆಯಲ್ಲೂ ಆಡಳಿತದಲ್ಲೂ ನಮ್ಮ ಸರಕಾರ ವಿಪರೀತ ಕೇಂದ್ರೀಕರಣದ ನೀತಿಯನ್ನು

ಅವಲಂಬಿಸಿರುವುದು. ವಿಕೇಂದ್ರೀಕರಣ ನೀತಿ ಗಾಂಧೀಜಿ ಕೂಡ ಒಪ್ಪಿದ್ದರು. ಪ್ರಾದೇಶಿಕ ಬೆಳವಣಿಗೆಗೆ ಗಮನ ಕೊಟ್ಟಿಲ್ಲದೆ ದೇಶ ಒಮ್ಮುಖವಾಗಿ ಬೆಳೆಯಲಾರದು. ದೇಶದ ಯಾವದೋ ಒಂದು ಕಡೆ ಕೋಟ್ಯಂತರ ಹಣ ಖರ್ಚುಮಾಡಿ ಅಲ್ಲಿನ ಜನ ಸುಖವಿದ್ದೂ ಇತರ ಅಭಿವೃದ್ಧಿ ಹೊಂದದ ಪ್ರದೇಶಗಳ ಕಡೆ ಗಮನ ಕೊಡದೆ ಉಳಿದರೆ? ಇಂತಹ ಲೋಪ ನಿವಾರಣೆಗೇನೇ ಕೈಗಾರಿಕೆಯಲ್ಲೂ ವಿಕೇಂದ್ರೀಕರಣ ನೀತಿ ಅವಶ್ಯ ಅನ್ನುವುದು.

ವಿಕೇಂದ್ರೀಕರಣ ಎಂದಾಗ, ಅದರ ಜತೆಗೆ "ಪ್ರಾಂತವಾದ" "ಅರಾಷ್ಟ್ರೀಯ" ಮುಂತಾದ ಮಾತು ದೇಶದ ನಾಯಕರು ಆಡುವುದು ಉಂಟು. ಪ್ರಾಂತವಾದ ವಿಕೇಂದ್ರೀಕರಣ ನೀತಿಯ ಒಂದು ಮುಖ್ಯ ತತ್ವ. ಇದು ಅರಾಷ್ಟ್ರೀಯ ಅಲ್ಲ. ಆಡಳಿತದ ಕೇಂದ್ರದಲ್ಲಿರುವ ಕೆಲವು ಮಂದಿ ತಮ್ಮ ತಮ್ಮ ಪ್ರಾಂತ, ಪ್ರದೇಶಗಳ ಬೆಳವಣಿಗೆಗೆ ದೇಶದ ಕೋಟ್ಯಂತರ ಹಣ ಉಪಯೋಗಿಸಿಕೊಂಡು ಇತರ ಕೆಲವು ಪ್ರದೇಶಗಳ ಕಡೆ ಲಕ್ಷ್ಯ ಕೊಡದಲ್ಲಿ, ಆ ಪ್ರದೇಶದವರ ಆಡಳಿತ ನಮಗೇ ಬಿಟ್ಟುಬಿಡಿ ಎಂದು ಗದ್ದಲಮಾಡುವುದು ಸ್ವಾಭಾವಿಕ. ಹಾಗೆ ಗದ್ದಲ ಮಾಡಿದವರು, ಅರಾಷ್ಟ್ರೀಯ ತತ್ವ ಪ್ರತಿಪಾದಕರು, ದೇಶದ್ರೋಹಿಗಳು ಎಂದು ಹೇಳುವವರು ದೇಶದ ಸಂಪತ್ತನ್ನು ತಮ್ಮ ಇಚ್ಛಾನುಸಾರ ಉಪಯೋಗಿಸಿಕೊಳ್ಳುವುದರಿಂದ ಇದಕ್ಕಿಂತ ಹೆಚ್ಚಿನ ಅಪರಾಧಿಗಳಾಗುತ್ತಾರೆ. ವಾಸ್ತವವಾಗಿ ಪ್ರಾಂತವಾದಿಗಳು ರಾಷ್ಟ್ರದ್ರೋಹಿಗಳಲ್ಲ ಗಾಂಧೀಜಿ ಪ್ರಾಂತವಾದಿಗಳಾಗಿದ್ದರು. ಇಲ್ಲಿ ಈ ಚರ್ಚೆ ಅನವಶ್ಯಕವಾದರೂ ಇದಕ್ಕೆ ಕಾರಣವಿದೆ. ಆಡಳಿತದ ತುತ್ತ ತುದಿಯಲ್ಲಿರುವ ಮಲಬಾರು, ದಕ್ಷಿಣ ಕನ್ನಡ ಜಿಲ್ಲೆಗಳು ಪ್ರಾಂತದ ಆಡಳಿತದ ಎಲ್ಲ ಸೌಲಭ್ಯದಿಂದಲೂ ದೂರವಾಗಿವೆ. ಇವುಗಳ ಬೆಳವಣಿಗೆ ಕಡೆ ಹೆಚ್ಚು ಗಮನ ಕೊಡಬೇಕು ಎಂದು ಥಾರ್ ಸಮಿತಿಗಳಲರಲ್ಲೀ ವರದಿ ಮಾಡಿದರೂ ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಬಗ್ಗೆ ಗಮನವೇ ಇಲ್ಲ.

ಉತ್ತರ ದೇಶದಲ್ಲಿ ಸಾವಿರಾರು ಮೈಲುಗಳು ರೈಲು ಓಡಾಟಕ್ಕೆ ಹಣ ಇದ್ದರೂ ದಕ್ಷಿಣದಲ್ಲಿ ರಸ್ತೆಗಳ ಅಭಿವೃದ್ಧಿಗೆ ಹಣವೇ ಇಲ್ಲ. ಇದ್ದರೆ ಸ್ವಲ್ಪ. ಬಾರಿ ಯೋಜನೆಗಳೆಲ್ಲ ಉತ್ತರ ದೇಶಕ್ಕೇನೆ ಮೀಸಲು, ಪಶ್ಚಿಮ ದೇಶದ ಪ್ರಬುದ್ಧ ಬಂದರು ಬೆಳವಣಿಗೆ ಮಾತು ಮೂರು ಕೋಟಿಯ ಹಣದ ಕೊರತೆಯಿಂದ ನಿಂತೇ ಹೋಯಿತು. ಮಲ್ಪೆ ಬಂದರದ ಪ್ರಶ್ನೆ ಇನ್ನೊಂದು ಯುಗಕ್ಕೆ ಮೇಲೆ ಬಂದೀತು. ಮಂಗಳೂರಿಗೆ ವಿಮಾನ ನಿಲ್ದಾಣ ಒಂದು ಬಂದೀತಂತೆ. ಇದರಿಂದ ಸಾಮಾನ್ಯ ಜನಕ್ಕೆ ಆಗುವ ಲಾಭ ಎಷ್ಟು? ಮೈಸೂರು, ಮಂಗಳೂರು, ಕಾರವರ, ಉತ್ತರ ಕನ್ನಡ ಜಿಲ್ಲೆಗಳು ರೈಲ್ವೆಯಿಂದ ಜೋಡಣೆಯಾಗುವುದು ಕನಸಿನಲ್ಲೇ ಉಳಿಯಿತು.

ಬಹಳ ಮುಖ್ಯ ಲೋಪವೆಂದರೆ ಮಲೆನಾಡಿನ
ವೃದ್ಧಿ ಕಡೆ ಸರಕಾರದ ಲಕ್ಷ್ಯ ಹರಿಯದಿದ್ದುದು. ನೈಸಗಿ
ಸಂಪತ್ತಿನಿಂದ ತುಂಬಿರುವ ಈ ಪ್ರದೇಶಗಳ ಈ ಸಂಪತ್ತ
ಅಲ್ಲಿನ ಜನ ಉಪಯೋಗಿಸಿಕೊಳ್ಳಲಾರರು. ಶಿಕ್ಷಣ ವ್ಯ
ಸಾರಿಗೆ ಸೌಕರ್ಯ ಒಕ್ಕಲತನ ಮೊದಲಾದ ವಿಷಯಗ
ಅವರು ತೀರ ಹಿಂದುಳಿದಿದ್ದಾರೆ. ಸಾಲದುದಕ್ಕೆ ಮಲೇರಿ
ದಿಂದ ತುಂಬಿದ ರಾಜ್ಯ ಇದು. ಭಾರತದ ಸರಕಾರ ಮ
ನಾಡು ಅಭಿವೃದ್ಧಿಯ ಯೋಜನೆಗಾಗಿ ಒಂದು ಸಮಿತಿ ನೇ
ಅವರಿಗೆ ಭತ್ಯ ಕೊಟ್ಟು ಒಂದಷ್ಟು ಹಣ ಹಾಳುಮಾಡಿದ
ಅವರ ವರದಿ ಬಂದ ಮೇಲೆ ಸದ್ಯಕ್ಕೆ ಈ ಯೋಜನೆ ಜ್
ತರಲು ಹಣವಿಲ್ಲವೆಂದು ಬಿಟ್ಟಿದೆ. ಇದಕ್ಕೆ ಬೇಕಾಗುವ
ಕೇವಲ ಮೂರು ಕೋಟಿ ಹತ್ತೊಂಭತ್ತು ಲಕ್ಷ ರೂಪಾ
ಆ ಮೇಲೆ ವರ್ಷ ವರ್ಷ ೬೪ ಲಕ್ಷ ಖರ್ಚುಮಾಡಬೇ
ಮೈಸೂರು ಸರಕಾರವೂ ಒಂದು ಪಾಲು ಕೊಟ್ಟೀತು. ಕೇ
ಜವಾಬ್ದಾರಿ ಹೊತ್ತೀತು. ಆದರೆ ಇಂಡಿಯ ಸರಕಾರಕ್ಕೆ
ಸ್ಸಿಲ್ಲ. ತನ್ನ ಭಾಗದ ಮಲೆನಾಡನ್ನು ಮೈಸೂರು ಅಭಿ
ಗೊಳಿಸೀತು. ಈ ಮಾತು ಮೈಸೂರ ಯೋಜನೆ
ಹೇಳಿದೆ. ಮಲೆನಾಡಿನಲ್ಲಿ ಮೈಸೂರ ಭಾಗ ೧೦,೭೬,೬
ಎಕ್ರೆ ಮಾತ್ರ. ಇನ್ನುಳಿದ ೧೩,೧೭,೦೦೦ ಎಕ್ರೆಗಳಷ್ಟು
ಬಾರು-ದಕ್ಷಿಣಕನ್ನಡ ಜಿಲ್ಲೆಗಳವು. ಇವಲ್ಲದೆ ಉತ್ತರ
ಡದ ಕೆಲವು ಭಾಗವೂ ಇದೆ. ಇವೆಲ್ಲವೂ ಅಭಿವೃದ್ಧಿ
ಹಿಂದುಳಿದ ಭಾಗಗಳು.

ಕರ್ಣಾಟಕ ಭಾಗಗಳ ಒಟ್ಟು ಬೆಳವಣಿಗೆಗೆ ಪಂಚವಾ
ಯೋಜನೆಯಲ್ಲಿ ಕೇವಲ ಇಪ್ಪತ್ತು ಕೋಟಿ ರೂ. ಮೀಸ
ಗಿಟ್ಟ ಹಾಗೆ ಕಾಣುತ್ತದೆ. ಬೊಂಬಾಯಿ ಪ್ರಾಂತದ
ಪ್ರಭಾ ಯೋಜನೆಗೆ ಐದು ಕೋಟಿ ರೂಪಾಯಿ, ತುಂಗಭ
ಯೋಜನೆಗೆ ಹದಿನೈದು ಕೋಟಿ ರೂಪಾಯಿ. ಆಡಳಿ
ಕೇಂದ್ರದಲ್ಲಿರುವ ತಮಿಳರಿಗೆ, ಗುಜರಾತಿಗಳಿಗೆ, ಕನ್ನಡಿ
ಸಂಕಷ್ಟ ಹೇಗೆ ಗೊತ್ತಾದೀತು, ಕರ್ಣಾಟಕ ಪ್ರಾಂತ ಅಂ
ಮಾತ್ರ ನಮ್ಮ ಬಾಯಿಗೆ ಬೀಗಹಾಕಲು ಅವರು ಜಾಣ
ಕನ್ನಡಿಗನ ಗತಿ ಕನ್ನಡಿಗನಿಗೇನೇ ಸೇರಿದ್ದು ಎಂಬ ಮೂಲ
ನಾವು ಅರಿಯುವ ತನಕ ನಮ್ಮ ಉದ್ಧಾರ ಆಗದು.

ಸ್ಥಳಾಭಾವದಿಂದ ಯೋಜನೆಯ ಇತರ ಅಂಶಗ
ಚರ್ಚಿಸದೆ, ದೇಶದ ಗಣ್ಯವ್ಯಕ್ತಿಗಳು ಈ ಯೋಜನ
ವಿಚಾರ ಏನು ಅಭಿಪ್ರಾಯ ಪಟ್ಟಿದ್ದಾರೆಂದು ಮಾತ್ರ
ಹೇಳುತ್ತೇನೆ.

ಇಂಡಿಯ ಸರಕಾರದ ಮಾಜಿ ಹಣ ಕಾಸಿನ ಮಂ
ಆದ ಮಾನ್ಯ ಶ್ರೀ. ಆರ್. ಕೆ. ಷಣ್ಮುಗಂ ಚೆಟ್ಟಿ ಅವರು:
ಪಂಚವಾರ್ಷಿಕ ಯೋಜನೆ ತೃಪ್ತಿಕರವಾಗಿಲ್ಲ—ಹಣದ ಉ
ತಗ್ಗಿಸಲು ಈ ಯೋಜನೆಯಲ್ಲಿ ಮಾರ್ಗವಿಲ್ಲ— ಮ

ಮತ್ತು ಕನಿಷ್ಠ ತರಗತಿಯ ಜೀವಿಗಳ ಉದ್ಧಾರ ಇದರಿಂದ ಖಂಡಿತ ಆಗದು" ಎಂದಿದ್ದಾರೆ.

ಎಸ್. ಎನ್. ಅಗರವಾಲರು ಹೀಗೆ ಹೇಳುತ್ತಾರೆ "ಜನತೆಗೆ ಸ್ವರಾಜ್ಯದ ಸವಿಯನ್ನಾದರೂ ಅರಿಯುವ ಕಡೆ ಈ ಯೋಜನೆ ಫಲಿಸಲಾರದು — ಸಾಂಪತ್ತಿಕ ಬೆಳವಣಿಗೆ ಕಡೆ ಲಕ್ಷ್ಯ ಕೊಟ್ಟಿಲ್ಲ — ಎಲ್ಲರಿಗೂ ಕಸಬು — ಗುಡಿಕೈಗಾರಿಕೆ ಇವನ್ನು ಅಲಕ್ಷಿಸಿದೆ— ಚುನಾವಣೆ ಮುಗಿದ ಮೇಲೆ ಬೇರೆಯೇ ಮನೋಭಾವದ ಜನ ಆಡಳಿತದ ಸೂತ್ರ ವಹಿಸಿ ಅವರು ಈ ಯೋಜನೆಯನ್ನು ಬುಡ ಕೆಳಗೆ ಮಾಡಿಯಾರು, ಆಗ ಈ ಶ್ರಮವೆಲ್ಲ ವ್ಯರ್ಥ — ಎಲ್ಲರಿಗೂ, ಎಲ್ಲ ಕಾಲಕ್ಕೂ ಒಪ್ಪುವ ಯೋಜನೆ ತಯಾರಿಸಬೇಕಿತ್ತು.

ಒಟ್ಟಿನಿಂದ ಈ ಯೋಜನೆ ಅತೃಪ್ತಿಕರವಾಗಿದೆ. ಒಳ್ಳೆಯ ಯೋಜನೆ, ಒಳ್ಳೆಯ ಆಡಳಿತ ಇವೆಲ್ಲ ಇಂತಹ ಕಸಬುಗೆ ನಾವು ಹಚ್ಚುವ ಜನ ಎಂತಹರು ಎನ್ನುವುದನ್ನು ಹೊಂದಿಕೊಂಡಿವೆ. ಸರಕಾರದ, ರಾಜಕೀಯದ ವಿಚಾರದಲ್ಲಿ ಸೇಕಡಾ ೮೦ ರಷ್ಟು ಜನ ಆಸಕ್ತಿ ವಹಿಸದೆ ಕೇವಲ ೨೦ ಜನಕ್ಕೆ ಮಾತ್ರ ಬಿಟ್ಟರೆ ಆ ೨೦ ಜನ ತಮಗೆ ಬೇಕಾದ ಹಾಗೆ ಯಂತ್ರ ನಡೆಸಿಯಾರು. ಜನ ವಿಚಾರ ಪರರಾಗಬೇಕು. ಇದು ಪ್ರಜಾಪ್ರಭುತ್ವದ ತತ್ವ. ವಯಸ್ಕ ಮತದಾನ ಪದ್ಧತಿ ಆಚರಣೆಗೆ ಬರುವ ನಮ್ಮ ದೇಶದಲ್ಲಿ ಪ್ರತಿ ಪ್ರಜೆ ತನ್ನ ಪ್ರತಿಯೊಂದು ಮತವನ್ನು ದಕ್ಷನಿಗೆ ಕೊಟ್ಟು ದಕ್ಷರನ್ನೇ ಆರಿಸಿದಲ್ಲಿ ಆಡಳಿತ ಸುಸೂತ್ರ ಆಗುತ್ತದೆ. ಆಗಲೇ ನಮಗೆ ಸ್ವರಾಜ್ಯದ ಲಾಭ ದೊರೆಯುತ್ತದೆ ಎಂಬುದು ಸತ್ಯ. ಈ ಸತ್ಯ ನಮಗೆ ಬೇಗ ಹೊಳೆದಷ್ಟು ಲಾಭ ನಮಗೇನೇ ಹೆಚ್ಚು. ಈ ಚುನಾವಣೆಯಲ್ಲಿ ಪ್ರಜೆ ಈ ಸತ್ಯವನ್ನೇ ಆಚರಣೆಗೆ ತಂದಾರು ಎಂದು ನಂಬೋಣ.

ಆಧಾರ ಗ್ರಂಥಗಳು:

1. My-Political and Economic Journal Oct. 51·
2. Planning Commission Report of the Govt. of India.
3. A plan Economic Development for India-A Penguin Special.

ವಿಕ್ರಮಾದಿತ್ಯನೂ ನವಮಣಿಗಳೂ

[ಲೇಖಕರು: ಶ್ರೀ। ಹುಲ್ಲೂರು ಶ್ರೀನಿವಾಸ ಜೋಯಿಸ, ವಕೀಲ, ಚಿತ್ರದುರ್ಗ.]

ಧನ್ವಂತರಿ ಕ್ಷಪಣಕಾ ಮರಸಿಂಹ ಶಂಕು
ವೇತಾಳ ಭಟ್ಟ ಘಟಕರ್ಪರ ಕಾಲಿದಾಸಾಃ ।
ಖ್ಯಾತೋ ವರಹಾಮಿಹಿರೋ ನೃಪತೇಃ ಸಭಾಯಾಂ
ರತ್ನಾನಿ ವೈ ವರರುಚಿರ್ನವ ವಿಕ್ರಮಸ್ಯ ॥

ವಿಕ್ರಮಾದಿತ್ಯನ ಹೆಸರಿನೊಡನೆಯೇ ಅವನ ಸಭೆಯನ್ನಲಂಕರಿಸಿದ್ದ ವಿದ್ಯನ್ಮಣಿಗಳಾದ ನವ ಕವಿರತ್ನರ ಹೆಸರನ್ನು ಹೇಳುವುದು ರೂಢಿಯಾಗಿದೆ. ಈ ಒಂಭತ್ತು ವಿದ್ಯನ್ಮಣಿಗಳಲ್ಲಿ ಕಾಳಿದಾಸನು ಕವಿ ಚಕ್ರವರ್ತಿ; ವಿಕ್ರಮಾದಿತ್ಯನು ಭಾರತ ಚಕ್ರವರ್ತಿ. ರಾಜಾಸ್ಥಾನವೆಂಬ ಗಗನಮಂಡಲದಲ್ಲಿ ವಿಕ್ರಮನು ಆದಿತ್ಯ; ಕಾಳಿದಾಸನು ಧೃವತಾರೆ.

ಈ ಚಾಟು ಶ್ಲೋಕದಲ್ಲಿ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಧನ್ವಂತರಿ, ಕ್ಷಪಣಕ, ಅಮರಸಿಂಹ, ಶಂಕು, ವೇತಾಳ ಭಟ್ಟ, ಘಟಕರ್ಪರ, ಕಾಳಿದಾಸ, ವರಹಾಮಿಹೀರ ಮತ್ತು ವರರುಚಿ ಎಂಬ ನವ ವಿದ್ಯನ್ಮಣಿಗಳು ಖ್ಯಾತವಾಗಿದ್ದರು ಎಂದು ಹೇಳಲಾಗಿದೆ. ಈ ಚಾಟು ಶ್ಲೋಕವನ್ನು ರಚಿಸಿದವರು ಯಾರೋ? ಯಾವ ಕಾಲದಲ್ಲಿ ರಚಿತವಾಯಿತೋ? ಅದನ್ನು ನಿರ್ಧರಿಸಲು ಸಾಧ್ಯವಾಗಿಲ್ಲ.

ಆದರೆ ನವ ಕವಿಗಳು ವಿಕ್ರಮಾದಿತ್ಯನ ಆಶ್ರಯದಲ್ಲಿದ್ದರು. ಅಂತಹ ಆಶ್ರಯದಾತನು ಕೀರ್ತಿಶೇಷನಾದ ಮೇಲೆ ತನ್ನನ್ನು ರಕ್ಷಿಸುವವರು ಯಾರು ಎಂದು ಸುಬಂಧು ಎಂಬ ವಾಸವದತ್ತಾ ಗದ್ಯಕಾವ್ಯದ ಗ್ರಂಥಕಾರನು ಪ್ರಲಾಪಿಸಿರುವನು.

ಸಾ ರಸವತ್ತಾ ವಿಹತಾ
ನವಕಾ ವಿಲಸಂತಿ ಚರತಿ ನೋ ಕಂಕಃ ।
ಸರಸೀವ ಕೀರ್ತಿ ಶೇಷಂ
ಗತವತಿ ಭುವಿ ವಿಕ್ರಮಾದಿತ್ಯೇ ॥

ಎಂದು ಸುಬಂಧುವು ತನ್ನ ಕಾವ್ಯದಲ್ಲಿ ಹೇಳಿರುವನಲ್ಲದೆ "ಶಾಕ್ಯಇವ ರಕ್ತಾಂಶುಕ ಧರಃ" ಎಂದು ಶಕರು ಧರಿಸುತ್ತಿದ್ದ ರಕ್ತವರ್ಣದ ವಸ್ತ್ರಗಳನ್ನು ವರ್ಣಿಸಿರುವನು. ವಿಕ್ರಮಾದಿತ್ಯನು ಜಯಿಸಿದ ಶ ರನ್ನು ಅವರು ಧರಿಸುತ್ತಿದ್ದ ಉಡುಪನ್ನೂ ಸುಬಂಧುವು ನೋಡಿರಬೇಕು. ಆದ್ದರಿಂದಲೇ ಆ ರೀತಿ ವರ್ಣನೆ ಮಾಡಿರಬೇಕೆಂದು ವ್ಯಕ್ತವಾಗುವುದು. ವಿಕ್ರಮನ ಆಸ[...] ಕವಿಯಾದ ವರರುಚಿಯು ಸೋದರಳಿಯನಾಗಬೇಕು ಈ ಸು[...] ಧುವು. ಆದ್ದರಿಂದ ಈ ಕವಿಯು ಹೇಳಿರುವ 'ನವಕಾ' ಅಂ[...] ನವಮಣಿಗಳಿದ್ದರೆಂಬ ವಿಷಯಕ್ಕೆ ಪ್ರಾಮುಖ್ಯತೆಯುಂ[...]ಗುವುದು.

ಮೇಲೆ ಕೊಟ್ಟಿರುವ ಶ್ಲೋಕದಲ್ಲಿರುವ ಗ್ರಂಥಕಾರ[...] ಭಿನ್ನ ಭಿನ್ನ ಕಾಲದವರೆಂದು ಸಿದ್ಧಾಂತವಾಗುವುದಾದುದರಿ[...] ಚಾರಿತ್ರಕ ದೃಷ್ಟಿಯಿಂದ ದೂರವಾಗಿರುವ ಈ ಶ್ಲೋಕಾಧ[...]ದಿಂದ ಚರಿತ್ರೆಯನ್ನು ಬರೆಯುವುದು ಸಾಧುವಾಗಿರದು ([...]ಸ್ಕೃತ ಕವಿ ಚರಿತೆ ಭಾಗ I ಪುಟ ೬೯) ನವಮಣಿಗಳು ಉ[...]ಯಿನಿಯ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದರೆಂಬ ದಂತಕಥೆ[...] ಬೆಲೆಯಿಲ್ಲದ್ದು; ಆ ಕವಿಗಳಲ್ಲಿ ಧನ್ವಂತರಿಯು ಅಮರಸಿಂ[...]ನಿಗಿಂತ ಪೂರ್ವದವನು. ಶಂಕು ಮತ್ತು ವೇತಾಳಭಟ್ಟ[...] ನಾಮಮಾತ್ರದವರು. ವರಹಾಮಿಹೀರನು ಕ್ರಿ. ಶ. ಆರನೆ[...] ಶತಮಾನದವನು. ಕ್ಷಪಣಕ ಮತ್ತು ವರರುಚಿಗಳ ಕಾ[...] ತಿಳಿಯದು. (History of Sanskrit Literatu[...] by A. B. Kieth P 76) ಆದ್ದರಿಂದ ಉಜ್ಜಯಿನಿ[...] ವಿಕ್ರಮಾದಿತ್ಯನ ಬಳಿ ನವಮಣಿಗಳು ಇದ್ದವೆಂಬ ಉಕ್ತಿ[...] ಬರಿಯ ದಂತಕಥೆ. ಚಾರಿತ್ರಕ ಬೆಲೆಯಿಲ್ಲದ್ದು ಎಂ[...] ಮುಂತಾಗಿ ಸಂಶೋಧಕರಿಂದ ಅಭಿಪ್ರಾಯ ಪಡಲಾಗಿ[...] ಭಾರತೀಯ ಪ್ರಾಚೀನ ಗ್ರಂಥಗಳಿಂದ ವಿಕ್ರಮಾದಿತ್ಯನ ವಿಷ[...]ವನ್ನು ಸಂಗ್ರಹಿಸಿ, ನವಮಣಿಗಳಲ್ಲಿ ಕೆಲವು ಕವಿಗಳಾದ[...] ವಿಕ್ರಮಾದಿತ್ಯನ ಸಮಕಾಲೀನರಾಗಿ ಅವನ ಆಸ್ಥಾನವನ್ನ[...]ಕರಿಸಿದ್ದರೆಂಬುದನ್ನು ತೋರಿಸುವುದೇ ಈ ಲೇಖನದ ಉದ್ದೇ[...]ವಾಗಿದೆ.

ವಿಕ್ರಮಾದಿತ್ಯ:—ಅಶೋಕ ಚಕ್ರವರ್ತಿಯು ಮ[...] ರಾಜ್ಯವನ್ನಾಳುತ್ತಿದ್ದಾಗ, ಬೌದ್ಧರ ಪ್ರಾಬಲ್ಯವು ಅತಿಯ[...] ವೈದಿಕ ಮತಕ್ಕೆ ಧಕ್ಕೆಯುಂಟಾಯಿತು. ಆಗ ಕನ್ಯಾಕುಬ್ಜ[...] ದ್ವಿಜೋತ್ತಮನೋರ್ವನು ಅಬು ಗಿರಿಗೆ ಹೋಗಿ ಬ್ರ[...] ಹೋಮವೆಂಬ ಯಾಗಮಾಡಿದನು. ಅದರ ಫಲವಾಗಿ ಪ್ರಮ[...] ಚಹವಾಣಿ, ಶುಕ್ಲ, ಪರಿಹಾರ ಎಂಬ ನಾಲ್ವರು ತನುಜ[...]

ಉದಯಿಸಿ ಆ ನಾಲ್ವರೂ ನಾಲ್ಕು ಕ್ಷತ್ರಿಯ ವಂಶದ ಮೂಲ ಪುರುಷರಾದರು. ಪ್ರಮರರಾಜನು ಅವಂತೀ ದೇಶದಲ್ಲಿ ಅಂಬಾವತೀಪುರವನ್ನು ನಿರ್ಮಿಸಿ, ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಪ್ರಮರ ರಾಜನು ಆರು ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಬಳಿಕ ಅವನ ಪುತ್ರನಾದ ಮಹಾಮರನು ಮೂರು ವರ್ಷವೂ, ಅನಂತರ ಅವನ ಮಗ ದೇವಾಪಿಯು ಮೂರು ವರ್ಷವೂ, ಅನಂತರ ಅವನ ಮಗ ದೇವದೂತನು ಮೂರು ವರ್ಷವೂ ರಾಜ್ಯಭಾರಮಾಡಿದರು. ಬಳಿಕ ದೇವದೂತನ ಮಗನಾದ ಗಂಧರ್ವಸೇನನು ರಾಜ್ಯಾಧಿಕಾರವನ್ನು ವಹಿಸಿಕೊಂಡು ಐವತ್ತು ವರುಷ ರಾಜ್ಯವಾಳಿ ತನ್ನ ಸುತನಾದ ಶಂಖನಿಗೆ ರಾಜ್ಯಾಭಿಷೇಕ ಮಾಡಿ ತಾನು ವನಕ್ಕೆ ಹೊರಟು ಹೋದನು.

ಇಂದ್ರನಿಂದ ಪ್ರೇಷಿತಳಾದ ವೀರಮತಿ ಎಂಬ ಕನ್ಯೆಯು ಗಂಧರ್ವಸೇನನನ್ನು ವಿವಾಹವಾಗಿ ವಿಕ್ರಮಾದಿತ್ಯನನ್ನು ಪಡೆದಳು. ಅವನು ಐದು ವರ್ಷದ ಬಾಲಕನಾಗಿರುವಾಗಲೇ ವನಕ್ಕೆ ಹೋಗಿ ತಪಸನ್ನಾಚರಿಸಿ, ಹನ್ನೆರಡು ವರ್ಷಗಳ ನಂತರ ಅಂಬಾ ನಗರಿಗೆ ಬಂದು ರಾಜ್ಯವಾಳಲಾರಂಭಿಸಿದನು. ಇಂದ್ರನು ವಿಕ್ರಮಾದಿತ್ಯನಿಗೆ ಮೂವತ್ತೆರಡು ಗೊಂಬೆಗಳ ಸಿಂಹಾಸನ ಪನ್ನಿತ್ತನು. ಭೇತಾಳನು ಬ್ರಾಹ್ಮಣ ರೂಪಿನಲ್ಲಿ ಬಂದು ವಿಕ್ರಮಾದಿತ್ಯನಿಗೆ ಒಗಟಿನ ರೂಪದಲ್ಲಿ ಬಿಡಿಸಲಸಾಧ್ಯವಾದ ಕತೆಗಳನ್ನು ಹೇಳಿ ಅವನ ವಿವೇಕವನ್ನು [illegible]ಕ್ಷಿಸಿ [illegible] ರಾಜನೆಂದು ನಿರ್ಧರಿಸಿ ಅವನ ಸಹಾಯಕ್ಕಾಗಿ ನಿಂತನು. ವಿಕ್ರಮಾದಿತ್ಯನು ವಿಶಾಲ ನಗರದ ಬ್ರಾಹ್ಮಣವೃಂದದ ಸಹಾಯದಿಂದ ಕ್ಷಿಪ್ರಾ ನದೀತೀರದಲ್ಲಿ ಅಶ್ವಮೇಧ ಯಾಗವನ್ನು ಮಾಡಿದನು. ಕಪಿಲ ಋಷಿಯ ಆಶ್ರಮ, ರಾಮ ಸೇತು, ಸಿಂಧೂ ನದಿ ಮತ್ತು ಬದರಿಕಾರಣ್ಯ ಈ ಮೇರೆಗಳ ಮಧ್ಯಭಾಗದಲ್ಲಿದ್ದ ರಾಜರೆಲ್ಲರೂ ಯಾಗಕ್ಕೆ ಬಂದಿದ್ದರು. ಯಾಗವು ಸಾಂಗವಾಗಿ ನೆರವೇರಿತು.

ಈ ಯಾಗಕ್ಕೆ ಚಂದ್ರನು ಮಾತ್ರ ಬಂದಿರಲಿಲ್ಲ. ಆದ್ದರಿಂದ ವಿಕ್ರಮಾದಿತ್ಯನು ಭೇತಾಳನೊಂದಿಗೆ ಚಂದ್ರನ ಬಳಿಗೆ ಹೋದನು. ಚಂದ್ರನು ತಾನು ಯಾಗಕ್ಕೆ ಬಾರದಿರಲು ಕಾರಣವನ್ನು ತಿಳಿಸಿ, ಅಮೃತಮಯವಾದ ಜಲವನ್ನು ಕೊಟ್ಟನು. ವಿಕ್ರಮಾದಿತ್ಯನು ಆ ಜಲವನ್ನ ಯಾಚಿಸಿ ಬ್ರಾಹ್ಮಣ ರೂಪಿಯಾದ ಇಂದ್ರನಿಗೆ ಕೊಟ್ಟನು. ಇಂದ್ರನು ಜಯಂತನಿಗೆ ಕೊಟ್ಟನು. ಜಯಂತನು ಭರ್ತೃಹರಿಗೆ ಒಂದು ಲಕ್ಷ ಸುವರ್ಣಗಳಿಗೆ ಕೊಟ್ಟನು. ಭರ್ತೃಹರಿಯು ತಪಸನ್ನಾಚರಿಸಲು ಹೋದನು. ವಿಕ್ರಮಾದಿತ್ಯನು ನಿಷ್ಕಂಟಕವಾಗಿ ರಾಜ್ಯವಾಳಿ ಒಂದು ನೂರು ವರ್ಷ ಬಾಳಿ ಸ್ವರ್ಗಕ್ಕೇರಿದನು.೧

ಒಂದೆರಡು ಪುರಾಣ ಗ್ರಂಥಗಳಲ್ಲಿ ಭರ್ತೃಹರಿಯ ತಂದೆಯ ಹೆಸರು ಗಂಧರ್ವಸೇನ, ಇವನಿಗೆ ನಾಲ್ಕು ಜನ ಹೆಂಡತಿಯರಿದ್ದರು. ಇವರಲ್ಲಿ ಹುಟ್ಟಿದವರಲ್ಲಿ ದೊಡ್ಡವನೇ ಭರ್ತೃಹರಿ, ಚಿಕ್ಕವನೇ ವಿಕ್ರಮಾದಿತ್ಯನು ಎಂದು ಹೇಳಿದೆ.೨ ವರರುಚಿ ಮತ್ತು ಭಟ್ಟಿ ಎಂಬುವರು ಇನ್ನಿಬ್ಬರ ಹೆಸರೆಂದು ಉಕ್ತವಾಗಿದೆ.೩ ಮತ್ತೊಂದೆಡೆಯಲ್ಲಿ೪ ಭರ್ತೃಹರಿಯ ತಂದೆಯ ಹೆಸರು ವೀರಸೇನ. ಇವನು ಗಂಧರ್ವನು. ಇವನಿಗೆ ಭರ್ತೃಹರಿ, ವಿಕ್ರಮಾದಿತ್ಯ, ಸುಭಟವೀರ್ಯ ಮತ್ತು ಮೈನಾವತಿ ಎಂಬ ನಾಲ್ಕು ಜನ ಮಕ್ಕಳು. ಜಂಬೂದ್ವೀಪದ ಒಡೆಯನ ಒಬ್ಬಳೇ ಮಗಳಾದ ಸುಶೀಲೆಯೇ ಭರ್ತೃಹರಿಯ ತಾಯಿ. ರಾಜನು ತನಗೆ ಗಂಡು ಸಂತಾನವಿಲ್ಲದುದರಿಂದ ದೌಹಿತ್ರನಾದ ಭರ್ತೃಹರಿಗೆ ರಾಜ್ಯಭಾರವನ್ನೊಪ್ಪಿಸಿದನು. ಇವನು ಉಜ್ಜಯಿನಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೆಲಕಾಲ ರಾಜ್ಯವಾಳಿ ಅನಂತರ ವಿಕ್ರಮಾದಿತ್ಯನಿಗೆ ರಾಜ್ಯಭಾರವನ್ನೊಪ್ಪಿಸಿ ಸುಭಟವೀರ್ಯನನ್ನು ಸೇನಾಧಿಕಾರಿಯಾಗಿ ನೇಮಿಸಿದನು.

೧. ಭವಿಷ್ಯ ಮಹಾಪುರಾಣ ಶ್ರೀ ಜಯ ಚಾಮರಾಜೇಂದ್ರ ಗ್ರಂಥ ಮಾಲೆಯ ೩೭ನೆಯ ಗ್ರಂಥ ಭಾಗ ೭.

೨. ಸಂಸ್ಕೃತ ಕವಿ ಚರಿತೆ ಸಂಪುಟ ೧. ಪುಟ ೫೭.

೩. ಅದೇ ಗ್ರಂಥ ಶ್ರೀ ಶೇಷಗಿರಿ ಶಾಸ್ತ್ರಿಗಳು ಹೇಳಿರುವುದು.

೪. ಅರ್ವಾಚೀನ ಕೋಶ.

ವಿಕ್ರಮಾದಿತ್ಯ ಮತ್ತು ಅವನ ಸೋದರರ ವಿಷಯದಲ್ಲಿ ಗ್ರಂಥಗಳಲ್ಲಿ ವಿವಿಧವಾಗಿ ಹೇಳಿದೆ. ಅವನ್ನೀ ಪಟ್ಟಿಯ ರೂಪದಲ್ಲಿ ಕೊಟ್ಟಿದೆ:

ಆರ್ವಾಚೀನ ಕೋಶ	ಮರಾಠಿ ಗ್ರಂಥಗಳು	ಶ್ರೀ ಶೇಷಗಿರಿ ಶಾಸ್ತ್ರಿಗಳು ಹೇಳಿರುವುದು	ವಿಕ್ರಮಾರ್ಕ ಚರಿತೆ	ಪುರಾಣ	ಪಂಡಿತ ಶ್ರೀ ಕೆ. ನಂಜುಂಡ ಶಾಸ್ತ್ರಿಗಳ ಭಟ್ಟ ವಿಕ್ರಮಾದಿತ್ಯ ರಾಯನ ಕಥೆ
೧. ಭರ್ತೃಹರಿ	ಭರ್ತೃಹರಿ	ವರರುಚಿ	ಭರ್ತೃಹರಿ	ಶಂಕು	ವರರುಚಿ
೨. ವಿಕ್ರಮಾದಿತ್ಯ	ವಿಕ್ರಮಾದಿತ್ಯ	ವಿಕ್ರಮಾರ್ಕ	ವಿಕ್ರಮಾದಿತ್ಯ	ವಿಕ್ರಮಾದಿತ್ಯ	ವಿಕ್ರಮಾದಿತ್ಯ
೩. ಸುಭಟವೀರ್ಯ	ಹೇಳಿಲ್ಲ	ಭಟ್ಟಿ	ಹೇಳಿಲ್ಲ	—	ಭಟ್ಟಿ
೪. ಮೈನಾವತಿ	ಹೇಳಿಲ್ಲ	ಭರ್ತೃಹರಿ	ಹೇಳಿಲ್ಲ	—	ಭರ್ತೃಹರಿ
ತಂದೆ-ಗಂಧರ್ವ ವೀರಸೇನ	ಗಂಧರ್ವಸೇನ	ಚಂದ್ರಗುಪ್ತ	ಹೇಳಿಲ್ಲ	ಗಂಧರ್ವಸೇನ	ಚಂದ್ರಶರ್ಮ

ವಿಕ್ರಮಾದಿತ್ಯನ ಕಾಲ ವಿಚಾರ:—ಜಗತ್ಸೃಷ್ಟಿಯನ್ನೂ, ಇತಿಹಾಸವನ್ನೂ ಅರಿಯಲು ಭಾರತೀಯರು ಹಲವು ಕಾಲಮಾನಗಳನ್ನು ಅನುಸರಿಸುತ್ತಿರುವರು. ಈಗ ವೈವಸ್ವತ ಮನ್ವಂತರದ ೨೮ನೆಯ ಮಹಾಯುಗದಲ್ಲಿ ಕೊನೆಯದಾದ ಕಲಿಯುಗವು ನಡೆಯುತ್ತಿರುವುದು. ಯಾವಾಗ ವಸುದೇವನ ವಂಶದಲ್ಲಿ ಹುಟ್ಟಿದ ವಿಷ್ಣುವಿನ ಅಂಶನಾದ ಕೃಷ್ಣನು ಸ್ವರ್ಗಕ್ಕೆ ಹೋದನೋ ಆಗಲೇ ಕಲಿಯುಗವು ಆರಂಭವಾಯಿತು. ಎಲ್ಲಿಯ ವರೆಗೆ ಶ್ರೀಕೃಷ್ಣನ ಪಾದಪದ್ಮಗಳು ಭೂಮಿಯನ್ನು ಮುಟ್ಟಿದ್ದುವೋ ಅಲ್ಲಿಯ ವರೆಗೆ ಕಲಿಯು ಭೂಮಿಯನ್ನು ಮುಟ್ಟಲು ಸಮರ್ಥನಾಗಲಿಲ್ಲ.[೫] ಬರುವ ನಂದನ ಸಂವತ್ಸರದ ಆರಂಭಕ್ಕೆ ಈ ಕಲಿಯುಗವು ಹುಟ್ಟಿ ೫೦೫೩ ವರ್ಷಗಳು ಪೂರ್ತಿಯಾದವು. ಕಲಿಯುಗದಲ್ಲಿ ಆರು ಜನ ಮುಖ್ಯರಾದ ಕಾಲ ಸ್ಥಾಪಕರಾಗಿರುವರು. ಯುಧಿಷ್ಠಿರ ಶಕೆಯು ಕಲಿಯುಗಾರಂಭದಲ್ಲಿ ಆರಂಭವಾಯಿತು. ೩೦೪೪ ವರ್ಷಗಳ ನಂತರ ವಿಕ್ರಮ ಶಕೆಯು ಉಜ್ಜಯಿನಿಯಲ್ಲಿ ಆರಂಭವಾಯಿತು. ಅನಂತರ ಪ್ರತಿಷ್ಠಾನದಲ್ಲಿ ೧೩೫ ಗಳಿಗೆ ಶಾಲಿವಾಹನ ಶಕೆಯು ಆರಂಭವಾಯಿತು.[೬] ಇವುಗಳಲ್ಲದೆ, ವೀರವ[ರ್ಧ]ಮಾನ ನಿರ್ವಾಣ ಕಾಲ, ಬುದ್ಧ ನಿರ್ವಾಣ ಕಾಲ, ನೇಪಾ[ಳ] ಹರ್ಷಶಕ, ಚೇದಿ ಅಥವಾ ಕಾಲಚೂರಿ ಶಕ, ಹಂಸ ಸಂವ[ತ್] ಅಥವಾ ಹರ್ಷವರ್ಧನ ಶಕ, ವಲ್ಲಭಿ ಶಕ, ಚಾಳುಕ್ಯ ವಿಕ್ರ[ಮ] ಶಕ ಇತ್ಯಾದಿ. ವಿಂಧ್ಯ ಪರ್ವತದ ಉತ್ತರದಲ್ಲಿ ವಿಕ್ರ[ಮ] ಶಕೆಯೂ, ದಕ್ಷಿಣದಲ್ಲಿ ಶಾಲಿವಾಹನ ಶಕಕೆಯೂ ಈಗ ಹೆ[ಚ್ಚು] ಪ್ರಚಾರದಲ್ಲಿವೆ.

ಮಹಾವೀರ ನಿರ್ವಾಣ ಕಾಲದಿಂದ ಉಜ್ಜಯಿನಿಯ[ಲ್ಲಿ] ಆಳಿದ ರಾಜಮನೆತನಗಳು ಮತ್ತು ರಾಜರುಗಳ ಕಾಲವ[ನ್ನು] ಈ ಕೆಳಗಿನ ಶ್ಲೋಕಗಳಲ್ಲಿ ಉಕ್ತವಾಗಿದೆ:

ತೀರ್ಥೋದ್ಧಾರ ಪ್ರಕೀರ್ಣದಲ್ಲಿ:—

ಜಂ ರಯಣಿಂಕಾಲಗಓ ಅರಿಹಾ ತಿತ್ಥಂಕರೋ ಮಹಾವೀರೋ
ತಂ ರಯಣಿಮವಂತಿವ ಈ ಅಹಿಸಿತ್ತೋ ಪಾಲಹೋ ರಾಯಾ
ಸಟ್ಠೀ ಪಾಲನ ರಣ್ಣೋ ಪಣವಣ್ಣ ಸಯಂ ತು ಹೋಇ
ನಂದಾಣ[ಂ]
ಅಟ್ಠ ಸಯಂ ಮುರಿಯಾಣಂ ತೀಸಂ ಚಿಅ ಪುಸ್ಸಮಿತ್ರಸ್ಯ
ಬಲಮಿತ್ತ ಭಾಣುಮಿತ್ತಾಣಂ ಸಟ್ಠೀ ವರಿಸಾಣಿ ಚತ್ತ
ನಹವಹಣ[ೇ]
ಕಹ ಗದ್ದಭಿಲ್ಲ ರಜ್ಜಂ ತೇರಸ ವರಿಸಾ ಸಗಸ್ಸ ಚಉ

ವೃದ್ಧಗಚ್ಛದ ಗುರ್ವಾವಲಿಯಲ್ಲಿ:—

ಸುನ್ನ ಮುನಿ ವೇಯ ಜುತ್ತಾ ಜಿನಕಾಲಾ ವಿಕಮೋ
ವರಿಸ ಸ[...]
ದಮ್ಮಯಿಚ್ಛೆ ಚಾಲೀಸ ಗಾಯಿಲ ಪನ್ನವೀಸ ನಹದೇ ಅಟ್ಠ
ಇಕ್ಕಮಿ ವಸಸಯೆ ಗಾಯಮ್ಮಿ ಪನಾತಿಸ ವಚ್ಛರ ಸಾದಿಯ[ೆ]
ವಿಕ್ರಮ ಕಾಲಾ ಸಾನಾಣಂ ವಚ್ಛರೋ ಪುಣವಿ ಸಂಜಯೋ

ಮಹಾವೀರ ನಿರ್ವಾಣದ ದಿನವೇ ಪಾಲಕನು ಉ[ಜ್ಜ]ಯಿನಿಯಲ್ಲಿ, ಪಟ್ಟಾಭಿಷಿಕ್ತನಾಗಿ ೬೦ ವರ್ಷ ಆಳಿದನು. ನಂದರು ೧೫೦ ವರ್ಷಗಳು, ಮೌರ್ಯರು ೧೦೮ ವರ್ಷಗ[ಳು]

೫. ವಿಷ್ಣು ಪುರಾಣ—ಅಂಶ ೪ ಅಧ್ಯಾಯ ೨೪ ಶ್ಲೋಕಗ[ಳು] ೧೦೮-೧೦೬

೬. ಕಲಿಯುಗೆ ಷಟ್ಶಕಾವರ್ತಕೇ:—

ಯುಧಿಷ್ಠಿರೋ ವಿಕ್ರಮ ಶಾಲಿವಾಹನೌ ತತೋನೃಪ[ಃ] ದ್ವಿಜಯಾಭಿಕಂದನ: ತತಸ್ತು ನಾಗಾರ್ಜುನ ಭೂಪತಿಃ ಕಲಿಃ ಕಲ[ಿ] ಯುಗೇ ಷಟ್ ಶಕ ಕಾಲವರ್ಧನಾಃ|

ಏಕೇಷಾ ಕ್ರಮಾಣಾಬ್ದಾಃ ಕ್ರಮೇಣ ವೇದಾಂಬುಧಿ ಶೂ[...] ರಾಮಃ (೩೦೪೪); ಶಿವಾಗ್ನಿ ಚಂದ್ರ (೧೩೫); ಖಖಖಾಹಿ ಭೂ[...] ಯಂಃ (೧,೮೦೦) ತತೋಯುಕಂ (೧೦೦೦೦) ಲಕ್ಷ ಚತುಷ್ಟಯ[ಂ] (೪೦೦೦೦); ಶಶಾಂಗನೇತ್ರಾಷ್ಟ(೮೨೧) ಮಿತಾಃ ಶತಾಬ್ದಾಃ ಪಂಚ[...] ಸರಣಿ||

೭. M. A. R. 1923 at page 12

ಪುಷ್ಯಮಿತ್ರನು ೩೦ ವರ್ಷಗಳು, ಬಾಲಮಿತ್ರ, ಭಾನುಮಿತ್ರರು ೬೦ ವರ್ಷಗಳು, ನಭೋವಾಹನನು ೪೦ ವರ್ಷಗಳೂ, ಗಾರ್ಧಭಿಲರು ೧೩ ವರ್ಷಗಳೂ, ಶಕರು ೪ ವರ್ಷಗಳೂ ಒಬ್ಬರ ನಂತರ ಒಬ್ಬರು ಉಜ್ಜಯಿನಿಯನ್ನು ಆಕ್ರಮಿಸಿ ಆಳಿದರು. ಅನಂತರ ವಿಕ್ರಮಾದಿತ್ಯನು ಉಜ್ಜಯಿನಿಯನ್ನು ಸ್ವಾಧೀನ ಮಾಡಿಕೊಂಡು ೬೦ ವರ್ಷ ಆಳಿದನು. ಧರ್ಮಾದಿತ್ಯನು ೪೦ ವರ್ಷಗಳೂ ಗಾಯಿಲನು ೨೫ ವರ್ಷಗಳೂ, ನಭಹತನು ೧೦ ವರ್ಷಗಳೂ ಆಳಿದ ಅನಂತರ ಅಂದರೆ ೧೩೫ ವರ್ಷಗಳ ನಂತರ ಪುನಃ ಶಕರು ಆಕ್ರಮಿಸಿದರು.

ಪಾಲಕನಿಂದ ಶಾಲಿವಾಹನ ಶಕಾರಂಭದ ವರೆಗೆ ಉಜ್ಜಯಿನಿಯಲ್ಲಿ ಆಳಿದ ಅರಸರ ಕಾಲವನ್ನು ವಿವಿಧ ಶಕೆಗಳಲ್ಲಿ ಕೊಟ್ಟಿದೆ.

ಉಜ್ಜಯಿನಿಯಲ್ಲಿ ಆಳಿದ ಅರಸರ ಕಾಲ

ರಾಜ ಅಥವ ರಾಜ ಮನೆತನಗಳು	ವೀರ ವರ್ಧಮಾನನ ಅನಂತರ	ಯುಧಿಷ್ಠಿರ ಕಾಲ	ಕ್ರಿಸ್ತ ಕಾಲ
ಪಾಲಕ ೬೦	೦—೬೦	೨೫೭೪ರಿಂದ ೨೬೩೪	527—467 ಕ್ರಿ. ಪೂ.
ನಂದರು ೧೫೫	೬೦—೨೧೫	೨೭೮೯	312 ,,
ಮೌರ್ಯರು ೧೦೮	೩೨೩	೨೮೯೭	204 ,,
ಪುಷ್ಯಮಿತ್ರ ೩೦	೩೫೩	೨೯೨೭	174 ,,
ಬಲಮಿತ್ರ ೬೦ ಬಾಣುಮಿತ್ರ	೪೧೩	೨೯೮೭	114 ,,
ನಭೋವಾಹನ ೪೦	೪೫೩	೩೦೨೭	74 ,,
ಗರ್ಧಭಿಲ ೧೩	೪೬೬	೩೦೪೦	61 ,,
ಶಕರು ೪	೪೭೦	೩೦೪೪	57 ,,
ವಿಕ್ರಮಾದಿತ್ಯ ೬೦	೫೩೦	೩೧೦೪	3 ಕ್ರಿ. ಶ.
ಧರ್ಮಾದಿತ್ಯ ೪೦	೫೭೦	೩೧೪೪	43 ,,
ಗಾಯಿಲ ೨೫	೫೯೫	೩೧೬೯	68 ,,
ನಭತ ೧೦	೬೦೫	೩೧೭೯	78 ,,
ವಿಕ್ರಮಾದಿತ್ಯನ ಜನ್ಮ ಕಾಲ	೪೩೦	೩೦೦೪	97 ಕ್ರಿ. ಪೂ.
ಬಾಲ್ಯ ೫ ವರ್ಷ	೪೩೫	೩೦೦೯	92 ,,
ಅರಣ್ಯವಾಸ ೧೨ ,,	೪೪೭	೩೦೨೧	80 ,,
ಉಜ್ಜಯಿನಿಗೆ ಬರುವ ಮುನ್ನ ಅಂಬಾವತಿಯಲ್ಲಿ ಆಳಿದ್ದು ಮುಂತಾದ ಕಾಲ ೨೩ ವರ್ಷ	೪೭೦	೩೦೪೪	57 ,,

ನವ ಮಣಿಗಳು:—ಈ ಒಂಬತ್ತು ಜನ ಕವಿಗಳಲ್ಲಿ ಶಕಾರಿ ವಿಕ್ರಮಾದಿತ್ಯನ ಆಸ್ಥಾನವನ್ನು ಕೆಲವರಾದರೂ ಅಲಂಕರಿಸಿದ್ದರೆಂದು ವಿದಿತವಾಗುತ್ತದೆ

೧. ಕಾಳಿದಾಸ:—ಕಾಳಿದಾಸನ ಆಶ್ರಯದಾತನು ವಿಕ್ರಮಾದಿತ್ಯನೆಂದು ಪ್ರಸಿದ್ಧವಾಗಿದೆ. ಆದರೆ ಕೆಲವರು ಕಾಳಿದಾಸನ ಪೋಷಕನು ಸಮುದ್ರಗುಪ್ತ, ಯಶೋಧರ್ಮ, ಹರ್ಷ ಶೂದ್ರಕ, ಚಂದ್ರಗುಪ್ತ, ಕುಮಾರ ಗುಪ್ತ ಮುಂತಾದವರಲ್ಲಿ ಒಬ್ಬನಾಗಿರಬೇಕೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅವರಲ್ಲಿ ಯಾರೇ ಆಗಲಿ ಪೋಷಕನನ್ನು ವಿಕ್ರಮಾದಿತ್ಯನೆಂದೇ ಎಲ್ಲಾ ಕವಿಗಳೂ ಸಂಶೋಧಕರೂ ಸೂಚಿಸುವರು ಈ ಐತಿಹ್ಯವು ಸುಳ್ಳೋ, ನಂಬತಕ್ಕದಲ್ಲವೋ ಆಗಿದ್ದರೆ, ಎಲ್ಲೆಲ್ಲಿಯೂ ವಿಕ್ರಮಾದಿತ್ಯನ ಹೆಸರನ್ನು ಸೂಚಿಸುವ ಹಂಬಲವೇಕೆ ಎಂಬುದೇ ಬಗೆಹರಿಯುವಂತಿಲ್ಲ.

ಕಾಳಿದಾಸ ಎಂಬ ಹೆಸರಿನ ಅನೇಕ ಕವಿಗಳಾಗಿರುವರು. ಅವರಲ್ಲಿ ಮೂವರು ಬಹು ಪ್ರಸಿದ್ಧರು.

ಖ್ಯಾತಿಂ ಕಾಮಪಿ ಕಾಲಿದಾಸ ಕವಯೋಃ
ನೀತಾಃ ಶಕಾರಾತಿನಾ ||

ಎಂದು ಅಭಿನಂದನೆಂಬ ಕವಿಯು ತನ್ನ ರಾಮಚರಿತ ಗ್ರಂಥದಲ್ಲಿ ಹೇಳಿರುವನು. ಹಾಗಾದರೆ ಈ ಶಕಾರಿ ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿದ್ವನ್ಮಣಿಯಾದ ಕಾಳಿದಾಸನಾರು?

ವರ್ಷೇ ಸಿಂಧುರ ದರ್ಶನಾಂಬರ ಗುಣೈಃ ಯಾತೇ
ಕಲೌ ಸಮ್ಮಿತೇ ||
ಮಾಸೇ ಮಾಧವ ಸಂಜ್ಞಕೇತ್ರ ವಿಹಿತೋ
ಗ್ರಂಥಕ್ರಿಯೋಪಕ್ರಮಃ ||

ಎಂದು ಜ್ಯೋತಿರ್ವಿದಾಭರಣದ ಶೇಷಾಧ್ಯಾಯದಲ್ಲಿ ಹೇಳಿದೆ ಈ ಕಾಲವು

ಕಲಿಯುಗ ಕಾಲ—೩೦೬೮.

ವಿಕ್ರಮ ಶಕಾರಂಭಕಾಲ—೩೦೪೪.

ವಿಕ್ರಮ ಶಕ ಕಾಲ—೨೪ ಅಥವಾ ಕ್ರಿ. ಪೂ. ೩೪ನೇ ವರ್ಷದಲ್ಲಿ ಈ ಜ್ಯೋತಿರ್ವಿದಾಭರಣವು ರಚಿತವಾಯಿತು. ಇದೇ ಗ್ರಂಥದಲ್ಲಿ

ಕಾವ್ಯತ್ರಯಂ ಸುಮತಿಕೃದ್ರಘು ವಂಶಪೂರ್ವಂ
ಜಾತಂ ತತೋ ನನು ಕಿಯ ಚ್ಛ್ರುತಿಕರ್ಮವಾದಃ |
ಜ್ಯೋತಿರ್ವಿದಾಭರಣ ಕಾಲವಿಧಾನ ಶಾಸ್ತ್ರಂ
ಶ್ರೀಕಾಳಿದಾಸ ಕವಿತೋ ಹಿ ತತೋ ಬಭೂವ ||

ಉಕ್ತವಾಗಿದೆ. ಈ ಕಾವ್ಯತ್ರಯಗಳನ್ನೂ ರಚಿಸಿದ ಕಾಳಿದಾಸನು ಶಕಾರಿ ವಿಕ್ರಮಾದಿತ್ಯ ಆಸ್ಥಾನ ವಿದ್ವನ್ಮಣಿಯಾಗಿದ್ದನೆಂಬುದಾಗಿ ಸ್ವಯಂಪ್ರಕಾಶವಾಗುವುದು.

೨. ವರಹಾಮಿಹಿರ:—ಜ್ಯೋತಿಷ, ಗ್ರಂಥಕಾರನಾದರೂ ವಿಕ್ರಮ ಕವಿ ತನ್ನ ಬೃಹತ್ಸಂಹಿತೆಯಲ್ಲಿ ಅರವತ್ತು ನಾಲ್ಕು ತರಹೆಯ ಛಂದಸ್ಸನ್ನು ಉಪಯೋಗಿಸಿರುವನು

ಅಪ್ರದೀಪ ಯಥಾ ರಾತ್ರಿರನಾದಿತ್ಯಂ ಯಥಾ ನಭಃ |
ಕಥಾ ಸಂವತ್ಸರೋ ರಾಜ ಭ್ರಮತಿ ಅಂಧ ಇವಾಧ್ವನಿ ||

ದೀಪವಿಲ್ಲದ ರಾತ್ರಿಯಂತೆ, ಆದಿತ್ಯನಿಲ್ಲದ ಆಕಾಶದಂತೆ, ಜ್ಯೋತಿಷ್ಯನ ಸಹಾಯವಿಲ್ಲದೆ ರಾಜನು ಅಂಧಕಾರ ಮಾರ್ಗದ ಸಂಚಾರಿಕನಂತಾಗುವನು. ವಿಕ್ರಮಾದಿತ್ಯನು ತನ್ನ ಲಾಂಛನವಾದ ವರಹಾ ಎಂಬ ಬಿರುದನ್ನು ಜ್ಯೋತಿಷ ನಾದ ಮಿಹಿರನಿಗೆ ಕೊಟ್ಟು ಮರ್ಯಾದಿಸಿದನಂತೆ.

ವರಹಾಮಿಹಿರನು ಶಾಲಿವಾಹನ ಶಕ ೪೨೭ರಲ್ಲಿ ಜನಿಸಿ ೫೦೯ರ ವರೆಗೂ ಜೀವಿಸಿದ್ದನೆಂದು ಸಂಶೋಧಕರು ನಿರ್ಣಯಿಸಿರುವರು.೮ ಶಾಲಿವಾಹನ ಶಕೆಯೆಂದು ಏಕೆ ನಿರ್ಣಯಿಸಿದರೋ ತಿಳಿಯದು. ಉಜ್ಜಯಿನಿಯ ಜ್ಯೋತಿಷ್ಯರು ೪೨೭ನೇ ಸಂವತ್ಸರದಲ್ಲಿ ವರಹಾಮಿಹಿರನು ಜನಿಸಿದನು ಎಂದು ಹೇಳಿದರು ಈ ಸಂವತ್ಸರವು ಶಾಲಿವಾಹನ ಶಕವೂ ಅಲ್ಲ; ವಿಕ್ರಮಾರ್ಕ ಶಕವೂ ಅಲ್ಲ. ವೀರವರ್ಧಮಾನ ನಿರ್ವಾಣ ಶಕ ಎಂದು ಊಹಿಸಿದರೆ ವರಹಾಮಿಹಿರನು ಶಕಾರಿ ವಿಕ್ರಮಾದಿತ್ಯನ ಕಾಲದಲ್ಲಿದ್ದನೆಂದು ನಿರ್ಧಾರವಾಗುವದು ಬೇರೆ ಬೇರೆ ಶಕಗಳಲ್ಲಿ ಅವನ ಕಾಲವನ್ನು ಕೆಳಗೆ ಕಂಡಂತೆ ನಿರ್ದೇಶಿಸಬಹುದಾಗಿದೆ

ವೀರವರ್ಧಮಾನ ನಿರ್ವಾಣಕಾಲ	೪೨೭ರಿಂದ-೫೦೯ ವರೆಗೆ
ಯುಧಿಷ್ಠಿರ ಶಕೆ	೩೦೦೧-೩೦೮೩ ,,
ವಿಕ್ರಮಶಕ ಕಾಲ-ವಿಕ್ರಮ ಪೂರ್ವ ೪೪ರಿಂದ ವಿ. ಶ. ೩೮ ,,	
ಕ್ರಿ. ಶ. ಪೂರ್ವ	-೧೦೦ರಿಂದ ೧೮ ,,

ಭಾರತೀಯರು ಇಪ್ಪತ್ತಕ್ಕೂ ಮೀರಿದ ಶಕೆಗಳನ್ನು ಅನುಸರಿಸುತ್ತಿರುವುದರಿಂದಲೂ ಒಂದೇ ಹೆಸರಿನ ಅನೇಕ ರಾಜರುಗಳಿರುವುದರಿಂದಲೂ ಕಾಲವನ್ನು ನಿರ್ದೇಶಿಸಲು ತೊಡಕಾಗಿದೆ

೩. ಶಂಕು:—ಗಂಧರ್ವಸೇನನು ತನ್ನ ಪುತ್ರನಾದ ಶಂಖುವಿಗೆ ರಾಜ್ಯಭಾರ ವಹಿಸಿ ತಾನು ತಪಸ್ಸಿಗಾಗಿ ಅರಣ್ಯಕ್ಕೆ ಹೋದನೆಂದು ಹೇಳಿ, ಭರ್ತೃಹರಿಯು ವಿಕ್ರಮಾದಿತ್ಯನಿಗೆ ರಾಜ್ಯ ವಹಿಸಿ ತಾನು ತಪಸ್ಸಿಗೆ ಹೋದನೆಂದು ಭವಿಷ್ಯ ಮಹಾಪುರಾಣದಲ್ಲಿ ಹೇಳಿದೆ ಭರ್ತೃಹರಿಗೆ ಶಂಖು ಎಂಬುದಾಗಿ ಮೊದಲು ಹೆಸರಿದ್ದಿರಬಹುದೇ ಎಂದು ಪ್ರಶ್ನೆಯುಂಟಾಗುವುದು. ಮೇಲೆ ಹೇಳಲಾದಂತೆ ಭರ್ತೃಹರಿ ಮತ್ತು ವಿಕ್ರಮಾದಿತ್ಯರು ಸೋದರರು. ಭರ್ತೃಹರಿಯು ಮನೆ ಮಠ ಎಂದು ಗೃಹಸ್ಥಾಶ್ರಮದಿಂದ ಸನ್ಯಾಸಕ್ಕೂ ಸನ್ಯಾಸದಿಂದ ಗೃಹಸ್ಥಾಶ್ರಮಕ್ಕೂ ಏಳು ಸಲ ಓಡಾಡಿದನೆಂದು ಒಂದು ದಂತಕಥೆ ಇದೆ. ಅದು ಹೇಗೆಯೇ ಇರಲಿ ಈ ಭರ್ತೃಹರಿಯು ನೀತಿ ಶತಕ, ವೈರಾಗ್ಯ ಶತಕ, ಮತ್ತು ಶೃಂಗಾರ ಶತಕ—ಎಂಬ ಚಾಟು ಪದ್ಯಗಳನ್ನು ರಚಿಸಿದ ಕವಿಶ್ರೇಷ್ಠನು. ವಿಕ್ರಮಾದಿತ್ಯನ ಸೋದರನೂ ಕವಿಯೂ ಆದ ಈ ಭರ್ತೃಹರಿಯನ್ನೇ ಮೇಲೆ ಉಕ್ತವಾಗಿರುವ ಚಾಟುಶ್ಲೋಕದಲ್ಲಿ ಶಂಕು ಎಂದು ಸಂಬೋಧಿಸಿರಬಹುದೇ? ಎಂದು ಊಹಿಸಲು ಅವಕಾಶವಿದೆ.

೪. ವರರುಚಿ:—ನಂದರ ಮಂತ್ರಿಯಾಗಿದ್ದ ವರ[ರುಚಿ]ಯೂ, ಗುಣಾಢ್ಯ ಮತ್ತು ಕಾಣಭೂತಿಗಳಿಗಿಂತ ಹಿಂದೆ ... ವರರುಚಿಯೂ ಭಿನ್ನ ಭಿನ್ನ ವ್ಯಕ್ತಿಗಳು ಮತ್ತು ಭಿನ್ನ ... ಕಾಲದಲ್ಲಿದ್ದವರು ವರರುಚಿಯು ವಿಕ್ರಮಾದಿತ್ಯನ ಸೋ... ನೆಂದು ಕೆಲವೆಡೆ ಹೇಳಿದೆ. ವರರುಚಿಯು ವಿದ್ಯಾಧರ ಚ... ಯನ್ನು ಕಾಣಭೂತಿಗೂ, ಕಾಣಭೂತಿಯು ಗುಣಾಢ್ಯನಿ... ಹೇಳಿದರಷ್ಟೆ. ಗುಣಾಢ್ಯನು ಕ್ರಿ. ಶ. ಪ್ರಥಮ ಶಕೆಯ... ಸಾತವಾಹನನ ಮಂತ್ರಿಯಾಗಿದ್ದನಷ್ಟೆ. ಗುಣಾಢ್ಯನ ಗ... ವಿನ ಗುರುವಾದ ಅಂದರೆ ಪರಮಗುರುವಾದ ವರರುಚಿ... ಶಕಾರಿ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ವಿದ್ಯಾರತ್ನಮಣಿಯಾ... ಬೇಕು ಎಂದು ವ್ಯಕ್ತವಾಗುವುದು. ಸುಬಂಧುವಿಗೆ ವರರುಚಿ... ಸೋದರಮಾವನಾಗಬೇಕು. ವರರುಚಿಯು ಒಂದು ... ರತ್ನವೆಂಬ ಗ್ರಂಥವನ್ನು ರಚಿಸಿರುವನು.

ವೇತಾಳ ಭಟ್ಟ:—ವಿಕ್ರಮಾದಿತ್ಯನು ಅಂಬಾವ... ಪುರದಲ್ಲಿ ಆಳುತ್ತಾ ಧರ್ಮಶ್ರವಣದಲ್ಲಿ ಆಸಕ್ತನಾಗಿದ್ದಾ... ಅಂಬೆಯು ಬ್ರಾಹ್ಮಣರೂಪಿನಿಂದ ವೈತಾಳನೆಂಬ ಸಕಲ ವಿ... ಪಂಡಿತನನ್ನು ಕಳುಹಿಸಿದಳೆಂದು ಭವಿಷ್ಯತ್ಪುರಾಣದಲ್ಲಿ ಹೇ... ಗಿದೆ ಇವನೇ ಬೇತಾಳ ಭಟ್ಟ. ಇವನು ರಾಜನ ವಿ... ಚನಾಶಕ್ತಿಯನ್ನು ಪರೀಕ್ಷಿಸಲು ಹೇಳಿದ ಒಗಟಿಯ ರೂಪದ... ಕಥೆಗಳು ಭಟ್ಟ ವಿಕ್ರಮಾದಿತ್ಯನ ಕಥೆಗಳೆಂದು ಪ್ರಸಿದ್ಧವಾಗಿ... ನೀತಿ ಪ್ರದೀಪ ಎಂಬ ನೀತಿ ಕಾವ್ಯವನ್ನೂ ರಚಿಸಿದ್ದಾನೆ. ... ಧರ್ವಸೇನನು ಸರಸ್ವತಿ ಎಂಬ ಕನ್ನೆಯನ್ನು ಅಪಹ... ಮಾಡಿದನೆಂದು ಅವಳ ಸೋದರನಾದ ಕಾಳಿಕಾಚಾರ್ಯ... ನೆಂಬ ಮಂತ್ರವಾದಿ ಬ್ರಾಹ್ಮಣನು ಶಕರ ಆಶ್ರಯ ಪಡೆ... ಗಂಧರ್ವಸೇನನನ್ನು ರಾಜ್ಯದಿಂದ ಓಡಿಸಿದನು. ನಂತರ ಅ... ಹಿರಿಯ ಮಗನಾದ ಶಂಕು (ಗಾರ್ಧಭಿಲ ಅಥವಾ ಭರ್ತೃ... ಯನ್ನೂ) ರಾಜ್ಯ ತ್ಯಜಿಸುವಂತೆ ಉಪಾಯ ಮಾಡಿದ... ಭೇತಾಳನೆಂಬ ಬ್ರಾಹ್ಮಣನು ಶಂಕುವಿನ ತಮ್ಮನಿಗೆ ಯೋ... ನಾದ ಮಂತ್ರಿಯಾಗಿರಲು, ಅವನನ್ನು ತನ್ನ ವಶಪಡಿಸಿಕೊ... ಬೇಕೆಂದು ಕಾಳಿಕಾಚಾರ್ಯನು ಮಾಡಿದ ಪ್ರಯತ್ನವೇ... ಭೇತಾಳನ ಕಥೆಯಾಗಿದೆ. ಅಂತ್ಯದಲ್ಲಿ ಭೇತಾಳ ಭಟ...

---

೮. Kern and Bhandarkar accept the tra[di]tion of the "nine gems" that Varahamihira a[nd] Kalidasa were contemporaris while fixing [the] date of Varahamihira's work from a statement [of] Amoraja as 587 A. D. they say that his frie[nd] Kalidasa must have lived about the latter p[art] of the 6th century A. D. (History of classi[cal] Sanskrit litarature by M. Krishnachairiyar pa[ge] I09.)

ಯೋಗ್ಯ ಉಪದೇಶದಿಂದ ಕಾಳಿಕಾಚಾರ್ಯನೇ ಕತ್ತಿಯು ಕೊನೆಗೆ ಆಹುತಿಯಾಗಲು ಅವನ ಸಹಾಯವನ್ನು ಪಡೆಯುತ್ತಿದ್ದ ಶಕರು ಉಜ್ಜಯಿನಿಯಿಂದ ಓಡಿಸಲ್ಪಟ್ಟರು. ಈ ಭೇತಾಳ ಭಟ್ಟನು ವಿಕ್ರಮಾದಿತ್ಯನ ಇನ್ನೊಬ್ಬ ಸಹೋದರನಾಗಿಯೂ ಇದ್ದಿರಬಹುದು.

ಅಮರಸಿಂಹ:–ಇವನು ಬೌದ್ಧನು. ನಾಮಲಿಂಗಾನುಶಾಸನವೆಂಬ ಸಂಸ್ಕೃತ ಕೋಶವನ್ನು ಬರೆದಿದ್ದಾನೆ. ಸಂಸ್ಕೃತಾಭಿಮಾನಿಗಳೆಲ್ಲರೂ ಈ ಅಮರಸಿಂಹನನ್ನು ಪೂಜ್ಯಭಾವದಿಂದ ಗೌರವಿಸುವರು. ಗಯಾದಲ್ಲಿರುವ ಬೌದ್ಧದೇವಾಲಯವನ್ನು ಕಟ್ಟಿಸಿದನು. ಇವನು ಒಂದು ಸಣ್ಣ ರಾಜ್ಯದ ಅಧಿಪತಿಯಾಗಿದ್ದನಂತೆ. ಶಾಕವಾಹನನು ಅಮರರಾಜ ಮುಂತಾದವರ ಗಾದೆಗಳನ್ನು ಸಂಗ್ರಹಿಸಿರುವನೆಂಬದಾಗಿ ಕೆಲವರು ಅನುಮಾನಿಸಿರುವರು. ಆ ಶಂಕೆಯು ಹೇಗೇ ಇರಲಿ ಅಮರರಾಜನು ಶಾಕವಾಹನನಿಗಿಂತ ಹಿಂದಿನವನೆಂದು ನಂಬಬಹುದಷ್ಟೆ. ಈ ಅಮರಸಿಂಹನೇ ವಿಕ್ರಮಾದಿತ್ಯನ ಆಸ್ಥಾನದ ವಿದ್ವನ್ಮಣಿ ಅಮರಸಿಂಹನಾಗಿರಬೇಕೆಂದು ತೋರುತ್ತದೆ. ಬ್ರಹ್ಮಗುಪ್ತನ ತಂದೆ ಜಿಷ್ಣುವೂ ಅಮರಸಿಂಹನೂ ಸಮಕಾಲೀನರು.

೭. **ಘಟಕರ್ಪರ:**–ಇವನ ಜನ್ಮವೃತ್ತಾಂತದ ಚರಿತ್ರೆ ದೊರೆತಿಲ್ಲ; ಘಟಕರ್ಪರ ಕಾವ್ಯ ಮತ್ತು ನೀತಿಸಾರ ಎಂಬ ಗ್ರಂಥಗಳನ್ನೂ ರಚಿಸಿದ್ದಾನೆ.

೮. **ಕ್ಷಪಣಕ:**—ಇವನು ಒಂದು ನಿಘಂಟುವನ್ನು ರಚಿಸಿರುವನು. ಇವನ ಜೀವನ ಚರಿತ್ರೆಯ ವಿಷಯಗಳು ತಿಳಿಯಬಂದಿಲ್ಲ.

೯. **ಧನ್ವಂತರಿ:**—ಕಾಶೀನಗರದ ಕಲ್ಪದತ್ತನೆಂಬ ಬ್ರಾಹ್ಮಣನ ಮಗನಾಗಬೇಕು. ಸುಶ್ರುತ ಇವನ ಮುಖ್ಯ ಶಿಷ್ಯ. ಕಲ್ಪವೇದನೆಂಬ ವೈದ್ಯಕವನ್ನು ರಚಿಸಿದ್ದಾನೆ. ಕೀರ್ತಿವಂತನಾದ ಈ ವೈದ್ಯನ ದರ್ಶನಮಾತ್ರದಿಂದಲೇ ರೋಗಗಳು ನಾಶವಾಗುತ್ತಿದ್ದವಂತೆ.

ಸಾರಾಂಶ:—ಭರತಖಂಡದಲ್ಲಿಯೇ ಸ್ಥಾಪಿತವಾದ ಬೌದ್ಧಮತವು ಅಶೋಕ ಚಕ್ರವರ್ತಿಯ ಕಾಲದಲ್ಲಿ ಭರತಖಂಡದಲ್ಲೆಲ್ಲಾ ಹರಡಿತಲ್ಲದೆ ಪರದೇಶಗಳಿಗೂ ಪ್ರಸರಿಸಿತು. ಇದರಿಂದಲೇ ಧರ್ಮಕ್ಕೆ ಕುಂದಕ ಉಂಟಾಯಿತು. ಭರತಖಂಡದ ಪಶ್ಚಿಮ ಭಾಗದಲ್ಲಿ ರಕ್ತವರ್ಣ ವಸ್ತ್ರಧಾರಿಗಳಾದ ಶಕರು ಹರಡಿ ಜೈನ ಮತ್ತು ಬೌದ್ಧ ಮತಾವಲಂಬಿಗಳಾಗಿ ವೇದ ಮತಕ್ಕೆ ಧಕ್ಕೆಯನ್ನು ತಂದರು. ಆಗ ಭಾರತ ಸಂಸ್ಕೃತಿಯನ್ನು ಪುನರುದ್ಧಾರಮಾಡಲು ವೇದಮತೀಯರಲ್ಲಿ ಕೆಲವರು ಪ್ರಯತ್ನಿಸಿದರು.

ಅಬು ಪರ್ವತದಲ್ಲಿ ಈಶ್ವರಾರಾಧನೆಯು ನಡೆದು ನಾಲ್ಕು ವಂಶದವರು ವೇದ ಮತೋದ್ಧಾರಕ್ಕೆ ಟೊಂಕಕಟ್ಟಿ ನಿಂತು ಕೆಲಸ ಮಾಡಿದರು. ಅವರಲ್ಲಿ ಅಂಬಾವತಿಯ ಪ್ರಮರ ವಂಶದ ಆಳರಸರು ಮುಖ್ಯರಾದರು. ಈ ವಂಶದ ಐದನೇ ಅರಸನಾದ ಗಂಧರ್ವಸೇನನ ನಾಲ್ವರು ಮಕ್ಕಳಾದ ವರರುಚಿ, ಭರ್ತಹರಿ, ಭೇತಾಳ ಭಟ್ಟ ಮತ್ತು ವಿಕ್ರಮಾದಿತ್ಯರೆಂಬ ನಾಲ್ವರು ಸೋದರರು ಐಕಮತ್ಯದಿಂದ ಕಾರ್ಯೋನ್ಮುಖರಾಗಿ ಉಜ್ಜಯಿನಿಯಲ್ಲಿದ್ದ ಶಕರನ್ನು ಓಡಿಸಿ ವೇದ ಮತೋದ್ಧಾರಕ್ಕಾಗಿ ಶ್ರಮಿಸಿದರು.

ವಿಕ್ರಮಾದಿತ್ಯನು ಆದರ್ಶ ರಾಜನಾದನು. ವಿದ್ಯಾಪಕ್ಷಪಾತಿ, ಕವಿ ಜನಾಶ್ರಯ, ದಾನವೀರನಾದ ವಿಕ್ರಮನ ಆಸ್ಥಾನವು ನವಮಣಿಗಳಿಂದ ಶೋಭಿತವಾಯಿತು. ವೈದ್ಯವಿದ್ಯಾ ಗ್ರಂಥಗಳು, ನೀತಿಶಾಸ್ತ್ರಗಳು ರಚಿತವಾಗಿ ಆ ಕಾಲವು ಸುವರ್ಣ ಯುಗವೆನಿಸಿತು.

ಅಂದಿನ ಅನೇಕ ಗ್ರಂಥಗಳು ನಾಶವಾಗಿರುವುದರಿಂದ ಕವಿಗಳ ಕಾಲವನ್ನು ನಿರ್ಧರಿಸುವುದೇ ಕಷ್ಟವಾಗಿದೆ. ಗ್ರಂಥಗಳು ಇನ್ನೂ ದೊರೆಯುತ್ತಿದ್ದಾಗ, ಅವುಗಳ ಆಧಾರದಿಂದ ರಚಿಸಿದ ಚರಿತ್ರೆಯನ್ನೂ ನಾವು ನಂಬಲಾರದವರಾಗಿರುತ್ತೇವೆ. ಹೆಚ್ಚಾಗಿ ಶೋಧನಾ ಕಾರ್ಯ ನಡೆದು ನಿಜವಾದ ಚರಿತ್ರೆಯು ಪುನರ್ರಚಿತವಾಗಬೇಕು.

ವಿಕ್ರಮಾದಿತ್ಯನು ತನ್ನ ಕಾಲದಲ್ಲಿ ಎಷ್ಟು ಜನಪ್ರೀತನಾಗಿದ್ದನೋ, ಇಂದೂ ಅಷ್ಟೇ ಪ್ರಖ್ಯಾತನಾಗಿರುವನು. ಲೋಕಮಾನ್ಯನಾಗಿರುವನು. ಆದ್ದರಿಂದ ಭಾರತ ಪ್ರಜಾರಾಜ್ಯದ ಅಧ್ಯಕ್ಷರಾದ ಶ್ರೀ। ರಾಜೇಂದ್ರ ಪ್ರಸಾದರು ವಿಕ್ರಮಾದಿತ್ಯನ ಕೀರ್ತಿಮಂದಿರದ ಅಡಿಗಲ್ಲನ್ನಿಡುತ್ತಾ ಅವನು ರಾಷ್ಟ್ರದ ಆದರ್ಶ ಪುರುಷನೆಂದು ನುಡಿದಿರುವರು.

॥ ಜೈ ಹಿಂದ್ ॥

ಪ್ರಜಾಪ್ರಭುತ್ವದ ರಿಪುತ್ರಯ

[ಲೇಖಕ: ಪಾಟೀಲ ಹನುಮಂತರಾಯರು.]

ನಮ್ಮ ದೇಶದಲ್ಲಿ ಈಗ ಸ್ವಾತಂತ್ರ್ಯ ಸೂರ್ಯನು ಉದಯಿಸಿ ನಾಲ್ಕು ವರ್ಷಗಳಾಗಿ ಹೋದವು; ಸಂಪೂರ್ಣ ಪ್ರಭುತ್ವ ಸಂಪನ್ನವಾದ ಪ್ರಜಾರಾಜ್ಯವು ಸ್ಥಾಪಿತವಾಗಿಯೂ ಎರಡು ವರ್ಷಗಳಾಗುತ್ತ ಬಂದಿವೆ. ಪ್ರಪಂಚದ ಮಿಕ್ಕ ರಾಷ್ಟ್ರಗಳಂತೆ ಭಾರತವು ಹಿಂಸೆಯಿಂದಾಗಲಿ, ಶಸ್ತ್ರಗಳ ಬಲದಿಂದಾಗಲಿ ಸ್ವಾತಂತ್ರ್ಯವನ್ನು ಪಡೆಯಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಅದು ಒಂದು ಅಪೂರ್ವವಾದ, ಕ್ರಾಂತಿಕಾರಕವಾದ, ಅಹಿಂಸಾತ್ಮಕವಾದ ಮಾರ್ಗವನ್ನವಲಂಬಿಸಿ, ಆಳುವವ ಮತ್ತು ಆಳಿಸಿಕೊಂಡವ ಇವರಿಬ್ಬರಿಗೂ ಅಸಮಾಧಾನವಾಗದ ಒಂದು ಅನ್ಯೋನ್ಯವಾದ ರೀತಿಯಲ್ಲಿ ಭಾರತವು ಸ್ವತಂತ್ರವಾಯಿತು.

ಆದರೆ ರಾಜಕೀಯ ಸ್ವಾತಂತ್ರ್ಯವೇ ನಮ್ಮ ಗುರಿಯಲ್ಲ; ಅದೊಂದು ದಾರಿ ಎಂಬುದನ್ನು ನಾವು ಮೊದಲಿನಿಂದಲೇ ಖಚಿತವಾದ ರೀತಿಯಲ್ಲಿ ತಿಳಿದುಕೊಂಡಿದ್ದೇವೆ. ಸ್ವಾತಂತ್ರ್ಯವು-ರಾಜಕೀಯ ಸ್ವಾತಂತ್ರ್ಯವು-ಒಂದು ಸಾಧನ ಮಾತ್ರ. ಅದರ ಸಹಾಯದಿಂದ ಅಥವಾ ಸ್ವಾತಂತ್ರವಾದ ರಾಜಕೀಯ ವಾತಾವರಣದಲ್ಲಿ ನಾವು ಆರ್ಥಿಕ ಏಳ್ಗೆಯನ್ನು ಪಡೆದುಕೊಂಡು ಸಾಮಾಜಿಕ ಹಿತವನ್ನು ಹೆಚ್ಚು ಸಮಂಜಸವಾಗಿ ಮತ್ತು ಸಮರ್ಪಕವಾಗಿ ಸಾಧಿಸುವದೇ ನಮ್ಮ ಆದರ್ಶವಾಗಿದೆ.

ಹೀಗಿದ್ದ ಪಕ್ಷದಲ್ಲಿ ರಾಜಕೀಯ ಕ್ಷೇತ್ರದಲ್ಲಿ ನಾವು ಯಾವುದೊಂದು ರಾಷ್ಟ್ರದ ರೀತಿ-ನೀತಿಗಳನ್ನು ಅನುಸರಿಸದೆ, ಹಿಂದೂಸ್ಥಾನದ ಪರಂಪರೆ, ಮನೋಧರ್ಮಗಳಿಗೆ ಅನುರೂಪವಾದಂತಹ, ಆದರೂ ಕ್ರಾಂತಿಕಾರಕವಾದ ಮಾರ್ಗವನ್ನು ಕಂಡುಕೊಂಡಂತೆ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅದು ಏಕೆ ಸಾಧ್ಯವಾಗಬಾರದು ಎಂಬುದೊಂದು ಪ್ರಶ್ನೆಯು ನಮ್ಮನ್ನು ಎದುರಿಸುವದು. ರಾಜಕೀಯದಲ್ಲಿ ನಾವು ಮೊದಲಿನಿಂದಲೇ ಪಾಶ್ಚಿಮಾತ್ಯ ಪದ್ಧತಿಯ ಮೇಲೆ ನಡೆದ ಹಲ ಕೆಲವು ಸಂಸ್ಥೆಗಳನ್ನು ಮತ್ತು ವ್ಯವಸ್ಥೆಯನ್ನು ಅನುಕರಿಸಿರುವೆವು. ಹಾಗೆಯೇ ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಮತ್ತು ವ್ಯವಸ್ಥೆಯಲ್ಲಿ ನಾವು ಹೆಚ್ಚಾಗಿ ಬುಡುಮಗುಚಿ ಪಡಿಯಚ್ಚಿನಲ್ಲಿಯೆ ನಡೆದಿದ್ದೇವೆ. ಆದರೂ ರಾಜಕೀಯ ಕ್ಷೇತ್ರದಲ್ಲಿ

ನಮಗೆ ಭಿನ್ನವಾದ ಒಂದು ಧೋರಣೆಯನ್ನು ತಳೆದು, ತಿ
ಬೇರೆಯಾದ ಒಂದು ರೀತಿಯಿಂದ ಮುಂದೆ ನಡೆದು, ಸಂಬಂ
ಸಿದ ಯಾವ ಪಕ್ಷಕ್ಕೂ ಅನ್ಯಾಯವಾಗಲಿ, ಅಸಡ್ಡೆಯಾಗ
ಆಗದಂತೆ ನಮ್ಮ ಗುರಿಯನ್ನು ಸಾಧಿಸಿಕೊಂಡೆವು. ಇಂತಹ
ಆದ ಒಂದು ಮಾರ್ಗವು ನಮ್ಮ ಮುಂದಿನ ಕಾರ್ಯದಲ್ಲಿ ಏ
ನಮಗೆ ಗೋಚರಿಸಬಾರದೇಕೆ? ನಮ್ಮ ಆರ್ಥಿಕ ಮತ್ತ
ಸಾಮಾಜಿಕ ಪುನರ್ರಚನೆಯಾಗುವದು ಅತ್ಯಾವಶ್ಯಕವಿದೆ ಎ
ಮಾತಿಗೆ ಎಲ್ಲಿಯೂ ವಿರೋಧವುಂಟಾಗಲಿಕ್ಕೆ ಸಾಧ್ಯವಿ
ಆದರೆ ಆ ಬಗೆಯ ಪರಿವರ್ತನವನ್ನು ಒದಗಿಸುವ ರೀತಿ
ಬಗ್ಗೆ ಈಗ ತೀರ ವಿಚಿತ್ರವಾದ ಭಿನ್ನಾಭಿಪ್ರಾಯಗಳು ಹು
ಕೊಂಡಿವೆ. ಸ್ವಾತಂತ್ರ್ಯಪ್ರಾಪ್ತಿಯ ನಂತರ ಅದರ ಫ
ಸ್ವರೂಪಕ್ಕೆ ನಾವೇ ಹಕ್ಕುಬಾರರು, ಸಂಪೂರ್ಣ ಹೊ
ಗಾರರು ಎಂಬ ವಿಚಾರವೆ ಈ ಬಗೆಯ ಮತಭೇದಕ್ಕೆ ಕಾರ
ವಾಗಿರಬಹುದಾಗಿದ್ದರೂ, ಬಿಟ್ಟ ನೋಟದಲ್ಲಿ ನೋಡಲ
ನಮಗೆ ಈ ಸಮಸ್ಯೆಯ ಬುಡದಲ್ಲಿ ಅನೇಕ ಸಂಗತಿಗಳು ಅಡ
ವಾಗಿದ್ದುದು ತಿಳಿದುಬರುತ್ತಿದೆ.

ಇಂತಹ ವಿಷಯಗಳಲ್ಲಿ ಮೂರು ಮಾತುಗಳನ್ನು ಇ
ವಿವೇಚಿಸಿ, ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಅ
ಗಳನ್ನು ಶೀಘ್ರದಲ್ಲಿಯೆ ನಾವು ನಿರ್ನಾಮಗೊಳಿಸದಿದ್ದ
ಅವು ನಮ್ಮ ದೇಶದಲ್ಲೆಲ್ಲ ಹೇಗೆ ಇವಕ್ಕೂ ಹೆಚ್ಚು ಕಷ್ಟ
ವಾದ ಕಾಲವನ್ನು ತಂದೊಡ್ಡಬಹುದು ಮತ್ತು ಮುಂದೆ ಅ
ದೂರದಲ್ಲಿಯೆ ನಾವು ಪಡೆದುಕೊಂಡ ರಾಜಕೀಯ ಸ್ವಾ
ತ್ರ್ಯಕ್ಕೆ ಕೂಡ ಗಂಡಾಂತರವನ್ನು ಒದಗಿಸಬಹುದು ಎಂಬದ
ಸೂಚಿಸಬೇಕೆಂಬುದು ಈ ಲೇಖನದ ಉದ್ದೇಶವಾಗಿದೆ.
ಮೂವರು ಶತ್ರುಗಳೆಂದರೆ ಸ್ವಜನಾರ್ಥಕತೆ, ಭ್ರಷ್ಟತೆ ಮ
ಅಕ್ಷಮತೆ ಇವೇ ಆಗಿವೆ. ಈ ಮೂರು ಶಕ್ತಿಗಳು ನ
ನಾಡಿನಲ್ಲಿ ಮೊದಲು ಎಂದಿಗೂ ಶಕ್ತಿತ್ವದಲ್ಲಿ ಇರಲೇ
ಎಂದಿಲ್ಲಿ ಹೇಳಬಯಸುವದಿಲ್ಲ. ಅವು ಹಿಂದಿನ ಕಾಲ
ಇದ್ದವು. ಇಷ್ಟೇ ಅಲ್ಲದೆ ಕೆಲವೊಂದು ಸಂದರ್ಭಗಳಲ್ಲಿ ಅ
ಕವೂ ಆಗಿದ್ದವು. ರಾಜಕೀಯ ಸತ್ತೆ ... ನ
ನಡೆಯಿಸಿದ ಹೋರಾಟದಲ್ಲಿ ಎಲ್ಲ ರೀತಿಯಿಂದಲೂ ಸ

ಮಾಡಿ ಸನ್ನಾಹವನ್ನು ರಚಿಸುವದು. ಆಗ ಅಪರಿಹಾರ್ಯವಾಗಿತ್ತು. ಆದರೆ ಈಗಿನ ಹೊಸ ವಾತಾವರಣದಲ್ಲಿ ಈ ಮೂರು ಸಂಗತಿಗಳು ನಮಗೆ ಕಂಟಕಪ್ರಾಯವಾಗಿವೆ. ಸಮಾಜದ ಎಲ್ಲ ಭಾಗಗಳಿಗೂ ಅವು ವ್ಯಾಪಿಸಿಕೊಂಡು ನಮ್ಮ ನೀತಿಮತ್ತೆಯನ್ನು ಹದಗೆಡಿಸುತ್ತಲಿವೆ. ಮನುಷ್ಯನ ದೇಹಕ್ಕೆ ಒಂದೊಂದಾಗಿ ಅಂಟಿಕೊಂಡರೂ ಸಾಕಷ್ಟು ತೊಂದರೆಯಾಗುವಾಗ್ಗೆ, ತ್ರಿದೋಷಗಳೂ ಅವನನ್ನು ಆವರಿಸಿಕೊಂಡರೆ ಅವನ ಗತಿಯೇನಾಗಬಹುದೊ ಹಾಗೆ ಇಂದಿನ ನಮ್ಮ ರಾಷ್ಟ್ರದಲ್ಲಿ ಈ ತ್ರಿಶೂಲಿಗಳು ನಮ್ಮ ಸಮಾಜವನ್ನು ಸದೆ ಬಡೆಯುವ ಸ್ಥಿತಿಯನ್ನು ಹೊಂದುತ್ತಲಿವೆ.

ಮೊದಲನೆಯದಾಗಿ ನಾವು ಸ್ವಜನಾರ್ಥಿಕತೆ (Nepotism)ಯನ್ನು ತೆಗೆದುಕೊಳ್ಳಬಹುದು. ಈ ರೋಗವು ಹೆಚ್ಚಾಗಿ ಹಿರಿಯ ಸಂಗಡಗಳಲ್ಲಿ ಅಂದರೆ ಮುಂದಾಳುಗಳಲ್ಲಿ ಕಂಡು ಬರುತ್ತದೆ ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ, ಆರ್ಥಿಕ ವ್ಯವಸ್ಥೆಯಲ್ಲಿ ಕೆಲವೊಂದು ಕಾರಣಗಳಿಂದ ಮುಂದೆ ಬಂದ ಜನರಲ್ಲಿ ಈ ಬೇನೆಯು ಜಿಗುಟಾಗಿ ಅಂಟಿಕೊಂಡಿರುತ್ತದೆ. ಸ್ವತಃದ ಸ್ಥಾನ ಮಾನ, ತಾವು ಕೈಕೊಂಡಿರುವ ಕಾರ್ಯದಲ್ಲಿ ಗೋಪ್ಯವನ್ನು ಕಾಯ್ದುಕೊಳ್ಳುವದು, ಅಷ್ಟೆ ವಿಶ್ವಾಸದಿಂದ ಆ ಕಾರ್ಯವನ್ನು ಮುಂದೊಯ್ಯುವ ಇಂತಹ ಕಾರಣಗಳಿಗಾಗಿ ಒಮ್ಮೊಮ್ಮೆ ಸ್ವಜನರನ್ನೆ ಅಂಸ ತಮ್ಮ ಸಹಚರರನ್ನಾಗಿ ಮಾಡಿಕೊಳ್ಳುವದು ಸ್ವಾಭಾವಿಕ ಎಂದು ತೋರಬಹುದು. ಆದರೆ ತಾನು ಕೈಕೊಂಡ ಕಾರ್ಯವು ದೇಶದ ಒಟ್ಟು ಹಿತವನ್ನು ಸಾಧಿಸಲಿಕ್ಕೆ ಯಾವ ಬಗೆಯಾಗಿ ಸಹಾಯಕವಾಗಿದೆ ಎಂಬ ದೃಷ್ಟಿಯಿಂದ ಇಂತಹರು ವಿಚಾರ ಮಾಡಿ ನೋಡಿದರೆ, ಆ ಕಾರ್ಯವನ್ನು ಮಾಡುವ ಧೋರಣೆಯು ಎಷ್ಟು ಘಾತಕವಾದುದು ಎಂಬುದು ಗೋಚರಿಸದಿರದು. ಅಣ್ಣ-ತಮ್ಮ, ಮಗ-ಅಳಿಯ, ಆಪ್ತ-ಇಷ್ಟ ಇವೇ ಮುಂತಾದ ಸಂಬಂಧಗಳಲ್ಲದೆ ಇಂದು ತನ್ನ ಜಾತಿಯವ, ತನ್ನ ಪ್ರಾಂತದವ, ತನ್ನ ಭಾಷೆಯವ, ತನ್ನ ಪಕ್ಷದವ ಎಂಬ ಅನೇಕ ಕಾರಣಗಳಿಗಾಗಿ ಸ್ವಜನರನ್ನು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸೇರಿಸಿಕೊಳ್ಳುವದು ಸಾಮಾನ್ಯವಾಗಿದೆ. ಸ್ವಬಲದ ಸಂರಕ್ಷಣೆ ಮತ್ತು ಸಂವರ್ಧನೆಯ ದೃಷ್ಟಿಯಿಂದ ಈ ರೀತಿಯು ಎಷ್ಟೆ ಅವಶ್ಯಕವಾಗಿದ್ದರೂ, ದೇಶದ ಪ್ರಗತಿಗೆ, ರಾಷ್ಟ್ರದ ಉನ್ನತಿಗೆ ಮತ್ತು ಸಮಾಜದ ಕಲ್ಯಾಣಕ್ಕೆ ಇದು ಮಾತ್ರ ಸಾಕೆನಿಸದೆ, ನಿಜವಾದ ಯೋಗ್ಯತೆಯು ಪ್ರೇರಕವಾದ ಕಾರಣವಾಗಿರಬೇಕಾದುದು ಸರಿಯಾದ ರೀತಿ. ಮನಸ್ಸಿಲ್ಲದಿದ್ದರೂ ಮನೆಯವ ಎಂಬ ನೆಪದಿಂದಾಗಲಿ, ಗುಣವಿಲ್ಲದಿದ್ದರೂ ಗೋತ್ರದವ ಎಂಬ ಕಾರಣದಿಂದಾಗಲಿ ಜನರನ್ನು ಪಡೆಯಲ್ಲಿ ಸೇರಿಸಿಕೊಂಡರೆ, ಅದರಿಂದ ಮೊದಲನೆಯದಾಗಿ ಆಗಬೇಕಾದ ಕೆಲಸ ಆಗುವದಿಲ್ಲ; ಎರಡನೆಯದಾಗಿ ಆ ಕೆಲಸಕ್ಕೆ ಅರ್ಹತೆಯುಳ್ಳ ಬೇರೆಯವರನ್ನು ತಂದುಕೊಳ್ಳಬೇಕಾದುದರಿಂದ ಅವರ ಬಗ್ಗೆ ವೆಚ್ಚವು ಹೆಚ್ಚಾಗುವದು ಮತ್ತು ಮೂರನೆಯದಾಗಿ ನಿಜವಾದ ನೈಪುಣ್ಯವುಳ್ಳ ಜನರಿಗೆ ಈ ಬಗೆಯ ಆಯ್ಕೆಯಿಂದ ಅಪಮಾನವಾಗಿ ಅವರ ಶಕ್ತಿಯು ರಾಷ್ಟ್ರಕ್ಕೆ ಸಂಪೂರ್ಣವಾದ ಪ್ರಮಾಣದಲ್ಲಿ ಸಿಗುವದಿಲ್ಲ. ಹೀಗೆ ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಈ ಬಗೆಯ ಧೋರಣೆಯು ಅನಿಷ್ಟಮಯವಾಗಿದೆ. ನಮ್ಮ ರಾಷ್ಟ್ರದಲ್ಲಿ ಮತ್ತು ಎಲ್ಲ ಭಾರತೀಯ ರಾಜ್ಯಗಳಲ್ಲಿ ಸರಕಾರಗಳು ಸಾರ್ವಜನಿಕ ಕಾರ್ಯ ಮಂಡಲ (Public Service Commission)ಗಳನ್ನು ನೇಮಿಸಿ ಪ್ರತಿಯೊಂದು ಪ್ರಶ್ನೆಗಾಗಿ ನಿರ್ದಿಷ್ಟವಾದ ಪದ್ಧತಿಯಿಂದ ಜನರನ್ನು ಆರಿಸುವ ರೂಢಿಯನ್ನು ಆರಂಭಿಸಿದ್ದು, ಇತ್ತೀಚೆಗೆ ಕೇಂದ್ರ ಸಾರ್ವಜನಿಕ ಕಾರ್ಯಮಂಡಲವು ಪ್ರಕಟಿಸಿದ ಅವರ ವರದಿಯು ಅನೇಕ ಆಶ್ಚರ್ಯಕಾರಕವಾದ ಸಂಗತಿಗಳನ್ನು ತಿಳಿಸುತ್ತವೆ. ತಕ್ಕ ಮನ್ನಣೆಯನ್ನು ಪಡೆದ ಜನರು ಕೂಡ ಈಗ ಯಾವ ಕೆಲಸವನ್ನು ಪಡೆಯಬೇಕಾದರೂ "ವಕೀಲ" ಬೇಕು; ಅದಕ್ಕೆ ಸಾಕಷ್ಟು ಪ್ರಬಲನಾದ ಒಬ್ಬ Godfather ಬೇಕು ಎಂಬ ಸಿದ್ಧಾಂತದಿಂದ ಓಡಾಡುವರು. ಇದರಿಂದ ದೇಶದಲ್ಲಿ ಯಾವ ಬಗೆಯ ಅನೈತಿಕವೆನ್ನಿಸಬಹುದಾದ ಮನೋಭಾವವು ಪಸರಿಸಿರಬಹುದು ಎಂಬುದರ ಕಲ್ಪನೆಯು ಸಹಜವಾಗಿ ಬರುವದು.

ಎರಡನೆಯದಾದ ಭ್ರಷ್ಟತೆಯು ತನ್ನ ಪರಿಣಾಮದಲ್ಲಿ ಇದಕ್ಕೂ ಹೆಚ್ಚು ಆತ್ಮನಾಶಕವಾಗಿರುವದು. ಸ್ವಜನಾರ್ಥಿಕತೆಯು ಕೇವಲ ಈ ಪೀಳಿಗೆಯ ಜನರನ್ನು ಕೆಡಿಸುತ್ತಿದ್ದಾರೆ. ಭ್ರಷ್ಟತೆಯು (Corruption) ಮುಂದಿನ ಪೀಳಿಗೆಯವರನ್ನು ಕೂಡ ಹಾಳುಮಾಡುತ್ತದೆ. ಮೊದಲನೆಯದು ಸ್ವತಂತ್ರ ಮುಂದಾಳುಗಳಲ್ಲಿ ತಲೆದೋರುತ್ತಿದ್ದರೆ ಇದು ಸೇವಕರು. ವ್ಯಾಪಾರಿಗಳು ಮತ್ತು ಇತರ ಪ್ರಮುಖರಲ್ಲಿ ಹೆಚ್ಚಾಗಿ ಬೇರೂರಿದುದು ಕಂಡುಬರುತ್ತದೆ. ಭ್ರಷ್ಟತೆಯು ದ್ವಿಮುಖಿಯಾದ ಶಾಸ್ತ್ರವಾಗಿದೆ. ಸ್ವಜನಾರ್ಥಿಕತೆಯಿಂದ ಒಂದು ರೀತಿಯಿಂದ ಉಪಕಾರವನ್ನು ಪಡೆದವನು ಮಾತ್ರ ನಷ್ಟವನ್ನುಂಟು ಮಾಡುತ್ತಿದ್ದರೆ ಭ್ರಷ್ಟತೆಯಿಂದ ಆ ಸಹಾಯವನ್ನು ಕೊಟ್ಟವನೂ ಮತ್ತು ಕೋರಿದವನೂ ಕೂಡಿಯೆ ಸಮಾಜಘಾತಕರಾಗಿ ಪರಿಣಮಿಸುತ್ತಾರೆ. ಲಂಚಗುಳಿತನವು ಇದರ ಪ್ರತ್ಯಕ್ಷರೂಪ. ಅಂತಹವೇ ಆದ ಬೇರೆ ಅವರ ಪ್ರಕಾರಗಳೆಂದರೆ ಕಳ್ಳಪೇಟೆ ಮತ್ತು ಅಧಿಕ ಸಂಗ್ರಹ (Hoarding). ಇವು ಆರ್ಥಿಕ ದೃಷ್ಟಿಯಿಂದ ಹೇಗೆ ಹಾನಿಕಾರಕ ಎಂಬುದನ್ನು ಈಗ ನಾವು ನೋಡಬಹುದು. ಒಬ್ಬ ವ್ಯಾಪಾರಿಯು ಆಯಾತ-ನಿರ್ಯಾತ ವ್ಯಾಪಾರದಲ್ಲ ಆಗಲಿ, ನಿಯಂತ್ರಿತ ವಸ್ತುಗಳ ಅಪ್ಪಣೆಗಾಗಲಿ ಸರಕಾರದಿಂದ ಸಮ್ಮತಿಪತ್ರ (license)ವನ್ನು ಪಡೆಯಬೇಕಾದರೆ ಅವನು ಸಂಬಂಧಿಸಿದ ಅಧಿಕಾರಿಗೆ ಲಂಚವನ್ನು ಕೊಟ್ಟು

ತನ್ನ ಕೆಲಸವನ್ನು ಮಾಡಿಕೊಳ್ಳುತ್ತಾನೆ. ಈ ಬಗೆಯ ಲಂಚವು ಆ ಸ್ಥಾನಕ್ಕೆ ತಕ್ಕಂತೆ ಇರುತ್ತದೆ. ಆದರೂ ಲಂಚವನ್ನು ಕೊಡುವವನು ಆ ಲಂಚದ ಹಣವನ್ನು ಮೊದಲು ಅನ್ಯಾಯವಾಗಿಯೆ ಪಡೆಯಬೇಕಾಗುತ್ತದೆ; ಇಲ್ಲವೆ ಆ ಮೇಲೆ ಅನ್ಯಾಯದಿಂದ ಪಡೆಯಬೇಕಾದ ಹಣದಿಂದ ತುಂಬಿಕೊಳ್ಳಬೇಕಾಗುತ್ತದೆ; ಇಂತಹ ರೀತಿಯಿಂದ ಪಡೆದ ಅವನ ಸಮ್ಮತಿ ಪತ್ರದಿಂದ ಅವನು ಸಾಕಷ್ಟು ಧನ ಸಂಪಾದನೆಯನ್ನು ಮಾಡಬೇಕಾದುದರಿಂದ ಅಧಿಕ ಸಂಗ್ರಹಮಾಡುವದು, ಹೆಚ್ಚು ಲಾಭದಿಂದ ಮಾರುವದು ಅಂದರೆ ಕಳ್ಳಪೇಟೆಯಲ್ಲಿ ವ್ಯಾಪಾರ ಮಾಡುವದು ಇಂತಹ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಹೀಗೆ ಧಾರಣೆಗಳು ಏರಲಿಕ್ಕೆ ಕಾರಣವಾಗಿ ಮೆಲ್ಲನೆ ಹೆಚ್ಚು ಹಣವು ಲಂಚವನ್ನು ಸ್ವೀಕರಿಸುವ ಅಧಿಕಾರಿ ಮತ್ತು ಲಂಚವನ್ನು ಕೊಡುವ ವ್ಯಾಪಾರಿ ಇವರ ಕೈಗಳನ್ನು ಸೇರುತ್ತದೆ. ಕಾಲಕ್ರಮವಾಗಿ ಮಧ್ಯಮ ವರ್ಗದ ವ್ಯಾಪಾರಿಗಳು ಮತ್ತು ಜನತೆ ಇಲ್ಲದಂತಾಗಿ ಮೊನ್ನೆಮೊನ್ನಿನ ವರೆಗಿನ ಚೀನದಂತೆ ಒಂದು ಶ್ರೀಮಂತ ಅಧಿಕಾರಿಗಳ ಹೊಸ ಗುಂಪು ಇನ್ನೊಂದು ಅವರ ಆಪ್ತ-ಇಷ್ಟರಾದ ವ್ಯಾಪಾರಿಗಳ ಪಂಗಡ ಹೀಗೆ ನಿರ್ಮಾಣವಾಗಿ ಇಡಿಯ ರಾಷ್ಟ್ರದಲ್ಲಿಯೆ ಬಡವ ಮತ್ತು ಶ್ರೀಮಂತ ಎಂಬ ಉಗ್ರಭೇದಗಳುಂಟಾಗಿ ಹಿಂಸಾಮಯ ಕ್ರಾಂತಿಗೆ ಅದು ಅವಕಾಶವನ್ನು ಕಲ್ಪಿಸಿ ಕೊಡುತ್ತದೆ. ಇದು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಎಷ್ಟು ಆತ್ಮವಂಚಕವಾದುದು ಎಂಬುದನ್ನು ನಾವು ಬೇಗನೆ ಅರಿತಷ್ಟು ಒಳ್ಳೆಯದು.

ಇನ್ನು ಕೊನೆಯದಾಗಿ ಅಕ್ಷಮತೆ (Inefficiency) ಯನ್ನು ನೋಡಬಹುದು. ಇದೊಂದು ಸಾರ್ವತ್ರಿಕವಾಗಿ ಹರಡಿದ ಬೇನೆಯಾಗಿದೆ. ಸ್ವಾತಂತ್ರ್ಯಪ್ರಾಪ್ತಿಯ ಅನಂತರ ಇದರ ಕ್ಲೇಶವು ವಿಪರೀತವಾಗಿದೆ. ಇಡಿಯ ರಾಷ್ಟ್ರವನ್ನೆ ತನ್ನ ಹಿಡಿತದಲ್ಲಿ ಹಿಡಿದ ಈ ಬೇನೆಯು ಬೆಳೆಯಿತೆಂದರೆ–ನಮ್ಮ ಆರ್ಥಿಕ ಮತ್ತು ಸಾಮಾಜಿಕ ಗುರಿಗಳನ್ನು ಪಡೆಯುವ ದೊತ್ತಟ್ಟಿಗಿರಲಿ—ನಾವು ನಮ್ಮ ರಾಜಕೀಯ ಸ್ವಾತಂತ್ರ್ಯವೆಂಬ ಆಯುಧವನ್ನು ಕೂಡ ಕಳೆದುಕೊಂಡು ಮತ್ತೆ ದಾಸರಾಗುವ ಸಮಯ ಬರಬಹುದು ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ಅಕ್ಷಮತೆಯ ರೋಗವು ಒಂದು ಅಂಶದಲ್ಲಿ ಮೊದಲನೆಯದಾದ ಸ್ವಜನಾರ್ಥಿಕತೆಯ ಪರಿಣಾಮವಾಗಿರುವದು. ತನ್ನವರು ಎಂಬ ಮೂಲಕಾರಣದಿಂದ ಸೇವೆಯಲ್ಲಿ ಸೇರಿಸಿಕೊಂಡವರು ಆ ಕಾರ್ಯದಲ್ಲಿ ಪರಿಣತರಾಗಲಿ, ಉತ್ಸಾಹವುಳ್ಳವರಾಗಲಿ ಎಲ್ಲ ಪ್ರಸಂಗಗಳಲ್ಲಿಯೂ ಇರದ ಕಾರಣ, ಆ ಕಾರ್ಯವನ್ನು ತತ್ಪರತೆಯಿಂದ ಮಾಡುವ ಬೇರೆ ಜನರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಅದರೂ ಪ್ರತಿಷ್ಠೆಯ ಸಲುವಾಗಿ ತನ್ನವರ ಹೆಸರಿನಲ್ಲಿ ಏನಾದರೂ ಕೆಲಸ
ಸಾಗುತ್ತದೆ ಎಂಬುದನ್ನು ತೋರಿಸಬೇಕಾಗುತ್ತದೆಯಲ್ಲ!
ತಹ ಪ್ರಸಂಗದಲ್ಲಿ ಕೆಲಸವನ್ನು ಉತ್ಸಾಹದಿಂದ ಮಾಡುವವ
ಸಾಕಷ್ಟು ಸಂಬಳವೂ ಇರುವದಿಲ್ಲ; ಹೊರಗೆ ಹೆಸರೂ ಬ
ದಿಲ್ಲ. ಹೀಗಾಗಿ ಅಲ್ಪ ಕಾಲದಲ್ಲಿಯೆ ಅವರಿಗೆ ಕೈಕೊ
ಕಾರ್ಯದಲ್ಲಿ ದಕ್ಷತೆಯಿದ್ದರೂ ಉತ್ಸಾಹ ಉಳಿಯದಂತ
ವದು. ಕೊನೆಗೆ ಉಚ್ಚ ಸ್ಥಾನದಲ್ಲಿದ್ದ ಸ್ವಜನರಿಗೆ
ಕಾರ್ಯದಲ್ಲಿ ಪರಿಣತಿಯಿರುವಂತಿಲ್ಲ, ಪರಿಣತಿಯಿದ್ದವ
ಉತ್ಸಾಹವಿರುವದಿಲ್ಲ, ಹೀಗಾಗಿ ಒಟ್ಟಿನಲ್ಲಿ ಆಗಬೇಕ
ಕಾರ್ಯವು ಸರಿಯಾಗಿ ಆಗುವದಿಲ್ಲ; ಸೋವಿಯಾಗುವ
ಮತ್ತು ಶೀಘ್ರವಾಗುವದಿಲ್ಲ. ಇದೆಲ್ಲ ಅಕ್ಷಮತೆಯಲ್ಲದಿ
ಮತ್ತೇನು? ಆದರೆ ಅಕ್ಷಮತೆಯು ಕೇವಲ ಇದೊಂ
ಪ್ರಕಾರದಲ್ಲಿ ಕಾಣುತ್ತಿರದೆ ಅದು ಎಲ್ಲ ಪಂಗಡಗಳಲ್ಲಿಯ
ಎಲ್ಲ ಕ್ಷೇತ್ರಗಳಲ್ಲಿಯೂ ಹಬ್ಬಿದೆ. ಸ್ವಾತಂತ್ರ್ಯದ ಅನಂ
ಅದು ತೀರ ಭಯಾನಕವಾದ ರೂಪವನ್ನು ತಳೆದಿದೆ ಎಂ
ಬಹುದು. ಕೂಲಿಕಾರರು, ಕಾರಕೂನರು, ಶಿಕ್ಷಕರು,
ಕಾರಿಗಳು, ಸೇವಕರು, ಎಲ್ಲರೂ ಒಂದಿಲ್ಲೊಂದು ರೀತಿಯ
ಕೆಲವು ಅತೃಪ್ತಿಗಳ ಮೂಲಕವಾಗಿಯೊ, ಅಜ್ಞಾನದ ಮೂ
ವಾಗಿಯೊ ತಮ್ಮಿಂದ ಆಗುವಷ್ಟು ಕಾರ್ಯವನ್ನು ಸ
ವಾದಷ್ಟು ಬೇಗನೆ ಮಾಡುವ ಪದ್ಧತಿಯು ಮಾಯವಾಗಿ
ಇದರ ಕಾರಣ ಏನೇ ಇರಲಿ; ಇದರ ಪರಿಣಾಮವು ಮಾ
ತೀರ ವ್ಯಾಪಕವಾಗವದು; ಘಾತಕವಾಗುವದು.
ರಾಷ್ಟ್ರವು ಅತ್ಯುತ್ತಮವಾದ ಪರಂಪರೆಯಲ್ಲಿ ಸಾಗಿದ್ದ
ಈ ಕಾರಣಗಳ ಮೂಲಕ ಕ್ರಾಂತಿಯನ್ನು ಸ್ವಾಗ
ಬೇಕಾಯಿತು.

ಈ ಮೂರು ಬೇನೆಗಳು ನಮ್ಮ ರಾಷ್ಟ್ರವನ್ನು
ಬಿಗಿಯಾಗಿ ಮುತ್ತಿವೆ; ಸೆರೆ ಹಿಡಿದಿವೆ. ಒಂದೊಂದಾಗಿ
ವಾತ, ಪಿತ್ತ, ಕಫಗಳು ಸಾಕಷ್ಟು ತೊಂದರೆಯನ್ನು ಕೊ
ತ್ತಿದ್ದಾಗ್ಗೆ, ಮೂರು ರೋಗಗಳೂ ಒಬ್ಬನನ್ನು ಅಂಟಿಕೊಂ
ಆಗುವ ಅವನ ಸ್ಥಿತಿಯಂತೆ ನಮ್ಮ ನಾಡಿನ ಗತಿಯ
ಬಹುದು. ಸ್ವಜನಾರ್ಥಿಕತೆಯು ಹೃದಯ ವಿಕಾರದ
ಮತ್ತು ಭ್ರಷ್ಟತೆಯು ಸಂಧಿವಾಯುವಿನಂತೆ ಇದ್ದು ರೋ
ಯನ್ನು ಅವು ಹಣ್ಣು ಮಾಡಿದರೂ, ಜೀವದಿಂದ ಉಳಿಯ
ಅವುಗಳಿಗೆ ಉಪಾಯವಿರುತ್ತದೆ. ಆದರೆ ಕ್ಷಯ ರೋಗ
ತಿರುವ ಈ ಅಕ್ಷಮತೆಯು ಒಮ್ಮೆ ಅಂಟಿತೆಂದರೆ ಸಾವ
ವಾಗಿ ಆ ದೇಹದೊಡನೆಯೆ ಅದರ ಮುಕ್ತಿಯಾಗಬಹುದು
ನಮ್ಮ ರಾಷ್ಟ್ರದಲ್ಲಿ ಇನ್ನೂ ಪರಿಸ್ಥಿತಿಯು ಅಷ್ಟು ಹದಗೆಟ್ಟ
ಅಂತೆಯೆ ಮುಂಜಾಗ್ರತೆಯಿಂದ ನಾವು ಮುಂದೆ ಸಾಗಿ
ಗಳಿಸಿದ ಸ್ವಾತಂತ್ರ್ಯವು ಸಾರ್ಥಕವಾಗಬಹುದು.

——=*=——

ವಿಜ್ಞಾನ ಹಾಗು ನಾಗರಿಕತೆಯ ಬೆಳವಣಿಗೆ*

[ಲೇ:—ಪ್ರೊ| ಕೆ. ಎಸ್. ಸವಣೂರ, ಎಮ್.ಎಸ್.ಸಿ., ಕರ್ನಾಟಕ ಕಾಲೇಜ, ಧಾರವಾಡ.]

ಪ್ರಾಸ್ತಾವಿಕ: ಮಾನವ ಜನಾಂಗದ ನಾಗರಿಕತೆಯು ಸಾಧಾರಣವಾಗಿ ೧೦ ಲಕ್ಷ ವರುಷಗಳಿಂದ ಪ್ರಾರಂಭವಾಗಿ, ನಾವು ಇಂದು ಕಾಣಲಿರುವ ಸ್ಥಿತಿಯಲ್ಲಿ ಇದೆ ಎಂದು ಹೇಳುವವರು ಅನೇಕರಿದ್ದಾರೆ. ಇಂತಹ ನಾಗರಿಕತೆಯು ಪ್ರಾರಂಭದ ದೆಶೆಯಲ್ಲಿ ಹೇಗಿದ್ದಿತು ಹಾಗು ಅದು ಕ್ರಮೇಣ ಹೇಗೆ ಬದಲಿಸುತ್ತ ಸಾಗಿತು ಇವುಗಳ ಇತಿಹಾಸವನ್ನು ಕೂಡ ನಾವು ತಿಳಿದವರಾಗಿದ್ದೇವೆ. ಇಂತಹ ಇತಿಹಾಸದ ನಿರ್ಮಿತಿಗೆ ಮುಖ್ಯವಾದ ಹಾಗು ಮುಂದೆ ವಿವರಿತವಾದ ಮೂರು ದಿಶೆಗಳಲ್ಲಿಯ ಸಂಶೋಧನೆಗಳೇ ಕಾರಣವೆಂದು ಹೇಳಬಹುದು. ಈಗಾಗಲೇ ನಿರ್ಮೂಲವಾದ ನಾಗರಿಕತೆ ಹಾಗು ಸಂಸ್ಕೃತಿಗಳ ಸಂಶೋಧನೆ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಈಗಲೂ ಕಾಡುಸ್ಥಿತಿಯಲ್ಲಿ ವಾಸಿಸಲಿರುವ ಜನರ ಜೀವನದ ರೀತಿ-ನೀತಿಗಳ ಪರೀಕ್ಷಣೆ ಹಾಗು ಮಾನವ ಸ್ವಭಾವದ ಸೂಕ್ಷ್ಮಾವಲೋಕನೆ ಇವುಗಳೇ– ಇಂತಹ ಕಾರ್ಯದ ಮೂರು ದಿಶೆಗಳೆಂದು ವಿವರಿಸಲ್ಪಡಬಹುದಾಗಿವೆ. ಈ ಪ್ರಕಾರವಾಗಿ ದೊರಕಿಸಿದ ಜ್ಞಾನವು, ಲಕ್ಷಾವಧಿ ವರುಷಗಳಿಂದ ನಾಗರಿಕತೆಯು ಹೇಗೆ ಮಾರ್ಪಾಟನ್ನು ಹೊಂದಿ ಇಂದಿನ ಮಟ್ಟವನ್ನು ಮುಟ್ಟಿದೆ ಎಂಬುದರ ವಿವರಗಳನ್ನೂ ಹಾಗು ಅದೇ ಪ್ರಕಾರವಾಗಿ ಅದು ಮುಂದೆ ಯಾವ ಮಾರ್ಗವನ್ನು ಅನುಸರಿಸಬಹುದು ಎಂಬುದನ್ನೂ ಊಹಿಸಲು ಕಾರಣವಾಗಿದೆ. ಇಷ್ಟೇ ಅಲ್ಲದೆ ನಾವು ಈ ವರೆಗೆ ದೊರಕಿಸಿದ ಜ್ಞಾನದ ಹಿನ್ನೆಲೆಯಲ್ಲಿ ಮುಂದೆ ಬರಲಿರುವ ನಾಗರಿಕತೆಯ ರೂಪರೇಖೆಗಳನ್ನೂ ಕೂಡ ಅನುಮಾನದಿಂದ ತಿಳಿಯಬಹುದಾಗಿದೆ. ಮುಂದೆ ವಿಶದವಾಗಿ ವಿವರಿಸಲ್ಪಟ್ಟಂತೆ—ವಿಜ್ಞಾನವು ನಿಸರ್ಗದಿಂದ ದೋಚಿಕೊಟ್ಟ ಶಕ್ತಿಯೆ ನಾಗರಿಕತೆಯ ಬೆಳವಣಿಗೆಗೆ ಕಾರಣವೆಂದು ಕಂಡುಬರುವದು. ಇಂತಹ ನಾಗರಿಕತೆಯನ್ನು ಜೀರ್ಣಿಸಿಕೊಳ್ಳುವ ಪರಿಸ್ಥಿತಿಯು ನಿರ್ಮಾಣವಾಗುವದರಲ್ಲಿಯೇ ವಿಜ್ಞಾನಿಯು ನಿಸರ್ಗದಿಂದ ಅಕ್ಷಯವಾದ ಹಾಗು ಪ್ರಚಂಡವಾದ ಅಣುಶಕ್ತಿಯನ್ನೇ ಕಿತ್ತುಕೊಂಡು, ಮಾನವ ಜನಾಂಗಕ್ಕೆ ಕುಬೇರನ ಭಾಂಡಾರವನ್ನು ಮೀರಿಸುವಂತಹ ಸಂಪತ್ತನ್ನು ಕೊಡಮಾಡಿದ್ದಾನೆ; ಕಾರಣ ಮುಂಬರುವ ನಾಗರಿಕತೆಯ ರೂಪರೇಖೆಗಳನ್ನು ತಿಳಿದು ವಿವೇಕದಿಂದ ವರ್ತಿಸಿದಲ್ಲಿ ಸುಖವೂ ಹಾಗು ದುರಾಶೆಯಿಂದ ವರ್ತಿಸಿದಲ್ಲಿ ನಾಗರಿಕತೆಯನ್ನೊಳಗೊಂಡ ನಾಗರಿಕನೇ ನಿರ್ನಾಮವಾಗುವ ಪರಿಸ್ಥಿತಿಯೂ ಉಂಟಾಗಲಿವೆ ಎಂಬ ವಿಷಯಗಳು ಈ ಲೇಖದಲ್ಲಿ ಪ್ರತಿಪಾದಿತವಾಗಿವೆ.

ಮಾನವ ಜೀವನದ ಹೋರಾಟ: ಮಾನವನ ಭೂಮಿಯ ಮೇಲಿನ ಇರವನ್ನು ಒಂದು ಹೋರಾಟವೆಂದು ವರ್ಣಿಸಬಹುದು. ಒಂದು ಬದಿಗೆ ಸುತ್ತಲಿನ ನೈಸರ್ಗಿಕ ಪರಿಸ್ಥಿತಿಯೊಡನೆ, ಬೇರೆಡೆಗೆ ತಮ್ಮ ತಮ್ಮೊಳಗೆ— ಎಂದರೆ ಬೇರೆ ಬೇರೆ ಜಾತಿಯ ಜನತೆಯೊಂದಿಗೆ, ರಾಷ್ಟ್ರಗಳೊಂದಿಗೆ ಈ ಪ್ರಕಾರವಾಗಿ ಮಾನವನ ಹೋರಾಟವನ್ನು ಸ್ವಲ್ಪದರಲ್ಲಿಯೆ ವಿವರಿಸಬಹುದು. ತನ್ನ ಪರಂಪರೆಯನ್ನು ಕಾಯ್ದುಕೊಂಡು ಹೋಗಬೇಕೆಂಬ ಘನವಾದ ಉದ್ದೇಶದಿಂದ ಪ್ರೇರಿತವಾದ ಹೋರಾಟವು ಅನಿವಾರ್ಯವಿದೆ; ಆದರೆ ಇಂದು ಈ ಉದ್ದೇಶವೇ ಹಿಂದೆ ಬಿದ್ದು, ಹೋರಾಟವು ಸ್ವಾರ್ಥದಲ್ಲಿ ಜನಿಸಿದಂತಹದು ಇದೆ ಎಂದು ಕಂಡುಬರುವುದಲ್ಲದೆ, ನಾಗರಿಕತೆ ಅಥವಾ ಸಂಸ್ಕೃತಿಯೇ ಇಂತಹ ಹೋರಾಟವನ್ನು ಮುಂದುವರಿಸುವ ಸಾಧನವಾಗಿ ಪರಿಣಮಿಸಿದೆ.

ಇನ್ನು ಸಂಸ್ಕೃತಿಯೆಂದರೆ ಏನು ಮತ್ತು ಅದು ಯಾವ ಯಾವ ವಿಷಯಗಳನ್ನು ಒಳಗೊಂಡಿದೆ ಎಂಬುದನ್ನು ತಿಳಿ

---

* ಲೆಸ್ಲಿ ಎ. ವ್ಹೈಟ್ ಅವರು ಬರೆದ Energy and the Development of Science ಎಂಬ ಲೇಖದಿಂದ ಅನೇಕ ಮಹತ್ವದ ವಿಚಾರಗಳನ್ನು ಆಯ್ದುಕೊಂಡು ಈ ಲೇಖದಲ್ಲಿ ಉಪಯೋಗಿಸಿದ್ದೇನೆ. ಈ ಲೇಖದ ಬಹುಭಾಗದ ಶ್ರೇಯಸ್ಸು ಅವರದೇ.—ಲೇ.

ಯುವಾ. ಇದು ಒಳಗೊಂಡ ವಿಷಯಗಳಲ್ಲಿ— ಉಪಕರಣಗಳು, ಶಸ್ತ್ರಾಸ್ತ್ರಗಳು, ಸಾಂಪ್ರದಾಯಗಳು, ವಿಧಿನಿಯಮಗಳು, ಆಚಾರವಿಚಾರಗಳು, ಕಲೆ, ವಿಜ್ಞಾನ, ತತ್ವಜ್ಞಾನ, ಧರ್ಮ ಇತ್ಯಾದಿಗಳು, ಪ್ರಾಮುಖ್ಯವಾದವುಗಳು ಸಂಸ್ಕೃತಿಯ ಮುಖ್ಯ ಗುಣವೆಂದರೆ—ಅದರ ಪರಂಪರೆಯು. ಹಿಂದಿನ ಪೀಳಿಗೆಯ ಸಂಸ್ಕೃತಿಯು ಮುಂದಿನದನ್ನು, ಅದು ಅದರ ಮುಂದಿನದನ್ನು ಹೀಗೆ ಸಂಸ್ಕೃತಿಯು ಏಕಪ್ರವಾಹವಾಗಿ ಹಲವು ನಿಯಮಗಳಿಗೆ ಒಳಪಟ್ಟು ಮುಂದುವರಿಯಲಿದೆಯಲ್ಲದೆ ಬೆಳೆಯಲೂ ತೊಡಗಿದೆ. ಇದರ ಬೆಳವಣಿಗೆಯ ನಿಯಮಗಳನ್ನು ಪರಿಶೀಲಿಸಿದಲ್ಲಿ—ಈ ಬೆಳವಣಿಗೆಯು ಪ್ರಾಮುಖ್ಯವಾಗಿ **ಶಕ್ತಿಯನ್ನು** ಅವಲಂಬಿಸಿದುದು ಎಂದು ತಿಳಿದುಬರುವದು.

ನಾಗರಿಕತೆ ಹಾಗು ಶಕ್ತಿ: ನಮ್ಮೆಲ್ಲರಿಗೆ ಹಾಗು ಪ್ರಾಣವಿದ್ದ ಎಲ್ಲ ಜೀವಿಗಳಿಗೆ ಬದುಕಲು ಶಕ್ತಿಯು ಬೇಕೇ ಬೇಕು. ನಾವು ತಿನ್ನುವ ಆಹಾರವು ಶಕ್ತಿಯಿದ್ದು, ನಿಸರ್ಗದಿಂದ ಕಟ್ಟಿಗೆ, ಕಲ್ಲಿದ್ದಲು, ಪೆಟ್ರೋಲ್ ಇತ್ಯಾದಿಗಳನ್ನು ದೊರಕಿಸಿ ಉಪಯೋಗಿಸುವುದನ್ನು ಶಕ್ತಿಯ ಒಂದು ತೆರದ ನಿಯಂತ್ರಣವೆಂದೇ ಹೇಳಬಹುದು. ನಾವು ಉಪಯೋಗಿಸಲಿರುವ ಎಲ್ಲ ತೆರದ ಶಕ್ತಿಗಳ ಉಗಮವೆಂದರೆ ನಿಸರ್ಗವೇ. ನಿಸರ್ಗವು ಭಿನ್ನ ಭಿನ್ನ ವಸ್ತುಗಳಲ್ಲಿ ಸಂಚಯಿಸಿ ಇರಿಸಿದ ಶಕ್ತಿಯನ್ನು ನಮಗೆ ಸರಿ ಕಂಡ ರೀತಿಯಲ್ಲಿ ಉಪಯೋಗಿಸುವ ಕಾರ್ಯವು ಮಾತ್ರ ನಮ್ಮದು. ಈ ಕಾರ್ಯವನ್ನು ಸಾ... ವಲ್ಲಿ ಸಂಸ್ಕೃತಿಯ ನೆರವನ್ನು ನಮಗೆ ಕೋರಲೇ ಬೇ... ವುವಲ್ಲದೆ, ಭಿನ್ನ ಸಂಸ್ಕೃತಿಯ ಜನರು ಶಕ್ತಿ ನಿಯಂತ್ರಣ... ಸಾಧಿಸಲಿರುವ ರೀತಿಗಳಾದರೂ ಭಿನ್ನವಿವೆ. ನಿಸರ್ಗ... ಕಾರ್ಯಮಾಡಿಸಿ ಅದು ಸಂಗ್ರಹಿಸಿದ ಶಕ್ತಿಯನ್ನು ಪ... ಅದು ನಮ್ಮಿಂದ ಬಚ್ಚಿಟ್ಟ ಶಕ್ತಿಯನ್ನು ಉಪಯೋಗಿ... ಹಾಗು ಉಪಭೋಗಿಸಲು, ಅನೇಕ ತೆರದ ಉಪಕರಣಗ... ಶಸ್ತ್ರಾಸ್ತ್ರಗಳು, ಸಮಾಜ ರಚನೆ, ಜ್ಞಾನ ಇವೆಲ್ಲವು... ನಮಗೆ ಸಹಕಾರಿಯಾಗಿವೆ. ಈ ಎಲ್ಲ ಮಾತುಗಳ... ಕ್ರೋಢೀಕರಿಸಿ ವಿಚಾರಮಾಡಿದಲ್ಲಿ, ಹೆಚ್ಚು ಶಕ್ತಿಯ... ಉತ್ಪಾದಿಸಿ ಅದನ್ನು ಬಳಿಯಿಸಲಿರುವ ಜನಾಂಗವು ಹೆ... ಸುಸಂಸ್ಕೃತವೆನಿಸುವದು ಎಂದಂತಾಯಿತು. ತಲಾ ಕ... ಶಕ್ತಿಯನ್ನು ಉಪಯೋಗಿಸಲಿರುವ ಜನಾಂಗವು ಕಾಡು... ಯಲ್ಲಿಯ ಜನತೆಯನ್ನೇ ಹೋಲುತ್ತಿದ್ದರೆ, ಹೆಚ್ಚು ಶಕ್ತಿ... ಉಪಯೋಗವು ಆ ಜನಾಂಗದ ಹೆಚ್ಚಿನ ಸಂಸ್ಕೃ... ಕಾರಣವಾಗುವದು.

ಮಾನವ ಜನಾಂಗದ ಇತಿಹಾಸವನ್ನು ನಾಗರಿಕತೆ... ಹಾಗು ಅದು ಬೆಳೆಯಲು ಉಪಯೋಗಿಸಲಿರುವ ಶಕ್ತಿ... ಎಂದರೆ ಇವೆರಡರ ಹಿನ್ನೆಲೆಯಲ್ಲಿ ವಿವೇಚಿಸಿದಲ್ಲಿ, ಇವೆರ... ಕೂಡಿಯೆ ಮುಂದುವರಿಯಲಿವೆ ಎಂದು ಕಂಡುಬರುವ...

ಹೀಗೆ ದೊರೆತ ಶಕ್ತಿಯು ಸಂಸ್ಕೃತಿಯ ಕಟ್ಟಡವನ್ನು ಕಟ್ಟು ವಲ್ಲಿ ಹಾಗು ಅದನ್ನು ಹೆಚ್ಚೆಚ್ಚು ಸುಂದರವಾಗಿ ಮಾಡುವಲ್ಲಿ ಉಪಯೋಗವಾಗಲಿದೆ. ಇದುವೆ ಸಂಸ್ಕೃತಿಯ ಬೆಳವಣಿ ಗೆಯ ಮುಖ್ಯ ನಿಯಮವು.

ಸಂಸ್ಕೃತಿಯನ್ನು ಬೆಳೆಯಿಸಲು ಮನುಷ್ಯನು ಮೊದ ಲನೆಯದಾಗಿ ಉಪಯೋಗಿಸಿದ ಯಂತ್ರವೆಂದರೆ ತನ್ನ ದೇಹವೇ. ಈ ದೇಹವು ಉತ್ಪಾದಿಸಲಿರುವ ಶಕ್ತಿಯಿಂದಾಗಿ ಅವನಿಗೆ ತನ್ನ ಜೀವನದ ಮಾರ್ಗವನ್ನು ಕಂಡುಕೊಳ್ಳಬೇಕಾಯಿತು. ಧಾನ್ಯ ದವಸಗಳನ್ನು ಬೆಳೆಯುವದು ಗೊತ್ತಿಲ್ಲದಾಗ ಬೇಟೆಯಾಡಿ ತನ್ನ ಉಪಜೀವನವನ್ನು ಸಾಗಿಸಬೇಕಾಯಿತು. ಮನುಷ್ಯ ದೇಹವು ಮಾಡಲಿರುವ ಕಾರ್ಯಕ್ಕೆ ಒಂದು ಮಿತಿಯಿದೆಯಾದ್ದ ರಿಂದ ಅದು ಉತ್ಪಾದಿಸಲಿರುವ ಶಕ್ತಿಗೂ ಒಂದು ಮಿತಿಯಿದ್ದಂ ತಾಯಿತು. ರೋಗರುಜಿನಗಳು, ವಯಸ್ಸು ಇವುಗಳೂ ಕೂಡ ಶಕ್ತಿಯ ಪೂರ್ತಿಯಾದ ಉತ್ಪಾದನೆಗೆ ಅಡ್ಡಿ ತರುವಂತಹಗಳು. ಮೇಲಾಗಿ ಎಲ್ಲರೂ ಕೆಲಸಮಾಡುವ ಶಕ್ತಿಯುಳ್ಳವರಲ್ಲ. ಹೆಣ್ಣುಮಕ್ಕಳು, ಹುಡುಗರು, ಮುದುಕರು ಇವರೆಲ್ಲರೂ ಉತ್ಪಾದಿಸಲಿರುವ ಶಕ್ತಿಗೆ ಮಿತಿಯಿದ್ದು, ಈ ಎಲ್ಲ ಮಾತು ಗಳನ್ನು ಲಕ್ಷ್ಯದಲ್ಲಿರಿಸಿದರೆ, ಎಲ್ಲರೂ ತಲಾ ಉತ್ಪಾದಿಸಿ ಉಪ ಯೋಗಿಸಲಿರುವ ಶಕ್ತಿಯು ಅತ್ಯಲ್ಪವಿದ್ದಂತಾಯಿತು. ಹೀ ಗಾಗಿ ಮನುಷ್ಯನಿಗೆ ಸಂಸ್ಕೃತಿಯನ್ನು ಬೆಳೆಯಿಸಲು ಬೇಕಿ ರುವ ಹೆಚ್ಚಿನ ಶಕ್ತಿಯು ದೊರೆಯದಾಯಿತು. ಮುಂದೆ ಅವನು ಕ್ರಮೇಣ ಜಲಶಕ್ತಿ, ಪಶುಗಳ ಶಕ್ತಿ ಹಾಗು ಗಾಳಿ ಯಲ್ಲಿಯ ಶಕ್ತಿ ಇಂಥವುಗಳನ್ನು ಉಪಯೋಗಿಸುವಂತಾಗಿ ತನ್ನ ಸಂಸ್ಕೃತಿಯನ್ನು ಬೆಳೆಯಿಸಲು ಮೊದಲಿಗಿಂತಲೂ ಹೆಚ್ಚು ಶಕ್ತಿಯು ದೊರೆಯತೊಡಗಿತು. ಶಕ್ತಿಯನ್ನು ಉತ್ಪಾ ದಿಸುವ ಬೇರೆ ಮಾರ್ಗಗಳು ಸಿಗದಿದ್ದಲ್ಲಿ, ಮನುಷ್ಯನಿಗೆ ತಾನು ಮೊದಲಿದ್ದ ಕಾಡು ಸ್ಥಿತಿಯಿಂದ ಮುಂದುವರಿಯುವದು ಸಾಧ್ಯ ವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜನಿಸಿದ ನಾಗರಿಕತೆ ಯಾದರೂ ಕೆಳಮಟ್ಟದ್ದಾಗಿಯೆ ಇದ್ದಿತು ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವೇ ಇಲ್ಲ

ಸಾಕಿದ ಪ್ರಾಣಿಗಳ ಉಪಯೋಗದಿಂದಾಗಿ ಒಕ್ಕಲು ತನವು ತಲೆದೋರಿತು. ಬೇಟೆಯಾಡಿ ಉಪಜೀವಿಸುವುದು ಕಡಿಮೆಯಾಗತೊಡಗಿತು. ಹೆಚ್ಚಿನ ಶಕ್ತಿಯು ಹೆಚ್ಚಿನ ಸಂಸ್ಕೃ ತಿಗೆ ಮಾರ್ಗ ತೋರಿತು. ಜನಸಂಖ್ಯೆಯು ಬೆಳೆಯತೊಡ ಗಿತು. ಕಾಡು ನಾಡಾಗತೊಡಗಿತು. ಹಳ್ಳಿಗಳು ಪಟ್ಟಣಗಳಲ್ಲಿ, ಪಂಗಡಗಳು ರಾಷ್ಟ್ರ ಹಾಗು ಸಾಮ್ರಾಜ್ಯಗಳಲ್ಲಿ ಪರಿವರ್ತನ ಹೊಂದತೊಡಗಿದವು ಹೆಚ್ಚು ಶಕ್ತಿಯ ಮೂಲಕ ಒಕ್ಕಲು ತನವು ಹೆಚ್ಚೆಚ್ಚು ಫಲಪ್ರದವಾಗತೊಡಗಿತು ಹಾಗು ಈ ವ್ಯವಸಾಯದಲ್ಲಿ ತೊಡಗಿದ ಅನೇಕರಿಗೆ ಇದರಿಂದ ಬಿಡುವು ದೊರೆತು ಅವರ ಬುದ್ಧಿಮತ್ತೆಯು ಬೇರೆ ದಿಶೆಗಳಲ್ಲಿ ಉಪ ಯೋಗವಾಗತೊಡಗಿತು. ಕಲೆ, ಕೈಗಾರಿಕೆ ಹಾಗು ವೃತ್ತಿ [illegible] ಶಿಲ್ಪಶಾಸ್ತ್ರ, [illegible] [illegible] ತಾವವುಗಳು ಆ ಶಾಸ್ತ್ರಗಳಲ್ಲಿ ಕಾರ್ಯಮಾಡುವವರಿಂ ದಾಗಿ, ತೀವ್ರಗತಿಯಿಂದ ಸುಧಾರಿಸತೊಡಗಿದುವು. ಈ ವರೆಗೆ ವಿವರಿಸಿದ ಎಲ್ಲ ಮಾತುಗಳನ್ನು ಕ್ರೋಢೀಕರಿಸಿದಲ್ಲಿ— ನಾಗರಿಕತೆ ಹಾಗು ಸಂಸ್ಕೃತಿ ಇವುಗಳ ಬೆಳವಣಿಗೆಗಳಿಗೆ ಶಕ್ತಿಯೇ ಕಾರಣವೆಂಬ ನಮ್ಮ ನಿಲುವೆಯು ನಿಜವೆಂದು ಕಂಡುಬರುವದು.

ಸಂಸ್ಕೃತಿಯು ಇರಿಸಿದ ಮುಂದಿನ ಹೆಜ್ಜೆ: ಲಕ್ಷಾ ವಧಿ ವರುಷಗಳಿಂತ ಈ ಪ್ರಕಾರವಾಗಿ ಬೆಳೆದ ಸಂಸ್ಕೃತಿಗೆ ಮುಂದ ವರಿಯಲು ವಿಜ್ಞಾನದ ಸಹಾಯವನ್ನು ನೀಡಿತು. ಇಂತಹ ಸಹಾಯವು ಸಾಮಾನ್ಯವಾಗಿ ಕೇವಲ ನೂರಿನ್ನೂರು ವರುಷಗಳಿಂದ ದೊರೆಯತೊಡಗಿದೆ. ಸೂರ್ಯನಿಂದ ದೊರೆತ ಶಕ್ತಿಯನ್ನು ಉಪಯೋಗಿಸಿ ಜನ್ಮತಾಳಿದ ಕಲ್ಲಿದ್ದಲು, ಪೆಟ್ರೋಲ್ ಮುಂತಾದವುಗಳನ್ನು ಉಪಯೋಗಿಸಿ ಕಾರ್ಯಮಾಡಲಿರುವ ಯಂತ್ರಗಳು ಶೋಧಿಸಲ್ಪಟ್ಟವು ಈಗ ಮನುಷ್ಯನಿಗೆ ತನ್ನ ಶಕ್ತಿಯನ್ನು ಇಂತಹ ಯಂತ್ರಗಳನ್ನು ನಡೆಯಿಸಲು ಮಾತ್ರ ಉಪಯೋಗಿಸಬೇಕಾಯಿತು. ಈ ಯಂತ್ರಗಳು ಉಗಿ ಇಲ್ಲವೆ ವಿದ್ಯುತ್ತಿನ ಸಹಾಯದಿಂದ ಕಾರ್ಯಮಾಡುವಂತಹಗಳು. ಇವುಗಳಿಂದಾಗಿ ಮನುಷ್ಯನು ತಲಾ ಉಪಯೋಗಿಸಲಿರುವ ಶಕ್ತಿಯು ಅನೇಕ ರಾಷ್ಟ್ರಗಳಲ್ಲಿ ಮೊದಲಿನಿಂದ ೨೦ ೩೦ ಪಟ್ಟಿ ನಷ್ಟು ಹೆಚ್ಚಿತು. ಅದೇ ಪ್ರಮಾಣದಲ್ಲಿ ಸಂಸ್ಕೃತಿಯಾದರೂ ಮುಂದೆ ಮುಂದೆ ಓಡತೊಡಗಿತು. ಹೆಚ್ಚಿನ ಶಕ್ತಿಯು ಹೆಚ್ಚಿನ ಸೌಕರ್ಯ, ವೇಳೆಯ ಉಳಿತಾಯ, ಭಿನ್ನ ಭಿನ್ನ ಕಲೆಗಳಲ್ಲಿಯ ಪ್ರಗತಿ ಇತ್ಯಾದಿಗಳಿಗೆ ಕಾರಣವಾಗತೊಡಗಿದ್ದು—ಮಾನವ ಜನಾಂಗವು ಸಂಸ್ಕೃತಿಯ ನಿಚ್ಚಣಿಕೆಯನ್ನು ಭರದಿಂದ ಏರ ತೊಡಗಿದೆ.

ಇಂದು: ಈಗ ಮಾತ್ರ ಸಂಸ್ಕೃತಿಯು ತನ್ನ ಉತ್ಕ್ರಾಂ ತಿಯ ಕೊನೆಯ ಹಂತದಲ್ಲಿ ಬರತೊಡಗಿದೆ. ವಿಜ್ಞಾನಿಯು ಅಣುವಿನಲ್ಲಿ ಅಡಗಿದ ಅಕ್ಷಯವಾದ ಶಕ್ತಿಯನ್ನು ಹೊರಗೆಡ ಹುವ ರೀತಿಯನ್ನು ಕಂಡುಹಿಡಿದ್ದಾನೆ ಈ ಶಕ್ತಿಯು ನಮ್ಮ ನಾಗರಿಕತೆ ಹಾಗು ಸಂಸ್ಕೃತಿ ಇವುಗಳ ಮೇಲೆ ಯಾವ ಪರಿ ಣಾಮವನ್ನು ಉಂಟುಮಾಡಬಹುದು ಎಂಬುದನ್ನು ವಿಚಾರಿ ಸುವುದು ಕೂಡ ಕಠಿಣದ ಮಾತಾಗಿದೆ. ಸಂಸ್ಕೃತಿವಾಮ ನನು ತ್ರಿವಿಕ್ರಮನಾಗುವುದರಲ್ಲಿದ್ದಾನೆ. ನಾಗರಿಕತೆಯ ನಿಚ್ಚ ಣಿಕೆಯು ತ್ರಿವಿಕ್ರಮ ಸಂಸ್ಕೃತಿಯನ್ನು ಹೊರುವಷ್ಟು ಗಟ್ಟಿ ಯಾಗಲಿದೆಯೋ ಇಲ್ಲವೆ ಕುಸ್ಸರಿಸಲಿದೆಯೋ ಇದು ಸಹ ತಿಳಿಯದಂತಾಗಿದೆ.

ಸಾಮಾಜಿಕ ಪದ್ಧತಿಗಳು: ಈ ಸಂದರ್ಭದಲ್ಲಿ ಮಾನ

ವನ ಸಾಮಾಜಿಕ ಪದ್ಧತಿಗಳಾದರೂ ಹೇಗೆ ಬದಲಾವಣೆ ಗಳನ್ನು ಹೊಂದಿ ಇಂದಿನ ಸ್ಥಿತಿಯನ್ನು ಮುಟ್ಟಿವೆ ಎಂಬುದನ್ನೂ [illegible] ತಿಳಿಸಿ, ಈಗಿನ ಸಾಮಾಜಿಕ ಪದ್ಧತಿಗಳು ಹಾಗು ನಮ್ಮಲ್ಲಿ ಬದಲಾಗಲಿರುವ ಕಲಾಶಾಸ್ತ್ರ ಪದ್ಧತಿಗಳು ಕೂಡಿಯೇ ಮುಂದುವರಿಯಲಿವೆ ಎಂಬುದನ್ನು ಲಕ್ಷ್ಯದಲ್ಲಿರಿಸಿದರೆ—ಸಾಮಾಜಿಕ ಪದ್ಧತಿಗಳು ಕೂಡಾ ನಾವು ತಲಾ ಉತ್ಪಾದಿಸಲಿರುವ ಶಕ್ತಿಯನ್ನು ಅವಲಂಬಿಸಿವೆ ಎಂದು ಕಂಡುಬರುವದು. ಬೇಟೆ ಹಾಗು ಗಿಡಬಳ್ಳಿಗಳಿಂದ ಜೀವನವನ್ನು ನಡೆಯಿಸಲಿರುವ ಸಾಮಾಜಿಕ ಜೀವನವು ಒಂದು ತೆರದ್ದಾಗಿರುವದು. ಅದೇ ಪ್ರಕಾರ ಒಕ್ಕಲುತನದಿಂದ ಇಲ್ಲವೆ ಔದ್ಯೋಗೀಕರಣದಿಂದ ಜೀವನವನ್ನು ನಡೆಯಿಸಲಿರುವವರ ಸಾಮಾಜಿಕ ಪದ್ಧತಿಗಳು ಕೂಡ ಭಿನ್ನವಾಗಿವೆ. ಸಾರಾಂಶ, ಸಾಮಾಜಿಕ ಪದ್ಧತಿಗಳ ರೂಪರೇಖೆಯು ನಾವು ತಲಾ ಉತ್ಪಾದಿಸಲಿರುವ ಶಕ್ತಿ, ನಿಸರ್ಗದಿಂದ ದೊರೆತ ಶಕ್ತಿಯನ್ನು ಉಪಯೋಗಿಸುವ ರೀತಿ ಹಾಗು ನಾವು ಉಳಿದ ಪದ್ಧತಿಗಳೊಡನೆ ಹೊಂದಿಕೊಳ್ಳುವ ಇಲ್ಲವೆ ದೂರಹೋಗಬೇಕೆನ್ನುವ ಸ್ಪರ್ಧೆ ಇತ್ಯಾದಿಗಳನ್ನು ಅವಲಂಬಿಸಿದೆ. ಜಗತ್ತಿನೊಳಗಿನ ಜನರು ನಡೆಯಿಸಲಿರುವ ಸಾಮಾಜಿಕ ಜೀವನವನ್ನು ಪರೀಕ್ಷಿಸಿದಲ್ಲಿ—ಮೂಲನಿವಾಸಿಗಳನ್ನು ಮೊದಲು ಮಾಡಿಕೊಂಡು ಅತ್ಯಾಧುನಿಕ ಜೀವನವನ್ನು ಸಾಗಿಸಲಿರುವ ಜನರನ್ನೂ ಸಹ ಕಾಣಬಹುದು. ಈ ಜನರ ಜೀವನವನ್ನು ಈ ಮೊದಲೇ ವಿವರಿಸಿದ ಹಿನ್ನೆಲೆಯಲ್ಲಿ ಪರೀಕ್ಷಿಸಿದಲ್ಲಿ ನಮ್ಮ ನಿಲುವೆಯ ಸತ್ಯತೆಯನ್ನು ಕಾಣಬಹುದು.

ಒಕ್ಕಲುತನವು ಸಾಮಾಜಿಕ ಹಾಗು ಔದ್ಯೋಗಿಕ ಕ್ರಾಂತಿಗಳೆರಡನ್ನೂ ಸಾಧಿಸಿದೆ. ಇದರಿಂದಾಗಿ ಮೂಲನಿವಾಸಿಗಳು ಹಾಗು ಅವರ ಗುಂಪುಗಳೂ ನಾಶಹೊಂದಿವೆಯಲ್ಲದೆ ನಾಗರಿಕ ಜೀವನ ಹಾಗು ರಾಜಕೀಯ ಪದ್ಧತಿ ಇವುಗಳು ಜನ್ಮತಾಳಿವೆ. ಇತ್ತೀಚೆಗೆ ಜನ್ಮತಾಳಿದ ಔದ್ಯೋಗೀಕರಣವು ಅನೇಕ ಸಾಮಾಜಿಕ ಬದಲಾವಣೆಗಳನ್ನು ತಂದೊಡ್ಡಿದೆ, ನಮ್ಮ ವಿಶಾಲವಾದ ಜಗತ್ತನ್ನು ಚಿಕ್ಕದನ್ನಾಗಿ ಮಾಡಿದೆ, ದೂರದ ಕಲ್ಪನೆಯನ್ನೇ ತೆಗೆದುಹಾಕಿದೆ, ಬೇರೆ ಬೇರೆ ಜನರ ಸಂಸ್ಕೃತಿಗಳನ್ನು ತಿಳಿದುಕೊಳ್ಳುವ ಮಾರ್ಗಗಳನ್ನು ಒದಗಿಸಿಕೊಟ್ಟಿದೆ ಹಾಗು ಸ್ವಲ್ಪದರಲ್ಲಿಯೆ ವಿವರಿಸುವುದಾದರೆ— ಭಿನ್ನ ಭಿನ್ನ ರಾಷ್ಟ್ರಗಳಲ್ಲಿ ವಾಸಿಸುವ ಜನರು ಅಣ್ಣತಮ್ಮಂದಿರಂತೆ ಇರುವ ವಾತಾವರಣವನ್ನೂ ಸಹ ಕಲ್ಪಿಸಿದೆ. ಔದ್ಯೋಗೀಕರಣವು ಎಂದರೆ ವಿಜ್ಞಾನವು ಕಲ್ಪಿಸಿಕೊಟ್ಟ ಸುಖವನ್ನು ಜೀರ್ಣಿಸುವಂತಹ ಮನೋಬುದ್ಧಿಯು ಹುಟ್ಟುವ ರೀತಿಯಲ್ಲಿ ಉಳಿದ ಸಾಮಾಜಿಕ ಶಾಸ್ತ್ರಗಳ ಬೆಳವಣಿಗೆಯು ಮಾತ್ರ ಆಗಿಲ್ಲವೆಂದು ಖೇದದಿಂದ ಹೇಳಬೇಕಾಗುವುದಲ್ಲದೆ, ಇದುವೆ ಇಂದಿನ ದುಃಸ್ಥಿತಿಯ ಕಾರಣವೆಂದೂ ಸಹ ಒಂದೇ ಮಾತಿನಲ್ಲಿ ಹೇಳಬಹುದು.

ಈ ಪರಿಗೆ ಆದಂತಹ ಔದ್ಯೋಗೀಕರಣವು ತನ್ನ ಯೋಗ್ಯ[illegible] ತಕ್ಕುದಾದ ಸಾಮಾಜಿಕ ಬದಲಾವಣೆಗಳನ್ನು ಪೂರ್ತಿಗೊಳಿ[illegible] ನದರೇ ಯೆ ನಾವು ಮತ್ತೊಂದು ಮಹಾಕ್ರಾಂತಿಗೆ ತಯಾರಾ[illegible] ಬೇಕಾಗಿದೆ. ಹಿಂದಿನ ಕ್ರಾಂತಿಗೆ ಕಲ್ಲಿದ್ದಲ, ಪೆಟ್ರೋ[illegible] ಮುಂತಾದ ನಿಸರ್ಗದ ಅಲ್ಪಶಕ್ತಿಗಳು ಕಾರಣವಾಗಿದ್ದರೆ [illegible] ಪ್ರಸಂಗದಲ್ಲಿ ಮಾತ್ರ ನಿಸರ್ಗದ ಶಕ್ತಿಭಾಂಡಾರವನ್ನೇ ವಿ[illegible] ನಿಯು ಒಡೆದಿದ್ದಾನೆ. ಈ ಶಕ್ತಿಯು ಪ್ರಚಂಡವೂ ಹಾ[illegible] ಅಕ್ಷಯವೂ ಇದ್ದು ಇಂತಹ ಅಣುಶಕ್ತಿಯನ್ನು ಮಾನ[illegible] ಜನಾಂಗವು ಹೇಗೆ ಅಳವಡಿಸಿಕೊಳ್ಳುವುದೋ ಹಾಗು ಎಂತ[illegible] ಸಾಮಾಜಿಕ ಬದಲಾವಣೆಗಳು ನಮ್ಮನ್ನು ಕಾಯ್ದಿವೆಯೆ[illegible] ಎಂಬುದನ್ನು ನೋಡಬೇಕಾಗಿದೆ. ಈ ಪ್ರಚಂಡ ಶಕ್ತಿ[illegible] ಮಾನವ ಜನಾಂಗಕ್ಕೆ ವರಪ್ರದವಾಗಲಿದೆಯೋ ಅಥವಾ ನಾ[illegible] ಕತೆಯನ್ನೇ ನಿರ್ಮಾಣಗೊಳಿಸಲಿದೆಯೋ ಎಂಬುದರ ಭವಿ[illegible] ವನ್ನು ಹೇಳುವವರಾರು? ಮುಂಬರುವ ವರುಷಗಳಲ್ಲಿ ಮಾ[illegible] ವನು ಇಚ್ಛಿಸಿದರೆ ಸುಖಸಮೃದ್ಧಿಗಳೆರಡೂ ಅವನ ಬಾಗಿಲಿನ[illegible] ನಿಂತಂತೆಯೆ ಎಂದು ತಿಳಿಯಬಹುದಾಗಿದೆ.

ಕೊನೆಯದಾಗಿ: ನಾವು ಈಗ ಒಂದು ಮುಖ್ಯವಾ[illegible] ಅತಿ ಮುಖ್ಯವಾದ ಪ್ರಶ್ನೆಯನ್ನು ಎದುರಿಸಿ ಕಾರ್ಯಪ್ರವೃ[illegible] ರಾಗುವ ಕಾಲವು ಸನ್ನಿಹಿತವಾಗಿದೆ. ನಿಸರ್ಗದತ್ತವಾದ [illegible] ಪ್ರಚಂಡ ಅಣುಶಕ್ತಿಯನ್ನು ನಾವು ಹೇಗೆ ಉಪಯೋಗಿ[illegible] ಲಿದ್ದೇವೆ ಎನ್ನುವುದೇ ಈ ಪ್ರಶ್ನೆಯು. ಎಂದರೆ ಈ ಪ್ರ[illegible] ಯನ್ನು ಬಿಡಿಸಲು ಮಾನವನ ಬಾಳಿನ ಹೋರಾಟದ ಎರ[illegible] ಬದಿಗಳನ್ನು ವಿಚಾರಿಸಬೇಕು ಎಂದಂತಾಯಿತು. ಒಂ[illegible] ಬದಿಗೆ ನಿಸರ್ಗದೊಡನೆ ಹೋರಾಡಿ ನಿಸರ್ಗದ ಶಕ್ತಿಗಳನ[illegible] ತನ್ನ ಅಂಕೆಯಲ್ಲಿ ಇರಿಸಬೇಕು ಹಾಗು ಅವುಗಳನ್ನು ಉ[illegible] ಭೋಗಿಸಬೇಕು ಎಂದು ಪ್ರಯತ್ನಿಸುತ್ತಿದ್ದರೆ, ಬೇರೆಡೆಗೆ [illegible] ಶಕ್ತಿಸಂಪತ್ತನ್ನು ತಾನೊಬ್ಬನೇ ಉಪಭೋಗಿಸುವಂತಿ[illegible] ಬೇಕು ಹಾಗು ತನ್ನ ಬಾಂಧವರಿಗೆ ಇದನ್ನು ಕೊಡಬಾರ[illegible] ಎಂಬ ಹೋರಾಟವಾದರೂ ನಡೆದಿದೆ. ಇಂತಹ ಸ್ವಾರ್ಥಬು[illegible] ಯನ್ನು ಇರಿಸಿದಂತಹ ಬಹು ಜನರಿದ್ದ ನಮ್ಮ ಜಗತ್ತಿನ ರ[illegible] ಭೂಮಿಯ ಮೇಲೆ ಇಂದು ಅಣುಶಕ್ತಿಯ ನಾಟಕವು ಅ[illegible] ನಯಿಸಲ್ಪಡಲಿದೆ. ಯುದ್ಧಾಸಕ್ತವಾದ ರಾಷ್ಟ್ರಗಳು ಅ[illegible] ಶಕ್ತಿಯನ್ನು ಮೊರೆಹೊಕ್ಕರೆ ಹಲವೇ ವರುಷಗಳಲ್ಲಿ ಮುಂ[illegible] ವರಿದ ರಾಷ್ಟ್ರಗಳು ಮೊದಲಿನ ಕಾಡುಸ್ಥಿತಿಗೆ ತಿರುಗುವಂತಾ[illegible] ವದು ಅಸಾಧ್ಯವಲ್ಲವೆಂದು ವಿಜ್ಞಾನಿಗಳ ಅಭಿಪ್ರಾಯವಿ[illegible] ಸಾಮಾಜಿಕ ಉತ್ಕ್ರಾಂತಿಯು ಆದರೆ ಮಾತ್ರ ಈ ದುರಂತ[illegible] ತಪ್ಪಲು ಸಾಧ್ಯ. ವೈಜ್ಞಾನಿಕ ಸುಖಸೌಕರ್ಯಗಳನ[illegible] ಹಾಗು ಈ ಕಾರಣದಿಂದ ಬೆಳೆದ ನಾಗರಿಕತೆಯನ್ನೂ ಅರಗಿ[illegible] ವಂತಹ ಮನೋವೃತ್ತಿಯನ್ನು ಮಾನವನು ಬೆಳೆಯಿಸ[illegible] ನೆಂದು ಹಾರೈಸೋಣವೇ? ಮನುಷ್ಯನು ಬೇರೆ ತನ್ನ ಜ್ಞಾ[illegible]

ಹಿಂದಿನ—ಇಂದಿನ ಸುಡಾನು

[ಲೇಖಕರು: ಶ್ರೀ ಕೆ. ವಾಸುದೇವ ಕಿಣಿ, ಬಿ.ಎ., ಎಲ್.ಟಿ.]

ಇತ್ತೀಚೆಗೆ ಮಧ್ಯಪ್ರಾಚ್ಯ ಪ್ರದೇಶವು ಜಗತ್ತಿನ ದೃಷ್ಟಿಯನ್ನು ತನ್ನ ಕಡೆಗೆ ಸೆಳೆಯುತ್ತಿದೆ. ಇರಾನ್ ಇಸ್ರೇಯಲ್, ಸೀರಿಯಾ-ಜೋರ್ಡನ್ ರಾಜ್ಯಗಳಲ್ಲಿ ರಾಜಕೀಯ ಅಶಾಂತಿಯು ನೆಲೆದಿದೆ. ಈಗ ಉತ್ತರ ಆಫ್ರಿಕದ ಮೊರಕ್ಕೊ, ಲೀಬಿಯಾ, ಈಜಿಪ್ಟ್, ಸುಡಾನ್ ಎಂಬ ರಾಜ್ಯಗಳಲ್ಲಿ ಭೀಕರವಾದ ಒಂದು ರಾಜಕೀಯ ಪ್ರವಾಹವು ಆರಂಭಿಸಿದೆ. ಪಾಶ್ಚಾತ್ಯ ರಾಷ್ಟ್ರಗಳು ಈಪ್ರದೇಶದಲ್ಲಿ ರಷ್ಯದ ಪ್ರಭಾವವನ್ನೂ ಪ್ರತಾಪವನ್ನೂ ತಡೆಯಲು ರಕ್ಷಣಾ ಸೈನ್ಯಗಳಿಗೆ ನೆಲೆಮಾಡಬೇಕೆಂದು ಹವಣಿಸುತ್ತಿರುವಾಗ ಈ ತೊಂದರೆಗಳು ತಲೆ ಎತ್ತಿವೆ. ಬ್ರಿಟನು ಇಷ್ಟರ ತನಕ ಸುಡಾನು ರಾಜ್ಯವನ್ನು ಆಳುತ್ತಿದೆ. ಈ ರಾಜ್ಯವು ಅವರ ರಕ್ಷಣೆಯೊಳಗಾಗಿ ಸುಮಾರು ಐವತ್ತು ವರ್ಷಗಳು ದಾಟದವು. ಇಲ್ಲಿ ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕೆ ಜನಜಾಗ್ರತಿ ತೋರುತ್ತಿದೆ.

ಸುಡಾನು ರಾಜ್ಯವು ಈಜಿಪ್ಟ್ ದೇಶದ ದಕ್ಷಿಣಕ್ಕೆ ಸುಮಾರು ೨೨° ಉತ್ತರ ಅಕ್ಷಾಂಶದಿಂದ ೫° ಉತ್ತರ ಅಕ್ಷಾಂಶದ ವರೆಗೆ ಚಾಚಿಕೊಂಡಿದೆ. ಈ ರಾಜ್ಯವೆಲ್ಲಾ ಉಷ್ಣವಲಯದಲ್ಲಿದ್ದರೂ ಒಂದೊಂದು ಭಾಗದಲ್ಲಿ ಒಂದೊಂದು ತರದ ಹವಾಗುಣವನ್ನೂ ಸಸ್ಯಗಳನ್ನೂ ಜನರ ಕಸಬುಗಳನ್ನೂ ತೋರಿಸುತ್ತದೆ. ಈ ರಾಜ್ಯದ ವಿಸ್ತೀರ್ಣವು ಸಾಧಾರಣ ಒಂದು ಮಿಲಿಯ ಚದರ ಮೈಲುಗಳಾಗಿದೆ. ಈ ವಿಶಾಲ ರಾಜ್ಯದಲ್ಲಿ ಆರುವರೆ ಮಿಲಿಯ ಜನರು ವಿಚಿತ್ರ ರೀತಿಯಲ್ಲಿ ಜೀವನಮಾಡಿಕೊಂಡಿರುವರು. ಇಲ್ಲಿಯ ಜನರು ಸುಮಾರು ಇಪ್ಪತ್ತು ಜನಾಂಗಕ್ಕೆ ಸೇರಿರುವರು. ಸಾಧಾರಣ ಹನ್ನೆರಡು ಮತಕ್ಕೆ ಸೇರಿದವರಿರುವರು. ಇಲ್ಲಿಯ ಜನರಲ್ಲಿ ಸುಮಾರು ನೂರು ಪ್ರತ್ಯೇಕ ಭಾಷೆಗಳು ಪ್ರಚಾರದಲ್ಲಿವೆ.

ಇಲ್ಲಿಯ ಜನರ ಮೈಬಣ್ಣ, ರೂಪು, ಆಚಾರ, ಆಹಾರ, ಉಡಿಗೆ ತೊಡಿಗೆ ಅಸಹ್ಯವೂ ವಿಚಿತ್ರವೂ ಆಗಿವೆ. ಇವರಲ್ಲಿ ಆಧುನಿಕ ಜೀವನ ಕ್ರಮವು ಕೆಲವು ಕಡೆ ಹಬ್ಬಿದೆ. ಆದರೆ ಹೆಚ್ಚಿನ ಭಾಗಗಳಲ್ಲಿ ಅನಾಗರಿಕ ಪ್ರಾಚೀನ ಕ್ರಮಗಳೂ ಆಚಾರದಲ್ಲಿವೆ. ಕೆಲವು ಕಡೆ ಜನರು ರೆಫ್ರಿಜರೇಟರುಗಳಲ್ಲಿ ಆಹಾರವನ್ನು ಕೆಡದಂತೆ ಇಡುತ್ತಾರೆ. ಮೊರೊ ಗುಡ್ಡದ ನುಬಾ ಎಂಬ ನಿವಾಸಿಗಳು ತಮ್ಮ ಅನುನಿತ್ಯದ ದಿನವದಿ ಆಹಾರವಾದ ಹಿಟ್ಟು ಬೆಣ್ಣೆಗಳನ್ನು ತಮ್ಮ ತಲೆಯಲ್ಲಿ ಹೊತ್ತುಕೊಂಡು ತಲೆಕೂದಲಿನಲ್ಲಿ ರೊಟ್ಟಿಗಳನ್ನು ಮಾಡುವರಂತೆ.

ಉತ್ತರ ಸುಡಾನಿನಲ್ಲಿ ಅರಬಿ ಭಾಷೆಯಾಡುವ ಮುಸಲ್ಮಾನರಿರುವರು. ಇವರು ನೋಡಲು ಉತ್ತಮ ಲಕ್ಷಣಗಳುಳ್ಳವರಾಗಿ ನೆಟ್ಟಗೆ ನಿಲ್ಲುವ ಕೂದಲಿನ ಜನರಾಗಿರುವರು. ಇವರ ಮೈಬಣ್ಣವು ಹಳದಿ ಕಪ್ಪಾಗಿದೆ. ಇವರು ಆಧುನಿಕ ನಾಗರಿಕ ಜನರಾಗಿ ಪ್ರಗತಿ ಮಾರ್ಗದಲ್ಲಿರುವರು. ಸುಡಾನಿನ ರಾಜಧಾನಿಯಾದ ಖಾರ್ಟೂಮಿನಲ್ಲಿ ವೈದ್ಯಕೀಯ ಶಾಲೆಗಳಿವೆ. ಗೊರ್ಡನ್ ಕೊಲೇಜ್ ಇದೆ. ಬ್ರಿಟಿಷರು ಇತ್ತೀಚೆಗೆ ಇಲ್ಲಿಯ ಜನರಿಗೆ ರಾಜಕೀಯ ಮತ್ತು ಆಳುವ ವಿದ್ಯಾಭ್ಯಾಸವನ್ನು ಕೊಟ್ಟು ಅಲ್ಲಿಯ ಸರಕಾರದಲ್ಲಿ ಹೆಚ್ಚು ಭಾಗವನ್ನು ಅವರಿಗೆ ವಹಿಸಿ ಕೊಡುತ್ತಿರುವರು. ಇಲ್ಲಿಯ ಜನರಷ್ಟು ಪ್ರಗತಿಯನ್ನು ಉಳಿದ ಭಾಗದ ಜನರು ಪಡೆಯಲಿಲ್ಲ. ಈಶಾನ್ಯ ಸುಡಾನಿನಲ್ಲಿ ಅನಾಗರಿಕ ಹೆಡೆಂಡೋವಾ ಮತ್ತು ಫಜ್ಜಿ ವಜ್ಜಿ ಎಂಬ ಹೆಸರಿನ,-ಅಲೆದಾಡಿ ಜೀವಿಸುವ ಜನರಿರುವರು. ಫಜ್ಜಿ ವಜ್ಜಿ ಜನರ ತಲೆಗೆ ಕೂದಲಿನ ಒಂದು ಪ್ರಭಾವಳಿ ಇರುತ್ತದೆ. ಇವರು ತಮ್ಮ ಕೂದಲನ್ನು ಮಾಂಸದ ಚರ್ಬಿ ಹಾಕಿ ಬಾಚಿಕೊಂಡು ಮರದ ಚಮಚಗಳನ್ನು ತಮ್ಮ ಕೂದಲಲ್ಲಿ ತೂರಿ ಅಲಂಕಾರ ಮಾಡಿಕೊಳ್ಳುತ್ತಾರೆ. ಇವರು ಉನ್ನತ, ಕಪ್ಪು ದೇಹದವರು; ಉತ್ತಮ ಯೋಧರು: ಖಡ್ಗಗಳನ್ನು ತಮ್ಮ ಬೆನ್ನ ಮೇಲೆ ತೂಗಾಡಿಸಿ ಒಂಟೆ ಸವಾರಿ

ಯುವನನ್ನು ಕೊಲ್ಲುವಂತೆ ಮಾಡುವ ರಾಜಕೀಯ ಬೇಲಿಗಳು ಕಳಚುವಂತಾಗಿ—ನಾಗರಿಕತೆಗೆ ಪೋಷಕವಾಗುವಂತೆ ಅಣುಶಕ್ತಿಯನ್ನು ಉಪಯೋಗಿಸುವ ನಿಶ್ಚಯದಿಂದ ಎಲ್ಲರೂ ಮುಂದುವರಿಯಲಿ ಹಾಗು ಎಲ್ಲರೂ ಎಲ್ಲರ ಸುಖಕ್ಕಾಗಿ ಶ್ರಮಿಸಿ ಬದುಕುವಂತಾಗಲಿ ಎಂದು ಹಾರೈಸುವಾ.

ಮಾಡುವರು. ಇವರ ರಾಜಕೀಯ ಜೀವನದಲ್ಲಿ ಯಾರೂ ಪ್ರವೇಶಿಸಲು ಹೆದರುತ್ತಾರೆ.

ಪಶ್ಚಿಮ ಸುಡಾನಿನಲ್ಲಿ ಡೊಂಗಾಲಾವೀ ಎಂಬ ಪಂಗಡದವರಿರುವರು. ಇವರು ವ್ಯವಸಾಯದಿಂದ ಜೀವನಮಾಡುತ್ತಾರೆ. ಇವರಲ್ಲಿ ಹೆಚ್ಚಿನವರು ಮನೆ ಕೆಲಸಕ್ಕೆ ಆಳುಗಳಾಗಿ ಸೇರುತ್ತಾರೆ. ಉತ್ತರ ಸುಡಾನಿನಲ್ಲಿ ಹಲವರು ದನಕರುಗಳನ್ನೂ ಒಂಟೆಗಳನ್ನೂ ಸಾಕುತ್ತಾರೆ. ಅನೇಕ ಮಂದಿ ಈಗ ಹತ್ತಿಯನ್ನು ಬೆಳೆಸಿ ಜೀವಿಸುತ್ತಾರೆ. ಖಾರ್ಟೂಮಿನ ದಕ್ಷಿಣ ಪ್ರದೇಶದಲ್ಲಿ ಸೆನ್ನಾರ್ ಅಣೆಕಟ್ಟಿನ ನೀರಿನಿಂದ ಜನರು ಹತ್ತಿ ಮತ್ತು ಸವಣೆಯನ್ನು ಬೆಳೆಸಿ ಜೀವಿಸುತ್ತಾರೆ. ಮಧ್ಯ ಸುಡಾನಿನಲ್ಲಿ ನುಬಾ ಎಂಬ ಪಂಗಡದವರು ಜೀವಿಸುವರು. ಇವರೂ ಉತ್ತಮ ಯೋಧರು. ಬಿಳೀ ಜನಾಂಗ ಆಜನ್ಮ ಶತ್ರುಗಳಾಗಿರುವರು. ಇವರು ಆಧ್ಯಾತ್ಮಿಕ ವಿಚಾರಿಗಳಾಗಿ ಅವರ ಪುರೋಹಿತ ವರ್ಗದವರಲ್ಲಿ ಅಂಧಶ್ರಧ್ಧೆಯನ್ನೆ ತೋರಿಸುತ್ತಾರೆ. ಇವರು ಗಟ್ಟಿಮುಟ್ಟಿನ ಧೃಢಕಾಯರಾಗಿರುವರು. ಕುಸ್ತಿ ಪಂದ್ಯಾಟದಲ್ಲಿ ಅವರಿಗೆ ಅಭಿರುಚಿ ಹೆಚ್ಚು. ತಲೆ ಬೋಳಿಸಿ ಮೈಗೆಲ್ಲಾ ಚರ್ಬಿಯನ್ನು ಲೇಪಿಸಿ ಅವರು ಕುಸ್ತಿ ಪಂದ್ಯಾಟದಲ್ಲಿ ಕೈ ಹಾಕುತ್ತಾರೆ.

ದಕ್ಷಿಣ ಸುಡಾನಿನಲ್ಲೆಲ್ಲಾ ಜವುಗು ನೆಲ ಮತ್ತು ಕಾಡುಗಳೇ ತುಂಬಿವೆ. ಜನರೂ ಅನಾಗರಿಕರು. ಇಲ್ಲಿ ಸಿ... ಖಡ್ಗಮೃಗ, ಮತ್ತು ಆನೆಗಳು ಮನೆಮಾಡಿಕೊಂಡಿವೆ ... ಪ್ರದೇಶದಲ್ಲಿ ಸಂಚಾರಕ್ಕೆ ಅನಾನುಕೂಲತೆಗಳಿದ್ದುದರಿ... ಇಲ್ಲಿ ಯಾವ ಪ್ರಗತಿಯೂ ಕಾಣುವುದಿಲ್ಲ. ಬ್ರಿಟಿ... ಇಲ್ಲೊಂದು ನೀಲನದೀ ಕಾಲುವೆಯನ್ನು ಮಾಡಲು ಯೋ... ಮಾಡಿರುವರು. ಈ ಪ್ರದೇಶದಲ್ಲಿ ಮಂತ್ರ ಮೋಡಿ ಮ... ಮಾಡುವ ಅನೇಕ ಪಂಗಡದವರು ಇರುವರು. ಮನ... ಆಹಾರಿಗಳೂ ಇಲ್ಲಿ ಜೀವಿಸಿದ್ದರು. ಶಿಲ್ಲುಕ್ ಪಂಗಡದವ... ಮಾತ್ರ ಸ್ವಲ್ಪ ನಾಗರಿಕರಾಗಿರುವರು. ಈ ಪಂಗಡಕ್ಕೆ ಸೇ... ಜನರ ಕೈಯಲ್ಲಿ ಉದ್ದವಾದ ಈಟಿಗಳು ಯಾವಾಗಲೂ ಇ... ತ್ತವೆ. ಇವರು ಮಣಿ ಸರಕುಗಳನ್ನು ಧರಿಸಿ ಮೆರೆಯುತ್ತಾ... ಇವರು ವಿಚಿತ್ರ ಜನರು. ಇವರೆಲ್ಲಾ ತಮ್ಮ ಕೂದ... ಸೆಗಣಿಯನ್ನು ಮತ್ತು ಜೇಡಿಮಣ್ಣನ್ನು ಮಿಶ್ರಮಾಡಿ ... ವಿಧದ ರೂಪಗಳನ್ನು ಆ ಕೂದಲಿಗೆ ತರುತ್ತಾರೆ. ಹ... ಅಲಂಕರಿಸಿದ ಜಡೆಯನ್ನು ಹಾಳಾಗದಂತೆ ಇಡಲು ಅವ... ತಮ್ಮ ಕತ್ತುಗಳನ್ನು ಒಂದು ಮರದ ತುಂಡಿನ ಮೇಲಿ... ಮಲಗುತ್ತಾರೆ. ನೀಕ್‌ವಾಂಗ್ ಎಂಬುದು ಇವರ ಮ... ಹೆಸರು. ಡಿಂಕಾ ಪಂಗಡದವರೂ ಈ ಪ್ರಾಂತ್ಯದ ನಿವ... ಗಳು. ಇವರು ತಮ್ಮ ಮುಂದಿನ ನಾಲ್ಕು ಹಲ್ಲುಗಳ...

ತೆಗಿಸಿ ತಮ್ಮ ವಿಚಿತ್ರ ಭಾಷೆಯನ್ನಾಡುತ್ತಾರೆ. ಈ ಜನರಿಗೆ ತಮ್ಮ ದನಕರುಗಳೇ ಎಲ್ಲಾ ಸಂಪತ್ತು. ಇವರು ಒಂದು ಎತ್ತಿನ ಬಿಸಿ ರಕ್ತ ಸುರಿಸಿ ಅದನ್ನು ಕುಡಿದು ಸಂತೋಷಪಡುತ್ತಾರೆ. ನೂರ್ ಎಂಬ ಪಂಗಡದವರು ಕಾಡುಜನರಾಗಿರುವರು. ಇವರು ನಿದ್ರೆಮಾಡುವುದು ಸೆಗಣಿಯ ಗೊಬ್ಬರದ ಮೇಲೆನ್ನುತ್ತಾರೆ. ಆನೆ ಬೇಟೆಯು ಇವರ ಪ್ರೀತಿಯ ಆಟವಾಗಿದೆ.

ಸುಡಾನಿನ ಎಲ್ಲಾ ಪಂಗಡದ ಜನರಲ್ಲಿ ತಮ್ಮ ಮಕ್ಕಳ ಮೇಲೆ ಬಲು ಪ್ರೀತಿ. ಅವರು ತಮ್ಮ ಮಕ್ಕಳನ್ನು ಶಿಕ್ಷಿಸಲು ಪರರನ್ನು ಕೇಳಿಕೊಳ್ಳುವ ಕ್ರಮವಿದೆಯಂತೆ. ಆದರೆ ತಮ್ಮ ಮಕ್ಕಳನ್ನು ಮಾರಿ ದನಕರುಗಳನ್ನು ಕೊಂಡುಕೊಳ್ಳುವರು. ಇಂತಹ ವಿಚಿತ್ರ ಜನರಲ್ಲಿ ವಿದ್ಯಾಭ್ಯಾಸ ಪ್ರಚಾರಮಾಡಲು ಬ್ರಿಟಿಷರೂ ಸಾವಿರಾರು ಉಪದೇಶಿಗಳೂ ಪ್ರಯತ್ನಿಸುತ್ತಾರೆ. ಸುಡಾನಿನ ಜನರೇ ಮುಂದಕ್ಕೆ ತಮ್ಮ ದೇಶವನ್ನು ಆಳಲು ಸಮರ್ಥರಾಗಬೇಕೆಂದು ಬ್ರಿಟಿಷರ ಯತ್ನವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಈಜಿಪ್ಟಿನ ರಾಜಕೀಯ ಧುರೀಣರು ಸುಡಾನು ತಮ್ಮದು,ಅದು ತಮ್ಮ ಆಸ್ತಿ ಎಂದು ಉದ್ಗಾರವೆತ್ತಿ ನೀಲನದೀ ಕಣಿವೆಯ ಐಕ್ಯತೆಯು ಅತ್ಯಗತ್ಯವಿದೆ ಎನ್ನಲು ಆರಂಭಿಸಿರುವರು.

ಸುಡಾನು ತನ್ನ ಚರಿತ್ರೆಯ ಅವಧಿಯಲ್ಲಿ ಒಂದೆರಡು ಸಲ ಮಾತ್ರ ಈಜಿಪ್ಟಿನ ಆಡಳಿತೆಗೆ ಸೇರಿದ್ದಿತು. ಈಜಿಪ್ಟು ೧೮೨೦ರಿಂದ ೧೮೮೦ರ ವರೆಗೆ ಸುಡಾನನ್ನು ದಬ್ಬಾಳಿಕೆಯಿಂದ ಆಳಿ ಅಲ್ಲಿಂದ ಸಾವಿರಾರು ಗುಲಾಮರನ್ನು ಪಡೆಯಿತು. ತದನಂತರ ಸುಡಾನಿನ ಡೊಂಗೋಲಾ ಎಂಬಲ್ಲಿ 'ಮಾಧಿ' ಎಂಬ ಧುರೀಣನೊಬ್ಬನು ಒಂದು ದೊಡ್ಡ ದಂಗೆಯನ್ನು ಎಬ್ಬಿಸಿದನು. ಜಗತ್ತಿನ ಜನರನ್ನೆಲ್ಲಾ ಮುಸಲ್ಮಾನ ಮತಕ್ಕೆ ಸೇರಿಸಲು ದೇವರು ನನ್ನನ್ನು ಕಳುಹಿಸಿಕೊಟ್ಟಿರುವರೆಂದು ಅವನು ಪ್ರಕಟಿಸಿದನು. ಸಾವಿರಾರು ಸುಡಾನಿಗಳು ಅವನೊಡನೆ ಸೇರಿ ಈಜಿಪ್ಟಿನ ಸೈನ್ಯವನ್ನೂ ಸೋಲಿಸಿ ಸ್ವತಂತ್ರರಾದರು. ೧೮೯೮ರಲ್ಲಿ ಈಜಿಪ್ಟಿನಿಂದ ಬ್ರಿಟಿಷರ ಸೈನ್ಯಗಳು ಸುಡಾನಿಗೆ ಹೋಗಿ ಸುಡಾನನ್ನು ಗೆದ್ದುಕೊಂಡವು. ೧೮೯೯ರಿಂದ ಸುಡಾನು ಬ್ರಿಟಿಷರವರ ಮತ್ತು ಈಜಿಪ್ಟಿನ ಜೊತೆ-ಆಳ್ವಿಕೆಯೊಳಗೆ ಇದೆ.

ಬ್ರಿಟಿಷರು ಸುಡಾನಿನಲ್ಲಿ ಹಲವು ರಾಜಕೀಯ ಸುಧಾರಣೆಗಳನ್ನು ಮಾಡಿ ಕ್ರಮೇಣ ಅವರಿಗೆ ಪ್ರಜಾಧಿಪತ್ಯ ಸರಕಾರವನ್ನು ಕೊಡಲು ಸಿದ್ಧತೆಗಳನ್ನು ಮಾಡುತ್ತಾರೆ. ಈಗ ಸುಡಾನು ಬ್ರಿಟಿಷರ ಒಬ್ಬ ಗವರ್ನರ ಜನರಲನ ಅಂಕೆಯೊಳಗಿದೆ ಅವನ ಕಾರ್ಯಕಾರೀ ಮಂಡಲದಲ್ಲಿರುವ ಹದಿನೆರಡು ಸದಸ್ಯರಲ್ಲಿ ಆರು ಮಂದಿ ಸುಡಾನಿನವರು. ೧೯೪೮ರಿಂದ ಇಲ್ಲೊಂದು ಜನರಿಂದ ಆರಿಸಲ್ಪಟ್ಟ ಸದಸ್ಯರ ನ್ಯಾಯವಿಧಾಯಕ ಸಭೆಯಿದೆ. ಜಿಲ್ಲಾಧಿಕಾರಿಗಳು ಹೆಚ್ಚಾಗಿ ಸುಡಾನೀಯರೇ ಆಗಿರುವರು. ಸುಡಾನಿನ ಹೆಚ್ಚಿನ ಜನರಿಗೆ ಬ್ರಿಟಿಷರ ಈ ಧೋರಣೆಯು ಸಮಂಜಸವೆಂದು ತೋರಿದೆ. ಆದರೆ ಆದಷ್ಟು ಬೇಗ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಅವರು ಕೇಳುತ್ತಿರುವರು.

ಈ ಪರಿಸ್ಥಿತಿಯಲ್ಲಿ ಈಜಿಪ್ಟ್ ಹೊಸ ಧೋರಣೆಯನ್ನು ಅನುಸರಿಸುತ್ತದೆ. ಈಜಿಪ್ಟಿನ ಸರಕಾರದವರು ಸುಡಾನಿನ ಸರಕಾರದ ಆಜ್ಞೆಯನ್ನು ಹೊರಡಿಸುತ್ತದೆ. ನೀಲನದಿ ಕಣಿವೆಯ ಐಕ್ಯತೆ ಮಾಡಿಬಿಟ್ಟಿದೆ. ಬ್ರಿಟಿಷರ ಗವರ್ನರ ಜನರಲನನ್ನು ನಿರಾಕರಿಸಲು ಆಜ್ಞೆಕೊಡುತ್ತದೆ. ಈ ಚಟುವಟಿಕೆಗಳಿಂದ ಈಜಿಪ್ಟಿನ ಜನರಲ್ಲಿ ರಾಷ್ಟ್ರೀಯ ಭಾವನೆಯ ಉದ್ರೇಕವು ಬೆಳೆಯುವ ಪರಿಣಾಮವಾಗಿದೆಯಲ್ಲದೇ ಸುಡಾನಿನಲ್ಲಿ ಯಾವ ಫಲವೂ ಸಂಭವಿಸಲಿಲ್ಲ. ಬ್ರಿಟಿಷರು ಈಜಿಪ್ಟಿನಿಂದಲೂ ಸುಡಾನಿನಿಂದಲೂ ತೊಲಗಬೇಕೆಂಬು ಈಜಿಪ್ಟಿನ ಧೋರಣೆಯಾಗಿದೆ. ಈಜಿಪ್ಟಿಗೂ ಬ್ರಿಟನಿಗೂ ೧೯೩೬ರಲ್ಲಿ ಒಂದು ಸಂಧಿಯಾಗಿತ್ತು. ಆದರ ಅವಧಿಯು ೧೯೫೬ರ ವರೆಗೆ ಇದೆ. ಆದರೆ ಈಜಿಪ್ಟು ಅದನ್ನು ಈಗಲೇ ರದ್ದುಮಾಡಬೇಕೆನ್ನುತ್ತಿದೆ. ಈ ಬಿಕ್ಕಟ್ಟು ಬೇಗನೇ ಪರಿಹಾರವಾಗುವಂತೆ ತೋರುವುದಿಲ್ಲ.

★ ಮಕ್ಕಳ ಮನಸ್ಸು ★

[ಲೇಖಕರು: ಶ್ರೀ ಸದಾನಂದ ನಾಯಕ, ಎಂ. ಎ., ಮುಂಬಯಿ.]

ಮನೆತನದಲ್ಲಿ ಮಕ್ಕಳಿಂದುಂಟಾಗುವ ಆನಂದವನ್ನು ಕುರಿತು ಹಳ್ಳಿಯ ಪ್ರಾಚೀನ ಕವಿಗಳು:

> ಹಾವಿನ ಹೆಡೆ ಚೆಂದ ಮಾವಿನ ಮಿಡಿ ಚೆಂದ
> ಹಾರಾಡಿ ಬರುವ ಗಿಣಿ ಚೆಂದ—ಕಂದಯ್ಯ
> ನೀ ಚೆಂದ ನಮ್ಮ ಮನೆಗೆಲ್ಲ!
>
> ನನ್ನಯ್ಯನಂಥೋರು ಹನ್ನೆರಡು ಮಕ್ಕಳು
> ಹೊನ್ನೆಯ ಮರದ ನೆರಳಲಿ—ಆಡುವಾಗ
> ಸನ್ಯಾಸಿ ಜಪವ ಮರೆತಾನು

ಎಂದು ಹಾಡಿ ತಮ್ಮ ಅನುಭವವನ್ನು ರಸವತ್ತಾಗಿ ವರ್ಣಿಸಿರುವರು. ಮಕ್ಕಳಿಲ್ಲದವರ ಮಕ್ಕಳಾಗಬೇಕೆಂಬ ಹಂಬಲ, ಮಕ್ಕಳ ಜನ್ಮೋತ್ಸವ, ಅವರ ಬಾಲಲೀಲೆ, ದಟ್ಟಡಿ, ತೊದಲು ನುಡಿ, ಅವುಗಳನ್ನು ಕಂಡು ತಣಿದು ನಲಿದಾಡುವ ಹಿರಿಯರ ಹಿರಿಮೆ—ಮುಂತಾದುವುಗಳ ವಾತ್ಸಲ್ಯಪೂರ್ಣವಾದ ವರ್ಣನೆ ಅನೇಕ ಕಾವ್ಯಗಳಲ್ಲಿ ಬರುವುದು. ಬಾಲಕರಿಗೆ ಬೇನೆ-ಬೇಸರಿಕೆಗಳಾದರೆ ಅವುಗಳನ್ನು ಪರಿಹರಿಸುವ ವಿಧಾನವನ್ನು ಆಯುರ್ವೇದದಲ್ಲಿ ಕೂಲಂಕುಷವಾಗಿ ವಿವೇಚಿಸಿರುವರು. ಆದರೆ ಮಕ್ಕಳ ಮನಸ್ಸನ್ನು ಕುರಿತು ಸೂಕ್ಷ್ಮವಾದ ವಿವರಗಳನ್ನು ಮನಗಂಡವರು ಪಾಶ್ಚಿಮಾತ್ಯರು. ಯುರೋಪ-ಅಮೇರಿಕೆಗಳಲ್ಲಿ ಈ ವಿಷಯವಾಗಿ ಪ್ರಾಯೋಗಿಕವಾದ ಸಂಶೋಧನೆಗಳು ನಡೆದು ಎಷ್ಟೋ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಅವುಗಳ ಜ್ಞಾನದಿಂದ ತಾಯಿ-ತಂದೆಗಳಿಗೂ ಶಿಕ್ಷಕರಿಗೂ ಮಕ್ಕಳ ಸರ್ವಾಂಗಪೂರ್ಣವಾದ ಉನ್ನತಿಯನ್ನು ಸಾಧಿಸಲು ಮಾರ್ಗದರ್ಶನವಾಗಿರುವುದು.

ಮಕ್ಕಳ ವಿಷಯವಾಗಿ ನಮ್ಮಲ್ಲಿರುವ ಕಾವ್ಯಮಯ ಕಲ್ಪನೆಗಳನ್ನು ಬದಿಗಿರಿಸಿದರೆ, ನಮ್ಮಲ್ಲಿ ಎಷ್ಟೋ ತಾಯಿ-ತಂದೆಗಳಿಗೆ, ಅವರಲ್ಲಿಯೂ ಹೆಚ್ಚಾಗಿ ಹಳ್ಳಿಯ ನಿವಾಸಿಗಳಿಗೆ, ಮಕ್ಕಳ ವಿಷಯವಾದ ನಿಜವಾದ ಅರಿವು ಇಲ್ಲವೆಂದೇ ಅನ್ನಬೇಕು. ಪಶು-ಪಕ್ಷಿಗಳೂ ಪ್ರೀತಿಸುವಂತೆ ತಮ್ಮ ಮಕ್ಕಳನ್ನು ವಿಪುಲವಾಗಿ ಪ್ರೀತಿಸುವುದೂ, ಸುತ್ತುಮುತ್ತಲಿನವರು ಬೆಳಿಸಿದಂತೆ ಅವುಗಳನ್ನು ಬೆಳಿಸುವುದೂ, ಹೀಗೆ ಬೆಳಿಸಿದ್ದುದರ ಪ್ರತಿಫಲವಾಗಿ ತಮ್ಮ ಕೈಗೊಂಬೆಗಳಾಗಿ ಸದಾಕಾಲವೂ ಅವರು ವರ್ತಿಸಬೇಕೆಂದು ಹಂಬಲಿಸುವುದೂ ನಮ್ಮಲ್ಲಿ [illegible] ಎಷ್ಟೋ ತಾಯಿ-ತಂದೆಗಳ ಹಾರೈಕೆಯಾಗಿರುವುದು. ಮ[illegible] ಳಿಗೆ ತಿಳುವಳಿಕೆಯನ್ನುಂಟುಮಾಡುವ ವಿಷಯದಲ್ಲಿಯ[illegible] ನಮ್ಮಲ್ಲಿ ತೀರ ವಿಚಿತ್ರವಾದ ಕಲ್ಪನೆಗಳುಂಟು. ಹಿರಿಯರಾ[illegible] ತಾವೇ ಜಾಣರು, ಹೆಚ್ಚಿನ ತಿಳುವಳಿಕೆಯುಳ್ಳವರು ಎಂದು[illegible] ಮಕ್ಕಳೆಂದರೆ ಬುದ್ಧಿಯಿಲ್ಲದವರು, ಅವರ ಬರಿಯದಾದ ಮ[illegible] ಸ್ಸಿನಲ್ಲಿ ತಮ್ಮ ಅಹಂಕಾರಪರಿವೃತವಾದ ಬುದ್ಧಿಯನ್ನು ಫು[illegible] ಬೊಲಿನಲ್ಲಿ ಗಾಳಿಯನ್ನು ಊದಿದಂತೆ ಒಳಗೆ ತುರುಕಬೇಕಾ[illegible] ವುದು ಎಂದೂ ನಮ್ಮಲ್ಲಿಯ ಜನರ ಸಾಮಾನ್ಯ ತಿಳುವಳಿ[illegible] ಗಳಾಗಿರುವವು. ಇದಕ್ಕೆ ಕಾರಣವೆಂದರೆ, ನಮ್ಮ ಕಣ್ಮುಂ[illegible] ಯಾವಾಗಲೂ ಕಟ್ಟಿರುವುದು ಮಕ್ಕಳ ಮೈ-ಅವರ ಸ್ಥೂ[illegible] ಶರೀರ. ಆದರೆ ಅವರು ಪ್ರಾಣಮಯವೂ ಮನೋಮಯವೂ[illegible] ಆದ ಚಿತ್‌ಸ್ವರೂಪಿಗಳೆಂಬುದು ನಮ್ಮ ಮನಸ್ಸಿಗೆ ಹೊಳೆಯ[illegible] ವುದೇ ಇಲ್ಲ. ಪ್ರತಿಯೊಂದು ಮಗುವೂ ಚಿತ್-ಶಕ್ತಿಯನ[illegible] ಪಡೆದು ಬಂದ ದಿವ್ಯತ್ವದ ಒಂದು ಅಂಶವಾಗಿರುವುದು. [illegible] ಶಕ್ತಿಯು ಬೆಳವಣಿಗೆಯಲ್ಲಿ ಅದರ ಮನೋ-ವಾಕ್-ಕಾಯಗ[illegible] ವಿಕಾಸಗೊಳ್ಳುವವು. ಮತ್ತು ಅದರ ಬೆಳವಣಿಗೆಯ ಪ[illegible] ಪೂರ್ಣತೆಯಲ್ಲಿ ಆ ಶಕ್ತಿಯ ವೈಶಿಷ್ಟ್ಯವು ವ್ಯಕ್ತಿತ್ವದ ಪರಮ[illegible] ವಧಿಯನ್ನು ಪಡೆಯುವುದು. ಆದುದರಿಂದ ಪ್ರತಿಯೊ[illegible] ತಾಯಿ-ತಂದೆಯೂ ಮಕ್ಕಳ ಬೆಳವಣಿಗೆಯ ಸೂಕ್ಷ್ಮಜ್ಞಾ[illegible] ವನ್ನು ಅರಿತುಕೊಳ್ಳುವುದು ಆವಶ್ಯಕವಾಗಿರುವುದು.

ಮಕ್ಕಳ ಗರ್ಭಗತವಾದ ಪ್ರಾಥಮಿಕ ಅವಸ್ಥೆಯೆಂದ[illegible] ಹೆಣ್ಣಿನ ರಜಃಕಣ ಹಾಗು ಗಂಡಿನ ವೀರ್ಯರೇಣುವಿನಿಂ[illegible] ಸಮ್ಮಿಳಿತವಾದ ಜೀವಾಣುವೆಂಬುದನ್ನು ಬೇರೆ ಹೇಳಬೇಕಾಗಿ[illegible] ವಷ್ಟೆ? ಈ ಜೀವಾಣುವಿನಲ್ಲಿ ಆ ಗರ್ಭದಲ್ಲಿ ಮೊಟ್ಟ ಮೊದಲ[illegible] ರೂಪುಗೊಳ್ಳುವ ಇಂದ್ರಿಯವು ಎಂದರೆ ಹೃದಯವೆಂಬುದನ್[illegible] ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞರಾದ ಫೊಕ್ಸ ಎಂಬವರು ಕಂಡುಹಿ[illegible] ದಿರುವರು. ಹೃದಯದ ಆಕುಂಚನ-ಪ್ರಸರಣಗಳು ಪ್ರಾರಂ[illegible] ವಾದ ಮೇಲೆಯೇ ಜ್ಞಾನತಂತುಗಳು ಬೆಳವಣಿಗೆಗೊಂ[illegible] ಮನಸ್ಸು ರೂಪುಗೊಳ್ಳುವುದು. ಆದರೆ ಯಾವ ಮನೋ[illegible] ವ್ಯಾಪಾರವೂ ಅದರ ಕ್ರಿಯೆ-ಪ್ರತಿಕ್ರಿಯೆಗಳೂ ಗರ್ಭಾಶ[illegible] ದಲ್ಲಿರುವ ಮಗುವಿನಲ್ಲಿ ವ್ಯಕ್ತವಾಗುವುದಿಲ್ಲ.

ಪ್ರಸವ-ಪ್ರಸಂಗವು ಮಗುವಿನ ಜೀವನದಲ್ಲಿ ಒಂ[illegible]





ಮಹತ್ವದ ಘಟನೆಯಾಗಿರುವುದು. ಪ್ರಸವವೇದನೆ ತಾಯಿಗೆ ಎಷ್ಟು ಪರಿಶ್ರಮವನ್ನು ಉಂಟುಮಾಡುವುದೋ ಅದಕ್ಕಿಂತಲೂ ಹೆಚ್ಚಿನ ಪೀಡೆಯನ್ನು ಮಗುವಿಗೆ ಉಂಟುಮಾಡುವುದು. ಅದೇ ಮಗುವಿಗೆ ಸಂಭವಿಸುವ ಮೊದಲನೆಯ ಮಾನಸಿಕ ಆಪತ್ತು! ಗರ್ಭಾಶಯದ ಬಲು ಮೆತ್ತಗಿನ ಹಾಗು ಸ್ನಿಗ್ಧವಾದ ಪರಿವೇಷ್ಟನದಲ್ಲಿ ಬೆಚ್ಚಗಿನ ಕಾವಿನಲ್ಲಿ ಹಾಯಾಗಿ ಮಲಗಿಕೊಂಡಿರುತ್ತಿದ್ದ ಮಗುವು ಪ್ರಸವಪೀಡೆಯಿಂದ ಚಲ-ವಿಚಲವಾಗಿ, ಅಪರಿಮಿತವಾದ ನೋವಿಗೆ ತುತ್ತಾಗಿ ಹೊರಗಿನ ಜಗತ್ತಿನ ಅನುಭವವನ್ನು ಪಡೆಯುವುದು. ಅದೋ— ಗಟ್ಟಿಯಾದ ಅಂಗೈ, ಕಡ್ಡಿಯಂಥ ಬೆರಳುಗಳು. ಬಿರುಸಾದ ನೆಲ! ತನ್ನ ನೋವನ್ನು ಮರೆಯಿಸಲು ಆಗ ಆ ಹಸುಳೆಯಲ್ಲಿದ್ದ ಸಾಧನವು ಒಂದೇ—ನಿದ್ದೆ! ಮೊದಲಿನ ತಿಂಗಳಲ್ಲಿ ಮಗುವಿನ ಎಚ್ಚರವು ೧೦ ಪಾಲಾದರೆ ನಿದ್ದೆ ೯೦ ಪಾಲು; ಎಚ್ಚರದಲ್ಲಿ ಮಗುವಿನ ಸ್ವಂತ ಕ್ರಿಯೆ ಒಂದು ಪಾಲಿನಷ್ಟು ಮಾತ್ರ. ಅದೂ ಮೊಲೆಯುಣ್ಣುವುದರಲ್ಲಿಯೇ ಮುಗಿಯುವುದು.

ಮಕ್ಕಳ ಪ್ರಾರಂಭದ ಮಾನಸಿಕ ಜೀವನವನ್ನು ಅರಿತುಕೊಳ್ಳಲು "ಮನೋ-ವಿಶ್ಲೇಷಣ"ವೆಂಬ ಮನಶಾಸ್ತ್ರದ ಶಾಖೆಯು ನಮಗೆ ಒಳ್ಳೆಯ ನೆರವನ್ನು ಉಂಟುಮಾಡಿರುವುದು. ಮನೋವಿಶ್ಲೇಷಣವು ಮಂಡಿಸಿದ ವಿವರಗಳು ಸೂಕ್ಷ್ಮವೂ ವಿಚಿತ್ರವೂ ಆಗಿರುವುವಾದರೂ ಅದರ ತೀರ್ಮಾನಗಳು ಮನಃಶಾಸ್ತ್ರದ ಸಾಮಾನ್ಯ ತೀರ್ಮಾನಗಳಿಗೆ ಬಹಳೇ ಪೋಷಕವಾಗಿರುವವು.

ಮಕ್ಕಳು ಹುಟ್ಟುವಾಗಲೇ ಒಂದು ಮಾನಸಿಕ ವೇದನೆ (Shock)ಯನ್ನು ಪಡೆದು ಹೊರಬೀಳುವವು. ತಾಯಿಯಿಂದ ಮಗು ಬೇರೆಯಾದರೂ, ತಾನು ಬೇರೆಯಾಗಿರುವೆನೆಂಬ ಅರಿವು ಮಗುವಿಗೆ ಇರುವುದಿಲ್ಲ. ಆದರೆ ತೀವ್ರವಾದ ಒಂದು ವೇದನೆಯು ಮಾತ್ರ ಆ ಹೊಸ ಜಗತ್ತಿನ ಅರಿವಿಗೆ ಕಾರಣವಾಗುವುದು. ಹಸಿವು ಮಗುವಿನಲ್ಲಿ ತಲೆದೋರುವ ಮೊದಲನೆಯ ಪ್ರವೃತ್ತಿ. ತಾಯಿಯಿಂದ ಬೇರೆಯಾದ ಮಗು ತಾಯಿಯ ಮೊಲೆಯ ಮೂಲಕವಾಗಿ ಮರಳಿ ಮಿಲನವನ್ನು ಹೊಂದುವುದು. ಮೊದಮೊದಲು ತೊಟ್ಟು, ಮೊಲೆಗಳಲ್ಲಿ ಅದರ ಆಸಕ್ತಿಯು ಕೇಂದ್ರಿತವಾಗುವುದು. ಮುಂದೆ ಅವಳ ಮೋರೆ ಹಾಗು ತನ್ನನ್ನು ಎತ್ತಿಕೊಳ್ಳುವ ಹಾಗು ಆರೈಕೆ ಮಾಡುವ ಕೈಗಳಲ್ಲಿ ಆ ಆಸಕ್ತಿಯು ಬೆಳೆಯುವುದು. ಮಗುವಿನ ಮೊದಲಿನ ಎರಡು ತಿಂಗಳು ಬಹುಶಃ ನಿದ್ದೆ-ತೂಕಡಿಕೆಯಲ್ಲಿಯೇ ಕಳೆಯುವುವು. ಎಚ್ಚರಿಕೆಯ ಕೊಂಚ ಕಾಲ ಹಾಲು ಕುಡಿಯುವದಾಗುವುದು. ಸರಿಯಾದ ವೇಳೆಗೆ ಸಾಕಷ್ಟು ಹಾಲು ಸಕ್ಕರೆ ಮಗುವಿಗೆ ತುಂಬ ತೃಪ್ತಿಯುಂಟಾಗುವುದು. ಅಂಥ ತೃಪ್ತಿಯುಂಟಾಗದೇ ಹೋದರೆ ಮಗು ವಿಪನ್ನಾವಸ್ಥೆಗೊಳಗಾಗುವುದು. ಕಿರಿಕಿರಿ, ಚಿಂತೆ, ವ್ಯಾಧಿಗಳಿಂದ ಕೂಡುವುದು. ತಾನು ಬಯಸಿದಾಗ ತನಗೆ ಮೊಲೆ ದೊರಕದಿದ್ದರೆ ತಾಯಿಯ ವಿಷಯವಾಗಿ 'ಕೆಡಕು' ಭಾವನೆಯೂ ಮನಸ್ಸಿನಲ್ಲಿ ಆಗ ಮೂಡುವುದು. ಮೊಲೆ ತನ್ನಲ್ಲಿರುವಾಗ ಅದು ತನ್ನ ಸೊತ್ತು ಎಂಬ ಹಿಗ್ಗು, ಅದು ಇಲ್ಲದಿರುವಾಗ ಅದನ್ನು ಕಳೆದುಕೊಂಡೆನೆಂಬ ಕೊರಗು— ಇವುಗಳಿಂದ 'ಒಳ್ಳೆಯ ತಾಯಿ' ಹಾಗು 'ಕೆಡುಕು ತಾಯಿ'ಎಂಬ ಭಾವನೆಗಳು ಮಗುವಿನ ಮನಸ್ಸಿನಲ್ಲಿ ಅಂಕುರಿಸುವವು. ಈ ಕಾಲದ ಮಗುವಿನ ಮನಸ್ಸು ಹಾಲುಗಲ್ಲಿನಷ್ಟು ತಿಳಿಯಾಗಿರುವುದರಿಂದ, ಆಗ ಮಗುವಿನ ಮನಸ್ಸಿನ ಮೇಲೆ ಉಂಟಾದ ಯಾವುದೇ ಸಂವೇದನೆಗಳು ಭದ್ರವಾಗಿ ಅಂಟಿಕೊಳ್ಳುವವು. ಮತ್ತು ಮಗುವಿನ ಅಂತರ್ಮನಸ್ಸಿನ ರಚನೆಗೆ ಕಾರಣವಾಗುವವು.

ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ವಿಷಯವನ್ನು ಗಮನಿಸಬೇಕಾಗುವುದು. ಮಗುಗಳೆಂದರೆ ಬುದ್ಧಿಯೆಂಬ ಗಾಳಿಯನ್ನು ಹೊರಗಿನಿಂದ ತುಂಬುವ ಫುಟಬೋಲಿನಂತೆ ಅಲ್ಲವೆಂಬುದನ್ನು ಈಗಲೇ ಹೇಳಿದೆ. ಅವು ತಮ್ಮಲ್ಲಿ ಹುದುಗಿಕೊಂಡಿದ್ದ ಬೀಜ್-ಶಕ್ತಿಯ ಮೊಳಕೆಗಳು. ಆ ಶಕ್ತಿಯು ದಿನದಿನವೂ ಅರಳುತ್ತ ಬೆಳೆಯತೊಡಗುವುದು. ತಾಯಿಯಾದವಳು ಅದನ್ನು ತಿಳಿಯದೇ ತನ್ನ ಇಚ್ಛೆಯಂತೆಯೇ ಮಗುವನ್ನು ನಡಿಸತೊಡಗಿದರೆ, ಆ ಶಕ್ತಿಯ ಅಂಕುರವು ಕಮರಿಹೋಗದೆ ಇರಲಾರದು. ಮಕ್ಕಳಿಗೆ ಬುದ್ಧಿಯಿಲ್ಲವೆಂಬುದೇನೋ ನಿಜ; ಆದರೆ ನಮ್ಮ ಹಳ್ಳಿಗಳಲ್ಲಿಯ ಎಷ್ಟೋ ತಂದೆ-ತಾಯಂದಿರಿಗೆ ಮಕ್ಕಳ ಬೌದ್ಧಿಕ ಬೆಳವಣಿಯ ವಿಷಯವಾಗಿ ಅರಿವು ಇರುವುದಿಲ್ಲ. ಮಕ್ಕಳ ಬುದ್ಧಿಯು ವಿಕಾಸವಾಗಬೇಕಾದರೆ ಅವರ ಆಂತರಿಕ ಪ್ರೇರಣೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವು ಆವಶ್ಯಕವಾಗಿರುವುದು. ಇದಕ್ಕೆ ವಿರುದ್ಧವಾಗಿ ಮಗುವಿನ ಹಟಕ್ಕಿಂತ ತಮ್ಮ ಹಟವನ್ನೇ ಸಾಧಿಸುವ ತಂದೆ-ತಾಯಂದಿರು ಮಗುವಿನ ಜೀವನವನ್ನೇ ಕೆಡಿಸುವರೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿಯೇ "ತಂದೆ-ತಾಯಿಗಳಿಗೆ ಸೇರದ ಮಕ್ಕಳು, ಹಾಗು ಮಕ್ಕಳಿಗೆ ಸೇರದ ತಂದೆ ತಾಯಿಗಳು" ಎಂಬ ಸಾಮಾಜಿಕ ಸಮಸ್ಯೆಯ ಬೀಜಾಂಕುರವಿದೆ. ಆದುದರಿಂದ ಹಸುಳೆ-ಹರೆಯದರ ಸಂಬಂಧದ ವಿಷಯವಾಗಿ ತುಂಬ ಜಾಗರೂಕತೆಯನ್ನು ವಹಿಸಬೇಕಾಗುವುದು. ಮಗುವಿನ ಸ್ವಯಂಪ್ರೇರಿತವಾದ ಕ್ರಿಯೆಗಳಿಗೆ ಯಾವ ತೊಡಕೂ ಉಂಟಾಗದಂತೆ ನೋಡಿಕೊಳ್ಳುವುದು ತಾಯಿಯ ಆದ್ಯಕರ್ತವ್ಯವಾಗಿರುವುದು. ಅರ್ಥಾತ್ ಆಕೆಯ ಕರ್ತವ್ಯವು ಸೇನಾಪತಿಯಂತೆ ಅಧಿಕಾರಮಯವಾಗಿರದೆ, ಕುಲಗುರುವಿನಂತೆ ದಿವ್ಯದರ್ಶನದಾಯಕವಾಗಿರುವುದು. ತೀರ ಚಿಕ್ಕಂದಿನಲ್ಲಿ ಹಸಿವೆಯ ಪೂರೈಕೆ, ನಿದ್ದೆ ಹಾಗು ತಾಯಿಯ ಸಾಮಿಪ್ಯ ಇವೇ ಮಗುವಿಗೆ ಸುಖವನ್ನು ಉಂಟುಮಾಡುವ ಸಾಧನೆಗಳು. ಇವುಗಳ ಕೊರತೆ ಮಾನಸಿಕ ವಿಪನ್ನತೆಯನ್ನುಂಟುಮಾಡುವುದಲ್ಲದೆ, 'ಭಯ'ವೆಂಬ

ಹೊಸ ಶತ್ರುವನ್ನು ನಿರ್ಮಿಸುವುದು ಮಗುವು ಭಯಗೊಳ್ಳಲು ಆಸ್ಪದಗೊಡುವುದಾಗಲೀ, ಅದು ದೊಡ್ಡದಾದ ಮೇಲೆ "ಗುಮ್ಮ ಬಂದ" "ರಾಕ್ಷಸ, ಸನ್ಯಾಸಿ, ದೆವ್ವ........" ಎಂದು ಅವರಿಗೆ ಬೆದರಿಸುವುದಾಗಲೀ, ಮಕ್ಕಳ ಮನಸ್ಸಿನ ಬೆಳವಣಿಗೆಯ ದೃಷ್ಟಿಯಿಂದ ತುಂಬ ಅಪಾಯಕರವಾಗಿರುವುದು. ಮೇಲಾಗಿ ಮಗುವಿನ ಇಚ್ಛೆಯನ್ನು ನಿರೋಧಿಸಿ ತಾಯಿ ತನ್ನ ಮನಸ್ಸಿನಂತೆ ಮಗುವನ್ನು ನಡಿಸತೊಡಗಿದರೆ, ಆ ನಿರೋಧಿತವಾದ ಇಚ್ಛೆಗಳು ವಿಕೃತ ರೂಪವನ್ನು ತಾಳಿ ಅಂತಮನಸ್ಸಿನಲ್ಲಿ ಅಡಗಿಕೊಳ್ಳುವವು. ಹಾಗೆ ಮಗುವಿನ ಮುಂದಿನ ಆಯುಷ್ಯದಲ್ಲಿ ಅನೇಕ ವಿಧವಾದ ತೊಡಕುಗಳಾಗಿ ಪರಿಣಮಿಸುವವು. ಮನೋವಿಶ್ಲೇಷಣದ ಆದ್ಯ ಪ್ರವರ್ತಕನಾದ ಫ್ರೊಯ್ಡ್‌ನು ವಿವರಿಸಿದ ಗ್ರಂಥಿಗಳು (Complexes)—ಗಂಡು ಮಗುವಿಗೆ ತಂದೆಯ ವಿಷಯವಾಗಿ ದ್ವೇಷ, ತಾಯಿಯ ವಿಷಯವಾಗಿ ಅನುರಾಗ; ಹಾಗು ಹೆಣ್ಣು ಮಗುವಿಗೆ ತಾಯಿಯ ವಿಷಯವಾಗಿ ದ್ವೇಷ, ತಂದೆಯ ವಿಷಯವಾಗಿ ಅನುರಾಗ— ಇವೂ ತಮ್ಮನ್ನು ಸರಿಯಾಗಿ ನಡೆಯಿಸಿಕೊಳ್ಳದ ತಂದೆ ತಾಯಿಗಳ ವಿಷಯವಾಗಿ ಈ ಕಾಲದಲ್ಲಿಯೇ ಮೊಳೆಯ ತೊಡಗುವವು.

ಮಗುವಿನ ಬೌದ್ಧಿಕ ಜೀವನದ ಪ್ರಾರಂಭವು ಮೂರನೆಯ ತಿಂಗಳಿನಿಂದ ಪ್ರಾರಂಭವಾಗುವುದು. ಅದಕ್ಕಿಂತ ಮೊದಲಿನ ಅಳುವು ಹಸಿವು-ಹೆದರಿಕೆಗಳ ಸೂಚಕವಾಗಿರುವುದು. ಆದರೆ ಮೂರನೆಯ ತಿಂಗಳಿಂದ ಕೆಲವು ಉಚ್ಚಾರಣೆ ಪ್ರಾರಂಭವಾಗುವುದು. ಚಿಕ್ಕಂದಿನಿಂದಲೇ ಹಾಡು ಮಗುವಿಗೆ ಮೆಚ್ಚಿಗೆಯಾಗುವವು. ತಾಳಲಯಗಳಿಗೆ ಅದು ಕಿವಿಗೊಡುವುದು. ಸ್ವರ-ವ್ಯಂಜನಗಳು ಸಂದಿಗ್ಧವಾಗಿ ಮಗುವಿನ ಬಾಯಿಗೆ ಬರತೊಡಗುವವು. ಒಂದು ವರ್ಷದ ಮಗುವಿನ ಪ್ರಗತಿ ನಾಲ್ಕು ಶಬ್ದಗಳನ್ನು ಉಚ್ಚರಿಸುವಷ್ಟು ಆಗುವದು. ೧೮ ತಿಂಗಳ ವರೆಗೆ ಅದು ಮಂದವಾಗಿ ಸಾಗಿ ೨೦ ಶಬ್ದಗಳಷ್ಟು ಆಗಿ ಮುಂದೆ ತೀವ್ರಗತಿಯಿಂದ ಹೊರಟು ಎರಡು ವರ್ಷಕ್ಕೆ ೨೦೦, ಮೂರು ವರ್ಷಕ್ಕೆ ೮೦೦, ನಾಲ್ಕು ವರ್ಷಕ್ಕೆ ೧,೫೦೦, ಹಾಗು ಐದು ವರ್ಷದ ಕೊನೆಗೆ ೨,೦೦೦ ಶಬ್ದಸಂಗ್ರಹವನ್ನು ಪಡೆಯುವುದು. ಮಕ್ಕಳಲ್ಲಿ ಕೆಲವು "ಉತ್ತೇಜಕ ಅವಧಿ" (Sensitive Periods) ಮೇಲಿಂದ ಮೇಲೆ ತಲೆದೋ
ವೆಂದೂ ಅವುಗಳ ಮೂಲಕವಾಗಿಯೇ ಬೌದ್ಧಿಕ ಬೆಳ
ಗೆಯು ಮುಂದುವರಿಯುವುದೆಂದೂ ಮನೋವಿಜ್ಞಾ
ಮತವಿರುವುದು.

ಶೀತ-ಉಷ್ಣ, ಸ್ಥಿರ-ಅಸ್ಥಿರ, ಗಟ್ಟಿ-ಮೃದುವು, ನೋ
ಸಲವು ಮುಂತಾದ ಸಂವೇದನೆಗಳಅರಿವು ಮಗುವಿನಲ್ಲಿ ಶೀ
ವಾಗಿರುವುದು. ಒಂದು ವರ್ಷದ ಮಗುವಿಗೆ ಬೇರೆ ಬೇರೆ
ವೇದನೆಯೂ, ಅವುಗಳ ಹೋಲಿಕೆಯೂ ಗೊತ್ತಾಗುವುದು.
ಕೆಲವು ವಸ್ತುಗಳ ಗುಣಗಳೂ ಅವುಗಳ ಉಪಯೋಗವೂ
ಯುವುದು. ಹಾಸಿದರೆ ಮಲಗಿಕೊಳ್ಳುವ, ಬಾಗಿಲು ತೆರೆ
ಹೊರಗೆ ಹೋಗುವ, ಸ್ಟೋವ ಹೊತ್ತಿಸಿದರೆ ಹಾಲು ಕ
ಯುವ ಸೂಚನೆಗಳು ಹಾಗು ಅನು-ಕೃತಿಗಳು ಮಗು
ಹೊಳೆಯುವವು.

ಮಕ್ಕಳ ಮನಸ್ಸಿನ ವಿಶ್ಲೇಷಣವನ್ನು ವಿವರಿಸು
ಮಗುವಿನ ಒಂದು ವರ್ಷದ ಮಾನಸಿಕ ಬೆಳವಣಿಗೆಯ
ಯವಾಗಿ ಮನೋವಿಜ್ಞಾನಿಗಳು ಪ್ರಾಯೋಗಿಕವಾಗಿ ಕಂ
ಹಿಡಿದ ಸಂಶೋಧನೆಗಳ ಸಾರಾಂಶವನ್ನು ನಾನು ನಿಮಗೆ
ರಿಸಿದ್ದೇನೆ. ತಾಯಿ-ತಂದೆಗಳಾದವರಿಗೆ ಇದರಲ್ಲಿ ಬಹಳ
ಅಂಶವು ಅರಿಯದ ವಿಷಯವೇನೂ ಅಲ್ಲ. ಆದರೆ ಅದರ ತಿ
ವಳಿಕೆಯಿಂದ, ಮಕ್ಕಳೆಂದರೆ ಬರೇ ಮಾಂಸದ ಮುದ್ದೆಗಳ
ಚಿತ್ ಶಕ್ತಿಯ ಅಭಿವ್ಯಕ್ತಿಗಳು; ಮಕ್ಕಳ ಬೆಳವಣಿಗೆಯಿಂ
ಅವರ ಆಂತರಿಕ ಚಿತ್ ಶಕ್ತಿಯ ಸರ್ವಾಂಗಪೂರ್ಣವಾದ
ವಾಹನದಿಂದ ಪ್ರಫುಲ್ಲವಾಗಿ ಬೆಳೆದ ವ್ಯಕ್ತಿತ್ವದ ವಿಕಾಸವಂ
ಬಗೆದು, ಅವ್ಯಾಹತವೂ ನಿಸ್ವಾರ್ಥವೂ ಆದ ಪ್ರೇಮಯು
ವಾದ ಸೇವೆಯನ್ನು ತಾಯಿ ತಂದೆಗಳಾಗಿರುವವರು ಸಲ್ಲಿಸಿದ
ನಮ್ಮ ರಾಷ್ಟ್ರವು ಮುಂಬರುವ ಮಕ್ಕಳಲ್ಲಿ ಅತ್ಯಂತ ಐಶ್ವ
ಸಂಪನ್ನವಾದ ಹೊಸದೊಂದು ನಿಧಿಯನ್ನು ಸ್ವಾಧೀನಗೊ
ವುದೆಂಬುದರಲ್ಲಿ ಸಂದೇಹವಿಲ್ಲ.

"ಜಯ ಹಿಂದ!"

‘ಚುನಾವಣೆ’ ಅರ್ಥಾತ್ ‘ಬನಾವಣೆ’

ಪಾತ್ರವಿವರ

ಬಿಳಿಬೈಲು ಭುಜಂಗರಾಯರು	ಚುನಾವಣಾ ಹುರಿಯಾಳು.
ರಾಮಪ್ಪಯ್ಯ: ವಿಠ್ಠಲಪಂತ	ಭುಜಂಗರಾಯರ ಚುನಾವಣಾ ಕೆಲಸಗಾರರು.
ಲಕ್ಷ್ಮಿ	ಭುಜಂಗರಾಯರ ಹೆಂಡತಿ.
ಆರ್- ಆರ್. ಚಂದರ್ (ರೊಕ್ಕದ ಮನೆ ರಾಮಚಂದರ್)....	ಚುನಾವಣಾ ಹುರಿಯಾಳು.
ಗೇಂದು, ಗೋಪು....	ಚಂದರನ ಸಹಾಯಕರು.
ಮೀನಾಕ್ಷಮ್ಮ	ಶ್ರೀಮಂತೆ; ವಿಧವೆ. ಚುನಾವಣಾ ಹುರಿಯಾಳು.
ಪಂಜಿಬೈಲ್ ಶಂಕ್ರಯ್ಯ	ಸ್ವತಂತ್ರ “ಉಮೇದ್ವಾರ”.
ಗೋವಿಂದರಾವ ಸಖಾರಾವ	ಭಾಷಣ ತರ್ಜುಮೆ ಮಾಡುವವ.

ದೃಶ್ಯ ೧

[ಭುಜಂಗರಾಯರ ಮನೆಯ ಕೋಣೆ. ನಾಲ್ಕೈದು ಕುರ್ಚಿಗಳು; ಒಂದು ಮೇಜು. ಭುಜಂಗರಾಯರು ರಾಮಪ್ಪಯ್ಯ ಮತ್ತು ವಿಠ್ಠಲ ಪಂತರೊಡನೆ ಠೀವಿಯಿಂದ ಪ್ರವೇಶಿಸುವರು; ಕಂಕುಳಲ್ಲಿ ತೆಳ್ಳಗಿನ ಚರ್ಮದ ಚೀಲ (Wallet) ಇದೆ]

ಭುಜಂಗ: (ಫಕ್ಕನೆ ಹಿಂದಿರುಗಿ) ರಾಮಪ್ಪಯ್ಯಾ!

ರಾಮಪ್ಪಯ್ಯ: (ವಿನಮ್ರವಾಗಿ) ಸ್ವಾಮೀ!

ಭುಜಂಗ: ಬೇಡ—ನನ್ನನ್ನು ಹಸಿ ಹಸಿ ಹೊಗಳಬೇಡಿ ಅಂತ ಸಾರಿ ಸಾರಿ ಹೇಳುತ್ತೇನೆ.

ರಾಮಪ್ಪಯ್ಯ: ಎಲ್ಯಾದರೂ ಉಂಟೇ?

ಭುಜಂಗ: ನೋಡಿ ರಾಮಪ್ಪಯ್ಯ–ನಾನು ಅಸ್ವಸ್ಥದ ಮನುಷ್ಯ,–ನನಗೆ ಕರಕರೆ ಆಗೋದಿಲ್ಲ–ನಾನು ಚುನಾವಣೆಗೆ ಒಲ್ಲೋದಿಲ್ಲ—ನನ್ನನ್ನು ಒತ್ತಾಯ ಮಾಡಬೇಡಿ! —ಮತ್ತೆ ನಿಮ್ಮ ಖುಶಿ!

ರಾಮಪ್ಪಯ್ಯ: ಅದು ನಮ್ಮ ಖುಶಿಯಲ್ಲ ಸ್ವಾಮೀ, ಇಡೀ ಊರಿನ ಆಗ್ರಹದ ವಿನಂತಿ—ಮಹಾಜನರ ಅಪೇಕ್ಷೆ—ಸಮಸ್ತ ಮತದಾರರ ಹೃದಯಗಳ ಆಕಾಂಕ್ಷೆ; ಅಲ್ಲವೇ ಪಂತರೇ?

ವಿಠ್ಠಲಪಂತ: ಊರಿಗೆ ಊರೇ ಘೋಷಿಸುತ್ತಿದೆ ಸ್ವಾಮೀ, ನಿಮ್ಮಂಥಾ ಯೋಗ್ಯರು ನಿಂತರೆ ಮಾತ್ರ ಓಟು ಕೊಡುತ್ತೇವೆ, ಇಲ್ಲದಿದ್ದರೆ ಸಮುದ್ರಕ್ಕೆ ಹಾಕುತ್ತೇವೆ ಎಂದು! ಪ್ರತಿಯೊಂದು ರಸ್ತೆ-ಕೇರಿ-ಓಣಿ-ಗುಡ್ಡ-ಬೈಲು— ಎಲ್ಲಿಗೆ ಹೋದರೂ “ನಮ್ಮ ಮತ ಭುಜಂಗರಾಯರಿಗೆ! ಭುಜಂಗರಾಯರಿಲ್ಲದಿದ್ದರೆ ಸಮುದ್ರರಾಜನಿಗೆ ಸಮರ್ಪಣ!”—ಅಂತ ಕೂಗು. ಕಿವಿ ಕಿವುಡಾಗಿ ಹೋಯಿತು.

ಭುಜಂಗ: ಪುನಃ ಪುನಃ ಹೇಳುತ್ತೇನೆ, ಸಾವಿರ ಸಲ ಸಾರುತ್ತೇನೆ—ನನ್ನನ್ನು ಕಾಡಬೇಡಿ— ನಾನು ಶಾಂತ ಜೀವನ ನಡೆಸುವ ಮನುಷ್ಯ—ನನ್ನ ಸರೋವರದಂಥ ಜೀವನದಲ್ಲಿ ಬಿರುಗಾಳಿ ಹೊಡೆದು ತುಫಾನು ಎಬ್ಬಿಸಬೇಡಿ—ಮತ್ತೆ ನಿಮ್ಮ ಸಂತೋಷ!

ರಾಮಪ್ಪಯ್ಯ: ಹೇಳಿದೆವಲ್ಲ ಸ್ವಾಮೀ, ಅದು ನಮ್ಮ ಸಂತೋಷವಲ್ಲ—ಯಾವತ್ತೂ ಪ್ರಜಾಲೋಕದ ಏಕಕಂಠದ ಬೇಡಿಕೆ!

ಭುಜಂಗ: ನಿಂತೆ!—ರಾಮಪ್ಪಯ್ಯಾ, ನೀವೆಲ್ಲ ಹಾಗೆ ಅಪೇಕ್ಷಿಸುವಾಗ, ನಿಂತೆ! (ಎನ್ನುತ್ತ ಕುಳಿತುಕೊಳ್ಳುವನು) ಆದರೆ, ಯಾರಾದರೂ ಸ್ಪರ್ಧಿಸಿದರೆ ಮತ್ತೆ ನೀವೆಲ್ಲರೂ........

ರಾಮಪ್ಪಯ್ಯ: ಬಿಡಿ ಸ್ವಾಮೀ ಆ ಮಾತು! ಸ್ಪರ್ಧೆಗೆ ನಿಲ್ಲುವ ಧೈರ್ಯ ಯಾರಿಗೂ ಇಲ್ಲ. ಉಂಟೇ ಪಂತರೇ?

ವಿಠ್ಠಲಪಂತ: ಧೈರ್ಯವೆಲ್ಲಿ ಸ್ವಾಮೀ, ಅದು ಪೇಟೆಯಲ್ಲಿ ಮಾರಾಟಕ್ಕಿಟ್ಟ ವಸ್ತುವಲ್ಲ ತಾನೆ?

ಭುಜಂಗ: (ಒಳಗಿರುವ ಹೆಂಡತಿಯನ್ನುದ್ದೇಶಿಸಿ) ಲಕ್ಷ್ಮೀ!

[ಲಕ್ಷ್ಮಿ ಬರುವಳು]

ಭುಜಂಗ: ಲಕ್ಷ್ಮೀ, ಕೇಳಿದಿಯೇನು? ನಾನೇ ನಿಲ್ಲಬೇಕಂತೆ! I alone stand up.

ಲಕ್ಷ್ಮಿ: ಎಲ್ಲಿ? ಏಕೆ? ನನಗರ್ಥವಾಗಲಿಲ್ಲ.

ಭುಜಂಗ: ನೋಡಿ ರಾಮುಪ್ಪಯ್ಯಾ, ಅವಳಿಗೆ ಅರ್ಥವಾಗಲಿಲ್ಲ. ನೀವು ಈಗತಾನೆ ಹೇಳಿದಿರಲ್ಲಾ,—ಊರಿಗೆ ಊರೇ ಎದ್ದು ನಾನೇ ನಿಲ್ಲಬೇಕೆಂದು ಘೋಷಿಸುತ್ತದೆ ಅಂತ! ಆದರೆ, ನಮ್ಮ ಮನೆಯು ಒಳಗೆ ಅದರ ಸದ್ದು ಕೇಳಿಸಿದ್ದೇ ಇಲ್ಲ! Woman always slow—all head no brains! Only cooking business!

ರಾಮುಪ್ಪಯ್ಯ: ಗೊತ್ತಿಲ್ಲವೇ ಅಮ್ಮಾ? ತಮ್ಮ ಯಜಮಾನರು ಎಸೆಂಬ್ಲಿ ಚುನಾವಣೆಗೆ ನಿಲ್ಲಬೇಕೆಂದು ಈ ಸರ್ಕಲಿನ ಜನರೆಲ್ಲಾ ಆಗ್ರಹಮಾಡುತಿದ್ದಾರೆ.

ವಿಠ್ಠಲ ಪಂತ: ನಾವು ಎಷ್ಟು ಹೇಳಿದರೂ ಜನರು ಕೇಳೋದಿಲ್ಲ ಅಮ್ಮಾ. "ಭುಜಂಗರಾವ್ ಕಿ ಜೈ"—"ಭುಜಂಗರಾವ್ ಝಿಂದಾಬಾದ್" ಅಂತ ಆಚೆ ಕಡೆ ಗದ್ದಲವೇ ಗದ್ದಲ!

ಭುಜಂಗ: ಕೇಳು ಲಕ್ಷ್ಮಿ! ನಿನ್ನ ಗಂಡನ ವಿಷಯ ನಿನಗೆ ಮಾತ್ರ ತಿಳಿದಿಲ್ಲ—ಲೋಕದಲ್ಲೆಲ್ಲ ಕೋಲಾಹಲವಾಗುತ್ತಿದೆಯಲ್ಲಾ!

ಲಕ್ಷ್ಮಿ: ಚುನಾವಣೆಯು ವಿಷಯವೇ?

ಭುಜಂಗ: (ನಗುತ್ತ) ಅಷ್ಟೆ! ಓಟ್ಟು ನಾಲ್ಕಕ್ಷರ. ಸರೀ ನೆನಪಿಟ್ಟುಕೊ. Woman is memory weak—tongue is strong.

ಲಕ್ಷ್ಮಿ: ನೆನಪಿಡದೆ ಏನು?

ಭುಜಂಗ: ನಿನ್ನ ಓಟನ್ನು ನನಗೇ ಕೊಡುವಿಯಲ್ಲಾ? ಯಾವಾಗಲೂ wife is first vote. Vote for husband.

ಲಕ್ಷ್ಮಿ: ನನ್ನದೊಂದು ಓಟು ಸಿಕ್ಕಿದರೆ ಸಾಕೆ?

ಭುಜಂಗ: ಹನಿ ಕೂಡಿ ಹಳ್ಳ. ಅವರನ್ನುವುದನ್ನು ನೀನೇ ಕೇಳಿದೆಯಲ್ಲಾ-ಉಳಿದ ಜನರು ಹೇಗೂ ಕೊಡುತ್ತಾರೆ.

ರಾಮುಪ್ಪಯ್ಯ: ಅವರದೇ ಆಗ್ರಹ—ಕೊಡದೆ ಎಲ್ಲಿಗೆ ಹೋಗುತ್ತಾರೆ?

ಲಕ್ಷ್ಮಿ: ನನ್ನದೊಂದು ಮಾತು ಕೇಳುತ್ತೀರಾ? ನಿಮಗೆ ಆ ನಾಲ್ಕಕ್ಷರದ ಶತ್ರು ಬೇಡ.

ಭುಜಂಗ: ಶತ್ರು? ಏಕೆ?

ಲಕ್ಷ್ಮಿ: ನನ್ನ ತಂದೆಯುವರು, ಹಿಂದೊಮ್ಮೆ ಮುನಿಸಿಪಲ್ ಚುನಾವಣೆಗೆ ನಿಂತಾಗ ಅಮ್ಮನಿಗೆ ಅಸ್ವಸ್ಥ ಉಂಟಾದ ನೆನಪು ಈಗಲೂ ಇದೆ.

ಭುಜಂಗ: ಅಪ್ಪ ಚುನಾವಣೆಗೆ ನಿಂತರೆ ಅಮ್ಮನಿಗೇಕೆ ಕಾಯಿಲೆ?

ಲಕ್ಷ್ಮಿ: ಏಕೆಂದರೆ, ರಾತ್ರೆ ಹಗಲೂ ಮನೆಯೊಳಗೆ ಜನ ಬರೋದು-ಹೋಗೋದು-ಅಪ್ಪನಿಗೆ ಹಗಲಲ್ಲಿ ಊಟವಿಲ್ಲ, ರಾತ್ರೆ ನಿದ್ದೆಯಿಲ್ಲ.

ಭುಜಂಗ: ಅವರ Health good ಇರಲಿಲ್ಲವೆ

ರಾಮುಪ್ಪಯ್ಯ: ಚುನಾವಣೆ ಮುಗಿವ ತನಕ ಹಾಗೆ ಅಮ್ಮಾ; ಆ ಮೇಲೆ ಎಲ್ಲ ಮೆಂಬರು ಚೆನ್ನಾಗಿ ಮಾಡುತ್ತಾರೆ.

ವಿಠ್ಠಲ ಪಂತ: ಯೋಚನೆ ಬಿಟ್ಟು ಸ್ವಸ್ಥ ಮಲಗುತ್ತಾರೆ! ಸಭಾಮಂದಿರದಲ್ಲೆ!

ಭುಜಂಗ: ಲಕ್ಷ್ಮೀ, ನಿನ್ನಪ್ಪನ ಕಾಲ ಬೇರೆ—ಈ ಬೇರೆ. ಹೋಗು, ಪಂತರಿಗೂ ರಾಮುಪ್ಪಯ್ಯನವರಿಗೂ ಬಿಸ್ಕತ್ತು ಬಾಯಾರಿಕೆಗೆ ತಾ.

ಲಕ್ಷ್ಮಿ: (ಹೋಗುತ್ತ) ನೀವು ಚುನಾವಣಾ ಆರಂಭಿಸುವ ತಾರೀಕು ಹೇಳಿ ಬಿಡಿ. ನಾನು ತವರು ಹೋಗಿ ನಿಂತು, ಚುನಾವಣೆ ಮುಗಿದ ಕೂಡಲೇ ಬರು (ಒಳಗೆ ಹೋಗುವಳು.)

ಭುಜಂಗ: ರಾಮುಪ್ಪಯ್ಯ, ಕೇಳಿದಿರಲ್ಲಾ-ನಮ್ಮ ಮಾನಿಗೆ ಸಮ್ಮತಿಯಿಲ್ಲ.

ರಾಮುಪ್ಪಯ್ಯ: ತಾವು ಯೋಚನೆ ಮಾಡಬೇಡಿ ಸ್ವಾ ತಮಗೆ ಪ್ರತಿಸ್ಪರ್ಧೆ ಇದ್ದರಲ್ಲವೆ ಆ ಮಾತು?

ಭುಜಂಗ: ಸ್ಪರ್ಧೆ ಇಲ್ಲವೆ?

ವಿಠ್ಠಲ ಪಂತ: ಮೊದಲೇ ಹೇಳಿಲ್ಲವೆ? ಅಷ್ಟು ಗ್ಯತೆ ಬೇಕಲ್ಲ! ಏನು ರಾಮುಪ್ಪಯ್ಯನವರೇ?

ರಾಮುಪ್ಪಯ್ಯ: ಕೇಳಿದಿರಲ್ಲ. ಸೂರ್ಯನ ಮ ನಕ್ಷತ್ರ ಅಂದ ಹಾಗೆ.

ಭುಜಂಗ: ನಿಲ್ಲಲೇ ಬೇಕೆನ್ನುತ್ತೀರಾ? ನಿಂತೆ.

[ಲಕ್ಷ್ಮಿಯು ಪ್ರವೇಶ; ಸೇವಕನಿಂದ ಕಾಫಿ ತರಿಸಿ ಮೇಲಿರಿಸುವಳು.]

ಭುಜಂಗ: ಲಕ್ಷ್ಮೀ, ನೀನು ಕಾಫಿ ತರಲು ಹೋ ಒಂದು ವಿಶೇಷ ಸಂಗತಿ ನಡೆಯಿತು!

ಲಕ್ಷ್ಮಿ: ಚುನಾವಣೆಗೆ ನಿಲ್ಲಬೇಡಿರೆಂದು ಆಕಾಶ ಯಾಯಿತೆ?

ಭುಜಂಗ: ಆಕಾಶವಾಣಿಯಲ್ಲ—ರಾಮುಪ್ಪಯ್ಯ ಮುಖಾಂತರ ಲೋಕವಾಣಿ!

ಲಕ್ಷ್ಮಿ: ಏನೆಂದು?

ಭುಜಂಗ: ಸೂರ್ಯನ ಮುಂದೆ ನಕ್ಷತ್ರವೇ ಅ ರಾಮುಪ್ಪಯ್ಯನವರು. ಸೂರ್ಯ ಅಂದರೆ ನಾನು— ಅಂದರೆ ಉಳಿದವರು. ಜವಾಬು ಕೊಡು ನೋಡೋಣ

ಲಕ್ಷ್ಮಿ: ಅದು ನಿಮಗೆ ಕೇಳಿದ ಪ್ರಶ್ನೆ. ನೀವೇ ಕೊಡಲಿಲ್ಲವೇಕೆ?

ಭುಜಂಗ: ನಾನು ಹೇಗೂ ಮಾಡುತ್ತೇನಲ್ಲ. ನೊಂದು ಮಾತು ಹೇಳು. ನೋಡೋಣ.

ಲಕ್ಷ್ಮಿ: ನನ್ನ ಅಭಿಪ್ರಾಯದಂತೆ ನೀವು ನಕ್ಷತ್ರ ವುದೇ ಒಳ್ಳೆಯದು.

ಭುಜಂಗ: ಏಕೆ? Sun is big ಲಕ್ಷ್ಮೀ! ನಕ್ಷತ್ರ is little!

ಲಕ್ಷ್ಮೀ: ಎಲ್ಲರೂ ನಕ್ಷತ್ರವಾಗಲು ಇಚ್ಛಿಸುತ್ತಾರಲ್ಲದೆ ಸೂರ್ಯನಾಗಬೇಕೆಂದು ಇಚ್ಛಿಸುವುದಿಲ್ಲ.

ಭುಜಂಗ: ಆದರೆ, ಲಕ್ಷ್ಮೀ, ಒಂದು ಮಾತಿದೆ. ನನಗೆ ನಿದ್ದೆ-ಊಟಗಳಿಲ್ಲವೆಂದು ಗಾಬರಿಪಡುವ ಅವಶ್ಯವಿಲ್ಲ. ಏಕೆಂದರೆ, ನಾನು ಚುನಾವಣೆಗೆ ನಿಂತರೆ, ನನಗೆ ಪ್ರತಿಸ್ಪರ್ಧಿಗಳಿಲ್ಲ—ಅಲ್ಲವೆ ರಾಮುಪ್ಪಯ್ಯ? Tell Woman no anxiety.

ರಾಮುಪ್ಪಯ್ಯ: ನಾವದನ್ನು ಮೊದಲೇ ಸ್ಪಷ್ಟಪಡಿಸಿಟ್ಟೇವಮ್ಮಾ! ನೀವು ಯೋಚನೆ ಮಾಡಬೇಡಿ.

ಲಕ್ಷ್ಮೀ: ನನ್ನ ಅಪ್ಪನು ಚುನಾವಣೆಗೆ ನಿಲ್ಲುವ ಮನಸ್ಸು ಮಾಡುವಾಗ ಇದೇ ರೀತಿ ಆಕಾಶವು ಶುಭ್ರವಿತ್ತು. ಮತ್ತೆ ಮೋಡ ಕವಿದು, ಜಡಿ ಮಳೆ ಹೊಡೆದು, ತುಫಾನೇ ಎದ್ದಿತು.

ಭುಜಂಗ: ಮೊದಲೇ ಹೇಳಿದ್ದೇನೆ—ನಿನ್ನಪ್ಪನ ಕಾಲ ಬೇರೆ—ಈ ಕಾಲ ಬೇರೆ. ಆ ಕಾಲದಲ್ಲಿ ಜನರಿಗೆ ಧಾರಾಳವಾಗಿ ಪುರುಸೊತ್ತು ಇತ್ತು–ಚೆನ್ನಾಗಿ ಹೊಡೆದಾಡಿಕೊಂಡರು.

ವಿಠ್ಠಲ ಪಂತ: ಮತ್ತೆ, ಚುನಾವಣೆಗೆ ನಿಲ್ಲುವವನ ಯೋಗ್ಯತೆಯ ಮೇಲೆ ಹೊಂದಿಕೊಂಡೇ ಎಲ್ಲವೂ ಇದೆ.

ಭುಜಂಗ: ಅದನ್ನು ನೀವೇ ಹೇಳಿ! ನಾನಂದರೆ ಅವ ಅಪ್ಪನಿಗೆ insult ಅಂದಾಳು. Always Woman cry if father insult.

ರಾಮುಪ್ಪಯ್ಯ! ಬಿಡೀರಮ್ಮ ನೀವು ಚಿಂತೆಯನ್ನು! ನಿಮ್ಮ ಯಜಮಾನರು ಅವಿರೋಧವಾಗಿ ಆರಿಸಿ ಬರುವುದರಲ್ಲಿ ಎಳ್ಳಷ್ಟು ಅನುಮಾನವಿಲ್ಲ!

ಭುಜಂಗ: ಕೇಳಿದಿಯಲ್ಲ-ಇನ್ನು ತವರುಮನೆಯ ಮಾತೆತ್ತಬೇಡ. ನಾನು ಅವಿರೋಧವಾಗಿ ಚುನಾಯಿಸಲ್ಪಟ್ಟದನ್ನು ಇಲ್ಲಿ ಕೂತು ಕೇಳು. ಯಾವಾಗಲೂ husband is great—wife obedient.

(ಪರದೆ)

ದೃಶ್ಯ ೨

[ರಸ್ತೆ: ರಾಮುಪ್ಪಯ್ಯ ಮತ್ತು ವಿಠ್ಠಲ ಪಂತರ ಪ್ರವೇಶ.]

ರಾಮುಪ್ಪಯ್ಯ: (ಪೊಳ್ಳನೆ ನಗುತ್ತ) ಹೇಗೆ ಪಂತರೇ ನನ್ನ ಆಟ? ಭುಜಂಗ ರಾಯರು ಸೂರ್ಯ—ಉಳಿದವರು ನಕ್ಷತ್ರಗಳು!

ವಿಠ್ಠಲ ಪಂತ: (ತಾನೂ ನಗುತ್ತ) ನಿಜ ತಾನೆ? ಇನ್ನು ಸೂರ್ಯನ ಹಾಗೇ ಉರಿಯಲಿಕ್ಕಿದೆ.

ರಾಮುಪ್ಪಯ್ಯ: ಅವರ ಯಜಮಾನಿ ಹೇಳಿದ ಮಾತು ಸುಳ್ಳಲ್ಲ. ಈ ಭುಜಂಗ ರಾಯರಿಗೆ ಚುನಾವಣೆ ಬೇಡವಿತ್ತು.

ವಿಠ್ಠಲ ಪಂತ: ಆದರೆ, ನೀವು ಬಿಡಬೇಕಲ್ಲ.

ರಾಮುಪ್ಪಯ್ಯ: ಬಿಡೋದು? ಏಕೆ ಬಿಡಬೇಕು? ಅವರ ಜನ್ಮದಲ್ಲಿ ಒಂದು ಚಿಕ್ಕಾಸನ್ನೂ ಹೊರಗೆ ಕೊಟ್ಟವರಲ್ಲ. ಅಪ್ಪ ಮಾಡಿಟ್ಟ ಆಸ್ತಿಗೆ ಒಬ್ಬ ಕಾವಲುಗಾರನಾಗಿ ನಿಂತೇ ಅವರ ಜೀವನ ಸವೆದಿದೆ. ಧನವೆಂಬುದು ಒಂದೇ ಕಡೆಯಲ್ಲಿ, ಕೆಸರು ನೀರಿನಂತೆ ನಿಲ್ಲಬಾರದು ನೋಡಿ, ಅತ್ತಿತ್ತ ಹರಿದಾಡುತಿದ್ದರೆನೇ ಲೋಕಕ್ಷೇಮ.

ವಿಠ್ಠಲ ಪಂತ: ಆದರೆ, ಅವರು ಗಂಟು ಬಿಚ್ಚಬೇಕಲ್ಲ!

ರಾಮುಪ್ಪಯ್ಯ: ಅವರಪ್ಪ ಬಿಚ್ಚುತ್ತಾರೆ. ಚುನಾವಣೆ ಅದು!

ವಿಠ್ಠಲ ಪಂತ: ಅವಿರೋಧ ಆಯ್ಕೆ ಎಂದೀರಲ್ಲಾ!

ರಾಮುಪ್ಪಯ್ಯ: ಅದು ಪೀಠಿಕೆ, ಅಷ್ಟೆ, ಮತ್ತೆ ಸ್ಪರ್ಧೆ ಇ ಯೆಂದರೆ ಹೂಂ ಅನ್ನುವವರು ಭುಜಂಗ ರಾಯರೇ?

ವಿಠ್ಠಲ ಪಂತ: ಪ್ರತಿಸ್ಪರ್ಧಿಗಳಿರುವರೆಂದಿರಾ? ಯಾರೂ ಮುಂದೆ ಬಂದುದು ಕಾಣಲಿಲ್ಲವಲ್ಲ!

ರಾಮುಪ್ಪಯ್ಯ: ಮೊದಲೇ ತಯಾರಿಸಿಟ್ಟಿದ್ದೇನೆ.

ವಿಠ್ಠಲ ಪಂತ: ಯಾರು?

ರಾಮುಪ್ಪಯ್ಯ: ಲೋಕ ಸಂಘದ ಆ ಚಂದರ್ ಇದ್ದಾನಲ್ಲ, ಅವನೊಬ್ಬ!

ವಿಠ್ಠಲ ಪಂತ: ಅವನೇ? ಅವನೊಡನೆ ಏನಿದೆ? ಸುಮ್ಮನೆ ಈ ಭಾಸ್ಕರನ ಮುಂದೆ ಸುಟ್ಟು ಹೋಗಲಿಕ್ಕಿಲ್ಲವೆ?

ರಾಮುಪ್ಪಯ್ಯ: ಚಿಕ್ಕ ಬಲ್ಬುಗಳಿಗೆ ಭಾಸ್ಕರ ಎನ್ನಬೇಡಿ, ಚಂದರನೊಡನೆ ಹಣವಿಲ್ಲ ನಿಜ. ಅದಕ್ಕಾಗಿಯೇ ಅವನನ್ನು ಬಜಾಯಿಸಿ ಬಂದಿದ್ದೇನೆ.

ವಿಠ್ಠಲ ಪಂತ: ಅರೆಅರೆಅರೆಅರೆ! ಅರ್ಥವಾಗಲಿಲ್ಲ. ಸ್ವಲ್ಪ ಬಿಡಿಸಿ ಹೇಳಿ.

ರಾಮುಪ್ಪಯ್ಯ: ಕೇಳಿ. ಭುಜಂಗ ರಾಯರು ನಿಲ್ಲುತ್ತಾರೆ-ನೀನೂ ನಿಲ್ಲು ಅಂದೆ. ನಾನೊಲ್ಲೆ ಅಂದ. ಏ ಹುಲ್ಲೀ, ನಿಲ್ಲೀ ಅಂತ ಪುನಃ ಹೇಳಿದೆ ಹೂಂ, ಹೂಂ. ಈ ಆಟ ಬಲ್ಲೆ–ನಾನಿಲ್ಲೆ ಎಂದ. ಮತ್ತೆ ಬಿಡಿಸಿ ಹೇಳಿದೆ. "ಚಂದರ್" ಹೆದರಬೇಡ. ನಾನಿದ್ದೇನೆ. ನೀನು ನಿಂತಿರುವಿ ಅಂದರೆ, ಭುಜಂಗ ರಾಯರಿಗೆ ತಲೆ ಸಿಡಿತ ಉಂಟಾಗಿ–ತಕ್ಕೋ ಐದು ಸಾವಿರ—ಏಳಲ್ಲಿಂದ ಅನ್ನುತ್ತಾರೆ. ಸ್ವಲ್ಪ ಹಣ ಈಚೆಗೆಸೆದು ಬಿಡು—ಉಳಿದ್ದನ್ನು ನಿನ್ನ ಕಿಸೆಗೆ ತುರುಕಿಬಿಡು" ಎಂದದ್ದೇ, ಕ್ಲಾಪ್ ಝಾಡಿಸಿ ಸಂತೋಷದಿಂದ ಒಂದು ಆರ್ಭಟಿ ಕೊಟ್ಟು ಬಿಟ್ಟ.

ವಿಠ್ಠಲ ಪಂತ: ಒಳ್ಳೇ ತಮಾಷೆ. ಇದಿನ್ನೂ ಭುಜಂಗ ರಾಯರಿಗೆ ತಿಳಿದಿಲ್ಲ.

ರಾಮುಪ್ಪಯ್ಯ: ತಿಳಿಯಲು ಇನ್ನು ಒಂದೆರಡು ದಿನವಿದೆ, ನಿಲ್ಲಿ. ಆ ಮೇಲೆ ಇನ್ನೊಬ್ಬ ಜಟ್ಟಿಯನ್ನು ತಯಾರಿಸಿದ್ದೇನೆ.

ವಿಠ್ಠಲ: ಯಾರಪ್ಪ?

ರಾಮುಪ್ಪಯ್ಯ: ಗೊತ್ತಿಲ್ಲವೆ? ಪಂಜೀಬೈಲ್ ಶಂಕ್ರಯ್ಯ.

ವಿಠ್ಠಲ: ಯಾರು, ನಮ್ಮ ಜಂಟಲ್ ಮೇನ್ ಶಂಕ್ರಯ್ಯ? ವ್ಹಾರೆ ವ್ಹಾ!

ರಾಮುಪ್ಪಯ್ಯ: ಅವನೇ. ಅವನಿಗೂ ಎರಡು-ಮೂರು ಸಾವಿರ ಕೊಡಿಸುತ್ತೇನಂತ ಹೇಳಿದ್ದೇನೆ.

ವಿಠ್ಠಲ. ಹಾಗಾದರೆ, ಭುಜಂಗ ರಾಯರ ಶಾಂತಸರೋವರದಲ್ಲಿ ತುಫಾನೇಳುವುದು ಖಂಡಿತ!

ರಾಮುಪ್ಪಯ್ಯ: ತುಫಾನಲ್ಲ-ಪ್ರಳಯವೇ ಇದೆ. ನೋಡಿ-ಇನ್ನೂ ಇದೆ.

ವಿಠ್ಠಲ. ಇನ್ನೂ?

ರಾಮುಪ್ಪಯ್ಯ: ಇನ್ನೂ! ಈಗ ಆ ಮೀನಾಕ್ಷಮ್ಮನ ಮನೆಗೆ ಹೋಗಬೇಕು.

ವಿಠ್ಠಲ: ಅವಳೂ ಈ ತುಫಾನಿಗೆ? ಕೇಳುವಳೇ?

ರಾಮುಪ್ಪಯ್ಯ: ಕೆರಳಿಸಬೇಕು ಪಂತರೇ, ಹಾಗಾದರೆ, ತಾವಾಗಿ ಕೇಳುತ್ತಾರೆ.

ವಿಠ್ಠಲ: ಹೇಳಿಬಿಡಿ ಸ್ವಲ್ಪ.

ರಾಮುಪ್ಪಯ್ಯ: ಕಳೆದ ಚುನಾವಣೆಯಲ್ಲಿ ಅವಳನ್ನು ನಿಲ್ಲಿಸಬೇಕೆಂದು ಸೂಚನೆ ಬಂದಿತ್ತು. ಅವಳೂ ಒಪ್ಪಿದ್ದಳು. ಅಷ್ಟರಲ್ಲೆ ಅವಳ ಗಂಡನಿಗೂ ಅವಳಿಗೂ ಅನೇಕರು ಬುದ್ಧಿ ಹೇಳಿ, ವಿನಂತಿಸಿ, ಹೆದರಿಸಿ, ನಿಲ್ಲದ ಹಾಗೆ ಮಾಡಿಬಿಟ್ಟರು. ಆದರೆ, ಈ ಬಾರಿ ನಾನು ಮಾತ್ರ ಅವಳನ್ನು ನಿಲ್ಲಿಸದೆ ಬಿಡೋದಿಲ್ಲ. ಈಗ ಅವಳ ಗಂಡ ಇಲ್ಲನೋಡಿ. ಪಾಪ, ತೀರಿ ಹೋಗಿದ್ದಾರೆ.

ವಿಠ್ಠಲ: ಏನು, ಅವಳಿಗೆ ಮೆಸ್ಮರಿಸ್ಮ್ ಮಾಡುತ್ತೀರಾ?

ರಾಮುಪ್ಪಯ್ಯ: ಏನು ಮಾಡುತ್ತೇನೆಂದು ನೀವು ನೋಡುವಿರಂತೆ. ನೀವೂ ಸ್ವಲ್ಪ ಸಹಾಯಮಾಡಬೇಕು. ಪಾಲು ಇದೆ, ಏನೂ!

ವಿಠ್ಠಲ ಪಂತ: ಭುಜಂಗ ರಾಯರಲ್ಲಿಗೆ ಹೋಗುವಾಗಲೇ ಅದನ್ನು ಹೇಳಿದ್ದಿರಲ್ಲ. ಸೈ, ಬಿಡಿ ಯೋಚನೆ. ನಮ್ಮ ಧರ್ಮವೇ ಅದು. ಸ್ವಧರ್ಮೇ ನಿಧನಂ ಶ್ರೇಯಃ ಅಂತ! ನನಗೆ ಇಂಗ್ಲಿಷ್ ಬರೋದಿಲ್ಲ ನೋಡಿ. ನಮ್ಮ ಪ್ರಾಣ–ತ್ರಾಣ ಇರೋದು ಸಂಸ್ಕೃತದಲ್ಲಿ.

ರಾಮುಪ್ಪಯ್ಯ: ಇಂಗ್ಲಿಷ್ ತಿಳಿಯದಿದ್ದರೂ ಬುದ್ಧಿ ಜಾಸ್ತಿಯಿದ್ದರಾಯಿತು.

ವಿಠ್ಠಲ ಪಂತ: ನಾವು ಚುನಾವಣೆಗಿಲ್ಲ—ನಮ್ಮದು ಬನಾವಣೆ.

ರಾಮುಪ್ಪಯ್ಯ: ಅದೆಲ್ಲ ಒಂದೇ ಪಂತರೇ! ಚುನಾವಣೆ ಎಂದರೆ ಬನಾವಣೆ—ಬನಾವಣೆ ಅಂದರೆ ಚುನಾವಣೆ! ಬ[illegible] ಹೋಗೋಣ! (ಹೋಗುವರು.)

ದೃಶ್ಯ ೩

[ಮೀನಾಕ್ಷಮ್ಮನವರ ಮನೆ. ಮೀನಾಕ್ಷಮ್ಮ, ತನ್ನ ಸಹೋ[illegible] ರನೊಡನೆ ಚದುರಂಗ ಆಟದಲ್ಲಿ ಮಗ್ನಳಾಗಿರುವಳು. ರಾಮುಪ್ಪ[illegible] ಮತ್ತು ವಿಠ್ಠಲ ಪಂತರ ಪ್ರವೇಶ. ಮೀನಾಕ್ಷಮ್ಮ, ಅವರ[illegible] ನೋಡುವುದಿಲ್ಲ.]

ರಾಮುಪ್ಪಯ್ಯ: (ಒಂದೆರಡು ನಿಮಿಷ ನಿಂತು, ಕೆಮ[illegible] ಮೀನಾಕ್ಷಮ್ಮನ ಲಕ್ಷ್ಯವನ್ನೆಳೆಯಲು ಯತ್ನಮಾಡಿ, ಆ ಮೇ[illegible] ವಿಠ್ಠಲ ಪಂತರೇ, ಮೀನಾಕ್ಷಮ್ಮ ಅಂದರೆ ಇವರೇ! ಸಾಕ್ಷಾ[illegible] ದೇವಿ! ನಮ್ಮೂರಿನವರೆಲ್ಲ ಹೊಗಳುವರು ಎಂದಿರಲ್ಲಾ[illegible] ಅವರೇ ಇವರು!

(ಇಬ್ಬರೂ ನಮಸ್ಕರಿಸುವರು.)

ಮೀನಾಕ್ಷಿ: (ಅತಿಥಿಗಳ ಕಡೆ ತಿರುಗಿ) ಯಾ[illegible] ರಾಮುಪ್ಪಯ್ಯನವರು? ಯಾವಾಗ ಬಂದಿರಿ? ಸದ್ದೇ ಮಾ[illegible] ಬೆಕ್ಕಿನಂತೆ ಬಂದಿರಾ? ಬನ್ನಿ, ಕುಳಿತುಕೊಳ್ಳಿ. 'ಅ[illegible] ಇವರು' ಎಂದಿರಲ್ಲಾ, ಏನದು?

ರಾಮುಪ್ಪಯ್ಯ: ಏನಿಲ್ಲ ಮೀನಾಕ್ಷಮ್ಮ, ನಮ್ಮ ವಿ[illegible] ಪಂತರು ತಮ್ಮನ್ನು ನೋಡಿಕೊಂಡು ಹೋಗಬೇಕೆ[illegible] ಒತ್ತಾಯ ಮಾಡಿದರು. ತಮ್ಮ ವಿಷಯವಾಗಿ ಊರಿನ[illegible] ಸದಾ ಪ್ರಶಂಸೆ ಮಾಡುತ್ತಿರುವುದನ್ನು ಕೇಳಿ—ಆತುರ[illegible] ಯದೆ ಬಂದುಬಿಟ್ಟೆತು. ಕ್ಷಮಿಸಿರಿ.

ಮೀನಾಕ್ಷಮ್ಮ: ಯಾವ ತಪ್ಪಿಗೆ ಕ್ಷಮಿ[illegible] ರಾಮುಪ್ಪಯ್ಯನವರೇ?

ರಾಮುಪ್ಪಯ್ಯ: ತಮ್ಮ ಆಟದಲ್ಲಿ ನಮ್ಮದೊಂದು ಕಾ[illegible]

ಮೀನಾಕ್ಷಮ್ಮ: ಆಟ ಯಾವಾಗಲೂ ಇದೆ.

ರಾಮುಪ್ಪಯ್ಯ: ಆ ಶಾಂತತೆಯಲ್ಲಿ ನಾವೊಂದು ಅಕ್ರ[illegible] ಕೂಟ ನೋಡಿ!

ವಿಠ್ಠಲ ಪಂತ: ಸ್ತ್ರೀಯರ ಶಾಂತತೆಯನ್ನು ಭಂಗಗೊ[illegible] ಸುವುದು ತಪ್ಪು ಅಂತ ಉಪನಿಷದ್ ವಾಕ್ಯವಿದೆ ಅಮ್ಮಾ[illegible]

ಮೀನಾಕ್ಷಮ್ಮ: ಬಹಳವಾಯಿತಲ್ಲಾ–ಪಂತರೇ! ನಿ[illegible] ರುವಿರೇಕೆ? ಕುಳಿತುಕೊಳ್ಳಿ. ತಮಗೆ ಕಾಫಿಯೋ, ಚಹ[illegible]

ವಿಠ್ಠಲ ಪಂತ: ಏನೂ ಬೇಡ ಅಮ್ಮಾ. ತಮ್ಮ ಶಾ[illegible] ಮಾತುಗಳಿಂದಲೇ ತೃಷೆಯೆಲ್ಲ ಹೋಯಿತು..

ಮೀನಾಕ್ಷಿ: ಮಾತುಗಳಿಂದಲೇ ಬಾಯಾರಿಕೆ ಹೋಗ[illegible] ದಾದರೆ ಕ್ಷೇಮವಿತ್ತು ಪಂತರೇ, ಆದರೆ, ಕಾಫಿ ಪುಡಿ ಅಂ[illegible] ಗಳು ಹೆಚ್ಚುತ್ತಿರುವುದನ್ನು ನೋಡಿದರೆ, ಜನರಿಗೆ ಈ ನ[illegible] ಗಿಂತ ಆ ಹುಡಿಯಲ್ಲೆ ವಿಶ್ವಾಸ ಅಧಿಕ ಎಂದು ಸ್ಪಷ್ಟವಾ[illegible] ತ್ತಿದೆ. ಮಾಣೀ!

[ಮೊಣಿ ಬರುವನು. "ಎರಡು ಕಾಫಿ ತಂದು ಕೊಡು" ಎಂದು ಮೀನಾಕ್ಷಮ್ಮ ಹೇಳುವಳು.]

ರಾಮುಪ್ಪಯ್ಯ: ಮೀನಾಕ್ಷಮ್ಮನವರೇ, ಪಂತರೇನೋ ಹೇಳುತ್ತಾರೆ.

ಮೀನಾಕ್ಷಮ್ಮ: ಏನಂತೆ?

ರಾಮುಪ್ಪಯ್ಯ: ಏನೊ! ಅವರನ್ನೆ ಕೇಳಿಬಿಡಿ. ಅವರೇ ಹೇಳಲಿ!

ಮೀನಾಕ್ಷಿ: ಏನು ಪಂತರೇ, ನೀವೇನೋ ಹೇಳುತ್ತಿರುವಿರೆಂದು ರಾಮುಪ್ಪಯ್ಯನವರನ್ನುತ್ತಾರೆ—ಆದರೆ, ನೀವು ತುಟಿ ಚಲಿಸುವ ಹಾಗೆ ನನಗೆ ಕಾಣಿಸುತ್ತಿಲ್ಲ.

ವಿಠ್ಠಲ ಪಂತ: (ಗಂಟಲು ಸರಿಪಡಿಸಿ) ಅಮ್ಮಾ!

ಮೀನಾಕ್ಷಿ: ಹೇಳಿ.

ವಿಠ್ಠಲ ಪಂತ: (ಪುನಃ ಗಂಟಲು ಸರಿಪಡಿಸಿ) ಅಮ್ಮಾ!

ಮೀನಾಕ್ಷಿ: ದನದ ಕರುವಿನ ಹಾಗೆ 'ಅಂಬಾ' ಅನ್ನುತ್ತಿರೋದು ಬಿಡಿ ಪಂತರೇ, ಮಾತಾಡಿ ಬಿಡಿ!

ರಾಮುಪ್ಪಯ್ಯ: ನಿಮ್ಮ ವಿಷಯ ಪ್ರಶಂಸೆ ಕೇಳಿ, ಆನಂದ ತುಂದಿಲರಾಗಿ, ಭಕ್ತಿ-ಗೌರವಭರಿತರಾಗಿ, ಅವರ ಗಂಟಲು ತುಂಬಿಹೋಗಿದೆ, ಮೀನಾಕ್ಷಮ್ಮನವರೇ!

ಮೀನಾಕ್ಷಿ: ಸಾಕುಮಾಡಿ ರಾಮುಪ್ಪಯ್ಯನವರೇ—ನೀವೊಬ್ಬ ಅಭಿನವ ಕಾಳಿದಾಸನೆಂದು ಬಲ್ಲೆ. (ಕಾಫಿ ಬರುವುದು) ಪಂತರೇ, ನೋಡಿ, ಕಾಫಿ ಕುಡಿದಾದ ಮೇಲೆ ಬೇಕಾದರೆ ಮಾತಾಡಿ!

ವಿಠ್ಠಲ ಪಂತ: (ಕಾಫಿ ತೆಗೆದ ಕೊಳ್ಳುತ್ತ) ಮೀನಾಕ್ಷಮ್ಮನವರೇ, ನಾನು ಕೆಲವೇ ಮಾತುಗಳ ಮನುಷ್ಯ.

ಮೀನಾಕ್ಷಿ: ಆ ಕೆಲವು ಮಾತುಗಳನ್ನು ಕೂಡ ನಾನಿನ್ನೂ ಕೇಳಿಲ್ಲವಲ್ಲ!

ವಿಠ್ಠಲ ಪಂತ: ನಮ್ಮೂರಿನ ಜನರೆಲ್ಲರೂ ಕೂಡಿ ನನಗೇ ಈ ಆನಂದದ ಕರ್ತವ್ಯವನ್ನೊಪ್ಪಿಸಿಬಿಟ್ಟರು.

ಮೀನಾಕ್ಷಿ: ಯಾವ ಕರ್ತವ್ಯವೆಂದಿರಿ?

ರಾಮುಪ್ಪಯ್ಯ: ತಾವು ನಮ್ಮ ಮತದಾರ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಬೇಕೆಂದು ಎಲ್ಲರೂ ಅಪೇಕ್ಷಿಸುತ್ತಾರೆ.

ಮೀನಾಕ್ಷಿ: (ಆಶ್ಚರ್ಯ, ಆ ಮೇಲೆ ನಗು.) ಏನಿದು ರಾಮುಪ್ಪಯ್ಯ? ಚುನಾವಣೆಯ ಮಾತೇ (ಪುನಃ ನಗುತ್ತ) ನಾನು? ಯಾವ ಕೆಲಸಕ್ಕೂ ಬಾರದ ಈ ನಿರ್ಜೀವ ಅಬಲೆಗೆ ಒಮ್ಮೆ ಜೀವಕೊಟ್ಟು, ಮತ್ತೆ ಕೊಲ್ಲಬೇಕೆಂದು ಜನರು ಅಪೇಕ್ಷೆ ಪಡುವುದಾದರೆ, ದೇವರಲ್ಲಿ ನನ್ನದೊಂದೇ ಪ್ರಾರ್ಥನೆ—"ಇನ್ನು ನನಗೆ ಈ ಕೊಲೆಗಡುಕರ ಊರಿನಲ್ಲಿ ಜನ್ಮಕೊಡಬೇಡ" ಎಂದು!

ವಿಠ್ಠಲ ಪಂತ: ಶಾಂತಂ ಪಾಪಂ! ಏನು ಮಾತಿದು! ಅಮ್ಮಾ, "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ" ಅಂತ.

ಮೀನಾಕ್ಷಮ್ಮ: ಕುರಿಗಳನ್ನು ಗುಡಿಯಲ್ಲಿ, ಸಾಮವಿಟ್ಟು, ಹೂಮಾಲೆ ಹಾಕಿಯೇ ಕೊಲ್ಲುವ ದೇಶವಲ್ಲವೆ ಪಂತರೇ? ನೀವು ಹೇಳಿದ ಶ್ಲೋಕಕ್ಕೆ ಚೆನ್ನಾಗಿ ಅರ್ಥ ಹೊರಡುತ್ತದೆ.

ರಾಮುಪ್ಪಯ್ಯ: "ಮೀನಾಕ್ಷಮ್ಮ ಝಿಂದಾಬಾದ್" ಅಂತ ಮೊನ್ನೆಯಿಂದ ಆ ಕಡೆ ಕೂಗುಗಳು ಕೇಳಿ ಬರುತ್ತವೆಂದು ಪಂತರು ಹೇಳಿದರು.

ಮೀನಾಕ್ಷಿ: ತಮಾಷೆಯಿದೆ ಪಂತರೇ! ಅಹಮದಾಬಾದ-ಅಲ್ಲಹಾಬಾದ ಇದ್ದಂತೆ 'ಝಿಂದಾಬಾದ್' ಎಂಬ ಒಂದು ಊರನ್ನೆ ರಚಿಸಿ, 'ಝಿಂದಾಬಾದ್' ಎಂದು ಕೂಗಬೇಕಾದವರಿಗೆ ಆ ಊರಿನ ಗಡಿಯೊಳಗೇ ಕೂಗಬೇಕೆಂದು ಒಂದು ಶಾಸನ ಮಾಡುವುದೊಳ್ಳೆಯದು.

ವಿಠ್ಠಲ ಪಂತ: ತಾವು ಶಾಸನಸಭೆಯಲ್ಲಿ ನಿಜಕ್ಕೂ ಅಂತಹ ಒಂದು ಮಸೂದೆ ತರಬೇಕಮ್ಮ!

ಮೀನಾಕ್ಷಿ: ಏನು, ಇಷ್ಟರೊಳಗೇ ನನ್ನನ್ನು ಚುನಾಯಿಸಿಯೂ ಆಯಿತೇ?

ವಿಠ್ಠಲ ಪಂತ: ತಾವು ಚುನಾವಣೆಗೆ ನಿಲ್ಲದಿದ್ದರೆ ಜನರು ಸತ್ಯಾಗ್ರಹ ಮಾಡುವುದು ಖಂಡಿತ.

ರಾಮುಪ್ಪಯ್ಯ: ತಮ್ಮ ಓಟುಗಳನ್ನು ಭುಜಂಗ ರಾಯರಿಗೆ ಕೊಡುವ ಬದಲಾಗಿ ಸಮುದ್ರಕ್ಕೆ ಹಾಕುವೆವೆಂದು ನಮ್ಮ ಕಡೆಯ ಜನರು ಔಡು ಕಚ್ಚಿ ನುಡಿಯ ಹತ್ತಿದ್ದಾರೆ. ನೋಡಬೇಕಿತ್ತು ಅವರ ಕೋಪವನ್ನು! ಅಬ್ಬ! ಅಲ್ಲವೇ ಪಂತರೇ?

ವಿಠ್ಠಲ ಪಂತ: ಭುಜಂಗರಾಯರ ಖಾಸಾ ಹೆಂಡತಿಯೇ ನಿಮ್ಮ ಕಡೆ ಇದ್ದಾರೆ. ಅವರ ಓಟು ನಿಮಗೇ!

ಮೀನಾಕ್ಷಿ: ಬಹಳ ತಮಾಷೆಯಾಗಿ ಕಾಣುತ್ತದೆ! ಆದರೆ, ರಾಮುಪ್ಪಯ್ಯನವರೇ, ಹೆಂಗುಸಾದ ನನಗೇಕೆ ಚುನಾವಣೆ?

ರಾಮುಪ್ಪಯ್ಯ: ಏನಿದು ಮೀನಾಕ್ಷಮ್ಮನವರೇ? ನಮ್ಮ ಕಡೆಯಿಂದ ಒಬ್ಬಳೇ ಒಬ್ಬಳು ಹೆಂಗುಸಿಗೆ ಪ್ರಾತಿನಿಧ್ಯವಿಲ್ಲವೆಂದರೆ! ಆ ಭುಜಂಗರಾಯರೇನು ಹೇಳುವರು ಗೊತ್ತೇ?

ಮೀನಾಕ್ಷಿ: ಏನಂತೆ?

ರಾಮುಪ್ಪಯ್ಯ: ಅಡುಗೆ ಮಾಡಿ, ಮನೆಕಸ ತೆಗದು, ಗಂಡನಿಗೂ ಮಕ್ಕಳಿಗೂ ಬಡಿಸುವ ಹೆಂಗಸರಿಗೆ ಶಾಸನ ಸಭೆ ಏಕೆ? ಏನು ಗೊತ್ತಿದೆ ಅವುಗಳಿಗೆ?—ಅಂತೆ!

ವಿಠ್ಠಲ ಪಂತ: ಮತ್ತೆ ಇಂಗ್ಲಿಷಿನಲ್ಲೇನೊ ಹೇಳಿದರು.

ರಾಮುಪ್ಪಯ್ಯ: ಅಹುದು. Woman is all head—no brains ಅಂತೆ.

ಮೀನಾಕ್ಷಿ: (ತುಸು ಕೋಪದಿಂದ) ಹಾಗೆಂದರೇ?

ರಾಮುಪ್ಪಯ್ಯ: ಮತ್ತೆ ಕೆಲವು ಬಯ್ಗಳನ್ನೂ ಬಯ್ದರು. ಆದರೆ,........ನಮಗೇಕೆ ಆ ಕುತ್ಸಿತ ಮಾತುಗಳು? ಅಲ್ಲವೇ ಪಂತರೇ?

ವಿಠ್ಠಲ ಪಂತ: ಹರಿ ರಾಮ್! ನಾವು ಬಾಯಿಂದ ಎಚ್ಚರಿಸಲು ಸಾಧ್ಯವಿಲ್ಲವಮ್ಮಾ ಆ ಮಾತುಗಳನ್ನು!

ಮೀನಾಕ್ಷಿ: (ಮತ್ತೂ ಕೋಪದಿಂದ) ಏನೆಂದರು? ಹೇಳಿ ಬೇಡಿ.

ರಾಮುಪ್ಪಯ್ಯ: ಇಲ್ಲ ಮೀನಾಕ್ಷಮ್ಮಾ, ಸಾಧ್ಯವಿಲ್ಲ! ಅಬ್ಬ! ಏನು ದರ್ಪ ಆ ಭುಜಂಗ ರಾಯರದು! ಇಷ್ಟರಲ್ಲೇ ಊರಿನ ಓಟೆಲ್ಲಾ ತನಗಾಯಿತೆಂದು ನೆನೆಸಿಕೊಂಡಿದ್ದಾರೆ!

ಮೀನಾಕ್ಷಿ: ಬಯ್ದರೇ?

ವಿಠ್ಠಲ ಪಂತ: ಅವಾಚ್ಯ ಶಬ್ದಗಳಮ್ಮಾ! ನಮ್ಮ ನಿಘಂಟಿನಲ್ಲಿ ಅಂತಹ ಶಬ್ದಗಳೇ ಇಲ್ಲ.

ರಾಮುಪ್ಪಯ್ಯ: ನೀವು ಚುನಾವಣೆಗೆ ನಿಲ್ಲುವಿರೆಂದು ಹೇಳಲು ಹೋಗಿದ್ದೆವು. ಅವರ ಬೆಂಬಲವನ್ನು ಕೇಳಿದ್ದೆವು. ಕೇಳಿದ್ದೇ ತಡ—ತಾಟಕಿ—ಶೂರ್ಪನಖಿ-ಪೂತನಿ—(ನಾಲಗೆ ಕಚ್ಚಿ)-ಕ್ಷಮಿಸಿರಮ್ಮಾ! ಥಕ್ಕನೆ ಬಾಯಿಗೆ ಬಂದು ಹೋಯಿತು.

ಮೀನಾಕ್ಷಿ: ಚಾಂಡಾಲ! ಕುಂಭಕರ್ಣ! ಭಕಾಸುರ!

ವಿಠ್ಠಲ ಪಂತ: ನೀವದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿರಮ್ಮಾ!

ಮೀನಾಕ್ಷಿ: ನಾನವನಿಗೆ ಯಾವ ಅನ್ಯಾಯವನ್ನೂ ಮಾಡಿಲ್ಲ. ಚುನಾವಣೆಗೆ ನಾನು ನಿಲ್ಲುವೆನೆಂದು ನನಗೇ ತಿಳಿದಿಲ್ಲ. ಅಷ್ಟರೊಳಗೇ ಆ ಶ್ವಾನ........

ರಾಮುಪ್ಪಯ್ಯ: ನಿಂತರೆ ಅವನಪ್ಪನ ಗಂಟೇನು ಹೋಯಿತು?

ವಿಠ್ಠಲ ಪಂತ: ನಿಲ್ಲುವುದು ನಿಮ್ಮ ಜನ್ಮಸಿದ್ಧ ಹಕ್ಕು ನೋಡಿ! ಅಮ್ಮಾ—ನೀವು ನಿಲ್ಲಲೇಬೇಕು! ಆ ಭುಜಂಗ ರಾಯರಿಗೆ ಒಂದು ತುಂಡು ಓಟು ಸಿಕ್ಕದ ಹಾಗೆ ಮಾಡುವ ಕೆಲಸ ನನ್ನದು! ನಮ್ಮ ಕ್ಷೇತ್ರಕ್ಕೆ ಬಂದರೆ, ಅವನಿಗೆ ಕರಿ ಪತಾಕೆ!

ರಾಮುಪ್ಪಯ್ಯ: Go back ಭುಜಂಗಾ ಅಂತ—ಸಾಲಾಗಿ ಜನರು ನಿಂತು ಕೂಗೋದೇ! ಅವನ ಭದ್ರತಾ ಹಣವು ಮುಟ್ಟುಗೋಲಾಗದಿದ್ದರೆ ನನ್ನ ಹೆಸರು ರಾಮುಪ್ಪಯ್ಯ ಅಲ್ಲ!

ವಿಠ್ಠಲ ಪಂತ: ನೋಡಿ, ಗಂಡಸರಿಗಿಂತ ಹೆಂಗಸರ ಓಟು ಹೆಚ್ಚು! ನಿಮಗೆ ಎರಡೂ ಕಡೆಯ ಮತ ಸಿಕ್ಕುತ್ತದೆ!

ಮೀನಾಕ್ಷಿ: ಪಂತರೇ, ನಾನು, ಕಳೆದ ಚುನಾವಣೆಯ ಕಾಲದಲ್ಲಿ ಒಂದಿಷ್ಟು ಮನಸ್ಸು ಮಾಡಿದ್ದೆ. ಆ ಮೇಲೆ, ಏಕೋ ಆ ಗೊಂದಲ ಬೇಡವೆಂದು ಸುಮ್ಮಗೆ ಬಿದ್ದುಕೊಂಡಿದ್ದೆ. ಯಾರನ್ನೂ ನೋಯಿಸುವ ಇಚ್ಛೆ ನನಗಿಲ್ಲ. ಆದರೆ, ಈಗ, ಆ ಭುಜಂಗರಾಯರ ದರ್ಪದ ಮಾತುಗಳನ್ನು ಕೇಳಿ ನ… ಕೆರಳಿದೆ. ನಾನು ನಿಲ್ಲುವೆನು!

ರಾಮುಪ್ಪಯ್ಯ: ವ್ಹಾ ವ್ಹಾ! ಸ್ಪಿರಿಟ್ ಅಲ್ಲವೇ ಅ… ಅದು? ನೋಡಿ, ಪಂತರೇ! ನಾನು ಮೊದಲೇ ಹೇಳಿಲ್ಲವೆ… ಮೀನಾಕ್ಷಮ್ಮನವರಿಗೆ ಮನಸ್ಸಾದರೆ ಹತ್ತು ಭುಜಂಗ ರಾ… ರನ್ನು ಅರೆದು ನೀರು ಕುಡಿಯುವರೆಂದು! ಮೀನಾಕ್ಷಮ… ನಿಮಗೆ ಯಾವ ಯೋಚನೆಯೂ ಬೇಡ-ಹಣ ಎಷ್ಟು ಖ… ದರೂ ಚಿಂತಿಲ್ಲ—ಅಂದರೆ ಖರ್ಚಾಗದಂತೆ ನೋಡೋಣ… ಆದರೂ, ಖರ್ಚುಮಾಡಲೇ ಬೇಕಾದರೆ ಒಂದಿಷ್ಟು ಖ… ಮಾಡೋಣ. ಆ ಭುಜಂಗ ರಾಯರಿಗೆ—ಅವರ ಸ್ಥಾನ … ಬ್ಲಿಯಲ್ಲ ಎಂದು ಮಾತ್ರ ತೋರಿಸಿ ಕೊಡಬೇಕು.

ಮೀನಾಕ್ಷಿ: ಅವನು ಭುಜಂಗನಾದರೆ ನಾನು ಮುಂಗ…

ರಾಮುಪ್ಪಯ್ಯ: ಭೇಷ್! ಹೇಗೆ ಪಂತರೇ—ಮೀ… ಕ್ಷಮ್ಮ ಹಾಗೇ ಹೇಳುವರೆಂದು ನಿಮ್ಮೊಡನೆ ನಾನು ಹೇಳಿಲ್ಲ… ಅಮ್ಮಾ—ನಾಮಪತ್ರ ಹಾಕುವ ದಿನ ನಾಡದು. ಎಲ್ಲ ಸಿ… ನಡೆಸುತ್ತೇನೆ. ಆ ವರೆಗೆ ರಹಸ್ಯವಾಗಿಯೇ ಇರಲಿ! … ಪಂತರೇ,—ಹೋಗೋಣ.

(ಹೋಗುವರು)

ತೆರೆ.

ದೃಶ್ಯ ೪

[ರಸ್ತೆ: ರಾಮುಪ್ಪಯ್ಯ ಮತ್ತು ವಿಠ್ಠಲ ಪಂತ ಬರುತ್ತಿರುವ…

ರಾಮುಪ್ಪಯ್ಯ: ನೋಡಿದಿರಲ್ಲವೆ ಪಂತರೇ ಜಗತ್ತನ್ನ… ಕೆಲವರಿಗೆ ಸ್ತುತಿ ಬೇಕು, ಕೆಲವರಿಗೆ ಕೆರಳಿಸಬೇಕು, ಕೆಲವ… ಹಣ ಬೇಕು, ಮತ್ತೆ ಕೆಲವರಿಗೆ ಎಲ್ಲ ಬೇಕು.

ವಿಠ್ಠಲ ಪಂತ: ಅಂತೂ, ಲೋಕದಲ್ಲಿ ಒಲಿಸಲ್ಪಡಲ… ದವರು ಯಾರೂ ಇಲ್ಲ. ಮುಖ್ಯ, ಯಾರ ಮನಸ್ಸು ಹೇ… ಯಾವ ಕಾಲದಲ್ಲಿ ಯಾರಿಗೆ ಎಲ್ಲಿ ಗುರಿಯಿಟ್ಟು ಹೊಡೆ… ಬೇಕು ಎಂಬುದಿಷ್ಟನ್ನು ತಿಳಿದು ವರ್ತಿಸಬೇಕು.

ರಾಮುಪ್ಪಯ್ಯ: ಸರಿಯಾಗಿಯೆ ಹೇಳಿದಿರಿ. ಮೀನಾಕ್ಷ… ನೇನೂ ಸಾಮಾನ್ಯ ಹೆಂಗಸಲ್ಲ. ಅವಳ ಮಾತುಗಳ… ಕೇಳಲಿಲ್ಲವೆ? ಆದರೆ, ಅವಳ ಸ್ತ್ರೀಯತ್ವವನ್ನೆ ಪ್ರಶ್ನಿಸುವ… ಮಾತು ಬಂದರೆ ಸೈ, ಮಹಿಷಾಸುರ ಮರ್ದಿನಿಯಂತೆ!

ವಿಠ್ಠಲ ಪಂತ: ಅಂಥ ಹೆಂಗುಸರು ಬೇಕಯ್ಯಾ ದ… ದಲ್ಲಿ! ಒಳ್ಳೆ ಹೆಂಗುಸು, ಒಳ್ಳೇ ಹೆಂಗುಸು!

(ಚಂದರ್ ಪ್ರವೇಶಿಸುವನು)

ಚಂದರ್: ರಾಮುಪ್ಪಯ್ಯನವರೇ? ನಮಸ್ತೇ, ನಮಸ್ತೇ…

ರಾಮುಪ್ಪಯ್ಯ: ಚಂದರ್? ನಮಸ್ತೇ,

ವಿಠ್ಠಲ ಪಂತ: ಇವರೇ ಏನು ನಮ್ಮ ಚುನಾವಣಾ ಹುರಿಯಾಳು?

ರಾಮುಪ್ಪಯ್ಯ: ಇವರೇ! ಹೇಗೆ, ಠೀಕಾಗಿರುವರಲ್ಲವೇ?

ವಿಠ್ಠಲ ಪಂತ: ನಿಜಕ್ಕೂ ಇವರಷ್ಟು ಠೀವಿಯ ಜನವನ್ನು ನಾನು ನನ್ನ ಜನ್ಮದಲ್ಲಿ ಎಲ್ಲಿಯೂ ನೋಡಿಲ್ಲ! ವ್ಹಾ ವ್ಹಾ! ಆ ಶರ್ಟಿನ ಕಿವಿ ನಿಂತ ರೀತಿ ನೋಡಿ! ಆ ಕೈರಟ್ಟೆಗಳ ಮೇಲೆ ಶರ್ಟು ಸುರುಳಿ ಸುರುಳಿಯಾಗಿ ಎದ್ದು ತೋರುವ ಸೊಬಗು ನೋಡಿ! ಬರೀ ಚಲ್ಲಣ ನೋಡಿದರೇ ಇದ್ದ ಓಟುಗಳೆಲ್ಲ ಇವರಿಗೇ ಖಂಡಿತ ಎಂದು ಈಗಲೇ ಭವಿಷ್ಯ ಹೇಳಬಹುದು. ಎಲ್ಲಕ್ಕೂ ಮಿಗಿಲು ಆ ಹೊಸ ಮಾದರಿ ಕ್ರಾಪ್! ಆ ಕ್ರಾಪ್ ನೋಡಿದ ಮೇಲೆ ಜನರು ಇವರಿಗೆ ಓಟು ಕೊಡದಿದ್ದರೆ ಮತ್ತೆ ಲೋಕದಲ್ಲಿ ನ್ಯಾಯ-ಸತ್ಯ-ತೇಜಸ್ಸು-ಪಾತ್ರ ನೋಡಿ ದಾನ ಎಂಬ ನೀತಿ ಯಾವುದೂ ಇಲ್ಲವೆಂದೇ ಅರ್ಥ.

ಚಂದರ್: (ವಿನೋದವಾಗಿ) ಯಾರಿವರು ಒಳ್ಳೇ ಮನುಷ್ಯರು, ರಾಮಪ್ಪಯ್ಯನವರೇ? ಬಹಳ ವಿದ್ಯಾವಂತರಂತೆ ಕಾಣುತ್ತಾರೆ. ಕೆಟ್ಟ ಮಾತನ್ನೇ ಆಡೋದಿಲ್ಲ. ಇಂಥ ಜನ ಲೋಕದಲ್ಲಿ ಬಹಳ ಕಮ್ಮಿ.

ರಾಮುಪ್ಪಯ್ಯ: ಇವರು ನನ್ನ ಮಿತ್ರರು—ವಿಠ್ಠಲ ಪಂತರೆಂದು ಹೆಸರು.

ಚಂದರ್: ಪಂತಜೀ, ಸಂತೋಷವಾಯಿತು. ನಾನು ಚುನಾವಣೆಯಲ್ಲಿ ಸೋತರೂ ಚಿಂತೆಯಿಲ್ಲ-ನಿಮ್ಮ ಮಾತನ್ನು ಕೇಳಿ ಉಂಟಾದ ಆನಂದವನ್ನು ಮರೆಯಲಾರೆ.

ವಿಠ್ಠಲ ಪಂತ: ನೀವು ಸೋಲುವುದೆಂದರೇನು? ಸಿಂಹಕ್ಕೆ ಸೋಲುಂಟೇ?

ಚಂದರ್: ಇದ್ದಾರಲ್ಲ—ಭುಜಂಗ ರಾಯರು!

ವಿಠ್ಠಲ ಪಂತ: ಅವರು ಆನೆ!........ಹೋಗಲಿ, ಬಿಡಿ. ನೀವು ಚಂದರ್ ಅನಿಸಿಕೊಳ್ಳುತ್ತೀರಲ್ಲಾ—ಸರಿಯಾದ ಹೆಸರೇನು?

ಚಂದರ್: "ಆರ್. ಆರ್. ಚಂದರ್" ಅಂತ—ಕನ್ನಡದಲ್ಲಿ ಹೇಳಬೇಕಾದರೆ—"ರೊ. ರಾ. ಚಂದರ್."

ವಿಠ್ಠಲ ಪಂತ: ಹಾಗೆಂದರೆ?

ಚಂದರ್: ರೊಕ್ಕದ ಮನೆ ರಾಮಚಂದ್ರ ಎಂದು ಹೆಸರು. 'ರೊಕ್ಕದ ಮನೆ' ಅಂದರೆ ಬಹಳ ಪುರಾತನ ಕಾಲದ ಮಾತು. ಈಗ ರೊಕ್ಕವೂ ಇಲ್ಲ. ಮನೆಯೂ ಇಲ್ಲ; ಆದರೆ, ಮನೆ-ರೊಕ್ಕ ಹೋದರೂ ಮನುಷ್ಯನ ಹೆಸರು ರೊಕ್ಕ ಇರಲಿ ಎಂದು ಆರ್. ಆರ್. ಚಂದರ್ ಅನಿಸಿಕೊಂಡೆ. ನನಗೆ ಒಳ್ಳೇ ಹೆಸರುಗಳಲ್ಲಿ ವಿಶ್ವಾಸ ಹೆಚ್ಚು.

ವಿಠ್ಠಲ ಪಂತ: ನಿಮ್ಮ ಮಾತು ಬಹಳ ಮೆಚ್ಚುಗೆಯಾಯಿತು.

ರಾಮುಪ್ಪಯ್ಯ: ಈ ಮಾತಿನ ರೀತಿಯೇ ಎಸೆಂಬ್ಲಿ ಮೆಂಬರಿಕೆಗೆ ನಿಮ್ಮ ಯೋಗ್ಯತೆಯನ್ನು ಸೂಚಿಸುತ್ತದೆ.

ಚಂದರ್: (ಸಂದೇಹದಿಂದ) ಆದರೆ, ರಾಮುಪ್ಪಯ್ಯಾ, ಚುನಾವಣೆಗೆ ಮೊದಲೇ ಎಲ್ಲ ತೀರ್ಮಾನ ಮಾಡುವಿರೆಂದು ನೀವು ಹೇಳಿರುವಿರಿ. ಈಗ ನಿಮ್ಮ ಮಾತನ್ನು ಕೇಳಿದರೆ, ನನ್ನನ್ನು ನೆಟ್ಟಗೆ ಎಸೆಂಬ್ಲಿಗೆ ಕಳಿಸುತ್ತೀರೆಂದು ಅರ್ಥವಾಗುತ್ತದೆ.

ರಾಮುಪ್ಪಯ್ಯ: ಛೇ, ಹಾಗೇನೂ ಇಲ್ಲ. ನೀವು ಮಾತ್ರ, ಎಷ್ಟಕ್ಕೂ ಹಿಂದೆಗೆಯುವುದಿಲ್ಲವೆಂದು ಛಲ ಹಿಡಿಯಬೇಕು. ಅತ್ತ-ಇತ್ತ ಹೊಯ್ದಾಟವಾದ ಮೇಲೆ-ಮತ್ತೆ ನನ್ನ ಮಾತಿಗೆ ಮಣಿದು, ಉಪಾಯವಿಲ್ಲದೆ ಒಪ್ಪಬೇಕು. ಆ ವರೆಗೆ ನಿಮ್ಮ ಚುನಾವಣಾ ಪ್ರಚಾರ ಭೇರಿಯು ಚೆನ್ನಾಗಿ ಮೊಳಗಲಿ!

ಚಂದರ್: ಏನೇನೂ ಯೋಚನೆಮಾಡಬೇಡಿ. ನಾಡದು ನಾಮ ಪತ್ರ ಹಾಕುವುದಾದರೂ, ಈ ದಿನವೇ ಊರಲ್ಲೆಲ್ಲ ಗೇಂದು-ಗೋಪು ಮೊದಲಾದವರು ಸುದ್ದಿ ಹರಡಿಸಿ ಬಿಟ್ಟಿದ್ದಾರೆ.. ನಮ್ಮ ಸಂಘದ ಪತ್ರಿಕೆಯಲ್ಲೂ ಈ ದಿನ ಸಾಯಂಕಾಲ ಇಷ್ಟು ದಪ್ಪ ಅಕ್ಷರಗಳಲ್ಲಿ ಪ್ರಕಟಣೆ ಹೊರಡುತ್ತದೆ.

ರಾಮುಪ್ಪಯ್ಯ: ಸೈ ಬಜಾಯಿಸಿ ಬಿಡಿ.

ಚಂದರ್: ನಾಡದು ನಾಮಪತ್ರ ದಾಖಲು ಮಾಡುವಾಗ, ಡಿಪಾಜಿಟ್ ಹಣದ ವ್ಯವಸ್ಥೆ ಮಾಡಲು ಮರೆಯಬೇಡಿ ರಾಮುಪ್ಪಯ್ಯನವರೇ!

ರಾಮುಪ್ಪಯ್ಯ: ತಯಾರಿದೆ. ಹೆದರಬೇಡಿ.

ಚಂದರ್: ಹೆದರಿಕೆ ಗಿದರಿಕೆ ಅಲ್ಲ. ನಮ್ಮ ಆಟ ಚಂದ ರೀತಿಯಲ್ಲಿ ಸಾಗಲಿ ಅಂತ!............

(ಗೇಂದು ಮತ್ತು ಗೋಪು ಬರುತ್ತಿರುವರು)

ಚಂದರ್: ಅಕೊಳ್ಳಿ, ಬಂದರಲ್ಲ- ಗೇಂದು ಎಂಡ್ ಕಂಪೆನಿ! (ವಿಠ್ಠಲ ಪಂತರ ಕಡೆ ತಿರುಗಿ) ಪಂತರೇ, ಇವರು ಗೇಂದು, ಇವರು ಗೋಪು. ಇದೊಂದು ಅಪ್ರತಿಮ ಜೋಡಿ. ಈ ಜೋಡಿಗೆ ಸಾವು-ನೋವುಗಳೆಂದಿಲ್ಲ. ಇವರಿಗೆ 'ಬೆಲ್ಜಿಯಮ್ ಕೋಟೆ ಒಡೆಯಿರಿ' ಎನ್ನೋದು-ಒಡೆದು ಬರುತ್ತಾರೆ. 'ಸ್ಟೀಮರ್ ಮುಳುಗಿಸು' ಅನ್ನಿ, ಕಲ್ಲು ಹೊಡೆದಾದರೂ ಮುಳುಗಿಸುತ್ತಾರೆ. ಯಾವ ರಾಷ್ಟ್ರಕ್ಕೂ ಗೌರವದ ಜೋಡಿ ಇದು! ಗೇಂದೂ, ಕೆಲಸ ಹೇಗಾಯಿತು?

ಗೇಂದು: (ತಲೆಯಲ್ಲಾಡಿಸುತ್ತ) ನೆಟ್ಟಗೆ! ಪತ್ರಿಕೆಯಲ್ಲಿ ದಪ್ಪ ಅಕ್ಷರಗಳಲ್ಲಿ ನಿನ್ನ ಹೆಸರು ಬಂದು ಹೋಯಿತು. ಅದರ ಜತೆಯಲ್ಲೆ ಭುಜಂಗ ರಾಯರ ಹೆಣವನ್ನು ಹೂಳಿ ಬಿಟ್ಟೂ ಆಯಿತು!

ಚಂದರ್: (ಸಂತೋಷದಿಂದ, ರಾಮುಪ್ಪಯ್ಯನವರಿಗೆ) ನೋಡಿ! ನಾನು ಹೇಳಲಿಲ್ಲವೇ? ಇನ್ನೇನು ಮಾಡಬೇಕು, ಹೇಳಿರಿ.

ರಾಮುಪ್ಪಯ್ಯ: ಇನ್ನು, ನಾಮಪತ್ರ ದಾಖಲು ಮಾಡಿದ ದಿನವೇ ಒಂದು ಭಾಷಣ ಏರ್ಪಡಿಸಬೇಕು. ಅದರಲ್ಲಿ ಡೊಳ್ಳು ಹೊಟ್ಟೆಯುವರನ್ನೆಲ್ಲ ಚೆನ್ನಾಗಿ ಥಳಿಸಬೇಕು.

ಚಂದರ್: ಬಿಡಿ-ಆಯಿತೆಂದಿಟ್ಟುಕೊಳ್ಳಿ. ಹೋಗಲೆ?

ರಾಮುಪ್ಪಯ್ಯ: ನಮಸ್ತೇ.

ಚಂದರ್-: ನಮಸ್ತೇ! ಐದು ರೂಪಾಯಿ ಇದ್ದರೆ ಕೊಡಿ; ನಾಡದು ಭುಜಂಗ ರಾಯರ ಹಣ ಸಿಕ್ಕಿದ ಕೂಡಲೇ ಕಳೆಯ ಬಹುದು.

ರಾಮುಪ್ಪಯ್ಯ: ಡಿಪಾಜಿಟ್ ಹಣ ಮಾತ್ರ ಇದೆ. ಹೆಚ್ಚಿಗಿಲ್ಲ. ಆ ಹಣ ಸಿಗುವ ವರೆಗೆ ಯಾವುದೊಂದು ತರದ ಶ್ರಮವನ್ನೂ ಕೈಕೊಳ್ಳಬೇಡಿ. ತಿಳಿಯಿತೇ?

ಚಂದರ್: ತಿಳಿಯಿತು. ನಮಸ್ತೇ! (ಗೇಂದು, ಗೋಪು, ಚಂದರ್ ಹೋಗುವರು.)

ರಾಮುಪ್ಪಯ್ಯ: ಪಂತರೇ, ಹೇಗೆ ನಮ್ಮ ಜನ?

ವಿಠ್ಠಲ ಪಂತ: ಭುಜಂಗ ರಾಯರಿಗೆ ತಲೆ ಸಿಡಿತ ಕೊಡುವಷ್ಟು ಯೋಗ್ಯತೆಯು ಅವನಲ್ಲಿ ಖಂಡಿತವಾಗಿ ಇದೆ.

[ಭುಜಂಗ ರಾಯರ ಪ್ರವೇಶ: ಕಂಕುಳಲ್ಲಿ, ದಪ್ಪಗಿನ ಚರ್ಮದ Wallet)

ಭುಜಂಗ: ಏನು ಪಂತರೇ, ಯಾರ ಯೋಗ್ಯತೆ ಕುರಿತು ಮಾತಾಡುತಿದ್ದಿರಿ?

ವಿಠ್ಠಲ ಪಂತ: ಭುಜಂಗ ರಾಯರು? (ಸ್ವಗತ) ಪರ ಮಾತ್ಮಾ! ಇವರಿಗೆ ಕೇಳಿಸಿತೇನೊ!

ರಾಮುಪ್ಪಯ್ಯ: ಭುಜಂಗ ರಾಯರೇ, ನಿಮ್ಮ ಯೋಗ್ಯ ತೆಯ ಕುರಿತು ಮಾತಾಡುತಿದ್ದೆವು.

ಭುಜಂಗ: ಅದೇನು, ಬಿಡಿರಪ್ಪ!

ರಾಮುಪ್ಪಯ್ಯ: (ಯೋಚನೆಯನ್ನು ನಟಿಸಿ) ಬಿಡುವ ಪ್ರಶ್ನೆಯಿಲ್ಲ ಈಗ ಭುಜಂಗ ರಾಯರೇ!

ಭುಜಂಗ: ಅಂದರೆ?

ರಾಮುಪ್ಪಯ್ಯ: (ಹಲ್ಲು ಕಡಿದು, ಮೆಲ್ಲಗೆ) ನೀಚ! ಅಧಮ! ಬುದ್ಧಿ ಹೀನ ಜಂತು! ತಂಟೆಖೋರ! ಹಜಾಮ!

ವಿಠ್ಠಲ ಪಂತ: (ಹಲ್ಲು ಕಡಿದು) ಕಾಳಸರ್ಪ! ಹಾಲಾ ಹಲ! ಪಾಷಾಣ!

ಭುಜಂಗ (ಬೆರಗಾಗಿ): ಏನಿದು—ಮಂತ್ರ ಹೇಳಿದ ಹಾಗೆ ಬಯ್ಯುತ್ತಿರಿ? ಯಾರಿಗಯ್ಯ ಇದು ಸಹಸ್ರನಾಮ?

ರಾಮುಪ್ಪಯ್ಯ: ಭುಜಂಗ ರಾಯರೇ, ಸರ್ವ ನಾಶ ವಾದರೂ ಆ ಅಧಮನನ್ನು ಬಿಡಬಾರದು!

ಭುಜಂಗ (ಗಾಬರಿಯಿಂದ) ಯಾರನ್ನು? ಏಕೆ?

ವಿಠ್ಠಲ ಪಂತ: ಆ ಚಂದರ್, ದಂಗೆಖೋರ!

ರಾಮುಪ್ಪಯ್ಯ: ಚುನಾವಣೆಗೆ ಸ್ಪರ್ಧಿಸುತ್ತಾನೆ!

ಭುಜಂಗ: (ಕಂಕುಳಲ್ಲಿನ Wallet ಕೆಳಗೆ ಬಿಟ್ಟು, ಗಾಬರಿಯಿಂದ) ಅಯ್ಯೋ! ಚುನಾವಣೆಗೆ ಚಂದರ್! ಚ[illegible] ಚುನಾವಣೆಗೆ!

ರಾಮುಪ್ಪಯ್ಯ: (ಭುಜಂಗ ರಾಯರನ್ನು ಹಿ[illegible] ಏನಿದು ಭುಜಂಗ ರಾಯರೇ? ಸಿಂಹವು ಆಡಿನ ಮರಿಗೆ ಹೆ[illegible] ವುದೇ? ಎಲ್ಲಿ ಹೋಯಿತು ನಿಮ್ಮ ಪೌರುಷ! ಎಲ್ಲಿ ಹೋ[illegible] ನಿಮ್ಮ ಠೀವಿ, ಗಾಂಭೀರ್ಯ, ಧೈರ್ಯ. ಸ್ಥೈರ್ಯ, ಶೌ[illegible] ಚಂದರ್ ಎಂಬ ಒಂದು ಹೆಸರು ಕೇಳಿ ಹೀಗೆ ಧಾತು ತಪ್ಪಿ[illegible] ಮುಂದೆ ಚುನಾವಣಾ ಯುದ್ಧದಲ್ಲಿ ಹೇಗೆ ಎದೆಕೊ[illegible] ನಿಲ್ಲುವಿರಿ?

ವಿಠ್ಠಲ ಪಂತ: ಕೃಷ್ಣನು ಅರ್ಜುನನಿಗೆ ಹೇಳಿ[illegible] ನೆನಪು ಮಾಡಿಕೊಳ್ಳಿ. 'ಅರ್ಜುನಾ, ಕಳವಳಪಡ[illegible] ಬಿಲ್ಲಿಗೆ ಬಾಣ ತೊಟ್ಟು ಹೊಡೀ' ಅಂತ.

ಭುಜಂಗ: (ಸಂಕಟಗೊಂಡು) ಹೇ ರಾಮುಪ್ಪ[illegible] 'ಅವಿರೋಧ ಆಯ್ಕೆ', 'ಪ್ರತಿಸ್ಪರ್ಧೆಯಿಲ್ಲ' ಅಂತ ಸ[illegible] ಶಬ್ದಗಳನ್ನು ಹೇಳಿ ನನ್ನನ್ನು ಕೊಂದಿರಲ್ಲಾ!

ರಾಮುಪ್ಪಯ್ಯ: ಛೀ, ಎಂಥ ಮಾತಿದು ಭು[illegible] ರಾಯರೇ! ಚುನಾವಣೆಗೆ ನಿಂತರೆ ಮಾನ-ಮರ್ಯಾದೆ [illegible] ನಿಮಗೇ! ನಮಗೇನಿದೆ? ಈಗ ನೀವೇನೂ ನಿಮ್ಮ ನಾಮ[illegible] ದಾಖಲು ಮಾಡಿಲ್ಲ—ಬೇಡವಾದರೆ ಬಿಟ್ಟುಬಿಡಿ!

ಭುಜಂಗ. ಹೇಗೆ ಬಿಟ್ಟುಬಿಡುವುದು ರಾಮುಪ್ಪ[illegible] ಪತ್ರಿಕೆಗಳಿಗೆ ನನ್ನ ಹೆಸರನ್ನು ಕಳಿಸಿದ್ದೇನೆ.

ವಿಠ್ಠಲ ಪಂತ: ಭುಜಂಗ ರಾಯರೇ, ಚಂದರನ[illegible] ಹಲ್ಲುಕಡ್ಡಿಗೆ ಹೆದರಿ ಬಿಟ್ಟೇರೆಂದರೆ ಇನ್ನೇನು ಉಳಿಯಿ[illegible] ಅವನು ಚುನಾವಣೆಗೆ ನಿಂತರೆ ಅವನಿಗೆ ಒಂದು ಓಟನ್ನಾ[illegible] ಕೊಡಲು ಹೆಂಡತಿ ಕೂಡ ಇಲ್ಲ; ಸಮಾಜದಲ್ಲಿ ಸ್ಥಾನ[illegible] ಸಾರ್ವಜನಿಕ ಸೇವೆ ಮಾಡಿದವನಲ್ಲ; ಚುನಾವಣೆಗೆ ಖ[illegible] ಮಾಡಲು ಹಣವಿಲ್ಲ. ನಾಮಪತ್ರ ದಾಖಲು ಮಾ[illegible] ಹಣವಿದೆಯೋ ಎಂಬುದು ಸಂದೇಹ.

ರಾಮುಪ್ಪಯ್ಯ: ಮಾತ್ರವಲ್ಲ, ನಿಶ್ಚಯವಾಗಿ ನ[illegible] ಪತ್ರ ದಾಖಲು ಮಾಡುತ್ತಾನೋ ಎಂಬುದು ಇನ್ನು ತಿ[illegible] ಬೇಕಾಗಿದೆ.

ಭುಜಂಗ: ನೀವು ಹೇಳಿದ್ದು ನಿಜ! ನಡೀರಿ, ಹೋಗೂ[illegible] ನೀವು ಅವನ ಹೆಸರು ಹೇಳಿದ ಕೂಡಲೇ ಒಮ್ಮೆಗೆ ಭಸಕ್ [illegible] ಹಾಗಾಯಿತು. ಅಲ್ಲೆಲ್ಲಿಯಾದರೂ ಒಂದು ಸೋಡಾ [illegible] ತಂದು ಕೊಡಿ. ನನಗೆ ಅಗ್ನಿ ಜಾಸ್ತಿ!

(ಹೋಗುವರು)

[ಶಂಕ್ರಯ್ಯನ ಪ್ರವೇಶ. ಕುಡಿದು ಬರುತ್ತಿದ್ದಾನೆ.)

ಶಂಕ್ರಯ್ಯ (ಸ್ವಗತ): ಪಂಜೀಬೈಲ್ ಶಂಕ್ರಯ್ಯ[illegible] ದರೆ ನಾನು! ಶಂಕ್ರಯ್ಯ ಪಂಜಿಬೈಲ್ ಅಂತಲೂ ಕರೆ[illegible] ತ್ತಾರೆ. ಆದರೆ, ಮುದ್ದಿನ ಹೆಸರು 'ಪಂಜೀ' ಅಂತ! ಚ[illegible]

ವಣೆಗೆ ನಿಂತವನು ನಾನೇ! ನನ್ನನ್ನು ನಿಲ್ಲೂ ಅಂದರು—ನಿಂತೆ. ಮೂರು ಸಾವಿರ ರೂಪಾಯಿ ತಕ್ಕೋ—ಹೋಗು ಅಂತಾರೆ—ಹೋಗೋದಿಲ್ಲ. ಎಸೆಂಬ್ಲಿಗೆ ಮೆಂಬರಾಗಿ ನನಗೆ ನಾಲ್ಕು ದಿನ ಭಾಷಣ ಮಾಡಬೇಕೂಂತ ಮನಸ್ಸು! Subject ಒಂದೇ-ನೀವು ಪ್ರೊಹಿಬಿಶನ್ ತೆಗೀತಿರೊ ಅಥವಾ ನಾನು ಸತ್ಯಾಗ್ರಹ ಮಾಡಿ, ಎಸೆಂಬ್ಲಿ ಕುರ್ಚಿಯ ಮೇಲೆ ಪ್ರಾಣ ಬಿಡಬೇಕೋ ಅಂತ ಒಂದೇ ಪ್ರಶ್ನೆ ಕೇಳೋದು! ಒಂದು Single question-ನಾಲ್ಕು ದಿವಸ ಕೇಳೋದು-ಐದನೇ ದಿನ ಸತ್ಯಾಗ್ರಹ-ಆರನೇ ದಿನ ಕೋಲಾಹಲ-ಏಳನೇ ದಿನ ಖತಮ್! ನಾನು ಪ್ರಾಣ ಬಿಡದಿದ್ದರೆ ಇವರಿಗೆ ಬುದ್ಧಿ ಬರೋದಿಲ್ಲ! ಅಲ್ಲ—ಒಂದು ಚಪ್ಪು ಶರಾಬು ಕುಡಿಯಬೇಕಾದರೆ ಕದ್ದು ಕುಡಿಯಬೇಕು! ಮತ್ತೆ ಲೋಕದಲ್ಲಿ ಸತ್ಯ ಉಳಿಯೋದು ಹೇಗೆ? ಎಲ್ಲರಿಗೆ ಸಮಾನ ಹಕ್ಕು ಅನ್ನುತಿದ್ದಾರೆ—ನಮ್ಮ ಹಕ್ಕು ಕಸಿದುಕೊಂಡು ಬಿಟ್ಟಿದ್ದಾರೆ. ಎಲ್ಲರಿಗೆ ಸಮಾನ ಸಂದರ್ಭ ಅಂದಿದ್ದಾರೆ—ನಮಗೆ ಕುಡಿಯಲು ಸಂದರ್ಭ ಒದಗಿಸಿ ಕೊಟ್ಟಿಲ್ಲ. ಶರಾಬು ಅಂದರೆ ವಿಷವಂತೆ-ಮತ್ತೆ ಕಾಫಿ ಹೊಟೇಲುಗಳಲ್ಲಿ ಹಂಚುತ್ತಿರೋದು ಅಮೃತ ಅಂತ ಇವರು ರುಜು ಪಡಿಸಲಿ ನೋಡೋಣ! (ಕೈ ಬೀಸುವನು)

[ಶಂಕ್ರಯ್ಯನ ಸ್ನೇಹಿತ ಬಂದು, ಅವನ ಕೈಗೆ ಹಿಡಿದು ಕರೆದೊಯ್ಯುವನು.]

ದೃಶ್ಯ ೫

[ಭುಜಂಗರಾಯರ ಮನೆ ಕೊಠಡಿ. ಸುತ್ತಲೂ, ಕಾಗದದ ಕಟ್ಟುಗಳನ್ನು ರಾಶಿ ಹಾಕಿ, ಭುಜಂಗರಾಯರು ತಲೆಗೆ ಕೈಕೊಟ್ಟು ಕುಳಿತಿರುವರು. ಹೆಂಡತಿ ಲಕ್ಷ್ಮಿ ಬಂದು,—]

ಲಕ್ಷ್ಮಿ: ಊಟಕ್ಕೆ ಬನ್ನಿ!

ಭುಜಂಗ: (ಫಕ್ಕನೆ ವೈದೆಗೆದು, ರೋಷದಿಂದ) ಏನೇ ಇದು, ಆ ರೀತಿ ಮೆಲ್ಲನೆ ಬಂದು ಗದರಿಸೋದು? ಒಮ್ಮೆಗೆ ಪ್ರಾಣ ಹಾರಿತು ನೋಡು!

ಲಕ್ಷ್ಮಿ: ಮತ್ತೆ, ಆಕಸ್ಮಿಕವಾಗಿ ಸಿಡಿದು ಬಂದು, ಗರ್ಜಿಸಬೇಕೆ?

ಭುಜಂಗ: ಏನುಬೇಕಾದರೂ ಮಾಡು.

ಲಕ್ಷ್ಮಿ: ಬನ್ನಿ ಊಟಕ್ಕೆ!

ಭುಜಂಗ: ನಾನು ಊಟ ಮಾಡೋದಿಲ್ಲ.

ಲಕ್ಷ್ಮಿ: ನಿನ್ನೆ ರಾತ್ರೆ ನಿದ್ದೆಯೂ ಮಾಡಿಲ್ಲ; ಈಗ-ಊಟ ಬೇಡವೆನ್ನುತ್ತೀರಿ! ನಾನು ಹೇಳಿಲ್ಲವೆ ಆ ದಿನ,—ಚುನಾವಣೆ ಎಂದರೆ ನಿದ್ದೆಯೂ ಇಲ್ಲ, ಊಟವೂ ಇಲ್ಲ ಎಂದು! ನೀವು ನಿದ್ದೆ ಮಾಡದೆ ಯೋಚನೆಯಿಂದ ನನಗೂ ನಿದ್ದೆಯಿಲ್ಲ; ನೀವು ಊಟ ಮಾಡದೆ ನನಗೂ ಹಸಿವಾಗುವುದಿಲ್ಲ. ನಿಮ್ಮಲ್ಲಿ ಚುನಾವಣೆಯ ಉದ್ವೇಗವೊಂದಿದೆ—ನನ್ನಲ್ಲಿ ಅದು ಇಲ್ಲ. ನಾನು ಹಾಸಿಗೆ ಹಿಡಿಯುತ್ತೇನೆ.

ಭುಜಂಗ: ಎರಡು ತಲೆದಿಂಬು ಹೆಚ್ಚು ಇಟ್ಟುಕೋ—ನಡೆ!

ಲಕ್ಷ್ಮಿ: ಮತ್ತೆ ನಿಮ್ಮನ್ನು ನೋಡಿಕೊಳ್ಳುವವರಾರು?

ಭುಜಂಗ: ನನ್ನನ್ನು ಯಾರೂ ನೋಡಬೇಕಾಗಿಲ್ಲ. ನಾನು ಈ ಕಟ್ಟುಗಳಿಗೆ ತಲೆಗೊಟ್ಟು ಇಲ್ಲೆ ಮಲಗುತ್ತೇನೆ.

ಲಕ್ಷ್ಮಿ: ನಿಮಗೆ ತಲೆ ಹಾಳಾಗಿದೆ!

ಭುಜಂಗ: (ಗದರಿಸುತ್ತ) ಹಾಳಾದರೆ ಸುಖವಾಗುತಿತ್ತು! "ಇವನಿಗೆ ತಲೆಹಾಳು—Unfit" ಅಂತ ನನ್ನನ್ನು ತೆಗೆದು ಹಾಕುತಿದ್ದರು. ಈಗ ಯುದ್ಧ ಮಾಡಿಯೇ ತೀರಬೇಕು.

ಲಕ್ಷ್ಮಿ: ಬೇಕೆಂದು ತಂದುಕೊಂಡ ಯುದ್ಧ—ಯಾರಿಗೆ ಕೊಡುವಿರಂತೆ?

ಭುಜಂಗ: ಲಕ್ಷ್ಮಿ, ನೀನು ಪತಿವ್ರತೆ ಅಹುದಾದರೆ ಸ್ವಲ್ಪ ಒಳಗೆ ಹೋಗು. ಮರಕುಟಿಗನ ಹಕ್ಕಿಯ ಹಾಗೆ ತಲೆಗೆ ಕುಟ್ಟಬೇಡ!

ಲಕ್ಷ್ಮಿ: ಊಟಕ್ಕೆ ಬನ್ನಿ.

ಭುಜಂಗ: ಬರುತ್ತೇನೆ, ಬರುತ್ತೇನೆ, ಬರುತ್ತೇನೆ. ರಾಮಪ್ಪಯ್ಯ ಬರಲಿ—ನಾಲ್ಕು ಮಾತು ಕೇಳಿ ಮತ್ತೆ ಬರುತ್ತೇನೆ. ಅಕೋ ಬಂದರು. ಇನ್ನು ನೀನು ಒಳಗೆ ಹೋಗು.

[ಲಕ್ಷ್ಮಿ ಹೋಗುವಳು, ರಾಮಪ್ಪಯ್ಯನ ಪ್ರವೇಶ.]

ರಾಮಪ್ಪಯ್ಯ: ಭುಜಂಗ ರಾಯರೇ!

ಭುಜಂಗ: ಓ!

ರಾಮಪ್ಪಯ್ಯ: ನಿಮ್ಮ ಚುನಾವಣಾ ಘೋಷಣೆ ತಯಾರಾಗಿದೆ. ಇನ್ನು ಈ ದಿನ ತಾವು, ಆ ಚಂದರನ ಭಾಷಣದ ಮಾದರಿ ನೋಡಬೇಕು. ಮತ್ತೆ ನಾಳೆ ನಿಮ್ಮ ಭಾಷಣ ಆರಂಭವಾಗಬೇಕು!

ಭುಜಂಗ: ಏನೆಂತ?

ರಾಮಪ್ಪಯ್ಯ: ನಿಮ್ಮ ಟೀಕಾಕಾರರಿಗೆಲ್ಲ ನೀವು ಉತ್ತರ ಕೊಡಬೇಕು. ನಿಮ್ಮನ್ನು ಚುನಾಯಿಸಿದರೆ ಜನರಿಗೆ ಪ್ರಯೋಜನ ಏನು ವಿವರಿಸಬೇಕು!

ಭುಜಂಗ: ಆಯಿತಲ್ಲ, ರಾಮಪ್ಪಯ್ಯನವರೇ! ಹಸಿ ಹಸಿ ಹೂಳಬೇಡಿರೆಂದರೆ ಹೂಳಿಯೇ ಬಿಟ್ಟಿರಲ್ಲ!

ರಾಮಪ್ಪಯ್ಯ: ನೀವು ಹಾಗೆಂದರೆ ಆದೀತೇ? ಎಲ್ಲವೂ ಅನಿರೀಕ್ಷಿತ ಎಂದು ನಿಮಗೆ ಗೊತ್ತೇ ಇದೆ. ಚುನಾವಣೆಯಲ್ಲಿ ಜಯ ಸಿಕ್ಕುವುದು ನಿಮಗೇ ಅಂತ ಎದೆತಟ್ಟಿ ಹೇಳಬಲ್ಲೆ. ಜನರೆಲ್ಲ ನಿಮಗಲ್ಲದೆ ಮತ್ತಾರಿಗೂ ಓಟು ಕೊಡುವುದಿಲ್ಲ ಎಂದು ಆಣೆ ಹಾಕಿ ಹೇಳಿದ್ದಾರೆ.

ಭುಜಂಗ: ಹಾಗಾದರೆ, ಮತ್ತೇಕೆ ಈ ಭಾಷಣ?

ರಾಮಪ್ಪಯ್ಯ: ಜನರೇನೋ ತಮ್ಮನ್ನೆ ಅಪೇಕ್ಷಿಸುತ್ತಾರೆ—ನಿಜ. ಆದರೆ, ಅನ್ಯಾಯವಾದ ಟೀಕೆ-ಅಪಪ್ರಚಾರ ನಡೆಯುತ್ತಿರುವಾಗ, ಜನರು, ತಮ್ಮ ಭಾವೀ ಮುಖಂಡನು

ಅವುಗಳಿಗೆ ತಕ್ಕ ಉತ್ತರ ಕೊಡಲು ಸಮರ್ಥ ಅಂತ ಸ್ವತಹ ನೋಡಲು ಇಚ್ಛಿಸುತ್ತಾರೆ. ನೀವು ಹೀಗೆ ಮೌನವಾಗಿ ಕುಳಿತರೆ, ಜನರಿಗೆ ನಿರಾಶೆಯಾಗುವುದು; ನಿಮ್ಮ ಮೇಲಿನ ವಿಶ್ವಾಸ ಕುಗ್ಗುವುದು.

ಭುಜಂಗ: ವಿಶ್ವಾಸ ಕುಗ್ಗುವುದೇ? ಅಂತೂ, ಸುಮ್ಮಗೆ ನನ್ನ ಪಕ್ಕೇ ಬಿದ್ದುಕೊಂಡವನಿಗೆ ಒಂದು ದಾರಿ ತೋರಿಸಿದಿರಿ ನೀವು? ನನ್ನೆದುರಿಗೆ ನಿಲ್ಲುವ ಧೈರ್ಯ ಯಾರಿಗೂ ಇಲ್ಲವೆಂದು ಹೇಳಿದಿರಿ. ಈಗ ಎಲ್ಲವೂ ಅನಿರೀಕ್ಷಿತ ಅನ್ನುತ್ತ— ಭಾಷಣವೇದಿಕೆಗೆ ನನ್ನನ್ನೊಯ್ದು ಅಲ್ಲಿ ಬಲಿಕೊಡುತ್ತೀರಿ!

[ವಿಠ್ಠಲ ಪಂತನ ಪ್ರವೇಶ]

ಭುಜಂಗ: ಏನು ಪಂತರೇ, ನಿಮ್ಮ ಕಂಕುಳಲ್ಲಿ ಆ ಕಟ್ಟೇನು?

ವಿಠ್ಠಲ ಪಂತ: ಪತ್ರಿಕೆ ಸ್ವಾಮಿ—"ಶುಕವಾಣಿ" ಅಂತ.

ಭುಜಂಗ: ಏನಂತೆ ಶುಕವಾಣಿ?

ವಿಠ್ಠಲ ಪಂತ: ನಿಮ್ಮ ವಿಷಯ ಒಂದು ಲೇಖನ ಬಂದಿದೆ.

ಭುಜಂಗ: ನೋಡೋಣ, ಓದಿರಿ.

ವಿಠ್ಠಲ ಪಂತ: (ಪತ್ರಿಕೆ ಬಿಡಿಸಿ ಓದುವನು) "ಹಣವಿದ್ದರೆ ಹೆಣವೂ ಚುನಾವಣೆಗೆ ನಿಲ್ಲಬಹುದು"—ಇದು ಆ ಲೇಖನದ ಶಿರೋನಾಮೆ.

ಭುಜಂಗ: (ಕೋಪದಿಂದ ತತ್ತರಿಸಿ) Stupid rascal! ನೋಡಿ ರಾಮಪ್ಪಯ್ಯಾ—ಬರವಣಿಗೆಯ ರೀತಿ! ಅದು 'ಶುಕವಾಣಿ'ಯೋ, 'ಸೂಕರವಾಣಿ'ಯೋ, ಹೇಳಿ ಸ್ವಲ್ಪ!

ವಿಠ್ಠಲ ಪಂತ: (ಮುಂದೆ ಓದುತ್ತ) "ಚುನಾವಣೆಗಳೆಂದರೆ ಹೆಣಗಳೂ ಬಾಯಿ ಬಿಡುತ್ತವೆ. ಇತ್ತೀಚೆಗೆ ಒಬ್ಬಿಬ್ಬರು ಧನಾಢ್ಯರು, ಧನಮದದಿಂದ ಮತ್ತರಾಗಿ, ಚುನಾವಣೆಗೆ ತಮ್ಮ ನಾಮಪತ್ರ ಸಲ್ಲಿಸಿ ಅಟ್ಟಹಾಸದಿಂದ ಮೆರೆಯ ಹತ್ತಿರುವರು. ಎಸೆಂಬ್ಲಿಗೆ ಇವರ ಯೋಗ್ಯತೆ ಯಾವುದೆಂದು ಕೇಳಬೇಡಿ. ಕಳ್ಳಸಂತೆಯಲ್ಲಿ ಅಕ್ಕಿ ಮಾರಿದ್ದು ಒಂದು; ಬಡವರನ್ನು ಗೋಳಾಡಿಸಿ, ತಾವು ಡೊಳ್ಳು ಹೊಟ್ಟೆ ಹಿಡಿದು ಮೆರೆದುದು ಇನ್ನೊಂದು; ಗೇಣುದ್ದದ ಮೋರೆಯನ್ನು ಕ್ಷೌರದಿಂದ ನಯವಾಗಿರಿಸಿ ಶುಭ್ರ ಉಡುಪನ್ನು ಧರಿಸಿದ್ದು ಮೂರನೆಯದು; ಪಿತ್ರಾರ್ಜಿತದ ಹಣವನ್ನು ತಮ್ಮ ಸ್ವಂತ ದೇಹ ಪೋಷಣೆಗೂ, ಅದರ ಹುಟ್ಟುವಳಿಯ ಒಂದಂಶವನ್ನು ಶೋಷಣೆಗೂ ಉಪಯೋಗಿಸಿದುದು ನಾಲ್ಕನೆಯದು........ಹೀಗೆ ಹತ್ತು ಹಲವು ಅರ್ಹತೆಗಳನ್ನು ಉದಾಹರಿಸಬಹುದು. ಈ ಕೂಟದಲ್ಲಿ ಬಿಳಿ ಬೈಲು ಭುಜಂಗ ರಾಯರೂ ಒಬ್ಬರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ......."

ಭುಜಂಗ: ಪಂತರೇ, ಸಾಕು ಮಾಡಿ! ಅದರಲ್ಲಿ ನನ್ನ ಹೆಸರೊಂದು ಸರಿ; ಉಳಿದುದೆಲ್ಲ ತಪ್ಪು.

ರಾಮಪ್ಪಯ್ಯ: ಅದು ನಮಗೆಲ್ಲರಿಗೆ ತಿಳಿದೇ ಇದೆ.
ಳಿಯ ಈ ಭಾಷಣದಲ್ಲಿ ನೀವು ಇದಕ್ಕೆ ಉತ್ತರ ಕೊಡಬೇ

ಭುಜಂಗ: ಏನೆಂದು?

ರಾಮಪ್ಪಯ್ಯ: ಪತ್ರಿಕಾ ಮರ್ಯಾದೆಗೆ ಮೀರಿದ
ತರದ ದುಷ್ಟ ಲೇಖನಗಳ ಉದ್ದೇಶವನ್ನು ಜನರೇ ಊ
ಕೊಳ್ಳಬೇಕೆನ್ನುತ, ಇಂಥ ಲೇಖನ ಪ್ರಕಟಣೆಗೆ ಕಾರಣ
ವರು ಚುನಾಯಿಸಿ ಬಂದರೆ ಜನರ ಪಾಡು ಏನಾಗಬಹುದೆ
ವಿವರಿಸಿರಿ.

ಭುಜಂಗ: ಜನರ ಪಾಡು ಏನಾಗುತ್ತದೆ?

ವಿಠ್ಠಲ ಪಂತ: ಅರಾಜಕತೆ, ಅನ್ಯಾಯ, ಸು
ಭಂಡುಮಾತಿನ ಪ್ರಚಾರ ಇತ್ಯಾದಿ.

ಭುಜಂಗ: ಸುಲಿಗೆ ಮಾಡುವವರು ನಾವೇ ಅನ್ನು
ರಲ್ಲ ಅವರು?

ರಾಮಪ್ಪಯ್ಯ: ಅಲ್ಲವೆಂದು ನೀವು ಹೇಳಬೇಕು.

ಭುಜಂಗ: ಅವರು ಅಹುದೆನ್ನುವುದು—ನಾನು
ವೆನ್ನುವುದು—ಇದೇ ಕೆಲಸವಾಯಿತಲ್ಲ!

ರಾಮಪ್ಪಯ್ಯ: ಉಪಾಯವಿಲ್ಲ.

ಭುಜಂಗ: ಉಪಾಯವಿಲ್ಲ—ಎಲ್ಲಾ ಅಪಾಯ
ತಿಳಿಯಿತು ಆಗಲಿ, ಅಷ್ಟೆಲ್ಲಾ ಆಗಿ ನನ್ನ ಜೀವವೊ
ಉಳಿದರೆ, ಮುಂದೆ ನನ್ನ ಮಕ್ಕಳಿಗೆ ಒಂದು ಬುದ್ಧಿವಾದ
ದಿಡಬೇಕೆಂದಿದ್ದೇನೆ—ಪಂಚ ಮಹಾ ಪಾತಕಗಳನ್ನು ಬೇ
ದರೆ ಮಾಡಿರಿ—ಚುನಾವಣೆಗೆ ಮಾತ್ರ ನಿಲ್ಲಬೇಡಿ ಅ
ನೀವು ನಡೆಯಿರಿ—ಭಾಷಣ ವೇದಿಕೆಯ ವ್ಯವಸ್ಥೆ ಮಾಡಿರಿ
ನಾನು ನಮ್ಮ ಯಜಮಾನಿಯವರ ಭಾಷಣದಿಂದ ತ
ಕೊಳ್ಳಲು ಒಂದಂಸು ಅನ್ನ ನುಂಗಿ, ಮತ್ತೆ ನನ್ನ ಭಾ
ತಯಾರಿಸಿಕೊಳ್ಳುತ್ತೇನೆ.

[ರಾಮಪ್ಪಯ್ಯ—ಪಂತ ಹೊರಡುವರು.]

ತೆರೆ.

ದೃಶ್ಯ ೬

[ರಸ್ತೆ. ರಾಮಪ್ಪಯ್ಯ ಮತ್ತು ವಿಠ್ಠಲ ಪಂತರ ಪ್ರವೇಶ.]

ರಾಮಪ್ಪಯ್ಯ: ಪಂತರೇ! ಶಂಕ್ರಯ್ಯಾ—ಚಂದರ್
ಮೀನಾಕ್ಷಮ್ಮ ನಾಮಪತ್ರ ದಾಖಲು ಮಾಡಿಯಾಯಿ
ಅದರಲ್ಲಿ, ಚಂದರ್ ಒಬ್ಬನು ಐದು ಸಾವಿರ ರೂಪಾಯಿ
ದರೆ ಹಿಂದೆಗೆಯುವೆನೆಂದು ಹೇಳಿರುತ್ತಾನೆ.

ವಿಠ್ಠಲ ಪಂತ: ಮತ್ತೆ ಶಂಕ್ರಯ್ಯನ ವಿಚಾರವೇನು

ರಾಮಪ್ಪಯ್ಯ: ಶಂಕ್ರಯ್ಯ ಚಕ್ಕರ್ ಕೊಟ್ಟುಬಿ
ಅವನಿಗೆ ಮೊದಲೇ ಹುಚ್ಚು. ಈಗ ಎಸೆಂಬ್ಲಿಗೆ ಹೊ
ಶರಾಬಿಗಾಗಿ ಹೇರಿಂಗ್ ಮಾಡುವ ಒಂದು ಮನಸ್ಸಾ
ಹತ್ತು ಸಾವಿರ ರೂಪಾಯಿ ಕೊಟ್ಟರೂ ಹಿಂದೆಗೆಯಲು ಸಾ

ವಿಲ್ಲವಂತೆ. ಒಂದು ವಿಧದಲ್ಲಿ ಅವನಿದ್ದುದು ಒಳ್ಳೆಯದೇ ಆಯಿತು. ಮೀನಾಕ್ಷಮ್ಮ ಹೇಗೂ ಹಣಕ್ಕೆ ಮರುಳಾಗುವವರಲ್ಲ. ಅಂತೂ ತ್ರಿಕೋಣದ ಹೋರಾಟವೊಂದು ನಿರ್ಧಾರವಾಯಿತು.

ವಿಠ್ಠಲ ಪಂತ: ಭುಜಂಗರಾಯರು ಹೆಡೆ ಬಡಿದು ಪ್ರಾಣ ಬಿಟ್ಟರೆ?

ರಾಮಪ್ಪಯ್ಯ: ಹಾಗೇನೂ ಇಲ್ಲ. ಅವರಿಗೆ ಭಾಷಣ ಮಾಡಬೇಕೆಂದು ಹೇಳಿದ್ದೇನಷ್ಟೆ? ನಾಲ್ಕು ಜನರ ಮುಂದೆ ಚೆನ್ನಾಗಿ ಸುಳಿದಾಡಿ ಶ್ರಮಿಸಲಿ; ನಾಲ್ಕು ಪತ್ರಿಕೆಗಳಲ್ಲಿ ಅವರ ಹೆಸರು ಬರಲಿ. ಆ ಮೇಲೆ ಸ್ವಲ್ಪ ಧೈರ್ಯಪಟ್ಟು ಚೆನ್ನಾಗಿ ಹಣ ಸುರಿಸುವರು. ಕೊನೆಗೆ ಹೇಗೂ ಇದೆಯಲ್ಲ— ಓಟಿನ ದಿನ, ಗಣಪತಿದೇವರಂತೆ ಪೂಜೆಮಾಡಿ, ನೈವೇದ್ಯ ಮಾಡಿ, ಬಾವಿಗೆ ಹಾಕೋದು!

ವಿಠ್ಠಲ ಪಂತ: ರಾಮಪ್ಪಯ್ಯ, ನನಗೆ ಅವರ ಮೇಲೆ ಸ್ವಲ್ಪ ಕನಿಕರ ಉಂಟಾಗುತ್ತಿದೆಯಲ್ಲಾ! ಪಾಪ.

ರಾಮಪ್ಪಯ್ಯ: ನಿಮ್ಮ ಅಂತಃಕರಣವನ್ನು ಇನ್ನೂ ಒಳ್ಳೆಯವರಿಗಾಗಿ ಕಾದಿರಿಸಿರಿ. ಈ ನಿಷ್ಪ್ರಯೋಜಕ ಜೀವಿಗಳು, ತಾವೇ ಸರ್ವಜ್ಞರು—ತಾವು ಧುರೀಣರಾಗಲೆಂದೇ ಜನನಕ್ಕೆ ಬಂದವರು—ತಮ್ಮಲ್ಲಿ ನಿಜವಾದ ಯೋಗ್ಯತೆ ಇರುವ ಕಾರಣವೇ ಜನರೆಲ್ಲ ತಮಗೆ ಅಂಟಿಕೊಳ್ಳುತಿದ್ದಾರೆ—ಎಂದು ಭ್ರಮಿಸುತ್ತಿರುವರಲ್ಲಾ, ಇವರ ಕಣ್ಣುಗಳೊಮ್ಮೆ ತೆರೆಯಲಿ! ಪಂತರೇ, ಈ ಚುನಾವಣೆ ಎಂಬುದು ಇಲ್ಲೊಂದು ಹುಚ್ಚು. ಪ್ರತಿಯೊಬ್ಬನಿಗೆ ಒಂದು ಉದ್ರೇಕ ಬೇಕು—ಅಷ್ಟೆ. ಪ್ರಜಾಪ್ರಭುತ್ವದ ತತ್ತ್ವಗಳನ್ನು ತಿಳಿದವರು ಎಷ್ಟು ಮಂದಿ? ಓಟು ಎಂಬುದರ ಅರ್ಥ ತಿಳಿದವರೆಷ್ಟು ಮಂದಿ? ಲಕ್ಷೋಪಲಕ್ಷ ಮೂಕಜೀವಿಗಳನ್ನು ಒಬ್ಬಿಬ್ಬರು ಒಟ್ಟುಕೂಡಿಸಿ ತಾವು ಚುನಾಯಿಸಿ ಬರುವರು. ಆದರಲ್ಲಿ ಆ ಲಕ್ಷೋಪಲಕ್ಷ ಜೀವಿಗಳ ಪಾಡನ್ನು ಸುಧಾರಿಸುವ ಇಚ್ಛೆಯು ತಿಲಮಾತ್ರವೂ ಇಲ್ಲ. ಸ್ಥಾನ-ಮಾನ-ಧನ-ಈ ಮೂರೇ ಪ್ರಧಾನವಾಗಿವೆ. ಮಾತಿನಲ್ಲಿ ದೊಡ್ಡ ತತ್ತ್ವಗಳನ್ನು ಪ್ರಚುರಿಸುವವರು—ಕೃತಿಯಲ್ಲಿ ಶೂನ್ಯ. ಶಿಕ್ಷಣವಿದ್ದರೂ ಸೋಗು ಹೆಚ್ಚು.

ವಿಠ್ಠಲ ಪಂತ: ಜೀವನವೇ ಕೃತ್ರಿಮವಾಗಿ ಹೋಗಿದೆ. ಅದನ್ನು ಶುದ್ಧಿಗೊಳಿಸುವೆವು ಎಂದು ಹೇಳುವುದು ಒಂದು ಫೆಶನ್ ಆಗಿದೆ.

ರಾಮಪ್ಪಯ್ಯ: ಸೇವೆಗಾಗಿ ಸೇವೆ ಮಾಡುವವರು—ಜನರ ಬೇಡಿಕೆಗಳನ್ನು ತಿಳಿದು ಅವುಗಳನ್ನು ಪೂರೈಸಲು ಹಾರ್ದಿಕವಾಗಿ ಶ್ರಮಿಸುವವರು ಎಷ್ಟು ಮಂದಿ?

ವಿಠ್ಠಲ ಪಂತ: ಇವರು ಚುನಾಯಿಸಿ ಬಂದರೂ ಸರಕಾರ ಹೇಗೂ ಸಾಗಿ ಬರುತ್ತಿದೆ—ಚುನಾವಣೆಯೇ ಇಲ್ಲದಿದ್ದರೂ ಸಾಗುತ್ತದೆ. ತಾರತಮ್ಯ ಕಂಡವರೇ ಇಲ್ಲ.

ರಾಮಪ್ಪಯ್ಯ: ನಿಜ. ನೋಡಿ. ಬ್ರಿಟಿಷರ ಆಡಳಿತದಲ್ಲಿ ಸೇಕಡಾ ೧೪ರಷ್ಟು ಜನರು ಮಾತ್ರ ಮತದಾನ ಮಾಡುತಿದ್ದರು. ಇಂದು ಭಾರತದಲ್ಲಿ, ಒಂದು ಸಾವಿರದ ಏಳನೂರ ಎಪ್ಪತ್ತೈದು ಲಕ್ಷ ಜನರು ಮತದಾನ ಮಾಡಲಿದ್ದಾರೆ. ಇದೊಂದು ಶಕ್ತಿ. ಈ ಶಕ್ತಿಯೊಂದಿಗೆ ಜವಾಬ್ದಾರಿಯೂ ಇದೆ ಎಂಬುದನ್ನು ತಿಳಿದ ಮತದಾರರು ಎಷ್ಟು? ತಾವು ಚುನಾಯಿಸಿ ಕಳಿಸಿದ ಪ್ರತಿನಿಧಿಗಳ ಮೇಲೇ ತಮ್ಮ ಭಾವೀ ಜೀವನವು ಹೊಂದಿಕೊಂಡಿದೆ ಎಂದು ತಿಳಿದವರೆಷ್ಟು? ಚುನಾಯಿಸುವ ಯೋಗ್ಯತೆ ಮತ್ತು ಆ ಹೊಣೆಗಾರಿಕೆಯನ್ನು ತಿಳಿಯದ ನಾಡಿನಲ್ಲಿ ಚುನಾವಣೆ ಎಂಬುದು ಒಂದು ತಮಾಷೆ; ಪಂಚವಾರ್ಷಿಕ ಆವೇಶ.

ವಿಠ್ಠಲ ಪಂತ: ಆದರೂ, ಚುನಾವಣೆಯಲ್ಲಿ ಭಾಗವಹಿಸುವುದು ಹಕ್ಕು ಹೇಗೋ ಹಾಗೆಯೇ ಕರ್ತವ್ಯವೂ ಅಹುದೆನ್ನಿ. ಶಿಕ್ಷಣವು ಚೆನ್ನಾಗಿ ಹರಡುವ ಮೊದಲು ಈ ಪ್ರಾಯಸ್ಥ ಮತದಾನ ಪದ್ಧತಿಯು ಜಾರಿಗೆ ಬಂದುದು ನನ್ನ ಅಭಿಪ್ರಾಯದಂತೆ ಸರಿಯಲ್ಲ.

ರಾಮಪ್ಪಯ್ಯ: ನನ್ನ ಅಭಿಪ್ರಾಯವೂ ಅದೇ. ಆದರೆ, ದಾಖಲೆಗೆ ಅದು ಪ್ರಗತಿಯೆನಿಸುತ್ತದೆ. ಅದನ್ನು ತಪ್ಪೆನ್ನುವುದು ಅಪ್ರಾಗತಿಕವೆನಿಸಲ್ಪಡುವುದು. ಇಂದು, ಜಗತ್ತಿನ ಯಾವ ದೇಶದಲ್ಲಿಯೂ ಭಾರತದಲ್ಲಿದ್ದಷ್ಟು ಮತದಾರರಿಲ್ಲ. ಶಿಕ್ಷಣವೂ ಪೂರ್ಣವಾಗಿದ್ದರೆ ನಮ್ಮ ಈ ಹಿರಿತನ ನಿಜಕ್ಕೂ ಹೆಮ್ಮೆಯ ವಿಷಯವಾಗುತಿತ್ತು. ಇರಲಿ. ಇನ್ನು ನಮ್ಮ ಕರ್ತವ್ಯವೇನೆಂದರೆ, ಹೆಚ್ಚೆಚ್ಚು ಜನರಿಗೆ ಮತವೆಂದರೇನು. ಅದನ್ನು ಯಾರಿಗೆ ಕೊಡಬೇಕು—ಎಂಬುದನ್ನು ಕಲಿಸುವುದು.

ವಿಠ್ಠಲ ಪಂತ: ಈ ಸ್ಪರ್ಧೆಯ ಉದ್ರೇಕದಲ್ಲಿ ನಮ್ಮ ನರನಾಡಿಗಳೂ ಸ್ವಲ್ಪ ಸಡಿಲಾಗುವುವು.

ರಾಮಪ್ಪಯ್ಯ: ಮತ್ತೆ ನೋಡಿ—ಸ್ಪರ್ಧೆಯಿಲ್ಲದಿದ್ದರೆ ನಾಡಿನಲ್ಲಿ ಜೀವನವೇ ಇಲ್ಲದಂತೆ. ಅವಿರೋಧ ಆಯ್ಕೆ ಎಂಬುದು ಇರಲೇ ಬಾರದು. ಹೋರಾಟಗಳು ಯಾವಾಗಲೂ ಜನತೆಯಲ್ಲಿ ನವಚೇತನ ತುಂಬುತ್ತವೆ. ಒಬ್ಬರಿಗಿಂತ ಹೆಚ್ಚು ಪ್ರತಿಸ್ಪರ್ಧಿಗಳಿದ್ದರೇನೇ ಜನರು ತಾರತಮ್ಯ ಕಾಣುವ ಶಕ್ತಿ ಹೊಂದುತ್ತಾರೆ—ಉತ್ತಮರಾರು ಎಂಬುದನ್ನು ತಿಳಿಯುತ್ತಾರೆ. ನಮ್ಮಂಥವರು ಅವರಿವರನ್ನು ಚುನಾವಣೆಗೆ ಪ್ರೇರೇಪಿಸುವ ಮೂಲಕ ನಿಜಕ್ಕೂ ಲೋಕೋಪಕಾರ ಮಾಡುತ್ತೇವೆ. ನಿಮ್ಮ ಅಭಿಪ್ರಾಯವೇನು? .

ವಿಠ್ಠಲ ಪಂತ: ನಮ್ಮ ಹೆಜ್ಜೆ ಯಾವಾಗಲೂ ನ್ಯಾಯವಾದುದೇ.

ರಾಮಪ್ಪಯ್ಯ: ನಡೀರಿ, ಹೋಗೋಣ. ಭುಜಂಗರಾಯರು ನಾಳೆ ಭಾಷಣ ಮಾಡುವ ಮೈದಾನಿನಲ್ಲೇ, ಈ ದಿನ ಚಂದರನಿಗೆ ಸಭೆಕೂಡಿಸಿ ಭಾಷಣ ಮಾಡಲು ಹೇಳಿದ್ದೇವಲ್ಲವೆ?

ಭುಜಂಗರಾಯರು ಸ್ವಲ್ಪ ಕೇಳಲಿ. ಅವರಲ್ಲೂ ಹೋರಾಟದ ಆವೇಶವುಂಟಾಗಲಿ. ಭುಜಂಗರಾಯರನ್ನು ಕರೆದುಕೊಂಡೇ ಹೋಗೋಣ.

[ಮೇಷ್ಟ್ರು ಕೃಷ್ಣಯ್ಯನವರ ಪ್ರವೇಶ]

ರಾಮಪ್ಪಯ್ಯ: ಯಾರು ಕೃಷ್ಣಯ್ಯ ಮಾಸ್ತರರೇ? ನಮಸ್ಕಾರ.

ಕೃಷ್ಣಯ್ಯ: ನಮಸ್ಕಾರ.

ರಾಮಪ್ಪಯ್ಯ: ನಿಮಗೆ ಮಾಸ್ತರರಿಗೆ ಏನೋ ಹೊಸ ಉದ್ಯೋಗ ಸಿಕ್ಕಿದೆ ಅಂತ ಕೇಳಿದೆ. ಏನದು?

ಕೃಷ್ಣಯ್ಯ: ನಮ್ಮನ್ನು ಚುನಾವಣೆಯಲ್ಲಿ Presiding Officer ಅಂತ ಮಾಡಿದ್ದಾರೆ.

ವಿಠ್ಠಲ ಪಂತ: ಪ್ರತಿಫಲನೇನು?

ಕೃಷ್ಣಯ್ಯ: ಒಣಗಿ ಒಣಗಿ ಸಾಯೋದು.

ರಾಮಪ್ಪಯ್ಯ: ನೋಡಿ ಪಂತರೇ, ಸ್ವಾತಂತ್ರ್ಯ ಬರುವ ಮೊದಲು ಉಪಾಧ್ಯಾಯರು ಮಧ್ಯಾಹ್ನ ಅನ್ನ—ರಾತ್ರೆ ಗಾಳಿ ತಿಂದು ಜೀವಿಸುತಿದ್ದರು.

ವಿಠ್ಠಲ ಪಂತ: ಈಗ?

ರಾಮಪ್ಪಯ್ಯ: ಈಗ ಮಧ್ಯಾಹ್ನ ಗಾಳಿ-ರಾತ್ರೆ ವಾಯು! ಆದರೂ, Prssiding Officer ಅಂತ ಒಂದು ಹುದ್ದೆ ಸಿಕ್ಕಿತಲ್ಲಾ—ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಇದು ನಿಜಕ್ಕೂ ದೊಡ್ಡ ಪಾಲು.

ಕೃಷ್ಣಯ್ಯ: ಇದಕ್ಕಿಂತಲೂ ದೊಡ್ಡ ಸೇವೆಯ ಮನಸ್ಸಿದೆ ಸ್ವಾಮಿ ನಮಗೆ!

ರಾಮಪ್ಪಯ್ಯ: ಏನದು?

ಕೃಷ್ಣಯ್ಯ: ನಮ್ಮ ಹೆಣವನ್ನು ಮೆಡಿಕಲ್ ಕೊಲೇಜಿಗೆ Forward Sale ಮಾಡಿ, ಅಡ್ವಾನ್ಸ್ ಪಡಕೊಳ್ಳೋದು.

(ಹೋಗುವರು)

ದೃಶ್ಯ ೭

[ತೆರೆ ಏಳುವುದು; ಮೈದಾನು—ಅಥವಾ ಉಪವನ—ಎದುರುಗಡೆ ಮೇಜನ್ನಿಟ್ಟು, ಚಂದರ್ ಭಾಷಣಕ್ಕೆ ನಿಂತಿರುವನು. ಸಭಿಕರು ಕುಳಿತುಕೊಂಡಿರುವರು.]

ಚಂದರ್: (ತಲೆ ಕೊಡಹಿ, ಆವೇಶದಿಂದ) ಇಂದು ನಿಮ್ಮ ಮುಂದೆ ನಿಂತಿರುವ ನಾನು ನಿಮ್ಮಂತೇ ಸಾಮಾನ್ಯ ಮನುಷ್ಯನು. ನಿಮ್ಮಲ್ಲಿ ಹರಿವ ನೆತ್ತರೇ ನನ್ನಲ್ಲೂ ಹರಿಯುತ್ತಿದೆ. ನಾಡಿ ಮಾತ್ರ ಬೇರೆ. ನಾನು ಮುಖಂಡನಲ್ಲ, ನಿಮ್ಮ ಸೇವಕನಾಗಲು ಬಂದಿದ್ದೇನೆ. ಈ ವರೆಗೆ ನಾನೂ ನೀವೂ, ಬಂಡವಾಳ ಷಾಹಿ ಯಾನೆ ಭುಜಂಗ ಷಾಹಿಯ ಕಾಲಡಿಯಲ್ಲಿ ದೇಹವನ್ನು ಸವೆಯಿಸಿದ್ದೇವೆ. ಇನ್ನು ಸಾಕು. "ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಂ" ಅಂತ ಹೇಳುವರು—ಸುಳ್ಳಲ್ಲ. ನಾವಿನ್ನು ಭುಜಂಗನಿಗೆ ಹಾಲು ಕೊಡುವನ[illegible] ನನ್ನ ಸಹೋದರರೇ, ನಮ್ಮ ಸಂಕಷ್ಟಗಳನ್ನು ನಾವೇ ಪ[illegible]ರಿಸಿಕೊಳ್ಳುವ ಕಾಲ ಬಂದಿದೆ. ಈಗ ನಾವೂ ಎಸೆಂ[illegible] ಹೋಗುವೆವು-ಭುಜಂಗಷಾಹಿಯನ್ನು ಕಾದಾಡುವೆವು. ಹೋ[illegible] ನಮ್ಮ ಹಕ್ಕುಗಳನ್ನು ಸ್ಥಾಪಿಸಿ, ನಮಗೆ ಬೇಕಾದ್ದನ್ನು[illegible]ಯಿಂದ ಕಸಿದುಕೊಳ್ಳುವೆವು. (ಮುಷ್ಟಿಯೆತ್ತಿ ಮೇ[illegible] ಬಡಿದು, ನೋವಾಗಿ, 'ಓ' ಎಂದು ಕೂಗಿ, ಕೈ ಹಿಂದೆಗೆವನ[illegible] —ನೀವು ನನ್ನನ್ನೆ ಚುನಾಯಿಸುವಿರಿ, ಬಲ್ಲೆ. ನಾನು ನಿ[illegible] ಪ್ರತಿನಿಧಿ. ನಾನು ಎಸೆಂಬ್ಲಿಗೆ ಹೋದರೆ ನೀವೆಲ್ಲ[illegible] ಹೋದಂತೆ. ನಿಮಗೆ ಸಮ್ಮತಿಯೆ? ಎಲ್ಲಿ, ಕೈಯೆತ್ತಿರಿ ನ[illegible]ಡೋಣ! (ಸಭಿಕರು ಕೈಯೆತ್ತುವರು.) ಶಾಭಾಸ್! ಆ ಎತ್ತ[illegible] ಕೈಗಳನ್ನು ಕೆಳಗಿಳಿಸದೆ ನಾಡದು ನಿಮ್ಮ ಓಟುಗಳನ್ನು ನ[illegible] ಪೆಟ್ಟಿಗೆಗೇ ಹಾಕಿರಿ. ನನ್ನ ಪೆಟ್ಟಿಗೆಯ ಮೇಲೆ ಗರುಡನ ಚ[illegible]ವಿದೆ. ನಮ್ಮ ನೆತ್ತರು ಕುಡಿವ ಭುಜಂಗರನ್ನು ಹಿಡಿ[illegible] ತಿನ್ನುವ ಪಕ್ಷಿ ನಾನು!

[ಭುಜಂಗ ರಾಯರ ಪ್ರವೇಶ ರಾಮಪ್ಪಯ್ಯ ಮತ್ತು ವಿ[illegible] ಪಂತರೊಡನೆ.]

ಬಂಧುಗಳೇ! ನನ್ನ ಚುನಾವಣಾ ಘೋಷಣೆಯ[illegible] ನೀವು ಇಷ್ಟರೊಳಗೇ ಓದಿರಬಹುದು.

[ಚುನಾವಣಾ ಘೋಷಣೆಯ ಪ್ರತಿಗಳನ್ನು ಒಬ್ಬನು ಹಂಚುವ[illegible]

ಅದರೊಳಗಿನ ಕೆಲವಂಶಗಳನ್ನು ಹೇಳುತ್ತೇನೆ.

ತಿಂಗಳಿಗೆ ನೂರು ರೂಪಾಯಿಗಿಂತ ಕಡಿಮೆ ಸಂಪಾದನೆ [illegible] ವರಿಗೆ ಒಂದೊಂದು ಮನೆ, ಒಂದೊಂದು ಎಕ್ರೆ ಸ್ಥಳ.

ತಿಂಗಳಿಗೆ ನೂರು ರೂಪಾಯಿಗಿಂತ ಹೆಚ್ಚು ಸಂಪಾದನೆಯಿ[illegible] ವರಿಗೆ ಮನೆ ಮಾತ್ರ.

ಐನೂರಕ್ಕೂ ಮಿಕ್ಕಿ ಸಂಪಾದನೆ ಇದ್ದವರಿಗೆ ಸೇಕಡಾ 60ರ[illegible] ತೆರಿಗೆ—ಈ ತೆರಿಗೆಗೆ "ಅಜೀರ್ಣ ತೆರಿಗೆ" ಎಂದು ಹೆಸರು,

ತಿಂಗಳಿಗೆ ಸಾವಿರ ರೂಪಾಯಿ ಸಂಪಾದನೆಯಿದ್ದವರಿಗೆ [illegible]ಕಡಾ 80ರಷ್ಟು ತೆರಿಗೆ—ಈ ತೆರಿಗೆಗೆ "ದರೋಡೆಖೋರ ತೆರಿ[illegible]" ಅಂತ ಹೆಸರು.

ಸಾವಿರಕ್ಕೂ ಮಿಕ್ಕಿ ಸಂಪಾದನೆ ಇದ್ದರೆ "ಓಪರೇಶನ್ ತೆರಿ[illegible]"ಯನ್ನೂ, ಹತ್ತು ಸಾವಿರವಿದ್ದರೆ "ಒಸ್ತೂಲ್ ತೆರಿಗೆ"ಯನ್ನೂ ಹೆ[illegible]ಸಲಾಗುವುದು.

ಹೇರಳ ಜಮೀನು ಇದ್ದವರಿಗೆ ಜಾಮೀನಿಲ್ಲದ ಶಿಕ್ಷೆ—ಹ[illegible] ಮನೆಗಳಿದ್ದವರಿಗೆ ಅನಾಥಾಶ್ರಮ.

ಅರಮನೆಗಳವರು ಸೆರಮನೆಗೆ. ಸೆರೆಮನೆಗಳವರು ಅರಮ[illegible] ವರ್ಗಾವರ್ಗಿ ಮಾಡಲ್ಪಡುವರು. ಗಜೆಟಿನಲ್ಲಿ ಆಗಾಗ್ಗೆ ಈ ವರ್ಗಾ[illegible]ವರ್ಗಿಗಳನ್ನು ಪ್ರಕಟಿಸಲಾಗುವುದು.

ಕೆಲಸಗಾರರ ಕೆಲಸದ ಅವಧಿಯನ್ನು ದಿನಕ್ಕೆ ಐದು ಗಂ[illegible] ಇಳಿಸಿ, ಸಂಬಳವನ್ನು ಸೇಕಡಾ ಇನ್ನೂರಕ್ಕೆ ಏರಿಸುವೆವು.

ಹೆಂಗುಸರಿಗೆ ಗರ್ಭಿಣಿ ರಜೆ ಮತ್ತು ಪ್ರಸೂತಿ ರಜೆ ಎಂ[illegible] ಎರಡು ವಿಧದ—ಒಟ್ಟು ವರ್ಷದಲ್ಲಿ ಹನ್ನೊಂದು ತಿಂಗಳ ಹ[illegible] ರಜೆಯನ್ನೂ; ಹನ್ನೆರಡು ದಿನ ಆಕಸ್ಮಿಕ ರಜೆಯನ್ನೂ ಕೊಡಿಸುವೆ[illegible]

ತ್ರಾಣವಿಲ್ಲದ ಕಾರಣ ಇಪ್ಪತ್ತನಾಲ್ಕು ವರ್ಷಗಳಿಗಿಂತ ಕೆಳಗಿನ ಮಕ್ಕಳನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹಚ್ಚುವುದಿಲ್ಲ. ಜನರ ಆಯುಷ್ಯ ಕಡಿಮೆಯಾದ ಕಾರಣ ಪೆನ್ಶನ್ ಪ್ರಾಯವನ್ನು 55ರಿಂದ 45ಕ್ಕೆ ಇಳಿಸುವೆವು.

ಗಂಡನಿಗೆ ಹೆಂಡತಿಯನ್ನೂ ಹೆಂಡತಿಗೆ ಗಂಡನನ್ನೂ ಮದುವೆಯಾದ ದಿನದಿಂದಲೇ ಬಿಟ್ಟು ಬಿಡುವ ಸವಲತ್ತುಗಳನ್ನು ಕೊಡುವೆವು.

ಎಲ್ಲರಿಗೆ ಧರ್ಮಾರ್ಥ ಜನನ—ಧರ್ಮಾರ್ಥ ಮರಣ

[ಅಂದರೆ, ಧರ್ಮಾರ್ಥ ಹೆರಿಗೆ, ಧರ್ಮಾರ್ಥ ಶವಸಂಸ್ಕಾರ]

[ಶಂಕ್ರಯ್ಯನು ಪ್ರವೇಶಿಸಿ, ತನ್ನ ಕಿಸೆಯಿಂದೊಂದು ಪತ್ರ ತೆಗೆದು]

ಶಂಕ್ರಯ್ಯ: ನನ್ನದೂ ನಾಲ್ಕು ಪಂಕ್ತಿ. ಕೇಳಿ:

ಪಾಯಿಂಟ್ ೧: ಎಮ್ಮೆ ಹಾಲಿಗೆ ಬಾವಿ ನೀರನ್ನು–ವಿಷಯವು ಸ್ಪಷ್ಟವಾಗಿರಲಿ ಅಂತ ಬಾವಿ ನೀರು ಅಂದಿದ್ದೇನೆ. ಕ್ಷಮಿಸಿರಿ—ಎಮ್ಮೆ ಹಾಲಿಗೆ ಬಾವಿ ನೀರನ್ನು ಬೆರೆಸಿ ಮಾರಿದವರಿಗೆ ಎಮ್ಮೆ ಸಹಿತ ಎರೆಸ್ಟ್!

೨: ಯಾರು ಶರಾಬನ್ನು ಇಟ್ಟುಕೊಂಡು ಬಾಯಾರಿ ಬಂದವರಿಗೆ 'ಸ್ಟಾಕ್ ಇಲ್ಲ' ಎನ್ನುತ್ತಾರೋ ಅವರಿಗೆ ಎರೆಸ್ಟ್! ಅವರು ಬೋರ್ಡಿನಲ್ಲಿ ಸ್ಟಾಕ್ ತೋರಿಸಬೇಕು—ಇಲ್ಲದಿದ್ದರೆ ಜೈಲಿಗೆ ಹೋಗಬೇಕು.

ಚಂದರ್: ಯಾರಯ್ಯ ನೀನು?

ಶಂಕ್ರಯ್ಯ: ಶಂಕ್ರಯ್ಯಾ—ಸ್ವತಂತ್ರ ಉಮೇದ್ವಾರ! ನಿಮ್ಮ ಓಟನ್ನು ನನಗೇ ಕೊಡಬೇಕು.

ಚಂದರ್: ಏನಿದು ಶಂಕರ ರಾಯರೇ, ನಮ್ಮ ಪಾರ್ಟಿ ಸಭೆಯಲ್ಲಿ ನಿಮ್ಮ ಉದ್ಧಟತನ? (ಕೈ ಹಿಡಿದು) ಹೊರಟು ಹೋಗಿರಿ! ನಮ್ಮ ಒಂದೇ ಒಂದು ಓಟನ್ನು ನಾವು ಶರಾಬು ಪೀಪಾಯಿಗೆ ಕೊಡುವುದಿಲ್ಲ.

ಶಂಕ್ರಯ್ಯ: ಹಾಗಾದರೆ ನೀವು ಬಹಳ ಸಂಕಷ್ಟಕ್ಕೊಳಗಾಗುತ್ತೀರಿ. ಪಶ್ಚಾತ್ತಾಪ ಪಡುವಿರಿ.

ಚಂದರ್: ಈಗ ನೀವು ಪಶ್ಚಾತ್ತಾಪ ಪಡುವ ಮೊದಲು ಇಲ್ಲಿಂದ ಹೋಗಿರಿ.

ಶಂಕ್ರಯ್ಯ: ಹೋಗುತ್ತೇನೆ. ನನ್ನ ಭಾಷಣವನ್ನೆಲ್ಲ ಎಸೆಂಬ್ಲಿಯಲ್ಲಿ ಮಾಡುತ್ತೇನೆ. ಒಂದೇ ಪ್ರಶ್ನೆಯ ಮೇಲೆ ನಾಲ್ಕು ದಿನ ಭಾಷಣ—ಮತ್ತೆ ಮೂರು ದಿನ ಸತ್ಯಾಗ್ರಹ. ಗುಡ್ ಮಾರ್ನಿಂಗ್ (ಹೋಗುವನು)

ಚಂದರ್: (ಘೋಷಣೆಯನ್ನು ಮುಂದೆ ಓದುತ್ತ) ಬಂಧುಗಳೇ, ನಾವು ಕೊಡುವ ಸೌಕರ್ಯಗಳು ಇನ್ನೂ ನೂರಾರು ಇವೆ. ಅವಗಳನ್ನೆಲ್ಲ ಇಲ್ಲಿ ವಿವರಿಸಲು ಸಮಯ ಸಾಲದು. ಸಾರಾಂಶ ಇಷ್ಟೆ: ಬಂಡವಾಳ ಷಾಹಿಯಿಂದ ಈ ಲೋಕಕ್ಕೂ ಸುಖವಿಲ್ಲ—ಪರಲೋಕಕ್ಕೂ ಇಲ್ಲ. ಬಂಡವಾಳ ಷಾಹಿ ನಾಶವಾಗಿ ನಾವೇ ಉಳಿಯಬೇಕಾದರೆ ನಿಮ್ಮ ಓಟನ್ನು ನನಗೇ ಕೊಡಿರಿ! ಭುಜಂಗ ಷಾಹೀ ಮುರ್ದಾಬಾದ್."

[ಸಭೆ ಬರಖಾಸ್ತಾಗಿ, ಚಂದರ್ ಹೋಗುವನು. ಭುಜಂಗ, ರಾಮಪ್ಪಯ್ಯ ಮತ್ತು ವಿಠ್ಠಲ ಪಂತರು ಮುಂದೆ ಬರುವರು.]

ಭುಜಂಗ: ರಾಮಪ್ಪಯ್ಯಾ—

ರಾಮಪ್ಪಯ್ಯ: ಸ್ವಾಮಿ!

ಭುಜಂಗ: ನಾನು ಯಾರು?

ರಾಮಪ್ಪಯ್ಯ: ಭುಜಂಗ ರಾಯರಲ್ಲವೆ?

ಭುಜಂಗ: ನಾನು ಎಲ್ಲಿದ್ದೇನೆ?

ವಿಠ್ಠಲ ಪಂತ: ಮೈದಾನಿನಲ್ಲಿ ಸ್ವಾಮಿ!

ಭುಜಂಗ: ಎಸೆಂಬ್ಲಿಯಲ್ಲಿ ಅಲ್ಲ?

ರಾಮಪ್ಪಯ್ಯ: ಇನ್ನೂ ಚುನಾವಣೆ ನಡೆದಿಲ್ಲವಲ್ಲವೆ ಭುಜಂಗ ರಾಯರೇ?

ಭುಜಂಗ: ಹಾಗಾದರೆ, ಮನೆಗೆ ಹೋಗೋಣ, ನಡೀರಿ.

ವಿಠ್ಠಲ ಪಂತ: ತಮಗೆ ಬಲು ಆಯಾಸವಾಯಿತೇ?

ಭುಜಂಗ: ಇಲ್ಲ; ಪ್ರಾಣ ಹಾರಿಹೋಯಿತು.

ರಾಮಪ್ಪಯ್ಯ: ತಾವು ಗಾಬರಿಬಿದ್ದಿರಾ?

ಭುಜಂಗ: ಇಲ್ಲ—ಮೂರ್ಛೆ ಬಿದ್ದೆ.

ವಿಠ್ಠಲ ಪಂತ: ಬಹುಶಃ ಆ ಚಂದರನ ಮಾತುಗಳು ನಿಮಗೆ ನೋಯಿಸಿದುವು ಅಂತ ತೋರುತ್ತದೆ.

ಭುಜಂಗ: ಇಲ್ಲ—ಎದೆಗೆ ಶೂಟ್ ಮಾಡಿದ ಹಾಗಾಯಿತು.

ರಾಮಪ್ಪಯ್ಯ: 'ಪಯಪ್ಪಾನಾಂ ಭುಜಂಗಾನಾಂ' ಅಂತ ಆರಂಭಿಸಿ, 'ಭುಜಂಗ ಷಾಹಿ' ಅಂತ ಅಣಕವಾಡಿ, ಆ ನೀಚನು "ಭುಜಂಗ ಷಾಹಿ ಮುರ್ದಾಬಾದ್" ಅಂದು ಮುಗಿಸಿದ.

ಭುಜಂಗ: ಮುಗಿಸಿದ್ದಲ್ಲ—ನನ್ನನ್ನು ಎಂಟಡಿ ಹೊಂಡದಲ್ಲಿ ದೂಡಿ, ಮಣ್ಣು ಮುಚ್ಚಿಬಿಟ್ಟ.

ವಿಠ್ಠಲ ಪಂತ: ಅವನ ಮೇಲೆ ಮಾನನಷ್ಟದ ವ್ಯಾಜ್ಯ ಮಾಡೋಣವೇ?

ಭುಜಂಗ: ಅವನು ನನ್ನ ಮಾನ ತೆಗೆಯಲಿಲ್ಲ—ಪ್ರಾಣ ತೆಗೆದಿದ್ದಾನೆ. ಬೇಕಾದರೆ ಪ್ರಾಣನಷ್ಟ ವ್ಯಾಜ್ಯ ಮಾಡಿರಿ.

[ರಾಮಪ್ಪಯ್ಯ—ವಿಠ್ಠಲ ಪಂತ ಮೌನವಾಗುವರು.]

ಭುಜಂಗ: (ಮೆಲ್ಲನೆ, Blank ಆಗಿ ನೋಡುತ್ತ) ರಾಮಪ್ಪಯ್ಯ, ಆ ಚಂದರನನ್ನು ನೀವು ನನ್ನ ದಾರಿಯಿಂದ ತೆಗೆಸಬೇಕು. (ಫಕ್ಕನೆ ಕೋಪದಿಂದ) ಇಲ್ಲದಿದ್ದರೆ ನಾನು ಶೂಟ್ ಮಾಡಿಕೊಂಡು, ನೀವು ಕೊಂದಿರಿ ಅಂತ ಚೀಟು ಬರೆದಿಟ್ಟು ಹೋಗುತ್ತೇನೆ. ಅದೊಂದು ತರದ Semi Suicide ಅನ್ನುತ್ತಾರೆ. ಅರ್ಧ murder—ಅರ್ಧ. Suicide—

ರಾಮಪ್ಪಯ್ಯ: ಭುಜಂಗ ರಾಯರೇ, ನಿಮಗೆ ನಿಜಕ್ಕೂ ತಲೆಗೆಟ್ಟಿದೆ. ಆ ಹುಳಕ್ಕೇಕೆ ನೀವು ಹೆದರುತ್ತೀರಿ?

ಭುಜಂಗ: (ಕೋಪದಿಂದ) ಏನಯ್ಯಾ, ಹುಳ ಹುಳ ಎನ್ನುತ್ತೀರಿ—ಆ ಹುಳದ Size ಹೇಳುತ್ತಿಲ್ಲವಲ್ಲಾ ನೀವು! ಆ ಹುಳ ಕಚ್ಚುತ್ತಿರುವುದು ನನಗೆ—ನಿಮಗಲ್ಲ! ನೋವು ನನಗೆ—ನಿಮಗಲ್ಲ! ಹುಳನಂತೆ! ಆ ಮನುಷ್ಯ ಕಾಳಿಂಗದಷ್ಟು ದೊಡ್ಡವ

ಸಿದ್ದಾನೆ—ಮತ್ತೂ ಹುಳವಂತೆ! ಅವನು ತನ್ನ ನಾಮಪತ್ರ ಹಿಂದೆಗೆವಂತೆ ಮಾಡುತ್ತಿರೋ—ಅಥವಾ ನಾನು Semi Suicide ಮಾಡಬೇಕೋ ತಿಳಿಸಿರಿ.

ವಿಠ್ಠಲ ಪಂತ: ಸ್ವಾಮಿ, ಆಗ ಮಧ್ಯಾಹ್ನ ನಾವು ಅವನಲ್ಲಿಗೆ ಹೋಗಿದ್ದೆವು; ಎರಡು ಸಾವಿರ ರೂಪಾಯಿ ಕೊಡುತ್ತೇವೆ—ಹಿಂದೆಗೆಯಿರಿ ಎಂದು ಹೇಳಿದೆವು.

ಭುಜಂಗ: (ಆಸಕ್ತಿಯಿಂದ) ಏನೆಂದ?

ರಾಮಪ್ಪಯ್ಯ: ಅದು ನೂರು ಮುಡಿ ಅಕ್ಕಿಯ ಬ್ಲೆಕ್ ಮಾರ್ಕೆಟ್ ಹಣ—ಅದನ್ನು ಮುಟ್ಟಿದರೆ ತನ್ನ ಕೈ ಸುಟ್ಟು ಹೋದೀತೆಂದು ಹೇಳಿದ.

ಭುಜಂಗ: Stupid rascal! ಬಹಳ ಮಡಿವಂತ! ಅವನ Red Marketನಲ್ಲಿ ಅವನು ಸುಟ್ಟುಹೋಗುವುದಿಲ್ಲವೆ? ಘಟಿಂಗ! ಪಂತರೇ, ಅಕ್ಕಿಯಿಲ್ಲದವರು ಜಮೀನ್ದಾರರನ್ನು ದೂರುವುದು—ಜಮೀನ್ದಾರರು ಅಲ್ಲ ಎನ್ನೋದು—ಈ ಅನ್ಯಾಯ ಎಷ್ಟು ಕಾಲ ನಡೆಯಬೇಕಂತೆ?

ವಿಠ್ಠಲ ಪಂತ: ಮೂರು ಸಾವಿರ ಮಾಡಿಕೋ ಅಂದೆವು.

ಭುಜಂಗ: ಹೇಳಿಯಾಯಿತೆ? ಹೋಗಲಿ.

ರಾಮಪ್ಪಯ್ಯ: ಆದರೆ, ಅವನೊಪ್ಪಲಿಲ್ಲ. ಆ ಮೂರು ಸಾವಿರ—ನೂರು ಜನರ ರಕ್ತದ ಹಣ ಅಂತ ಹೇಳಿಬಿಟ್ಟ.

ಭುಜಂಗ: Double Donkey! ದೊಡ್ಡ ಪರಮಹಂಸ! ರಾಮಪ್ಪಯ್ಯಾ, ಇಂತಹ ಹೊಲಸು ಬಾಯಿಯವರು ಎಸೆಂಬ್ಲಿಗೆ ಹೋದರೆ ಜನರ ಗತಿ ಏನು ಅಂತ!

ವಿಠ್ಠಲ ಪಂತ: ಕಠಿಣ ಜನ ಸ್ವಾಮಿ!

ರಾಮಪ್ಪಯ್ಯ: ಆದರೂ, ಈ ದಿನವೇ ಪುನಃ ಪ್ರಯತ್ನಿಸಿ ನೋಡುತ್ತೇನೆ. ತಾವು ಐದು ಸಾವಿರದ ವರೆಗೆ ನಮಗೆ ಸ್ವಾತಂತ್ರ್ಯ ಕೊಟ್ಟರೆ............!

ಭುಜಂಗ: ಐದು ಸಾವಿರವೇ? ಹೋಗಲಿ. ರಾಮಪ್ಪಯ್ಯ, ಹೇಗಾದರೂ ಆ ನಾರುವ ಹಣವನ್ನು ತೆಗೆಸಿಬಿಡಿ.

ವಿಠ್ಠಲ ಪಂತ: ನನ್ನದೊಂದು ಸೂಚನೆ ಸ್ವಾಮಿ!

ಭುಜಂಗ: ಇನ್ನೂ ಸೂಚನೆ ಮುಗಿಯಲಿಲ್ಲವೆ?

ವಿಠ್ಠಲ ಪಂತ: ಮುಗಿಯಿತು. ನೋಡಿ,-ರಿಕ್ತಹಸ್ತದಿಂದ ಹೋಗಿ ಬರಿಬಾಯಿಯಿಂದ ಮಾತುಕತೆ ನಡೆಸೋದಕ್ಕಿಂತ, ಐದುಸಾವಿರ ರೂಪಾಯಿ ರೋಖಡಾ ಅವನ ಮುಂದೆ ಸುರಿದು, 'ನಾಮಪತ್ರ ಹಿಂದೆಗೆ' ಅಂದರೆ, ಆ ನಿಮಿಷದಲ್ಲಿ ಕೆಲಸ ಮುಗಿದು ಹೋಗುತ್ತದೆ.

ರಾಮಪ್ಪಯ್ಯ: ಐನೂರು ಜಾಸ್ತಿ ಕೊಡಿ. ಹೋದವರು, ಮುಗಿಸಿಕೊಂಡೇ ಬರುತ್ತೇವೆ. ಮತ್ತೆ ಐನೂರರ ಚರ್ಜೆ ಬಂದು, ವಾಪಾಸು ಬರೋದು ಬೇಡ; ಅಲ್ಲವೇ ಪಂತರೇ?

ಭುಜಂಗ: ಆಗಲಿ. ಚುನಾವಣೆಗೆ ನಿಂತಾಯಿತಲ್ಲ. ಇನ್ನು, ಅವರಿವರು ಕೈಕಾಲು ಕೇಳಿದರೂ ಕಡಿದು ಕೊಡೋದೇ!.... ಇನ್ನು ಮೀನಾಕ್ಷಮ್ಮನ ವಿಷಯವೇನು?

ವಿಠ್ಠಲಪಂತ: ಅವಳಿಗೆ ಹಣದಾಸೆಯಿಲ್ಲ ಸ್ವಾಮಿ.

ರಾಮಪ್ಪಯ್ಯ: ಛಲ, ಕೇವಲ ಹಟ!

ಭುಜಂಗ: ಹೆಂಗುಸರು ನನ್ನಂಥಾ ಗಂಡಸಿನ ಮ... ಛಲ ಮಾಡಿದರೆ ನಡಿಯಲಿಕ್ಕಿಲ್ಲವೆಂದು ಹೇಳಲಿಲ್ಲವೆ ನಿ...

ರಾಮಪ್ಪಯ್ಯ: ಧಾರಾಳ ಹೇಳಿಯಾಯಿತು. "ಎಸೆ... ಎಂಬುದರ ಉಚ್ಚಾರ ತಿಳಿಯದ ಭುಜಂಗರಾಯರಿಗೇಕಂ... ಗೊಂದಲ?" ಎಂದು ಕೇಳುತ್ತಾರವರು.

ಭುಜಂಗ: Insult! ರಾಮಪ್ಪಯ್ಯ, ಆ ಹೆಂಗ... ಬುದ್ಧಿ ಕಲಿಸಬೇಕು.

ವಿಠ್ಠಲ ಪಂತ: ಅವಳಿಗದು ಹೆಚ್ಚಿಗೇ ಉಂಟು ಸ್ವಾ...

ಭುಜಂಗ: Bhujanga is fight! ... ಹೋಗೋಣ. ಅವಳ ಚುನಾವಣಾ ಗುರುತು ಏನಂತೆ?

ರಾಮಪ್ಪಯ್ಯ: ಮುಂಗುಸಿ!

ಭುಜಂಗ (ಕೋಪದಿಂದ): Stupid wom... ಹೆಂಗುಸು ಮುಂಗುಸಿಯೂ ಆಗುತ್ತದೆ ಚುನಾವಣೆಯಲ್ಲಿ... ಇರಲಿ. ಇನ್ನು ನಮಗೆ ಏನೇನೆಲ್ಲ ಬೇಕು?

ವಿಠ್ಠಲ ಪಂತ: ಐದೂವರೆ ಸಾವಿರ--ಚಂದರನಿಗೆ! ... ಏಳೆಂಟು ಮೋಟಾರು, ಕೆಲವು ಕೆಲಸಗಾರರರಿಗೆ ಸ್ವಲ್ಪ ... ರೂಪಾಯಿ-ಓಟರರಿಗೂ ಅವಶ್ಯಬಿದ್ದರೆ ಕೊಡಲಿಕ್ಕೆ ಅಷ್ಟೊ... ಹಣ............

ರಾಮಪ್ಪಯ್ಯ: ನಡೀರಿ, ಸ್ವಾಮಿ, ಅದರ ಒಂದು ... ದಾಜು ಪಟ್ಟಿ ಮಾಡೋಣ.

ಭುಜಂಗ: ಒಟ್ಟು ಎಷ್ಟಾದೀತು?

ವಿಠ್ಠಲ ಪಂತ: ಇಪ್ಪತ್ತು ಸಾವಿರಕ್ಕೆ ಮೀರುವಂತಿಲ್ಲ...

ಭುಜಂಗ: ಅಷ್ಟಾದರೆ ಸಾಕು--ನನ್ನ ಶರ್ಟಾದ... ಉಳಿಯಿತೆಂದು ಸಂತೋಷ! ಇನ್ನು, ನಾಳೆ ನನ್ನ ಭಾಷಣ... ಬೇಕಲ್ಲವೆ?

ರಾಮಪ್ಪಯ್ಯ: ಅಹುದು ಸ್ವಾಮಿ, ನಾವು ಕರ... ಮೂಲಕ ಜಾಹೀರು ಮಾಡಿದ್ದೇನೆ-

ಭುಜಂಗ: ರಾಮಪ್ಪಯ್ಯಾ (ಖೊಳ್ಳನೆ ನಗ... ನಾನೊಂದು ಉಪಾಯ ಮಾಡಿದ್ದೇನೆ!

ರಾಮಪ್ಪಯ್ಯ, ಯಾವ ಉಪಾಯ ಸ್ವಾಮಿ?

ಭುಜಂಗ: (ಊಹನೆಯ ಸವಿನೆನಪಿನಿಂದ ನಗ... ಇಂಗ್ಲಿಷಿನಲ್ಲಿ ಭಾಷಣ ಮಾಡೋದೆಂತ! ಹೇಗೆ, ... ಉಪಾಯವಲ್ಲವೆ?

ವಿಠ್ಠಲ ಪಂತ: ಇಂಗ್ಲಿಷಿನಲ್ಲಿ ಭಾಷಣ? ... ಉಪಾಯ! ತಮಗೆ ಅಷ್ಟು ದೊಡ್ಡ ಆಲೋಚನೆ ... ಬಂತೋ!

ಭುಜಂಗ: (ಪುನಃ ನಗುತ್ತ) ಬಂದದ್ದಲ್ಲ ಪಂತರೆ—... (ತನ್ನ ತಲೆಗೆ ಬೆರಳಿಟ್ಟು) ಇಲ್ಲೆಲ್ಲೋ ಇತ್ತು, ಆಲೋಚನೆ...

ಈ ಮನುಷ್ಯ ಚಿಲ್ಲರೆ ಜನ ಅಲ್ಲ. ಅದೃಷ್ಟಮಾತ್ರ ಕೆಟ್ಟದ್ದು, ಪಂತರೇ!

ರಾಮಪ್ಪಯ್ಯ: ಸ್ವಾಮಿ, ತಾವು ಇಂಗ್ಲಿಷಿನಲ್ಲಿ ಮಾತಾಡಿದರೆ ಅರ್ಥಮಾಡಿಕೊಳ್ಳುವವರು ಯಾರೂ ಅಂತ?

ಭುಜಂಗ: ಅದಕ್ಕೆ ಮೊದಲೇ ತಯಾರಿಸಿಟ್ಟಿದ್ದೇನೆ. ಅದ್ಭುತ ಮನುಷ್ಯನನ್ನು!

ರಾಮಪ್ಪಯ್ಯ. ಇಟ್ಟಿದ್ದಿರಾ? ಯಾರನ್ನು?

ಭುಜಂಗ: ಇಂಗ್ಲಿಷನ್ನು ಕನ್ನಡ ಮಾಡುವ ಆ ವೃತ್ತಿಯವನೇ ಇದ್ದಾನಲ್ಲ—ನಮ್ಮ ಗೋವಿಂದರಾವ್ ಸಖಾರಾಮ್! ಅವನ ಇಡೀ ಜೀವನವೇ ನನ್ನಂಥವರ ಭಾಷಣಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಕಳೆಯುತ್ತಿದೆ. ಬೇರೆ ವೃತ್ತಿಯೇ ಅವನಿಗೆ ತಿಳಿಯೋದಿಲ್ಲ.

ವಿಠ್ಠಲ ಪಂತ: ಈ ಚುನಾವಣೆ ಮುಗಿದ ಕೂಡಲೇ ಅವನಿಗೊಂದು ಬಿರುದು ಕೊಡಬೇಕು ಸ್ವಾಮಿ.

ಭುಜಂಗ: (ಅಹುದೆಂದು ತಲೆಯಲ್ಲಾಡಿಸಿ) ಅಹುದು, "ಭಾಷಣ ರಾಕ್ಷಸ" ಅಂತ! ಇಲ್ಲದಿದ್ದರೆ 'ಕನ್ನಡ ಕುಂಭಕರ್ಣ' ಅಂತ! ಭಾಷಣವಿದ್ದಾಗ ಮಾತ್ರ ಅವನಿಗೆ ಎಚ್ಚರ—ಉಳಿದ ಸಮಯ ಗಾಢ ನಿದ್ರೆ!

ರಾಮಪ್ಪಯ್ಯ, ನೀವವನನ್ನು ಕರಕೊಂಡು ಬನ್ನಿ. ನಾವು, ಕೊನೆಯ ಸಿದ್ಧತೆಗಳನ್ನು ನೋಡಿಕೊಂಡು ಬರುತ್ತೇವೆ.

(ತೆರೆ)

ದೃಶ್ಯ ೮

[ರಸ್ತೆ: ಒಂದು ಕಡೆಯಿಂದ ಮೀನಾಕ್ಷಮ್ಮ ಬರುತ್ತಿರುವರು. ಇನ್ನೊಂದು ಕಡೆಯಿಂದ ರಾಮಪ್ಪಯ್ಯ ಮತ್ತು ವಿಠ್ಠಲಪಂತರ ಪ್ರವೇಶ.]

ರಾಮಪ್ಪಯ್ಯ: ಓ, ನಮ್ಮಮ್ಮನವರು! (ನಮಸ್ಕಾರ ಮಾಡಿ) ಏನು ಮೀನಾಕ್ಷಮ್ಮಾ, ಮೈದಾನುಕಡೆ ಹೊರಟಿರಾ?

ಮೀನಾಕ್ಷಿ: ಇಲ್ಲ, ಮೈದಾನಿಗೇಕೆ ಹೋಗಲಿ? ಏನು ವಿಶೇಷ?

ವಿಠ್ಠಲ ಪಂತ: ಕೇಳಿಲ್ಲವೆ ಅಮ್ಮಾ—ಭುಜಂಗರಾಯರ ಭಾಷಣ!

ಮೀನಾಕ್ಷಮ್ಮ: ಅದನ್ನು ನಾನೇಕೆ ಕೇಳಲಿ ಪಂತರೇ?

ವಿಠ್ಠಲಪಂತ: ಹಾಗನ್ನುವಿರೇಕೆ?

ಮೀನಾಕ್ಷಮ್ಮ: ಭುಜಂಗನ ಭಾಷಣವೆಂದರೆ ಅದರಲ್ಲಿ ವಿಷವಿರಬಹುದು; ಮತ್ತೇನು?

ರಾಮಪ್ಪಯ್ಯ: ನಿಮ್ಮ ಭಾಷಣಗಳಾವಾಗ ಮೀನಾಕ್ಷಮ್ಮನವರೇ?

ಮೀನಾಕ್ಷಮ್ಮ: ರಾಮಪ್ಪಯ್ಯಾ, ನಾನು ಅನಾವಶ್ಯಕವಾಗಿ ಭಾಷಣಗಳಿಗೆ ಹೋಗುವುದಿಲ್ಲ. ನನ್ನ ಬಗ್ಗೆ, ನನ್ನ ಸ್ನೇಹಿತರು ಸ್ವಯಂಪ್ರೇರಿತರಾಗಿಯೇ ಶ್ರಮಿಸುತ್ತಿರುವರು. ನಾನು ಚುನಾವಣೆಗೆ ನಿಂತಿರುವೆನೆಂದು, ಮತದಾರ ಕ್ಷೇತ್ರದಲ್ಲಿ ಸಾಧ್ಯವಿದ್ದ ಕಡೆಗಳಿಗೆಲ್ಲ ಹೋಗಿ ಹೇಳಿ ಬರುತಿದ್ದೇನೆ. ನಾನು ಪರದೂಷಣೆಗೂ ಸ್ವಭೂಷಣೆಗೂ ಯತ್ನಿಸುವುದಿಲ್ಲ. ಮತದಾರರಿಗೆ ನಾನೇ ಪ್ರತಿನಿಧಿಯಾಗಬೇಕೆಂದು ತೋರಿದರೆ ಮತ ಕೊಡುತ್ತಾರೆ. ಕೊಡದಿದ್ದರೆ ನಾನು ಅವರ ವಿಶ್ವಾಸಕ್ಕೆ ಪಾತ್ರಳಲ್ಲ ಎಂದು ತಿಳಿದು, ಸಂತೋಷದಿಂದಲೇ ನನ್ನ ಸೋಲು ಒಪ್ಪುವೆನು.

ವಿಟ್ಠಲ ಪಂತ: ಸೋತರೆ ಸಂತೋಷವೇಕೆ ಮೀನಾಕ್ಷಮ್ಮ?

ಮೀನಾಕ್ಷಮ್ಮ: ನೋಡಿ ಪಂತರೇ, ನಾನು ಸ್ವಾರ್ಥಕ್ಕಾಗಿ ಹುರಿಯಾಳಾಗಿದ್ದರೆ, ಸೋಲಿನಿಂದ ನನಗೆ ದುಃಖವಾಗಬಹುದು. ಸ್ವಾರ್ಥವಿಲ್ಲದಿದ್ದರೆ ದುಃಖದ ಮಾತಿಲ್ಲ.

ರಾಮಪ್ಪಯ್ಯ: ಸರಿಯಾಗಿಯೇ ಹೇಳಿದಿರಮ್ಮಾ. ನಿಮಗೆ ದೇವರು ಒಳ್ಳೆಯದನ್ನು ಮಾಡಲಿ.

ಮೀನಾಕ್ಷಮ್ಮ: ನಿಮ್ಮೆಲ್ಲರ ಆಶೀರ್ವಾದವಿದ್ದರೆ........

ವಿಠ್ಠಲ ಪಂತ: ಜನತಾ ಜನಾರ್ಧನನ ಆಶೀರ್ವಾದ ಅಮ್ಮಾ!

ಮೀನಾಕ್ಷಮ್ಮ: ಹಾಗೆಂದೇ ನಾನು ತಿಳಿವೆನು. ನೀವೀಗ ಮೈದಾನಿಗೆ ಹೊರಟಿರಾ?

ರಾಮಪ್ಪಯ್ಯ: ಅಹುದಮ್ಮಾ. ಭುಜಂಗರಾಯರ ಇಂಗ್ಲಿಷ್ ಭಾಷಣವಂತೆ!

ಮೀನಾಕ್ಷಮ್ಮ: ಇಂಗ್ಲಿಷ್ ಭಾಷಣ? ಇರಲಿ. ಯಾವ ಭಾಷೆಯಾದರೇನು? ಯಥಾರ್ಥವಿದ್ದುದನ್ನು ಎಲ್ಲರಿಗೂ ತಿಳಿವಂತೆ ಹೇಳಿದರಾಯಿತು. ನಮಸ್ತೇ.

(ರಾಮಪ್ಪಯ್ಯ, ವಿಠ್ಠಲ ಪಂತ ಹೋಗುವರು. ಮೀನಾಕ್ಷಮ್ಮ ಮುಂದರಿವಾಗ, ಎದುರಿಂದ ಭುಜಂಗರಾಯರು ಗೋವಿಂದರಾಮನೊಡನೆ ಬರುವರು. ಮೀನಾಕ್ಷಮ್ಮ ಹೋಗುವಾಗ ಭುಜಂಗರಾಯರು ಅವಳನ್ನೆ ನೋಡಿ, ಮತ್ತೆ)

ಭುಜಂಗ: ಗೋವಿಂದ್ಜಿ ಸಖಾಜಿ!

ಗೋವಿಂದ: ಸ್ವಾಮಿ, ಸ್ವಾಮಿ.

ಭುಜಂಗ: Beautiful Woman! Good, best, big beautiful Womanನ್ನು!

ಗೋವಿಂದ: ಅವಳಷ್ಟು ಅಪ್ರತಿಮ ಸುಂದರಿ ಮತ್ತಾರೂ ಇಲ್ಲ ಅಂತ ಕನ್ನಡದಲ್ಲಿ ಹೇಳಬಹುದು.

ಭುಜಂಗ: ಇಂಥವರೇಕೆ ಚುನಾವಣೆಗೆ ನಿಲ್ಲುವುದಿಲ್ಲ ಸಖಾಜಿ?

ಗೋವಿಂದ: ನಿಂತಿದ್ದಾರಲ್ಲವೆ!

ಭುಜಂಗ: ಯಾರು, ಆ Beautiful woman ನ್ನು ನಿಂತಿರುವಳೇ? ಅವಳು............?

ಗೋವಿಂದ: ಗೊತ್ತೇ ಇಲ್ಲವೆ ನಿಮಗೆ? ಅವಳು ಮೀನಾಕ್ಷಮ್ಮ, ಸಾಕ್ಷಾತ್ ಮೀನಾಕ್ಷಮ್ಮ.

ಭುಜಂಗ: (ಥಕ್ಕನೆ ಭಾವನೆ ಬದಲಾಗಿ) ಸಖಾರಾಮಜೀ!

ಗೋವಿಂದ: ಜೀ!

ಭುಜಂಗ: Ugly woman – Very ugly! — ಈ ಮಾತು ತಮಾಷೆಯಲ್ಲ, ಮೊದಲು ಹೇಳಿದ ಮಾತು ಮಾತ್ರ ತಮಾಷೆ!

ಗೋವಿಂದ: ತಿಳಿಯಿತು, ಸತ್ಯ ಮಾತು!

ಭುಜಂಗ: ಅಹುದು! ಹಿಪ್ಪೊಪೊಟೇಶನ್ ಅನ್ನುತ್ತಾರಲ್ಲ—ಹಾಗೆ!

ಗೋವಿಂದ: ಅಹುದು! ಹಿಪ್ಪೊಪೊಟೆಮಸ್ ಅಂದರೆ ನೀರುಕುದುರೆಯ ಹಾಗೆ ಅಂತ!

ಭುಜಂಗ: ನಿಜವಾದ Beautiful womanನ್ನು ನನ್ನ ಲಕ್ಷ್ಮಿ!

ಗೋವಿಂದ: ತಮ್ಮ ಯಜಮಾನಿಯವರು?

ಭುಜಂಗ: ನನ್ನ ಯಜಮಾನಿ? ನನ್ನ ದೇವಿ, ಸಾಕ್ಷಾತ್ ದೇವಿ!

ಗೋವಿಂದ: ಇಂಗ್ಲಿಷಿನಲ್ಲಿ ಗೋಡೆಸ್ಸ್ ಅಂತ!

ಭುಜಂಗ: ನಿಜ! ಏಕೆಂದರೆ, ನಮ್ಮ ಲಕ್ಷ್ಮಿ ತಾನು ಚುನಾವಣೆಗೆ ನಿಲ್ಲೋದಿಲ್ಲ! ಇತರರಿಗೆ ನಿಲ್ಲುವಂತೆ ಪ್ರೇರೇಪಿಸುವುದೂ ಇಲ್ಲ. ನಡೀರಿ, ಹೋಗೋಣ, ನಮ್ಮ ಇಂಗ್ಲಿಷ್ ಭಾಷಣಕ್ಕೆ!

(ಹೋಗುವರು.)

ದೃಶ್ಯ ೯

[ಮೈದಾನು. ಭುಜಂಗರಾಯರು ಭಾಷಣವೇದಿಕೆಯ ಮೇಲೆ, Microphone ಮುಂದೆ ನಿಂತಿರುವರು. ಬಳಿಯಲ್ಲಿ ಗೋವಿಂದರಾವು ಸಖಾರಾಮು ನಿಂತಿರುವನು. ಭುಜಂಗರಾಯರು ಇಂಗ್ಲಿಷಿನಲ್ಲಿ ಒಂದೊಂದು ಪಂಕ್ತಿಯಂತೆ ಹೇಳುವಾಗ–ಗೋವಿಂದರಾಮನು ಸರಿಯಾದ ಅರ್ಥ ಬರುವಂತೆ ಕನ್ನಡದಲ್ಲಿ ತರ್ಜುಮೆ ಮಾಡುತ್ತಿರುವನು.]

ಭುಜಂಗ: Ladies & Gentlemen!

ಗೋವಿಂದ: ಮಹಿಳೆಯರೇ ಮತ್ತು ಮಹನೀಯರೇ,

ಭು: I speak front of you lucky sick man.

ಗೋ: ನಾನಿಂದು ಅಸ್ವಸ್ಥದ ಮನುಷ್ಯನಾಗಿಯೂ ನಿಮ್ಮ ಮುಂದೆ ನಿಂತು ಭಾಷಣ ಮಾಡುತ್ತಿರುವುದು ನನ್ನ ಸುದೈವವೆಂದೇ ತಿಳಿವೆನು.

ಭು: Today I speak front and tomorrow I speak back. I is honest.

ಗೋ: ನಾನು ಇಂದು ತಮ್ಮ ಮುಂದೆ ಮಾತಾಡುವೆನು—ಹೀಗೆ ಮಾತಾಡಿದಂತೆ ಮತ್ತೆ ಹಿಂದಿನಿಂದಲೂ ಅದರಂತೆ ನಡಕೊಳ್ಳುವೆನು. ನಾನು ಈ ವಿಷಯದಲ್ಲಿ ಪ್ರಾಮಾಣಿಕನಾಗಿರುವೆನು.

ಭು: All people talked you alone st
election and I stand up.

ಗೋ: ಎಲ್ಲ ಜನರು ನೀವೇ ಚುನಾವಣೆಗೆ ನಿ
ಕೆಂದು ಒತ್ತಾಯಪಡಿಸಿದರು—ಎಂದೇ ನಾನು ನಿಂತಿರು

(ಸಭೆಯೊಳಗಿಂದ ಒಬ್ಬ: "ಹಾಗಾದರೆ ಸುಮ್ಮನೆ
ಗೇಕೆ ತೊಂದರೆ ಕೊಡುತ್ತಿರಿ?")

ಭು: If I passed election I
servicing people.

ಗೋ: ನಾನು ಈ ಚುನಾವಣೆಯಲ್ಲಿ ಗೆದ್ದರೆ, ಜ
ಸೇವೆಯನ್ನೆ ಮುಖ್ಯ ಉದ್ದೇಶವಾಗಿಟ್ಟುಕೊಳ್ಳುವೆನು.

ಭು: I am not sleeping till piec
people.

ಗೋ: ಜನರಿಗೆ ಪೂರ್ಣಶಾಂತಿ—ಸುಖಗಳು ಲಭಿ
ವರೆಗೆ ನಾನು ವಿಶ್ರಾಂತಿ ಪಡೆಯುವುದಿಲ್ಲ.

ಭು: All speak five year plan—se
year plan—ten year plan

ಗೋ: ಎಲ್ಲರೂ ಇಂದು ಪಂಚವಾರ್ಷಿಕ ಯೋಜ
ಸಪ್ತವಾರ್ಷಿಕ ಯೋಜನೆ—ಮತ್ತು ದಶವಾರ್ಷಿಕ ಯ
ನೆಯ ಕುರಿತು ಮಾತಾಡುತಿದ್ದಾರೆ.

ಭು: I speak monthly plan—wee
plan—hour plan.

ಗೋ: ಜನರು ಇಚ್ಛಿಸಿದರೆ ನಾನು ಮಾಸಿಕ ಯೋ
—ಸಾಪ್ತಾಹಿಕ ಯೋಜನೆ—ಘಂಟೆ ಘಂಟೆಗೆ ಕೂಡ
ಜನೆ ಮಾಡಬಲ್ಲೆ.

ಭು: I am always plan.

ಗೋ: ನಾನು ಯಾವಾಗಲೂ ಯೋಜಿಸುತ್ತಿ
ಮನುಷ್ಯ.

ಭು: Men and Women speak m
patients and no hospitals.

ಗೋ: ಈ ದಿನಗಳಲ್ಲಿ ರೋಗಿಗಳು ಹೆಚ್ಚು—ಆ
ಗಳು ಕಮ್ಮಿ ಎಂದು ಸ್ತ್ರೀಪುರುಷರು ಹೇಳುವರು.

ಭು: If I is elect, I give hospital
Women & Men.

ಗೋ: ನಾನು ಚುನಾಯಿಸಿ ಬಂದರೆ, ಸ್ತ್ರೀ-ಪುರು
ಬೇಕಾದಷ್ಟು ಆಸ್ಪತ್ರೆಗಳು ದೊರೆವಂತೆ ಮಾಡುವೆನು.

ಭು: I give all houses to hospi
and all hospitals to houses.

ಗೋ: ಅವಶ್ಯ ಬಿದ್ದರೆ, ಮನೆಗಳನ್ನೆ ಆಸ್ಪತ್ರೆಗ
ಪರಿವರ್ತಿಸುವುದೂ ಸಾಧ್ಯ.

(ಸಭೆಯೊಳಗಿಂದ ಕೂಗು: ನಮಗೆ ಆಸ್ಪತ್ರೆ ಬೇಡ—
ಅನ್ನ ಬೇಕು!)

ಭು: Education is my speciality.

ಗೋ: ಶಿಕ್ಷಣ ವಿಷಯವು ನನ್ನ ವೈಶಿಷ್ಟ್ಯ.

ಭು: I start education in cradle and end in death.

ಗೋ: ಶಿಕ್ಷಣವು ತೊಟ್ಟಿಲಿನಿಂದ ಚಟ್ಟದ ವರೆಗೆ ಕೊಡಲ್ಪಡುವುದು.

ಭು: Slates and pencils free.

ಗೋ: ಸ್ಲೇಟು-ಪೆನ್ಸಿಲ್‌ಗಳನ್ನು ಧರ್ಮಾರ್ಥ ಸಿಗುವಂತೆ ಮಾಡುವೆನು.

ಭು: Nowadays we hear teachers weep.

ಗೋ: ಇಂದಿನ ದಿನದಲ್ಲಿ ನಾವು 'ಉಪಾಧ್ಯಾಯರ ಗೋಳು' ಎಂಬುದಾಗಿ ಕೇಳುತ್ತಿರುತ್ತೇವೆ.

ಭು: I say to teachers don't weep.

ಗೋ: ಗೋಳಾಡಬೇಡಿರಿ ಎಂದೇ ಉಪಾಧ್ಯಾಯರಲ್ಲಿ ನನ್ನ ವಿನಂತಿ.

ಭು: If I is passing election, I make all teachers headmasters.

ಗೋ: ನಾನು ಈ ಚುನಾವಣೆಯಲ್ಲಿ ಗೆದ್ದು ಬಂದರೆ, ಎಲ್ಲ ಉಪಾಧ್ಯಾಯರನ್ನು ಹೆಡ್ಮಾಸ್ಟರರೆಂದು ನಾಮಕರಣ ಮಾಡುವೆನು.

ಭು: I call their children "little head masters" and when father died I make them headmasters.

ಗೋ: ಅವರ ಮಕ್ಕಳು ಕೂಡಾ ಬಾಲ ಮಹೋಪಾಧ್ಯಾಯರೆಂದು ಗುರುತಿಸಲ್ಪಟ್ಟು, ಅವರ ತಂದೆಯು ಮರಣಾನಂತರ ಹೆಡ್ಮಾಸ್ಟರರಾಗುವರು.

ಭು: I think all teachers work eighty years.

ಗೋ: ಉಪಾಧ್ಯಾಯರೆಲ್ಲರೂ ಎಂಭತ್ತು ವರ್ಷಗಳ ತನಕ ಸರ್ವಿಸು ಮಾಡಬಹುದೆಂಬು ನನ್ನ ಅಭಿಪ್ರಾಯ.

ಭು: When teachers faint in class room chairs I make pension begin.

ಗೋ: ಅವರು, ಕೆಲಸ ಮಾಡಲು ಏನೇನೂ ತ್ರಾಣವಿಲ್ಲದೆ ಶಾಲಿನ ಕುರ್ಚಿಗಳಲ್ಲಿ ಮೂರ್ಛೆ ಹೋಗುವ ವರೆಗೆ ಕೆಲಸ ಮಾಡಬಹುದು ಅಡ್ಡಿಯಿಲ್ಲ.

ಭು: Pension is equal Salary.

ಗೋ: ತಲಬಿನಷ್ಟೆ ಪೆನ್ಶನ್ ಕೊಡಲಾಗುವುದು.

ಭು: I give more midwives.

ಗೋ: ನಾನು ಹೆಚ್ಚೆಚ್ಚು ಸೂಲಗಿತ್ತಿಯರನ್ನು ನೇಮಿಸುತ್ತೇನೆ.

ಭು: "Midwives" name is not good.

ಗೋ: 'ಸೂಲಗಿತ್ತಿ' ಎಂಬ ಹೆಸರು ಚಲೋದಲ್ಲ.

ಭು: I change "midwives" to "good wives".

ಗೋ: ನಾನು "ಸೂಲಗಿತ್ತಿ" ಎಂಬುದನ್ನು 'ಶೀಲವತಿ" ಎಂದು ಬದಲಾಯಿಸುತ್ತೇನೆ.

ಭು: Woman respect is my another speciality.

ಗೋ: ಸ್ತ್ರೀಯರಿಗೆ ಗೌರವ ಕೊಡುವುದು ನನ್ನ ಇನ್ನೊಂದು ವೈಶಿಷ್ಟ್ಯ.

ಭು: I take control.

ಗೋ: ನಾನು ಕಂಟ್ರೋಲುಗಳನ್ನು ತೆಗೆದು ಹಾಕುತ್ತೇನೆ.

ಭು: If price up I cannot control.

ಗೋ: ಧಾರಣೆ ಏರಿದರೂ ಕಂಟ್ರೋಲು ಇಲ್ಲ.

ಭು: If price very up—I import rice.

ಗೋ: ಆದರೆ, ಅತಿಯಾಗಿ ಧಾರಣೆ ಏರಿದರೆ, ಸಾಕಾದಷ್ಟು ಅಕ್ಕಿಯನ್ನು ಆಮದು ಮಾಡುತ್ತೇನೆ.

ಭು: Then price little—people happy.

ಗೋ: ಆಗ ಧಾರಣೆ ಇಳಿಯುತ್ತದೆ-ಜನರೆಲ್ಲ ಸಂತೋಷಪಡುತ್ತಾರೆ.

ಭು: I dam everywhere.

ಗೋ: ನಾನು ಎಲ್ಲ ಕಡೆಗಳಲ್ಲೂ ಅಣೆಕಟ್ಟು ಹಾಕಿಸುತ್ತೇನೆ.

ಭು: Each dam full of water-

ಗೋ: ಪ್ರತಿ ಅಣೆಕಟ್ಟಿನಲ್ಲಿ ಧಾರಾಳ ನೀರು.

ಭು: I make bridges.

ಗೋ: ನಾನು ಸಂಕಗಳನ್ನು ಕಟ್ಟಿಸುತ್ತೇನೆ.

ಭು: All bridges very strong—no 'weak bridge' board.

ಗೋ: ಎಲ್ಲ ಸಂಕಗಳು ಗಟ್ಟಿಮುಟ್ಟಾಗಿರುವಂತೆ ಮಾಡುತ್ತೇನೆ. "ಬಲವಿಲ್ಲದ ಸಂಕ" ಎಂಬ ಬೋರ್ಡ್ ಇಲ್ಲ!

ಸಭೆಯೊಳಗಿಂದ ಗೇಂದು: "ಏ ಬಾಯಿಬಡಕಾ, ನೀನು ಈ ಮೊದಲು ಎಷ್ಟು ದೇಶಸೇವೆ ಮಾಡಿರುತ್ತಿ ಅಂತ ಹೇಳು."

ಭುಜಂಗ: What?

ಗೋಪು: ಕೇಳುವವರಿದ್ದಾರಂತ ಬಾಯಿಗೆ ಬಂದಂತೆ ಮಾತಾಡಬೇಡ; ಎಸೆಂಬ್ಲಿ ಅಂದರೆ ಧರ್ಮಸಾಲೆ ಅಲ್ಲ!

ಗೇಂದು: ಬಡವರ ಬಗ್ಗೆ ಏನುಮಾಡುತ್ತಿ ಹೇಳು!

ಭುಜಂಗ:(ಏನೋ ವಿವರಿಸಲು ಹೋಗಿ,ಬಿಕ್ಕಳಿಸುವನು)

ಗೋಪು: ಸುಮ್ಮನೆ ಮನೆಗೆ ನಡಿ! ನಿನಗೆ ಎಸೆಂಬ್ಲಿ ಬೇಡ.

(ರಾಮಪ್ಪಯ್ಯನು ಮುಂದೆ ಬಂದು)

ರಾಮಪ್ಪಯ್ಯ: ಮಾನ್ಯ ಸಭಿಕರೇ, ನೀವು ಹಾಗೆಲ್ಲ ಮಾತಾಡಬಾರದು. ಇದು ಚುನಾವಣಾ ಸಭೆ. ನೀವೆಲ್ಲರೂ ಸಭ್ಯರೀತಿಯಿಂದ ವರ್ತಿಸಬೇಕು.

ಗೇಂದು: ಗೊತ್ತಿದೆ! ನಿಮಗೆ ಅಧಿಕ ಪ್ರಸಂಗ ಬೇಡ! ನಾವು ಕುರಿಗಳಲ್ಲ.

ರಾಮಪ್ಪಯ್ಯ: ನಾನು ಮನುಷ್ಯರನ್ನು ಕುರಿಗಳೆಂದು ತಿಳಿದಿಲ್ಲ. ಭುಜಂಗ ರಾಯರು ಪ್ರಾಮಾಣಿಕ ಮನುಷ್ಯರು-ಅವರ ಎರಡು ಮಾತುಗಳನ್ನು ತಾವು ಕೇಳಬೇಕು. ಆ ಮೇಲೆ ಅವರಿಗೆ ಓಟು ಕೊಡಬೇಕೋ ಬೇಡವೋ ಎಂದು ನಿರ್ಧರಿಸಲು ತಮಗೆ ಧಾರಾಳ ಸಮಯವಿದೆ.

ಗೇಂದು: ನಾವು ಕೊಡುವುದಿಲ್ಲ ಸ್ವಾಮಿ, ನಾವು ಇಲ್ಲಿ ನಿಲ್ಲುವುದೇ ಇಲ್ಲ. ಈ ತಮಾಷೆ ನಮಗೆ ಬೇಡ. ಅವರು ಬಾಯಿಗೆ ಬಂದಂತೆ ಗಳಹುವುದನ್ನು ನೀವೇ ನಿಂತು ಕೇಳಿ. (ಸಭೆಗೆ) ಮಿತ್ರರೇ, ನಮಗೆ ಈ ಘಟಿಂಗರ ಸಭೆ ಬೇಡ, ಬನ್ನಿ-ಹೋಗೋಣ. (ಹೋಗುವನು. ಸಭಿಕರು ಒಬ್ಬೊಬ್ಬರಾಗಿ ಎದ್ದು ಹೋಗುವರು.)

[ಭುಜಂಗರಾಯರು, ನಿರುತ್ತರರಾಗಿ, Microphone ಹಿಡಿದು ಕುಳಿತುಕೊಳ್ಳುವರು. ಪರದೆ.]

ದೃಶ್ಯ ೧೦

(ರಸ್ತೆ: ಶಂಕ್ರಯ್ಯ ಅಮಲಿನಲ್ಲಿ ಬರುತ್ತಿರುವನು.)

ಶಂಕ್ರಯ್ಯ: ಈ ದಿನ ಓಟಿನ ದಿನ. ನನಗೆ ನಡೆಯಲಿಕ್ಕಾಗುತ್ತಿಲ್ಲವೆಂದು ನಾನು ಅತ್ತ ಕಡೆ ಹೋಗಿಲ್ಲ. ಜನರಿಗೆ ನನ್ನ ಪಾಯಿಂಟ್‌ಗಳು ಒಪ್ಪಿಗೆಯಾದರೆ ಓಟು ಕೊಡುತ್ತಾರೆ. ಕೊಡದೆ ಎಲ್ಲಿಗೆ ಹೋಗುತ್ತಾರೆ? ನಾನು ಚಿಕ್ಕಾಸೂ ಖರ್ಚು ಮಾಡಿಲ್ಲ. ಖರ್ಚು ಮಾಡುವ ಕಾಲವೂ ಇದಲ್ಲ. ಕಾರಣ, ಚಿಕ್ಕಾಸೇ ಇಲ್ಲ.

(ರಾಮಪ್ಪಯ್ಯ ಮತ್ತು ವಿಠ್ಠಲ ಪಂತರ ಪ್ರವೇಶ.)

ರಾಮಪ್ಪಯ್ಯ: ಶಂಕ್ರಯ್ಯನವರೆ? ಎಲ್ಲಿಗೆ ಹೊರಟಿರಿ? ಸಂತೋಷವಾಗಿರುವಿರಲ್ಲಾ!

ಶಂಕ್ರಯ್ಯ: ನಮಸ್ತೇ. ನನಗೆ ಸಂತೋಷವೆಂಬುದೇ ಇಲ್ಲ—ದುಃಖವನ್ನು ನಾನು ಅನುಭವಿಸಿದವನಲ್ಲ!

ವಿಠ್ಠಲ ಪಂತ: ತತ್ತ್ವಜ್ಞಾನಿಗಳೆಲ್ಲರೂ ಹಾಗೇ! ಈ ದಿನ ಓಟಿನ ಎಣಿಕೆ ಆಯಿತಲ್ಲ?—ನೀವೆಲ್ಲಿ?

ಶಂಕ್ರಯ್ಯ: ಲೆಕ್ಕಾಚಾರ ಮುಗಿಯಿತೇ? ಯಾರಿಗೆಷ್ಟು?

ರಾಮಪ್ಪಯ್ಯ: ಮೀನಾಕ್ಷಮ್ಮನವರಿಗೆ ಇಪ್ಪತ್ತು ಸಾವಿರ ದಾರನೂರ ತೊಂಭತ್ತೆಂಟು. (೨೦,೪೯೮)

ಶಂಕ್ರಯ್ಯ: ಸರಿ. ಅದೇನೂ ವಿಶೇಷವಲ್ಲ ಪ

ವಿಠ್ಠಲ ಪಂತ: ಭುಜಂಗ ರಾಯರಿಗೆ ಎರಡು ಸಾವಿ ಮೂವತ್ತೇಳು. (೨೦೩೭)

ಶಂಕ್ರಯ್ಯ: ಸರಿ;ಬಹಳ ಕಡಿಮೆಯಾಯಿತು. ಆ ಮೇ

ರಾಮಪ್ಪಯ್ಯ: ಶಂಕ್ರಯ್ಯನವರಿಗೆ ಒಂದು!

ಶಂಕ್ರಯ್ಯ: ಸರಿ. Poor, very poor! ಆ ಮೇ

ವಿಠ್ಠಲ ಪಂತ: ಚಂದರ್ ಹಿಂದೆಗೆದ ಕಾರಣ, ಅ ಮುಗಿಯಿತು.

ಶಂಕ್ರಯ್ಯ: ಅದೂ ಸರಿ. ಆ ಮೇಲೆ ನನಗೆ?

ರಾಮಪ್ಪಯ್ಯ: ಹೇಳಿದೆವಲ್ಲ-ಶಂಕ್ರಯ್ಯನವರಿಗೆ ಒಂ ಅಂತ! ಶಂಕ್ರಯ್ಯ ಅಂದರೆ ನೀವೇ ತಾನೆ?

ಶಂಕ್ರಯ್ಯ: Correct ಹೇಳುವುದಾದರೆ ಪಂಜೀಶ ಶಂಕ್ರಯ್ಯಾ. ಇರಲಿ. ಹಾಗಾದರೆ ಗೆದ್ದವರಾರು?

ವಿಠ್ಠಲ ಪಂತ: ಮೀನಾಕ್ಷಮ್ಮ.

ಶಂಕ್ರಯ್ಯ: ಸೋತವರು?

ರಾಮಪ್ಪಯ್ಯ: ಭುಜಂಗ ರಾಯರು ಮತ್ತು ನೀವು

ಶಂಕ್ರಯ್ಯ: (ಚಕಿತನಾಗಿ) ನಾನು? ನಾನು ಸೋ ಬಿಟ್ಟೆನೇ?

(ಹಾಗೆನ್ನುತ್ತ, ಚಿತ್ತವನ್ನು ಒಬ್ಬನ ಕೈಗೂ,ಹೇಟನ್ನು ಇ ಬ್ಬನ ಕೈಗೂ ಕೊಟ್ಟು, ಆಗಲೇ ಬಂದ ಚಂದರನ ಕೈಯ ಮೂರ್ಛೆ ಹೋಗುವನು.)

ಚಂದರ್: ಏನಿದು ರಾಮಪ್ಪಯ್ಯನವರೇ— ಇ ಹೀಗೆ ಬಿದ್ದರು? ಪ್ರಾಣ ಹೋಯಿತೆ?

ರಾಮಪ್ಪಯ್ಯ: ಒಬ್ಬ Candidate,— ಶಂಕ್ರ ಇನ್ನೂ ಸತ್ತಿಲ್ಲ.

ಚಂದರ್: ಹಾಗೇಕೆ ಬಿದ್ದಿರುವರು? (ಶಂಕ್ರಯ ನಾಡಿ ನೋಡಿ) ನಾಡಿ ಸಿಕ್ಕೋದಿಲ್ಲ:

ವಿಠ್ಠಲ ಪಂತ: ಅಲ್ಲೇ ಅವರ ಕಿಸೆಯಲ್ಲಿರಬಹು ನೋಡಿ.

ಚಂದರ್: ಬಿದ್ದಿರುವರೇಕೆ, ಹೇಳಿ!

ರಾಮಪ್ಪಯ್ಯ: ಚುನಾವಣಾ ಫಲಿತಾಂಶ ಕೇಳಿ, ಮೂ ನಿದ್ರೆಯಲ್ಲಿದ್ದಾರೆ.

ಚಂದರ್: ಚುನಾವಣಾ ಫಲಿತಾಂಶ ಹೊರಬಿತ್ತೇ?

ವಿಠ್ಠಲ ಪಂತ; ಈಗ ತಾನೆ ಪ್ರಕಟವಾಯಿತು. ಅದ ಭುಜಂಗರಾಯರಿಗೆ ತಿಳಿಸಲು ಹೋಗುತ್ತಿದ್ದೆವು. ಆಗ, ಯಲ್ಲಿ ಈ ಮತ್ಸ್ಯಾವತಾರವಾಯಿತು.

ಚಂದರ್: ಹೇಗಾಯಿತು? ಯಾರು ಗೆದ್ದರು?

ರಾಮಪ್ಪಯ್ಯ: ಶಂಕ್ರಯ್ಯನವರಿಗೆ ಒಂದು— ಯಾ ಒಬ್ಬ ರಿಂಗ್ ಮಾಸ್ಟರನ ಓಟಿಂತ ಕಾಣುತ್ತದೆ— ಭು ರಾಯರಿಗೆ ೨೦೩೭— ಮೀನಾಕ್ಷಮ್ಮನವರಿಗೆ ೨೦,೪೯೮.

(ಶಂಕರಯ್ಯನು ಥಕ್ಕನೆ ಮೂರ್ಛೆ ತಿಳಿದೆದ್ದು, ತನ್ನ ಹೇಟ್ ಮತ್ತು ಬೆತ್ತವನ್ನು ತೆಗೆದುಕೊಂಡು—)

ಶಂಕ್ರಯ್ಯ: ಥೇಂಕ್ಸ್! ನನಗೊಂದು ಸಣ್ಣ ನಿದ್ದೆಯೂ ಯಿತು!

ಚಂದರ್: ನಮಗೆ ನಿಮ್ಮ ನಾಡಿಯೇ ಸಿಕ್ಕಲಿಲ್ಲ!

ಶಂಕ್ರಯ್ಯ: ನಮಗೆ ನಾಡಿಯೇ ಇಲ್ಲ—ಗಾಬರಿ ಪಡ ಬೇಡಿ. ನಿದ್ದೆಯಲ್ಲೊಂದು ಸಣ್ಣ ಸ್ವಪ್ನ. ಚುನಾವಣೆಯಲ್ಲಿ ನನಗೆ ಒಂದು ಓಟು ಸಿಕ್ಕಿ, ನಾನು ಸೋಲುವ ಮೂಲಕ ಗೆದ್ದೆ ಅಂತ ಸ್ವಪ್ನ!

ರಾಮಪ್ಪಯ್ಯ: ಅದು ಹೇಗೆ?

ಶಂಕ್ರಯ್ಯ: Simple! ನಮಗೆ ಹೆಚ್ಚು ಓಟು ಸಿಕ್ಕಿದರೆ ಎಸೆಂಬ್ಲಿಗೆ ಹೋಗಲೇ ಬೇಕಿತ್ತು. ಎಸೆಂಬ್ಲಿಗೆ ಹೋದರೆ ಭಾಷ ಣ ಮಾಡಲೇ ಬೇಕು-Single Question ಮೇಲೆ ನಾಲ್ಕು ದಿನ ಭಾಷಣ. ಭಾಷಣ ಮಾಡಿದ ಮೇಲೆ ಸತ್ಯಾಗ್ರಹ ಮಾಡ ಲೇ ಬೇಕು. ನಾವು ಅನ್ನ ಬಿಡುತ್ತೇವೆ. ಆದರೆ ಬಾಯಾರಿಕೆ ಜೋರು! ಆ ರಗಳೆ ಎಲ್ಲಾ ಈಗ ಇಲ್ಲೇ ತೀರಿದುವು ನೋಡಿ. ಈಗ ನಮಗೆ ಯಾರಾದರೂ ವಂತಿಗೆ ಮಾಡಿ ಬಂದೂಕು ತೆಗೆಸಿ ಕೊಟ್ಟರೆ, ನಾಯಿ, ಆಡು, ದನಗಳನ್ನು ಹೊಡೀತೇವೆ.

ರಾಮಪ್ಪಯ್ಯ: ನಿಜ. ನೀವು ಸೋಲಿನಲ್ಲಿ ಗೆಲವು ಕಾ ಣುವ ಪುಣ್ಯಾತ್ಮರಾದಿರಿ.

ಶಂಕ್ರಯ್ಯ: ನಮಸ್ತೇ! ನಮಸ್ತೇ! ಮನಸ್ಸಾದರೆ ಪಾಂ ಡಿಚೇರಿಗೆ ಹೋದರೂ ಹೋದೆವು!

(ಶಂಕ್ರಯ್ಯ ಬೆತ್ತ ಬೀಸುತ್ತ ಹೋಗುವನು. ವಿಠ್ಠಲ ಪಂತ ಮತ್ತು ರಾಮಪ್ಪಯ್ಯ, ಭುಜಂಗರಾಯರ ಮನೆಗೆ ಮುಂದರಿವರು.)

ದೃಶ್ಯ ೧೧

[ಭುಜಂಗರಾಯರ ಮನೆ ಕೊಠಡಿ. ಭುಜಂಗರಾಯರು ಕಳ ವಳದಿಂದ ಅತ್ತಿತ್ತ ನಡೆಯುತ್ತಿರುವರು. ರಾಮಪ್ಪಯ್ಯ ಮತ್ತು ವಿಠ್ಠಲ ಪಂತರ ಪ್ರವೇಶ.]

ಭುಜಂಗ: (ಆತುರದಿಂದ) ರಾಮಪ್ಪಯ್ಯ! (ಕುಳಿತು ಕೊಳ್ಳಲು ಕೈಯಿಂದಲೇ ಸನ್ನೆಮಾಡುತ್ತ ಅವರ ಮುಖಭಾವ ನೋಡುವನು. ಅವರು ಕುಳಿತುಕೊಳ್ಳೋದಿಲ್ಲ.)

ರಾಮಪ್ಪಯ್ಯ: (ದುಃಖದ ಮುಖ ಮಾಡಿ, ಪಂತರ ಕಡೆ ತಿರುಗಿ) ಪಂತರೇ, ನೀವೇ ಹೇಳಿ!

ವಿಠ್ಠಲ ಪಂತ: ನೀವೇ ಹೇಳಿ, ನೀವೇ ಹೇಳಿ!

ಭುಜಂಗ: (ಗಾಬರಿಯಿಂದ) ಏನು– ಸಂಕೋಚ? ಮತ ಎಣಿಕೆ ಮಾಡಿ ಆಯಿತೇ?

ರಾಮಪ್ಪಯ್ಯ: ಅಹುದು ಸ್ವಾಮಿ!

ಭುಜಂಗ: ಹಾಗಾದರೆ ಕುಳಿತುಕೊಂಡು ಮಾತಾ ಡೋಣ. ನನಗೆ ಸಂತೋಷವಾದರೂ ಒರಗಬೇಕು, ದುಃಖ ವಾದರೂ ಒರಗಬೇಕು. ಒಟ್ಟಾರೆ ನಾನು ಒರಗುವ ಮನು ಷ್ಯ!....(ಕುಳಿತುಕೊಂಡು) ಇನ್ನು ಹೇಳಿ. ಯಾರಿಗೆ ಎಷ್ಟು?

ರಾಮಪ್ಪಯ್ಯ: ಪಂತರೇ, ನಿಮಗೆ ಗೊತ್ತಿದೆ, ಹೇಳಿ.

ವಿಠ್ಠಲ ಪಂತ: ನಿಮಗೂ ಗೊತ್ತಿದೆ; ನೀವೇ ಹೇಳಿ.

ರಾಮಪ್ಪಯ್ಯ: ನಾನು ಹೇಳಿದರೂ ನೀವೂ ಹೇಳಿದರೂ ಸಂಖ್ಯೆ ಅದಲುಬದಲಾಗುವುದಿಲ್ಲವಷ್ಟೆ. ಹೇಳಿ!

ವಿಠ್ಠಲ ಪಂತ: ಹಾಗಿದ್ದರೆ ನೀವೇ ಹೇಳಿದರೆ ದೋಷವಿಲ್ಲ.

ರಾಮಪ್ಪಯ್ಯ: ಭುಜಂಗ ರಾಯರೇ!

ಭುಜಂಗ: (ಆತುರದಿಂದ ದೈನ್ಯದಿಂದ ತಲೆಎತ್ತುವರು)

ರಾಮಪ್ಪಯ್ಯ: ಮೀನಾಕ್ಷಮ್ಮನಿಗೆ............೨೦,೯೮೮!

ಭುಜಂಗ: ನೀರೂ, ನೀರೂ!

ರಾಮಪ್ಪಯ್ಯ: ಶಂಕ್ರಯ್ಯನವರಿಗೆ ಒಂದು!

ಭುಜಂಗ: ಬೇಗ ತಾರಪ್ಪ, ನೀರು.! ಒಂದು ಕಪ್ ನೀರು!

(ಅಡುಗೆಯವನು ನೀರು ತರುವನು. ಭುಜಂಗ ರಾಯರು ಅದನ್ನು ಪುನಃ ಅವನ ಕೈಗೆ ಕೊಟ್ಟು)—

ಏ ಚರಂಡಿ ಮಗನೇ! ನೀರೇಕೆ ತಂದಿ? ಕಾಫಿ ತಾ! ಇಷ್ಟು ದಪ್ಪ ಕಾಫಿ ತಾ—ಹೋಗು! ಏ! ಒಂದು ಗುಡಾಣ ತುಂಬ ಕಾಫಿ ತಂದಿಟ್ಟು ಹೋಗು! (ಅಡುಗೆಯವನು ಹೋಗುವನು.)

ರಾಮಪ್ಪಯ್ಯ: ಮತ್ತೆ ನಿಮಗೆ....(ಸುಮ್ಮನಾಗುವನು.)

ಭುಜಂಗ: ಹೇಳಿರಪ್ಪಾ, ನನಗೆ, ನನಗೆ.....ಹೇಳಿ ಬಿಡಿ.

ವಿಠ್ಠಲ ಪಂತ: ತಮಗೆ....ತಮಗೆ....ಹೇಳಿ ರಾಮಪ್ಪಯ್ಯ ನವರೇ!

ರಾಮಪ್ಪಯ್ಯ: ನೀವೇ ಹೇಳಿ!

ವಿಠ್ಠಲ ಪಂತ: ನೀವೇ! ನೀವೇ!

ಭುಜಂಗ: ಹೇ ಪಂತರೇ! ಹಾಗೆ ನನ್ನ ಎದೆ ಮೇಲೆ ಫೂಟ್‌ಬಾಲ್ ಆಡಬೇಡಿ! ಆಡಬೇಕಾದರೆ ಮೈದಾನಿಗೆ ಹೋಗಿ ಆಡಿ! ಹೆಣ್ಣೋ ಗಂಡೋ ಅಂತ ಹೇಳಿಬಿಡಿ ಒಮ್ಮೆ!

ವಿಠ್ಠಲ ಪಂತ: ಭುಜಂಗ ರಾಯರೇ, ಮೀನಾಕ್ಷಮ್ಮ ಗೆದ್ದಳು.

ಭುಜಂಗ: ಹ್ಞಾ! (Stuporನಿಂದ ನೋಡುವನು!)

ರಾಮಪ್ಪಯ್ಯ: (ಗಾಬರಿಯಿಂದ) ಭುಜಂಗ ರಾಯರೇ!

ವಿಠ್ಠಲ ಪಂತ: ಭುಜಂಗ ರಾಯರೇ!

(ಲಕ್ಷ್ಮಿ ಓಡಿ ಬಂದು, ಗಂಡನನ್ನು ಹಿಡಿದು)

ಲಕ್ಷ್ಮಿ: ಹಾ, ಏನಿದು? ಪಂತರೇ, ಇವರೇಕೆ ಹೀಗೆ ಕಣ್ಣು ತೆರೆದು ಬಾಯಿ ಬಿಟ್ಟಿರುವರು? ಏನಾಯಿತು? ರಾಮಪ್ಪಯ್ಯ............

ರಾಮಪ್ಪಯ್ಯ: ಗಾಬರಿಯಿಲ್ಲ ಅಮ್ಮಾ, ಅವರಿಗೆ ಸ್ವಲ್ಪ ದಣಿವಾಗಿದೆ.

ವಿಠ್ಠಲ ಪಂತ: ಅವರು ಗಂಡೋ ಹೆಣ್ಣೋ ಅಂತ ಕೇಳಿದರು. ಹೆಣ್ಣು ಅಂದೆ. ಅಷ್ಟಕ್ಕೇ ಈ ಚೇಷ್ಟೆ ಅಮ್ಮಾ!

ಲಕ್ಷ್ಮಿ: ರಾಮುಪ್ಪಯ್ಯ, ಏನಿದು! ಅಹುದೋ ಸುಬ್ಬಾ, ಒಂದಿಷ್ಟು ಕಾಫಿ ತಾ!

[ಅಡುಗೆಯವನು ಕಾಫಿ ತರುವನು. ಲಕ್ಷ್ಮಿಯು, ಕಾಫಿಯನ್ನು ಗಂಡನ ಮುಖದ ಮುಂದೆ ಹಿಡಿದು]—

ತಕ್ಕೊಳ್ಳಿ—ಕಾಫಿ! ನೋಡಿ, ಸ್ವಲ್ಪ ಮಾತಾಡಿ! ನಾನಲ್ಲವೇ? ನಿಮ್ಮ ಲಕ್ಷ್ಮಿ?

ರಾಮುಪ್ಪಯ್ಯ. ಭುಜಂಗ ರಾಯರೇ, ಕಾಫಿ ತಕ್ಕೊಳ್ಳಿ!

ಭುಜಂಗ: (ಎಚ್ಚೆತ್ತು ಕಾಫಿ ಕಪ್ ಹಿಡಿದು, ಸರಸರನೆ ಕುಡಿದು, (ಗಟ್ಟಿಯಾಗಿ) ಲಕ್ಷ್ಮೀss!

ಲಕ್ಷ್ಮಿ: ಇಲ್ಲೆ ಸಮೀಪ ಇದ್ದೇನಲ್ಲ!

ಭುಜಂಗ: ಅರೆ, ನನಗೆ ತಿಳಿಯಲಿಲ್ಲ! ನೀನು ಬಹಳ ಒಳ್ಳೆಯವಳು ಲಕ್ಷ್ಮಿ! ನಾನು ಕರೆವ ಮೊದಲೇ ಇಲ್ಲಿದ್ದಿ!

ರಾಮುಪ್ಪಯ್ಯ; ಭುಜಂಗ ರಾಯರೇ, ತಾವು ಸ್ವಲ್ಪ ....

ವಿಠ್ಠಲ ಪಂತ: ನಾವು, ಫಲಿತಾಂಶ ಹೇಳಲು ಬಂದಿದ್ದೆವು.

ಭುಜಂಗ: ಹೇಳಿಯಾಯಿತಲ್ಲ. ಇನ್ನೇನು?

ರಾಮುಪ್ಪಯ್ಯ: ಸೋಲನ್ನು ತಾವು ಮನಸ್ಸಿಗೆ ಹಚ್ಚಿಕೊಳ್ಳಬಾರದೆಂದು ನಮ್ಮ ವಿನಂತಿ.

ಭುಜಂಗ: ಇಲ್ಲ, ಇಕೊಳ್ಳಿ (ತನ್ನ ಹಣೆಯನ್ನು ಸವರಿ ಬಿಸುಡಿದಂತೆ ಮಾಡಿ) ಮುಗಿಯಿತಲ್ಲ!

ವಿಠ್ಠಲ ಪಂತ: ತಮಗೆ ಶ್ರಮವೂ ಆಯಿತು, ಕಾಲ ವ್ಯಯವೂ ಆಯಿತು, ಧನವ್ಯಯವೂ ಆಯಿತು.

ಭುಜಂಗ: ಛೀ, ಅದೇನೂ ದೊಡ್ಡದಲ್ಲ. ಭಸಕ್ಕನೆ ಇಪ್ಪತ್ತು ಸಾವಿರ ರೂಪಾಯಿಯೂ ಹೋಯಿತು—ಫಕ್ಕನೆ ಎಪ್ಪತ್ತು ವರ್ಷ ವಯಸ್ಸಾದ ಹಾಗೂ ಆಯಿತು. ನಷ್ಟವೇನೂ ಇಲ್ಲ—ವಿಠ್ಠಲ ಘಟಿಂಗರೇ!

ವಿಠ್ಠಲ ಪಂತ: 'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಶು ಕದಾಚನ' ಅಂತ!

ಭುಜಂಗ: ಅದನ್ನು ಕೃಷ್ಣನು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಹೇಳಿದನು. ನೀವು ಕೃಷ್ಣನಲ್ಲ- ನಾನು ಅರ್ಜುನನಲ್ಲ—ವಿಠ್ಠಲ ಘಟಿಂಗರೇ!

ರಾಮುಪ್ಪಯ್ಯ: ತಾವು ವಿಶ್ರಾಂತಿ.............

ಭುಜಂಗ: ಗಾಬರಿಯಿಲ್ಲ ನರಿಯಪ್ಪನವರೇ! ನಾನು ಸಾಬೂತಾಗಿದ್ದೇನೆ. ಏನೂ!

ರಾಮುಪ್ಪಯ್ಯ: ಪುನಃ ವಿನಂತಿಸುತ್ತೇನೆ—ಸೋಲನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಾಡಮು ಮುನಿಸಿಪಲ್ ಚುನಾವಣೆ ಇದೆ.

ಭುಜಂಗ: (ಫಕ್ಕನೆ ಕೋಪದಿಂದ) Shut up! ಚುನಾವಣೆಯ ಮಾತೆತ್ತಿದರೆ ಜೋಕೆ! ಮನುಷ್ಯ ಶತ್ರು! ಶಾಂತಿಯ ವೈರಿ! ಮುನಿಸಿಪಲ್ ಚುನಾವಣೆಗೆ ಇನ್ನೊಂದು ಕುರಿಯನ್ನು ಹುಡುಕಿ ಹೋಗು! ನಡೆ!

ವಿಠ್ಠಲ ಪಂತ: ಬನ್ನಿ ರಾಮುಪ್ಪಯ್ಯನವರೇ! ನನ್ನನ್ನು ಘಟಿಂಗ ಅಂದರು—ನಿಮ್ಮನ್ನು ನರಿ ಎಂದರು! ಇವರಿ[ಗೆ] ಉಪಕಾರವಿಲ್ಲ. 'ಮೂರ್ಖಸ್ಯ ನಾಸ್ತ್ಯೌಷಧಂ' ಅಂತ!

ರಾಮುಪ್ಪಯ್ಯ: ನಾವು ದಣಿದುದಕ್ಕೆ ನಮಗೆ ಪ್ರತಿಫ[ಲ] ಇದು! ಇಂಥವರಿಗೆ ಓಟು ಸಿಕ್ಕಿದರೆ ಊರಿನ ಗತಿ ಏನಾ[ಗು]ತ್ತಿತ್ತೊ!

ಲಕ್ಷ್ಮಿ: ಸಾಕುಮಾಡಿ ರಾಮುಪ್ಪಯ್ಯನವರೇ! ನಿಮ[ಗೆ] ಈ ತರ ಮಾತಾಡಲು ನಾಚಿಕೆಯಾಗುವುದಿಲ್ಲವೆ? ಓತಿ[ಯ] ಹಾಗೆ ಬಣ್ಣ ಬದಲಾಯಿಸುವ ನಿಮ್ಮಂಥ ವಂಚಕರು ಪುಣ್ಯ[ಕ್ಕೆ] ಊರಿನಲ್ಲಿ ಹೆಚ್ಚಿಲ್ಲ.

ಭುಜಂಗ: ವಂಚಕರು? ಲಕ್ಷ್ಮಿ, ನಿನಗೆ ತಿಳಿದಿ[ಲ್ಲ] ಇವರಿಗೆ ಇಂಗ್ಲಿಷಿನಲ್ಲಿ Germs ಅನ್ನುತ್ತಾರೆ. ರೋಗಾಣು[ಗ]ಗಳು ಅಂತ! ಇವರು ಹೋದಲ್ಲೆಲ್ಲ ಜ್ವರ ಬರುತ್ತದೆ!...... ಹೋಗಿರಿ ಸ್ವಾಮಿ ದಯಮಾಡಿ! ನನ್ನ ಸ್ಥಾನ ಎಸೆಂಬ್ಲಿಯ[ಲ್ಲ] ನಿಮ್ಮ ಸ್ಥಾನ ಈ ಮನೆಯಲ್ಲ! ಇಲ್ಲಿ ನಾನು ಮತ್ತು ಲಕ್ಷ್ಮಿ ಮಾತ್ರ ಇರೋದು! ಅಲ್ಲವೇ ಲಕ್ಷ್ಮಿ?

(ರಾಮುಪ್ಪಯ್ಯ, ವಿಠ್ಠಲ ಪಂತ ಹೋಗುವರು.)

ಭುಜಂಗ: ಲಕ್ಷ್ಮಿ, ಇನ್ನು ಈ ಮನೆ ಮುಂದೆ ನಾ[ವು] ಒಂದು ಬೋರ್ಡು ಹಚ್ಚಬೇಕು.—"ಭುಜಂಗರಾಯರು ಕಾಶಿ[ನ]ರಕ್ಕೆ ಹವಾತಿನ್ನಲು ಹೋಗಿದ್ದಾರೆ—ಆರು ತಿಂಗಳ ನಂತ[ರ] ಬರುತ್ತಾರೆ"—ಎಂದು.

ಲಕ್ಷ್ಮಿ: ಹಾಗೇಕೆ?

ಭುಜಂಗ: ನನಗೆ ಇಲ್ಲೆ ಇದ್ದು ಆರು ತಿಂಗಳು ಯಾ[ವ] ಕಾಟವೂ ಇಲ್ಲದೆ ವಿಶ್ರಾಂತಿ ಪಡೆಯಬೇಕು.

ಲಕ್ಷ್ಮಿ: ಅದಕ್ಕೆ ಬೋರ್ಡು ಬೇಕೆ? ಸಾವಿರ ರಾ[ಮು]ಪ್ಪಯ್ಯನವರನ್ನು ನಾನು ದೂರ ನಿಲ್ಲಿಸುವುದಿಲ್ಲವೆ?

ಭುಜಂಗ: ಸಾವಿರ? ಲಕ್ಷ್ಮಿ, ಅಷ್ಟು ರಾಮುಪ್ಪಯ್ಯನವರು ಇದ್ದರೆ ನಾವು ಊರು ಬಿಡಬೇಕಾದೀತು. ಇದು ಒ[ಬ್ಬ] ರಾಮುಪ್ಪಯ್ಯನವರ ಕಾರಭಾರು!........

ಲಕ್ಷ್ಮಿ: ಇನ್ನು ಒಬ್ಬ ರಾಮುಪ್ಪಯ್ಯನವರಿಗೂ ಇ[ಲ್ಲಿ] ಪ್ರವೇಶವಿಲ್ಲ.

ಭುಜಂಗ: ಲಕ್ಷ್ಮಿ, ನೀನು ಆ ದಿನ ಹೇಳಿದ್ದು ನಿ[ಜ] ನಾನು ನಕ್ಷತ್ರವಾಗಿಯೇ ಇರಲು ಇಚ್ಛಿಸಬೇಕಿತ್ತು. ಆದ[ರೆ] ಸೂರ್ಯನಾಗಲು ಹೋಗಿ ಮೈಸುಟ್ಟುಕೊಂಡೆ.

ಲಕ್ಷ್ಮಿ: ಮತ್ತೆ ಹೆಂಗುಸರಿಗೆ ತಲೆಯಿಲ್ಲವೆನ್ನುವುದ[ು] ಜಾಸ್ತಿ.

ಭುಜಂಗ: ಮೀನಾಕ್ಷಿ ಗೆದ್ದ ಮೇಲೆ, ಇನ್ನು ಹಾಗೆ [ಹೇ]ಳಲು ಬಂದೀತೇ? ಲಕ್ಷ್ಮಿ, ಈ ಚುನಾವಣೆಯಲ್ಲಿ ಹಣ ಮಾ[ತ್ರ]ವಲ್ಲ, ಗುಣವೂ ಹೋಗಿಬಿಡುತ್ತದೆ.

ಲಕ್ಷ್ಮಿ: ಹೇಗಂದಿರಿ?

ಭುಜಂಗ: ನೋಡು. ಸಹಜವಾಗಿ ಮನುಷ್ಯನು ಯಾವಾಗಲೂ ತಾನು ಯಾರು ಎಂದು ವಿವರಿಸಲು ಹೋಗುವುದಿಲ್ಲ. ಚುನಾವಣೆಗೆ ನಿಂತರೆ, ಪ್ರತಿಸ್ಪರ್ಧಿಗಳು ಇದ್ದರೆ, ಅವನಿಗೆ ಕ್ಷೌರಕ್ಕೆ ಕೂತಾಗ ಸೀನು ಬಂದ ಗತಿಯಾಗುತ್ತದೆ. ಮುಖಕ್ಕೆಲ್ಲ ಗಾಜುಮಾಡಿಕೊಂಡು ತಮಾಷೆಯಾಗಿ ಕಾಣುತ್ತಾನೆ. ತಾನು ಯಾರು, ತನ್ನ ಸಾಮರ್ಥ್ಯವೆಷ್ಟು, ತನ್ನನ್ನೆ ಏಕೆ ಚುನಾಯಿಸಬೇಕು, ಎಂದು ಸ್ವಪ್ರಶಂಸೆಗೆ ತೊಡಗುತ್ತಾನೆ. ಅತಿ ವರ್ಣನೆಗೆ ಹೇಸುವುದಿಲ್ಲ. ತನ್ನಿಂದಾಗದ್ದನ್ನೆಲ್ಲ ಜನರಿಗೆ ಭಾಷೆ ಕೊಡುತ್ತಾನೆ.

ಲಕ್ಷ್ಮಿ: ಅನು ಅಪ್ರಾಮಾಣಿಕರ ವಿಷಯವಾಯಿತು. ಪ್ರಾಮಾಣಿಕರು ಭಾಷೆ ಕೊಡಲಾರರು. ಕೊಟ್ಟರೆ, ಅದನ್ನು ಸಾಧಿಸುವರು.

ಭುಜಂಗ: ಲಕ್ಷ್ಮಿ, ಪ್ರಾಮಾಣಿಕರಾರು ಅಪ್ರಾಮಾಣಿಕರಾರು ಎಂದು ಗುರುತುಹಚ್ಚೋದೇ ಕಷ್ಟವಾಗಿದೆ. ಒಂದು ಬುಟ್ಟಿ ಮೀನುಗಳಲ್ಲಿ ಆ ಮೀನು—ಈ ಮೀನು ಎಂದು ಗುರುತಿಸುವುದುಂಟೆ?

ಲಕ್ಷ್ಮಿ: ಒಂದು ಚುನಾವಣೆಯಿಂದ ನೀವು ಇಷ್ಟೊಂದು ಜನದ್ವೇಷಿಯಾಗಿ, ಸಂಸಾರ ವಿದ್ಯಮಾನಗಳಿಗೆ ವಿರಕ್ತರಾಗಿರುವಂತೆ ತೋರುತ್ತದೆ.

ಭುಜಂಗ: ಅಷ್ಟಾಗಿ—ಜೀವದಿಂದುಳಿದುದು ನಿನ್ನ ಭಾಗ್ಯವೆನ್ನು. ಚುನಾವಣೆ ಮುಗಿಯಬೇಕಾದರೆ, ತಾಳೆಮರದಂತಹ ಮನುಷ್ಯನು ಒಂದು ಮೊಳದಷ್ಟು ಚಿಕ್ಕವನಾಗುತ್ತಾನೆ. ಹೀಗಿರುತ್ತ—ಆ ಹೆಂಗುಸು, ಮೀನಾಕ್ಷಮ್ಮ ಹೇಗೆ ನಿಂತಳೋ ಹೇಗೆ ಗೆದ್ದಳೋ—ನನಗೇ ಆಶ್ಚರ್ಯ!

ಲಕ್ಷ್ಮಿ: ಹೆಂಗುಸು ಚುನಾಯಿಸಲ್ಪಟ್ಟರೆ ಒಂದು ವಿಷಯವು ಸ್ಪಷ್ಟ.

ಭುಜಂಗ: ಏನದು?

ಲಕ್ಷ್ಮಿ: ಅವಳು ಅಪ್ರಾಮಾಣಿಕಳಾಗಲಾರಳು. ಅವಳಿಂದ ಉಪಕಾರವಿಲ್ಲದಿದ್ದರೂ ಕನಿಷ್ಠಪಕ್ಷ ಅಪಕಾರವಿಲ್ಲ. ಅವಳು ತಪ್ಪದೆ ಅಧಿವೇಶನಗಳಿಗೆ ಹೋಗುತ್ತಾಳೆ—ಶಾಸನ ಸಭಾ ಮಂದಿರದೊಳಗೆ ನಿದ್ದೆ ಮಾಡುವುದಿಲ್ಲ.

ಭುಜಂಗ: ಹಾಗಾದರೆ, ಇನ್ನು ಚುನಾವಣೆಗೆ ಗಂಡಸರು ಸಿಕ್ಕದೆ ಹೆಂಗುಸರೇ ನಿಲ್ಲಬೇಕೆಂದು ಕಾಯಿದೆ ಮಾಡಬಹುದಲ್ಲ.

ಲಕ್ಷ್ಮಿ: ಒಂದು ವರ್ಷಕ್ಕಾದರೂ ಆ ರೀತಿ—ಹೆಂಗುಸರಿಗೇ ಸ್ಥಾನ ಬಿಟ್ಟುಕೊಡುವಷ್ಟು ಔದಾರ್ಯವು ಪುರುಷರಲ್ಲಿ ಉದಯಿಸಿದರೆ—ಅಲ್ಲೆ ಸತ್ಯಯುಗವು ಆರಂಭವಾಗುತ್ತಿತ್ತು. ಆದರೆ, ಪುರುಷನಿಗೆ ಇನ್ನೂ ಸ್ತ್ರೀಯಲ್ಲಿ ವಿಶ್ವಾಸವಿಲ್ಲ. ತನ್ನ ಸ್ವಾರ್ಥದಿಂದ ಅವನು ಸ್ತ್ರೀಯನ್ನು ಅಶಿಕ್ಷಿತಳನ್ನಾಗಿಯೇ ಇಟ್ಟು, ಸಂದೇಹ ದೃಷ್ಟಿಯಿಂದಲೇ ನೋಡಿ, ನೋಯಿಸುತ್ತ, ಅವಳ ಶಕ್ತಿಯನ್ನು ತಡೆದಿಡುವ ಮೂಲಕ ತನ್ನ ಶಕ್ತಿಯನ್ನೂ ಅಭ್ಯುದಯವನ್ನೂ ತಡೆದಿರಿಸಿರುವನು. ಅವನಲ್ಲಿ ಜ್ಞಾನಪ್ರಕಾಶವುಂಟಾಗಿ, ಶಾಂತಿ-ಸಮೃದ್ಧಿಗಳೊದಗಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ!

(ಮಂಗಲ ಪದ—'ಜನ-ಗಣ-ಮನ')

ಸಂಪೂರ್ಣ

ಪಾಶ್ಚಿಮಾತ್ಯ ದೇಶಗಳಲ್ಲಿ
ಕುರುಡರ ರಕ್ಷಣಾ ವ್ಯವಸ್ಥೆ

(ಲೇಖಕರು: **ಡಾ|| ಎಸ್. ಟಿ. ಪುಟ್ಟಣ್ಣ,** ಬಿ. ಎಸ್. ಸಿ., ಎಂ. ಬಿ. ಬಿ. ಎಸ್., ಡಿ. ಒ. ಎಮ್. ಎಸ್.)

ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಸುಮಾರು ಎಪ್ಪತ್ತಾರು ಸಾವಿರ ಮಂದಿ ಕುರುಡರು ಇರುವರು. ಅಂಧರ ಅಂಕಿ ಅಂಶಗಳನ್ನು ತೋರಿಸುವ ಪ್ರತ್ಯೇಕ ಪಟ್ಟಿಯನ್ನು ೧೯೧೮ರಲ್ಲಿ ಪ್ರಾರಂಭಿಸಿದರು. ೧೯೧೯ನೆಯ ಮಾರ್ಚಿ ೩೧ರಲ್ಲು ಅಂಧರ ಸಂಖ್ಯೆಯು ೨೫,೮೪೦ ಇತ್ತು. ೧೯೩೯ರಲ್ಲಿ ೭೪,೯೪೪ಕ್ಕೆ ಏರಿತು. ೧೯೪೫ರಲ್ಲಿ ೭೫,೭೫೮ಕ್ಕೆ ಏರಿತು. ಆದರೆ ಹಿಂದಿನ ವರ್ಷದ ಸಂಖ್ಯೆಗಿಂತ ೩೮೭ ಮಾತ್ರ ಕಮ್ಮಿ ಇತ್ತು. ಕಳೆದ ಘೋರ ಯುದ್ಧದ ಪರಿಣಾಮವಾಗಿ ದೃಷ್ಟಿಯನ್ನು ಕಳೆದುಕೊಂಡವರ ಸಂಖ್ಯೆಯು ೧,೨೦೦ ಎಂದು ತಿಳಿದುಬಂದಿದೆ. ಇದರಲ್ಲಿ ಹೋರಾಡಿದ ಸೈನಿಕರನ್ನು ಸೇರಿಸಿದೆ. ವಯಸ್ಸಿಗನುಸಾರ ಅಂಧತ್ವದ ಪಟ್ಟಿಯು ೩೧ನೆಯ ಮಾರ್ಚಿ ೧೯೪೫ರಲ್ಲಿದ್ದಂತೆ ಹೀಗಿದೆ:

ವಯಸ್ಸು	0–5	5–16	16–21	21–40	40–70	70ರ ಮೇಲೆ
ಕುರುಡರ ಸಂಖ್ಯೆ	194	1369	1010	7486	33,731	31787

ವಯಸ್ಸು ತಿಳಿಯದಿರುವವರ ಸಂಖ್ಯೆ 181.

ಒಟ್ಟು 75,758 ಮಂದಿ.

ಈ ಪಟ್ಟಿಯಿಂದ ಚಿಕ್ಕ ವಯಸ್ಸಿನಲ್ಲಿ ಕಂಡು ಬರುವ ಕುರುಡರ ಸಂಖ್ಯೆಗಿಂತಲೂ ೭೦ ವರ್ಷದ ಮೇಲೆ ಕಾಣುವ ಕುರುಡರ ಸಂಖ್ಯೆಯೇ ಹೆಚ್ಚು. ೧೯೪೫ರಲ್ಲಿ ಒಂದು ವರ್ಷದ ಒಳಗಿನ ಕುರುಡಾದ ಮಕ್ಕಳ ಸಂಖೆಯು ೯ ಮಾತ್ರವಿತ್ತು. ಇಷ್ಟು ಅಲ್ಪ ಸಂಖ್ಯೆಗೆ ಮಕ್ಕಳ ವಿಷಯದಲ್ಲಿ ಆರೋಗ್ಯ ಶಾಖೆಯು ತೆಗೆದುಕೊಂಡಿರುವ ಮುಂಜಾಗ್ರತೆಯೇ ಕಾರಣ. ನಮ್ಮ ದೇಶದಲ್ಲಿ ಈ ಬಗ್ಗೆ ಸರಿಯಾದ ಅಂಕಿ ಅಂಶಗಳು ಇನ್ನೂ ದೊರಕಿಲ್ಲ. ಮಕ್ಕಳು ಹುಟ್ಟಿದ ಮೂರು ವಾರಗಳಲ್ಲಿ ತಲೆದೋರುವ ಕಣ್ಣಿನ ರೋಗದಿಂದ ದೃಷ್ಟಿ ಹೋಗುವ ಸಂಭವವು ಬಹಳ ಹೆಚ್ಚು. ಇದಕ್ಕೆ ತಾಯಿಯು ಪ್ರಸವ ಸಮಯದಲ್ಲಿ ಜನನೇಂದ್ರಿಯಗಳ ಮೇಹ ಸಂಬಂಧವಾದ ರೋಗವಾಗಲೀ ಅಥವ ಪ್ರಸವ ಸಮಯದಲ್ಲಿ ಹಾಜರಿರುವ ಸೂಲಗಿತ್ತಿ ಅಜಾಗರೂಕತೆಯಿಂದಾಗಲೀ ಈ ಕಣ್ಣಿನ ರೋಗವು ಬರ ದುಂಟು. ಪಾಶ್ಚಿಮಾತ್ಯರಲ್ಲಿ ಗರ್ಭಿಣಿ ಸ್ತ್ರೀಯರ ರಕ್ಷ ಶಾಖೆಯವರು ತೆಗೆದುಕೊಂಡಿರುವ ಮುಂಜಾಗ್ರತೆಯ ಕ್ರ ದಿಂದ ಮಕ್ಕಳಲ್ಲಿ ತೋರಿ ಬರುವ ಈ ರೋಗವನ್ನು ಬ ಮಟ್ಟಿಗೆ ತಡೆಗಟ್ಟಿದ್ದಾರೆ. ಇಂಗ್ಲೆಂಡಿನಲ್ಲಿ ಕಳೆದ ೬ ವ ಗಳಿಂದ ಈ ರೋಗದಿಂದ ಕುರುಡಾದವರು ಒಬ್ಬರೂ ವೆಂದು ವರದಿಯಾಗಿದೆ. ಅಮೇರಿಕಾ ಸಂಯುಕ್ತ ಸಂಸ್ಥಾ ಇಲಿನಾಯಿಸ್ ಸಂಸ್ಥಾನದಲ್ಲಿ ೧೯೪೪ರಿಂದೀಚೆಗೆ ಈ ರೋ ದಿಂದ ಕುರುಡಾದವರು ಯಾರೂ ಇಲ್ಲವೆಂದು ವರದಿಯಾಗಿ ಅಕಸ್ಮಾತ್ತಾಗಿ ಈ ರೋಗವು ಮಕ್ಕಳಲ್ಲಿ ತಲೆದೋರಿದ ಕು ಲೇ ಈಚೆಗೆ ಕಂಡುಹಿಡಿದಿರುವ 'ಪೆನ್ಸಿಸಿಲಿನ್' ಮತ್ತು 'ಸ ಔಷಧಿಗಳಿಂದ ಬಹಳ ಮಟ್ಟಿಗೆ ರೋಗದ ಬೆಳವಣಿಗೆಯ ತಡೆದು ದೃಷ್ಟಿಹೋಗದಂತೆ ಮಕ್ಕಳನ್ನು ರಕ್ಷಿಸಿರುತ್ತಾರೆ. ರಿಂದ ಆ ದೇಶದಲ್ಲಿ ಮಕ್ಕಳಲ್ಲಿ ಕಾಣುವ ಗೊನೇರಿಯಾ ಬಂಧದ ಕಣ್ಣಿನ ರೋಗದಿಂದುಂಟಾಗುವ ಕುರುಡುತನ ಈಚೆಗೆ ಇಲ್ಲವೇ ಇಲ್ಲ. ನಮ್ಮ ದೇಶದಲ್ಲಿ ಅಜ್ಞಾನದ ಮು ಕಿನಲ್ಲಿ ಸಿಲುಕಿರುವ ಸಾಮಾನ್ಯ ಜನರು ಮಕ್ಕಳು ಹುಟ್ಟಿ ಕೆಲವು ದಿನಗಳಲ್ಲೇ ಕಣ್ಣಿನಲ್ಲಿ ಪಿಸುರು ಮತ್ತು ಕೆಂಪು ಕಂಡ ಕೂಡ ಸಾಮಾನ್ಯ ಕಣ್ಣು ನೋವೆಂದು ಎದೆಯ ಹಾಲ ಗಲೀ ಇಲ್ಲವೆ ನಿಂಬೆಯ ಹಣ್ಣಿನ ರಸವನ್ನಾಗಲಿ ಕಣ್ಣಿನೊ ಬಿಟ್ಟು ಅರಿಶಿನದ ಕೊಳಕು ಬಟ್ಟೆಯಿಂದ ಕಣ್ಣುಗಳನ್ನು ಒ ಕಣ್ಕಪ್ಪು ನೇತ್ರಾಂಜನಗಳನ್ನು ಕಣ್ಣಿಗೆ ಹಚ್ಚಿ ಕಣ್ಣು ಪೂ ಹಿಂಗಿಹೋದ ಮೇಲೆ ವೈದ್ಯರಲ್ಲಿಗೆ ಚಿಕಿತ್ಸೆಗೆ ಕರೆದುಕೊಂ ಬಂದಿರುವ ಪ್ರಸಂಗಗಳು ಎಷ್ಟೋ ಉಂಟು. "ಎರ ಕಣ್ಣುಗಳೂ ಹಿಂಗಿಹೋಗಿವೆ; ಇದಕ್ಕೆ ಏನೂ ಮಾಡು ತಿಲ್ಲ." ಎಂದು ಹೇಳಿದ ಕೂಡಲೆ ತಾಯಿಯು ಹಾಗೆಯೆ ಪ್ರ ತಪ್ಪಿರುವ ಸನ್ನಿವೇಶಗಳನ್ನು ನೋಡಿರುತ್ತೇನೆ. ತಾಯಿ ತ ಗಳ ಸೂಲಗಿತ್ತಿಯರ ಅಜಾಗರೂಕತೆ ಮತ್ತು ಆರೋ



ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು, ಕಳೆದ ಅಕ್ಟೋಬರ ತಿಂಗಳಲ್ಲಿ ಧರ್ಮಸ್ಥಳದಲ್ಲಿ ಡಾ। ಎಂ. ಸಿ. ಮೋದಿಯವರನ್ನು ಆಹ್ವಾನಿಸಿ, ನೇತ್ರಚಿಕಿತ್ಸಾ ಶಿಬಿರ ನಡೆಸಿದಾಗ, ಕಣ್ಣುಗಳ ಮೇಲೆ ಶಸ್ತ್ರಕ್ರಿಯೆ ನಡೆಸಲ್ಪಟ್ಟ ರೋಗಿಗಳು.

ಯುವುಗಳ ಸಾವೂನ್ಯ ತಿಳುವಳಿಕೆಯಿಲ್ಲದಿರುವುದು ಈ ಕಾರ
ಗಳಿಂದ ಏನೂ ತಿಳಿಯದ ಕೂಸುಗಳು ಪ್ರಪಂಚಕ್ಕೆ ಬಂದ
ಲವು ದಿನಗಳಲ್ಲಿಯೇ ದೃಷ್ಟಿಯನ್ನು ಕಳೆದುಕೊಂಡು ಕುರುಡ
ಪ್ರಪಂಚಕ್ಕೆ ಸೇರಬೇಕಾಗುವ ಸಂಭವವನ್ನು ನೆನಸಿಕೊಂಡರೆ
ರೂರಿಗೆ ತಾನೆ ವ್ಯಸನವಾಗಲಿಕ್ಕಿಲ್ಲ? ಈ ಅಂಧ ಶಿಶುಗಳನ್ನು
ಪಡೆದ ತಾಯಿ ತಂದೆಗಳ ಮನಸ್ಸು ಕೂಡ ಬದಲಾಯಿಸಿ ಈ
ುರುಡ ಮಗು ಇರುವುದಕ್ಕಿಂತ ಸತ್ತುಹೋಗಿದ್ದರೆ ವಾಸಿಯಾ
ತ್ತು ಎಂದು ಅದರ ಸಾವನ್ನು ಬಯಸುವುದಲ್ಲದೆ, ಆ ಮಗು
ನ ಬೆಳವಣಿಗೆಯನ್ನು ಕೂಡ ನಿರ್ಲಕ್ಷಿಸುವರು. ಒಂದು
ೇಳೆ ಆ ಮಗು ಬದುಕಿ ವಯಸ್ಸಿಗೆ ಬಂದ ಮೇಲೆ ಅದನ್ನು
ುರುಡು ಮಕ್ಕಳ ಶಾಲೆಗೆ ಸೇರಿಸಿ, ಇದು ನಮ್ಮ ಹಣೆಯಬರ
ವೆಂದು ಸುಮ್ಮನಾಗುವುದುಂಟು. ಹುಟ್ಟಿದ ಮೇಲೆ ಕಾಣುವ
ಬಗೆಯ ಅಂಧತ್ವವನ್ನೂ ಸುಲಭವಾಗಿ ತಡೆಯಬಹುದು.
ಬಗ್ಗೆ ಜನಗಳಲ್ಲಿ ಆರೋಗ್ಯ ನಿಯಮಗಳ ತಿಳುವಳಿಕೆಯ
ಗ್ಗೆ ಹೆಚ್ಚು ಪ್ರಚಾರ ಮಾಡುವುದಲ್ಲದೆ, ಗರ್ಭಿಣಿಯರ
ರೋಗ್ಯ ರಕ್ಷಣೆಯ ಕಡೆಗೂ ಪ್ರಸವ ಸಮಯದಲ್ಲಿ ಸರಿ
ಾದ ಸೂಲಗಿತ್ತಿಯ ಸಹಾಯವನ್ನು ಒದಗಿಸುವುದಲ್ಲದೆ,
ಕ್ಕಳು ಹುಟ್ಟಿದ ಕೆಲವು ದಿನಗಳಲ್ಲಿ ಕಾಣುವ ಕಣ್ಣಿನ ರೋ
ದ ವಿಷಯವಾಗಿ ಜನಸಾಮಾನ್ಯರಲ್ಲಿ ತಿಳಿವಳಿಕೆಯನ್ನುಂಟು

ಮಾಡಿ, ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳುವಂತೆ ಮಾಡುವುದು ನೇತ್ರ ಚಿಕಿತ್ಸಕರ ಮತ್ತು ಆರೋಗ್ಯ ಶಾಖೆಯವರ ಪ್ರಥಮ ಕರ್ತವ್ಯವಾಗಿರುತ್ತದೆ.

ನಮ್ಮ ದೇಶದಲ್ಲಿ ೧೯೩೧ ಸೆನ್‌ಸಸ್ ವರದಿಯಂತೆ ೨,೦೦೦,೦೦೦ ಮಂದಿ ಕುರುಡರಿರುವರೆಂದು ಅಂದಾಜಾಗಿರುತ್ತದೆ. ಅಂದರೆ ನಮ್ಮ ದೇಶ ಒಂದರಲ್ಲೆ ಒಟ್ಟು ಪ್ರಪಂಚದ ಕುರುಡ ಜನಸಂಖ್ಯೆಯಲ್ಲಿ ೧/೩ ಭಾಗ ಇದ್ದಂತಾಯಿತು. ನಮ್ಮ ದೇಶದಲ್ಲಿ ಕುರುಡರ ವಸತಿ ಗೃಹಗಳಲ್ಲಿರುವವರ ಸಂಖ್ಯೆಯು ಕೇವಲ ಕೆಲವು ನೂರುಗಳು ಮಾತ್ರವಿರುತ್ತೆ. ಬೊಂಬಾಯಿ ಪ್ರಾಂತ್ಯದಲ್ಲೇ ಕುರುಡಾದವರ ಸಂಖ್ಯೆಯು ೫೦,೦೦೦ ಇದೆಯೆಂದು ಅಂದಾಜಾಗಿರುತ್ತದೆ, ಅದರಿಂದ ಬಹುಮಂದಿ ಕುರುಡರು ಭಿಕ್ಷುಕವೃತ್ತಿಯಿಂದ ಜೀವಿಸುತ್ತಿರುವ ಶೋಚನೀಯ ದೃಶ್ಯವು ಪ್ರತಿದಿನವೂ ಕಾಣುವ ಸಾಮಾನ್ಯ ದೃಶ್ಯವಾಗಿರುತ್ತದೆ. ಇವರ ಭಿಕ್ಷುಕ ವೃತ್ತಿಯ ಉತ್ತೇಜನಕ್ಕೆ ನಮ್ಮಲ್ಲಿ ಮೊದಲಿನಿಂದಲೂ ಬೆಳೆದು ಬಂದಿರುವ ಮಮತೆ, ಕಾರುಣ್ಯ ಜೊತೆಗೆ ಅಂಗಹೀನರಿಗೆ ಸಹಾಯ ಮಾಡುವ ಉದಾರ ಬುದ್ಧಿಯೇ ಮುಖ್ಯಕಾರಣವಾಗಿರುತ್ತದೆ. "ಕುರುಡನಿಗೆ ಭಿಕ್ಷಾತಾಯಿ, ಕಣ್ಣಿಲ್ಲದವನಿಗೆ ನೀನೆ ಶಿವಾ," ಎನ್ನುವ ಕುರುಡರ ಮನಕರಗುವ ಮಾತುಗಳಿಗೆ ಸಹಾನುಭೂತಿ ತೋರಿಸುವವರು ಬಹು

ಮಂದಿ ಇರುವುದರಿಂದ ಇವರ ಜೀವನವು ದೇಹ ದಂಡಿಸದೆ ಸುಲಭವಾಗಿ ನಮ್ಮ ದೇಶದಲ್ಲಿ ಸಾಗುತ್ತಿರುವುದು. ನಮ್ಮಲ್ಲಿ ಹಲವರಿಗೆ ಕುರುಡನಿಗೆ ಸಹಾನುಭೂತಿ ಮತ್ತು ಪಶ್ಚಾತ್ತಾಪಕ್ಕಿಂತ ಮುಖ್ಯವಾಗಿ ತಿಳುವಳಿಕೆ ಮತ್ತು ವಿದ್ಯಾಭ್ಯಾಸವು ಅವಶ್ಯಕವೆಂಬ ಅಂಶವು ತಿಳಿದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕುರುಡರಿಗೆ ಸರಿಯಾದ ತಿಳುವಳಿಕೆಯನ್ನೂ ಮತ್ತು ಸಮಾಜಕ್ಕೆ ಸರಿಹೊಂದುವ ವಿದ್ಯೆಯನ್ನೂ ದೊರಕಿಸಿ ಕೊಟ್ಟು ಅವನನ್ನು ಭಿಕ್ಷುಕ ವೃತ್ತಿಯಿಂದ ಮೇಲಕ್ಕೆತ್ತಿ ಅವನ ಬಾಳನ್ನು ಗೌರವಯುತವಾದ ದಾರಿಯಲ್ಲಿ ನಡೆಸುವಂತೆ ಮಾಡುವುದಲ್ಲದೆ ಸಮಾಜಕ್ಕೆ ಉಪಯುಕ್ತವಾದ ವ್ಯಕ್ತಿಯನ್ನಾಗಿ ಮಾಡುವುದಕ್ಕಿಂತ ಹೆಚ್ಚಿನದಾದ ಉಪಕಾರವಿನ್ನೇನಿದೆ?

ನಮ್ಮ ದೇಶದಲ್ಲಿ ಬಹಳ ಹಿಂದೆ ಅಂದರೆ ೧೮೮೭ರಲ್ಲಿ ಮೊದಲನೆಯ ಕುರುಡರ ಶಾಲೆಯನ್ನು ಬ್ರಿಟಿಷ್ ಮಿಷನರಿಗೆ ಸೇರಿದ ಮಿಸ್ ಅನಿಷಾರ್ಪ್ (Miss Annie Sharp) ಎಂಬಾಕೆಯು ಪ್ರಾರಂಭಿಸಿದಳು. ೧೯೦೦ರಲ್ಲಿ ಅಮೆರಿಕನ್ ಮಿಷನರಿಯವರ ಸಹಾಯದಿಂದ ಮುಂಬಾಯಿ ದಾದರ್‌ನಲ್ಲಿ ಕುರುಡರ ಶಾಲೆಯೊಂದು ಸ್ಥಾಪಿಸಲ್ಪಟ್ಟಿತು. ನಮ್ಮ ದೇಶದಲ್ಲೆಲ್ಲಾ ಕುರುಡರ ಶಾಲೆಗಳು ಸುಮಾರು ೩೦ ಮಾತ್ರ ಇವೆ. ಇವುಗಳಲ್ಲಿ ಸುಮಾರು ೫೦,೦೦೦ ಹುಡುಗ ಹುಡುಗಿಯರು ಮಾತ್ರ ಇರುತ್ತಾರೆ. ನಮ್ಮ ದೇಶದಲ್ಲಿರುವ ಒಟ್ಟು ಕುರುಡರ ಸಂಖ್ಯೆ ೨೦,೦೦,೦೦೦. ಇದರಿಂದ ಎಷ್ಟು ಮಂದಿ ಕುರುಡರು ವಸತಿ ಗೃಹಗಳ ಅನುಕೂಲವಿಲ್ಲದೆ ಹೊರಗೆ ಭಿಕ್ಷಾಟನೆಯಿಂದ ಜೀವಿಸುತ್ತಿರುವರೆಂಬ ಅಂಶವು ಎದ್ದು ಕಾಣುತ್ತದೆ. ಈ ತರಹದ ಕುರುಡರ ಅನಾದರಣೆಗೆ ಸಾಕಷ್ಟು ಧನಸಹಾಯವಿಲ್ಲದಿರುವುದು, ಉದಾರ ಶ್ರೀಮಂತರ ನೆರವಿಲ್ಲದಿರುವುದು, ಮತ್ತು ಸರಕಾರದ ಅಶ್ರದ್ಧೆಯು ಕಾರಣವೆಂದು ಹೇಳಬೇಕಾಗಿಲ್ಲ. ಅಲ್ಲದೆ ಈ ಕುರುಡರ ಶಾಲೆಗಳನ್ನು ನಡೆಸುತ್ತಿರುವವರೂ ಕೂಡ ಸಾಕಷ್ಟು ತೃಪ್ತಿಕರವಾಗಿ ನಡೆಸಿಕೊಂಡು ಬರುತ್ತಿಲ್ಲವೆಂದು ತೋರಿಬರುತ್ತದೆ. ಏಕೆಂದರೆ ಈ ಶಾಲೆಗಳಲ್ಲಿ ಕುರುಡರ ಶಿಕ್ಷಕ ವರ್ಗವು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿಲ್ಲ ಅಲ್ಲದೆ ಸುಶಿಕ್ಷಿತರಾದ ಶಿಕ್ಷಕರ ಸಂಖ್ಯೆಯಂತು ತೀರಾ ಕಡಿಮೆ. ಈ ಕುರುಡ ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಅವರಿಗಾಗಿ ಅಖಿಲ ಭಾರತಕ್ಕೆ ಒಪ್ಪುವಂತಹ ಒಂದು ಪತ್ರಿಕೆಯೂ ಸಹ ಇರುವುದಿಲ್ಲ ಅವರ ಮನೋಭೀಷ್ಟವನ್ನು ಕುಂದುಕೊರತೆಗಳನ್ನು, ಮನಸ್ಸಿನೊಳಗಿನ ಆಂದೋಲನವನ್ನು ಹೊರಸೂಸಲು ಅವಕಾಶವಂತೂ ಏನೂ ಇಲ್ಲ. ಉಚಿತ ವಾಚನಾಲಯಗಳು, ಮಾತಾಡುವ ಯಂತ್ರಗಳ ಉಪಯೋಗವಂತೂ ಇವರಿಗೆ ದೊರಕುವಂತಿಲ್ಲ. ಹಿಂದೂ ಸಂಪ್ರದಾಯಕ್ಕೆ ಕಟ್ಟುಬಿದ್ದಿರುವ ಮತ್ತು ದಯಾವಂತರಿಂದ ಭಿಕ್ಷೆ ದೊರಕುವ ಭರವಸೆ ಇರುವುದರಿಂದಲೂ ಈ ಕುರುಡರು ಕಷ್ಟಪಟ್ಟು ತಮ್ಮ

ಜೀವನವನ್ನು ಗೌರವ ರೀತಿಯಲ್ಲಿ ಹೊರೆಯಲಿಚ್ಛಿಸು
ಅಲ್ಲದೆ ಬುದ್ಧಿಶಕ್ತಿಯನ್ನು ಉಪಯೋಗಿಸಲು ಶ್ರಮಪ
ಸಲು ಇಷ್ಟಪಡುವುದಿಲ್ಲ. ವಿದ್ಯೆಯ ಮಾಧುರ್ಯವಂ
ರಿಗೆ ತಿಳಿಯುವಂತೆಯೇ ಇಲ್ಲ. ಹೀಗೆಯೇ ಹೊರಗೂ
ವ್ಯಾಪಿಸಿರುವ ಗಾಢಾಂಧಕಾರದಲ್ಲಿ ತಮ್ಮ ಶ್ರಮರಹಿತ
ವನ್ನು ನೂಕುತ್ತ ಕಟ್ಟಕಡೆಗೆ ವಿಧವಶರಾಗುವರು.
ಳಲ್ಲಾಗಲೀ ಹಳ್ಳಿಗಳಲ್ಲಾಗಲೀ ಈ ಕುರುಡರ ಉ
ಸರಕಾರವಾಗಲೀ ಸಂಸ್ಥೆಗಳಾಗಲೀ ಹೆಚ್ಚು ಸಹಾಯ
ಡಿಲ್ಲ. ಹೆಚ್ಚೇಕೆ? ನಮ್ಮ ದೇಶದಲ್ಲಿರುವ ಕುರುಡರ ಅ
ಎಣಿಕೆಯೇ ಇನ್ನೂ ನಡೆದಿಲ್ಲ. ಕುರುಡತನದ ಕಾರಣ
ಸ್ಪಷ್ಟವಾಗಿ ಕಂಡುಹಿಡಿದಿಲ್ಲ. ಅವುಗಳ ನಿವಾರಣೋ
ವನ್ನು ಯೋಚಿಸಿ ಸೂಕ್ತಮಾರ್ಗವನ್ನು ಅನುಸರಿಸಿಯೇ
ಹಳ್ಳಿಗಳಲ್ಲಿ ಅಂಧಾಲಯ ಕೇಂದ್ರಗಳಂತೂ (Rural
centres for the blind) ಇಲ್ಲವೇ ಇಲ್ಲ. ಕ
ಗಾಗಿ ಕೈಗಾರಿಕಾ ಶಾಲೆಗಳು ತೀರಾ ಕಡಿಮೆ. ಅದರಿಂದ
ಡನು ತನ್ನ ಕೈಚಳಕವನ್ನು, ಬುದ್ಧಿಶಕ್ತಿಯನ್ನು ಕೈ
ಯನ್ನು ತಾನು ಸಮಾಜಕ್ಕೆ ಭಾರವಾಗುವುದರ ಬದಲು
ಪ್ರಯೋಜನಕಾರಿಯಾಗಬಹುದೆಂಬುದನ್ನು ತೋರಿಸ
ಕಾಶವೇ ಇಲ್ಲದಂತಾಗಿರುವುದು. ತಾನು ಮತ್ತು ತ
ಸ್ವಶಕ್ತಿಯಿಂದ ಮತ್ತು ಅಭ್ಯಾಸದಿಂದ ಒಂದು ಹೊಸ ಸ
ವನ್ನೇ ಸೃಷ್ಟಿಸಬಲ್ಲರೆಂಬ ಅರಿವೇ ಅವರಿಗೆ ತಿಳಿಯದಂತೆ
ಅವರನ್ನು ಸಮಾಜಬಾಹಿರರನ್ನಾಗಿ ಮಾಡಿ, ಕಗ್ಗತ್ತ
ಇಟ್ಟಿರುವ ಸುಧಾರಕರು ನಾಗರೀಕರೂ ಎಂದು ಹೇಳಿಕೊ
ನಾವು ನಮ್ಮನ್ನೇ ಹಳಿದುಕೊಳ್ಳಬೇಕಾಗಿದೆ.

ಸ್ವತಂತ್ರಿಗಳಾಗಿರುವ ನಾವು ಸರ್ವಸಮಾನತ್ವ
ಮಧುರ ಭಾಷಣಗಳನ್ನೂ ಭರವಸೆಗಳನ್ನೂ ಆಗಿಂದಾಗ್ಯೆ
ವುದರಲ್ಲೇ ಇರುತ್ತೇವೆ. ನಮ್ಮ ಅಕ್ಕಪಕ್ಕದಲ್ಲಿರುವ,
ಪ್ರಯಾಣಗಳಲ್ಲಿ, ಬಸ್ಸುನಿಲ್ದಾಣಗಳಲ್ಲಿ, ಜಾತ್ರೆಗಳಲ್ಲಿ,
ಳಲ್ಲಿ ನಮ್ಮ ಕಣ್ಣಿಗೆ ಬೀಳುವ ಕುರುಡ ತಮ್ಮಂದಿರ
ಮೂರು ಕಾಸನ್ನು ಬಿಸಾಟು ನಮ್ಮ ಕೆಲಸ ಮುಗಿಯಿ
ದೊಡ್ಡ ಧರ್ಮದ ಕಾರ್ಯವನ್ನು ಮಾಡಿದೆವೆಂದು ತೃಪ್ತಿ
ಕೊಳ್ಳುತ್ತೇವೆ. ನಮ್ಮ ಕಾರ್ಯಗಳೆಲ್ಲವೂ ಬರಿಯ ಭಾಷ
ಲ್ಲಿಯೂ ಭರವಸೆಗಳಲ್ಲಿಯೂ ಪರ್ಯವಸಾಧನವಾಗಿರುತ್ತ
ಹೊರತು ಕೆಲಸದಲ್ಲಿಲ್ಲ. ನಮ್ಮ ಹಿಂದಿನ ಚರಿತ್ರೆ
ನೋಡಿದರೆ ಹಿಂದಿನ ದೊರೆಗಳು ಅಂಗಹೀನರಿಗೂ
ಕುರುಡರಿಗೂ ಸಾಕಷ್ಟು ರಕ್ಷಣೆಯನ್ನೂ ವಸತಿಗೃಹಗ
ಕೊಟ್ಟಿದ್ದರೆಂದು ತಿಳಿದುಬರುತ್ತದೆ. ಅಂದಿನ ಗತವೈಭ
ಇಂದಿನ ನೈಜಸ್ಥಿತಿಗೂ ಎಷ್ಟು ವ್ಯತ್ಯಾಸ!

ಇನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಕುರುಡರ ರಕ್ಷ
ವ್ಯವಸ್ಥೆಯನ್ನೂ ಅವರ ಕುರುಡತವನ್ನು ನಿವಾರಿಸಲು

ಯ್ನ್ನ ತಿಸುತ್ತಿರುವರೆಂಬುದನ್ನೂ ತಿಳಿಯೋಣ. ಅಮೇರಿಕಾದ ಯುಕ್ತ ಸಂಸ್ಥಾನಗಳಲ್ಲಿ ಕುರುಡರಿಗಾಗಿಯೂ ಮತ್ತು ಕುರು ತನವನ್ನು ತಡೆಗಟ್ಟುವುದಕ್ಕಾಗಿಯೂ ಪ್ರತ್ಯೇಕವಾದ ಸಂ ಯೊಂದನ್ನು ಸ್ಥಾಪಿಸಿರುತ್ತಾರೆ. ಈ ಸಂಸ್ಥೆಯ ಹೆಸರು tional Society for Prevention of Blindness ಎಂದು ಸಂಸ್ಥೆಯ ಧ್ಯೇಯಗಳಲ್ಲಿ ಮುಖ್ಯವಾದುವು ಯಾವುವೆಂದರೆ:-

೧) ಸಾಮಾನ್ಯ ಜನರಿಗೆ ದೃಷ್ಟಿಯ ವಿಷಯದಲ್ಲೂ, ತ್ತು ನೇತ್ರ ರೋಗಗಳಲ್ಲೂ ಪರಿಚಯ ಮಾಡಿಸುವುದು, ದೃಷ್ಟಿ ಣೆಯ ವಿಚಾರದಲ್ಲೂ ಕಣ್ಣುಗಳ ರಕ್ಷಣೆಯಲ್ಲೂ ಜನರನ್ನು ತ್ಸರಗೊಳಿಸುವುದು, ಅವರಿಗಾಗಿ ಸುಲಭವಾಗಿ ತಿಳಿಯುವಂ ಪ್ರತ್ಯೇಕ ಪುಸ್ತಕಗಳನ್ನು ಪ್ರಕಟಿಸುವುದು:—

೨) ಹುಡುಗ ಹುಡುಗಿಯರಿಗೆ ಕಣ್ಣುಗಳ ಆರೋಗ್ಯ ಯದಲ್ಲಿ ತಿಳಿಯಹೇಳುವುದು ಮತ್ತು ಬಾಲಕರ ದೃಷ್ಟಿ ಣಾಕೇಂದ್ರಗಳನ್ನು ನಡೆಸುವುದು.

೩) ವಯಸ್ಕರ ದೃಷ್ಟಿರಕ್ಷಣಾ ಕ್ಲಿನಿಕ್‌ಗಳನ್ನು ನಡೆ ವುದು.

೪) ಟೆಲಿವಿಷನ್, ರೇಡಿಯೋ ಮೂಲಕ ಕಣ್ಣಿನ ಸಂ ಧವಾಗಿ ಪ್ರಸಾರ ಭಾಷಣಗಳನ್ನು ಅನುಗೊಳಿಸುವುದು, ೀಡೆಗಳ ಚಿತ್ರಗಳ ಮೂಲಕ ಸಾಮಾನ್ಯ ಜನರಿಗೆ ತಿಳಿಯ ಳುವುದು.

೫) ಕಾರ್ಖಾನೆಗಳಲ್ಲಿ ದೃಷ್ಟಿರಕ್ಷಣೆಯ ಅವಶ್ಯಕತೆ ನ್ನು ಒತ್ತಿಹೇಳುವಂತಹ ವರ್ಣರಂಜಿತ ಚಿತ್ರಗಳನ್ನು ಕಟಿಸುವುದು.

೬) ಕುರುಡರ ರಕ್ಷಣೆಯ ವ್ಯವಸ್ಥೆ ಮತ್ತು ಕುರುಡ ದ ಕಾರಣಗಳನ್ನು ಕಂಡು ಹಿಡಿದು ಅವನ್ನು ನಿವಾರಿಸಲು ರ್ಗಗಳನ್ನು ಕಂಡುಹಿಡಿಯುವುದು.

ಈ ಬಗೆಯ ಸಂಸ್ಥೆಯೊಂದನ್ನು ಕಲ್ಕತ್ತೆಯಲ್ಲಿ ೧೯೩೦ ಸ್ಥಾಪಿಸಿರುತ್ತಾರೆ. (New York Association for the nd ಗೆ ಸೇರಿದ Mr. and Mrs. R. G. Mather ರವರು ರುಡತನವನ್ನು ತಡೆಗಟ್ಟುವ ವಿಚಾರವನ್ನು ಪ್ರಸಾರ ಮಾ ನಮ್ಮ ದೇಶಕ್ಕೆ ಬಂದಾಗ ೫೦೦ ಡಾಲರುಗಳನ್ನು ಈ ಹದ ಸಂಸ್ಥೆಯೊಂದನ್ನು ಸ್ಥಾಪಿಸಲು ಮೂಲಧನವಾಗಿ ಟ್ಟರು. ಅಂದಿನಿಂದ ಅಲ್ಲಿಯ ಶ್ರೀಮಂತರ ಮತ್ತು ಾರಿಗಳ ದ್ರವ್ಯಸಹಾಯದಿಂದಲೂ ಮತ್ತು ಸರಕಾರದ ರ್ಣ ಸಹಕಾರದಿಂದಲೂ ಈ ಸಂಸ್ಥೆಯು ಬಹಳ ಮಟ್ಟಿಗೆ ದು ಕುರುಡತನವನ್ನು ತಡೆಗಟ್ಟುವ ವಿಷಯ ಒಂದರ ೇ ಅಲ್ಲ; ಕುರುಡತನವನ್ನು ಹೋಗಲಾಡಿಸುವ ಮತ್ತು ುಡರಿಗೆ ಶಸ್ತ್ರಚಿಕಿತ್ಸೆಯನ್ನು ದೊರಕಿಸುವಂತಹ ಚಲಿಸುವ ಣ್ಣ ಆಸ್ಪತ್ರೆಗಳ ನಿರ್ಮಾಣಕ್ಕೂ ಕಾರಣವಾಗಿರುತ್ತದೆ. ಬಂಗಾಳದಲ್ಲಿ ೫ ಚಲಿಸುವ ಕಣ್ಣು ಆಸ್ಪತ್ರೆಗಳಿವೆ. ಇವುಗಳಿಗಾಗಿ ಬಂಗಾಳ ಸರ್ಕಾರವು ವರ್ಷಕ್ಕೆ ೩೪,೧೫೫ ರೂಪಾಯಿಗಳ ಗ್ರಾಂಟನ್ನು ಕೊಡುತ್ತಿರುತ್ತದೆ. ಈ ಚಲಿಸುವ ಆಸ್ಪತ್ರೆಗಳು ಹಳ್ಳಿಗಳಿಗೂ ಹೋಗಿ ಅಲ್ಲಿಯ ಜನರಿಗೆ ನೇತ್ರ ಚಿಕಿತ್ಸಕರ ಸಲಹೆಯು ಮತ್ತು ನೆರವು ದೊರಕುವಂತೆ ಮಾಡಿರುತ್ತವೆ. ಅಲ್ಲದೆ ಕುರುಡರ ಎಣಿಕೆಯ ತನಿಕೆಯನ್ನು ಮತ್ತು ಕುರುಡತನದ ಕಾರಣಗಳನ್ನು ಕಂಡುಹಿಡಿಯುವ ಕಾರ್ಯವನ್ನು ಕೈಕೊಂಡಿವೆ. ಆಗಲೇ ಬಂಗಾಳದಲ್ಲಿ ಕುರುಡರ ಎಣಿಕೆಯ ಬಗ್ಗೆ ಕೆಲವು ಅಂಕಿ ಅಂಶಗಳು ಸಿದ್ಧವಾಗಿವೆ. ಬೊಂಬಾಯಿ ಪ್ರಾಂತ್ಯದಲ್ಲಿಯೂ ಕೂಡ ಕಳೆದ ಎರಡು ವರ್ಷಗಳಿಂದ ಎರಡು ಚಲಿಸುವ ಕಣ್ಣು ಆಸ್ಪತ್ರೆಗಳು ಇರುತ್ತವೆ. ನಮ್ಮ ಸಂಸ್ಥಾನದಲ್ಲಿಯೂ ಕೂಡ ಈ ಬಗೆಯ ಸಂಸ್ಥೆಯೊಂದರ ನಿರ್ಮಾಣವು ಅತ್ಯಗತ್ಯವೆಂದು ಹೇಳಬೇಕಾಗಿಲ್ಲ. ಇದಕ್ಕಾಗಿ ಉದಾರ ಶ್ರೀಮಂತರೂ ಘನ ಸರಕಾರವೂ ಮುಂದೆ ಬಂದು ನೆರವು ನೀಡುವುದು ಅಗತ್ಯ. ಅಲ್ಲದೆ ಹಳ್ಳಿಗರಿಗೂ ಕೂಡ ನೇತ್ರ ವೈದ್ಯರ ಸಲಹೆ, ನೆರವು ದೊರಕುವಂತೆ ಮಾಡುವುದು ಸರಕಾರದ ಆದ್ಯ ಕರ್ತವ್ಯವಾಗಿರುತ್ತದೆ.

ಅಂಧತನದ ಮಿತಿ:—ದೃಷ್ಟಿಯು ಸಂಪೂರ್ಣ ಇಲ್ಲದಿರುವ ಮಕ್ಕಳು, ವಿದ್ಯಾಭ್ಯಾಸವನ್ನು ಪೂರೈಸಲು ಸಾಕಷ್ಟು ದೃಷ್ಟಿ ಇಲ್ಲದಿರುವ ಮಕ್ಕಳು ಪಾಶ್ಚಿಮಾತ್ಯ ದೇಶಗಳಲ್ಲಿ ಕುರುಡು ಮಕ್ಕಳ ಗುಂಪಿಗೆ ಸೇರುತ್ತಾರೆ. ಈ ಮಕ್ಕಳಿಗೆ ವಿದ್ಯಾಭ್ಯಾಸವನ್ನು ದೃಷ್ಟಿಯ ಸಹಾಯವಿಲ್ಲದ ಇತರ ಮಾರ್ಗಗಳಿಂದ ಬೋಧಿಸುವ ಏರ್ಪಾಡನ್ನು ಮಾಡಿರುತ್ತಾರೆ. ಈ ತರಹದ ಕುರುಡು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಿದ್ಯಾ ಇಲಾಖೆಯು ಹೊತ್ತಿರುತ್ತದೆ. ದೃಷ್ಟಿಯ ಅಳತೆಯ ಪ್ರಕಾರ ೬/೮೦ (ಟೆಸ್ಟು ಚಾರ್ಟಿನ ಮೊದಲನೆಯ ಅಕ್ಷರವನ್ನು ೨೦ ಅಡಿಗಳ ದೂರದಿಂದ ಗುರುತಿಸುವ ಶಕ್ತಿ) ಅಥವಾ ಇದಕ್ಕಿಂತ ಕಡಿಮೆ ಇರುವ ಮಕ್ಕಳು ಕುರುಡು ಮಕ್ಕಳಂತೆ ಪರಿಗಣಿಸಲ್ಪಡುವರು. ವಯಸ್ಕರು ೩/೬೦ (ಟೆಸ್ಟು ಚಾರ್ಟಿನ ಮೊದಲನೆಯ ಅಕ್ಷರವನ್ನು ೧೦ ಅಡಿಗಳ ದೂರದಿಂದ ಗುರುತಿಸುವ ಶಕ್ತಿ)ಕ್ಕಿಂತ ಹೆಚ್ಚಿಲ್ಲದೆ, ಇಲ್ಲವೇ ೩/೬೦ರಿಂದ ೬/೬೦ರ ಒಳಗಿರುವ ವಯಸ್ಕರೂ ಕೂಡ ಅಂಧರಂತೆ ಪರಿಗಣಿಸಲ್ಪಡುವರು.

ಪಾಶ್ಚಿಮಾತ್ಯ ದೇಶಗಳಲ್ಲಿ ದೃಷ್ಟಿಹೀನರು ಬೇರೆ ಇನ್ನಾರೂ ಅನುಭವಿಸಲಾಗದಂತಹ ವಿಶೇಷ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾರೆ. ಅವರ ಜೀವನದ ಮತ್ತು ವಿದ್ಯಾಭ್ಯಾಸದ ಸುಗಮವಾದ ಏರ್ಪಾಟಿಗೆ ಅಲ್ಲಿಯ ಸರಕಾರವು ವಿಶೇಷ ಗಮನಕೊಟ್ಟು ಕುರುಡು ಪ್ರಪಂಚದ ಜೀವಿಗಳಿಗೆ ದೃಷ್ಟಿ ಹೀನತೆಯ ನೋವು ಕಾಣದಂತೆ ಸುಖಕರವಾದ ಸಂತೋಷದಾಯಕವಾದ ಬೇರೆ ವಾತಾವರಣವನ್ನು ನಿರ್ಮಿಸಿ ಜೀವನವು ಸಾರವುಳ್ಳದ್ದು, ಇವರು ಸಹ ಪ್ರಪಂಚಕ್ಕೆ ಬೇಕಾದವರು ಎಂಬ

ಆಶಾಭಾವನೆಯನ್ನು ಕಲ್ಪಿಸಿರುವುದು ನಿಜವಾಗಿಯೂ ಸ್ತೋತ್ರಾರ್ಹವಾದುದು. ಅಲ್ಲಿಯ ದೃಷ್ಟಿಹೀನನು ದಾರಿ ತೋರಿಸುವ ತನ್ನ ನಾಯಿಯ ಲೈಸನ್ಸ್‌ಗಾಗಿ ದುಡ್ಡು ಕೊಡಬೇಕಾಗಿಲ್ಲ. ಲೈಸನ್ಸಿಲ್ಲದೆ ರೇಡಿಯೋ ಸೆಟ್ಟು ಇಟ್ಟುಕೊಳ್ಳಬಹುದು. ತಾನು ಕೈಯಿಂದ ಓದಲು ತರಿಸುವ ಪುಸ್ತಕಗಳಿಗೆ (Embossed books) ಅಂಚೆಯ ದರವೂ ಕೂಡ ಬಹಳ ಅಲ್ಪ; ಅಲ್ಲದೆ ಓಟು ಕೊಡುವ ಸಮಯದಲ್ಲಿ ತನ್ನ ಸಂಗಡ ಒಬ್ಬ ಸ್ನೇಹಿತನನ್ನು ವೆಚ್ಚವಿಲ್ಲದೆ ಕೊಂಡುಹೋಗಬಹುದು. ೧೮೯೩ರಲ್ಲಿ ಆ ದೇಶದವರು ೫—೧೪ ವರುಷದೊಳಗಿರುವ ಕುರುಡ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಬೇರೆಯ ಒಂದು ಶಾಸನವನ್ನು ಮಾಡಿದರು ಅಲ್ಲದೆ ೧೯೨೦ ಮತ್ತು ೧೯೩೮ರಲ್ಲಿ ದೃಷ್ಟಿಹೀನರ ರಕ್ಷಣೆಯ ಬಗ್ಗೆ ಒಂದು ವಿಶೇಷ ಶಾಸನವನ್ನು ಮಾಡಿ ವಯಸ್ಸಾದವರು ನಿವೃತ್ತಿ ವೇತನವನ್ನು (Old-age pension) ಹೊಂದುವಂತೆ ಮಾಡಿರುತ್ತಾರೆ.

ದೃಷ್ಟಿಹೀನರ ರಕ್ಷಣೆಗಾಗಿ ವಿಶೇಷ ಸೌಲಭ್ಯಗಳನ್ನು ಪಡೆದಿರುವ ವಸತಿಗೃಹಗಳು, ಮಕ್ಕಳಿಗೆ ನರ್ಸರಿ ಶಾಲೆಗಳು, ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಮತ್ತು ಕೈಗಾರಿಕಾ ಶಾಲೆಗಳು, ವಯಸ್ಕರಿಗೆ ಕಸಬನ್ನು ಕಲಿಸುವ ಶಾಲೆಗಳು ಪ್ರತ್ಯೇಕವಾಗಿರುವುದಲ್ಲದೆ ವಯಸ್ಸಾದವರಿಗೆ ಅನುಕೂಲವಾದ ರಕ್ಷಣಾ ವಸತಿ ಗೃಹಗಳನ್ನೂ ಕೂಡ ಕಲ್ಪಿಸಿರುತ್ತಾರೆ. ಇವುಗ[ಳ] [ಮೇ]ಲ್ವಿಚಾರಣೆಗಾಗಿ ದೇಶದಾದ್ಯಂತವೂ ಪ್ರತ್ಯೇಕವಾದ ಕೌ[ನ್ಸಿಲ್] ಕೌನ್ಸಿಲ್‌ಗಳು ಕೂಡ ಇರುತ್ತವೆ. ಅಂಧರ ರಕ್ಷ[ಣೆ]... ಆ ದೇಶವು ಬಹಳ ಹಣವನ್ನು ವೆಚ್ಚಮಾಡುತ್ತಿರುತ್ತದೆ. ... ತಹ ಸುವ್ಯವಸ್ಥೆಯ ಏರ್ಪಾಟು ಇನ್ನಾವ ದೇಶದಲ್ಲಿ ಇಷ್ಟು ಪೂರ್ಣವಾಗಿ ಕಂಡುಬಂದಿಲ್ಲವೆಂದರೆ ಅತಿಶಯೋ[ಕ್ತಿ]ಯಾಗಲಾರದು.

೧೮ನೆಯ ಶತಮಾನದ ಕೊನೆಗೆ ಬ್ರಿಟಿಷ್ ದ್ವೀಪ[ದಲ್ಲಿ] ದೃಷ್ಟಿಹೀನರ ನಾಲ್ಕು ಶಾಲೆಗಳು ಇದ್ದವು. ಇದರಿಂದ ಆ ದ[ೇಶದ]ವರು ಬಹಳ ಹಿಂದಿನಿಂದಲೂ ಕುರುಡರ ರಕ್ಷಣೆಯ ... ಡಿಗೆ ಪ್ರಾರಂಭಿಸಿರುವರೆಂದು ಹೇಳಬಹುದು. ಮೊದಮೊ[ದಲು] ಈ ರಕ್ಷಣೆಯ ವ್ಯವಸ್ಥೆಯನ್ನು ಸಾರ್ವಜನಿಕರು ವಹಿ[ಸಿದ್ದರು] ಕ್ರಮೇಣವಾಗಿ ಸರ್ಕಾರವು ಈ ರಕ್ಷಣೆಯ ಭಾರವನ್ನು ... ಕೊಂಡಿತು. ೧೯೪೩ರ ಅಂಧಹೀನರ ಶಿಕ್ಷಕರ ವರದಿ... ಗಮನಾರ್ಹವಾದುದು:—"ಅಂಧಹೀನ ಮಕ್ಕಳ ವಿದ್ಯಾ[ಭ್ಯಾ]ಸಕ್ಕೆ ವಿಶಾಲವಾದ ವಸತಿಗೃಹಗಳು ಅವಶ್ಯಕ. ಸರಿ... ಅಂಧಹೀನರ ವಿದ್ಯಾಭ್ಯಾಸದಲ್ಲಿ ಹೆಚ್ಚು ಅನುಭವವನ್ನು ... ದಿರುವ ಹೆಚ್ಚು ಮಂದಿ ಶಿಕ್ಷಕರಿರಬೇಕು. ಅಲ್ಲದೆ ಕ... ವಿದ್ಯಾರ್ಥಿಗಳನ್ನು ಅವರ ಬುದ್ಧಿವಂತಿಕೆಯ ರೀತಿ ವಿಂಗ...



ನೇತ್ರಪರೀಕ್ಷೆಗಾಗಿ ಹೋಗುತ್ತಿರುವ ಜನರು, ಶ್ರೀಕ್ಷೇತ್ರ ಧರ್ಮಸ್ಥಳ.

★



ಡಾ। ಎಂ. ಸಿ ಮೋದಿಯವರು, ಶ್ರೀ। ಹೆಗ್ಗಡೆಯವರಿಗೆ ಕಣ್ಣುಗಳ ಶಸ್ತ್ರಕ್ರಿಯೆಯ ಕುರಿತು ವಿವರಿಸುತ್ತಿರುವರು. (ಶ್ರೀ ಕ್ಷೇತ್ರ ಧರ್ಮಸ್ಥಳ.)

ವುದು ಬಹಳ ಅವಶ್ಯ. ಈ ಮಕ್ಕಳ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಸರಿಯಾದ ರೀತಿಯಲ್ಲಿ ಬೆಳೆಸಲು ಎಲ್ಲಾ ವಿಧವಾದ ಅನುಕೂಲವಿರಬೇಕು. ಈ ವಸತಿಗೃಹಗಳು ಪಟ್ಟಣದ ಮತ್ತು ಹಳ್ಳಿಗಳ ಅನುಕೂಲತೆಯನ್ನು ಪಡೆಯುವಂತೆ ಸರಿಯಾದ ಸ್ಥಳದಲ್ಲಿರಬೇಕು. ಇವರದೇ ಬೇರೆ ಪ್ರಪಂಚವೆನ್ನುವ ಭಾವನೆಯು ತಲೆದೋರದಂತೆ ಕಾದಿಡುವುದಲ್ಲದೆ, ನಾಟಕ ಮಂದಿರಗಳು, ಸಂಗೀತ ಶಾಲೆಗಳು ಮ್ಯೂಸಿಯಂಗಳು, ಇತರ ಜ್ಞಾನಮಂದಿರಗಳು ವಿದ್ಯಾರ್ಥಿಗಳಿಗೆ ನಿಲುಕುವಂತಿರಬೇಕು. ಈ ವಿದ್ಯಾರ್ಥಿಗಳ ನೆಂಟರಿಷ್ಟರು ಮತ್ತು ತಂದೆತಾಯಿಗಳು ಆಗಾಗ್ಗೆ ಬಂದು ವಿಚಾರಿಸಿಕೊಂಡು ಹೋಗುವಷ್ಟು ಹತ್ತಿರದಲ್ಲಿ ಈ ವಸತಿಗೃಹಗಳಿರಬೇಕು." ಮೇಲೆ ಹೇಳಿದ ಸೌಲಭ್ಯವುಳ್ಳ ಆದರ್ಶ ವಸತಿಗೃಹಗಳನ್ನು ಆದಷ್ಟು ಬೇಗ ಆ ದೇಶದವರು ನಿರ್ಮಿಸುವ ಯೋಚನೆಯಲ್ಲಿರುತ್ತಾರೆ.

ಶಿಕ್ಷಣ ರೀತಿ:–ಶಿಕ್ಷಣದ ವಾತಾವರಣವು ಬಹಳ ಸಂತೋಷದಾಯಕವಾಗಿ, ಆಶ್ಚರ್ಯವಾಗಿರುವುದು. ಶಿಕ್ಷಣದ ಜೊತೆಗೆ ಬಯಲಾಟಗಳುಂಟು. ಓಟ, ನೆಗತ, ಈಜು, ದೋಣಿ ನಡೆಸುವುದು, ಕ್ರಿಕೆಟ್ಟು ಮತ್ತು ಚೆಂಡಾಟ ಮೊದಲಾದ ಆಟಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಚೆಂಡಾಟಕ್ಕೆ ಇವರಿಗೆ ಬೇರೆಯಾದ ಓಡುವಾಗ ಶಬ್ದ ಬರುವಂತಹ ಒಂದು ಬೆತ್ತದ ಚೆಂಡನ್ನು ನಿರ್ಮಿಸಿರುತ್ತಾರೆ. ಇದನ್ನು ಆಡುವ ಮೈದಾನವನ್ನು, ಶಬ್ದಬರಲು ಅನುಕೂಲವಾಗಿರುವಂತೆ ಕಾಂಕ್ರೀಟಿನಿಂದ ಮಾಡಿರುತ್ತಾರೆ. ಚರ್ಚಿಯ ಮಂದಿರಗಳು ಮತ್ತು ನಾಟಕ ಶಾಲೆಗಳು, ಸಂಗೀತ ಶಾಲೆಗಳು ಮತ್ತು ಚೆಸ್, ಇಸ್ಪೇಟು ಮುಂತಾದ ಸಣ್ಣ ಸಣ್ಣ ಆಟಗಳನ್ನಾಡುವ ಮಂದಿರಗಳ ಅನುಕೂಲತೆಯೂ ಕೂಡ ಈ ವಿದ್ಯಾರ್ಥಿಗಳಿವೆ. ಸಂಗೀತಕಲೆ ವೃದ್ಧಿಗೂ ನಾಟ್ಯಕ್ಕೂ ಮತ್ತು ವ್ಯಾಯಾಮಕ್ಕೂ ಹೆಚ್ಚಿನ ಗಮನವನ್ನು ಶಿಕ್ಷಕರು ಕೊಟ್ಟಿರುತ್ತಾರೆ. ಕುರುಡು ಮಕ್ಕಳಲ್ಲಿ ಸಂಗೀತ ಕಲೆಯಲ್ಲಿ ಆಸಕ್ತಿ ಸ್ವಲ್ಪ ಕಂಡರೆ ಅದನ್ನೇ ಬೆಳೆಯಿಸಲು ಎಲ್ಲಾ ವಿಧವಾದ ಅನುಕೂಲತೆಗಳನ್ನು ಶಿಕ್ಷಕರು ಒದಗಿಸಿರುತ್ತಾರೆ. ಅಂಧಮಕ್ಕಳ ಜೀವನದಲ್ಲಿ ನೃತ್ಯವಿದ್ಯೆಯು ಹೆಚ್ಚು ಆನಂದವನ್ನುಂಟುಮಾಡುವುದು. ಅನೇಕ ಅಂಧರ ಶಾಲೆಗಳವರು ಹಳ್ಳಿಯ ಕುಣಿತಗಳಲ್ಲಿ (Folk Dance) ಬಹಳ ಮಟ್ಟಿಗೆ ತಯಾರಾಗಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಹೆಚ್ಚಿನ ವ್ಯಾಯಾಮವು ಅವಶ್ಯ. ನೋಡಿ ಕಲಿತುಕೊಳ್ಳಬಹುದಾದ ಅನೇಕ ವಿಷಯಗಳನ್ನು ಈ ವಿದ್ಯಾರ್ಥಿಗಳಿಗೆ ಬೇರೆ ರೀತಿಯಲ್ಲಿ ಹೇಳಿಕೊಡಬೇಕು. ಕೆಲವರಲ್ಲಿರುವ ಅಂಗವಿಕಾರವನ್ನು ಸರಿಪಡಿಸಲು ಸರಿಯಾದ ವ್ಯಾಯಾಮವು ಅವಶ್ಯ. ಈ ಅಂಗವಿಕಾರವನ್ನು ಮೊದಲಿನಿಂದಲೇ ವ್ಯಾಯಾಮದಿಂದ ತಡೆಯಲು ಸಾಧ್ಯ.

ಒಂದೊಂದು ತರಗತಿಯಲ್ಲಿ ಹತ್ತರಿಂದ ಹದಿನೈದು ಮಂದಿ ವಿದ್ಯಾರ್ಥಿಗಳು ಮಾತ್ರ ಇರುತ್ತಾರೆ. ಇದರಿಂದ ಶಿಕ್ಷಕನು ಪ್ರತಿಯೊಬ್ಬನ ಮಾನಸಿಕ ಬೆಳವಣಿಗೆಯನ್ನು ತಿಳಿಯಲು ಬಹಳ ಮಟ್ಟಿಗೆ ಅನುಕೂಲವಾಗುವುದಲ್ಲದೆ, ಆ ವಿದ್ಯಾರ್ಥಿಯ ಅಭಿರುಚಿಯು ಯಾವ ಕಲೆಯಲ್ಲಿರುವುದೆಂಬುದನ್ನು ತಿಳಿಯಲು ಸಾಧ್ಯ. ಓದಿ ಬರೆಯಲು ಬ್ರೈಯಿಲ್ (Braille)ರವರ ಚುಕ್ಕಿಗಳನ್ನು ಈ ವಿದ್ಯಾರ್ಥಿಗಳು ಉಪಯೋಗಿಸುತ್ತಾರೆ. ೧೮೨೯ರಲ್ಲಿ ಫ್ರೆಂಚ್ ದೇಶದ 'ಬ್ರೈಯಿಲ್' ಮಹಾಶಯನು ಈ ಅಂಧ ವಿದ್ಯಾರ್ಥಿಗಳಿಗಾಗಿ ಈ ಬಗೆಯ ಕ್ರಮವನ್ನು ಕಂಡುಹಿಡಿದು ಇವರ ವಿದ್ಯಾಭ್ಯಾಸಕ್ಕಾಗಿ ಬಹಳ ಮಟ್ಟಿಗೆ ಸಹಾಯಮಾಡಿರುತ್ತಾನೆ.

ಔದ್ಯೋಗಿಕ ಶಿಕ್ಷಣ:—ಹುಡುಗರಿಗೆ ಸಂಗೀತ, ಪಿಯಾನೋ ಟ್ಯೂನಿಂಗ್, ಶೀಘ್ರ ಲಿಪಿ, ಟೈಪ್‌ರೈಟಿಂಗ್ ದೂರವಾಣಿ ಮುಂತಾದ ವಿದ್ಯೆಗಳಲ್ಲಿ ತರಬೇತು ಮಾಡುವುದಲ್ಲದೆ ಬೆತ್ತದ ಕೆಲಸ, ಚಾಪೆ, ಬ್ರಷ್ಷು, ಹಾಸಿಗೆ, ಚರ್ಮದ ಕೆಲಸ ಮುಂತಾದ ಕೈಗೆಲಸಗಳನ್ನು ಕಲಿಸಿಕೊಡುತ್ತಾರೆ. ಹೆಚ್ಚಿನ ವಿದ್ಯಾಭ್ಯಾಸದಲ್ಲಿ ಅಭಿರುಚಿಯುಳ್ಳ ವಿದ್ಯಾರ್ಥಿಗಳಿಗೆ ಯೂನಿವರ್‌ಸಿಟಿಗೂ ಮತ್ತು "ಲಾ" ಮತ್ತು ಶಿಕ್ಷಕರ ಕೆಲಸಕ್ಕೂ ಕೂಡ ಹೋಗಲು ಅನುಕೂಲ ಉಂಟು. ಒಬ್ಬಾಕೆ ಲಂಡನ್ ಯೂನಿವರ್‌ಸಿಟಿಯ "ಲಾ" ಪರೀಕ್ಷೆಯನ್ನು ಸಹ ಮಾಡಿರುತ್ತಾಳೆ. ಹುಡುಗಿಯರಿಗೆ ಶೀಘ್ರಲಿಪಿ, ಟೈಪ್‌ರೈಟಿಂಗ್, ಸಂಗೀತ, ಹೊಲಿಯುವುದು ಮುಂತಾದ ಕಸಬುಗಳನ್ನು ಕಲಿಸುವರು. ಈ ನಾಲ್ಕು ವರ್ಷದ ಔದ್ಯೋಗಿಕ ಶಿಕ್ಷಣದ ಜೊತೆಗೆ ಸಾಮಾನ್ಯ ಶಿಕ್ಷಣವನ್ನು ಕೂಡ ಕೊಡುವರು.

ಈ ಹುಡುಗ ಹುಡುಗಿಯರು ಒಟ್ಟಿಗೆ ೨೦ ವರ್ಷದ ವರೆಗೆ ಈ ವಸತಿಗೃಹಗಳಲ್ಲಿ ಶಿಕ್ಷಣ ಪಡೆಯುವರು. ವಯಸ್ಸಿಗೆ ಬಂದ ಮೇಲೆ ಸರಿಯಾದ ಜೀವನವನ್ನು ನಡೆಸಲು ಕ್ರಮವಾದ ಶಿಕ್ಷಣವನ್ನು ಅಲ್ಲಿ ಪಡೆಯುವರು. ಪಂಚೇಂದ್ರಿಯಗಳ ಮಧ್ಯೆ ಜೀವನವನ್ನು ನಡಿಸಬೇಕಾದ ಅವಶ್ಯಕತೆಯಿರುವುದರಿಂದ ಈ ವಸತಿಗೃಹಗಳಲ್ಲಿರುವಾಗಲೇ ಹುಡುಗ ಹುಡುಗಿಯರಿಗೆ ಸಮಾಜದಲ್ಲಿ ಮಿಳಿತವಾಗುವ ಸನ್ನಿವೇಶಗಳನ್ನು ಆಗಾಗ್ಗೆ ಒದಗಿಸಿ ಕೊಡುವುದು ಬಹಳ ಅವಶ್ಯ. ಇವರನ್ನು ಪ್ರಪಂಚದಿಂದ ದೂರಮಾಡಿ ಬೇರೆ ರೀತಿಯಲ್ಲಿ ಬೆಳೆಯುವಂತೆ ಮಾಡುವುದು ಅವಿವೇಕ ಅಲ್ಲದೆ ಹಾನಿಕರ. ಇದನ್ನು ನಮ್ಮವರು ತಿಳಿದು ಈ ಅಂಧರ ರಕ್ಷಣೆಯ ಎಲ್ಲ ವ್ಯವಸ್ಥೆಗಳನ್ನು ಆದಷ್ಟು ಬೇಗ ಮಾಡುವುದು ಒಳ್ಳೆಯದು.

ನಾನು ಮೂರ್‌ಫೀಲ್ಡ್ ನೇತ್ರ ಚಿಕಿತ್ಸಾಲಯದಲ್ಲಿ ಸರ್ಜನ್‌ರಾದ ಡಾ| ಕಿಂಗ್‌ರವರ ಕ್ಲಿನಿಕಲ್ ಅಸಿಸ್ಟೆಂಟಾಗಿ ಕೆಲಸಮಾಡುತ್ತಿದ್ದಾಗ ಒಂದು ದಿನ ಅಲ್ಲಿ ನೋಡಿದ ಒಂದು ಪ್ರಸಂಗವನ್ನು ಇಲ್ಲಿ ಉದಾಹರಿಸುವೆನು. ಆ ದಿನ ಒಬ್ಬ ೫೦ ವರ್ಷದ ರೋಗಿಯನ್ನು ಆತನ ಹೆಂಡತಿಯು ಕೈಹಿಡಿ ಕೊಂಡು ಕ್ಲಿನಿಕ್ಕಿಗೆ ಕರೆದುಕೊಂಡು ಬಂದಳು. ಡಾ| ಕಿಂ ರವರು ರೋಗಿಯನ್ನು ಕಂಡು "ನೀನು ಹೇಗಿರುವೆ" ಎಂ ಪ್ರಶ್ನಿಸಿದರು. ರೋಗಿಗೆ ಒಂದು ಕಣ್ಣಿನ ದೃಷ್ಟಿಯು ಪೂ ಹೋಗಿತ್ತು. ಇನ್ನೊಂದು ಕಣ್ಣಿನಲ್ಲಿ ದೃಷ್ಟಿಯು ಅಲ್ಪ ಸ್ವ ಉಳಿದಿತ್ತು. ಈ ಸ್ಥಿತಿಯಲ್ಲಿದ್ದರೂ ಕೂಡ ರೋಗಿಯು ಮು ಳ್ನಗೆಯನ್ನು ತೋರಿಸುತ್ತಾ ನಾನು "ಬಹಳ ಚೆನ್ನಾಗಿ ಇದ್ದೇನೆ, ಬಹಳ ವಂದನೆಗಳು" ಎಂದು ಉತ್ತರವಿತ್ತ ಈ ರೋಗಿಯ ಮುಖವನ್ನು ಮತ್ತು ಉತ್ತರವನ್ನು ನೋ ನನಗೆ ಆಶ್ಚರ್ಯವಾಯಿತು. ಇಂತಹ ಸ್ಥಿತಿಯಲ್ಲಿಯ ಕೂಡ ಈ ಅಂಧನು ತನ್ನ ಅಂಧತ್ವವನ್ನು ಮರೆತು ನಗ ನಿಂದ ಉತ್ತರ ಕೊಡುವಂತೆ ಮಾಡಿದುದು ಏನೆಂದು ತ ಸಿದೆ. ಇದರ ಗೂಢವಿಷ್ಟೆ, ಅಲ್ಲಿಯ ವೈದ್ಯರು ದೃಷ್ಟಿಹೀ ಜೀವನದಲ್ಲಿ ಆಶಾಭಾವನೆಯನ್ನುಂಟುಮಾಡಿ ದೃಷ್ಟಿ ಇಲ್ಲ ದ್ದರೂ ಜೀವನವು ಸುಖಮಯವೆನ್ನುವ ವಾತಾವರಣವನ್ನು ಟುಮಾಡಿರುವುದು ನಿಜವಾಗಿಯೂ ಸ್ತುತ್ಯಾರ್ಹವಾದು ನಮ್ಮ ದೇಶದ ವೈದ್ಯರು ಈ ದೃಷ್ಟಿಹೀನರಲ್ಲಿ ನಿರಾಶೆಯನ್ ತುಂಬುವುದರ ಬದಲು ಅಲ್ಲಿಯವರಂತೆ ಆಶಾಭಾವನೆ ವಾತಾವರಣವನ್ನು ಕಲ್ಪಿಸಲು ಯತ್ನಿಸಬಾರದೇಕೆ?

೧೬–೨೦ ವರ್ಷದ ವರೆಗೆ ದೃಷ್ಟಿಹೀನರ ರಕ್ಷಣೆ ಭಾರವನ್ನು ವಿದ್ಯಾಮಂತ್ರಿಗಳು ಹೊತ್ತಿರುತ್ತಾರೆ. ದೃ ಹೀನ ವಯಸ್ಕರ ರಕ್ಷಣೆಯು ಕಾರ್ಮಿಕ ಮಂತ್ರಿಗಳ ಹೊ ದೃಷ್ಟಿಹೀನ ವಯಸ್ಕರಿಗೆ ಅವರ ಜೀವನವನ್ನು ನಡೆಸ ಅನುಕೂಲವಾಗುವಂತೆ ಕೈಗಾರಿಕಾ ಶಾಲೆಗಳಲ್ಲಿ ಶಿಕ್ಷಣವನ ಕೊಡಲು ಸರ್ವಸಿದ್ಧತೆಗಳನ್ನು ಮಾಡಿರುತ್ತಾರೆ. ಕಳೆ ಯುದ್ಧದಲ್ಲಿ ಬಹಳ ಮಂದಿ ದೃಷ್ಟಿಹೀನರು ಯುದ್ಧ ಸಂಬಂ ವಾದ ಕೈಗಾರಿಕೆಗಳಲ್ಲೂ ಮತ್ತು ಫ್ಯಾಕ್ಟರಿಗಳಲ್ಲಿಯೂ ಕೆಲ ಮಾಡಿ ಯುದ್ಧದ ಗೆಲುವಿಗೆ ಕಾರಣರಾಗಿರುತ್ತಾರೆ. ಅಲ್ಲ ತಮಗೂ ಕೂಡ ದೇಶದ ಕರೆಯಲ್ಲಿ ಭಾಗವಹಿಸುವ ಭಾಗ್ಯ ದೊರೆಯಿತಲ್ಲಾ ಎಂಬ ಹರ್ಷವನ್ನು ವ್ಯಕ್ತಪಡಿಸಿರುತ್ತಾ ದೃಷ್ಟಹೀನರ ಕರ್ತವ್ಯತತ್ಪರತೆಯ ವಿಚಾರದಲ್ಲಿ ಒಬ್ಬ ಫ್ಯಾ ರಿಯ ವ್ಯವಸ್ಥಾಪಕನು ಹೇಳಿರುವುದು ಗಮನಾರ್ಹವಾಗಿ ಈತನು ದೃಷ್ಟಿಹೀನರು ಮಾಡಬಹುದಾದ ಕೆಲಸವನ್ನು ದೃ ಯುಳ್ಳ ಹುಡುಗಿಯರ ಕೆಲಸಕ್ಕೆ ಹೋಲಿಸಿ, ದೃಷ್ಟಿಹೀನ ಅದೇ ಕಾಲದಲ್ಲಿ ದೃಷ್ಟಿಯುಳ್ಳ ಹುಡುಗಿಯರಿಗಿಂತಲೂ ಹೆಚ್ಚಿ ಕೆಲಸವನ್ನು ಮಾಡುವುದಲ್ಲದೆ, ದೃಷ್ಟಿಹೀನರಲ್ಲಿ ಹೊತ್ತ ಮೀರಿ, ಬರುವುದು ಮತ್ತು ಕೆಲಸಕ್ಕೆ ಗೈರುಹಾಜರಾಗುವ ದೋ ಷಗಳೇ ಇಲ್ಲವೆಂದು ಹೇಳಿರುತ್ತಾನೆ. ಅಲ್ಲದೆ ಇವರ ಕೆಲಸ ಮೇಲಿನ ಉಸ್ತುವಾರಿಯೂ ಕೂಡ ಹೆಚ್ಚು ಬೇಕಿಲ್ಲವೆಂದು ಈ ನ ಅಭಿಪ್ರಾಯ. ದೃಷ್ಟಿಹೀನನು ತನ್ನ ಕೆಲಸದಲ್ಲಿ ದೃಷ್ಟಿಯ

ವೆಂಬ–ಆಧುನಿಕ ಕವಿತಾ ಕೇಸರಿಭೂಷಣಾಚಾರ್ಯರ ಕನ್ನಡ ವ್ಯಾಕರಣಾಂಬುಧಿ ಗ್ರಂಥದಲ್ಲಿನ ಈ ಸೂತ್ರವನ್ನೇ ಒಪ್ಪಿಕೊಳ್ಳಲಾಗಿದೆ.

ಟೊಪ್ಪಿಗಳು ಒಂದಲ್ಲ, ಎರಡಲ್ಲ, ಹಲವಾರು. ಬಿಳಿ ಟೊಪ್ಪಿ, ಕಪ್ಪು ಟೊಪ್ಪಿ, ರಟ್ಟಿನ ಟೊಪ್ಪಿ, ಉದ್ದದ ಟೊಪ್ಪಿ, ಉರುಟು ಟೊಪ್ಪಿ ಇತ್ಯಾದಿಯಾಗಿ ಅವುಗಳ ಲೆಕ್ಕಮಾಡಬಹುದಾದರೂ ಅವುಗಳೊಳಗೂ ಹಲವಾರು ಅವಾಂತರ ಭೇದಗಳಿರುವುದರಿಂದ ಟೊಪ್ಪಿಗಳ ಗಣನೆಯು ಕಾರ್ಯ ಅಷ್ಟು ಸುಲಭಸಾಧ್ಯವಲ್ಲವೆಂದೇ ಪರಿಗಣಿಸಿಕೊಳ್ಳಬೇಕಾಗುತ್ತಿದೆ. ಟೊಪ್ಪಿಯು ಮನುಷ್ಯನ ವೈಶಿಷ್ಟ್ಯವನ್ನು ಸೂಚಿಸುವುದು. ಅದು ಮಾನರಕ್ಷಣೆಗೂ ಅಗತ್ಯವೆಂದು ಕೆಲವರು ಹೇಳುತ್ತಾರೆ. ತಲೆಯಲ್ಲಿ ಟೊಪ್ಪಿ, ಮುಂಡಾಸು, ಹೇಟು ಇವುಗಳ ಶೋಭೆ ಪ್ರತ್ಯೇಕ ಪ್ರತ್ಯೇಕವಾಗಿ ಕಂಡುಬರುವುದಾದರೂ ಟೊಪ್ಪಿಯ ಶೋಭೆಯನ್ನು ಕುಂದಿಸುವುದಕ್ಕೆ ಉಳಿದವುಗಳಿಂದ ಅಸಾಧ್ಯವಾಗಿದೆ. ಎಲ್ಲೆಡೆಯೂ ಟೊಪ್ಪಿಯೇ ತಲೆಯೆತ್ತಿ ನಿಂತಿದೆ.

ಬಿಳಿ ಟೊಪ್ಪಿಯಲ್ಲಿ ಖಾದಿ ಟೊಪ್ಪಿ, ಸಾದಾ ಟೊಪ್ಪಿ ಎಂದು ಎರಡು ವಿಭಾಗವನ್ನು ಮಾಡುವರು. ಒಂದಾನೊಂದು ಕಾಲದಲ್ಲಿ (ಸ್ವಾತಂತ್ರ್ಯ ಸಿಕ್ಕುವ ಮೊದಲು) ಬಿಳಿ ಟೊಪ್ಪಿ ಧರಿಸಿದರೆ ಲಾಠಿಯ ಹೊಡೆತ ಸಿಕ್ಕುತ್ತಿದ್ದಿತಾದರೆ ಇಂದು ಅದರ ಬದಲಾಗಿ ಮಾತಿನ ಹೊಡೆತವೇ ಸಿಕ್ಕುತ್ತಿದೆ. ಬಿಳಿ ಟೊಪ್ಪಿಯಿಟ್ಟ ಕೆಲವರನ್ನು ಕಳ್ಳಸಂತೆಯ ಕದೀಮರೆಂದು ಸಂಬೋಧಿಸುವುದು ಈಗ ರೂಢಿಯಲ್ಲಿದೆ. ಟೊಪ್ಪಿ ಇಡದೆ ಕಳ್ಳಸಂತೆಯನ್ನು ಮಾಡಿದರೆ ಅವರು ಸುಭಗರೆಂದೂ ಟೊಪ್ಪಿಯಿಟ್ಟುಕೊಂಡು ಕಳ್ಳಸಂತೆ ಮಾಡಿದರೆ ಕಳ್ಳರೆಂದೂ ಜನರ ತಿಳುವಳಿಕೆ ಉಂಟಾಗಿದೆ. ಆದ್ದರಿಂದ, ಟೊಪ್ಪಿ ಇಡಬೇಡಿ. ಬೈದೇ ಉತ್ತಮರೆಂಬುದನ್ನು ಜಗತ್ತಿಗೆ ತೋರಿಸಿಕೊಳ್ಳಿರಿ ಎಂದು ಹೇಳಬೇಕಾಗುತ್ತದೆ.

ಹಿಂದೂದೇಶದ ವ್ಯಕ್ತಿಗಳಲ್ಲಿ ಟೊಪ್ಪಿ ಇಟ್ಟುಕೊಂಡವರನ್ನು ಬಿಟ್ಟರೆ ಉಳಿವವರು ಯಾವ ಪರರಾಷ್ಟ್ರದಿಂದ ಬಂದ ನಾಗರಿಕರೋ ಎಂದು ತಿಳಿಯುವುದಿಲ್ಲ ಎಂದು ಟೊಪ್ಪಿಯು ತನ್ನ ಅನುಭವವನ್ನು ಹೇಳಿಕೊಳ್ಳುತ್ತಿದೆ. ವೇಷ ಭೂಷಣಕ್ಕೆ ಮರ್ಯಾದೆ ಕೊಡುತ್ತಿದ್ದ ಜನತೆ ವೇಷಭೂಷಣವನ್ನು ಕಂಡು ಕೇಗಹೊರಟರೆ ಅದರಲ್ಲಿ ಏನೂ ವಿಶೇಷವಿಲ್ಲ, ಇದೂ ಒಂದು ರೀತಿಯ...........ವರ್ತನೆ ಎಂದು ಟೊಪ್ಪಿಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದೆ.

ಕಪ್ಪು, ಬಿಳಿ, ಟೊಪ್ಪಿಗಳೇ ಪ್ರಸಿದ್ಧವಾದ ಟೊಪ್ಪಿಗಳು. ಕಪ್ಪು ಟೊಪ್ಪಿ ಕತ್ತಲೆಯ ಬಣ್ಣವನ್ನು ತಾಳಿರುವುದರಿಂದ ಕತ್ತಲೆಯ ಪ್ರತೀಕವೆಂದು ಹೇಳಬಹುದೆಂದೂ ಟೀಕೆಮಾಡುವವರಿರುವರು.

ಟೊಪ್ಪಿಯು ಜನರ ಕಣ್ಣನ್ನು ಕುಕ್ಕುತ್ತಿದೆ, ಎಂದರೆ ಇದು ಅದ್ಭುತವಾದ ಸಂಗತಿಯೇ ಸರಿ. ಟೊಪ್ಪಿಯ ಬಗ್ಗೆ ಬರುವ ಟೀಕೆಟಿಪ್ಪಣಿಗಳ ಬಗ್ಗೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ ಎಂದು ಟೊಪ್ಪಿಯೇ ಹೇಳುತ್ತಿದೆ.

ಟೊಪ್ಪಿಗಳಲ್ಲಿ ಪೋಲೀಸ್ ಟೊಪ್ಪಿ, ಹಿಟ್ಲರ್ ಟೊಪ್ಪಿ ಎಂದು ಇನ್ನೆರಡು ಭೇದಗಳಿವೆ. ಇವೆರಡು ಅಧಿಕಾರದ ಟೊಪ್ಪಿಗಳು. ಅವರು ಎಂದೆಂದು ಏನೇನು ಮಾಡಲಿ ಅವೆಲ್ಲವೂ ಸತ್ಯಸಮ್ಮತವಾದವುಗಳೆಂದೇ ಹೇಳಬೇಕು. ಈ ಟೊಪ್ಪಿಯ ಅಧಿಕಾರದ ಬಗ್ಗೆ ಹೆಮ್ಮೆಪಡುವವರೂ ಇದ್ದಾರೆ; ಭಾರವಾಯಿತೆಂದು ವ್ಯಥೆಪಡುವವರೂ ಇದ್ದಾರೆ. ಟೊಪ್ಪಿಯ ಅನುಭವ ಮನುಷ್ಯನಿಗೆ ಈ ರೀತಿ ಹಲವು ವಿಧದಿಂದ ಉಂಟಾಗಬಹುದು.

ಟೊಪ್ಪಿಯೆಂಬುದು ರಕ್ಷಣೆಗಾಗಿ ಇರುವುದು; ತಲೆಯಲ್ಲಿ ಧರಿಸುವ ಯಾವ ಒಂದು ಅಲಂಕಾರಪ್ರಾಯವಾದ ಉಡಿಗೆಯಿದೆಯೋ ಅದು ಮಾತ್ರ ಟೊಪ್ಪಿಯಲ್ಲ; ಎಂಬುದನ್ನು ಮೂರು ಲೋಕಗಳಿಗೂ ಕವಿಯೆನ್ನಿಸಿದ ತ್ರಿರಾಷ್ಟ್ರ ಪೂಜ್ಯ (O–ಇಲ್ಲ ಇದ್ದರೂ ಇರಬಹುದೇ?) ಕವಿಯ ಅಪೌಲ್ಯ ಕಾವ್ಯಪಙ್ಕ್ತಿಯಿಂದ ತಿಳಿಯಬಹುದಾಗಿದೆ.

ತಲೆಗೆ ಟೊಪ್ಪಿ ಎನ್‌ಬೇಡಿ
ತಲೆಯಲಿ ಟೊಪ್ಪಿ ಇದೆ ನೋಡಿ
ಪೆನ್ನಿಗೆ ಟೊಪ್ಪಿ ಇಹುದಂತೆ
ಅದನೆ 'ಟೋಪು' ಎನ್ನುವರಂತೆ.
ಬೆರಳಿಗೆ ಟೊಪ್ಪಿ ಇಹುದಂತೆ
ಅದುವೆ ಚರ್ಮದ ಕವರಂತೆ.
ಹಂಡೆಗೆ ಟೊಪ್ಪಿ ಇಹುದಂತೆ
ಸರಾಯಿ ಹಂಡೆಯ ಮೇಲಂತೆ
ಎರಕದ ಟೊಪ್ಪಿ ಇಹುದಂತೆ,
ಟೊಪ್ಪಿಯ ಸಂತೆ ನೋಡ್ಬೇಕಂತೆ
ಈ ಲೊಕ್ವೆಲ್ಲಾ ಟೊಪ್ಪಿಯ ಸಂತೆ.

ಈ ರೀತಿ ಟೊಪ್ಪಿಯ ಪ್ರಭಾವವಂತೂ ಹೇಳಿತೀರದು. ಸಾಮಾನ್ಯ ಮನುಷ್ಯನು ಟೊಪ್ಪಿಯನ್ನು ಹೊತ್ತಿರಲಾರ ಎಂದು ಇದರಿಂದ ಊಹಿಸಬಹುದು. ಸರ್ವತ್ರ ಟೊಪ್ಪಿಯೇ ಕಾಣುವ ಈ ಕಾವ್ಯವನ್ನು ಟೊಪ್ಪಿಯುಗ–ವಿಜ್ಞಾನ ಯುಗವಲ್ಲ–ಎಂದು ತೀರ್ಮಾನಿಸಬಹುದೋ ಏನೋ! ಅದು ಹೇಗಿದ್ದರೂ ಟೊಪ್ಪಿಯ ಯುಗ ಜಗತ್ಕಲ್ಯಾಣ ಕಾಂಕ್ಷಿಯಾಗಲಿ ಎಂದು ನಾವು ಹೇಳೋಣ. ಆಗದೇ?

ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ನಂಬೋಣ. ಈ ದಾರಿಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಪಾಲನ್ನು ತಿಳಿದು ನಡೆಯುವುದು ಒಳ್ಳಿತು.

ನಮ್ಮ ದೇಶದಲ್ಲಿ ದೃಷ್ಟಿಹೀನರ ರಕ್ಷಣೆಯ ಬಗ್ಗೆ ಅನುಸರಿಸಬೇಕಾದ ಮಾರ್ಗದಲ್ಲಿ ಕೆಲವು ಸಲಹೆಗಳು:—

೧) ದೃಷ್ಟಿಹೀನರ ಬಗ್ಗೆ ಎಲ್ಲಾ ವಯಸ್ಸಿನವರಲ್ಲಿಯೂ ಸರಿಯಾದ ಅಂಕೆ ಅಂಶಗಳನ್ನು ಗ್ರಹಿಸುವುದು.

೨) ದೃಷ್ಟಿಹೀನರನ್ನು ರಿಜಿಸ್ಟರ್ ಮಾಡಿಸುವುದು.

೩) ದೃಷ್ಟಿಹೀನರಿಗೆ ಆದರ್ಶ ರೀತಿಯಲ್ಲಿ ಎಲ್ಲಾ ಸೌಲಭ್ಯಗಳನ್ನೊಳಗೊಂಡ ರಕ್ಷಣಾಗೃಹಗಳನ್ನು ನಿರ್ಮಿಸುವುದು. ಇವರ ವಿದ್ಯಾಭ್ಯಾಸಕ್ಕೆ ಸರಿಯಾದ ಶಿಕ್ಷಣವನ್ನು ಪಡೆದಿರುವ ಹೆಚ್ಚು ಮಂದಿ ಶಿಕ್ಷಕರ ನೆರವನ್ನು ನೀಡುವುದು.

೪) ಮನೆಗಳಲ್ಲಿರುವ ವಯಸ್ಕರಾದ ದೃಷ್ಟಿಹೀನರ ಸೌಕರ್ಯಕ್ಕಾಗಿ ಅವರ ಯೋಗಕ್ಷೇಮಗಳನ್ನು ವಿಚಾರಿಸಲು ಸರಿಯಾಗಿ ತರಬೇತಿಯಿತ್ತಾಗಿರುವ ಗೃಹ ಶಿಕ್ಷಕರನ್ನು ನ
ಸುವುದು.

೫) ದೃಷ್ಟಿಹೀನರಿಗೆ ಸರಿಯಾದ ಕಸಬನ್ನು ಕ
ವುದು.

೬) ದೃಷ್ಟಿಹೀನರನ್ನು ಪ್ರಪಂಚದಿಂದ ಹೊರದೂ
ಸಮಾಜದಲ್ಲಿ ಬೆರೆತು ದೃಷ್ಟಿಹೀನತ್ವದ ನೋವು ಕಾಣ
ಅವರ ಸ್ಥಾನಮಾನಗಳನ್ನು ಕಾಪಾಡುವುದು.

೭) ನಮ್ಮ ದೇಶದಲ್ಲಿ ಅಂಧತ್ವದ ಕಾರಣಗ
ಕೂಲಂಕುಷವಾಗಿ ತಿಳಿದು ಅವುಗಳ ಪರಿಹಾರವನ್ನು ಕ
ಹಿಡಿಯುವುದಲ್ಲದೆ ಜನಸಾಮಾನ್ಯದ ತಿಳುವಳಿಕೆಯ
ಹೆಚ್ಚಿಸುವುದು.

೮) ತಂದೆ ತಾಯಿಗಳು ಇಲ್ಲವೇ ಪೋಷಕರು ದ
ಹೀನ ಮಕ್ಕಳನ್ನು ರಕ್ಷಣಾಗೃಹಗಳಿಗೆ ಕೂಡಲೇ ಸೇ
ವಂತೆ ತಿಳುವಳಿಕೆಕೊಡುವುದು.

ಸ್ಥಿತನಿಗಿಂತ ಕೀಳಾಗಿರುವುದರಿಂದ ಸರಿಯಾದ ಕೂಲಿಯನ್ನು ಸಂಪಾದಿಸಲು ಅನಾನುಕೂಲತೆಯಿರುವುದರಿಂದ ಹೆಚ್ಚು ಕೂಲಿಯನ್ನು ಪಡೆಯಲು ಅರ್ಹನಾಗಿರುತ್ತಾನೆ. ದೃಷ್ಟಿಹೀನನು ಸಾಧ್ಯವಾದಷ್ಟು ತನ್ನ ಜೀವನವನ್ನು ತಾನೇ ಹೊರೆಯುವಷ್ಟು ಸಂಪಾದಿಸುವುದು ಆತನ ಆತ್ಮಗೌರವಕ್ಕೆ ಒಳ್ಳೆಯದೆಂದು ಅಲ್ಲಿಯವರು ಅಭಿಪ್ರಾಯ ಪಡುತ್ತಾರೆ. ಹೆಚ್ಚು ಕೂಲಿ ಕೊಡುವುದರಿಂದ ಕೆಲಸದಲ್ಲಿ ಆಸಕ್ತಿಯು ಕಡಿಮೆಯಾಗುವುದೆಂದು ಕೆಲವರ ಅಭಿಪ್ರಾಯ. ದೃಷ್ಟಿಹೀನರಿಗೆ ಸರಿಯಾದ ವರಮಾನವೂ ಮತ್ತು ವರಮಾನಕ್ಕೆ ತಕ್ಕ ಕೆಲಸವೂ ದೊರಕುವಂತೆ ಒದಗಿಸುವ ಯೋಚನೆಯಲ್ಲಿ ಅಲ್ಲಿಯ ಮಂತ್ರಿವರ್ಗವು ನಿರತವಾಗಿದೆ ಎಂದು ನಂಬಲಾಗಿದೆ.

ಆ ದೇಶದಲ್ಲಿ ದೃಷ್ಟಿಹೀನರನ್ನು ನೋಡಿಕೊಳ್ಳುವ ಕೆಲಸದಲ್ಲಿ ಚೆನ್ನಾಗಿ ಶಿಕ್ಷಣ ಪಡೆದಿರುವ ಶಿಕ್ಷಕರೇ ಬೇರೆ. ಈಗ್ಯೆ ೨೩ ಮಂದಿ ಶಿಕ್ಷಕರು ದೃಷ್ಟಿಹೀನರ ರಕ್ಷಣಾ ವ್ಯವಸ್ಥೆಯಲ್ಲಿ ನಿರತರಾಗಿರುತ್ತಾರೆ. ಇವರಲ್ಲಿ ಬಹುಮಂದಿ ಶೇಕಡಾ ೯೦ ಹೆಂಗಸರೇ ಈ ಶಿಕ್ಷಣ ವೃತ್ತಿಯನ್ನು ತೆಗೆದುಕೊಂಡಿರುತ್ತಾರೆ. ಈ ವೃತ್ತಿಗೆ ಅರ್ಹತೆಯನ್ನು ಪಡೆಯಬೇಕಾದವರು ಯುನಿವರ್ಸಿಟಿಯ Social Science Diploma ದರ ಜೊತೆಗೆ College of teachers of the blind ವರಿಂದ ದೃಷ್ಟಿಹೀನರ ಶಿಕ್ಷಣದ ಬಗ್ಗೆ ತರಬಿಯತ್ತು ಹೊಂದಿರುವ ಪ್ರಶಸ್ತಿ ಪತ್ರಿಕೆಯನ್ನು ಹೊಂದಿರಬೇಕು. ದೃಷ್ಟಿಹೀನರ ಕಾಲೇಜಿನವರು ಈ ಬಗ್ಗೆ ಬೇರೆ ರೀತಿಯ ಶಿಕ್ಷಣಕ್ಕೆ ಅನುಕೂಲವಾದ ತರಗತಿಗಳನ್ನು ತೆರೆದಿರುತ್ತಾರೆ. ಈ ಶಿಕ್ಷಕರ ಅಂತಸ್ತು ಮತ್ತು ಸಂಬಳವೂ ಕೂಡ ಇತರ ಇಲಾಖೆಗಳ ಮಟ್ಟದಲ್ಲಿ ಇರುತ್ತದೆ. ಈ ಶಿಕ್ಷಣವನ್ನು ಪಡೆಯಬೇಕಾದವರು ಕುರುಡರ ಸೇವೆಯಲ್ಲಿ ಪೂರ್ಣ ಮನಸ್ಸುಳ್ಳವರಾಗಿಯೂ ಮತ್ತು ತಮ್ಮ ಜೀವನವನ್ನೇ ದೃಷ್ಟಿಹೀನರ ಅಭಿವೃದ್ಧಿಗೆ ಮುಡುಪಾಗಿರುವ ಧ್ಯೇಯವುಳ್ಳವರಾಗಿ ಬೇಕು.

ಅಮೆರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಅಲ್ಲಿಯ ಸರಕಾರವು ಪ್ರತಿಯೊಬ್ಬ ಕುರುಡ ಪ್ರಜೆಗೂ ತಿಂಗಳಿಗೆ ೧೪ ಡಾಲರ್‌ಗಳನ್ನು ಕೊಡುತ್ತಾರೆ. ಅಲ್ಲಿಯ ಸರ್ಕಾರವು ಇವರಿಗಾಗಿ ಉಚಿತ ವಾಚನಾಲಯಗಳನ್ನು ಕೊಟ್ಟಿರುವುದಲ್ಲದೆ ಬ್ರೈಲ್ ಲಿಪಿಯಲ್ಲಿ ಸಾಹಿತ್ಯವನ್ನು ಅಲ್ಲಿಯವರ ಸೌಕರ್ಯಕ್ಕಾಗಿ ಪ್ರಕಟಿಸಿರುತ್ತಾರೆ. ಕುರುಡರ ವಿದ್ಯಾಭ್ಯಾಸಕ್ಕೂ ಮತ್ತು ಅವರನ್ನು ಸಮಾಜಕ್ಕೆ ಸರಿಹೊಂದಿಸುವ ಕಾರ್ಯಕ್ಕೂ ಸುಶಿಕ್ಷಿತರಾದ ಅಧ್ಯಾಪಕರನ್ನಿಟ್ಟಿರುತ್ತಾರೆ. ಈ ಅಧ್ಯಾಪಕರು ಅವರಿಗೆ ನಿಯಮಿತವಾಗಿರುವ ಸ್ಥಳಗಳಿಗೆ ಭೇಟಿ ಕೊಟ್ಟು ಅವರಲ್ಲಿ ಆಶಾಭಾವನೆಯು ಮೂಡುವಂತೆಯೂ, ಭಾವೀಜೀವನವನ್ನು ಎದುರಿಸಲು ಸಾಕಷ್ಟು ಧೈರ್ಯ ಬರುವಂತೆಯೂ ಮಾಡಿ ಅವರಲ್ಲಿರುವ ಬುದ್ಧಿಶಕ್ತಿಯು ಬೆಳಕು ನಶಿಸದಂತೆ ನೋಡಿಕೊಳ್ಳುವುದಲ್ಲದೆ ಅವರ ಬುದ್ಧಿಯು ವಿಕಸಿಸಲು ಸರಿಯಾದ ಸನ್ನಿವೇಶಗಳನ್ನು ಕಲ್ಪಿಸಿಕೊಡುತ್ತಾರೆ.

ಕಳೆದ ಯುದ್ಧದಲ್ಲಿ ಯುದ್ಧದಿಂದ ಕುರುಡಾದ ಸೈನಿಕನಿಗೆ ವರ್ಷಕ್ಕೆ ೨೬೫ ಡಾಲರುಗಳು ದೊರಕುವಂತೆ ಮಾಡಿರುತ್ತಾರೆ. ಇಂದು ಸಂಯುಕ್ತ ಸಂಸ್ಥಾನದಲ್ಲಿರುವ ೨೨,೫೦೦ ಮಂದಿ ಅಂಧರು ಈ ವಿಶೇಷ ಸೌಲಭ್ಯಗಳನ್ನು ಅನುಭವಿಸುತ್ತಿರುತ್ತಾರೆ. ಇವರ ಇಂದಿನ ಪ್ರಗತಿಗೆ ಸಾರ್ವಜನಿಕ ಸಂಸ್ಥೆಗಳೂ ಸರಕಾರವೂ ಶ್ರೀಮಂತರೂ ಬಹುಮಟ್ಟಿಗೆ ಸಹಾಯ ಮಾಡಿರುತ್ತಾರೆ.

ಸಂಯುಕ್ತ ಸಂಸ್ಥಾನದಲ್ಲಿರುವ John Milton Society for the blind ಸಂಸ್ಥೆಯ ಅಧ್ಯಕ್ಷಿಣಿಯಾಗಿರುವ Miss Helen Keller ಎಂಬಾಕೆಯು ಅಂಧರ ಉದ್ಧಾರಕ್ಕಾಗಿ ಬಹಳ ಮಟ್ಟಿಗೆ ಶ್ರಮಿಸಿ ವಿಶ್ವದಲ್ಲೇ ಖ್ಯಾತಿ ಪಡೆದಿರುತ್ತಾಳೆ. ಕುರುಡರಲ್ಲಿಯೂ ಕೂಡ ಸರಿಯಾದ ಸನ್ನಿವೇಶಗಳನ್ನು ಕಲ್ಪಿಸಿಕೊಟ್ಟರೆ ಎಂತಹ ವ್ಯಕ್ತಿಗಳನ್ನಾಗಿ ಮಾಡಬಹುದೆಂಬುದಕ್ಕೆ ಈಕೆಯ ಜೀವನವು ಆದರ್ಶ. ಈಕೆಯು ಅಂಧರಿಗೆ ಬ್ರೈಲ್ ಲಿಪಿಯಲ್ಲಿ ನೀತಿದಾಯಕವಾದ ಮತ್ತು ಸ್ಫೂರ್ತಿದಾಯಕವಾದ ಸಾಹಿತ್ಯವನ್ನು ಒದಗಿಸುವುದರಲ್ಲಿ ಬಹಳಮಟ್ಟಿಗೆ ಸಹಾಯ ಮಾಡಿರುತ್ತಾಳೆ. ಈಕೆಯು ಅಂಧರ ಜೀವನದಲ್ಲಿ ಒಂದು ಬಗೆಯ ಸ್ಫೂರ್ತಿಯನ್ನು ತುಂಬಿರುತ್ತಾಳೆ. ಈಕೆಯ ಸಾಹಿತ್ಯ ಚಟುವಟಿಕೆಯು ಸಂಯುಕ್ತ ಸಂಸ್ಥಾನದಲ್ಲೇ ಅಲ್ಲ; ವಿಶ್ವದ ಹಲವೆಡೆಗಳಲ್ಲಿ ವ್ಯಾಪಿಸಿರುತ್ತದೆ. ಈಕೆಯು ಇತರ ದೇಶಗಳ ಸಾಹಿತ್ಯದ ರುಚಿಯನ್ನು ತನ್ನ ದೇಶದವರಿಗೆ ಬ್ರೈಲ್ ಲಿಪಿಯಲ್ಲಿ ತಿಳಿಯಲು ಅನುಕೂಲ ಮಾಡಿಕೊಟ್ಟಿರುತ್ತಾಳೆ. ಈಕೆಯು ಹುಟ್ಟಿದ ಮೇಲೆ ೧೮ ತಿಂಗಳು ಮಾತ್ರ ದೃಷ್ಟಿಯ ಸೊಬಗನ್ನು ಅರಿತಿದ್ದಳು. ಆ ಮೇಲೆ ತಲೆದೋರಿದ ರೋಗದಿಂದ ದೃಷ್ಟಿಹೀನಳಾದಳು. ಅಷ್ಟು ಚಿಕ್ಕಂದಿನಿಂದಲೂ ಈಕೆಯು ಸಹನೆಯಿಂದಲೂ ಧೈರ್ಯದಿಂದಲೂ ಸರಿಯಾದ ಸನ್ನಿವೇಶದಲ್ಲಿ ಬೆಳೆದು ಬಂದುದರಿಂದ ಅವಳ ಅಂಗಹೀನತೆಯ ದೋಷವನ್ನು ಎದುರಿಸಿ, ದೃಷ್ಟಿಯ ಸೌಲಭ್ಯವಿರುವವರು ಸಾಧಿಸಲಾಗದಂತಹ ಮಹತ್ಕಾರ್ಯಗಳನ್ನು ಮಾಡಿ ಪ್ರಖ್ಯಾತಳಾಗಿರುತ್ತಾಳೆ. ಇಂತಹ ವ್ಯಕ್ತಿಗಳು ನಮ್ಮ ಕುರುಡರಲ್ಲಿ ಎಷ್ಟು ಮಂದಿ ಅಜ್ಞಾತರಾಗಿ ಇರುವರೋ ಬಲ್ಲವರಾರು? ಸರಿಯಾದ ಸನ್ನಿವೇಶವು ದೊರಕದೆ ಎಷ್ಟು ಮಂದಿ ಬೆಳಕಿಗೆ ಬಾರದೆ ತೆರೆಯ ಮರೆಯಲ್ಲಿ ಅಜ್ಞಾತರಾಗಿ ಜೀವಿಸುವುದಿಲ್ಲ! ಇಂತಹ ಗಣ್ಯ ವ್ಯಕ್ತಿಗಳನ್ನು ತೆರೆಯಿಂದ ಹೊರಗೆ ಬರುವಂತೆ ಮಾಡಿ ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳನ್ನಾಗಿ ಮಾಡುವ ಭಾರವು ಸ್ವತಂತ್ರವಾಗಿರುವ ನಮ್ಮ ದೇಶದ ಮೇಲೆ ಬಿದ್ದಿರುತ್ತದೆ. ಇನ್ನು ಮೇಲಾದರೂ ಈ ದಾರಿಯಲ್ಲಿ ಉದಾರ ಶ್ರೀಮಂತರೂ ಮತ್ತು ಸರಕಾರವೂ ಮುಂದೆ ಬಂದು ಕುರುಡರ ರಕ್ಷಣೆಗೆ



(ಹರಟೆ)

ಲೇಖಕರು:

ಶ್ರೀ. ರಾ. ನೊ. ವಿಶ್ವಾಮಿತ್ರ.

ಟೊಪ್ಪಿ

ಟೊಪ್ಪಿಯ ಪರಿಚಯವಿಲ್ಲದವರು ಜಗತ್ತಿನಲ್ಲಿ ಇಲ್ಲವೆಂದೇ ಹೇಳಬಹುದು. ಒಂದಲ್ಲ ಒಂದು ವಿಧದಿಂದ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಪ್ರಪಂಚದಲ್ಲಿ ಟೊಪ್ಪಿಯ ಅನುಭವವನ್ನು ಮಾಡಿಕೊಂಡಿರುತ್ತಾನೆ. ಎಲ್ಲರ ಪರಿಚಯಗೊಂಡ, ಚಿರಪರಿಚಿತವಾಗಿರುವ ಟೊಪ್ಪಿಯ ಪರಿಚಯ ಮಾಡಿಕೊಡುವುದು ಒಂದು ಹೆಮ್ಮೆಯ ಕೆಲಸವಾಗಬಹುದು. ಹೆಮ್ಮೆಪಡದೆ ಹೋದರೂ ಪರಿಚಯ ಹೇಳುವುದು ಒಂದು ನಗೆಯ ಮಾತಾಗದು; ಅಪಹಾಸ್ಯಕ್ಕೆ ಎಡೆಗೊಡದು ಎಂದು ನನ್ನ ಕಲ್ಪನೆ.

ಮನುಷ್ಯನ ವೇಷಭೂಷಣಗಳಲ್ಲಿ ಅಗ್ರಸ್ಥಾನ ಟೊಪ್ಪಿಗೆ ಇದೆ. ಹಿಂದಿನ ಕಾಲದಲ್ಲಿ ಅರಸರಿದ್ದರು. ಅವರು ಕಿರೀಟವನ್ನು ಧರಿಸುತ್ತಿದ್ದರು. ಇಂದಿನ ಕಾಲದಲ್ಲಿ ಅರಸರಿಲ್ಲ,ಮತ್ತೆ ಕಿರೀಟವಾದರೂ ಎಲ್ಲಿಂದ? ಅರಸನಿಗೆ ಮಾತ್ರ ಕಿರೀಟ ಸಲ್ಲತಕ್ಕುದು; ಅವನೇ ಕಿರೀಟವನ್ನು ಧರಿಸತಕ್ಕವನು; ಆಗಿದ್ದರೆ, ಆದರ ಬದಲಾಗಿ ಧರಿಸುತ್ತಿರುವ ಶಿರೋಲಂಕಾರಪ್ರಾಯವಾಗಿರುವ ಟೊಪ್ಪಿಯನ್ನು ಧರಿಸುವಲ್ಲಿ ಈ ಯಾವ ಭೇದವೂ ಇಲ್ಲ. ಇಂದಿನ ವಿಶ್ವಕ್ಕೆ ಬೇಕು ಸಮತಾವಾದ ಆದ್ದರಿಂದಲೇ ಇಂದು ಟೊಪ್ಪಿ ಹಾಕುವುದಕ್ಕೆ ಅಥವಾ ಟೊಪ್ಪಿ ಹಾಕಿಸಿಕೊಳ್ಳುವುದಕ್ಕೆ ಯೋಗ್ಯರಾದ ಮಂದಿಗಳೇ ಆಗಿದ್ದಾರೆಂದು ಹೇಳಬೇಕಾಗುತ್ತಿದೆ. ಹಿಂದಿನ ಕಾಲದಲ್ಲಿ ಒಬ್ಬ ಘನವಂತ ವ್ಯಕ್ತಿಯನ್ನು "ಮಕುಟಪ್ರಾಯನು" ಎಂದು ಕವಿಗಳು ಹೇಳುವ ರೂಢಿಯಿದ್ದಿತು. ಆದರೆ ಇಂದು ಹಾಗೆ ಹೇಳುವುದರಲ್ಲಿ ಯಾವ ಔಚಿತ್ಯವೂ ಕಂಡುಬರದು. ಆದರ ಬದಲಾಗಿ "ಅವನು ಟೊಪ್ಪಿಗೆ ಸರಿಯಾದವನು" ಎಂದು ಹೇಳಬೇಕಾಗುತ್ತದೆ. ಮಕುಟ ಎಂಬುದು ಸಂಸ್ಕೃತ ಶಬ್ದ. ಅದು ಸ್ವಚ್ಛಕ
ರಿಗೆ ಅಗತ್ಯವಿಲ್ಲ. ಅರ್ಥವಾಗಲಾರದು. ಆದ್ದರಿಂದಲೇ
ಬದಲಾಗಿ ಟೊಪ್ಪಿ ಬಂದಿತೆಂದೂ ಹೇಳಬಹುದು.

ಟೊಪ್ಪಿ ಅಥವಾ 'ಕ್ಯಾಪ್' ಎಂದು ಹೇಳುವ ಈ
ಭೂಷಣವಾದ ಟೊಪ್ಪಿ, ಎಲ್ಲರ ಮನ್ನಣೆಗೆ ಯೋಗ್ಯವ
ದೊಡ್ಡ ಜನ ಎಂದಿನಿಸಿಕೊಂಡವನಿಗೆ ಮನ್ನಣೆ ದೊ
ವುದು. ಅವನ ವಿಚಾರದಲ್ಲಿ ಚರ್ಚೆಗಳೂ, ಉಪನ್ಯಾಸ
ಬರವಣಿಗೆಗಳೂ ಪ್ರಚಾರಕ್ಕೆ ಬರುವವು. ಅದೇ ರೀತಿ
ಸ್ಥಾನವನ್ನು ಪಡೆದ ಈ ಟೊಪ್ಪಿಯ ವಿಚಾರದಲ್ಲಿ ಪ್ರ
ಅಭಾವ ಎಂಬ ಕೊರತೆ ಉಂಟಾಗಬಾರದಲ್ಲ!

ಟೊಪ್ಪಿ ಮತ್ತು 'ಕ್ಯಾಪ್' ಈ ಎರಡು ಹೆಸರ
ರೂಢಿಯಲ್ಲಿರುವುದಾದರೂ 'ಕ್ಯಾಪ್' ಎಂಬುದು ಇಂ
ನಿಂದ ಬಂದುದು. ಈ ಹೆಸರನ್ನು ಅಂಗೀಕರಿಸ
"ಟೊಪ್ಪಿ"ಯ ಗೌರವ ದೃಷ್ಟಿಯಿಂದ ಕುಂದೆಂದು ಪರಿ
ಲಾಗಿದೆ. ಸ್ವತಂತ್ರರಾಷ್ಟ್ರದಲ್ಲಿ ಅನ್ಯಭಾಷಾಪದ ಅಥವ
ಕೀಯ ಸೊತ್ತು ಕಳಂಕಪ್ರಾಯ ಎನ್ನಲೂ ಬಹುದು. ಭಾ
ರಾಷ್ಟ್ರಭಾಷೆ ಹಿಂದಿಯಾದಾಗ "ಕ್ಯಾ+ಆಪ್" ಎಂದು ಗ
ಪ್ರಾರಂಭವಾಗಲೂ ಬಹುದೆಂದು ಅನುಮಾನವಿರುವು
ಚರ್ಚೆಗೆಡೆಗೊಡದೆ,—

ಟೊಪ್ಪಿಯೆಂಬುದೆ ಸಾಧು
ಎಲ್ಲರ್ಗೆ ಟೊಪ್ಪಿಯೇ ಸಾಧು
ಕ್ಯಾಪು ವಧ್ಯಂ
ಆದು ದುಷ್ಟಂ

ಒಂದು ಚಾರಿತ್ರಿಕ ಕಥೆ

ವಿಚಿತ್ರ ಸೇಡು

ಲೇಖಕರು: ಶ್ರೀ ಬಿ. ವಿ. ಬಾಳಿಗಾ.

ಸಾರ್ಡಿಸ್ ಪಟ್ಟಣದಲ್ಲಿ ಸಂಭ್ರಮದ ಸ್ವಾಗತ ಸಿದ್ಧತೆ
ಡೆದಿತ್ತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾವಿರಾರು
ರಜನರು ಸೇರಿದ್ದರು. ಅವರ ಅರಸು ಕೆಂಡೊಲಸ್ ಪರ್ಶಿ
ನ್ ಮುಖಂಡ ಮೆಗಬೆಜಿಸನ ಕುವರಿ ನಿಸ್ಸಿಯಾಳನ್ನು
ರಿಸಿ ರಾಜಧಾನಿಗೆ ಮರಳುವ ದಿನವದು. ನೆರೆದವರೆಲ್ಲರ
ಯಿಂದ ತಮ್ಮ ಹೊಸ ರಾಣಿಯ ಅನುಪಮ ಸೌಂದರ್ಯದ
ರಿತು ಉದ್ಗಾರಗಳು ಹೊರಡುತ್ತಿದ್ದವು. ನಿಸ್ಸಿಯಾಳನ್ನು
ಮ್ಮ ಕಣ್ತುಂಬಾ ನೋಡಿ ಆನಂದಿಸಬೇಕೆಂಬ ಹಂಬಲದಿಂದ
ವರೆಲ್ಲಾ ಅಲ್ಲಿ ಕಿಕ್ಕಿರಿದು ನೆರೆದಿದ್ದರು.

ಮದುವೆಯ ಮೆರವಣಿಗೆ ಮಂದಗತಿಯಲ್ಲಿ ಸಾಗಿ ಬಂತು.
ರಸನನ್ನು ಸ್ವಾಗತಿಸುವ ಜಯಜಯಕಾರ ಘೋಷ ದಿಗಂತ
ದ್ದಿತು. ಮುಖ್ಯ ದಳಪತಿ ಮತ್ತು ಅವನ ಕಡೆಯ ವೀರಾಳು
ು ಅಶ್ವಾರೂಢರಾಗಿ ಮೆರವಣಿಗೆಯ ಮುಂಭಾಗದಲ್ಲಿ
ಡಿದು ಬರುತ್ತಿದ್ದರು. ಅವರ ಹಿಂದೆ ಚಿತ್ರವಿಚಿತ್ರ ಬಣ್ಣದ
ಡುಪುಗಳನ್ನು ಧರಿಸಿ ಮಂಗಲ ಗೀತೆ ಹಾಡುವ ಬಾಲಕರ
ಲು. ಆ ಮೇಲೆ ಮದುವೆಯ ಉಡುಗೊರೆಗಳನ್ನು ಹೊತ್ತು
ುವ ಗುಲಾಮ ವೃಂದ—ಅವರ ಮೈ ಕೈಗಳಿಂದ ಬೆವರು
ರಾಕಾರವಾಗಿ ಸುರಿಯುತ್ತಿತ್ತು. ಚಿನ್ನ, ಬೆಳ್ಳಿ, ವಜ್ರ,
ಢೂರ್ಯಗಳ ಆಭರಣಗಳು ಉಡುಗೊರೆಯಲ್ಲಿ ಸೇರಿದ್ದವು.
ಟೆಯ ಬೆನ್ನಲ್ಲಿ ಕೂತು ವಾದನಗಾರರು ವಿವಿಧ ವಾದನ
ನ್ನು ಬಾರಿಸುವ ವಾದ್ಯಸಂಭ್ರಮ ಬೇರೆ. ಒಂಟೆಗಳನ್ನು
ದವಾಗಿ ಶೃಂಗರಿಸಿದ್ದರು. ಅಲ್ಲಿ ಕೂಡಿದ ಜನಜಂಗುಳಿ
ವಿಲಾಸ ಸಂಭ್ರಮ ನೋಡಲು ಹೆಚ್ಚಿನ ಆಸಕ್ತಿ ವ್ಯಕ್ತ
ಸುತ್ತಿರಲಿಲ್ಲ. ತಮ್ಮ ಒಡೆಯನು ವಿಧಿಪೂರ್ವಕ ವರಿಸಿ

ತಂದ ಹೆಣ್ಣಿನ ಅಲೌಕಿಕ ಸೌಂದರ್ಯ ಒಮ್ಮೆ ನೋಡಿ ಕಣ್ಣು
ಗಳಿಗೆ ಹಬ್ಬದ ಸವಿ ಉಣಿಸಬೇಕೆಂಬ ಹಂಬಲವೇ ಎಲ್ಲರಲ್ಲಿ
ಹಿರಿದಾಗಿತ್ತು.

ನಾಲ್ಕು ಚಂದದ ತುರಗಗಳನ್ನು ಕಟ್ಟಿದ ದಿವ್ಯ ರಥದ ಮೇಲೆ ಅರಸ ಕೆಂಡೊಲಸ್ ಆರೂಢನಾಗಿದ್ದನು. ರೇಶ್ಮೆಯ ಆವರಣದಿಂದೊಡಗೂಡಿದ 'ಹೌರಾ'ದಲ್ಲಿ ಅರಸನ ಮಡದಿ ಕುಳಿತ ಪಟ್ಟದ ಆನೆಯು ಹಿಂದಿನಿಂದ ಬರುತಿತ್ತು. ಸಾವಿರಾರು ಕಣ್ಣುಗಳು 'ಹೌರಾ'ದ ಕಡೆಗೆ ಏಕಾಗ್ರತೆಯಿಂದ ನೋಡುವುದು ನಿಸ್ಸಿಯಾಳಿಗೆ ತಿಳಿಯದಿರಲಿಲ್ಲ. ಒಮ್ಮೆ 'ಹೌರಾ'ದಿಂದ ತಲೆಯನ್ನು ಹೊರ ಹಾಕಿ ಜನರಿಗೆ ಮುಖ ದರ್ಶನವೀಯಬೇಕೆಂದು ಅರಸನ ಮೌನ ಸಂಜ್ಞೆಯ ಆಣತಿಯಾಯಿತು ರಾಣಿಗೆ. ಆದರೆ ನಿಸ್ಸಿಯಾ ಅದಕ್ಕೆ ಸಿದ್ಧಳಿರಲಿಲ್ಲ. ನೆರೆದ ಪ್ರಜಾಗಣ ನಿರಾಶೆಯಿಂದ ಚದರಿತು.

ನಿಸ್ಸಿಯಾ ನಿಜಕ್ಕೂ ಅನುಪಮ ಸುಂದರಿ; ಅವಳ ರೂಪವನ್ನು ಚಿತ್ರವೆತ್ತುವ ಭಾಗ್ಯ ಲಭಿಸಿದರೆ ಅದಕ್ಕೆ ಪ್ರತಿಯಾಗಿ ಜೀವವನ್ನೆ ಅರ್ಪಿಸಲು ಬದ್ಧಕಂಕಣರಾದ ಕಲಾಕಾರರು ಮತ್ತು ಶಿಲ್ಪಿಗಳು ನೂರಾರು ಮಂದಿ ಇದ್ದರು. ನಿಸ್ಸಿಯಾ ಪರ್ಶಿಯದ ಒಂದು ಕುಲೀನ ಕುಟುಂಬಕ್ಕೆ ಸೇರಿದ ಹೆಣ್ಣು. ಗೌರವ, ಪ್ರತಿಷ್ಠೆಗಳಿಗೆ ಹೆಸರು ಹೋದ ಕುಟುಂಬ ಅವಳದು. ಕೈಹಿಡಿದ ಪತಿ ಹೊರತು ಅನ್ಯ ಪುರುಷರು ತಮ್ಮ ಕಾಲ ಬೆರಳುಗಳನ್ನೂ ಕಾಣಬಾರದೆನ್ನುವಂತಹ ಅಪ್ರತಿಮ ಪತಿಭಕ್ತಿಗೆ ಪ್ರಸಿದ್ಧಿ ಹೊಂದಿದವರು ಪರ್ಶಿಯನ್ ಸ್ತ್ರೀಯರು. ಗ್ರೀಕರ ಲಜ್ಜಾಹೀನ ರೀತಿನೀತಿಗಳು ನಿಸ್ಸಿಯಾಳಿಗೆ ಅಚ್ಚರಿಯನ್ನುಂಟುಮಾಡಿದುದು ಮಾತ್ರವಲ್ಲ, ಅನೊಂದು ರೀತಿಯ ಜಿಗುಪ್ಸೆಯನ್ನೂ ಹುಟ್ಟಿಸಿದುವು. ಅರೆನಗ್ನರಾಗಿ ಸ್ಟೇಡಿಯಮ್

ದಲ್ಲಿ ಸಾವಿರಾರು ಮಂದಿಯ ಮುಂದೆ ವಿವಿಧ ಆಟಸ್ಪರ್ಧೆಗಳನ್ನು
ಪ್ರದರ್ಶಿಸುವ ಗ್ರೀಕ್ ವೀರರನ್ನು ಕಂಡರೆ ಅವಳಲ್ಲಿ ಮಾತ್ಸರ
ಭಾವನೆ ಹುಟ್ಟುತಿತ್ತು. ದಯಾನಾ ದೇವತೆಯ ಸನ್ನಿಧಿಯಲ್ಲಿ
ಮುಖವಾಡ ಎತ್ತಿ ಪುರುಷ ಸಮುದಾಯದ ಮುಂದೆ ನಾಟ್ಯ
ವಾಡುವ ಗ್ರೀಕ್ ಕನ್ಯೆಯರನ್ನು ಹೇಸುತ್ತಿದ್ದಳು ನಿಸ್ಸಿಯಾ.

ನಿಸ್ಸಿಯಾಳಂತಹ ಅನುಪಮ ಸುಂದರಿಯನ್ನು ಭಾರ್ಯೆ
ಯಾಗಿ ಪಡೆದ ತಮ್ಮ ಅರಸನು ಅತ್ಯಂತ ಸುಖಿಯಾಗಿರ
ಬೇಕೆಂಬ ಕಲ್ಪನೆ ಗ್ರೀಕ್ ಪ್ರಜೆಗಳದಾಗಿತ್ತು. ಧನಕನಕಾದಿ
ಗಳಿಂದ ತನ್ನ ಮನೋವಲ್ಲಭೆಯನ್ನು ತೃಪ್ತಿಪಡಿಸಿಕೊಂಡು,
ಯಾವ ವಿಲಾಸ ವೈಭವಗಳಿಗೂ ಲೋಪಬಾರದಂತೆ ಅವಳ
ಪ್ರಣಯ ಸುಖ ಸವಿದುಕೊಂಡಿದ್ದನು ಕೆಂಡೋಲಸ್. ಹಲವು
ಘೋರಯುದ್ಧಗಳನ್ನು ನಿಮಿಷಮಾತ್ರದಲ್ಲಿ ಜಯಿಸಿದ ಅರಸನ
ಬಾಹುಗಳು ಸೌಂದರ್ಯ ದೇವತೆಯಾದ ರಾಣಿಯ ಬಳಿ
ಸೇರುವಾಗ ಮಾತ್ರ ಕಂಪಿಸುತ್ತಿದ್ದುವು. ಹಲವು ಭಯಾನಕ
ಸನ್ನಿವೇಶಗಳನ್ನು ಧೈರ್ಯದಿಂದ ಎದುರಿಸಿದ ಎದೆ, ಶಯ್ಯೆ
ಯಲ್ಲಿ ನಲ್ಲೆಯ ನಗ್ನ ಸೌಂದರ್ಯ ಪಾನಮಾಡುವ ಸ್ಥಿತಿ
ಯೊದಗಿದಾಗ ಝಲ್ಲೆನ್ನುತಿತ್ತು. ಅಮೂಲ್ಯ ಕನ್ಯಾರತ್ನ
ವನ್ನು ತಾನು ಹೊಂದಿದ ಬಗ್ಗೆ ಅರಸನಲ್ಲಿ ಅಭಿಮಾನ ತುಂಬಿ
ತುಳುಕಾಡುತಿತ್ತೇನೊ ನಿಜ. ಆದರೆ ಅವನು ಅನುಭವಿಸು
ತ್ತಿದ್ದ ಸುಖ ಪರಿಪೂರ್ಣತೆ ಹೊಂದಿದೆ ಎನ್ನಬರುವಂತಿದ್ದಿಲ್ಲ.
ಯಾವುದೋ ಒಂದು ಅತೃಪ್ತಿಯ ಕರಿಮೋಡ ಆ ಸೊಗದ
ಬಾನಿನ ಮೇಲೆ ತೇಲುತಿತ್ತು.

ಪ್ರಾಚೀನ ಅವಶೇಷಗಳ ಭಂಡಾರ ಸಂಗ್ರಹಿಸಿದವನಿಗೆ
ತನ್ನ ಅಮೂಲ್ಯ ಸೊತ್ತುಗಳನ್ನು ಇತರರ ಮುಂದೆ ಪ್ರದರ್ಶಿಸಿ,
ಅವರು ತನ್ನ ಸೊತ್ತುಗಳ ಕುರಿತು ಅಸೂಯೆಪಡಬೇಕೆನ್ನು
ವಂತಹ ಆಕಾಂಕ್ಷೆ ಇದ್ದೇ ಇರುತ್ತದೆ; ಹಾಗೆ ಅವರು ಅಸೂಯೆ
ಪಟ್ಟರೆಂಬುದನ್ನು ತಿಳಿದರೆ ಅದಕ್ಕೆ ಮಿಕ್ಕಿದ ಆನಂದ ಅವನಿಗೆ
ಬೇರೆ ಇರಲಾರದು. ಅಂತಹದೇ ಸ್ಥಿತಿ ಅರಸ ಕೆಂಡೂಲಸನಿಗೆ
ಒದಗಿತು. ತನ್ನ ಮಡದಿ ನಿಸ್ಸಿಯಾಳ ಸೌಂದರ್ಯ ಇತರರು
ಕಾಣಬೇಕು, ಸ್ತುತಿಸಬೇಕು; ಆ ಸ್ತುತಿ ತನ್ನ ಕರ್ಣಕುಹರ
ಗಳಿಗೆ ಮಧುರ ಸಂಗೀತವಾಗಬೇಕು ಎಂಬ ಹೆಬ್ಬಯಕೆ ಗ್ರೀಕ್
ದೊರೆಯದಾಗಿತ್ತು. ನಿಸ್ಸಿಯಾ ಪರ್ಸಿಯಾ ದೇಶದಲ್ಲಿ
ಹುಟ್ಟುವ ಬದಲು ಗ್ರೀಸ್ ದೇಶದಲ್ಲಿ ಹುಟ್ಟಿದುದಾದರೆ ಅವಳ
ರೂಪವನ್ನು ಬಿಡಿಸಲು, ಅವಳ ಪ್ರತಿಮೆಯನ್ನು ಕಲ್ಲಿನಲ್ಲಿ
ಕೆತ್ತಲು ನೂರಾರು ಮಂದಿ ಗ್ರೀಕ್ ಕಲಾಕಾರರು ಮತ್ತು
ಶಿಲ್ಪಿಗಳು 'ನಾ ಮುಂದೆ ನಾ ಮುಂದೆ' ಎಂದು ಕಣ್ಣುಬಾಯಿ
ಬಿಡುತಿದ್ದರು. ಸಾರ್ಡಿಸ್ ಪಟ್ಟಣದ ಮೂಲೆಮೂಲೆಗಳಲ್ಲಿ
ಅವಳ ಸೌಂದರ್ಯದ ಗುಣಗಾನವಾಗುತ್ತಿತ್ತು. ಅರಸನಿಗೆ
ಅದಕ್ಕಿಂತ ಹಿರಿದಾದ ಕೀರ್ತಿ ಬೇರೆ ಬೇಕಾಗಿರಲಿಲ್ಲ. ಆದರೆ
ಇಂದು ಅವನ ಸ್ಥಿತಿಯಾದರೋ ಅಪರಿಚಿತ ದೇವತೆಯೋರ್ವಳ

ದೇಗುಲದಲ್ಲಿ ಏಕಾಕಿಯಾಗಿ ಪೂಜಿಸುವ ಪೂಜಾರಿ
ಗಿತ್ತು. ನಿಸ್ಸಿಯಾ ವಿಧೇಯ ಪತ್ನಿಗೆ ತಕ್ಕಂತೆ ತನ್ನ
ಸ್ವಾರ್ಥೀ ಅಭಿಲಾಷೆಗಳನ್ನೆಲ್ಲಾ ಪೂರೈಸುತ್ತಿದ್ದಳು.
ದೃಷ್ಟಿಗೆ ಬಿದ್ದು ಅರಸನ ಹೆಗ್ಗಳಿಕೆಯ ವಸ್ತು
ಬೇಕೆನ್ನುವ ಪತಿಯ ಆ ಒಂದು ಅಭಿಲಾಷೆ ಮಾತ್ರ
ವಂಶಪರಂಪರೆಯ ಆದರ್ಶ ಗೌರವ ಪ್ರತಿಷ್ಠೆಗಳಿಗೆ
ತರುವ ವಿಷಯವಾದುದರಿಂದ ಆ ಕಡೆ ಮಾತ್ರ
ನಿಠೂರಳಾಗಬೇಕಾಯಿತು.

ಅರಸನ ಆಣತಿಯನ್ನು ಮನ್ನಿಸಿ ಮುಖ್ಯ ದ
ಗೈಗ್ಸ್ ಅರಸನ ಏಕಾಂತ ಮಂದಿರವನ್ನು ಪ್ರವೇಶಿಸಿ
ಮಾಡಿ ನಿಂತನು. ಅರಸನು ಮ್ಲಾನವದನನಾಗಿ ಕುಳಿ
ಸೇನಾನಿಗೆ ಅಚ್ಚರಿಯನ್ನುಂಟುಮಾಡಿತು.

'ಗೈಗ್ಸ್, ನೀನೋರ್ವ ನೀರಲ್ಲಿ ಮುಳುಗಿ ಮ
ಗಳನ್ನು ಮೇಲಕ್ಕೆತ್ತುವ ನಾವಿಕನೆಂದು ತಿಳಿ. ಸಾಗರ
ದಿಂದ ಒಂದು ಅತ್ಯಮೂಲ್ಯ ಮುತ್ತನ್ನು ಮೇಲಕ್ಕೆತ್ತುವು
ನೀನು ಜಯಶೀಲನಾದೆ. ಆ ಮುತ್ತು ಹಲ ಮಂದಿಯ
ಆಕಾಂಕ್ಷೆಗಳ ಸೊತ್ತಾಗಿದ್ದು ಆ ವರೆಗೆ ಯಾರೂ ಅ
ಕಣ್ಣಾರೆ ಕಂಡಿರಲಿಲ್ಲವೆಂದು ಭಾವಿಸು. ಪ್ರಯಾಸ
ಸ್ವಪ್ರಯತ್ನದಿಂದ ಮೇಲಕ್ಕೆತ್ತಿದ ಆ ಅಮೂಲ್ಯ ಮುತ್ತ
ನೀನು ಏನುಮಾಡುವೆ?' ಮ್ಲಾನತೆಯಿಂದ ಮೊಗವೆತ್ತಿ
ಸನ ಪ್ರಶ್ನೆ:

ಕೇವಲ ರುಧಿರಮಯ ಸಂಗ್ರಾಮಗಳ ಕುರಿತು ಮ
ಅನುಭವವಿದ್ದ ಗೈಗ್ಸನಿಗೆ ಈ ಮುತ್ತುಗಳ ಕಥೆಗೆ ಏನ
ಕೊಡುವುದೆಂದು ಥಕ್ಕನೆ ಮತಿಗೆ ಹೊಳೆಯಲಿಲ್ಲ. ಆಳ
ಯೋಚಿಸಿ ಕೊನೆಗೆ ಸೇನಾನಿ ಈ ರೀತಿ ಉತ್ತರ ಕೊಟ್ಟ
"ಒಡೆಯಾ, ಅಂತಹ ಅಮೂಲ್ಯರತ್ನ ಪಡೆಯುವ ಭಾಗ್ಯ
ಲಭಿಸಿದುದಾದರೆ, ನುಣ್ಣಗೆ ರೇಶ್ಮೆ ಬಟ್ಟೆಯನ್ನು ಒಳಬದಿ
ಹೊಲಿದ ಚಿನ್ನದ ಪೆಟ್ಟಿಗೆಯಲ್ಲಿಟ್ಟು, ಇತರ ಯಾರದೂ
ಬೀಳದೆ ನನಗೊಬ್ಬನಿಗೇನೆ ಕಾಣಿಸುವಂತಹ ಗೋಪ್ಯ ಸ
ಲ್ಲಿಟ್ಟು ಕಾಪಾಡುವೆನು. ಆ ರತ್ನವನ್ನು ಕಾಣಬೇಕೆಂಬ ಆ
ವಾದಾಗಲೆಲ್ಲಾ ಮೆಲ್ಲನೆ ಆ ಏಕಾಂತ ಸ್ಥಳಕ್ಕೆ ನಾನೋ
ಹೋಗಿ, ಸುತ್ತುಮುತ್ತು ಯಾರೂ ಕದ್ದು ನೋಡದಿರುವು
ಖಚಿತಮಾಡಿಕೊಂಡು, ಪೆಟ್ಟಿಗೆಯ ಬಾಗಿಲು ತೆಗೆದು ನ
ಬ್ಬನೇ ಆ ರತ್ನವನ್ನು ಕಣ್ತುಂಬಾ ನೋಡಿ ಹಿಗ್ಗುವೆನು...

"ಥೂ! ನಿನ್ನಂತಹನಿಗೆ ಅಂತಹ ರತ್ನ ಲಭಿ
ಭಾಗ್ಯವೇ ಬಾರದಿರಲಿ." ನಡುವೆ ಬಾಯಿ ಹಾಕಿ ಅರ
ಹೇಳಿದನು, "ನನಗೆ ಅಂತಹ ರತ್ನ ಲಭಿಸಿದುದಾದರೆ
ಮಾಡುವೆ ಗೊತ್ತೆ? ಎಲ್ಲರ ದೃಷ್ಟಿಗೆ ಬೀಳುವಂತೆ ನನ್ನ ಕಿ
ದಲ್ಲಿ ಅದನ್ನು ಕೆತ್ತಿಸುವೆನು. ಎಲ್ಲರೂ ನನ್ನ ಆ ಅಮ

ಸೊತ್ತಿಗಾಗಿ ಅಸೂಯೆ ಪಟ್ಟರೆಂದರೆ ಅದರಷ್ಟು ದೊಡ್ಡ ಅಭಿಮಾನ ಬೇರೇನು ಬೇಕು? 'ಇಂತಹ ಅಮೂಲ್ಯ ಸೊತ್ತು ಬೇರಾರೊಡನೆ ಇದೆ? ಇದ್ದವರು ಮುಂದೆ ಬಂದು ಸ್ಪರ್ಧೆಗೆ ನಿಲ್ಲಲಂತೆ' ಎಂದು ಘಂಟಾಘೋಷವಾಗಿ ಸಾರುವೆನು. ಪ್ರತಿಯೊಬ್ಬ ಸ್ತ್ರೀಪುರುಷರು ಆ ಅಮೂಲ್ಯ ರತ್ನವನ್ನು ಮನದಣಿಯ ನೋಡಿ ತೃಪ್ತಿಪಡದ ವಿನಹ ನಾನು ವಿರಮಿಸಲಾರೆ. ಗೈಗ್ಸ್, ನನ್ನೊಡನೆ ಅಂತಹ ಅಮೂಲ್ಯ ರತ್ನವೊಂದಿದೆ....."

"ಇದೆ?" ಸೇನಾನಿಯ ಆಶ್ಚರ್ಯಭರಿತ ಪ್ರಶ್ನೆ.

ಕೆಂಡೊಲಸನ ಮ್ಲಾನವದನ ಅರಳಿತು. "ಮಾನವತೆ ಎಂಬ ಸಾಗರದಲ್ಲಿ ಅತ್ಯಂತ ಆಳವಾದ ತಳವನ್ನು ಸೇರಿ ಅಂತಹ ಒಂದು ರತ್ನವನ್ನು ಮೇಲಕ್ಕೆತ್ತಿದ್ದೇನೆ. ಆ ರತ್ನವನ್ನು ನೀನು ಕಂಡೆಯೆಂದರೆ ನಾನು ಹೇಳಿದ ಪ್ರತಿಯೊಂದು ಮಾತು ಅಕ್ಷರಶಃ ನಿಜವೆನ್ನುವೆ. ಆ ರತ್ನ ಯಾವುದು ಗೊತ್ತೇ?..... ನನ್ನ ಮುದ್ದಿನ ರಾಣಿ ನಿಸ್ಸಿಯಾ"

"ನಿಸ್ಸಿಯಾ! ನಿಮ್ಮ ಪತ್ನಿ!! ನಮ್ಮ ರಾಣಿ!!!" ಗೈಗ್ಸನ ವಿಸ್ಮಯ ಇನ್ನಷ್ಟು ಹೆಚ್ಚಿತು. "ಆದರೆ ಪ್ರಭೋ, ನಿಸ್ಸಿಯಾ ಕುಲೀನೆ ಪರ್ಸಿಯನ್ ಕುಟುಂಬಕ್ಕೆ ಸೇರಿದವಳು. ಪರ್ಸಿಯನರಿಗೆ ನಮ್ಮ ಆಧುನಿಕ ರೀತಿನೀತಿಗಳು ಒಗ್ಗುವುದಿಲ್ಲ. ಅವರು ನಮ್ಮವರ ಸುಧಾರಿತ ರೀತಿನೀತಿಗಳನ್ನು ಕಡು ದ್ವೇಷಿಸುತ್ತಾರೆ. ರಾಣಿಯು ಮುಖವಾಡ (ಬುರಕಿ) ಎತ್ತಿ ನನಗೆಂದೂ ದರ್ಶನ ಕೊಡಲಾರಳು."

ಕೆಂಡೊಲಸನಿಗೆ ಸೇನಾನಿ ಹೇಳಿದ ಮಾತು ಹೌದೆನಿಸಿತು. "ಸರಿಯಾಗಿ ಹೇಳಿದೆ. ನನ್ನ ಅರಗಿಣಿ ನಿಸ್ಸಿಯಾ ನನ್ನೊಬ್ಬನ ಮುಂದಲ್ಲದೆ ಇತರರ ಎದುರು ಬುರಕಿ ಎತ್ತಲಾರಳು. ಆದರೆ ರಾತ್ರೆ ಶಯನಾಗಾರದಲ್ಲಿ ಆಕೆ ನನ್ನ ಎದುರು ನಿಸ್ಸಂಕೋಚವಾಗಿ ಬುರಕಿ ಎತ್ತುವಾಗ ರಹಸ್ಯವಾಗಿ ಆ ದೃಶ್ಯ ನೋಡಲು ನಿನಗೆ ಅವಕಾಶ ದೊರೆತರೆ?" ಎಂದು ಅರಸನು ಹೇಳಿದಾಗ ಸೇನಾನಿಯ ಎದೆಯಲ್ಲಿ ಧಸಕ್ಕೆನಿಸಿತು.

"ಗುಪ್ತವಾಗಿ ನಿಸ್ಸಿಯಾಳನ್ನು ನೀನು ಕಾಣುವಂತೆ ಅವಕಾಶ ಮಾಡಿಕೊಡುವೆ ಗೈಗ್ಸ್. ಒಂದು ಜೊತೆ ಕಣ್ಣುಗಳು ರಹಸ್ಯವಾಗಿ ಆಕೆಯ ಸೌಂದರ್ಯ ಪಾನಮಾಡುವವೆಂಬುದರ ಸುಳಿವು ಕೂಡಾ ಆಕೆಗೆ ಹತ್ತದಂತೆ ಏರ್ಪಡಿಸಬಹುದೆನ್ನು. ನಮ್ಮ ಶಯ್ಯಾಗಾರದ ಬಳಿ ಯಾರಿಗೂ ತಿಳಿಯದ ಒಂದು ಮೂಲೆಯಲ್ಲಿ ನಿನ್ನನ್ನು ಅಡಗಿಸಿ ನಿಲ್ಲಿಸುವೆ. ಅಲ್ಲಿಂದ ಮನೋತೃಪ್ತಿಯಾಗುವಷ್ಟು ನೀನು ಅವಳ ಸೌಂದರ್ಯ ಪಾನಮಾಡಬಹುದು. ಅವಳ ಅನುಪಮ ಸೌಂದರ್ಯ ರಾಶಿ ಕಣ್ತುಂಬಾ ನೋಡಿ ಕಣ್ಣು ಕತ್ತಲೆ ಬಂದಮೇಲೆ ನೀನು ಮೆಲ್ಲಗೆ, ಯಾರಿಗೂ ಸುಳಿವು ಹತ್ತದಂತೆ, ಆ ಸ್ಥಳದಿಂದ ಎದ್ದು ಹೋಗಬಹುದು. ಒಂದು ವಿಷಯದ ಕುರಿತು ಮಾತ್ರ ನೀನು ಅತ್ಯಂತ ಜಾಗರೂಕನಾಗಿರತಕ್ಕದ್ದು. ಅಪ್ಪಿತಪ್ಪಿ ಕೆಮ್ಮು ಇಲ್ಲವೆ ಸೀನು ಬಾರದಂತೆ ನೋಡಿಕೊಂಡರಾಯಿತು. ಏನಾದರೂ ಸದ್ದಾಯಿತೆಂದರೆ ಕೆಲಸ ಕೆಟ್ಟು ಪ್ರಮಾದವಾಗುವ ಸಂಭವವಿದೆ" ಎಂದು ದೊರೆಯು ಹೇಳುತ್ತಿರುವಾಗ ಮೂಕನಂತೆ ಎಲ್ಲವನ್ನೂ ಕೇಳುತ್ತ ಗೈಗ್ಸ್ ಸ್ತಬ್ಧವಾಗಿ ನಿಂತಿದ್ದನು.

"ಒಂದು ವೇಳೆ ನನ್ನ ಪತ್ತೆ ಹತ್ತಿತೆಂದರೆ ಅದರಿಂದ ಪರಿಣಾಮವೇನಾಗಬಹುದೆಂಬುದನ್ನು ನಾನು ಬಲ್ಲೆ ಪ್ರಭೋ! ಕಾಲ ಬರುವ ಮುನ್ನ ನಾನು ಇಹ ತೊರೆಯಬೇಕಾದ ಪ್ರಸಂಗ ಒದಗಬಹುದು. ಆದುದರಿಂದ ಮೊಣಕಾಲೂರಿ ಬೇಡುತ್ತೇನೆ, ಇಂತಹ ದುರ್ಧರ ಪ್ರಸಂಗ ಒತ್ತಾಯದಿಂದ ನನ್ನ ಮೇಲೆ ಹೇರಬೇಡಿ. ಮಹಾರಾಜ್ಞಿಯವರ ಕುರಿತು ನನಗೆ ತುಂಬಾ ಪೂಜ್ಯಭಾವನೆಯಿದೆ. ಅವರ ಭಾವನೆಗಳನ್ನು ಕೆಣಕಿಸಬಾರದೆಂದೂ ಮನಸ್ಸು ಹೇಳುತ್ತದೆ. ಆದುದರಿಂದ ಕ್ಷಮಿಸಬೇಕು ಒಡೆಯಾ" ಎಂದು ಗೈಗ್ಸ್ ಅಂಗಲಾಚಿ ಬೇಡಿಕೊಂಡಾಗಲೂ ಅರಸನು ಛಲ ಬದಲಾಯಿಸಿದಂತೆ ಕಂಡು ಬರಲಿಲ್ಲ.

"ಗೈಗ್ಸ್, ಇದು ಮನವಿಯಲ್ಲ, ರಾಜಾಜ್ಞೆ. ನೀನು ಈ ದಿನ ರಾತ್ರಿಯೇ ನಮ್ಮ ಶಯ್ಯಾಗಾರದ ಬಳಿ ಬರಬೇಕು. ನಾನು ಸೂಚಿಸಿದ ಕಡೆಯಲ್ಲಿ ಬಂದು ನಿಲ್ಲಲೇ ಬೇಕು. ಈಗ ಹೋಗಬಹುದು" ಎನ್ನುತ್ತ ಕೆಂಡೊಲಸ್ ಮುಖ್ಯ ದಳಪತಿಗೆ ಕಟ್ಟಾಣತಿಯಿತ್ತು ಕಳುಹಿಸಿದನು.

ಕಾಲು ಶತಮಾನದ ಯುದ್ಧ ಅನುಭವವಿದ್ದ ವೀರ ಸೇನಾನಿ ಗೈಗ್ಸ್. ಹಲವು ವಿಜಯಗಳ ಕೀರ್ತಿಯನ್ನೂ ಆತ ಸಂಪಾದಿಸಿದ್ದ. ಆದರೆ ರಾಜ ರಾಣಿಯರ ಶಯ್ಯಾಗಾರದ ಬಳಿ ಅಡಗಿ ನಿಂತು, ಕಳ್ಳಾಟಿಕೆಯಿಂದ ರಾಣಿಯ ಅಂಗ ಸೌಂದರ್ಯ ಕಾಣುವುದೆಂದರೆ, ಪಾಪ, ಅವನಿಗೆ ಧೈರ್ಯಸಾಲದಾಯಿತು. ಅರಸನ ಆಜ್ಞೆಯನ್ನು ಮನ್ನಿಸಿ ಆ ರಾತ್ರಿ ಗೈಗ್ಸ್ ಶಯ್ಯಾಗಾರದ ಬಳಿ ಒಂದು ಮೂಲೆಯಲ್ಲಿ ನಿಂತು ಬಾಗಿಲ ಸಂದಿನೆಡೆಯಿಂದ ರಾಣಿಯ ಅಂಗಸೌಂದರ್ಯ ಪಾನಮಾಡುತ್ತಿದ್ದ. ಸುರಸುಂದರಿಯಂತಿದ್ದ ನಿಸ್ಸಿಯಾಳ ನಗ್ನ ಸೌಂದರ್ಯ ಕಂಡು ಸೇನಾನಿಗೆ ತಲೆ ತಿರುಗಿತು. ಅಂಗಾಂಗಗಳೆಲ್ಲಾ ಕಂಪಿಸತೊಡಗಿದುವು. ಆ ನೋಟ ಇನ್ನೂ ಕೊನೆಗೊಳ್ಳಲಿಲ್ಲ. ರಾಣಿಯ ಸುಂದರ ನಯನಾಲಿಗಳು ಬಾಗಿಲ ಸಂದಿನೆಡೆಯಿಂದ ತನ್ನ ದೃಷ್ಟಿ ಸಂಧಿಸಿದಂತೆ ಸೇನಾನಿಗೆ ಭಾಸವಾಯಿತು. ಮರುಗಳಿಗೆಯಲ್ಲಿ ಮಿಂಚಿನ ಜ್ಯೋತಿಯೊಂದು ಆ ಕಣ್ಣಾಲಿಗಳಲ್ಲಿ ಮಿಂಚಿದಂತೆಯೂ ಆತನಿಗೆ ಕಂಡಿತು. ತನ್ನ ಗುಪ್ತಕಾರಬಾರು ರಾಣಿಗೆ ತಿಳಿಯಿತೆಂಬುದು ಗೈಗ್ಸನಿಗೆ ಸ್ಪಷ್ಟವಾಯಿತು. ಆ ಸುಂದರ ನಯನಯುಗ್ಮಗಳು ಕೆಂಡ ಕಾರದಿರಲಾರವೆಂದೂ ಅವನಿಗೆ ದೃಢವಾಯಿತು.

ಆ ರಾತ್ರಿ ಪರ್ಶಿಯನ್ ಸುಂದರಿ ನಿಸ್ಸಿಯಾ ಯಾವ ರೀತಿಯಲ್ಲಿ ಕಳೆದಳೊ! ಯಾವ ರೀತಿಯ ಭಾವನೆಯ ಹೊಯ್ದಾಟ ಬಡಿದಾಟಗಳು ಅವಳ ಹೃದಯಾಂತರಾಳದಲ್ಲಿ ನಡೆದು ಹೋದುವೋ! ಮನಃಶ್ಶಾಸ್ತ್ರವಿಶಾರದನಿಗೆ ಮಾತ್ರ ಆ ಭಾವನೆಗಳ ಚಿತ್ರವೊಂದನ್ನು ಕಲ್ಪಿಸಲು ಸಾಧ್ಯ.

ಮರುದಿನ ಸಂಜೆ ರಾಣಿಯ ಮುಂದೆ ಮುಖ್ಯ ಸೇನಾನಿಯು ಹಾಜರಾಗಬೇಕೆಂಬ ಆಜ್ಞೆಯೊಂದು ಅಂತಃಪುರದ ಕಡೆಯಿಂದ ಹೊರಟಿತು. ಕೈಕಟ್ಟಿ, ತಲೆತಗ್ಗಿಸಿ ಸೇನಾನಿಯು ರಾಣಿಯ ಮುಂದೆ ಹಾಜರಾದ. ರಾಣಿಯಾಗಿ ಸಾರ್ಡಿಸ್ ಪಟ್ಟಣ ಸೇರಿದ ಮೇಲೆ ಇದೀಗ ಮೊದಲ ಬಾರಿ ನಿಸ್ಸಿಯಾ ಬುರಕಿ ಇಲ್ಲದೆ ಓರ್ವ ಪರಪುರುಷನ ಮುಂದೆ ಕಾಣಿಸಿಕೊಂಡಳು.

ಕೋಪ ಇಲ್ಲವೆ ನಾಚಿಕೆಯ ಒಂದಿಷ್ಟು ಸುಳಿವೂ ತೋರದೆ 'ವೀರ ಸೇನಾನಿ!' ಎಂದು ಗೈಗ್ಸನನ್ನು ಆಕೆ ಸಂಬೋಧಿಸುತ್ತ ನೇರಾಗಿ ವಿಷಯವನ್ನು ಅವನ ಮುಂದೆ ಬಿಚ್ಚಿಹೇಳಿದಳು. "ನಿನ್ನೆ ರಾತ್ರಿ ನಮ್ಮ ಶಯ್ಯಾಗಾರದ ಬಳಿ ಕಳ್ಳಾಟಿಕೆಯಿಂದ ನನ್ನ ಅಂಗಸೌಂದರ್ಯ ನೀನು ಪಾನಮಾಡಿದುದು ನನ್ನ ಅವಗಾಹನೆಗೆ ಬಂದಿರುತ್ತದೆ. ಅರಸನಿಗೊಬ್ಬನಿಗಲ್ಲದೆ ಇತರ ಯಾರಿಗೂ ಕಾಲೂರಲು ಆಸ್ಪದವಿಲ್ಲದಂತಹ ಸ್ಥಳವನ್ನು ನೀನು ಆಕ್ರಮಿಸಿದೆ ಅಲ್ಲವೇ?" ಎಂದು ಕೇಳಿದಳು.

ಒಂದು ಕ್ಷಣವಾದರೂ ಮುಖವನ್ನೆತ್ತಿ ರಾಣಿಯ ಕಡೆಗೆ ನೋಡದೆ ಗೈಗ್ಸ್ ನಡೆದ ಕಥೆ ಎಲ್ಲವನ್ನೂ ರಾಣಿಗೆ ವಿವರಿಸಿದನು.

"ಮಹಾರಾಜ್ಞಿ, ಅರಸನ ಕಟ್ಟಾಜ್ಞೆ ಮನ್ನಿಸಿ ಅಂತಹ ಹೇಯ ಕಾರ್ಯ ಕೈಕೊಳ್ಳಬೇಕಾಯಿತು. ಅನ್ಯಥಾ ಅಲ್ಲ. ನನ್ನನ್ನು ಕ್ಷಮಿಸಿ" ಎಂದು ಸೇನಾನಿ ವಿನೀತನಾಗಿ ಬೇಡಿಕೊಂಡನು.

"ಗೈಗ್ಸ್! ನಾನು ಪರ್ಶಿಯನ್ ಸ್ತ್ರೀ ಇರುವೆ. ಪರ್ಶಿಯನ್ ಉಚ್ಚ ರಾಜಮನೆತನದ ರಕ್ತ ನನ್ನ ದಮನಿಗಳಲ್ಲಿ ಹರಿಯುತ್ತಿದೆ. ಕುಲೀನ ಸ್ತ್ರೀಯರಿಗೆ ಹೇಳಿದ ಗೌರವಪ್ರತಿಷ್ಠಗಳಿಗೆ ಪರ್ಶಿಯನ್ ಜನಾಂಗ ಹೆಸರು ಹೋದುದು. ಅಂತೆಂದು ಗ್ರೀಕರಾದ ನಿಮ್ಮ ಆಚಾರವಿಚಾರಗಳು ಈ ಕಡೆ ತೀರಾ ವಿರುದ್ಧವಾಗಿವೆ. ಅವಿವಾಹಿತ ಸ್ಪಾರ್ಟಾ ಕನ್ಯೆಯರು ದಯಾನಾ ದೇವತೆಯ ವೇದಿಕೆಯ ಮುಂದೆ ಬುರಕಿ ಇಲ್ಲದೆ ಬಹಿರಂಗವಾಗಿ ನರ್ತಿಸಲು ಯಾರೂ ಅಡ್ಡಿಮಾಡುವುದಿಲ್ಲ. ಆದರೆ ಪರ್ಶಿಯನ್ ಸ್ತ್ರೀ, ಆಕೆ ತನ್ನ ಪತಿ ಹೊರತು ಇತರ ಪುರುಷರಿಗೆ ತನ್ನ ಕಾಲ ಅಂಗುಷ್ಟವನ್ನೂ ತೋರಿಸಲಾರಳು. ಆದರೆ ಈಗ ಎರಡು ಜೊತೆ ಕಣ್ಣುಗಳು ನನ್ನ ನಗ್ನಸೌಂದರ್ಯ ಪಾನಮಾಡಿದಂತಾಯಿತು. ನನ್ನ ನಗ್ನತೆಯನ್ನು ಇಬ್ಬರು ಭುಂಜಿಸಿದಂತಾಯಿತು. ಆದುದರಿಂದ ವೀರ ಯೋಧನೆ ಇಬ್ಬರಲ್ಲಿ ಒಬ್ಬರು ಸಾಯಲೇ ಬೇಕು. ನೀನು ನಿನ್ನ ...ಕ್ಕಿಂತಲೂ ಅತಿಶಯವಾಗಿ ಅರಸನನ್ನು ಪ್ರೀತಿಸುವು... ನಿನ್ನನ್ನೇ ನೀನು ಕೊಂದು ಪ್ರಾಯಶ್ಚಿತ್ತಮಾಡಿಕೊಳ್ಳ...ಗಿದೆ. ಅರಸನಿಗಿಂತ ನಿನ್ನ ಅಮೂಲ್ಯ ಪ್ರಾಣವನ್ನು ಅಧಿಕವಾಗಿ ಯಾಚಿಸುವುದಾದರೆ, ನಿನ್ನ ಅರಸ ಹಾಗು ಪತಿದೇವನನ್ನು ನೀನು ಕೊಲ್ಲಬೇಕಾಗಿದೆ. ನನ್ನ ಗಂಡ... ನೀನು ಕೊಂದಿಯೆಂದರೆ ನಾನು ನಿನ್ನವಳಾಗುವೆ. ಈ... ...ರಲ್ಲಿ ಯಾವುದನ್ನು ಆರಿಸುವೆ, ಬೇಗ ಹೇಳು" ಎಂದು ತೀರ್ಪು ಕೊಟ್ಟಳು.

ಈ ಕಠಿಣ ನಿರ್ಣಯವನ್ನು ಬದಲಾಯಿಸಬೇ... ಸೇನಾನಿ ಪರಿಪರಿಯಾಗಿ ಬೇಡಿಕೊಂಡುದೂ ನಿಷ್ಫ... ಆಯಿತು.

"ನೀನು ನಿನ್ನ ಪತಿಯನ್ನು ಪ್ರೀತಿಸುವುದಿಲ್ಲ... ಗೈಗ್ಸನ ಪ್ರಶ್ನೆ.

"ಪತಿಗಿಂತಲೂ ಹೆಚ್ಚಿಗೆ ನಾನು ನನ್ನ ಮಾನ... ಪ್ರೀತಿಸುತ್ತೇನೆ" ನಿಸ್ಸಿಯಾಳ ಉತ್ತರ.

ರಾಣಿಯು ತನ್ನ ಮುಂದಿಟ್ಟ ಶರ್ತಗಳಲ್ಲಿ ಯಾವು... ಆರಿಸುವುದೆಂಬುದರ ಕುರಿತು ಗೈಗ್ಸನ ಮನಸ್ಸಿನಲ್ಲಿ ... ಹೋರಾಟವೇ ನಡೆಯಿತು. ಕೆಂಡೊಲಸನನ್ನು ಕೊ... ನಿಸ್ಸಿಯಾ ತನ್ನವಳಾಗುವಳೆಂಬ ಆ ಆಶೆ ಅರಸನ ಮೇ... ಅಸಾಧಾರಣ ಸ್ವಾಮಿಭಕ್ತಿಯನ್ನೂ ಕೊನೆಗೆ ಗೆದ್ದಿತು.

"ಮಹಾರಾಜ್ಞಿ, ರಕ್ತದ ಹೊಳೆ ಹರಿಯಲೇಬೇ... ನೀನು ಅಪೇಕ್ಷಿಸುವುದಾದರೆ ಅದು ನನ್ನ ದಮನಿಗ... ಹರಿಯುವುದು ಬೇಡ. ನಾನು ಇನ್ನೂ ತಾರುಣ್ಯದ ಹೊ... ದಾಟಿಲ್ಲ. ಸಿದ್ಧಿಸದ ಹಲವು ಆಕಾಂಕ್ಷೆಗಳು ನನ್ನ... ಎಂದು ಸೇನಾನಿಯು ತನ್ನ ಮನೋ ನಿರ್ಧಾರಕ್ಕೆ ... ಗೊಟ್ಟಾಗ ನಿಸ್ಸಿಯಾಳ ಕೆಂದುಟಿಗಳೆಡೆಯಿಂದ ಒಂದು ... ನಗೆ ಝುಗ್ಗೆಂದಿತು. ಉಟ್ಟ ವಸ್ತ್ರದೆಡೆಯಲ್ಲಿ ಬಚ್ಚಿಟ್ಟದ್ದ... ...ವಾದ ಹೊಳೆಯುವ ಕಠಾರಿಯೊಂದನ್ನು ಆಕೆ ಗೈಗ್ಸನ ಕೈ... ಕೊಟ್ಟು, "ನೋಡು, ನಿನ್ನೆ ಎಲ್ಲಿ ನಿಂತು ನನ್ನ ಅಂಗ... ...ದರ್ಯ ಪಾನಮಾಡಿದೆಯೋ ಅಲ್ಲಿಯೇ ಈ ಕಠಾರಿ ... ಈ ದಿನ ರಾತ್ರಿ ನೀನು ನಿಲ್ಲಬೇಕು. ಅರಸನಿಗೆ ನಿದ್ದೆ... ...ದೊಡನೆ ನಿನಗೆ ಸಂಜ್ಞೆ ಕೊಡುವೆ. ಕಾರ್ಯೋನ್ಮುಖನಾ... ಹಿಂಜರಿಯಬೇಡ. ನಿನ್ನ ಕೈ ನಡುಗದಿರಲಿ. ಒಂದೇ ... ...ದೊಳಗೆ ಯಾವೊಂದು ರೀತಿಯ ಶಬ್ದ, ಆರ್ತನಾದ, ... ಅಳುವಿನ ಧ್ವನಿ ಕೂಡಾ ಇಲ್ಲದಂತೆ ಕೆಲಸ ಮುಗಿಯಬ... ನಡುವೆ ಎಲ್ಲಿಯಾದರೂ ನಿರ್ಧಾರ ಬದಲಾಯಿಸಿದೆ ... ಜಾಗ್ರತೆ, ನಿನ್ನ ಪರಿಣಾಮ ನೆಟ್ಟಗಾಗದು. ನಡು ರಾ... ತನಕ ನೀನು ನನ್ನ ಶಯ್ಯಾಗಾರದ ಬಳಿಯಲ್ಲೇ ಇರತ...

ಕಾವ್ಯದ ಆತ್ಮ ಯಾವುದು?

ಲೇಖಕರು: ಶ್ರೀಗುಹ.

ನಮ್ಮ ಆಲಂಕಾರಿಕರು ಮಾನವಧರ್ಮಗಳಲ್ಲಿ ಕೆಲವನ್ನು ಾವ್ಯಕ್ಕೂ ಆರೋಪಿಸುತ್ತಾರೆ. ಗುಣಾಲಂಕಾರಗಳು ನಮ ಂತೋ ಅಂತೇ ಕಾವ್ಯಕ್ಕೂ ಕಳೆಗೊಡುತ್ತವೆಯೆಂದು ಅವರ ಭಿಪ್ರಾಯ. ಆದರೆ ಮಾನವನಲ್ಲಿಯೂ ಆತ್ಮದಂತೆ ಕಾವ್ಯ ಲ್ಲಿ ಪ್ರಧಾನವಾಗಿರುವುದೇನು?—ಎಂಬ ಪ್ರಶ್ನೆಗೆ ಉತ್ತರ ೊಡುವುದು ತುಂಬ ಕಷ್ಟ.

ಅಲಂಕಾರ ಶಾಸ್ತ್ರಕ್ಕೆ ಪ್ರಥಮಾಚಾರ್ಯ ನಾಟ್ಯಶಾಸ್ತ್ರ ರ್ತೃವಾದ ಭರತ ಮುನಿ. ಈತನು ಆಲಂಕಾರಿಕನಾದರೂ ಾವ್ಯ ಸಾಮಾನ್ಯ ವಿಷಯವನ್ನಾಗಲಿ, ಕಾವ್ಯಾತ್ಮಕ ವಿಚಾರ ವನ್ನಾಗಲಿ ಚರ್ಚಿಸಿರುವುದಿಲ್ಲ. ನಾಟ್ಯ ವಿಚಾರವೇ ಆತನಿಗೆ ಲಕ್ಷ್ಯ. ಈ ಭರತನಿಂದ ಮೊದಲ್ಗೊಂಡು ಧ್ವನ್ಯಾಲೋಕ ಾರನಾದ ಆನಂದವರ್ಧನನ ವರೆಗೂ ಮಧ್ಯದಲ್ಲಿದ್ದ ಆಲಂ ಾರಿಕರಲ್ಲಿ ಭಟ್ಟ ವಾಮನನೊಬ್ಬನನ್ನು ಬಿಟ್ಟು ಮತ್ತಾರೂ ಾವ್ಯಾತ್ಮಕ ವಿಷಯವನ್ನು ಉದ್ಧರಿಸಿಲ್ಲ. ಅವರಾರೂ ಕಾವ್ಯಕ್ಕೆ ಾತ್ಮವೊಂದುಂಟೆಂದು ತಿಳಿದಿದ್ದಂತೆಯೇ ಭಾಸವಾಗುವುದಿಲ್ಲ. ಭಟ್ಟ ವಾಮನನು ಮಾತ್ರ 'ಕಾವ್ಯಾಲಂಕಾರ ಸೂತ್ರವೃತ್ತಿ' ಯುಲ್ಲಿ 'ರೀತಿರಾತ್ಮಾ ಕಾವ್ಯಸ್ಯ' ಎಂದು ಸ್ವಲ್ಪ ಹೇಳಿ ಸುಮ್ಮ ಾದನು. ಈ ಸೂತ್ರವನ್ನು ಹಿಡಿದು ವಾಮನನು ಕಾವ್ಯಾತ್ಮ ವನ್ನು ನಿಶ್ಚಯಿಸಿರುವನೆಂದು ಕೆಲವರು ಅಭಿಪ್ರಾಯ ಪಡು ವರು. ಆದರೆ ಪರಿಶೀಲಿಸಿದರೆ ಆತನ ಮತದಲ್ಲಿ ಗುಣಗಳಿಗಿರುವ ಪ್ರಾಧಾನ್ಯತೆ ರೀತಿಗಳಿಗಿಲ್ಲವೆಂದು ತೋರದಿರದು.

ಆನಂದವರ್ಧನನು ಚೆನ್ನಾಗಿ ವಿಮರ್ಶಿಸಿ 'ಕಾವ್ಯಸ್ಯಾ-ತ್ಮಾಧ್ವನಿಃ'—ಕಾವ್ಯಕ್ಕೆ ಧ್ವನಿಯೇ ಆತ್ಮ—ಎಂದು ವಿಸ್ತಾರ ವಾಗಿ ವಿವರಿಸಿರುತ್ತಾನೆ. ಆತನ ಬಳಿಕ ಕೆಲವರು ಆತನ ಮತವನ್ನು ಅಂಗೀಕರಿಸದಿದ್ದರೂ ತಂತಮ್ಮ ಮತಗಳಲ್ಲಿ ಕಾವ್ಯಕ್ಕೆ ಆತ್ಮವೆಂದು ಯಾವುದೋ ಒಂದನ್ನೂ ಹೇಳುತ್ತಲೇ ಬಂದರು.

ಭರತಾದಿಗಳು ಕಾವ್ಯಾತ್ಮವನ್ನು ಕುರಿತು ಏನನ್ನೂ ಹೇಳದಿದ್ದರೂ ಅವರ ಗ್ರಂಥಗಳನ್ನು ವಿಚಾರಮಾಡಿ ಕೆಲ ಮಂದಿ ಅರ್ವಾಚೀನಾಲಂಕಾರಿಕರು ತಂತಮ್ಮ ಮತಗಳಲ್ಲಿ ಪ್ರಧಾನವಾದುವನ್ನೂ ಕಾವ್ಯಾತ್ಮವನ್ನಾಗಿ ನಿರ್ಣಯಿಸತೊಡಗಿ ದರು. ಅಂಥವರಲ್ಲಿ ಫಿಶಲ್, ಜಾಕೋಬಿ, ನೊಬುಲ್ ಮೊದ ಲಾದ ಪಾಶ್ಚಾತ್ಯ ಪಂಡಿತರು, ಹರಪ್ರಸಾದ ಶಾಸ್ತ್ರಿ, ಕಾಣೆ, ಡೆ ಮೊದಲಾದ ನಮ್ಮ ಪಂಡಿತರೂ ಮುಖ್ಯರಾದವರು. ಇಂದಣ ಪರಿಶೋಧಕರಲ್ಲಿ ಬಹಳ ಮಂದಿ ಅವರ ದಾರಿಯನ್ನೇ ಅನುಸರಿಸಿದ್ದಾರೆ.

ಭರತನ ಮತದಲ್ಲಿ ನಾಟ್ಯ, ಭಾಮಾಹನಮತದಲ್ಲಿ ಅಲಂ

ಲ್ಲಿಯಾದರೂ ಬೇರೆ ಕಡೆಗೆ ಕದಲುವ ಹಂಚಿಕೆ ಹೂಡಿದೆ ಯೆಂದರೆ ಕೂಡಲೇ ಅರಸನನ್ನು ಎಚ್ಚರಿಸುವೆನು. ರಾಣಿಯ ಶಯ್ಯಾಗಾರದಲ್ಲಿ ಕಠಾರಿ ಹಿಡಿದು ನಿಂತ ನಿನ್ನನ್ನು ಅರಸನು ಕಂಡನೆಂದರೆ ಪ್ರಾಯಶ್ಚಿತ್ತವೇನೆಂಬುದನ್ನು ನಾನು ಬೇರೆ ಹೇಳ ಬೇಕಾಗಿಲ್ಲವಷ್ಟೆ" ನಿಸ್ಸಿಯಾ ಕಾರ್ಯಕ್ರಮ ವಿವರವಾಗಿ ತಿಳಿಸಿ ದಳು. ರಾಣಿಗೆ ಮುಜ್ರೆ ಮಾಡಿ ಗೈಗ್ಸ್ ಅಂತಃಪುರದಿಂದ ಹೊರಬಿದ್ದನು.

●

ನಿಸ್ಸಿಯಾ ತನ್ನ ರಾಣಿಯಾಗುವಳು. ತಾನು ಸಾರ್ಡಿಸ್ ಪಟ್ಟಣದ ದೊರೆಯಾಗುವೆ ಎಂಬ ಆ ಸುಂದರ ಕಲ್ಪನಾಚಿತ್ರ ಗೈಗ್ಸ್‌ನಿಗೆ ಆ ಪೈಶಾಚಿಕ ಹೊಲೆಕೃತ್ಯವನ್ನು ಯಶಸ್ವಿಯಾಗಿ ಪೂರೈಸುವಂತೆ ಸ್ಫೂರ್ತಿ ಚೇತನಗಳನ್ನು ಕೊಟ್ಟಿತು.

ಆ ರೀತಿ ಅರಸ ಕೆಂಡೊಲಸ್ ಅಕಾಲದಲ್ಲಿ ಅವಸಾನ ಮುದ್ದಿಸಬೇಕಾಯಿತು. ಪರಪುರುಷರ ಮುಂದೆ ಬುರುಕಿ ಕೂಡಾ ಎತ್ತದಷ್ಟು ಅಖಂಡ ಪತಿವ್ರತೆಯಾದ ನಿಸ್ಸಿಯಾ ಆ ರೀತಿ ತನ್ನ ಸ್ವಂತ ಪತಿಯ ಕೊಲೆಪಾತಕಿಯಾದಳು—ತನ್ನ ಸ್ವಂತ ಶಯ್ಯಾಗಾರದಲ್ಲೇ ಮೋಸದಿಂದ ಪತಿಯ ಕೊಲೆ ಯಾಗುವ ಹೇಯ ಕೃತ್ಯದಲ್ಲಿ ಸಹಕಾರಿಣಿಯಾದಳು. ಎಂತಹ ವಿಚಿತ್ರ ಸೇಡು! ಎಂತಹ ಭಯಾನಕ ಶಿಕ್ಷೆ!! ಆದರೇನು? ಈ ಕೊಲೆ, ಈ ಶಿಕ್ಷೆ, ಓರ್ವ ಕುಲೀನ ಸ್ತ್ರೀ ತನ್ನ ವಂಶಪರಂಪರೆಯ ಗೌರವ ಕಾಯುವುದಕ್ಕೆ ಬೇಕಾಗಿ ಗೈದಳು ಎನ್ನುವಾಗ ಮಾತ್ರ ಆ ಕೊಲೆಯಲ್ಲಿ ಹೊಲೆ ತೋರುವುದಿಲ್ಲ; ಆ ಸೇಡಿನಲ್ಲಿ ಕೇಡು ಕಾಣುವುದಿಲ್ಲ.

[ಆಧಾರದಿಂದ.]

—:*:—

ಕಾರ, ದಂಡಿಯ ಮತದಲ್ಲಿಯೂ, ವಾಮನನ ಮತದಲ್ಲಿಯೂ ರೀತಿ, ಉದ್ಭಟ ಮತ್ತು ರುದ್ರಟ ಮತಗಳಲ್ಲಿ ಅಲಂಕಾರಗಳೂ ಪ್ರಧಾನಗಳೆಂದು ಒಂದು ರೀತಿ ಸಿದ್ಧಾಂತವಾಗುತ್ತದೆ. ಕೆಲವರು ಭರತನ ಮತದಲ್ಲಿ ರಸವೇ ಪ್ರಧಾನವೆನ್ನುತ್ತಾರೆ. ದಂಡಿಯು ಅಲಂಕಾರವಾದಿಯೆಂದು ಕೆಲವರೂ, ಗುಣವಾದಿಯೆಂದು ಮತ್ತೆ ಕೆಲವರೂ ಅಭಿಪ್ರಾಯ ಪಡುತ್ತಾರೆ.

ಯಾವ ಗ್ರಂಥದಲ್ಲಿ ಯಾವ ವಿಷಯವು ವಿಸ್ತಾರವಾಗಿರುವುದೊ ಅದರಲ್ಲಿ ಆ ವಿಷಯಕ್ಕೇ ಪ್ರಾಧಾನ್ಯವೆಂದು ನಮ್ಮ ವಿಮರ್ಶಕರು ನಿಶ್ಚಯಿಸಿರಬಹುದು. ಭರತನ ಗ್ರಂಥದಲ್ಲಿ ನಾಟ್ಯ ಚರ್ಚೆಯೂ, ಭಾಮಹ ಮತ್ತು ಉದ್ಭಟರ ಗ್ರಂಥಗಳಲ್ಲಿ ಅಲಂಕಾರ ಚರ್ಚೆಯೂ ಅಧಿಕವಾಗಿರುತ್ತದೆ.

ದಂಡಿ ಮತ್ತು ವಾಮನರ ಗ್ರಂಥಗಳಲ್ಲಿ ಕ್ರಮವಾಗಿ ಗುಣ ರೀತಿ ವಿಚಾರವು ಬಹಳ ಕಡಮೆಯಾಗಿದೆ. ಆದರೂ ದಂಡಿಯು, "ಇತಿ ವೈದರ್ಭಮಾರ್ಗಸ್ಯ ಪ್ರಾಣಾದಶಗುಣಾಃ ಸ್ಮೃತಾಃ"ಎಂದು ಹೇಳಿರುವುದರಿಂದಲೂ, ವಾಮನನು "ರೀತಿ-ರಾತ್ಮಾಕಾವ್ಯಸ್ಯ" ಎಂದು ಪ್ರತಿಪಾದಿಸಿರುವುದರಿಂದಲೂ ಆಯಾ ಮತಗಳು ಗುಣ-ರೀತಿ-ಪ್ರಾಧಾನ್ಯಪ್ರತಿಪಾದಕಗಳೆಂದು ಅರ್ವಾಚೀನ ವಿಮರ್ಶಕರ ಆಶಯ.

ಆದರೆ ಇವುಗಳೇ ಸಿದ್ಧಾಂತಗಳೆಂದು ತಿಳಿದು ತೃಪ್ತಿಪಡದೆ ಪರಿಶೋಧನೆ ಮಾಡುತ್ತ ಹೋದರೆ ಇನ್ನೂ ಕೆಲ ಸಂಗತಿಗಳು ಹೊರಪಡುತ್ತವೆ.

ಕಾವ್ಯದ ಪರಮ ಪ್ರಯೋಜನ ರಸ. ರಸಪ್ರಾಧಾನ್ಯವಿಲ್ಲದ ಕಾವ್ಯ ಅಧಮ ಕಾವ್ಯವಾಗುತ್ತದೆ. ಆದ್ದರಿಂದ ಯಾರ ಮತದಲ್ಲಿ ಯಾವುದೇ ಪ್ರಧಾನವಾದರೂ ರಸಕ್ಕಿರುವ ಪ್ರಾಧಾನ್ಯವು ಮಾತ್ರ ಕಳೆದುಹೋಗುವುದಿಲ್ಲ. ಸೂಕ್ಷ್ಮ ವಿಮರ್ಶಕ ದೃಷ್ಟಿಯಿಂದ ನೋಡಿದರೆ ನಮ್ಮ ಆಲಂಕಾರಿಕರೆಲ್ಲರೂ ಐಕಕಂಠ್ಯದಿಂದ ಈ ವಿಷಯವನ್ನು ಒಪ್ಪಿದ್ದಾರೆ. ಈ ಮಾತಿಗೆ ಅವರ ಗ್ರಂಥಗಳೇ ಪ್ರಮಾಣಗಳು.

೧. ನಾಟ್ಯಶಾಸ್ತ್ರದಲ್ಲಿ ಮುಖ್ಯ ವಿಷಯ ನಾಟ್ಯವಾದರೂ ಅಲ್ಲಿ ರಸವೇ ಪ್ರಧಾನ. ರಸತತ್ತ್ವವನ್ನೂ ಸೂತ್ರರೂಪವಾಗಿ ತಿಳಿಸಿ ಭರತನು ಅದರ ಪ್ರಾಧಾನ್ಯವನ್ನೂ ಪ್ರಕಟಪಡಿಸಿರುತ್ತಾನೆ. "ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ" ಎಂಬ ಸೂತ್ರವೇ ಹಲವರಿಗೆ ಮಾರ್ಗದರ್ಶಕವಾಗಿ ಅನೇಕ ಮತಗಳು ಹುಟ್ಟಲು ಕಾರಣವಾಗಿದೆ. ಭರತನ ಮತದಲ್ಲಿ ಪ್ರಧಾನವಾಗಿರುವ ನಾಟ್ಯವು ರಸಾಭಿನ್ನವೇ ಆಗುತ್ತದೆ ಎಂದು ಆತನ ಹೃದಯವೆಂದು ಅರಿತ ವ್ಯಾಖ್ಯಾತೃ ಅಭಿನವ ಗುಪ್ತನು ವಿವರಿಸಿರುವನು.[೧] ಆದ್ದರಿಂದ ಭರತನು ತಾನು ಪ್ರಧಾನವೆಂದುಕೊಂಡ ನಾಟ್ಯದಲ್ಲಿಯೇ ರಸವನ್ನೂ ಅಂತರ್ಭಾವಿಸುವಂತೆ ಮಾಡಿ ತನ್ನ ಮತದಲ್ಲಿ ರಸಪ್ರಾಧಾನ್ಯ ಲೋಪವಾಗಲಿಲ್ಲವೆಂದು ಹೇಳಬಹುದು.

೨. ಭಾಮಹನು ಅಲಂಕಾರ ವಿಷಯಗಳನ್ನೇ ಹೆಚ್ಚ... ಹೇಳಿದ್ದಾನೆ. ಕಾವ್ಯಕ್ಕೆ ಶೋಭೆಯನ್ನುಂಟುಮಾಡು... ಅಲಂಕಾರಗಳೆಂದೇ ಆತನ ಮಾತು.[೨] ಆತನು ರಸವ... ತಾನು ಪ್ರಧಾನಗಳೆಂದುಕೊಂಡ ಅಲಂಕಾರಗಳಲ್ಲಿಯೆ ... ಗಿಸಿದ್ದಾನೆ.[೩] ಆದ್ದರಿಂದ ಆತನ ಮತದಲ್ಲಿ ರಸಕ್ಕಿ... ಪ್ರಾಧಾನ್ಯ ಕಡಮೆಯಾಗಲಿಲ್ಲವೆಂದೇ ಹೇಳಬೇಕು.[೪] ... ಆತನ ಗ್ರಂಥದಲ್ಲಿ ರಸಚರ್ಚೆ ಕಡಮೆಯಾಗಿಯೂ, ಅಲಂ... ಚರ್ಚೆ ಹೆಚ್ಚಾಗಿಯೂ ಇರುವುದೆನ್ನಬಹುದು.

೩. ದಂಡಿಯು ಭಾಮಹನಂತೆಯೆ ಅಲಂಕಾರಗ... ಹೆಚ್ಚು ಪ್ರಾಧಾನ್ಯವನ್ನು ಹೇಳಿರುತ್ತಾನೆ. ಇದರಿಂದ ... ಮತದಲ್ಲಿ ಅಲಂಕಾರವೇ ಪ್ರಧಾನವೆಂದು ಕೆಲವರು ತಿಳಿ... ತ್ತಾರೆ. ಕೆಲವರಾದರೋ ಇವನು ವಿವರಿಸುವ ರೀತಿ ವಿ... ವನ್ನು ಹಿಡಿದು ನೋಡಿದರೆ ರೀತಿ ಇವನ ಮತದಲ್ಲಿ ಪ್ರ... ಎಂದು ಭಾವಿಸಿದರು.[೫] ಆತನು ವೈದರ್ಭ ಗೌಡ ಮಾ... ಗಳೆರಡನ್ನೂ (ರೀತಿ) ವಿವರಿಸಿರುತ್ತಾನೆ. ಆದರೆ ಆಸ... ಗುಣಗಳುಳ್ಳ ವೈದರ್ಭಿಯನ್ನೇ ಅಂಗೀಕರಿಸಿರುತ್ತಾನೆ. ಗ... ರೀತಿಯನ್ನು ಅಂಗೀಕರಿಸದಿರುವುದರಿಂದ ಗುಣಗಳೇ ... ಮತದಲ್ಲಿ ಪ್ರಧಾನಗಳೆಂದೂ, ಅವೇ ಕಾವ್ಯಾತ್ಮವೆಂದೂ ... ಪ್ರಾಯವಾಗುತ್ತದೆ–ಎಂದು ಇನ್ನೂ ಕೆಲವರು ನಿರ್ಣಯಿ... ತ್ತಾರೆ.[೬]

"ಭಾಮಹನು ವೈದರ್ಭ ಗೌಡ ರೀತಿ ಭೇದಗಳು ಇ... ಇಲ್ಲವೆಂದು ತನ್ನ ಕಾವ್ಯಾಲಂಕಾರದಲ್ಲಿ ಹೇಳಿದ್ದಾನೆ. ... ಮತವನ್ನು ಖಂಡನೆ ಮಾಡುತ್ತ ದಂಡಿ "ರೀತಿ ಭೇದ ಇ... ಯಿಲ್ಲ. ಇವೆರಡು ಮತಗಳಿಗೂ ಬಹಳ ವ್ಯತ್ಯಾಸವಿರುತ್ತ... ಎಂದು ಹೇಳಿರುತ್ತಾನೆ. ಇಷ್ಟರಿಂದಲೇ ಆತನು ರೀತಿ ವಾ... ಆಚಾರ್ಯನೆಂದು ಹೇಳಬೇಕಾಗಿಲ್ಲ" ಎಂದು ಕೆಲವರು ಸಿ... ತಿಸಿರುವರು. ಇದು ಸರಿ.

---

೧ "ವೃತ್ತಯಃ ಕಾವ್ಯಮಾತೃಕಾಃ" ಇತಿ ಬ್ರುವಾ... ಮುನಿನಾರಸೋಚಿತೇತಿವೃತ್ತಸಮಾಶ್ರಯೇಣೋಪದೇ ಶೇ... ಸ್ಯೈವ ಜೀವಿತತ್ತ್ವಮುಕ್ತಮ್"......"......ನಾಟ್ಯಂಚರಸ... ತ್ಯುಕ್ತಪ್ರಾಯಮ್" [ಲೋಚನ ಪು. ೧೮೨].

೨. ನಕಾಂತಮಪಿ ನಿರ್ಭೂಷಂ ವಿಭಾತಿವನಿತಾಮು... [ಕಾವ್ಯಾ: ೧-೧೩].

೩. "ರಸವದ್ದರ್ಶಿತಸ್ಪಷ್ಟಶೃಂಗಾರಾದಿರಸಮ್........ [ಕಾವ್ಯಾ: ೩-೬].

೪. ಯುಕ್ತಂ ಲೋಕಸ್ವಭಾವೇನ ರಸೈಶ್ಚ ಸಕಲಂ ಪೃ... [ಕಾ. ೧-೨೧].

೫. ಅಸ್ತ್ಯನೇಕೋ ಗಿರಾಂ ಮಾರ್ಗಃ ಸೂಕ್ಷ್ಮಭೇದಃ ... ಸ್ಪರಂ, ತತ್ರವೈದರ್ಭಗೌಡೀಯತಾ ವರ್ಣ್ಯೇತೇ ಪ್ರಸ್ಫುಟಾಂ... [ಕಾ. ೧-೪೦].

೬. ಇತಿ ವೈದರ್ಭಮಾರ್ಗಸ್ಯ ಪ್ರಾಣಾಃ ದಶಗು... ಸ್ಮೃತಾಃ, ಏಷಾಂ ವಿಪರ್ಯಯಃ ಪ್ರಾಯೋದೃಶ್ಯತೇ ... ವರ್ತ್ಮನಿ [ಕಾ. ೧-೪೨].

ದಂಡಿ ಗುಣಮತ ಪ್ರವರ್ತಕನೆಂದು ಹೇಳುವುದೂ ಸರಿಯಲ್ಲ. ಆತನು "ಗುಣಗಳು ವೈದರ್ಭ ಮಾರ್ಗಕ್ಕೆ ಪ್ರಾಣಗಳು" ಎಂದು ಹೇಳಿದ್ದಾನೆ. ಆದರೆ ಅವು ಕಾವ್ಯಕ್ಕೆ ಆತ್ಮ ಎಂದಿರುವುದಿಲ್ಲ. ಆತ್ಮ ಕಾವ್ಯಾದರ್ಶದಲ್ಲಿ ಗುಣವಿಚಾರ ವಿದಷ್ಟೇ ನೋಡಿದರೆ ಗುಣಗಳೇ ಆತನಿಗೆ ಪ್ರಧಾನಗಳೆಂದು ತೋರುತ್ತದೆಯೆಂದು ಹೇಳುವುದೂ ಸರಿಯಾಗದು.

ಕಾವ್ಯದಲ್ಲಿ ಪ್ರಧಾನವಾದ ರಸವನ್ನು ಆತನು ಭಾಮಹನಂತೆಯೇ ಅಲಂಕಾರಗಳಲ್ಲಿಯೇ ಅಂತರ್ಭಾವಗೊಳಿಸಿರುತ್ತಾನೆ. ಆತನ ಮತದಲ್ಲಿ ಅಲಂಕಾರಗಳೇ ಪ್ರಧಾನಗಳೆಂದೂ ಕಾವ್ಯಕ್ಕೆ ಶೋಭಾದಾಯಕಗಳೆಂದೂ ತಿಳಿದುಬರುತ್ತದೆ.೭ ಪ್ರಧಾನಗಳಾದ ಅಲಂಕಾರಗಳಲ್ಲಿ ರಸವನ್ನು ಅಂತರ್ಭಾವಗೊಳಿಸಿರುವುದರಿಂದ ದಂಡಿ ಅಲಂಕಾರ ಮತಪ್ರವರ್ತಕನಾದರೂ ರಸಕ್ಕಿರುವ ಪ್ರಾಧಾನ್ಯವನ್ನು ಒಪ್ಪಿರುವುದಿಲ್ಲವೆಂದು ನಿಶ್ಚಯಿಸುವುದಕ್ಕಾಗುವುದಿಲ್ಲ.

೫. ಉದ್ಭಟನು ಅಲಂಕಾರಮತಕ್ಕೆ ಪ್ರಾಧಾನ್ಯವನ್ನು ನಿರೂಪಿಸಿ ಮೇಲೆ ಉದಾಹರಿಸಿರುವವರ ಮಾರ್ಗವನ್ನೇ ಪುಷ್ಟೀಕರಿಸಿದನು. ಇಷ್ಟಾದರೂ ರಸಪ್ರಾಧಾನ್ಯವನ್ನು ಲೋಪಗೊಳಿಸದೆ ಅವರಂತೆ ಇವನೂ ಅಲಂಕಾರಗಳಲ್ಲಿ ಅಂತರ್ಭಾವಗೊಳಿಸಿರುತ್ತಾನೆ.೮

ಮೇಲೆ ಹೇಳಿರುವ ವಿಷಯಗಳನ್ನು ನೋಡಿ ಭಾಮಹ, ದಂಡಿ ಮತ್ತು ಉದ್ಭಟ––ಇವರು ಅಲಂಕಾರವಾದ ಪ್ರವರ್ತಕರೆಂದೂ, ಇವರ ಮತದಲ್ಲಿ ರಸ ಅಲಂಕಾರವಾಗುತ್ತದೆಂದೂ ತಿಳಿಯುತ್ತದೆ.

೬. ವಾಮನ, ಉದ್ಭಟನ ಸಮಕಾಲೀನ. ಆದರೆ ಇವನ ಮಾರ್ಗ ಮೇಲಿನವನ ಮಾರ್ಗಕ್ಕಿಂತ ತುಂಬ ಬೇರೆಯಾದುದು. ಈತನು ಅಲಂಕಾರ ಪ್ರಾಧಾನ್ಯವನ್ನು ಅಂಗೀಕರಿಸಲಿಲ್ಲ. ಇವನು "ರೀತಿರಾತ್ಮಾ ಕಾವ್ಯಸ್ಯ" ಎಂದು ಹೇಳಿರುವುದನ್ನು ಅವಲಂಬಿಸಿ ಇವನ ಮತದಲ್ಲಿ ರೀತಿಯೇ ಕಾವ್ಯಾತ್ಮವೆಂದು ನಿರ್ಧರವಾಗುತ್ತದೆಯೆಂದು ಕೆಲವರ ಎಣಿಕೆ. ಈತನು ರೀತಿ ಸಾಮಾನ್ಯಕ್ಕೆ ಕಾವ್ಯಾತ್ಮತ್ವವನ್ನು ಅಂಗೀಕರಿಸಿದ್ದಿದ್ದರೆ ಮೇಲಿನ ಮತದಲ್ಲಿರುವಂತೆ ಅನುಗುಣ್ಯವೇರ್ಪಡುತ್ತಿದ್ದಿತು. ಆದರೆ ವಾಮನ ರೀತಿ ಸಾಮಾನ್ಯ ಆತ್ಮವಾಗುತ್ತದೆ ಎಂದು ಅಂಗೀಕರಿಸದೆ ವೈದರ್ಭಿಯೊಂದನ್ನೇ ಆತ್ಮವನ್ನಾಗಿ ಗ್ರಹಿಸಿರುತ್ತಾನೆ. ಅದಕ್ಕೆ ಗುಣ ಸಾಕಲ್ಯವೇ ಕಾರಣ. ಹೆಚ್ಚಿನ ಗುಣಗಳು ಇಲ್ಲದಿರುವುದರಿಂದ ಗೌಡೀ ರೀತಿ ಗ್ರಾಹ್ಯವಲ್ಲ. ಈ ವಿಷಯ ಅವನ ಗ್ರಂಥಗಳಿಂದಲೇ ತಿಳಿದುಬರುತ್ತದೆ.೯ ಅಲಂಕಾರ ಸರ್ವಸ್ವ ವ್ಯಾಖ್ಯಾತೃವಾದ ಸಮುದ್ರಬಂಧು ವಾಮನನ ಮತದಲ್ಲಿ ಗುಣಗಳಿಗೇ ಪ್ರಾಧಾನ್ಯವೆಂದು ಹೇಳಿರುತ್ತಾನೆ. ಆದ್ದರಿಂದ ವಾಮನ ರೀತಿಮತಪ್ರವರ್ತಕನೇ ಅಲ್ಲದೆ ಗುಣಮತ ಪ್ರವರ್ತಕನೂ ಆಗಿರುವನೆಂದು ಹೇಳುವುದೇ ಸರಿ. ಅಲ್ಲದೆ ಪ್ರಧಾನವಾದ ರಸವನ್ನು ಈತನು ತನ್ನ ಮತದಲ್ಲಿ ಪ್ರಧಾನ ಗುಣದಲ್ಲಿಯೇ (ಕಾಂತಿ ಗುಣದಲ್ಲಿಯೆ) ಅಂತರ್ಭಾವಗೊಳಿಸಿರುತ್ತಾನೆ.೧೦ ಇದರಿಂದಲೂ ಇವನು ಗುಣಪ್ರಾಧಾನ್ಯವಾದಿಯೆಂದೂ, ರಸಕ್ಕೆ ಇವನ ಮತದಲ್ಲಿ ಪ್ರಾಧಾನ್ಯವುಂಟೆಂದೂ ನಿರ್ಣಯವಾಗುತ್ತದೆ.

೭. ರುದ್ರಟ, ಅಲಂಕಾರ ಪ್ರಾಧಾನ್ಯವಾದಿಯೆಂದು ಅನೇಕರು ತಿಳಿದಿದ್ದಾರೆ. ಆತನು ಅಲಂಕಾರಗಳನ್ನೂ ಕುರಿತು ಸುದೀರ್ಘವಾಗಿ ಚರ್ಚಿಸಿರುವುದೇ ಇದಕ್ಕೆ ಕಾರಣ. ಇಷ್ಟರಿಂದಲೇ ಆತನು ಅಲಂಕಾರ ಮಾರ್ಗಾನುಯಾಯಿ ಎಂದು ಹೇಳುವುದು ಉಚಿತವೆನಿಸದು. ಭರತನು ಮೊದಲ್ಗೊಂಡು ರುದ್ರಟನ ವರೆಗೆ ಆಗಿರುವ ಆಲಂಕಾರಿಕರಾರೂ ರಸವನ್ನು ಕುರಿತು ವಿಶೇಷವಾಗಿ ಚರ್ಚಿಸಲಿಲ್ಲ. ರುದ್ರಟನು ಮಾತ್ರ ಕಾವ್ಯಾಲಂಕಾರದಲ್ಲಿ ರಸಚರ್ಚೆಗಾಗಿ ನಾಲ್ಕು ಅಧ್ಯಾಯಗಳನ್ನು ಪ್ರತ್ಯೇಕಿಸಿರುತ್ತಾನೆ. ಈತನ ವರೆಗೆ ರಸಗಳು ಒಂಭತ್ತೆಂದು ಕೆಲವರೂ, ಎಂಟೆಂದು ಕೆಲವರೂ ಹೇಳಿರುತ್ತಾರೆ. ರುದ್ರಟನು ಮೊದಲು ಹತ್ತು ರಸಗಳನ್ನು ಪ್ರತಿಪಾದಿಸಿ ಆಮೇಲೆ ಮಧುರಾದಿಗಳ ಆಸ್ವಾದದಿಂದ ರಸಗಳಾಗುವ ರೀತಿಯಲ್ಲಿಯೆ ಭಾವಗಳ ಆಸ್ವಾದದಿಂದಲೂ ಅನೇಕ ರಸಗಳು ಉಂಟಾಗುತ್ತಿವೆಯಾಗಿ ನಿರ್ವೇದಾದಿಗಳೆಲ್ಲವೂ ರಸಗಳಾಗಬಹುದೆಂದು ನಿರೂಪಿಸಿ ರಸವಿಷಯದಲ್ಲಿ ತನಗಿರುವ ಆದರಾತಿಶಯವನ್ನೂ ಪ್ರಕಟಗೊಳಿಸಿರುತ್ತಾನೆ.೧೧ ಇಷ್ಟೆಯಲ್ಲದೆ ಮೇಲಿನವರಂತೆ ಇವನು ರಸವನ್ನೂ ಬೇರೊಂದು ಕಾವ್ಯಾಂಗದಲ್ಲಿ ಅಂತರ್ಭಾವ ಮಾಡದೆ ಸ್ವತಂತ್ರವಾಗಿಯೆ ಇರಿಸಿದ್ದಾನೆ. ಆದ್ದರಿಂದ ರಸಕ್ಕೆ ಪ್ರತ್ಯೇಕ ವ್ಯಕ್ತಿತ್ವ ರುದ್ರಟನೊಡನೆಯೇ ಮೊದಲಾಯಿತೆಂದು ಹೇಳಬಹುದು. ಈ ವಿಷಯವನ್ನು ಹಿಡಿದು ರುದ್ರಟ ರಸಮಾರ್ಗದರ್ಶಕನಾದ ಸಹೃದಯನೆಂದು ಹೇಳಬಹುದು.

ಇದುವರೆಗೆ ಪರಿಶೋಧನೆಗಳಿಂದ ತಿಳಿದುಬಂದಿರುವ

---

೭. ಚರಸವದ್ರಸಕೇವಲಂ [ಕಾವ್ಯ ೨-೨೫].

೮. ರಸವದ್ದರ್ಶಿತ ಸ್ಪಷ್ಟಶೃಂಗಾರಾದಿರಸೋದಯಂ [ಕಾವ್ಯಾಲಂಕಾರ ಸಾರಸಂಗ್ರಹ–ವರ್ಗ ೪].

೯. ರೀತಿರಾತ್ಮಾ ಕಾವ್ಯಸ್ಯ, ವಿಶಿಷ್ಟಾಪದರಚನಾರೀತಿಃ, ವಿಶೇಷೋ ಗುಣಾತ್ಮಾ, ಸಾತ್ರಿಧಾ ವೈದರ್ಭೀ-ಗೌಡೀ-ಪಾಂಚಾಲೀಚ, ವಿದರ್ಭಾದಿಷಾ ದೃಷ್ಟತ್ವಾತ್ತತ್ಸಮಾಖ್ಯಾ, ಸಮಗ್ರಗುಣಾವೈದರ್ಭೀ, ಓಜಃ ಕಾಂತಿಮಾತೀ ಗೌಡೀಯಾ, ಮಾಧುರ್ಯ, ಸೌಕುಮಾರ್ಯೋಪಪನ್ನಾ ಪಾಂಚಾಲೀ, ತಾಸಾಂಪೂರ್ವಾಗ್ರಾಹ್ಯಾ ಗುಣಸಾಕಲ್ಯಾತ್, ನಪುನರಿತರೇ–ಸ್ತೋಕಗುಣತ್ವಾತ್ [ಕಾ. ಸೂ. ೧–೩–೬–೧೫].

೧೦. ದೀಪ್ತರಸತ್ವಂ ಕಾಂತಿಃ.

೧೧. [ಶೃಂಗಾರ ವೀರ ಕರುಣಾ ಬೀಭತ್ಸಭಯಾನಕಾದ್ಭುತಾ ಹಾಸ್ಯಃ ರೌದ್ರಃ ಶಾಂತಃ ಪ್ರೇಯಾನಿತಿಮಂತವ್ಯಾ ರಸಾಃ ಸರ್ವೇ, ರಸನಾದ್ರಸತ್ವಮೇಷಾಂಮಧುರಾದೀನಾಮಿವೋಕ್ತಮಾಚಾರ್ಯೈರ್ ನಿರ್ವೇದಾದಿಷ್ವಪಿ ತನ್ನಿಕಾಮಮಸ್ತೀಲೆಕೋಽವಿರಸಾಃ–೩–೩–೪].

ಸಂಗತಿಗಳಿವು—ಆ ಆ ಮತಗಳಲ್ಲೆಲ್ಲ ಕಾವ್ಯಾತ್ಮಸ್ವರೂಪ ನಿರೂಪಿತವಾಗಿದೆ. ಧ್ವನ್ಯಾಲೋಕವನ್ನು ರಚಿಸಿದ ಆನಂದ ವರ್ಧನಾಚಾರ್ಯನೇ ಮೊದಲಾದ ಅಲಂಕಾರಿಕರೆಲ್ಲರೂ ವಾಚ್ಯ ವಾಗಿ ಕಾವ್ಯಾತ್ಮಸ್ವರೂಪವನ್ನು ಹೇಳಿರುತ್ತಾರೆ. ಆದ್ದರಿಂದ ಅವರ ಮತಗಳಲ್ಲಿ ಭಿನ್ನಾಭಿಪ್ರಾಯಗಳುಂಟಾಗಲು ಕಾರಣ ವಿರುವುದಿಲ್ಲ.

೮. ಆನಂದವರ್ಧನನ ಮತದಲ್ಲಿ ಧ್ವನಿಯೇ ಕಾವ್ಯಕ್ಕೆ ಆತ್ಮ. ಧ್ವನಿ ವಸ್ತ್ವಲಂಕಾರ ರಸಭೇದಗಳಿಂದ ಮೂರು ವಿಧ. ಅವರಲ್ಲಿ ರಸವೇ ಪ್ರಧಾನ—ಎಂದು ಆತನು ಸ್ಪಷ್ಟ ಪಡಿಸಿದ್ದಾನೆ. ಆತನ ಮತದಲ್ಲಿ ವ್ಯಂಗ್ಯ ಪ್ರಧಾನವಾದ್ದ ರಿಂದಲೂ, ರಸ ತದಂತರ್ಭಾವವಾಗುವುದರಿಂದಲೂ ರಸ ಮುಖ್ಯವೆಂದು ಹೇಳಲು ಏನೂ ಅಡ್ಡಿ ಇರುವುದಿಲ್ಲ.

೯. ವಕ್ರೋಕ್ತಿಯೇ ಕಾವ್ಯಾಜೀವಿತ (ಆತ್ಮ) ಎಂದು ಹೇಳಿದ ಕುಂತಕನು ರಸಕ್ಕೆ ಪ್ರಾಧಾನ್ಯವನ್ನು ನಿರೋಧಿಸಲಿಲ್ಲ. ವಕ್ರೋಕ್ತಿಯೆಂದರೆ ಅತಿಶಯೋಕ್ತಿ. ಅದು ಒಂದು ಅಲಂ ಕಾರದಂತೆಯೆ. ಕಾವ್ಯದಲ್ಲಿ ರಸ ಮುಖ್ಯವೆಂದೂ, ಅಲಂಕಾರ ವಾದ ವಕ್ರೋಕ್ತಿ ಆ ರಸವನ್ನೂ ಚೆನ್ನಾಗಿ ಪರಿಪೋಷಿಸುವು ದೆಂದು ಆತನ ಮತ.[೧೨]

೧೦. ವ್ಯಕ್ತಿವಿವೇಕವನ್ನು ರಚಿಸಿದ ಮಹಿಮ ಭಟ್ಟನು ಅನುಮಿತಿವಾದಕ್ಕೆ ಆಚಾರ್ಯ. ಆನಂದವರ್ಧನನಿಗೆ ಪ್ರತಿ ದ್ವಂದ್ವಿ. ಆತನು ರಸಾದಿಗಳು ವ್ಯಂಗ್ಯಗಳಾಗುತ್ತವೆಯೆಂದು ಹೇಳಿರುವುದರಿಂದ ಆ ಮತವನ್ನು ನಿರಸನಗೊಳಿಸಿ ಅವು ಅನು ಮಿತಗಳೆಂದು ಹೇಳಿ ಸ್ವಮತವನ್ನು ವಿಶೇಷವಾಗಿ ಹೇಳಿದ್ದಾನೆ. ರಸವನ್ನು ಆತನು ಅನುಮಿತದಲ್ಲಿ ಅಂತರ್ಭಾವಗೊಳಿಸಿದ್ದಾನೆ. ಆದರೆ ರಸ ಕಾವ್ಯಕ್ಕೆ ಆತ್ಮ ಎಂಬ ವಿಷಯದಲ್ಲಿ ಇವನು ಆನಂದವರ್ಧನನೊಡನೆ ಏಕೀಭವಿಸುತ್ತಾನೆ.[೧೩]

೧೧. ಔಚಿತ್ಯ ವಿಚಾರ ಚರ್ಚೆಯನ್ನು ರಚಿಸಿದ ಕ್ಷೇಮೇಂದ್ರ ಔಚಿತ್ಯವಾದಕ್ಕೆ ಮಾರ್ಗದರ್ಶಕ. ಈ ವಾದಕ್ಕೆ ಆನಂದವರ್ಧನನ ಸೂಕ್ತಿ ಮುಖ್ಯಾಧಾರ. ಕಾವ್ಯದಲ್ಲಿ ಪ್ರಧಾ ನವಾದ ರಸವನ್ನು ಎಷ್ಟೇ ಪೋಷಿಸಿದರೂ ಅದು ಔಚಿತ್ಯಕ್ಕೆ ದೂರವಾದರೆ ವಿರಸವಾಗುತ್ತದೆ ಎಂದು ಇವನ ಅಭಿಪ್ರಾಯ.[೧೪] ಯಾರು ಯಾವುದಕ್ಕೆ ಪ್ರಾಧಾನ್ಯವನ್ನು ಕೊಟ್ಟುಕೊಂಡಿದ್ದರೂ ಔಚಿತ್ಯವಿದ್ದೇ ಇರಬೇಕು. ಕ್ಷೇಮೇಂದ್ರನು ಔಚಿ ಪ್ರಾಧಾನ್ಯವನ್ನು ಹೇಳಿದ್ದರೂ ರಸವೇ ಕಾವ್ಯಕ್ಕೆ ಮುಖ್ಯವೆ ಹೇಳಿರುವನು. ರಸವಿಲ್ಲದಿದ್ದರೆ ಔಚಿತ್ಯವಿರುವುದಿಲ್ಲವೆ ಅವನ ಮತ.[೧೫]

ಭಟ್ಟ ನಾಯಕನೇ ಮೊದಲಾದವರ ಗ್ರಂಥಗಳೀವ ದೊರೆತಿಲ್ಲ. ಆದರೂ ರಸಸೂತ್ರಕ್ಕೆ ಅವರು ಮಾಡಿ ವ್ಯಾಖ್ಯಾನಗಳಿಂದ ರಸ ಕಾವ್ಯಾತ್ಮವೆಂಬ ವಿಷಯದಲ್ಲಿ ಅ ಯಾವ ಭಿನ್ನಾಭಿಪ್ರಾಯವೂ ಇರುವುದಿಲ್ಲವೆಂದೇ ಸಿದ್ಧಾ ಬಹುದು. ದಶರೂಪಕಾರಾದಿಗಳೂ ಮೇಲಿನವರ ಮತ ಅನುಸರಿಸಿರುತ್ತಾರೆ.

೧೨. ಮೇಲೆ ವಿವರಿಸಿರುವ ಮತಗಳಲ್ಲೆಲ್ಲ ಆನ ವರ್ಧನನ ಧ್ವನಿವಾದವೇ ಈ ವರೆಗೆ ನಿಂತಿರುವುದು. ಪ ಟಾಚಾರ್ಯನು ಆ ಮತವನ್ನೇ ಅವಲಂಬಿಸಿ, ನವೀನಾಲಂ ಕರಿಗೆ ದೊಡ್ಡ ಮಾರ್ಗದರ್ಶಕನಾಗಿರುವನು. ಆತನೂ ಕಾವ್ಯಾತ್ಮವೆಂದು ಹೇಳಿದ್ದರೂ, ರಸವೇ ಪ್ರಧಾನವೆ ಮುಕ್ತಕಂಠವಾಗಿ ಹೇಳಿರುವನು.[೧೬]

ಈ ಎಲ್ಲ ಕಾರಣಗಳಿಂದಲೂ "ಕಾವ್ಯದ ಆತ್ಮ ಎಂದೇ ನಿರ್ಣಯವಾಗುತ್ತದೆ.*

---

೧೨. [ಚತುರ್ವರ್ಗ ಫಲಾಸ್ವಾದಮಪ್ಯತಿಕ್ರಮ್ಯ ತದ್ವಿದ ಕಾವ್ಯಾಮೃತರಸೇನಾಂತಶ್ಚಮತ್ಕಾರೋವಿತನ್ಯತೇ ಅಯತಾ ತದಾತ್ವೇ ಚ ರಸನಿಷ್ಯಂದಸುಂದರಂ, ಯೇನ ಸಂಪದ್ಯತೇ ಕಾ ತದಿದಾನೀಂ ವಿಚಾರ್ಯತೇ].


೧೩. [ಕಾವ್ಯಸ್ಯಾತ್ಮನಿ ಸಂಜ್ಞಿನಿ ರಸಾದಿರೂಪೇ ನ ಕಸ್ಯ ಮತಿಃ].


೧೪. [ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಂ, ಸಿದ್ಧೌಚಿತ್ಯಬಂಧಸ್ತು ರಸಸ್ಯೋಪನಿಷತ್ಪರಾ ದ್ವನ್ಯಾ].

೧೫. [ಅಲಂಕಾರಾಸ್ತ್ವಲಂಕಾರಾ ಗುಣಾ ಏವ ಗುಣಾಃ ತಾಃ, ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಂ].

೧೬. [ಸಕಲಪ್ರಯೋಜನ ಮೌಳಿಭೂತಂ ಸಮನಂತರ ವರಸಾಸ್ವಾದನಸಮುದ್ಭೂತಂ ವಿಗಳಿತವೇದ್ಯಾಂತರಮಾನಂದಂ ಪ್ರ. ೧].

* ಶ್ರೀ। ವೆಂಕಟರಮಣಯ್ಯನವರ 'ಕಾವ್ಯಾತ್ಮವಿಚಾರ ಖನವನ್ನಧಿಕರಿಸಿ ಅನುವಾದಿತವಾದದ್ದು.





e Associated Productions: 11, Gopalakrishna Road: T. Nagar: Madras. 17.

ಪರಸ್ಪರ ವಿಶ್ವಾಸ ಘಾತಕ ಸಂ

(ಪಿ. ಜಿ. ವೋಡ್‌ಹೌಸ್ ಪ್ರೇರಿತ)

ಲೇಖಕರು: **ಶ್ರೀ। ಕೆ. ಕೆ. ನಾಯಕ.**

ಅದೊಂದು ದಿನ ನಾಗಪ್ಪಯ್ಯನವರ ಹೊಟೇಲಿನಲ್ಲಿ ಕಾಫಿ ಕುಡಿಯುತ್ತಿರುವಾಗ ನಾಣಿಯ ವಿಚಕ್ಷಣವಾದ ಮೆದುಳಿನಲ್ಲಿ ಫಕ್ಕನೆ ತಯಾರಾದ ಭಾರಿ ಯೋಚನೆಯಿದು! ಜೀವನರಂಗದ ವಿಧ ವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದ ಸಂಗಡಿಗರ ಕೂಟವೊಂದು ಅಂದು ನಾಗಪ್ಪಯ್ಯನವರ ಹೊಟೇಲಿನಲ್ಲಿ ಸೇರಿತ್ತು. ಕೂಡಿದವರು ಆರು ಮಂದಿ. ಕ್ರಮಾನ್ವಯ ಪರಿಚಯ ಮಾಡುವಾಗ ಮೊದಲಾಗಿ ಬರುವವನು—ನಾಣಿ(ಸಾಲಮಾಡೋದೇ ಉತ್ತಮವಾದ ಸಂಪಾದನೆಯ ಮಾರ್ಗವೆಂದು ನಿಶ್ಚಯಮಾಡಿಕೊಂಡವನು.) ಎರಡನೆಯವನು ರಂಗಣ್ಣ (ಸ್ವಂತ ಅಭಿಪ್ರಾಯದಲ್ಲಿ ರಂಗಭೂಮಿಯಲ್ಲಿ ನುರಿತ ಉತ್ತಮ ತರಗತಿಯ ಶ್ರೇಷ್ಠ[!]ನಟ). ಮೂರನೆಯವನು ಗುಂಡಪ್ಪ(ಚಿತ್ರಗಾರ-ತಾನು ಬರೆದ ಚಿತ್ರಗಳನ್ನು ತಾನೇ ಮೆಚ್ಚಿ ಇತರರು ಮೆಚ್ಚದ ಕಾರಣ ಹಿಂದುಸ್ಥಾನದಲ್ಲಿ ಚಿತ್ರಕಲೆಗೆ ಪ್ರೋತ್ಸಾಹವಿಲ್ಲ ಎಂದು ಯಾವಾಗಲೂ ಕೂಗುವವ). ನಾಲ್ಕನೆಯವನು ಶೀನಪ್ಪ (ಸಾಹಿತ್ಯಕ್ಷೇತ್ರದಲ್ಲಿ ಎರಡೂ ಕಾಲುಗಳನ್ನು ಒಂದೇ ಸಲ ಊರಲು ಪ್ರಯತ್ನಪಟ್ಟು ಸಾಧ್ಯವಾಗದೆ ಒಂದೂವರೆ ಕಾಲಿನಲ್ಲಿ ನಿಂತವ–"ಪಶ್ಚಾತ್ತಾಪದ ಬೂದಿ", "ಮೊಸರಿನಲ್ಲಿ ಕೆಂಡ" ಇತ್ಯಾದಿ ಪ್ರಕಟವಾಗದ ಹೃದಯದ್ರಾವಕ(!) ಕಾದಂಬರಿಗಳ ಗ್ರಂಥಕರ್ತ). ಐದನೆಯವನು ಶಾಮಣ್ಣ (ಗುಮಾಸ್ತನಾಗಿ ತಿಂಗಳಿಗೆ ನಾಲ್ವತ್ತು ರೂಪಾಯಿ ದುಡಿದು ಸಂಪಾದನೆ ಮತ್ತು ಖರ್ಚುಗಳ ಕೊನೆಗಳನ್ನು ಜೋಡಿಸಲು ಖಂಡಿತ ಬರುವುದಿಲ್ಲವೆಂಬ ಅನುಭವ ಪಡೆದವ). ಮತ್ತು ಆರನೆಯವನು ನಾನು (ಮ್ಯುನಿಸಿಪಲ್ ಗಡಿಯೊಳಗಿನ ರಸ್ತೆಗಳ ಗೌರವ ಪರಿಶೀಲಕ-ಅರ್ಥಾತ್, ಕೆಲಸವಿಲ್ಲದೆ ಅಂಡಲೆಯುವವ). ನಾವು ಆರು ಮಂದಿಯೂ ಲಕ್ಷ್ಮೀದೇವಿಯ ಕೃಪಾಕಟಾಕ್ಷವನ್ನು ಸಂಪಾದಿಸಲು ಅಸಮರ್ಥರಾಗಿ ಸದಾ ಹಣದ ಅಡಚಣೆಯಲ್ಲಿರುವವರೇ! ಅಂದಿನ ಮಾತುಕತೆಯು ನಮ್ಮ ಆರ್ಥಿಕ ಮುಗ್ಗಟ್ಟಿನ ಕುರಿತಾಗಿಯೇ ನಡೆಯುತ್ತಿತ್ತು. ಎಂದಿನಂತೆ ರಂಗಣ್ಣನೇ ಸಂಭಾಷಣೆಯಲ್ಲಿ ಮುಖ್ಯ ಭಾಷಣಗಾರ ನಾಗಿದ್ದನು.

ಇಲ್ಲಿ ನಿರೂಪಿಸಲ್ಪಡುವ ವೃತ್ತಾಂತದಲ್ಲಿ ರಂಗ
ಸಮ್ಬಂಧಿಸಿದ ಸಂಗತಿಗಳೇ ಹೆಚ್ಚಾಗಿರುವುದರಿಂದ ಆತ
ಚಯವನ್ನು ಸ್ವಲ್ಪ ಹೆಚ್ಚು ಮಾಡಿಕೊಡಬೇಕಾಗಿದೆ.
ನಲ್ಲಿ ಆಗಿಂದಾಗ್ಗೆ ಜನ್ಮವೆತ್ತಿ ಒಂದೋ, ಎರಡೋ ನ
ಗಳನ್ನಾಡಿ ಆ ಕೂಡಲೇ ದಿವಂಗತವಾಗುತ್ತಿದ್ದ ಹಲ
ನಾಟಕ ಕಂಪೆನಿಗಳಲ್ಲಿ ನಟನಾಗಿ ಕೆಲಸ ಮಾಡಿ ಊರವ
ತುಂಬ ಪರಿಚಿತನಾಗಿದ್ದನು. ನೋಡಲು ತುಂಬಾ ಸು
ನಾಗಿದ್ದನು. ಗುಂಗುರಾದ ತಲೆಗೂದಲು, ಅಂದವಾದ
ಗಳು, ದಂಡನೆಯ ಮುಖ, ಮಧುರವಾದ ಕಂಠ,
ಸಾದ ಹಾಡುಗಾರಿಕೆ,—ಇವೆಲ್ಲಾ, ಆತನಲ್ಲಿ ಉತ್ತಮ ನ
ಗಿರುವ ಯೋಗ್ಯತೆಯನ್ನು ಎತ್ತಿ ತೋರಿಸುತ್ತಿದ್ದವು. ವ
ಗಳು ಬಂದ ನಂತರ ನಾಟಕಗಳಿಗೆ ಪ್ರೋತ್ಸಾಹವು ಕ
ಯಾಗಿ ನಟರಿಗೆ ಆಶ್ರಯ ದೊರೆಯುವುದು ಕಷ್ಟವೆಂದ
ದೊಡನೆ ಹಿಂದೀ ಭಾಷೆ ಕಲಿತು ಚಲಚ್ಚಿತ್ರರಂಗದಲ್ಲಿ ನ
ಮೆರೆಯುವ ಆಶೆಯಿಂದ ಮುಂಬಯಿಗೆ ತೆರಳಿ, ದು
ವಶಾತ್ ಅಲ್ಲಿ ಯಾವ ಚಲಚ್ಚಿತ್ರ ಕಂಪೆನಿಯಲ್ಲಿಯೂ ಸ
ದೊರೆಯದೆ ಇತ್ತೀಚೆಗೆ ಊರಿಗೆ ಮರಳಿ ಬಂದಿದ್ದನು.

"ನಾಲ್ಕು ಕಾಸು ಕೈಯಲ್ಲಿ ಇಲ್ಲದವನ
ವ್ಯರ್ಥ ನಾಣಿ!" ರಂಗಣ್ಣ ಮಾತು ಮುಂದುವರಿ
ಹೇಳಿದನು.

"ಭೇಷ್! ಅದನ್ನು ನೂರು ಬಾರಿ ಹೇಳು! ಈಗ
ಹರಣೆಗಾಗಿ ಹೇಳುವುದಾದರೆ ನಾನು ಒಂದು ಕಪ್ಪು
ಕುಡಿದಿದ್ದೇನೆ. ಮತ್ತೂ ಒಂದು ಕಪ್ಪು ಕಾಫಿ ಕುಡಿಯ
ಎಂಬ ಆಶೆಯಿದೆ. ಆದರೆ ಕಾಸಿಲ್ಲ! ನೀವ್ಯಾರಾದರೂ ಮ
ಮಾಡಿದರೆ ಮಾತ್ರ ಕುಡಿಯಬಹುದು" ಎಂದು ಹೇಳಿ
ನಮ್ಮೆಲ್ಲರ ಮುಖಗಳನ್ನು ನಿರೀಕ್ಷಿಸಿದನು. ಆದರೆ
ಕೂಡಿದವರ್ಯಾರೂ ಈ ಸೂಚನೆಯನ್ನು ಅಂಗೀಕ
ಲಕ್ಷಣ ಕಾಣದುದರಿಂದ ಬೇರೆ ಉಪಾಯವಿಲ್ಲದೆ ತಾನು
ವಿಷಯವು ಕ್ಷುಲ್ಲಕವೆಂದು ತೋರಿಸಲು ಗೋಡೆಯ
ಕನ್ನಡಿಯಲ್ಲಿ ನೋಡಿದನು.

"ಹಣವಿಲ್ಲದವನು ಥೇಟು ಹೆಣದ ಹಾಗೆ" ರಂಗಣ್ಣನು ಮುಂದುವರಿಸಿದನು.

"ಅದು ಹಾಗೆಂದು ನಿನ್ನನ್ನು ನೋಡಿದವರ್ಯಾರಾದರೂ ಹೇಳ್ಯಾರು!" ನಿರಾಶನಾದ ನಾಣಿಯು ನಂಜು ನುಡಿ ಹೊರ ಬಿತ್ತು.

"ನಿಜ! ನೂರು ಬಾರಿಗೂ ನಿಜ! ಉತ್ತಮ ನಟನಿಗಿರುವ ಯೋಗ್ಯತೆಯೆಲ್ಲ ನನ್ನಲ್ಲಿದ್ದರೂ, ಮುಂಬಯಿಯ ಒಂದೇ ಒಂದು ಚಲಚ್ಚಿತ್ರ ಕಂಪೆನಿಯ ಮೆನೇಜರನಾದರೂ ಕಣ್ಣೆತ್ತಿ ನನ್ನನ್ನು ನೋಡಲು ತಯಾರಿಲ್ಲ! ಕಾರಣವೇನು ತಿಳಿಯಿತೇ? ಯಾರ ದೃಷ್ಟಿಯನ್ನಾದರೂ ಒಂದು ಸಲ ನನ್ನ ಕಡೆಗೆ ಹರಿಯುವಂತೆ ಮಾಡಲು ಬೇಕಾದ ಆಧುನಿಕ ಪೋಷಾಕಿನ ಅಭಾವ ನನಗಿರುವುದೇ ಕಾರಣ! ಅದನ್ನು ಮಾಡಿಸುವಾ ಅಂದರೆ ನನ್ನ ಕೂಡೆ ಹಣವೂ ಇಲ್ಲ-" ಎಂದು ರಂಗಣ್ಣನು ಹೇಳುತ್ತಿರುವಾಗ, ನಮ್ಮ ಹಳೇ ಗೆಳೆಯ ಭೀಮಣ್ಣನು ಆಗಲೇ ಹೊಟೇಲನ್ನು ಪ್ರವೇಶಿಸಿ, ನಾವಿದ್ದಲ್ಲಿ ಬಂದು ಕುಳಿತನು. ಭೀಮಣ್ಣನನ್ನು ನಾವು ನೋಡದೆ "ಹೋ! ಏನು ಭೀಮಣ್ಣ ಹದಿನೈದು ದಿನಗಳಾಗಿದ್ದುವು. ಹದಿನೈದು ದಿನಗಳಿಂದ ನಿನ್ನ ಪತ್ತೆ ಇಲ್ಲ" ಎಂದು ನಾನು ಅವನನ್ನು ಕೇಳಿದೆ.

"ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೆ. ವೇಣು! ಈಗ ತಾನೇ ಎದ್ದು ಹೊರಗೆ ಬರುತ್ತಿರುವುದು." ಎಂದನು ಭೀಮಣ್ಣ.

"ಏನು ಸುಡುಗಾಡಿನ ನಿದ್ರೆ ತಾಗಿದಯ್ಯ ಈ ಕುಂಭಕರ್ಣನ ಅಳಿಯನಿಗೆ? ಯೌವನದ ಹೊನ್ನಿನ ಸಮಯವನ್ನು ಸಾರ್ಥಕಗೊಳಿಸದೆ, ಹದಿನೈದು ದಿನಗಳ ವರೆಗೆ ಹಾಸಿಗೆಯಲ್ಲೇ ಬಿದ್ದುಕೊಂಡಿದ್ದಾನಂತೆ, ಮಹಿಷಾಸುರ! ಜಗತ್ತಿನಲ್ಲಿ ಏನೆಲ್ಲಾ ವಿಚಿತ್ರವಿದೆ!" ನಾಣಿ ಭೀಮಣ್ಣನನ್ನು ಟೀಕಿಸಿ ಅನುಮೋದನೆಗಾಗಿ ನಮ್ಮೆಲ್ಲರ ಮುಖಗಳನ್ನು ನೋಡಿದನು. ನಿತ್ಯವೂ ಹಗಲು ಹತ್ತು ಗಂಟೆಯ ಮುಂಚೆ ಹಾಸಿಗೆ ಬಿಟ್ಟು ಏಳುವ ಅಭ್ಯಾಸ ತನಗೆ ಇಲ್ಲದಿದ್ದರೂ ಮತ್ತು ಆದೊಂದು ಸಲ ತನ್ನ ಅಂಚೆ ಹರಿದಿರುವ ಕಾರಣ ಮನೆಬಿಟ್ಟು ಹೊರಗೆ ಬರಲು ಸಾಧ್ಯವಿಲ್ಲವೆಂಬ ನೆವದಿಂದ ಮೂರು ದಿನಗಳ ವರೆಗೆ ಆತನು ಮುಸುಕು ಎಳೆದು ಗೊರಕೆ ಹೊಡೆದ ವೃತ್ತಾಂತವು ಎಲ್ಲರಿಗೂ ಗೊತ್ತಿದ್ದರೂ, ನಾಣಿಯು ಇತರರಲ್ಲಿ ಮೈಗಳ್ಳತನವನ್ನು ಸಹಿಸದವನು.

"ಹಾಗೇನೂ ಇಲ್ಲ ನಾಣಿ! ನನಗೊಂದು 'ಜಖಂ' ಆಯಿತು. ಸೈಕಲ್ಲಿಂದ ಕೆಳಗೆ ಉರುಳಿ ಕಾಲುಗಂಟು ಉಳುಕಿ ಹೋಯಿತು" ಎಂದು ಭೀಮಣ್ಣನು ವಿವರಿಸಿದನು.

"ಅಹುದೇ! ಅಂತೂ ಈಗ ಗುಣವಾಗಿದೆಯಲ್ಲ" ಎಂದು ನಾವೆಲ್ಲರೂ (ನಾಣಿ ವಿರಹಿತ) ಸಹಾನುಭೂತಿಯಿಂದ ಕೇಳಿದೆವು.

"ದೇವರ ದಯೆಯಿಂದ ಈಗ ಗುಣವಾಗಿದೆ. ಅಂತೂ ಹದಿನೈದು ದಿನಗಳ ವಿಶ್ರಾಂತಿ ದೊರೆಯಿತು, ಮಾತ್ರವಲ್ಲ ವಿಮಾ ಕಂಪೆನಿಯಿಂದ ನೂರು ರೂಪಾಯಿ ಪರಿಹಾರವೂ ಸಿಕ್ಕಿತು."

ಭೀಮಣ್ಣನ ಮಾತು ಕೇಳುತ್ತಲೇ ನಾಣಿಯು ಥಕ್ಕನೆ ನೆಟ್ಟಗೆ ಕುಳಿತನು. 'ರೂಪಾಯಿ' ಎಂಬ ಶಬ್ದವು ನಾಣಿಯ ಕಿವಿಗೆ ಯಾವಾಗಲೂ ಸಂಗೀತದಷ್ಟು ಇಂಪು. ಹಣದ ವಿಷಯ ಮಾತುಕತೆ ಕೇಳುವುದೆಂದರೆ ಈ ಮಹಾರಾಯನಿಗೆ ಇಲ್ಲದ ಉತ್ಸುಕತೆ.

"ಏನೆಂದೆ? ನಿನ್ನ ಕಾಲುಗಂಟು ಉಳುಕಿದ್ದಕ್ಕೆ ವಿಮಾ ಕಂಪೆನಿಯವರು ನೂರು ರೂಪಾಯಿ ಕೊಟ್ಟರೆಂದು-ಇಲ್ಲಿ ನಮ್ಮೆದುರಿಗೆ ಕೂತುಕೊಂಡೇ ನಮಗೆ ಹೇಳುತ್ತಿಯಾ? ಏನೋ ಇದು—ಈ ವಿಮಾ ಕಂಪೆನಿಗಳು ದಿವಾಳಿ ತೆಗೆಯಲಿಕ್ಕೆ ಹೊರಟಿವೆಯೋ? ಯಾಕೆ ಹೀಗೆ ಸುಳ್ಳಾಡಿ ಸಾಯುತ್ತೀಯಾ?"

"ನಿನ್ನಾಣೆ ಸತ್ಯ ನಾಣಿ."

"ಹಾಗಾದರೆ ಆ ನೂರು ರೂಪಾಯಿ ತೋರಿಸು ನೋಡೋಣ."

"ಖಂಡಿತವಾಗಿಯೂ ತೋರಿಸುವುದಿಲ್ಲ!"

"ಯಾಕೆ?"

"ಯಾಕಂದರೆ ಆ ಹಣವನ್ನು ನಾನು ನಿನಗೆ ತೋರಿಸಿದರೆ ನೀನು ಕೂಡಲೆ ಸಾಲಕ್ಕಾಗಿ ಸವಾಲು ಮಾಡುವೆಯೆಂದು ನನಗೆ ಗೊತ್ತು!"

ನಾಣಿಯು ತನ್ನ ಸ್ವಾಭಿಮಾನಕ್ಕೆ ಹೊಡೆದ ಈ ಏಟಿನಿಂದ ಕುಗ್ಗಲಿಲ್ಲ.

"ಹಾಗಾದರೆ ಯಾರ ಕಾಲ್ಗಂಟು ಉಳುಕಿದರೂ ವಿಮಾ ಕಂಪೆನಿಯವರು ಅವನಿಗೆ ಪರಿಹಾರ ಕೊಡುತ್ತಾರೆಯೇ?"

"ಅಹುದು. ಆದರೆ ಆತನು ಮೊದಲು 'ಜಖಂ' ವಿಮೆಯನ್ನು ಇಳಿಸಿ, ವಿಮಾ ಕಂತನ್ನು ತೆರಬೇಕು."

"ಹೂಂ! ಹಾಗೆ ಹೇಳು. ಅದರಲ್ಲೇನೊ ಕೀಲು ಇರಬೇಕೆಂದು ನನಗೆ ಗೊತ್ತು." ನಾಣಿಯು ತುಟಿ ಸಂಕೋಚಿಸಿ ತನ್ನ ಸೂಕ್ಷ್ಮಬುದ್ಧಿಯನ್ನು ಪ್ರದರ್ಶಿಸಿದನು.

"ಒಳ್ಳೆಯ ಮಾತಿದು! ವಿಮಾ ಕಂತು ತೆರದಿದ್ದರೆ ಪರಿಹಾರ ಸಿಗುತ್ತದೆಯೇ? ಇನ್ಶೂರ್ ಕಂಪೆನಿಗಳೆಂದರೆ ನಮ್ಮ ಅಜ್ಜನ ಆಸ್ತಿಯೇ?" ಎಂದು ನಾನು ಕೇಳಿದೆ.

"ಒಳ್ಳೇದು, ನೀನು ಹೇಗೆ ಇನ್ಶೂರು ಮಾಡಿದೆ?" ಎಂದು ನಾಣಿ ಭೀಮಣ್ಣನನ್ನು ಪ್ರಶ್ನಿಸಿದನು.

"ಕೆಲ ಸಮಯದ ಹಿಂದೆ ಒಬ್ಬ ಇನ್ಶೂರ್ ಏಜಂಟನ ಒತ್ತಾಯಕ್ಕಾಗಿ 'ಜಖಂ' ವಿಮೆಯನ್ನು ಇಳಿಸಿದ್ದೆ. ವರ್ಷಕ್ಕೆ ಇಂತಿಷ್ಟೆ ಪ್ರಿಮಿಯಮ್ ತೆತ್ತರಾಯಿತು. ವಿಮೆ ತೆಗೆದವನಿಗೆ

ಏನಾದರೂ ಅಪಾಯ ಸಂಭವಿಸಿ ಜಖಂ ಅಥವಾ ಪೆಟ್ಟು-ಗಿಟ್ಟು ಆದರೆ ವಿಮಾ ಕಂಪೆನಿಯಿಂದ ಪರಿಹಾರ ಸಿಗುತ್ತದೆ."

ನಾಣಿಯ ಉತ್ಸುಕತೆ ಹೆಚ್ಚಿತು. "ಈಗ ಇಂಥ ಹತ್ತಿಪ್ಪತ್ತು ವಿಮಾ ಕಂಪೆನಿಗಳಿರಬಹುದೇ?" ನಾಣಿಯ ಕಣ್ಣುಗಳು ಹೊಳೆಯುತ್ತಿದ್ದವು. ಆ ಮೇಧಾವಿಯ ಅಪ್ರತಿಮವಾದ ಮಿದುಳು ವಿದ್ಯುತ್ ಪ್ರವಾಹ ಯಂತ್ರದಂತೆ ಕೆಲಸ ಮಾಡುತ್ತಿತ್ತು ಎಂಬುದು ನಮಗೆಲ್ಲರಿಗೂ ವ್ಯಕ್ತವಾಯಿತು.

"ಓಹೋ ಇರಬಹುದು" ಎಂದು ಭೀಮಣ್ಣನು ಉತ್ತರ ಕೊಟ್ಟನು.

"ಹಾಗಾದರೆ ಇಪ್ಪತ್ತು ಕಂಪೆನಿಗಳಲ್ಲಿ 'ಜಖಂ' ವಿಮೆ ಇಳಿಸಿಕೊಂಡವನೊಬ್ಬನ ಕಾಲ್ಗಂಟು ಉಳುಕಿದರೆ ಆ ಇಪ್ಪತ್ತೂ ಕಂಪೆನಿಗಳಿಂದ ಆತನಿಗೆ ಎರಡು ಸಾವಿರ ರೂಪಾಯಿ ಪರಿಹಾರ ಸಿಗುತ್ತದೆಂದಾಯಿತು!"

"ಎರಡು ಸಾವಿರವಷ್ಟೇ ಏಕೆ? ಸಂಭವಿಸಿದ ಜಖಂ ಸ್ವಲ್ಪ ಕಠಿಣವೆಂದಾದರೆ ಇನ್ನೂ ಹೆಚ್ಚಿನ ಪರಿಹಾರ ಸಿಗುತ್ತದೆ. ಅವಕ್ಕೆಲ್ಲಾ ಒಂದು ಲೆಕ್ಕ ಇದೆ. ಕಾಲು ಮುರಿದರೆ ಇಷ್ಟು, ಕೈ ತುಂಡಾದರೆ ಅಷ್ಟು—ಮೂಗು ಕೊಯ್ದರೆ ಇಂತಿಷ್ಟು—ಕಿವಿ ಹರಿದರೆ—"

ನಾಣಿಯ ಕನ್ನಡಕವು ಆತನ ಮೂಗು ಬಿಟ್ಟು ಆರು ಇಂಚು ಎತ್ತರ ಹಾರಿ, ಪುನಃ ಮೂಗಿನ ಮೇಲೆ ಕೂತುಬಿಟ್ಟಿತು. "ಸಾಕು, ಸಾಕು, ತಿಳಿಯಿತು, ತಿಳಿಯಿತು! ಈಗ ನೀವೆಲ್ಲ ಸೇರಿ ಎಷ್ಟು ಹಣ ಕೂಡ ಹಾಕಬಲ್ಲಿರಿ?" ಎಂದು ನಾಣಿ ಟಪ್ಪನೆ ಪ್ರಶ್ನೆ ಮಾಡಿದನು.

"ಯಾಕೆ?'' ಎಂದು ಗುಮಾಸ್ತ ಶಾಮಣ್ಣನು ಸಂಶಯದಿಂದ ಕೇಳಿದನು. ನಾಣಿ ಹಣದ ಸುದ್ದಿ ಎತ್ತಿದನೆಂದರೆ ಶಾಮಣ್ಣನಿಗೆ ಯಾವಾಗಲೂ ಸಂಶಯ!

"ಕೇಳು! ನಾವೆಲ್ಲರೂ ಒಂದು 'ಸಂಘ'ವಾಗಿ ಸೇರಿಕೊಂಡು ಪಾಲು ವಂತಿಗೆಯಲ್ಲಿ ಹಣ ಕೂಡಿಸುವುದು, ನಂತರ ನಮ್ಮಲ್ಲಿ ಸೋಡ್ತಿ ತೆಗೆದು ಯಾರ ಹೆಸರಿನಲ್ಲಿ ಚೀಟು ಹಾರುತ್ತದೋ ಅವನಿಂದ ಇಪ್ಪತ್ತೂ ವಿಮಾ ಕಂಪೆನಿಗಳಲ್ಲಿ 'ಜಖಂ' ವಿಮೆ ಇಳಿಸುವುದು. ನಾವು ಕೂಡಿಸಿದ ಭಂಡವಾಳದಿಂದ ಇಪ್ಪತ್ತೂ ಕಂಪೆನಿಗಳಲ್ಲಿ ಆತನ ವಿಮಾ ಕಂತು ಕಟ್ಟುವುದು. ಇದಾದ ಮೇಲೆ ಆತನು ತನ್ನ ಕಾಲು ಮುರಿದುಕೊಳ್ಳೋದು. ವಿಮಾ ಕಂಪೆನಿಗಳಿಂದ ಬಂದ ಪರಿಹಾರದ ಹಣವನ್ನು ನಾವೆಲ್ಲರೂ ಹಂಚಿಕೊಳ್ಳೋದು. ಸ್ವಲ್ಪ ಹಣ ಸಂಪಾದಿಸಲು ಸುಲಭವಾದ ಉಪಾಯವಿದು! ಹೇಗೆ?"

ನಾಣಿಯು ಮಂಡಿಸಿದ ಈ ಯೋಜನೆಯನ್ನು ಕೇಳುತ್ತಲೇ ನಮಗೆಲ್ಲರಿಗೂ ದಂಗು ಬಡೆಯಿತು.

"ವಿಮೆ ಇಳಿಸಿದ ನಂತರ ಕಾಲು ಮುರಿದು ಹೋಗುವುದಿಲ್ಲವಾದರೆ?" ಎಂದು ಶಾಮಣ್ಣನು ಎದುರು ಸವಾಲು ಹಾಕಿದನು.

"ಹುಚ್ಚನಂತೆ ಮಾತಾಡುತ್ತಿದ್ದಾನೆ! ನಾವು ಇ ನೆಯ ಶತಮಾನದಲ್ಲಿದ್ದೇವೆಂಬುದನ್ನು ಮರೆತೆಯಾ? ನ ಜೀವನವೇ ಇಂದು ಅಪಾಯದಿಂದ ಆವಸಲ್ಪಟ್ಟಿದೆ. ಅ ದ್ದರೆ ಈ ಮೋಟಾರು, ರೈಲು, ವಿಮಾನ, ಇಲೆಕ್ಟ್ರಿಸಿಟಿ, ಬಾಂಬುಗಳೇಕಂತೆ? ಈ ಯುಗದಲ್ಲಿ ಒಬ್ಬನಿಗೆ ಅಪಾಯ ಭವಿಸದಿರುವುದಾದರೂ ಹೇಗೆ? ವಿಮೆ ಇಳಿಸಿದವನ ಕಾ ಮುರಿದುಹೋಗುವುದಿಲ್ಲವಾದರೆ, ಅವನೇ ಅಪಾಯಕ್ಕೀ ತನ್ನ ಕಾಲನ್ನೋ, ಕೈಯನ್ನೋ ಅಥವಾ ಸೊಂಟವನ್ ಮುರಿದುಕೊಳ್ಳಲೇಬೇಕು. ನಮ್ಮ 'ಸಂಘ'ದ ಮೂಲ ತ್ರವೇ ಇದು. ಇಲ್ಲವಾದರೆ ನಮಗೆ ಈಗ ಹಣ ಸಂ ಸುವ ಸುಲಭವಾದ ಮಾರ್ಗ ಬೇರಾವದಿದೆ? ನಾನ ಪಾಪಾರಿ—ಈಗ ಭೀಮಣ್ಣನು ಆತನಿಗೆ ಸಿಕ್ಕಿದ ರೂಪಾ ಯಲ್ಲಿ ನನಗೆ ಒಂದು ಹತ್ತು ರೂಪಾಯಿ ಆದರೂ ಸಾಲ ಕೆ ದಿದ್ದರೆ ನಾಳಿನ ವಾರದಲ್ಲಿ ಮನೆಯಲ್ಲಿ ಒಲೆಯುರಿವುದಿಲ್ ನಾವೆಲ್ಲರೂ ಈಗ ಹಣದ ಕೊರತೆಯಿಂದ ಕಷ್ಟಪಡುತ್ತಿದ್ ಈ ಸಮಯದಲ್ಲಿ ನಾನು ಈ ಉತ್ತಮವಾದ ಸುಲಭಯೋ ಯನ್ನು ನಿಮ್ಮ ಮುಂದಿಟ್ಟರೆ ಅದನ್ನು ಸಮರ್ಥಿಸುವ ಬ ನೀವೆಲ್ಲ ಈ ರೀತಿಯಲ್ಲಿ ವಿರೋಧಿಸುವುದು ನ್ಯಾಯವೇ?''

"ನೀನು ಪಾಪಾರಿಯಾದರೆ ಸಂಘಕ್ಕೆ ನಿನ್ನ ಪಾ ವಂತಿಗೆಯನ್ನು ಹೇಗೆ ಕೊಡುವೆ?" ಎಂದು ಸಂಶಯ ಶಾಮಣ್ಣನು ಕೇಳಿದನು.

"ನಾನು? ನಾನು ಪಾಲುವಂತಿಗೆ ಕೊಡಬೇಕೆ? ಭೇ ಚಿಂತೆಯಿಲ್ಲ! ಒಳ್ಳೆ ಆಲೋಚನೆ ನಿನ್ನದು! ತಲೆ ಖರ್ಚುಮಾ ಬೇಕು ನಾನು!—ಯೋಜನೆ ತೋರಿಸಬೇಕು ನಾನು— ಕ್ಕಾಗಿ ಕೃತಜ್ಞತೆಯಿಂದ ನನ್ನನ್ನೂ ಮಾಫಿ ಪಾಲುಗಾರ 'ಸಂಘ'ಕ್ಕೆ ಸೇರಿಸುವುದು ಬಿಟ್ಟು, ನಾನೂ ಪಾಲುವ ಕೊಡಬೇಕೆನ್ನುತ್ತಿಯಾ? ಈ ಜಗತ್ತಿನಲ್ಲಿ ನ್ಯಾಯ ಉಂ ಇಲ್ಲ?"

"ಸಾಕು, ಸಾಕು! ನಿನ್ನ ಹರಿಕಥೆ! ನೀನು ವಂತಿಗೆ ಕೆ ದಿದ್ದರೆ ಬೇಡ! ಆದರೆ ಸೋಡ್ತಿಯಲ್ಲಿ ನಿನ್ನ ಚೀಟೇ ಹಾ ಎಂದು ಹಾರೈಸುತ್ತೇನೆ" ಎಂದು ಶಾಮಣ್ಣ ವಿಷಕಾರಿದ.

"ಆ ಯೋಚನೆ ನಿನಗೆ ಬೇಡ! ನನ್ನ ಚೀಟು ಖಂ ಹಾರುವುದಿಲ್ಲ" ಎಂದವನೇ ನಾಣಿ, ಏಳು ಚೀಟುಗ ಹೆಸರು ಬರೆದು ರಂಗಣ್ಣನಿಂದ ಒಂದು ಚೀಟು ತೆಗೆಸಿ ರಂಗಣ್ಣನ ಹೆಸರಿನ ಚೀಟೇ ಬಂತು! ರಂಗಣ್ಣನ ಮುಖದ ಇಳಿದು ಹೋಯಿತು!

ನಾಣಿಯ ಯೋಜನೆಯಲ್ಲಿ ಕ್ರೌರ್ಯ, ಹಿಂಸೆಗಳು ತ ವಾಗಿದ್ದರೂ, 'ಸಂಘ'ದ ಸದಸ್ಯರ ಆರ್ಥಿಕ ಮುಗ್ಗಟ್ಟು ಭಾವನೆಗಳನ್ನು ಕುರುಡು ಮಾಡಿತ್ತು.

* * * *

ಯಾರಾವರೂ ತನ್ನ ಕೈಕಾಲುಗಳನ್ನು ಮುರಿದುಕೊಳ್ಳಬೇಕೆಂದು ಖಂಡಿತ ಆಶೆ ಪಡಲಿಕ್ಕಿಲ್ಲ! ಒಂದು ವೇಳೆ ಹಾಗೆ ಆಶೆ ಪಟ್ಟರೂ ಅದನ್ನು ಕಾರ್ಯರೂಪಕ್ಕೆ ತರುವುದು ಸುಲಭಸಾಧ್ಯವಲ್ಲ! ಹಾಗೆಯೇ ತನ್ನ ದೇಹ ಅಥವಾ ಬರಿಯ ಅಂಗಾಂಗಗಳಿಗೆ ಜಖಂ ಮಾಡಿಕೊಳ್ಳುವುದರಿಂದ ಇತರರಿಗೆ ಉಪಕಾರವಾಗುವುದು ಎಂಬ ಭಾವನೆಯಲ್ಲಿ ಯಾರೂ ಆನಂದಪಡಲಿಕ್ಕಿಲ್ಲ! ರಂಗಣ್ಣನಲ್ಲಂತೂ ಈ ಭಾವನೆಯೂ, ಆನಂದವೂ ನಿಶ್ಚಯವಾಗಿಯೂ ಇರಲಿಲ್ಲ. ತಾನಾಗಿ ತನಗೆ ಯಾವ ರೀತಿಯಿಂದಲಾದರೂ ಜಖಂ ಮಾಡಿಕೊಳ್ಳುವ ಆಲೋಚನೆಯಿಂದ ಆತನು ಸಾವಿರ ಮೈಲು ದೂರವಿದ್ದಾನೆಂಬುದು ಕೆಲದಿನಗಳಿಂದೀಚೆಗೆ 'ಸಂಘ' ಸದಸ್ಯರಿಗೆ ಮನವರಿಕೆಯಾಗುತ್ತ ಬಂತು. ನಾಣಿಯಂತೂ ತುಂಬಾ ಕಳವಳಕ್ಕೊಳಗಾದನು. ಈ ವಿಷಯ ಮಾತನಾಡಲು ಒಂದು ದಿನ ನನ್ನ ಕೋಣೆಗೆ ಬಂದವನೇ, ಮೇಜಿನ ಮೇಲಿದ್ದ ನನ್ನ ಸಿಗರೇಟ್ ಪ್ಯಾಕಿನಿಂದ ಒಂದು ಸಿಗರೇಟು ತೆಗೆದು, ಬಾಯಿಯಲ್ಲಿಟ್ಟು ಬೆಂಕಿ ಹಚ್ಚಿ, ದೊಪ್ಪನೆ ಕುರ್ಚಿಯಲ್ಲಿ ಬಿದ್ದುಕೊಂಡು ಒಂದು ದೀರ್ಘವಾದ ನಿಟ್ಟುಸಿರನ್ನು ಬಿಟ್ಟನು!

"ಒಳ್ಳೇ ಪಂಚಾಯತಿಯಾಗಿ ಬಿಟ್ಟಿತ್ತಲ್ಲ ವೇಣೂ! ತುಂಬಾ ಆಲೋಚನೆ ಮಾಡಿ, ನಮಗೆಲ್ಲರಿಗೂ ಒಂದಿಷ್ಟು ದ್ರವ್ಯ ಸಂಪಾದನೆಯಾಗುವ ದಾರಿಯನ್ನು ನಾನು ಹುಡುಕಿಕೊಟ್ಟರೂ, ಆ ಮೂರ್ಖ–ಹೇಡಿ ರಂಗಣ್ಣನು, ನಡು ನೀರಲ್ಲಿ ನಮ್ಮ ಕೈಬಿಡುತ್ತಾನೆ! ಉಂಟೇ ಇಂಥ ಅನ್ಯಾಯ? ಒಟ್ಟಾರೆ ನಮ್ಮ ದುರಾದೃಷ್ಟ! ಸೋಡ್ತಿಯಲ್ಲಿ ಅವನ ಚೀಟೀ ಹಾರಿದುದರಿಂದ ಅವನನ್ನು ಬಿಟ್ಟರೆ ನಮಗೆ ಬೇರೆ ಗತಿಯಿಲ್ಲ!"

"ಅವನಿಗೆ ಇನ್ನೂ ಸ್ವಲ್ಪ ಸಮಯ ಕೊಟ್ಟು ನೋಡೋದು ನಾಣಿ!"

"ಅವನು ಕೇಳೋದೂ ಅದೇ! ತನಗೆ ಇನ್ನೂ ಸ್ವಲ್ಪ ಸಮಯ ಕೊಡೂ ಅಂತ!–ಈ ಸಿಗರೇಟು ಚೆನ್ನಾಗಿದೆ ವೇಣು," ಎನ್ನುತ್ತ ನಾಣಿ ಎರಡು ಮೂರು ಸಿಗರೇಟುಗಳನ್ನು ಪ್ಯಾಕಿನಿಂದ ಜಾರಿಸಿ, ತನ್ನ ಬೀಡಿಯ ಪೆಟ್ಟಿಗೆಯಲ್ಲಿ (ಬ್ರೂಕಲೆಕ್ಸ ಚೊಕಲೇಟು ಪೆಟ್ಟಿಗೆ) ತುರುಕಿಸುತ್ತಾ ಮುಂದುವರಿಸಿದನು. "ತಾನು ವಹಿಸಿಕೊಂಡ ಕಾರ್ಯವನ್ನು ನೆರವೇರಿಸುವುದು ಹೇಗೆಂಬುದೇ ಆತನಿಗೆ ತೋಚುವುದಿಲ್ಲವಂತೆ! ಆತನು ಮಾತ

ನೋಡುವ ರೀತಿ ನೋಡಿದರೆ, ಒಬ್ಬನು ತನ್ನ ಕೈಕಾಲು ಮುರಿದುಕೊಳ್ಳುವುದು ಏನು ಮಹಾ ಕೆಲಸವೆಂದು ಯಾರಾದರೂ ಎಣಿಸಬೇಕು. ಈ ಸಮ್ಮಂಧವಾಗಿ ನಾನು ಆತನಿಗೆ ಎಷ್ಟೋ ಸಲಹೆ, ಸೂಚನೆಗಳನ್ನು ಕೊಟ್ಟರೂ ಆತನ ಮನಸ್ಸಿಗೆ ಹೋಗೋದೇ ಇಲ್ಲ! ಅವನು ನಿಜವಾಗಿಯೂ ಏನೂ ತಿಳಿಯಲಾರದಷ್ಟು ಮೂರ್ಖನೋ, ಅಥವಾ ಬೇಕಂತಲೇ ಈ ರೀತಿ ಮಾಡುತ್ತಾನೋ ದೇವರೆ ಬಲ್ಲ! ನಿನ್ನೆ ನಡೆದ ಒಂದು ಸಂಗತಿ ಹೇಳುತ್ತೇನೆ, ಕೇಳು. ಹಡಗಿನ ಖಲಾಸಿಗಳಿಬ್ಬರು ಮಾರ್ಗದಲ್ಲಿ ಕಾದಾಡುವುದನ್ನು ನಾವು ನಿನ್ನೆ ನೋಡಿದೆವು. ಅವರಲ್ಲಿ ಯಾರಾದರೊಬ್ಬನ ಕಿರುಬೆರಳು ಇವನಿಗೆ ಸ್ಪರ್ಶವಾದರೆ ಸಾಕು—ಒಂದು ತಿಂಗಳ ಮಟ್ಟಿಗಾದರೂ ಇವನು ಆಸ್ಪತ್ರೆಯ ಮಂಚ ಹಿಡಿಯಲು ಅಡ್ಡಿಯಿಲ್ಲ! ಆ ಖಲಾಸಿಗಳು ಕಾದಾಡುವುದನ್ನು ಬಿಡಿಸಲು ಹೋಗೆಂದು ಇವನಿಗೆ ನಾನು ಸೂಚಿಸಿದೆ. ಹುಂ! ಇವ ನನ್ನ ಅಪ್ಪನಿಗೆ ಕಲಿಸ್ಯಾನು! ಬೇರೆಯವರ ಜಗಳದಲ್ಲಿ ಪ್ರವೇಶಿಸಲು ತಾನು ಖಂಡಿತವಾಗಿಯೂ ಸಿದ್ಧನಿಲ್ಲ ಎಂದು ಹೇಳಿದವನೇ ಅಲ್ಲಿಂದ ಕಂಬಿಕಿತ್ತನು! ಇಂಥ ಅನ್ಯಾಯ ಇದೆಯೆ? ಅವ ಏನೂ ಪ್ರಯೋಜನವಿಲ್ಲ ವೇಣೂ! ಥೇಟು ಉತ್ತರ ಕುಮಾರ! ಯಾವ ಕೆಲಸಕ್ಕೂ ಕೈಲಾಗದವ! ಕೊಟ್ಟ ಮಾತಿನ ಬೆಲೆಯಿಲ್ಲ! ಹೊತ್ತ ಹೊಣೆಗಾರಿಕೆಯ ಅರಿವಿಲ್ಲ! ಬೇರೆಯವರ ಉಪಕಾರಕ್ಕಾಗಿ ತಾನು ಸ್ವಲ್ಪ ತಾಪತ್ರಯ ಪಡಬೇಕೆಂಬ ಉದಾತ್ತ ಉದ್ದೇಶ ಕೂಡ ಇಲ್ಲ! ಬಿಡು, ಹಾಳಾಗಿ ಹೋಗಲಿ! ಅವನನ್ನು ನಂಬಿ ನಾವು ಕೆಟ್ಟೆವು, ಅವನನ್ನು ನೋಡಿದರೆ ನನ್ನ ಹೊಟ್ಟೆ ಹ್ಯಾಗೆ ಉರಿಯುತ್ತದೆಂಬುದು ನಿನಗೆ ಗೊತ್ತಿದೆಯೇ?"

"ಇಲ್ಲ, ಆದರೆ ತುಂಬಾ ಉರಿಯುತ್ತಿರಬೇಕು!''

"ತುಂಬಾ ಉರಿಯುತ್ತಿದೆ; ನೀನು ನಾಗಪ್ಪಯ್ಯನವರ ಹೊಟೇಲಿಗೆ ಹೊರಡುವ ಸಮಯವಾಯಿತೇ?''

"ಇಲ್ಲ, ಇನ್ನೂ ತುಂಬಾ ಹೊತ್ತಿದೆ!''

"ಸರಿ, ಹಾಗಾದರೆ ನಾನು ಹೋಗುತ್ತೇನೆ. ನಿನ್ನ ಹತ್ತಿರ ನಾಲ್ಕೈದು ರೂಪಾಯಿಗಳಿರಲಿಕ್ಕಿಲ್ಲ—ಅಲ್ಲವೇ?''

"ಇಲ್ಲ! ನಿನಗೆ ಹೇಗೆ ತಿಳಿಯಿತು?''

"ಒಳ್ಳೇದು, ಚಿಂತೆಯಿಲ್ಲ, ಹಾಗಾದರೆ ಎಂಟಾಣೆ ಕಾಸಿದ್ದರೆ ಕೊಡು. ಹಣದ ತಾಪತ್ರಯ ನಮಗೆ ಎಷ್ಟಿದೆ ನೋಡು ವೇಣು! ಸುಲಭದಲ್ಲಿ ನಮಗೆಲ್ಲರಿಗೂ ದೊರಕಬಹುದಾದ ಹಣವು ಈಗ ಆ ಹೇಡಿಯ ದೆಸೆಯಿಂದ ಕನ್ನಡಿಯೊಳಗಿನ ಗಂಟಾಗಿ ಪರಿಣಮಿಸಿತಲ್ಲಾ ಎಂದು ಯೋಚಿಸುವಾಗ ನನಗೆ ಅಳು ಬರುತ್ತದೆ ವೇಣು! ಚಿಕ್ಕ ಮಗುವಿನಂತೆ ಅತ್ತೂ ಬಿಡುವಾ ಎಂಬಂತಾಗುತ್ತದೆ. ಈಗ ಆ ರಂಗಣ್ಣನ ನೆರಳು ನೋಡಿದರೆ ನನಗೆ ದ್ವೇಷ ಉಕ್ಕಿ ಬರುತ್ತದೆ. ಅವನ ಕಣ್ಣುಗಳನ್ನು ನೋಡಿರುವೆಯಲ್ಲ?''

"ಅಹುದು, ಅವನಿಗೆ ಕಣ್ಣುಗಳಿವೆ. ತನಗೆ ಸಂಭ
ಬಹುದಾದ ಅಪಾಯಗಳನ್ನು ಸರಿಯಾಗಿ ಕಾಣುವ
ತೀಕ್ಷ್ಣವಾದ ದೃಷ್ಟಿಯು ಕಣ್ಣುಗಳವು!''

"ಅವನ ತಲೆಕೂದಲು ಎಷ್ಟು ಗುಂಗುರಾಗಿದೆ ನೋಡ

"ಅಹುದು, ಚಂದ ಕಾಣುತ್ತಾನೆ.''

"ಚಂದ ಮಣ್ಣು'' ಗುಂಗುರು ಕೂದಲಿನವರನ್ನು
ದಿಗೂ ನಂಬಬೇಡ!—ಇನ್ನೆರಡು ಸಿಗರೇಟು ತೆಗೆಯುತ್ತೆ
ವೇಣು" ಎಂದು ಇಡೀ ಸಿಗರೇಟು ಪ್ಯಾಕನ್ನೇ ತನ್ನ ಕಿಸೆಗೆ ತ
ಕಿಸಿ, ನಾಣಿ ನಡೆದು ಬಿಟ್ಟ!

* * * *

ನಾಣಿಯು ನಿರಾಶಾವಾದಿಯಾದುದರಲ್ಲಿ ಆಶ್ಚರ್ಯವೇ
ಇಲ್ಲ. ಜಗತ್ತಿನಲ್ಲಿ ಪ್ರತಿಯೊಬ್ಬನಿಗೆನ್ನುವಂತೆ ಏನಾದರೊಂ
ಅಪಾಯವು ಸಂಭವಿಸುತ್ತಿದ್ದರೂ, ರಂಗಣ್ಣನಿಗೆ, ಆ
ಸುದೈವದಿಂದಲೋ, ಅಥವಾ 'ಸಂಘ'ದ ಸದಸ್ಯರ ದುದೈ
ದಿಂದಲೋ, ಯಾವ ತರದ ಪ್ರಮಾದವೂ ಉಂಟಾಗುತ್ತಿರಲಿ
ಮುಂಬೈ ಗಿರಣಿಗಳಲ್ಲಿ ಮಜೂರರು ಯಂತ್ರಗಳನ್ನು ಸೇ
ದ್ದರು—ಗಂಗಾನದಿಯಲ್ಲಿ ಸ್ನಾನಮಾಡುತಿದ್ದ ಯಾತ್ರಿಕರ
ಮೊಸಳೆಗಳು ಎಳೆದೊಯ್ಯುತಿದ್ದವು—ಡಿಲ್ಲಿಯಲ್ಲಿ ಕುತು
ಮಿನಾರ ಹತ್ತಿ ಎಷ್ಟೋ ಜನರು ಕೆಳಗುರುಳುತಿದ್ದರು—ವಿ
ನದಲ್ಲಿ ಹಾರುವವರು ಕಾಣೆಯಾಗುತಿದ್ದರು—ರೈಲು ಪ್ರಯಾ
ಕರು ದಾರಿಯಲ್ಲಿ ಜಖಂ ಹೊಂದುತಿದ್ದರು. ಯಾವು
ಕಾರಣದಿಂದ ಆಸ್ಪತ್ರೆಗೆ ದಾಖಲಾಗದವರು ನೀರಿಗೆ ಹ
ಯೋ, ಮರಕ್ಕೆ ನೇತಾಡಿಯೋ ಪ್ರಾಣ ಬಿಡುತಿದ್ದರು. ಆ
ರಂಗಣ್ಣನು ಮಾತ್ರ ಶಾಬೂತ್! 'ಜಖಂ' ಸಂಭವಿಸುವು
ಇರಲಿ—ಒಂದು ಇರುವೆ ಕೂಡ ಆತನನ್ನು ಕಚ್ಚುತ್ತಿ
ಸುತ್ತಲೂ ಅಪಾಯಗಳಿಂದ ಆವರಿಸಲ್ಪಟ್ಟು ಕ್ರಮಾನ್ವ
ವಾಗಿಯೋ, ಅಥವಾ ಕ್ರಮತಪ್ಪಿಯೋ, ಆಗಾಗ್ಗೆ ಜಖಂ
ಳ್ಳುತಿದ್ದ ಜಗತ್ತಿನ ಜನಸಮೂಹದಲ್ಲಿ ಆರೋಗ್ಯ ಭೋ
ಸುಖದ ನಗುಮೊಗದಿಂದ ನಡೆಯುವ ವ್ಯಕ್ತಿ ಎಂದರೆ ರಂಗ
ನೊಬ್ಬನೆ. ಈ ಖಿನ್ನ ವಾತಾವರಣದಲ್ಲಿ ರಂಗಣ್ಣನ
ಉಪಾಯದಿಂದ ಅಪಾಯಕ್ಕೊಳಪಡಿಸಿ 'ಜಖಂ' ಪಡೆಸ
ನಾಣಿಯು ತಯಾರಿಸಿದ ಹಂಚಿಕೆಯೊಂದು ನನ್ನ ತಿಳು
ಕೆಗೆ ಬಂತು.

ರಂಗಣ್ಣನಿಗೆ ಮನೆ ಇರಲಿಲ್ಲ. ಅಗ್ಗ ಬಾಡಿಗೆ
ಕೋಣೆಯೊಂದರಲ್ಲಿ ಆತನ ವಸತಿ. ರಂಗಣ್ಣನನ್ನು ನೋ
ಕೊಂಡು ಬರುವ ಎಂದು ನನ್ನನ್ನು ನಾಣಿಯು ಒಂದು
ಅತ್ತ ಕರೆದೊಯ್ದನು.

"ರಂಗಣ್ಣನನ್ನು ಇಂದು ಕಾಣಲೇಬೇಕೆಂದು ನ
ಭಾರಿ ಇಚ್ಛೆಯಾಗಿದೆ ವೇಣು'' ಎಂದು ನಾವು ಮಾರ್ಗ
ಯುತ್ತಿರುವಾಗ ನಾಣಿಯು ಮಾತನಾಡಲು ಆರಂಭಿಸಿದ

"ವಿಶೇಷವೇನು?'' ಎಂದು ನಾನು ಕೇಳಿದೆ.

"ಆವನಿಗೆ ಇಂದು ಯಾವುದೋ ಒಂದು ನಾಯಿ ಕಚ್ಚಿರಬೇಕೆಂದು ನನಗೆ ತೋರುತ್ತದೆ. ನನಗೆ ಅರ್ಥವಾಗಲಿಲ್ಲ. "ರಂಗಣ್ಣನಿಗೆ ಇಂದು ಯಾವುದೋ ಒಂದು ನಾಯಿ ಯಾಕೆ ಕಚ್ಚಿರಬೇಕು?" ಎಂದು ನಾನು ಪ್ರಶ್ನೆ ಹಾಕಿದೆ.

"ಅದೇನೂ ನನಗರಿಯದು! ಆದರೆ ಏನೋ—ನನ್ನ ಮನಸ್ಸು ಹಾಗೆ ಹೇಳುತ್ತದೆ!" ಎಂದು ನಾಣುವು ವಿವರಿಸುವಾಗ ನಮಗೆದುರಾಗಿ ರಂಗಣ್ಣನು ವೇಗವಾಗಿ ನಡೆದುಕೊಂಡು ಬರುವುದು ನಮಗೆ ಕಂಡುಬಂತು. ನಮ್ಮನ್ನು ಕಂಡು ತಡೆದನು.

"ಎಲ್ಲಿಗೆ ಹೋಗುತ್ತಿರುವೆ ರಂಗಣ್ಣಾ'' ಎಂದು ನಾಣಿ ಆತನನ್ನು ಕೇಳಿದನು.

"ಹೆಚ್ಚು ಹೊತ್ತು ತಡೆಯಲು ಸಾಧ್ಯವಿಲ್ಲ! ಡಾಕ್ಟರರನ್ನು ಕರೆತರಲು ಹೋಗುತ್ತಿದ್ದೇನೆ."

"ಡಾಕ್ಟರರನ್ನೇ ಏಕೆ?''

"ಗುಂಡಪ್ಪನಿಗೆ ನಾಯಿ ಕಚ್ಚಿದೆ!''

ನಾಣಿಯು ನಿರಾಶೆಯ ದೃಷ್ಟಿಯಿಂದ ನನ್ನನ್ನು ನೋಡಿದನು. ದುರಾದೃಷ್ಟವು 'ಸಂಘ'ದ ಸದಸ್ಯರೊಡನೆ ಮುಚ್ಚಾಲೆ ಆಟ ಆಡುತ್ತಿತ್ತು. ಗುಂಡಪ್ಪನಿಗೆ ನಾಯಿ ಕಚ್ಚಿದರೆ ಪ್ರಯೋಜನವೇನು? ಗುಂಡಪ್ಪನಿಗೆ ಸಾವಿರ ನಾಯಿಗಳು ಕಚ್ಚಿದರೂ ಪ್ರಯೋಜನವೇನು? ರಂಗಣ್ಣನ ಹೊರತು ಬೇರೆ ಯಾರನ್ನಾದರೂ ನಾಯಿ ಕಚ್ಚಲಿ, ಹುಲಿ ಕಚ್ಚಲಿ, ಪ್ರಯೋಜನವೇ ಇಲ್ಲ!

"ನಿಮ್ಮ ನೆರೆಕರೆಯುವರ ನಾಯಿಯದು. ಸ್ವಭಾವದಲ್ಲಿ ಹೇಟು ಹುಲಿ! ಅದು ನನ್ನ ಕೋಣೆಯನ್ನು ಹೇಗೆ ಪ್ರವೇಶಿಸಿತೋ ದೇವರೇ ಬಲ್ಲ! ನಾನೂ ಗುಂಡಪ್ಪನೂ ಈಗತಾನೇ ಹೊರಗಿನಿಂದ ಬಂದು, ಬಾಗಿಲು ತೆರೆದು ಕೋಣೆಯನ್ನು ಪ್ರವೇಶಿಸಲು, ನನ್ನ ಮುಂದೆ ಇದ್ದ ಗುಂಡಪ್ಪನ ಕಾಲನ್ನು ಅದು ಕಚ್ಚಿಯೇ ಬಿಟ್ಟಿತು!''

"ಆ ನಾಯಿ ನಿನ್ನನ್ನೇಕೆ ಕಚ್ಚಲಿಲ್ಲ?" ಎಂದು ವ್ಯಥೆಯಿಂದ ನಾಣಿ ಕೇಳಿದನು.

"ಆ ಪ್ರಾಣಿ ಹೇಗೆ ನನ್ನ ಕೋಣೆ ಹೊಕ್ಕಿತೆಂಬುದೇ ನನಗೆ ಆಶ್ಚರ್ಯ ಕಾಣುತ್ತದೆ. ಬಹುಶಃ ಯಾರೋ ಉದ್ದೇಶಪೂರ್ವಕವಾಗಿಯೇ ಅದನ್ನು ಅಲ್ಲಿ ತಂದಿರಿಸಿದ್ದಿರಬೇಕೆಂದು ನನಗೆ ಅನ್ನಿಸುತ್ತದೆ" ಎಂದು ರಂಗಣ್ಣನೆಂದನು.

"ಆ ನಾಯಿ ನಿನ್ನನ್ನೇಕೆ ಕಚ್ಚಲಿಲ್ಲ?" ನಾಣಿಗೆ ಈ ಪ್ರಶ್ನೆಯ ಉತ್ತರ ಜರೂರು ಬೇಕಿತ್ತು.

"ನಾನು ತಪ್ಪಿಸಿಕೊಂಡೆ. ಅದು ಗುಂಡಪ್ಪನನ್ನು ಕಚ್ಚುವಾಗ ನಾನು ಒಂದು ಕಪಾಟನ್ನು ಏರಿ ನಿಂತುಕೊಂಡೆ. ನೆರೆಕರೆಯವರು ಬೇಗನೇ ಬಂದು ಆ ನಾಯಿಯನ್ನು ಎಳೆದುಕೊಂಡು ಹೋದರು. ನಾನು ಹೋಗುತ್ತೇನೆ. ಹೊತ್ತಾಯಿತು! ಡಾಕ್ಟರರನ್ನು ಕರೆತರಲಿಕ್ಕಿದೆ" ಎನ್ನುತ್ತ ರಂಗಣ್ಣನು ನಡೆದುಬಿಟ್ಟನು. ಎದುರಾಗಿ ಲಾರಿಯೊಂದು ರಭಸದಿಂದ ಬರುತಿತ್ತು. ರಂಗಣ್ಣನು ಬಹಳ ಎಚ್ಚರದಿಂದ ರಸ್ತೆಯ ಎಡಬದಿಯಿಂದ ನಡೆದು ಹೋದನು.

"ಕೇಳಿದೆಯೇನು? ನಾಯಿ ಕಚ್ಚಬಹುದೆಂದು ಹೆದರಿ ಕಪಾಟನ್ನೇರಿ ನಿಂತನಂತೆ" ಸೆಟಗೊಂಡು ನಾಣಿ ನುಡಿದನು.

"ಅಹುದಂತೆ!"

"ಈಗ ಆ ಲಾರ್ರಿ ಬರುವಾಗ ಅದಕ್ಕೆ ಢಿಕ್ಕಿ ಹೊಡೆದುಕೊಳ್ಳುವ ಉತ್ತಮ ಸಂದರ್ಭವನ್ನು ಹ್ಯಾಗೆ ಎಚ್ಚರದಿಂದ ತಪ್ಪಿಸಿಕೊಂಡನೆಂದು ನೋಡು!"

"ನೋಡಿದ್ದೇನೆ ನಾಣಿ"

"ಇದನ್ನು ಏನಾದರೂ ಮಾಡಿ ತೀರ್ಮಾನ ಮಾಡಬೇಕು. ಆ ಮನುಷ್ಯನಿಗೆ ಅವನು ಹೊತ್ತುಕೊಂಡ ಹೊಣೆಗಾರಿಕೆಯ ತಿಳುವಳಿಕೆಯನ್ನು ಮಾಡಿಕೊಡಬೇಕು.''

ಮರುದಿನ ಸಂಘದ ಸದಸ್ಯರ ನಿಯೋಗವು ರಂಗಣ್ಣನನ್ನು ಭೇಟಿಯಾಯಿತು. ನಿಯೋಗದ ಮುಖಂಡನಾದ ನಾಣಿಯು ವೃಥಾ ಮಾತುಕತೆಯಲ್ಲಿ ಕಾಲಕ್ಷೇಪಮಾಡದೆ ನಿಶ್ಚಯಿಸಿದ ವಿಷಯದಲ್ಲಿಯೇ ಮಾತನಾಡಲು ಮೊದಲುಮಾಡಿದನು.

"ಏನು ರಂಗಣ್ಣಾ, ಏನೆಂದು ಮಾಡಿರುವೆ?'' ಎಂದು ನಾಣಿ ಕೇಳಿದನು.

"ಯಾವುದರ ವಿಷಯ, ಏನದು?'' ಕೋರ್ಟಿನ ಗೂಡನ್ನೇರಿದ ಕೈದಿಯಂತೆ ರಂಗಣ್ಣನು ಮಾತನಾಡಿದನು.

"ನಾವು ನಿಶ್ಚಯಿಸಿದ ವಿಷಯವು ಕಾರ್ಯರೂಪಕ್ಕೆ ಬರುವುದ್ಯಾವಾಗ?''

"ಓಹೋ, ಜಖಂ ವಿಮೆಯ ವಿಚಾರವೇ?''

"ಅಹುದು, ಅದೇ ನಾನು ಕೇಳೋದು!''

"ನಾನೂ ಅದೇ ಆಲೋಚನೆಯಲ್ಲೇ ಇದ್ದೇನೆ'' ಎಂದು ರಂಗಣ್ಣನೆಂದನು.

ನಾಣಿಯ ಮುಖವು ಕೆಂಪೇರತೊಡಗಿತು. ವ್ಯಥೆ, ಕೋಪಗಳು ಒಂದೇ ಸಲ ಆತನ ಮುಖದಲ್ಲಿ ತೋರಬಂದವು. ಮೂಗಿನಲ್ಲಿ ಹಿಗ್ಗುಕುಗ್ಗುಗಳುಂಟಾಗಿ, ಈ ಅವಯವವು ಆಧಾರವಾಗಿದ್ದ ಅವನ ಕನ್ನಡಕವು ಪಟಪಟನೇ ಮೇಲೆ ಕೆಳಗೆ ಹಾರತೊಡಗಿತು. ಮನೋಕಂಪವುಂಟಾದಾಗ ನಾಣಿಯ ಕನ್ನಡಕವು ಅಂಥ ಸಂದರ್ಭಗಳಲ್ಲಿ ಸಹಾನುಭೂತಿಯಿಂದ ತಾನೂ ಕಂಪಿಸುವುದು ವಾಡಿಕೆ. ಕ್ಷಮಾರ್ಹವಲ್ಲದ ಅಪರಾಧ ಮಾಡಿದ ಮನುಷ್ಯನನ್ನು ಬಹಿರಂಗವಾಗಿ ಖಂಡಿಸುವ

ವಕೀಲನಂತೆ ಮಾತನ್ನು ಮುಂದುವರಿಸಲು ನಾಣಿಯು ತಯಾರಾದನು.

"ಅದಕ್ಕೆ ಇನ್ನೂ ಸಮಯ ಸನ್ನಿಹಿತವಾಗಿಲ್ಲವೇ?'' ನಾಣಿ ಗುಡುಗುಡಿಸಿದನು.

ರಂಗಣ್ಣನು ಪಿಳಿ ಪಿಳಿ ಕಣ್ಣು ಮಾಡಿದನು.

"ನಾವು ಎಷ್ಟು ಸಮಯದಿಂದ ಕಾದು ಕೂತಿದ್ದೇವೆಂಬುದು ನಿನಗೆ ಗೊತ್ತಿಲ್ಲವೇ? ನಿನ್ನ ಹೆಸರಿನಲ್ಲಿ ವಿಮೆ ತೆಗೆಯಲು ನಾವೆಲ್ಲ ಎಷ್ಟು ಖರ್ಚುಮಾಡಿ, ತಾಪತ್ರಯಗಳನ್ನು ಅನುಭವಿಸಿದ್ದೇವೆಂದು ನಿನಗರಿಯದೇ? ನಿನ್ನಿಂದ ನಮ್ಮ ಕಾರ್ಯ ಖಂಡಿತ ಕೈಗೂಡುವುದೆಂದು ನಂಬಿ, ನಿನ್ನಲ್ಲಿ ನಾವಿಷ್ಟು ವಿಶ್ವಾಸವಿಟ್ಟಿರುವಾಗ, ನಾವು ಮಾಡಿಕೊಂಡಿದ್ದ ಒಪ್ಪಂದವನ್ನು ಗೌರವಯುಕ್ತವಾಗಿ ನಿರ್ವಹಿಸಲು, ನೀನು ಅಸಮರ್ಥನೆಂದು ನಾವೀಗ ಕಡೇಗೆ ತಿಳಕೊಳ್ಳಬೇಕಾಯಿತೇ? ನೀನು ಧೈರ್ಯವಂತ, ಶೌರ್ಯವಂತ, ಕೊನೆ ವರೇಗೆ ಮಿತ್ರರ ಕೈಬಿಡದ ಎದೆಗಾರಿಕೆಯ ಮನುಷ್ಯನೆಂದು ನಾವು ಇಷ್ಟರ ತನಕ ತಿಳಕೊಂಡಿದ್ದೆವು—"

"ನಿಜ, ಆದರೆ—"

"ನೀನು ನಡು ನೀರಲ್ಲಿ ಸ್ನೇಹಿತರ ಕೈ ಬಿಡುವವನೆಂದು ನಾವು ಸ್ವಪ್ನದಲ್ಲಿ ಕೂಡ ಎಣಿಸಿರಲಿಲ್ಲ. ನಿನ್ನ ಮಿತ್ರಭಕ್ತಿ, ಮಿತ್ರಪ್ರೇಮವನ್ನು ಈಗ ಕರ್ತವ್ಯದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಸಮಯ ಬಂದಿದೆ. ನಮ್ಮ ಪುರಾಣಾದಿ ಕಾಲದಿಂದಲೂ ಮಿತ್ರಭಕ್ತಿಯ ದೃಷ್ಟಾಂತಗಳು ಎಷ್ಟೋ ಕಂಡುಬರುತ್ತಿವೆ ಅಭಿಮನ್ಯುವು ತನ್ನ ಕಾಲನ್ನು ಮುರಿದು ತೆಗೆದು ಅವನ ಮಿತ್ರ ಜಮದಗ್ನಿಯ ಕೈಗೆ ಕೊಟ್ಟನೆಂದು ಭಾಗವತದಲ್ಲಿ ವಾಲ್ಮೀಕಿ ಹೇಳಿದ್ದಾನೆ" ನಾಣಿಯು ತನಗಿರುವ ಪುರಾಣದ ಜ್ಞಾನವನ್ನು ತೋರ್ಪಡಿಸಿದನು. ಇದನ್ನು ಕೇಳಿ ಕೂಡಿದವರೆಲ್ಲಾ ಅವಾಕ್ಕಾದರು.

ನಾಣಿ ಮುಂದುವರಿಯುತ್ತಾ ಹೇಳಿದನು: "ನಿಷ್ಠೆ ಎಂದರೇನೆಂದು ಅರಿತ ಬೇರೆ ಯಾರಾದರೊಬ್ಬನು ನಿನ್ನ ಪ್ರತಿಯಾಗಿ ನಮಗೆ ಸಿಕ್ಕಿದ್ದರೆ ತನ್ನಿಂದ ತನ್ನ ಮಿತ್ರರಿಗಾಗುವ ಉಪಕಾರವನ್ನು ಗಣಿಸಿ ಈ ವಿಷಯವನ್ನು ಎಂದೋ ಕಾರ್ಯರೂಪಕ್ಕೆ ತಂದು ಪೂರೈಸುತಿದ್ದನು. ನೀನು, ಎಷ್ಟೋ ಸಂದರ್ಭಗಳು ನಿನಗೆ ಈ ವರೆಗೆ ಸಿಕ್ಕಿದರೂ ಅವುಗಳ ಲಾಭ ಪಡೆಯಲು ನಿರಾಕರಿಸಿದೆ. ಅದೇಕೆ, ನಿನ್ನೆ ಮನಸ್ಸು ಮಾಡಿದ್ದರೆ ನೀನು ಆ ಲಾರಿಗೆ ಢಿಕ್ಕಿಹೊಡೆಯಬಹುದಿತ್ತು—"

"ಆದರೆ ಲಾರಿಗೆ ಢಿಕ್ಕಿಹೊಡೆಯೋದು ಸುಲಭ ಕೆಲಸವಲ್ಲ."

"ಮಣ್ಣು! ಸ್ವಲ್ಪ–ಒಂದಿಷ್ಟು ಧೈರ್ಯ ಮಾಡಿಕೊಂಡರಾಯಿತು. ಲಾರಿ ಓಡಿಬರುತ್ತಿರುವಾಗ ಅಡ್ಡವಾಗಿ ನಿಲ್ಲೋ ಅರ್ಧ ಕ್ಷಣದಲ್ಲಿ ಕೆಲಸ ಮುಗಿದು ಹೋಗುವುದು. ಎಳ್ಳ ತ್ರಾಸಿಲ್ಲ, ನೋವಿಲ್ಲ, ಏನೂ ಗೊತ್ತಾಗುವುದಿಲ್ಲ! ದಂಗುಬಡೆದಂತಾಗುತ್ತದಂತೆ!"

"ಹಾಗೆಂದು ನಿನಗ್ಯಾರು ಹೇಳಿದರು?"

"ಯಾರೋ ಹೇಳಿದ್ದರು, ನನಗೀಗ ನೆನಪಿಲ್ಲ!''

"ಹಾಗಾದರೆ ಅವನೊಬ್ಬ ಕತ್ತೆ ಎಂದು ನಾನು ಹೇ ನೆಂದು ಅವನಿಗೆ ತಿಳಿಸು" ಎಂದು ಒರಟಾಗಿ ರಂಗಣ್ಣ ಉ ವಿತ್ತನು.

"ಹೋಗಲಿ, ಲಾರಿಗೆ ಢಿಕ್ಕಿ ಹೊಡೆಯೋದು ಬೇ ದರೆ ಬೇರೆ ದಾರಿಗಳು ಹಲವಾರಿವೆ. ಆದರೆ ಅವನ್ನೆಲ್ಲಾ ಸೂಚಿಸಿದರೂ ನೀನು ಉಪಯೋಗ ಪಡೆಯುವುದಿಲ್ಲ. ನಿ ಉದ್ಯಮವೇ ಇಲ್ಲ. ಇಲ್ಲವಾದಲ್ಲಿ ನಾನು ಅಷ್ಟು ಕಷ್ಟ ಆ ನಾಯಿಯನ್ನು ತಂದು ನಿನ್ನ ಕೋಣೆಯಲ್ಲಿ ನಿನ್ನ ದ್ದಾಗ, ಅದರ ಬಾಯಿಗೆ ನಿನ್ನ ಕಾಲು ಕೊಡುವು ಬಿಟ್ಟು ನೀನು ಕಪಾಟನ್ನೇರಿ ನಿಂತೆಯಂತೆ—"

"ಆ ನಾಯಿಯನ್ನು ತಂದು ರಂಗಣ್ಣನ ಕೋಣೆ ಬಿಟ್ಟವನು ನೀನೇ?'' ಎಂದು ಮಧ್ಯದಲ್ಲಿ ಬಾಯಿ ಆಶ್ಚರ್ಯ, ಕಳವಳದಿಂದ ಗುಂಡಪ್ಪನು ಕೇಳಿದನು.

"ಅಹುದು, ಆದರೆ ಆ ವಿಷಯ ಮತ್ತೆ ಮಾತನಾಡ ನೋಡು ರಂಗಣ್ಣ''

"ನಿನ್ನಷ್ಟು ಪರಮ ನೀಚ—'' ಎಂದು ಗುಂಡ ಎನ್ನುತ್ತಿರುವಾಗ........

"ಬಾಯ್ಮುಚ್ಚು'' ನಾಣಿಯು ಗುಡುಗುಡಿಸಿ ಕನ್ನ ಕನ್ನಡಿಗಳಿಂದ ತೀಕ್ಷ್ಣವಾಗಿ ಗುಂಡಪ್ಪನನ್ನು ನೋಡಿ ಹೆದರಿ ಬಾಲ ಮುದುಡಿಕೊಂಡ ನಾಯಿಯಂತೆ ಗುಂಡ ಒಬ್ಬ ಸದಸ್ಯನ ಹಿಂದೆ ಮರೆಯಾಗಿ ತೆಪ್ಪಗಾಗಿ ಕು ಕೊಂಡನು.

'ರಂಗಣ್ಣನನ್ನು ಕುರಿತು ನಾಣಿ ತನ್ನ ಭಾಷಣ ಮುಂದುವರಿಸಿದನು. "ರಂಗಣ್ಣಾ, ನಿನ್ನ ಕೈ, ಕಾಲು, ಸೆ ಅಥವಾ ಕುತ್ತಿಗೆ ಮುರಿದು ಹೋದರೆ ಸಂಘಕ್ಕೆ ಲಾಭದ ಮಾತು ಹಾಗಿರಲಿ,—ನಿನ್ನ ಪಾಲಿಗೆಷ್ಟು ಹಣ ವುದು ನೋಡು. ನಿನಗೆ ಬೇಕಾದ ಹೊಸ ಹೊಸ ಫ ಪೋಷಾಕು ಮಾಡಿಸಿ, ಅವನ್ನು ಧರಿಸಿ, ಬಾಯಲ್ಲಿ ಸಿಗರೇಟು ಇಟ್ಟುಕೊಂಡು ಚಲಚ್ಚಿತ್ರ ಕಂಪೆನಿಗಳ ಮ ರನ್ನು ಕಾಣಲಿಕ್ಕೆ ಹೋದೆ ಎಂದರೆ ನಿನ್ನ ಕಾಲಿಗೆ ಬಿದ್ದು ರವೋ ಎರಡು ಸಾವಿರವೊ ರೂಪಾಯಿ ಸಂಬಳದಲ್ಲಿ ನಟನಾಗಿ ಕೆಲಸ ಕೊಡುವರು!'

ನಾಣಿಯ ವಾಕ್ಪಟುತ್ವವು ವ್ಯರ್ಥವಾಗಲಿಲ್ಲ. ಬಿಟ್ಟ ಬಾಣವು ಇಟ್ಟ ಗುರಿ ಸೇರಿದಂತೆ ತೋರಿತು.

ರಂಗಣ್ಣನ ಕಣ್ಣುಗಳು ಹೊಳೆದವು.

“ನಾಣಿ, ನಾನು ಹೇಳಲೇ? ಬಾಯಿಯಿಂದ ಹೇಳಿದಷ್ಟು ಸುಲಭವಲ್ಲ ಈ ಕೆಲಸ! ನನ್ನಲ್ಲಿ ಅಷ್ಟು ಧೈರ್ಯವಿಲ್ಲ. ಆದರೆ ನೀವೆಲ್ಲರೂ ಸೇರಿ ಆ ಹೊಸದಾಗಿ ತೆರೆಯಲ್ಪಟ್ಟ ‘ಭೋಜ ಕೆಫೆ’ಯಲ್ಲಿ ನನಗೊಂದು ಭರ್ಜರಿ ಟಿಫೀನು ಕೊಟ್ಟರೆ ಮುರಿದು ಹೋದ ನನ್ನ ನರಗಳಿಗೆ ಚೇತನ ಬಂದು, ಧೈರ್ಯದಿಂದ ಒಂದು ಅವಯವವನ್ನು ಮುರಿದುಕೊಳ್ಳುವ ಪ್ರಯತ್ನವನ್ನು ನಾನು ಮಾಡಲು ನೋಡುತ್ತೇನೆ’ ಎಂದು ರಂಗಣ್ಣನು ಒಂದು ಸೂಚನೆ ಮುಂದಿಟ್ಟನು.

ಈ ಹೊಸ ಸೂಚನೆಯು “ಸಂಘ”ದ ಎಲ್ಲಾ ಸದಸ್ಯರಿಂದ ಸ್ವೀಕರಿಸಲ್ಪಟ್ಟಿತು (ಬೇರೆ ಉಪಾಯವಿಲ್ಲದುದರಿಂದ). ಎಲ್ಲರೂ (ನಾಣಿ ವಿರಹಿತ) ಪುನಃ ಸ್ವಲ್ಪ ಪಾಲು ವಂತಿಗೆ ಕೂಡಿಸಿ ರಂಗಣ್ಣನಿಗೆ “ಬೋಜ ಕೆಫೆ”ಯಲ್ಲಿ ಒಂದು ಭರ್ತಿ ಟಿಫೀನು ಕೊಟ್ಟರು. ಹೊಟೇಲಿಂದ ಹೊರ ಬಾಗಿಲಿಗೆ ಬಂದ ನಾಣಿಯು. ರಂಗಣ್ಣನೊಡನೆ ಆತನಿಗೆ ತೃಪ್ತಿಯಾಯಿತೇ ಎಂದು ಕೇಳಿದನು.

“ಓಹೋ, ತುಂಬಾ ಖುಶಿಯಾಯಿತು!”

“ನಿನ್ನ ನರಗಳಿಗೆ ಈಗಲಾದರೂ ಚೇತನ ಬಂತೆ?”

“ಯಾಕೆ?” ಎಂದ ರಂಗಣ್ಣ.

“ಅಲ್ಲ, ಈಗ ಜಖಂ ಹೊಂದಬಹುದಲ್ಲವೇ?”

“ಓಹೋ, ಆ ವಿಚಾರವೇ? ಅದು ಸಾಧ್ಯವೇ ಇಲ್ಲ!”

ರಂಗಣ್ಣನ ಈ ನುಡಿ ಕೇಳಿ ನಾವೆಲ್ಲರು ವಿಸ್ಮಯಪಟ್ಟೆವು!

“ನಮಸ್ಕಾರ! ಕಾಫಿಗೆ ಶಕ್ಕಾರು ಕೊಟ್ಟದಕ್ಕೆ ಕ್ಷಮಿಸಿರಿ” ಎಂದು ಮೂದಲಿಸುತ್ತಾ ರಂಗಣ್ಣ ರಸ್ತೆಗೆ ಇಳಿದನು. ಅಲ್ಲೆ ಬಿದ್ದಿದ್ದ ಬಾಳೆ ಸಿಪ್ಪೆಯ ಮೇಲೆ ಇಟ್ಟ ಕಾಲು ಜಾರಿ ರಸ್ತೆಯಲ್ಲಿ ಹೊರಳಾಡಿದನು. ಆಗಲೇ ರಭಸದಿಂದ ಬರುತಿದ್ದ ಲಾರಿಯೊಂದು ಹತ್ತು ಮಾರು ದೂರ ಆತನನ್ನು ಎಸೆದುಬಿಟ್ಟಿತು.

“ಒಂದು ಕೈ—ಎರಡು ಪಕ್ಕೆಲುಬುಗಳು—ತಲೆಗೆ ಪೆಚ್ಚು ಪೆಟ್ಟಾಗಿಲ್ಲ” ಎಂದು ಪ್ರಥಮ ಚಿಕಿತ್ಸೆಗೆ ಬಂದಿದ್ದ ಹತ್ತಿರದ ಡಾಕ್ಟರರು ಅಭಿಪ್ರಾಯ ಕೊಟ್ಟರು.

* * * *

ಮೂರು ವಾರಗಳ ನಂತರ ‘ಸಂಘ’ದ ಸದಸ್ಯರ ಪರವಾಗಿ ನಾನೂ, ನಾಣಿಯೂ, ಒಂದು ಬುಟ್ಟಿ ಕಿತ್ತಳೆ ಹಣ್ಣು ತೆಗೆದುಕೊಂಡು ರಂಗಣ್ಣನನ್ನು ಕಾಣಲು ಆಸ್ಪತ್ರೆಗೆ ಹೋದೆವು.

“ಬನ್ನಿ ಸ್ವಾಮಿ, ಕೂತುಕೊಳ್ಳಿ ಎಂದು ಮಂಚದ ಮೇಲೆ ಮಲಗಿದ್ದ ರಂಗಣ್ಣನು ನಮ್ಮನ್ನು ಸ್ವಾಗತಿಸಿದನು. ನನಗದು ಸ್ವಲ್ಪ ವಿಚಿತ್ರವಾಗಿ ತೋರಿತು. “ಸ್ವಾಮಿ” ಎಂದು ಎಂದೂ ನಮ್ಮನ್ನು ಸಂಭೋದಿಸುವುದು ರಂಗಣ್ಣನ ಅಭ್ಯಾಸವಲ್ಲ. ನಾಣಿಗೆ ವಿಶೇಷವೇನೂ ಕಂಡುಬಂದಂತೆ ತೋರಲಿಲ್ಲ.

“ಏನು ರಂಗಣ್ಣಾ ಹ್ಯಾಗಿದ್ದಿ ಈಗ? ನಿನಗಾಗಿ ಕೆಲವು ಕಿತ್ತಳೆಹಣ್ಣು ತಂದಿದ್ದೇವೆ” ಎಂದು ಉಲ್ಲಾಸದಿಂದ ನಾಣಿ ಮಾತನಾಡಿದನು.

“ದೇವರ ದಯೆಯಿಂದ ಈಗ ಗುಣವಾಗುತ್ತಾ ಬರುತ್ತದೆ. ಅಂತೂ ಈ ಇನ್ಸ್ಯೂರ್ ಕಂಪೆನಿಗಳಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಬಡ ಹಿಂದೂಸ್ಥಾನದಲ್ಲಿ ಈ ರೀತಿ ಜನರಿಗೆ ಉಪಕಾರವಮಾಡುವ ಇನ್ಸ್ಯೂರು ಕಂಪೆನಿಗಳಿವೆ ಎಂದು ನಾವು ತುಂಬಾ ಹೆಮ್ಮೆಪಡಬೇಕಾದದ್ದೆ! ಎಷ್ಟು ಬೇಗ ವಿಮಾ ಹಣವನ್ನು ಕೊಟ್ಟು, ತೀರಿಸುತ್ತಾರೆ! ಒಂದಿಷ್ಟಾದರೂ ಕಾಲಹರಣವಿಲ್ಲ—ನಿಮ್ಮ ಇನ್ಸ್ಯೂರು ಕಂಪೆನಿಗಳಿಗೂ, ನಾನು ಹೇಳುವ ಮಾತು ಇದೇ!”

“ನಮ್ಮ ಇನ್ಸ್ಯೂರ್ ಕಂಪೆನಿ?” ನಾಣಿ ಬೆರಗಾದ.

“ನೀವು ಇನ್ಸ್ಯೂರು ಕಂಪೆನಿಯವರಲ್ಲವೇ?”

“ರಂಗಣ್ಣಾ ಏನೋ ಇದು? ನಮ್ಮ ಪರಿಚಯವಿಲ್ಲವೆ? ನಾವು ನಿನ್ನ ಗೆಳೆಯರಲ್ಲವೇ? ನಾಣಿ ಮತ್ತು ವೇಣು”

ರಂಗಣ್ಣನು ಹುಬ್ಬುಗಂಟಿಕ್ಕಿ, ಕಣ್ಣುಗಳನ್ನು ಸಂಕೋಚಿಸಿ, ಮತ್ತೆ ವಿಸ್ತರಿಸಿ, ಮೇಲೆ ಕೆಳಗೆ ಎರಡು ಬಾರಿ ನಾಣಿನ್ನೇ ನೋಡಿದನು. “ಅಹುದು, ನಾಣಿ, ಈಗ ತಿಳಿಯಿತು! ಕ್ಷಮಿಸು ನಾಣಿ, ನನಗಾದ ಅಪಘಾತದಿಂದ ನನಗೆ ಆಗಾಗ್ಗೆ ಮರವೆಯುಂಟಾಗುತ್ತದೆ. ನೀವು ಇನ್ಸ್ಯೂರು ಕಂಪೆನಿಯವರೆಂದೇ ನಾನು ಭಾವಿಸಿದೆ! ಏಕೆಂದರೆ ಕೆಲ ಸಮಯದ ಹಿಂದೆ ಇಪ್ಪತ್ತು ಕಂಪೆನಿಗಳಲ್ಲಿ ನಾನು ಜಖಂ ವಿಮೆ ತೆಗಿಸಿದ್ದೆ. ಹದಿನೆಂಟು ಕಂಪೆನಿಗಳಿಂದ ನನಗೆ ಈಗಾಗಲೇ ಪರಿಹಾರ ಸಿಕ್ಕಿದೆ. ನೀವು, ಆ ಇನ್ನೂ ಉಳಿದ ಎರಡು ಕಂಪೆನಿಗಳ ಪ್ರತಿನಿಧಿಗಳು, ನನಗೆ ಪರಿಹಾರದ ಹಣ ಕೊಡಲು ಬಂದಿರುತ್ತೀರಿ ಎಂತ ನಾನು ಎಣಿಸಿದೆ.”

“ಅಷ್ಟರಲ್ಲಿ ಹಣವೂ ಸಿಕ್ಕಿತೇ? ಭೇಷ್! ಹಾಗಾದರೆ ‘ಸಂಘ’ದ ಸದಸ್ಯರ ಸಭೆಯನ್ನು ಕರೆಯೋದೇ!” ನಾಣಿ ತನ್ನ ಕೈಗಳನ್ನು ಉಜ್ಜುತ್ತ ಸಂತೋಷದಿಂದ ಹೇಳಿದನು.

“ಸಂಘ? ಯಾವ ಸಂಘ?” ಎಂದು ರಂಗಣ್ಣನು ಹುಬ್ಬುಗಂಟಿಕ್ಕಿ ಅವನ್ನು ಮೇಲೆತ್ತಿ ಕೇಳಿದನು.

“ಅಷ್ಟರಲ್ಲಿಯೇ ಮರೆತು ಬಿಟ್ಟೆಯಾ? ನಾವು ಏಳು

ಮಂದಿ ಸೇರಿ, ಪಾಲು ವಂತಿಗೆ ತೆತ್ತು, ನಿನ್ನಿಂದ ವಿಮೆ ತೆಗೆಸಿ, ನಿನಗೆ ಏನಾದರೂ 'ಜಖಂ' ಆದರೆ ಇನ್ಶ್ಯೂರು ಕಂಪೆನಿಗಳಿಂದ ಸಿಗುವ ಪರಿಹಾರದ ಹಣವನ್ನು ಎಲ್ಲ ಸದಸ್ಯರೂ ಹಂಚಿಕೊಳ್ಳೋದು ಎಂದು ಒಪ್ಪಂದ ಮಾಡಿಕೊಂಡಿಲ್ಲವೇ?"

ಇದನ್ನು ಕೇಳಿದೊಡನೆ ರಂಗಣ್ಣನು ದಿಗ್ಭ್ರಾಂತನಾದವನಂತೆ ಕಂಡುಬಂದನು. "ಈ ವಿಚಾರವೇನೂ ನಾನರಿಯೆ! ಇನ್ಶ್ಯೂರು ಕಂಪೆನಿಗಳನ್ನು ವಂಚಿಸಲು ಹವಣಿಸುವ ಠಕ್ಕರ ಕೂಟಕ್ಕೆ ನಾನೆಂದೂ ಸೇರಿಲ್ಲ?" ಎಂದು ಬಿರುಸಾಗಿ ನುಡಿದನು.

'ರಂಗಣ್ಣಾ—ಸ್ವಲ್ಪ ಆಲೋಚಿಸಿ ನೋಡು–'

'ಒಂದು ಮಿನಿಟು ಕೂಡ ಆಲೋಚಿಸುವ ಅವಶ್ಯವಿಲ್ಲ–ಆದರೂ, ನೀನು ಹೇಳುವಂತೆ ಅಂಥ 'ಸಂಘ'ವು ನಿಜವಾಗಿಯೂ ಇರುವುದಾದರೆ, ಆ ಬಗ್ಗೆ ರಿಕಾರ್ಡು, ಬರಹ. ಏನಾದರೂ ಇದ್ದರೆ ತೋರಿಸುವೆಯಾ?'

ನಾನೂ ನಾಣಿಯೂ, ಮೂಕರಂತೆ ಒಬ್ಬರನ್ನೊಬ್ಬರು ನೋಡಿದೆವು.

'ನಡೆ ವೇಣು, ಇನ್ನು ಇಲ್ಲಿ ಇದ್ದು ಪ್ರಯೋಜನವಿಲ್ಲ.'

'ಚೂರು ಪ್ರಯೋಜನವಿಲ್ಲ.'

'ಹೊರಟಿರಾ? ನಮಸ್ಕಾರ! ಈ ಹಣ್ಣುಗಳನ್ನು ತಂದುದಕ್ಕೆ ತುಂಬಾ ಕೃತಜ್ಞನಾಗಿದ್ದೇನೆ' ಅಣಕಿಸುವ ಧ್ವನಿಯಲ್ಲಿ ರಂಗಣ್ಣನು ನುಡಿದನು. ನಾವು ಕೋಣೆಯಿಂದ ಹೊರಬರುವಾಗ ಯಾರೋ ನಗುವಂತೆ ನಮಗೆ ಕೇಳಿತು. ಮುಖದ ಮೇಲೆ ಮುಸುಕೆಳೆದು ಮಂಚದ ಮೇಲೆ ಮಲಗಿದ್ದ ರಂಗಣ್ಣನು ನಡುಗುವಂತೆ ನಮಗೆ ಕಂಡುಬಂತು.

*　　*　　=　　*

ಆಸ್ಪತ್ರೆಯಿಂದ ಹಿಂದಿರುಗುವಾಗ ಮಾರ್ಗದಲ್ಲಿ ನಾಣಿಯು 'ನಂಬಿ ಕೆಟ್ಟವರು ಉಂಟೇ, ರಂಗಯ್ಯನ, ನಂಬಲಾರದೆ ಕೆಟ್ಟರು' ಎಂದು ಕಿರು ಧ್ವನಿಯಲ್ಲಿ ದಾಸರ ಪದ ಹಾಡುತ್ತಿದ್ದನು. ಅವನ ಮುಖದಲ್ಲಿ ಮ್ಲಾನತೆ ಕಂಡುಬರಲಿಲ್ಲ. ಕಾರ್ಯದಲ್ಲಿ ಪರಾಭವ ಪಡೆದರೂ ಅದನ್ನು ಸಹಿಸಿ ಎದೆಗಾರಿಕೆಯಿಂದ ಜೀವನಪಥದಲ್ಲಿ ನಡೆಯುವವ ತೋರುತಿದ್ದನು.

'ಪುರಂದರ ದಾಸರು ಹುಚ್ಚರಾಗಿದ್ದಿರಬೇಕು, ವೇ

'ಏಕೆ?'

'ಈ ರಂಗಣ್ಣನನ್ನು ನಂಬಿ ನಾವು ಕೆಟ್ಟೆವು.'

'ಈ ರಂಗಣ್ಣನೂ, ಪುರಂದರ ದಾಸರು ಹೇಳಿದ ಣ್ಣನೂ ಬೇರೆ ಬೇರೆಯಲ್ಲವೇ?'

'ಮಣ್ಣು! ಎಲ್ಲಾ ರಂಗಣ್ಣರೂ ಒಂದೇ! ಮಾಡುವವರೇ! ರಂಗಣ್ಣ ಎಂದು ಹೆಸರಿದ್ದವನನ್ನು ಬಾರದು!'

'ಏಕೆ ಅಷ್ಟು ವಿರಕ್ತಿ, ಮತ್ತು ನಂಜು? ಅವನ ನದು ಅವನಿಗೆ ಸಿಕ್ಕಿತು, 'ಸಂಘ'ದ ಸದಸ್ಯರ ದುರ್ಭಾಗ್ಯ

'ಅಲ್ಲ ವೇಣು, ಅಂದು ಸೋಡ್ತಿ ತೆಗೆಯುವಾಗ ಚೀಟುಗಳ ಮೇಲೆ ಇವನ ಹೆಸರನ್ನೇ ಬರೆದಿದ್ದೆ. ಇ ಇಷ್ಟು ದೊಡ್ಡ ವಿಶ್ವಾಸಘಾತಕಿ ಎಂದು ನನಗೆ ಆವಾ ಗೊತ್ತಿದ್ದರೆ; ಶಾಮಣ್ಣನ ಹೆಸರನ್ನೇ ಎಲ್ಲಾ ಚೀಟುಗಳ ಬರೆಯುತಿದ್ದೆ. ಈಗ ಮಾತಾಡಿ ಪ್ರಯೋಜನವೇನು? ಹಾ ಹೋಗಲಿ!'

'ಆದದ್ದು ಆಗಿಹೋಯಿತು. ಹೋಗಲಿ'

'ವೇಣು, ಎರಡು ಬುದ್ಧಿಯ ಮಾತುಗಳನ್ನು ತ್ತೇನೆ. ಅವುಗಳನ್ನು ಯಾವಾಗಲೂ ನೆನಪಿನಲ್ಲಿಡು—

'ಹೇಳು'

'ಯಾರನ್ನೂ ನಂಬ ಬೇಡ, ಯಾರು ಏನನ್ನು ಬೊ ದರೂ ಕೇಳಬೇಡ.'

'ಇದನ್ನು ಖಂಡಿತ ಮರೆಯುವುದಿಲ್ಲ ನಾಣಿ.'

'ತಿಳಿಯಿತಲ್ಲ. ಈಗ ನಾಳೆ ರೇಶನ್ ತರಲು ಹಣ ಐದು ರೂಪಾಯಿ ಸಾಲ ಕೊಡು' ಎಂದು ನಾಣಿ ಕೈಚಾಚಿ

'ಸಾಧ್ಯವೇ ಇಲ್ಲ. ನಿನ್ನ ಬುದ್ಧಿವಾದದಂತೆ ನಡೆ ತಿದ್ದೇನೆ' ಎಂದು ಹೇಳಿ ನಾನು ನಾಣಿಯನ್ನು ಅಲ್ಲೇ ಬಿ ನನ್ನ ದಾರಿ ಹಿಡಿದೆ.

★ ವರ್ಷ ಭವಿಷ್ಯ ★

ತಾ. 1—1—1952ರಿಂದ .... ತಾ. 31—12—1952ರ ವರೆಗೆ

[ಶ್ರೀ ಎಮ್. ಸುಬ್ರಾಯನ್, ಸಾಹಿತ್ಯ ಮತ್ತು ಜ್ಯೋತಿಷ ಶಿರೋಮಣಿ, ವಿದ್ವಾನ್]

ಮೇಷ:—

ಅಲ್ಲೋಲಕಲ್ಲೋಲವಾದ ವಾತಾವರಣವು ನಿಮ್ಮ ಜೀವನ
ಲ್ಲಿ ಬಂದೊದಗುತ್ತಿದೆಯಾದರೂ, ಸಾಹಸದಿಂದ ಮುನ್ನಡೆವ
ರತೆ ನಿಮ್ಮಲ್ಲಿದ್ದು, ವರ್ಷಾಂತ್ಯ ಭಾಗದಲ್ಲಿ ಸುಖಸಂಪ
ಯ ಚಿಹ್ನೆ ಕಾಣುವಿರಿ. ನಿಮ್ಮ ಶತ್ರುಗಳು ನಿಮ್ಮ ಪತನ
ನ್ನೇ ನಿರೀಕ್ಷಿಸುವರು; ಆದರೆ ಅವರ ದುಶ್ಚೇಷ್ಟೆ ವರ್ತನೆಗಳು
ರಲ್ಲಿ ಮಾಡಿದ ಹೋಮದಂತೆ ವಿಫಲವಾಗುವುವು. ನವೀನ
ಗೆಯ ಅವಕಾಶ ವೃಶ್ಚಿಕ ಕುಜಚಾರದಲ್ಲಿ ಉಂಟಾಗಿ, ಅನಿ
ಕ್ಷಿತ ಪ್ರಸಂಗಗಳು ಕಂಡುಬರುತ್ತವೆ. ಆರೋಗ್ಯ, ಕುಟುಂಬ
ಖಗಳಿಗಾಗಿ ತುಂಬ ವ್ಯಯವು ಎಪ್ರೀಲ್, ಮೇ, ಜೂನ್,
ಷ್ಟೆಂಬರಗಳಲ್ಲಿ ಅಧಿಕವಾಗಿ ಉಂಟಾಗುತ್ತದೆ. ನಿಮ್ಮಿಂದ
ಭ ಕೆಲಸಗಳು ನಡೆಯಲಿಕ್ಕಿವೆ. ಕುಟುಂಬಾಭಿವೃದ್ಧಿ
ಂಟಾಗಲಿದೆ. ಸಾಮಾಜಿಕ ಜೀವನದಲ್ಲಿ ಒಳ್ಳೆ ಅಭಿಮಾ
ದರ ಗೌರವ ಸಂಪರ್ಕಗಳು ಸಂಭವಿಸುತ್ತಿವೆ. ವಿರಾಮ
ವೆ. ಕಾರ್ಯಬಾಹುಳ್ಯದಿಂದ ನುಡಿಯಂತೆ ವರ್ತನೆ
ಡಲು ಕಷ್ಟವಾಗಬಹುದು. ವ್ಯಾಪಾರಿಗಳಿಗೆ ಆರ್ಥಿಕ ಕಷ್ಟಗ
ದ್ದರೂ ಅದರಿಂದ ಅಪಮಾನಕ್ಕೆ ಆಸ್ಪದವಿರಲಾರದು.
ಬ್ರವರಿ, ಮಾರ್ಚಿ, ಎಪ್ರೀಲ್, ಒಕ್ಟೋಬರ, ನವಂಬರಗಳು
ಪಾರಕ್ಕೆ ಸಹಾಯಕವಾಗಿವೆ.

ಮಹಿಳೆಯರಿಗೆ ಈ ವರುಷವು ಉಡಿಗೆತೊಡಿಗೆ, ಗೃಹೋ
ರಣಗಳನ್ನು ವರ್ಧಿಸಲಿರುವ ಅವಕಾಶದ್ದಾಗಿದೆ. ಸಂತಾನ
ಗ್ಯ, ಆತ್ಮೀಯ ಜನರ ಸುಖಗಳ ಕಡೆಗೆ ವಿಶೇಷ ಶ್ರದ್ಧೆ,
ರಗಳು ಹೆಚ್ಚುವ ಯೋಗವಿದೆ. ವಾಸಸ್ಥಾನದ ಬದಲಾ
ಗಿರುವ ಸಂಪರ್ಕ ಭರಣೀನಕ್ಷತ್ರದವರಿಗಿರುತ್ತದೆ. ಕನ್ನಿಕೆ
ರಿಗೆ ಮಾಂಗಲ್ಯಯೋಗವು ಷಷ್ಠದ ಶನಿಚಾರದಲ್ಲೇ ಸಂಭ
ವುದಾಗಿದ್ದು, ಆದರ ಕುರಿತುಳ್ಳ ಸಂಘಟನೆಯ ಮುಖ್ಯ
ಲ ಈ ವರ್ಷವಿರುತ್ತದೆ. ಕನ್ಯಾಶನಿಯು ಈ ವರೆಗೆ ಉಂಟಾದ ಕಷ್ಟಸಂಪರ್ಕವನ್ನು ತೊಲಗಿಸಲು ೧೯೫೨ ಅಗೋಸ್ಟಿನಿಂದ ಶಕ್ತನಾಗುತ್ತಾನೆ. ಶನಿಕುಜಯುತಿ, ಮತ್ತು ರವಿರಾಹುಯುತಿ, ಕುಜಯುತಿ ಕಾಲಗಳು ನಿಮಗೆ ಮಾನಸಿಕ ಹಾಗೂ ದೈಹಿಕ ಸುಖಶಾಂತಿಗೆ ಚೆನ್ನಾಗಿರದ ಕಾಲವಾದ ಕಾರಣ, ಈ ಚಾರಕಾಲದಲ್ಲಿ ಸರ್ವವಿಧದಿಂದಲೂ ಮುಂಜಾಗ್ರತೆಗೊಳ್ಳುವ ಯತ್ನೋದ್ಯಮಗಳು ಬೇಕಿರುತ್ತವೆ. ಆರ್ಥಿಕ ಕಷ್ಟ ನಿವಾರಣೆಗಿರುವ ಅನುಕೂಲ ಸಂಪರ್ಕ ಸಹಾಯಗಳು ಫೆಬ್ರವರಿಯ ನಂತರ ಅಧಿಕವಾಗಿ, ಎಪ್ರಿಲ್ ಮೇ ತಿಂಗಳುಗಳಲ್ಲಿ ಅಂತಹ ಕೆಲಸಗಳೇ ಬಂದೊದಗುತ್ತವೆ.

ವೃಷಭ:—

"ಬ್ರಹ್ಮಾಪಿ ನರಂ ನ ರಂಜಯತಿ" ಎಂಬ ಮಾತನ್ನು ನೀವು ಕೇಳಿರಬಹುದು. ಬ್ರಹ್ಮನೂ ಮಾನವನನ್ನು ಸಂತೋಷಗೊಳಿಸಲಾರನೆಂದು ಈ ವಾಕ್ಯಾರ್ಥವಿರುತ್ತದೆ. ಇದನ್ನೇ ನೀವು ಮುಖ್ಯವಾಗಿ ಗಮನಿಸಬೇಕಿದೆ. ದೇವರನ್ನು ನಂಬಿ ಶುದ್ಧ ಸತ್ಯನಿಷ್ಠೆಯ ಕರ್ಮವನ್ನು ಸಾಧಿಸಿರಿ. ಉನ್ನತಿಯ ಮಾರ್ಗಾವಕಾಶ ಆಕಸ್ಮಿಕವಾಗಿ ಸಂಘಟಿಸಿ ಜೀವನದಲ್ಲಿ ಪ್ರಗತಿಗಿರುವ ಸಂಪರ್ಕವು ಮುಂದಣ ವರ್ಷದ ಎಪ್ರೀಲಿನ ನಂತರ ಸಂಭವಿಸುವುದಾಗಿದೆ. ಉದ್ಯೋಗ ವ್ಯವಹಾರಗಳಲ್ಲಿ ಅದಲು ಬದಲಾವಣೆಯ ಸಂಘಟನೆಗಳು ಈ ವರ್ಷದ ಮಧ್ಯಭಾಗದಲ್ಲಿ ನಿಮಗೆ ಅತಿಯಾಗಿರುತ್ತವೆ. ನವೀನ ಉದ್ಯೋಗ ಸಂಸ್ಥೆಯ ನಿರ್ಮಾಣ ಕಾರ್ಯಗಳು ಭರದಿಂದ ಸಾಗಲಿರುವ ಸಾಹಸೋದ್ಯಮ ನಿಮ್ಮನ್ನೆ ಹೊಂದಿಕೊಂಡಿದೆ. ಕೋರ್ಟು ಕಾರ್ಯಗಳು ಜೂನಿನ ನಂತರ ಕೊನೆಗೊಳ್ಳಲಿರುವ ಅವಕಾಶವೇ ಅಧಿಕ. ಅವುಗಳಲ್ಲಿ ಜಯಲಾಭವೇ ಉಂಟಾಗುವುದು. ಪುಣ್ಯಕಾರ್ಯಗಳನ್ನು ಹನ್ನೆರಡರಲ್ಲಿ ಬರುವ ಗುರುವು ಮಾಡಿಸಲಿರುತ್ತಾನೆ. ತರುಣ ತರುಣಿಯರಿಗೆ ದಾಂಪತ್ಯ ಜೀವನಕ್ಕಿರುವ ಯೋಗ ಈ ವರ್ಷದಲ್ಲೇ ಉಂಟಾಗಲಿದೆ. ಕೌಟುಂಬಿಕ

ವಾತಾವರಣವು ಮೇ ತಿಂಗಳ ನಂತರ ಶಾಂತಿಯಿಂದ ಕೂಡಿದ್ದಾಗಿರುತ್ತದೆ. ಸಹೋದರರೊಳಗೆ ಭಿನ್ನತೆಯ ವಿಷಮ ಪರಿಸ್ಥಿತಿಯು ನಾಲ್ಕನೆ ಮನೆಯ ಛಿದ್ರಕಾರಕನಾದ ಕೇತುವಿನಿಂದುಂಟಾಗುತಿದ್ದು, ಜೂನಿನ ನಂತರ ಅವನ ಕೆಟ್ಟ ಪರಿಣಾಮ ಕೆಳಕ್ಕಿಳಿಯುವುದು. ತುಂಬ ತಿರುಗಾಟವನ್ನು ಮಾಡಲಿರುವ ಯೋಗವು ವರ್ಷಾಂತ್ಯದಲ್ಲಿ ರೋಹಿಣಿ ನಕ್ಷತ್ರದವರಿಗಿರುತ್ತದೆ. ರವಿಕುಜರು ಕುಂಭಕ್ಕೆ ಬರುವ ಕಾಲವನ್ನು ಮುಖ್ಯವಾಗಿ ಗಮನಿಸತಕ್ಕುದು. ಕುಂಭದ ರಾಹುಯುತಿ ಸಂಪರ್ಕ ಎಲ್ಲಾ ವಿಧದಿಂದಲೂ ಗ್ರಹಣ ಕಾಲದಂತೆ ಎಂದೇ ಭಾವಿಸಬೇಕಿದೆ.

ಗ್ರಂಥನಿರ್ಮಾಣದಲ್ಲಿ ವಿಶೇಷ ಆತುರವು ಮೃಗರಾಶಿ ನಕ್ಷತ್ರದವರಿಗೆ ಸಂಭವಿಸುತ್ತದೆ. ಕೋರ್ಟುಕಾರ್ಯಗಳಲ್ಲಿ ಜಯಲಾಭವು ಮೇಷ ಗುರುಚಾರದಲ್ಲಿ ಸಂಭವಿಸುವುದಾಗಿದೆ. ಮುದ್ದಿನ ವ್ಯವಹಾರ ಸಂಪತ್ತಿನವರಿಗೆ ಈ ವರುಷ ತುಂಬಾ ಪ್ರಗತಿದಾಯಕ. ವಿದ್ಯಾವೃತ್ತಿಯವರಿಗೆ ೧೯೮೨ ತುಂಬಾ ಸಮಾಧಾನಕರವಾಗಿ ಪರಿಣಮಿಸುವುದು. ಬಟ್ಟೆಯ ವ್ಯಾಪಾರಿಗಳಿಗೆ ಜುಲಾಯಿಯ ನಂತರ ಆರ್ಥಿಕ ಮುಗ್ಗಟ್ಟು ಬಗೆಹರಿಯುವುದಾಗಿದೆ. ಲಲಿತಕಲೆಯವರಿಗೆ ವರ್ಷಾಂತ್ಯವು ತುಂಬಾ ಪ್ರಗತಿಕರ. ಸ್ತ್ರೀಯರಿಗೆ ಸಂತಾನಾಭಿವೃದ್ಧಿಗಿರುವ ಚಿಹ್ನೆ ಈ ವರುಷದಲ್ಲಿರುತ್ತದೆ. ರಾಜಕೀಯ ವಿಷಯದಲ್ಲಿ ರೋಹಿಣಿ ಕೃತ್ತಿಕಾ ನಕ್ಷತ್ರದವರು ಬಹಳವಾಗಿ ಆಸಕ್ತಿಯನ್ನು ತೋರುವವರಾಗಿರುವರು. ವಕೀಲ ವೃತ್ತಿಯವರಿಗೆ ಜನವರಿ ಫೆಬ್ರವರಿಗಳು ಮತ್ತು ಆಗೋಸ್ಟ್ ಸಪ್ಟಂಬರಗಳು ಶ್ರೇಯಸ್ಕರವಾಗಿ ಕಾಣಬರುತ್ತವೆ. ಪ್ರಯಾಣಗಳಿರುತ್ತವೆ.

ಮಿಥುನ:—

ಸುಖ ದುಃಖಗಳು ಹಗಲಿರುಳುಗಳಂತೆ. ಕೇವಲ ಕಹಿ, ಕೇವಲ ಸಿಹಿ, ಇವೆರಡೂ ಒಗ್ಗದ ಸಮಸ್ಯೆಗಳು. ಒಂದರ ಅನುಭವ ಇನ್ನೊಂದರ ಪರಿಚಯಕ್ಕೆ ಕಾರಣವಾಗುತ್ತದೆ. ಒಂದರಿಂದಲೇ ಬಾಳು ಸೊಗಸಾಗಲಾರದು. ಇಂತಹ ವಿಚಾರ ನಿಮ್ಮಲ್ಲುದಿಸಿದರೆ ಈ ವರುಷ ನಿಮ್ಮ ಮನಸ್ಸು ಶಾಂತವಾಗುತ್ತದೆ.

ದುಃಖ ಸಮಸ್ಯೆಗಳು ಆದಿಭಾಗದಲ್ಲಿ ಉರುಳುತ್ತವೆ. ಆ ಬಳಿಕ ಶುಭ ಸುಖ ಸಂಘಟನೆಗಳುಂಟಾಗುತ್ತವೆ. ಕಿರಿಯ ಹಿರಿಯರ ಆರೋಗ್ಯ ಸ್ಥಿತಿಯು ಚೆನ್ನಾಗಿರುವುದಿಲ್ಲ. ಉದರ ಸಂಬಂಧವಾದ ದೋಷಗಳು ಕಾಣುತ್ತಿರುವವು. ಜನ ಜಾನುವಾರುಗಳ ಮೂಲಕ ನಷ್ಟಸಂಘಟನೆಯು ಆದ್ರ್ರಪುನರ್ವಸು ನಕ್ಷತ್ರದವರಿಗುಂಟಾಗುತ್ತಿದ್ದು ಮನಸ್ಸು ಅಶಾಂತವಾಗಿಯೇ ನೆಲಸುವುದು. ಏಕಾದಶಕ್ಕೆ ಬರಲಿರುವ ಗುರುವು ಸಂತಾನ ಸುಖಾಭಿವೃದ್ಧಿ—ಉಪನಯನ ವಿವಾಹಾದಿ ಸಂಸ್ಕಾರ ಸಂಘಟನೆಯನ್ನು ಕೊಡಲು ಶಕ್ತನಾಗುತ್ತಾನೆ. ಪುಣ್ಯಕಾ[ರ್ಯ]ಗಳನ್ನು ನಡೆಸುವುದರಿಂದ ಅನಿಷ್ಟಗಳೆಲ್ಲಾ ಮಾಯವಾಗುತ್ತ[ವೆ.] ಈ ವರುಷದಲ್ಲಿ ಕುಜನು ಅಧಿಕ ಸಮಯ ನಿಮಗೆ ಚತು[ರ್ಥ] ಪಂಚಮಗಳಲ್ಲೇ ಇರುತ್ತಿರುವನು. ಈ ಸ್ಥಿತಿಯು ಉತ್ತ[ಮ]ವಲ್ಲ. ಅವನು ಹಲವಾರು ಬಗೆಯಿಂದ ತಾಪತ್ರಯಗಳ[ನ್ನು] ಕೊಡಲಿರುವನಾದರೂ ಕರ್ಮ ಏಕಾದಶದ ಗುರುವಿನ [ಮೂ]ಲಕ ಸಾಂಪತ್ತಿಕ ಕೊರತೆಗಳಾಗಲಾರವು. ಆರನೇ ಮ[ನೆಗೆ] ತೆರಳುತ್ತಿರುವ ಕುಜನು ನವೀನ ಉದ್ಯೋಗ ವ್ಯವಸಾ[ಯ] ಸಂಘಟನೆಯನ್ನು ಕೊಟ್ಟು ಜೀವನದ ಪ್ರಗತಿಗಿರುವ [ದಾರಿ]ಯನ್ನು ತರುಣರಿಗುಂಟುಮಾಡಿಸುತ್ತಾನೆ. ಮುದ್ದು ಮ[...] ಪಾನೀಯ ಸಂಪತ್ತುಗಳ ವಹಿವಾಟಿನವರಿಗೆ ತುಂಬಾ ಪ್ರ[...] ಗಿರುವ ಸಂಪರ್ಕವು ಕಾಣಬರುವುದು. ಏಕಾದಶದ ಗುರ[ು] ಭೂಸಂಪತ್ತಿನ ವಿಷಯದಲ್ಲಿ ಅಭಿವೃದ್ಧಿಯನ್ನೇ ಉಂಟುಮ[ಾಡ]ಲಿರುತ್ತಾನೆ. ನಾಲ್ಕನೆ ಮನೆಯ ಶನಿಯು ಭಾಗ್ಯಾಧಿಪತಿ[ಯಾದ] ಕಾರಣ ಅವನು ಕಂಟಕ ಶನಿಯೆಂದು ದೋಷವನ್ನೆಣಿಸತಕ್ಕ [ಅವ]ಕಾಶವಿಲ್ಲ. ಕುಟುಂಬದ ಧನಸಂಪತ್ತು ಉನ್ನತ ಸ್ಥಿತಿಗೇ[ರಲು] ಇವನಿಂದಲೇ ಸಹಾಯವು ಕಂಡುಬರುತ್ತಿದೆ. ಸೈನಿಕ ಖಾತೆ[ಯ] ಉದ್ಯೋಗಸ್ಥರು ೧೯೮೨ನೆ ಇಸವಿಯ ಮಧ್ಯಭಾಗ[ದಲ್ಲಿ] ಉತ್ತಮ ಪ್ರಗತಿಯನ್ನು ಹೊಂದುತ್ತಾರೆ ಚಿಕಿತ್ಸ[ಕರು] ಮತ್ತು ಯಾಂತ್ರಿಕ ಕರ್ಮವೃತ್ತಿಯವರು ತುಂಬಾ [ಯಶ]ಸ್ಸನ್ನು ಹೊಂದಿ ೧೯೮೨ ಜುಲಾಯಿಯ ನಂತರ ಜೀವನ[ದ] ನವೀನ ಪರಿಸ್ಥಿತಿಯಿಂದ ಕೂಡಿದವರಾಗಿ ಕಾಣಬರುವ[ರು.] ದಾಂಪತ್ಯಜೀವನದಲ್ಲಿ ಒಡಕುಗಳುಂಟಾಗದಂತೆ ಪುನವ[ರ್ಸು] ನಕ್ಷತ್ರದವರು ಜಾಗರೂಕತೆಯುಳ್ಳವರಾಗಬೇಕಾಗಿದೆ. [...]ಕರೇ, ನಿಮ್ಮ ಲೇಖನಿಗೆ ಇದು ಉತ್ತಮ ಸಮಯ! [...] ಸಂದರ್ಭವನ್ನು ಹೀಗೆ ಕಳೆಯಬೇಡಿ. ವಿಚಾರಯುಕ್ತ [...] ಸಾಹಿತ್ಯ ಸೃಷ್ಟಿಯ ಮೂಲಕ ಉತ್ತಮವಾದ ಸ್ಥಾನಮ[ಾನ]ಗಳನ್ನು ಹೊಂದಲರ್ಹರಾಗುವಿರಿ. ನಟ ನಟಿಯರಿಗೆ, [...]ತರ ಲಲಿತ ಕಲಾಗಾರರಿಗೆ ಸಂಪತ್ತಿಗಿಂತ ಗೌರವವೇ ಹೆ[ಚ್ಚಾಗು]ವುದು. ತುಲಾಕುಜನಿದ್ದು ಮೇಷದ ರವಿ ಸಂಚಾರ ಕಾಲ[ದಲ್ಲಿ] ಆರೋಗ್ಯ ಸುಖಸಂಪತ್ತಿಗಾಗಿ ವ್ಯಯಸಿದ್ಧಿಯಾಗುವಂ[ತಿದೆ.] ಮಹಿಳೆಯರೇ, ನೀವು ಈ ವರುಷದಲ್ಲಿ ಅತಿಥಿ ಸತ್ಕಾರ ಅ[ಭ್ಯಾ]ಗತರ ಸೇವೆ ಗುರುಜನರ ಉಪಚಾರ ಕಾರ್ಯ ಗೃಹೋ[ಪ]ಕರಣ ವೃದ್ಧಿಗಳ ಕಡೆಗೆ ಅತಿಯಾಗಿ ಆಸಕ್ತಿಯುಳ್ಳವ[ರಾಗಿ] ಕಂಡುಬರುವಿರಿ. ಪುನರ್ವಸು ನಕ್ಷತ್ರದವರು ವಾಸಸ್[ಥಾನ]ವನ್ನು ಬದಲಾಯಿಸಲಿರುವಂತಿದೆ. ಬಟ್ಟೆಯ ವ್ಯಾಪಾರಿ[ಗಳಿಗೆ] ಆದಿಭಾಗಕ್ಕಿಂತ ಅಂತ್ಯಭಾಗವೇ ಶುಭಕರವಾಗಿರುತ್ತ[ದೆ.] ಆರ್ಥಿಕ ಕಷ್ಟ ೧೯೮೨ ಎಪ್ರೀಲಿನ ನಂತರವೇ ಕ[ಡಿಮೆ]ಯಾಗಲಿರುವ ಸಂಭವ. ದೊಡ್ಡ ದೊಡ್ಡ ಪ್ರಯಾ[ಣಗ]ಳಿರುತ್ತವೆ.

ಕರ್ಕಾಟಕ:—

ನಿಮಗೆ ನಿಮ್ಮ ಕುಟುಂಬ ಮತ್ತು ಹಿರಿಯರಿಂದ ತಲೆ ಸಿಡಿತಕ್ಕೆ ಅವಕಾಶವಿದೆ. ಪಾಲುಗಾರಿಕೆ ಮತ್ತು ಸಹೋದರ ಭಾಗದ ಸಂಪದ್ವಿಷಯ ವ್ಯವಹಾರಗಳಲ್ಲಿ ತುಂಬಾ ದಣಿಯ ಬೇಕಾಗುವುದು. ಪಾಲುಗಾರರಿಂದ, ಹಿರಿಯರಿಂದ ಕಷ್ಟ ಅನರ್ಥ ಪರಂಪರೆಗಳು ಹಲವೊಮ್ಮೆ ಉಂಟಾಗುತ್ತವೆ. ಆದರೆ, ಅವುಗಳಿಂದ ಪಾರಾಗಲಿರುವ ವ್ಯವಸಾಯವನ್ನು ಷಷ್ಠ ಸಪ್ತ ಮಾಷ್ಟಮ, ಏಕಾದಶ ರವಿಯು ಮಾಡಿಸಲಿರುವನು. ಆರ್ಥಿಕ ವಿಷಯದಲ್ಲಿ ಕೋರ್ಟಿಗೆ ಹೋಗಲಿರುವ ಹಲವಾರು ಸಂಪರ್ಕ ಗಳು ಆಶ್ಲೇಷಾ ನಕ್ಷತ್ರದವರಿಗುಂಟಾಗುವುದು. ಧಾರ್ಮಿಕ ವಿಷಯದಲ್ಲಿ ಪುಷ್ಯಾ—ಆಶ್ಲೇಷಾ ನಕ್ಷತ್ರದವರಿಗೆ ವಿಶೇಷ ವ್ಯಯವಿದೆ. ಉದರ ಉಷ್ಣ ಪಿತ್ಥ ವಿಕಾರಗಳುಂಟಾಗದಂತೆ ತುಂಬಾ ಜಾಗರೂಕರಾಗಿರಬೇಕು. ಎಂಟನೆ ಮನೆಯ ರಾಹುವು ದ್ವಿತೀಯ ವಾಸಗೃಹ ಸಮಸ್ಯೆಯನ್ನು ಹಲವರಿಗುಂಟುಮಾಡುವಂತಿದ್ದಾನೆ. ವ್ಯಾಪಾರಿಗಳು ಲೆಖ್ಖಪತ್ರವ್ಯವಹಾರ ವಿಷಯದಲ್ಲಿ ತುಂಬಾ ಜಾಗರೂಕರಾಗಿರಬೇಕು. ನಿಮಗೆ ಮೂರು, ಐದು ಒಂಭತ್ತು ಈ ಸ್ಥಾನಗಳಲ್ಲಿ ನಿಲ್ಲುತ್ತಿರುವ ಶನಿ, ರವಿ, ಗುರುಗಳ ಕಾಲ ಭಾಗ್ಯ ಪ್ರಗತಿಗಿರುವ ಸಂಘಟನೆಯದು. ಈ ಸಮಯದಲ್ಲಿ ಆಕಸ್ಮಿಕ ಘಟನೆಗಳೇ ಉಂಟಾಗಲಿರುತ್ತವೆ. ಪುನರ್ವಸು ನಕ್ಷತ್ರದ ವ್ಯಾಪಾರಿಗಳಿಗೆ ತುಂಬಾ ಲಾಭವಿದೆ. ವಿವಾಹ, ಉಪನಯನವೇ ಮೊದಲಾದ ಶುಭ ಕೆಲಸಗಳು ಕುಟುಂಬದಲ್ಲಿ ನಡೆಯಲಿರುತ್ತವೆ. ಕೃಷಿ ವ್ಯವಸಾಯದವರು ಲಾಭ ವ್ಯವಸಾಯಗಳೆರಡರಿಂದಲೂ ಕೂಡಿದ್ದು ಕಳೆದ ವರುಷಕ್ಕಿಂತ ಈ ವರುಷ ಉತ್ತಮ ಸ್ಥಿತಿಯನ್ನು ಕಾಣುವವರಾಗುವರು. ದೇಹಾರೋಗ್ಯ ವಿಷಯದಲ್ಲಿ ನಾಲ್ಕು, ಎಂಟು, ಐದನೆ ಮನೆಗಳಲ್ಲಿ ಕುಜ, ರವಿ, ಸ್ಥಿತಿ ಕಾಲ ಚೆನ್ನಾಗಿರದು. ಮದ್ದಿಗಾಗಿ ಧನವ್ಯಯವಾಗಲಿದೆ. ಕವಿಗಳು ದಶಮದ ಗುರುವಿನ ಚಾರಕಾಲದಲ್ಲಿ ಉತ್ತಮ ಪ್ರಗತಿಗಿರುವ ಕರ್ತವ್ಯ ಪರಾಯಣರಾಗುವರು. ವಿಮಾ ವ್ಯವಸಾಯಗಾರರಿಗೆ ಉತ್ತಮ ಸಹಾಯವು ಜನತೆಯಿಂದುಂಟಾಗುವುದು. ಸಂಚಾರಿ ಕಾರ್ಯ ಕಲಾಪಗಳಲ್ಲಿ ಆದಿಭಾಗದಲ್ಲಿ ಅಧಿಕ ವಿಘ್ನವಿಡ್ಡೂರಗಳುಂಟಾಗುತ್ತವೆ. ಕುಜ ಶನಿಯುತಿಯಿರುವ ಕಾಲವೂ ಚತುರ್ಥ ಕುಜ ಸಂಚಾರ ಕಾಲವೂ ಕೌಟುಂಬಿಕ ಜೀವನದವರಿಗೆ ತೃಪ್ತಿದಾಯಕವಾಗಿರುವುದಿಲ್ಲ. ಹೆಂಗಸರಿಗೆ ತಮ್ಮ ಜೀವನದಲ್ಲಿ ಉತ್ತಮ ಸುಖಾನುಭೋಗ—ಭೋಗಸಂಪತ್ತುಗಳ ವೃದ್ಧಿಯು ಮೀನ ಮತ್ತು ವೃಶ್ಚಿಕ ರವಿಚಾರ ಕಾಲದಲ್ಲಿ ಉಂಟಾಗುವಂತಿದೆ. ಪುಷ್ಯಾ ನಕ್ಷತ್ರದ ತರುಣರು ಹಿರಿಯರ ಸುಖಶಾಂತಿಯುಕ್ತರಾಗುವುದಿಲ್ಲ. ವಾಹನ ಸಂಚಾರಿಗಳು ತುಲಾ ಕುಜಚಾರ ಮತ್ತು ಕುಂಭ ರವಿಚಾರ ಕಾಲದಲ್ಲಿ ಅವಘಡಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ದಾಂಪತ್ಯ ಜೀವನದವರಿಗೆ ಕುಂಭವಾಸ ಶಾಂತಿದಾಯಕವಾಗುವುದಿಲ್ಲ. ಜನವರಿ, ಮಾರ್ಚಿ, ಎಪ್ರಿಲ್ ತಿಂಗಳುಗಳು ಈ ವರುಷ ಈ ರಾಶಿಯವರಿಗೆ ಸ್ಮರಿಸತಕ್ಕ ಘಟನೆಯ ಮಹತ್ವದ ತಿಂಗಳುಗಳಾಗಿರುವವು. ಬೋಧಕ ವೃತ್ತಿಯವರು ಒಳ್ಳೆಯ ಹೆಸರಿನಿಂದ ಕೂಡಿದವರಾಗುತ್ತಾರೆ. ಅದಲ್ಲದೆ ನಮ್ಮ ಕೆಲಸದಲ್ಲಿ ಪ್ರಗತಿಯನ್ನು ವರ್ಷಾಂತ್ಯದಲ್ಲಿ ಹೊಂದುವರು.

ಸಿಂಹ:—

ಈ ವರುಷ ನಿಮ್ಮ ಜೀವನ, ಕಳೆದ ವರುಷದಂತಲ್ಲ, ಕುಟುಂಬ ಆರ್ಥಿಕಗಳ ನೆಲೆಯಿಂದ ವಿಶೇಷವಾದ ಭಿನ್ನತೆಯೇ ಕಾಣುವುದು. ಆತ್ಮೀಯರಿಂದ ಅಗಲುವಿಕೆಯನ್ನು ಹೊಂದಲಿರುವ ಸಂಭವವು ಕಂಡುಬರುತ್ತದೆ. ಆಕಸ್ಮಿಕ ಘಟನೆಗಳು ನವಮದ ಗುರುವಿನಿಂದುಂಟಾಗುತ್ತವೆ. ನಿಮಗೆ ಗುರುವಿಗಿಂತ ಶನಿ ಕುಜರೇ ಹಿತವನ್ನುಂಟುಮಾಡುವವರಾಗಿದ್ದು ಅವರ ಕೇಂದ್ರ ದ್ವಿತೀಯಾದಿ ಸಂಪರ್ಕ ಕಾಲವನ್ನು ಎಲ್ಲಾ ವಿಷಯದಲ್ಲೂ ಲಕ್ಷಿಸತಕ್ಕುದಾಗಿದೆ. ಸಾರ್ವಜನಿಕ ಸೇವೆಗಾಗಿ ನವಮದ ಗುರುವು ತರುಣರನ್ನು ಕೆರಳಿಸುವನು. ದೇಹ

ಮಾನಸಿಕ ಶ್ರಮ ದಂಡನೆಯು ಕರ್ತವ್ಯಗಳೇ ಹುಬ್ಬಾ ಮತ್ತು
ಉತ್ತರಾ ನಕ್ಷತ್ರದವರಿಗೆ ಕಂಡುಬರುವವು. ಬಂಧುಜನರಿಂದ
ಅಗಲುವಿಕೆಯನ್ನು ಹೊಂದಲಿರುವ ಪ್ರಸಂಗ ಉಂಟಾಗುತ್ತದೆ.
ರಿಕಾರ್ಡು ಲೆಕ್ಕಪತ್ರ ವ್ಯವಹಾರ ಕಾರ್ಯವನ್ನು ಮಾಡುವಲ್ಲಿ
ಅತಿಯಾದ ಜಾಗರೂಕತೆಯುಳ್ಳವರಾಗಬೇಕು. ಸ್ವಕೀಯ
ಉದ್ಯಮಕ್ಕಿಂತ ಪರರ ಉದ್ಯಮಗಳೇ ಅಧಿಕವಾಗಿರ ತ್ತವೆ.
ಮಾರ್ಚಿ, ಎಪ್ರಿಲ್ ಮೇ ತಿಂಗಳುಗಳು ಮಹತ್ವ ಘಟನೆಯ
ತಿಂಗಳುಗಳಾಗಿರುತ್ತವೆ. ಅಗೋಸ್ಟ ತಿಂಗಳಿನಲ್ಲಿ ಕ್ರಾಂತಿ
ಕಾರಕ ಚಿಹ್ನೆಯ ಜೀವನದ ಬದಲಾವಣೆಯು ಸಂಭವಿಸು
ವಂತಿದೆ. ನೀವು ಕೇವಲ ಹೊಗಳುಭಟ್ಟರಾಗಿರದೆ ವಿವೇಕದ
ಕರ್ತವ್ಯಗಳನ್ನೇ ನಡೆಸುವವರಾಗಿದ್ದು ಬಾಳಿನ ಮುಂದಣ
ಉನ್ನತಿಪಗ ಸಂಘಟನೆಗಿರುವ ಯೋಜನಾ ಕಾರ್ಯಕಲಾಪ
ಗಳನ್ನು ಮಾರ್ಚಿಯ ನಂತರ ನಡೆಸುವವರಾಗುವಿರಿ.
ಮಿತ್ರರು ಅಧಿಕವಾಗಲಿದ್ದಾರೆ. ದೂರ ಪ್ರಯಾಣ ಸಂಘಟನೆ
ಗಳು ಸಂಭವಿಸುತ್ತವೆ. ಭೂಮಾಲಿಕರು ಭೂಸಂಪತ್ತನ್ನು
ಹೆಚ್ಚಿಸಲಿದ್ದಾರೆ. ಸಾಹಿತ್ಯ ಜೀವಿಗಳು ಸಾಹಿತ್ಯ ರಚನೆಯನ್ನು
ಮಾಡಲಿರುವ ಉತ್ಕೃಷ್ಟ ಸಂಪತ್ತುಗಳನ್ನು ಕೂಡುವರು.
ಶೋಧಕರು ಬಹುಮುಖವಾದ ಶೋಧನೆಯನ್ನು ನಡೆಸಿ
ಜೀವನದಲ್ಲಿ ನಿರಂತರವಾದ ಕೀರ್ತಿ ಕಿರಣವನ್ನು ಸಮಾಜದಲ್ಲಿ
ಬೀರುವವರಾಗುವರು. ವಕೀಲರು ಧನಸಂಪತ್ತಿಗಿಂತ ಕೀರ್ತಿ
ಸಂಪತ್ತನ್ನು ಅಧಿಕಗಳಿಸುವರು. ಅಧ್ಯಾಪಕರು ಸ್ಥಾನಾಂ
ತರವನ್ನು ಹೊಂದುತ್ತಾರೆ. ಆ ಮೂಲಕ ಆರ್ಥಿಕ ಮತ್ತು
ಸಾಮಾಜಿಕ ಜೀವನದಲ್ಲಿ ಪ್ರಗತಿಯನ್ನು ಹೊಂದುವ ಅವಕಾಶ
ವಿದೆ. ಉತ್ತರಾ ನಕ್ಷತ್ರದವರಿಗೂ ಹುಬ್ಬಾ ನಕ್ಷತ್ರದವರಿಗೂ
ಕುಟುಂಬದಲ್ಲಿ ರೋಗಶಯ್ಯೆಗಳು ಕಂಡುಬಂದು, ಡಾಕ್ಟರರ
ಆಶ್ರಯವನ್ನು ಹೊಂದಲು ಆಸ್ಪದವಿರುವುದರಿಂದ ಈ ವಿಷಯ
ದಲ್ಲಿ ಮುಂಜಾಗ್ರತೆಯುಳ್ಳವರಾಗಬೇಕು. ಕುಟುಂಬದಲ್ಲಿ
ಶುಭ ಕೆಲಸಗಳು ನಡೆಯಲಿರುತ್ತವೆ. ಕನ್ನಿಕೆಯರಿಗೆ ಮತ್ತು
ತರುಣರಿಗೆ ದಾಂಪತ್ಯ ಸುಖಾನುಭವಕ್ಕಿರುವ ಸಂಘಟನೆಗ
ಳುಂಟಾಗುತ್ತವೆ. ಸಪ್ತಮಗತನಾದ ರಾಹುವು ತೊಡಕು
ತೊಂದರೆಗಳಿಗಿರುವ ಮನೋವಿಚಾರ ಸಂಪರ್ಕವನ್ನು ತಂದೊ
ಡ್ಡುತ್ತಾನೆ. ದೇಹಾರೋಗ್ಯ ಚೆನ್ನಾಗಿರಲಾರದು. ಉಷ್ಣ
ಪಿತ್ಥ ವ್ರಣವಿಕಾರಗಳುಂಟಾಗದಂತೆ ಜಾಗರೂಕರಾಗಿರಬೇಕು.
ಮಹಿಳೆಯರೇ, ನಿಮಗೆ ಸಂತೋಷದಾಯಕವಾದ ಸಂತಾನ
ವೃದ್ಧಿಯು ಮತ್ತು ಮಂಗಲ ವಿಷಯಕ ಸಂಘಟನೆಗಳು ನವ
ಮದ ಗುರುವಿನಿಂದ ಉಂಟಾಗುತ್ತಿವೆ. ದ್ವಿತೀಯದ ಶನಿ
ಯನ್ನು ದೂಷಣೆಗೈಯಬೇಡಿರಿ. ಈತನು ಪತಿಯ ಸುಖ
ಸಂಪತ್ತಿನ ಅನುಕೂಲತೆಯನ್ನು ದಿನೇ ದಿನೇ ವೃದ್ಧಿಗೊಳಿಸು
ತಿದ್ದು ಆರ್ಥಿಕ ಪುಷ್ಟಿಯನ್ನು ಕೊಡಲಿರುವನು. ಶಿಲ್ಪ, ಲಲಿತ
ಕಲೆ, ವಾಙ್ಮಯ ಸೇವಕರು ಒಳ್ಳೆಯ ಹೆಸರನ್ನು ಸಮಾಜದಲ್ಲಿ
ಸ್ಥಾಪಿಸುವರು. ಜ್ಯೋತಿಷ ವೃತ್ತಿಯವರಿಗೆ ಇದು ಮುನ್ನ
ವರುಷ. ವ್ಯಾಪಾರಿಗಳು ಅಭಿವೃದ್ಧಿ ಮಾರ್ಗವನ್ನು ಹೊ
ತ್ತಾರೆ. ಹೊಸ ಉದ್ಯಮ ಸಂಸ್ಥೆಗಳನ್ನು ಸ್ಥಾಪಿಸಲಿ
ಶಕ್ತಿ, ಅದಕ್ಕಿರುವ ಯೋಜನೆಗಳು ಮಘಾ ಹುಬ್ಬಾ ನಕ್ಷ
ದವರಿಗಿರುತ್ತದೆ. ತೃತೀಯ ಗತನಾಗುವ ಕುಜನು
ರಿಗೂ ಭಾಗ್ಯಾಭಿವೃದ್ಧಿಯನ್ನು ಮಾಡಲಿರುವನು.
ಸಂಪತ್ತಿನ ವಹಿವಾಟಿನವರಿಗೆ ವಿದೇಶ ವಸ್ತುಗಳ ಮಾಲಿಕ
ಉತ್ತಮ ಖರೀದಿಯುಂಟಾಗಿ ಆರ್ಥಿಕ ಸ್ಥಿತಿಯಲ್ಲಿ ಉ
ಯಾಗುವುದು. ಕಾಫಿ, ಏಲಕ್ಕಿ, ಗೇರುಬೀಜ, ಹೊಗೆಸೊ
ವ್ಯಾಪಾರಿಗಳು ಈ ವರುಷ ತುಂಬಾ ಪ್ರಗತಿಯನ್ನು ಪಡೆ
ವರು.

ಕನ್ಯಾ:—

ಏಳೂವರೆ ಶನಿರಾಯನ ಕಾಟಕ್ಕಿಂತ ಸಪ್ತಮದ ಗ
ವಿನ ಬಾಧೆ, ಜನ್ಮಗತ ಕುಜನ ಬಾಧೆಗಳು ನಿಮಗೆ ಅ
ವಾಗಿರುವುವು. ಕುಜನು ಸಹೋದರ ಬಂಧುವರ್ಗ ಮಿ
ಸಹಾಯ ಇವುಗಳ ಮೂಲಕ ಕಷ್ಟ ಅಶಾಂತಿಗಳನ್ನು ಬ
ವಾಗಿ ಕೊಡುತ್ತಿರುವನು. ಸಪ್ತಮದ ಗುರುಹಿರಿಯರಿ
ಸುಖಶಾಂತಿಗೆ ಅವಕಾಶವನ್ನು ಕೊಡುವುದಿಲ್ಲ. ಕಿರಿಯರಿಗ
ಮತ್ತು ಮಕ್ಕಳಿಗಾಗಿ ತುಂಬ ಧನವ್ಯಯವು ಕೌಟುಂ
ವಿಷಯದಲ್ಲಿ ಅವನಿಂದ ಉಂಟಾಗುತ್ತಲಿದೆ. ಇದರಿ
ಶಾಂತಚಿತ್ತರಾಗದ ನೀವು ಅಷ್ಟಮದ ಗುರುವಿನ ಮೂ
ಅದೊಂದು ಬಗೆಯ ನವೀನ ಸಂಪರ್ಕವನ್ನು ಹೊಂದು
ಮಕ್ಕಳ ಆಗಲುವಿಕೆಯುಂಟಾಗಲಿರುತ್ತದೆ. ಶುಭ ಕೆಲಸ
ಗಾಗಿ ಧನವ್ಯಯವು ಎಪ್ರಿಲು ಮೇ ತಿಂಗಳುಗಳಲ್ಲಿ ಉಂಟಾ
ವಂತಿದೆ. ಉಷ್ಣ ಉದರ ಸಂಬಂಧ ದೋಷ ವಾತವಿಕಾ
ಳುಂಟಾಗದಂತೆ ಜಾಗರೂಕರಾಗಿರಬೇಕು. ತುಂಬ ಪ್ರ
ಣಗಳುಂಟಾಗುತ್ತವೆ. ಹಸ್ತಾ ನಕ್ಷತ್ರದವರು ವರ್ಷದ ಮ
ಭಾಗಾನಂತರ ಶಾಂತಚಿತ್ತರಾಗುವರು. ಆದಿಭಾಗದಲ್ಲಿ ತುಂ
ದಣಿಯಲಿರುವ ಸಂಪರ್ಕವೇ ಕಂಡುಬರುತ್ತದೆ. ಉತ್ತ
ನಕ್ಷತ್ರದವರು ಪ್ರಗತಿಯ ಕಾರ್ಯಕಲಾಪಗಳಿಂದ ಕೂಡಿ
ರಾಗಿರುವರು. ಕೌಟುಂಬಿಕ ಧನಸಂಪತ್ತು ಅಧಿಕವಾಗಲಿ
ವ್ಯಾಪಾರಿಗಳೇ, ನಿಮ್ಮ ಭವಿಷ್ಯವು ನಿಮ್ಮ ಕೈಯ್ಯಲ್ಲೇ
ತಿದ್ದು ನ್ಯಾಯವರ್ತನೆಯನ್ನು ನಡೆಸುವುದರಿಂದ ಸಾಂ
ಕೋನ್ನತಿಯನ್ನು ಹೊಂದುವಿರಿ. ಪಾಲುಗಾರಿಕೆಯ ವ್ಯಾ
ರಿಗಳಿಗೆ ಎಪ್ರಿಲಿನ ಅನಂತರ ಅಭಿವೃದ್ಧಿ. ಆಕರ್ಷಕ ವಸ್ತು
ವಹಿವಾಟಿನವರಿಗೆ ಧನಸಂಪತ್ತು ಹೆಚ್ಚಲಿರುತ್ತದೆ. ಹ
ಸೊಪ್ಪು, ಹಂಚು, ಕಾಡುತ್ಪತ್ತಿಯ ವ್ಯಾಪಾರವಹಿ
ನಿಂದ ಪ್ರಗತಿಯು ಇರುತ್ತದೆ. ಡಾಕ್ಟರರು ಕಳೆದ ವ
ಕ್ಕಿಂತ ಈ ವರುಷದಲ್ಲಿ ಅಧಿಕ ಧನಸಂಗ್ರಹವನ್ನು ಮಾಡ

ಶಕ್ತರಾಗುತ್ತಾರೆ. ಕೆಲಾ ಸಂಸ್ಥಾಕಾರರು ಬಹಳ ಕಷ್ಟ ವಿಘ್ನ ವಿಡ್ಡೂರಗಳನ್ನು ಅನುಭವಿಸುವರು. ವಿಮಾ ಮೊದಲಾದ ಉದ್ಯೋಗ ಧನಸಂಗ್ರಹ ಉದ್ಯೋಗದವರು ತುಲಾ ಕುಜ ಚಾರದಲ್ಲಿ ಆರ್ಥಿಕ ಸಂಪತ್ತನ್ನು ಅಧಿಕರಿಸಲು ಶಕ್ತರಾಗುತ್ತಾರೆ. ದೂರಗತ ಬಂಧುಜನರಿಂದ ಧನಸಹಾಯವು ಉಂಟಾಗಲಿದೆ. ಚಿತ್ರಾ ನಕ್ಷತ್ರಕ್ಕೆ ಸೇರಲಿರುವ ಶನಿಯು ಆ ಕಾಲದಲ್ಲಿ ನವೀನ ಉದ್ಯೋಗ ಸಂಘಟನೆಯನ್ನು ಮಾಡಿಸುವನು. ತರುಣರು ಈ ಸಮಯದಲ್ಲಿ ಉದ್ಯೋಗ ಜೀವನಕ್ಕೆ ಕೈಯನ್ನು ನೀಡುವುದರಿಂದ ಜೀವನದಲ್ಲಿ ಮುಂದೆ ಸುಖಶಾಂತಿಯನ್ನು ಹೊಂದುವವರಾಗುತ್ತಾರೆ. ಉತ್ತರಾ ಹಸ್ತಾ ನಕ್ಷತ್ರದ ತರುಣ ತರುಣಿಯರಿಗೆ ದಾಂಪತ್ಯ ಜೀವನಕ್ಕಿರುವ ಸಂಘಟನೆಯಾಗಲಿದೆ. ಮಹಿಳೆಯರೇ, ನಿಮಗೆ ಈ ವರುಷ ಅಧಿಕವಾದ ಜವಾಬುದಾರಿಕೆಯ ಸಮಸ್ಯೆಯು ಜೀವನದಲ್ಲಿ ಉಂಟಾಗುತಿದ್ದು, ಜನಸಮುದಾಯದಲ್ಲಿ ಗೌರವದ ಸ್ಥಾನಮಾನಗಳಿಂದ ಕೂಡಿದವರಾಗುವಿರಿ. ಉತ್ತರಾ ಮತ್ತು ಚಿತ್ರಾ ನಕ್ಷತ್ರದವರ ಕುಟುಂಬದಲ್ಲಿ ಭಿನ್ನತೆಗಳುಂಟಾಗುತ್ತವೆ. ಪತ್ರವ್ಯವಹಾರವನ್ನು ಮಾಡುವಾಗ ಜಾಗರೂಕತೆಯುಳ್ಳವರಾಗಬೇಕು. ಗೇರುಬೀಜ, ಕಾಫಿಗಳ ಉದ್ಯೋಗ ಸಂಸ್ಥೆಯವರು ತುಂಬಾ ಪ್ರಗತಿಯಿಂದ ಕೂಡಿದವರಾಗುತ್ತಾರೆ. ಲೇಖಕ ಲೇಖಕಿಯರಿಗೆ ತಮ್ಮ ಲೇಖನದ ಮೂಲಕ ಜನಾದರಕ್ಕೆ ಪಾತ್ರರಾಗಲಿರುವ ಸಂಭವವಿದೆ. ಪತ್ರಿಕಾವ್ಯವಹಾರಿಗಳೂ ವಕೀಲರೂ ತುಂಬಾ ಕೆಲಸಗಳಿಂದ ಕೂಡಿದವರಾಗುವರು. ವಾಹನ ಚಾಲಕರು ಅಭಿಘಾತ ಅಪಘಡಗಳುಂಟಾಗದಂತೆ ಕನ್ಯಾ ತುಲಾ ಕುಜಚಾರದಲ್ಲಿ ಅತಿ ಜಾಗರೂಕರಾಗಿರಬೇಕು. ಅಧ್ಯಾಪಕರು ಆರ್ಥಿಕ ವಿಷಯದಲ್ಲಿ ಅಲ್ಪ ಸುಧಾರಣೆಯನ್ನು ಹೊಂದುತ್ತಾರೆ. ಜನತೆಯಲ್ಲಿ ಉತ್ತರಾ ನಕ್ಷತ್ರದವರಿಗೆ ಮಾತ್ರ ಉತ್ತಮ ಸ್ಥಾನ ಗೌರವಗಳುಂಟಾಗುತ್ತವೆ.

ತುಲಾ:—

ನಿಮ್ಮ ಹೃದಯದಲ್ಲಿ ಹಲವಾರು ವಿಚಾರತರಂಗಗಳು ಮೂಡುತಿದ್ದು, ಅವುಗಳನ್ನು ಕಾರ್ಯರೂಪಕ್ಕೆ ತರಲಿರುವ ಯೋಜನೆಯುಕ್ತರಾಗಿರುವಿರಿ. ಕುಟುಂಬದಲ್ಲಿ ಶುಭಕಾರ್ಯಗಳು ನಡೆಯಲಿರುತ್ತವೆ. ಸಹೋದರರಿಂದ ಅಶಾಂತಿ ಇರುವುದು. ಇಷ್ಟಜನರ ದರ್ಶನವು ಪದೇ ಪದೇ ಉಂಟಾಗಲಿರುವುದೆ. ಸಾಮುದಾಯಿಕದಲ್ಲಿ ಉತ್ತಮವಾದ ಸ್ಥಾನಮಾನಗಳೇ ಉಂಟಾಗುತ್ತಿದೆ. ಆರ್ಥಿಕ ವಿಷಯದ ತೊಡಕು ಈ ವರ್ಷದ ಆರಂಭದಲ್ಲಿದೆ. ಎಪ್ರಿಲಿನ ನಂತರ ಸುಧಾರಣೆಯಿದೆ. ಧಾರ್ಮಿಕ ಕಾರ್ಯಗಳನ್ನು ಬಹಳವಾಗಿ ನಡೆಸಲಿರುವಿರಿ. ಸಪ್ತಮದ ಗುರುವು ಸಂತಾನ ಸುಖ ಚಿಹ್ನೆಯನ್ನು ಕೊಡಲಿರುತ್ತಾನೆ. ಪ್ರಯಾಣಗಳು ಅಡಿಗಡಿಗೆ ಸಂಭವಿಸುವಂತಿವೆ. ವಕೀಲ ವೃತ್ತಿಯವರಿಗೆ ಈ ವರ್ಷ ಒಳ್ಳೆಯ ಯಶಸ್ಸು, ಅದರೊಂದಿಗೆ ವಿಶಿಷ್ಟ ಸ್ಥಾನಮಾನ ಸಮಾಜದಲ್ಲಿ ಪ್ರತಿಷ್ಠೆಯ ಕಾರ್ಯಕಲಾಪಗಳು ಕಾಣಬರುವವು. ಕಿರಿಯರ ಆರೋಗ್ಯವು ಚೆನ್ನಾಗಿರಲಾರದು. ಮಕ್ಕಳಿಂದ ಹಿರಿಯರಿಗೆ ಅಶಾಂತಿ ಸಂಭವಿಸಲಿದೆ. ವೈವಾಹಿಕ ಜೀವನದವರಿಗೆ ಭೋಗ ಸುಖ, ಸಂತಾನ ಸುಖ, ಕುಟುಂಬದಲ್ಲಿ ಶುಭಕಾರ್ಯ, ಗೃಹೋಪಕರಣ ವೃದ್ಧಿ, ಉಡುಪು ಆಭರಣಗಳನ್ನು ಕೂಡಿಸಲಿರುವ ವಿಚಾರಗಳುಂಟಾಗುತ್ತವೆ. ವಿಶಾಖಾ ನಕ್ಷತ್ರದವರು ವಿಚಾರಹೀನ ಕರ್ತವ್ಯ ಮಾಡುವ ಸಂಭವವೇ ಹೆಚ್ಚು. ವಿಚಾರಯುಕ್ತರಾಗಿಯೂ ಅನ್ಯರ ಸಲಹೆಯನ್ನು ಅಪೇಕ್ಷಿಸಿ ಕೆಲಸವನ್ನು ಮಾಡುವುದರಿಂದ ಶುಭ ಪರಿಣಾಮವಿದೆ. ವ್ಯಾಪಾರಿಗಳು ಪಾಲುಗಾರರಲ್ಲಿ ವಿಷಮತೆಯುಂಟಾಗದಂತೆ ಜಾಗರೂಕರಾಗುವುದು ಮುಖ್ಯವಾಗಿರುತ್ತದೆ; ಒಡಕೇ ಅಧಿಕರಿಗೆ ಉಂಟಾಗುತ್ತಿರುವುದು. ಕುಜನ ಕನ್ಯಾ ತುಲಾ ಚಾರಗಳು ಇಂತಹ ಘಟನೆಯನ್ನುಂಟುಮಾಡುವವುಗಳಾಗಿರುತ್ತವೆ. ದೇಹಾರೋಗ್ಯವಿಷಯದಲ್ಲಿ ಧನವ್ಯಯವು ಕುಟುಂಬಕ್ಕಿರುತ್ತದೆ. ವ್ರಣಚಿಕಿತ್ಸೆಗಳು ಹಲವರಿಗೆ ಸಂಭವಿಸುವಂತಿದೆ. ತುಲಾ ರಾಶಿಯ ವಾಹನಚಾರಿಗಳು ವಾಹನದ ಮೂಲಕ ಅವಘಡಗಳುಂಟಾಗದಂತೆ ವರ್ಷದ ಮಧ್ಯಭಾಗಾನಂತರ ಜಾಗರೂಕರಾಗಿರುವುದು ಅಗತ್ಯ. ಉದ್ಯೋಗ ಸಂಸ್ಥೆಗಳ ಮಾಲಿಕರು ಕೆಲಸಗಾರರನ್ನು ಹೆಚ್ಚಿಸಬೇಕಾಗುತ್ತದೆ. ಪತ್ರವ್ಯವಹಾರವನ್ನು ಮಾಡುವಾಗ ಜಾಗರೂಕರಾಗಿರಬೇಕು. ಜನನಕಾಲದಲ್ಲಿ ಮೂರು ಯಾ ಐದು, ಒಂಭತ್ತರಲ್ಲಿ ಲಗ್ನ ಯಾ ಚಂದ್ರನಿಂದ ಗ್ರಹರುಳ್ಳವರು ಈ ಏಳೂವರೆ ಶನಿರಾಯನ ಮೂಲಕ ಉತ್ತಮಾಭಿವೃದ್ಧಿಯುಳ್ಳವರೇ ಆಗುವರು. ಅದಲ್ಲದೆ ಈ ಶನಿಯು ಎಲ್ಲಾ ವಿಧದಿಂದಲೂ ಪ್ರಗತಿಯನ್ನೇ ಜೀವನದಲ್ಲಿ ಉಂಟುಮಾಡಲಿರುವ ಕೆಲಸಗಳನ್ನು ಮಾಡಿಸುತ್ತಾನೆ. ಗೃಹನಿರ್ಮಾಣ ಸಂಸ್ಥಾನಿರ್ಮಾಣವೇ ಮೊದಲಾದ ಮಹತ್ವದ ಕೆಲಸಗಳು ಎಪ್ರಿಲಿನ ಮೊದಲು ಆರಂಭಗೊಂಡು ಮುಂದೆ ಶುಭ ಪರಿಣಾಮಕ್ಕಿರುವ ಆಸ್ಪದವನ್ನು ಕೊಡುವವು. ಮಹಿಳೆಯರೇ, ನಿಮಗೆ ಈ ವರುಷ ಹಲವಾರು ಬಗೆಯಿಂದ ಸುಖೋನ್ನತಿಗಿರುವ ಧನವ್ಯಯದ ರಚನಾತ್ಮಕ ಕಾರ್ಯಗಳು ಸಂಭವಿಸಿ, ಅಭಿವೃದ್ಧಿಯ ಜೀವನವನ್ನು ಸಮಾಜದಲ್ಲಿ ಕಾಣುವಿರಿ. ಲೇಖಕ ಲೇಖಕಿಯರಿಗೆ ಉತ್ತಮ ಪ್ರಗತಿಯುಂಟಾಗಲಿರುತ್ತದೆ. ವಿದ್ಯಾಜೀವನದವರು ಪ್ರಗತಿಯನ್ನೇ ಹೊಂದುತ್ತಾರೆ. ಡಾಕ್ಟರರಿಗೆ ತಮ್ಮ ಉದ್ಯೋಗದಲ್ಲಿ ಬಿಡುವಿರಲಾರದು. ವರ್ಷದ ಆದಿ ಅಂತ್ಯಭಾಗಗಳು ಕುಟುಂಬ ಕಲಹವನ್ನು ಕೊಡುವ ಕಾಲ; ಎಲ್ಲರೂ ಜಾಗರೂಕತೆ ವಹಿಸಬೇಕಾಗುತ್ತದೆ. ಆಕಸ್ಮಿಕ ರೀತಿಯಿಂದ ಅಭಿವೃದ್ಧಿಯು ಸ್ವಾತಿ ಚಿತ್ರಾ ನಕ್ಷತ್ರದವರಿಗೆ (ವ್ಯಾಪಾರದ ಮೂಲಕ) ಉಂಟಾಗಲಿದೆ.

ವೃಶ್ಚಿಕ:—

ಐದನೆಯ ಮನೆಯ ಗುರು ನಿಮಗೆ ವಿಶೇಷ ತರದ ಸುಖಸ್ಥಿತಿಗೆ ಕಾರಣನಾಗಿಲ್ಲನೆಂಬುದನ್ನು ನೀವು ಈ ವರೆಗಣ ಅನುಭವದಿಂದ ತಿಳಿದಿರುವಿರಿ. ಆರನೆ ಮನೆಯ ಗುರುವೇ ನಿಮಗೆ ಹಿತದಾಯಕನು. ಉದ್ಯೋಗದಲ್ಲಿ ಮತ್ತು ಜೀವನದಲ್ಲಿ ಮಹತ್ತರವಾದ ಬದಲಾವಣೆ ಹೊಂದಲಿರುವ ವರ್ಷವಿದು. ಈ ವರ್ಷದ ಆರಂಭ ಭಾಗದಲ್ಲೇ ಈ ನೆಲೆ ಉಂಟಾಗಲಿರುತ್ತದೆ. ಪತ್ರವ್ಯವಹಾರ ಕಾರ್ಯಗಳು ಹೆಚ್ಚಿ, ಎಪ್ರಿಲಿನ ವರೆಗಿರುತ್ತದೆ. ಕೌಟುಂಬಿಕ ಜೀವನದಲ್ಲಿ ಸುಖ ಶಾಂತಿ ಕಡಿಮೆ. ಹಟವಾರಿತನ ಅವಿವೇಕಗಳ ಮೂಲಕ ವಿಶಾಖಾ ನಕ್ಷತ್ರದವರು ಕೀಳು ನೆಲೆಯನ್ನೇ ಹೊಂದುವರು. ಭೂಸಂಬಂಧವಾದ ವ್ಯವಹಾರಗಳುಂಟಾಗಲಿರುವ ಸಂಭವವಿರುತ್ತದೆ. ವಾಸಸ್ಥಾನದ ಬದಲಾವಣೆಯುಂಟಾಗಲಿದೆ.

ಅನುರಾಧಾ ನಕ್ಷತ್ರದವರಿಗೆ ಈ ವರ್ಷ ಮಹತ್ವದ ಘಟನೆಯಿಂದ ಕೂಡಿದ್ದಾಗಿದ್ದು, ಜೀವನದಲ್ಲಿ ತುಂಬಾ ಬದಲಾವಣೆಗಳಿವೆ. ದೇಹಾರೋಗ್ಯ ವಿಷಯದಲ್ಲಿ ಕುಟುಂಬಕ್ಕೆ ಧನದ ವ್ಯಯವಿದೆ. ಕನ್ನಿಕೆಯರಿಗೆ ದಾಂಪತ್ಯ ಸಂಬಂಧದ ಘಟನೆಗಳಾಗುವವು. ಷಷ್ಠದ ಗುರುವೇ ಸಂತಾನಾರ್ಥಿಗಳಿಗೆ ಸಂತಾನ ಚಿಹ್ನೆಯನ್ನು ಕೊಡುವನು. ಕುಟುಂಬದಲ್ಲಿ ಶುಭ ಕೆಲಸಗಳು ನಡೆಯಲಿರುವವು. ದೂರ ಪ್ರಯಾಣವನ್ನು ಮಾಡಲಿರುವಿರಿ. ಕೋರ್ಟು ಕಾರ್ಯಗಳು ಮುಂದರಿಯುತ್ತವೆ. ಜನವರಿ, ಎಪ್ರಿಲ್ ಮೇ ತಿಂಗಳುಗಳು ಮತ್ತು ಜೂನ್, ಜುಲಾಯಿ ತಿಂಗಳುಗಳು ವಿಶೇಷ ಘಟನೆಯನ್ನುಂಟು ಮಾಡುವವು. ಧಾರ್ಮಿಕ ಕಾರ್ಯಗಳಿಗಾಗಿ ಈ ವರ್ಷದ ಅಂತ್ಯದಲ್ಲಿ ಧನ ವ್ಯಯವಿರುತ್ತದೆ. ಆಕಸ್ಮಿಕ ರೀತಿಯಿಂದ ನವೀನತೆಗಿರುವ ಸಂಘಟನೆಗಳು ಗರ್ಜಿನೇ ಜನವರಿಯ ನಂತರ ಉಂಟಾಗುವುದು. ದ್ವಾದಶದ ಕುಜನು ಪತನ, ವ್ರಣ ಭಯ, ಅವಘಡಗಳಿಗೆ ಎಡೆಯನ್ನು ಕೊಡುತ್ತಿರುವುದರಿಂದ, ಈ ವಿಷಯದಲ್ಲಿ ಮುಂಜಾಗ್ರತೆಯುಳ್ಳವರಾಗಬೇಕು. ಕರ್ಮದ ಕೇತುವು ಈ ರಾಶಿಯವರಿಗೆ ಗುರು ಜನರ ಸುಖಕ್ಕೆ ತೊಡಕನ್ನುಂಟುಮಾಡುವನು. ಲೇಖಕ ಲೇಖಕಿಯರಿಗೆ ಈ ವರ್ಷದ ಆದಿಭಾಗಕ್ಕಿಂತ ಅಂತ್ಯಭಾಗವೇ ಜೀವನದಲ್ಲಿ ಅಭಿವೃದ್ಧಿಯನ್ನು ಕೊಡುವುದು. ವಾಸಸ್ಥಾನದ ಬದಲಾವಣೆಗಿರುವ ಸಂಘಟನೆಯಿಂದ ಕೂಡಿದವರಾಗುವಿರಿ. ಉಪಾಧ್ಯಾಯ ವೃತ್ತಿಯವರಿಗೆ ಸಾಂಪತ್ತಿಕ ಪರಿಸ್ಥಿತಿಯ ನ್ಯೂನತೆಯಿಂದ ತಮ್ಮ ಕೆಲಸದಲ್ಲಿ ಅನಾಸಕ್ತಿ, ಜುಗುಪ್ಸಾವಕಾಶಗಳುಂಟಾಗುತ್ತವೆ. ವ್ಯಾಪಾರಿಗಳಿಗೆ ಈ ವರ್ಷ ಕಳೆದ ವರ್ಷಕ್ಕಿಂತ ಶುಭದಾಯಕ. ಆಕಸ್ಮಿಕವಾಗಿ ಧನಾಭಿವೃದ್ಧಿ ನವೀನ ವ್ಯಾಪಾರ ಸಂಸ್ಥೆಗಳಿಗಿರುವ ಯೋಜನೆಗಳುಂಟಾಗಲಿರುತ್ತವೆ. ಈ ರಾಶಿಯ ತರುಣರು ತಮ್ಮ ವರ್ಚಸ್ಸನ್ನು ಬೀರಲಿರುವ ಅಭಿಲಾಷೆಯುಕ್ತರಾಗಿರುವರು. ರಿಕಾರ್ಡು ಸಂಬಂಧ ವ್ಯ
ಹಾರಗಳನ್ನು ನಡೆಸುವಾಗ ವಿಶಾಖಾ ನಕ್ಷತ್ರದವರು ಜಾ
ರೂಕರಾಗಿರಬೇಕು. ಸರಕಾರಿ ನೌಕರರು ತಮ್ಮ ಕೆಲಸಗಳ
ಜಾಗರೂಕತೆಯನ್ನು ಬಹಳವಾಗಿ ವಹಿಸಬೇಕಾಗಿದೆ. ಉನ್ನ
ಸ್ಥಿತಿಯಿಂದ ಕೆಳಕ್ಕೆ ಬರುವ ಅವಕಾಶ ಬಹಳ. ವಿಮಾಸಂ
ಯಾಂತ್ರಿಕ ಶಾಲೆಗಳವರು ಜೂನಿನ ನಂತರ ಪ್ರಗತಿಯುಳ್ಳ
ರಾಗುವರು.

ಧನು:—

ಮುಂದು ಹಿಂದುಗಳನ್ನು ನೋಡಿ, ಆವುದೇ ಕೆಲ
ಗಳನ್ನೂ ಜಾಗರೂಕತೆಯ ಮೂಲಕ ಕಯ್ಕೊಳ್ಳುವುದರಿಂ
ಶುಭವಿರುತ್ತದೆ. ನಿಮ್ಮ ಕುಟುಂಬ ವಾತಾವರಣವು ಕೆಟ್ಟದ
ಅಶಾಂತಿಯುಂಟಾಗಲಿರುವುದು. ಏಕಾದಶದ ಕುಜನು ಈ ನೆ
ಯನ್ನು ಅತಿಯಾಗಿ ತೋರಲಿದ್ದಾನೆ. ಮಿತ್ರರ ಸಂಖ್ಯೆ ಹೆ
ಲಿದೆ. ಸಾಮಾಜಿಕ ವಿಷಯದಲ್ಲಿ ನಿಮ್ಮ ವಿಚಾರವು ಜನವರಿಂ
ನಂತರ ಬಹಳವಾಗಿ ತಳವೂರಿರುವುದು. ಆತ್ಮೀಯರ ವಿಯೋ
ವನ್ನು ಹೊಂದಲಿರುವಿರಿ. ಮಕ್ಕಳಂತೆ ಸಾಕಿ ಸಲಹಿ

ಮಂದಿಗಳೇ ನಿಮ್ಮನ್ನು ವಿರೋಧಿಸುವರು. ಮಾನಸಿಕ ಶಾಂತಿಯು ಅತ್ಯಲ್ಪ. ಕರ್ಮದ ಶನಿಯು ನೌಕರಿಯಲ್ಲಿ ಪ್ರಗತಿಯನ್ನು ಕೊಡಲಿರುತ್ತಾನೆ. ವ್ಯಾಪಾರಿಗಳು ಕಷ್ಟಯತ್ನವನ್ನು ತಮ್ಮ ವ್ಯಾಪಾರ ವಿಷಯದಲ್ಲಿ ವಹಿಸಲಿರುವದರಿಂದ, ವ್ಯಾಪಾರ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲ. ಪ್ರಚಾರಕಾರ್ಯವನ್ನು ಅಧಿಕವಾಗಿ ವಹಿಸುವುದರಿಂದ ಶ್ರೇಯಸ್ಸಿದೆ. ಹೊಸ ವಿಚಾರಗಳಿಂದ ಕೂಡಿದವರಾಗುವಿರಿ. ವಿದೇಶ ವಸ್ತುಗಳ ವಹಿವಾಟಿನವರು ಧನಾಭಿವೃದ್ಧಿಯನ್ನು ಬಹಳವಾಗಿ ಕೊಂದುವಂತಿದೆ. ದೇಹಾರೋಗ್ಯಕ್ಕಾಗಿ ಧನ ವ್ಯಯವು ಪೂರ್ವಾಷಾಢ ನಕ್ಷತ್ರದವರಿಗೆ ಉಂಟಾಗಲಿರುತ್ತದೆ. ಪ್ರಯಾಣಗಳನ್ನು ಮಾಡಿ ಅದರಿಂದ ಶುಭ ಫಲವನ್ನು ಹೊಂದಲಿರುವ ಸಂಭವವಿರುತ್ತದೆ. ಕರ್ಮದ ಶನಿಯು ಹಲ್ಲಾ ಮಾಲುಗಳ ವ್ಯಾಪಾರಿಗಳಿಗೆ ಅಭಿವೃದ್ಧಿಗಿರುವ ಸಂಘಟನೆಯನ್ನುಂಟುಮಾಡುವನು. ದೂರಗತ ಬಂಧು ಜನರ ಮೂಲಕ ಪೂರ್ವಾಷಾಢ ನಕ್ಷತ್ರದವರಿಗೆ ಅಶಾಂತಿಯೇ ಉಂಟಾಗುತ್ತಿರುವುದು. ವ್ಯಯದ ರವಿಯು ರಿಕಾರ್ಡು ಸಂಬಂಧವಾದ ವ್ಯವಹಾರಗಳಿಗೆ ಅವಕಾಶನನ್ನು ಕೊಡುತ್ತಾನೆ. ಆದರೆ, ಅವುಗಳಲ್ಲಿ ಜಯ ಲಾಭವೇ ಉಂಟಾಗಲಿರುತ್ತದೆ. ವಾಸಸ್ಥಾನದ ಬದಲಾವಣೆಯನ್ನು ಮೂಲಾ ನಕ್ಷತ್ರದವರು ಮಾಡಲಾಸಕ್ತಿಯುಳ್ಳವರಾಗುತ್ತಾರೆ. ವಕೀಲ ವೃತ್ತಿಯವರಿಗೆ ಜನವರಿ, ಫೆಬ್ರುವರಿ, ಅಗೋಸ್ಟ್, ಒಕ್ಟೋಬರ ತಿಂಗಳುಗಳು ಪ್ರಗತಿದಾಯಕವೆನಿಸುತ್ತವೆ. ಪ್ರಯಾಣದ ಮೂಲಕ ಉನ್ನತಿಯೇ ಉಂಟಾಗಲಿರುತ್ತದೆ. ಹೆಂಚಿನ ಕಾರಖಾನೆಯೇ ಮೊದಲಾದ ಉತ್ಪಾದನಾ ಸಂಸ್ಥೆಯವರು ಕಳೆದ ವರ್ಷಕ್ಕಿಂತ ಈ ವರ್ಷ ಅಧಿಕ ಉತ್ಪಾದನೆಯನ್ನು ಮಾಡಿ ಸಾಂಪತ್ತಿಕ ಉನ್ನತಿಯನ್ನು ಹೊಂದುತ್ತಾರೆ. ವೈದ್ಯಕೀಯ ವೃತ್ತಿಯವರಿಗೆ ಅಭಿವೃದ್ಧಿ ಇದೆ. ಹಿರಿಯರ ಸುಖಕ್ಕೆ ಈ ವರ್ಷ ಉತ್ತಮವಲ್ಲವೆಂಬುದನ್ನು ಪೂರ್ವಾಷಾಢಾ ನಕ್ಷತ್ರದವರು ಮುಖ್ಯವಾಗಿ ಗಮನಿಸಬೇಕಿದೆ. ಸಾಹಿತ್ಯ ಸೇವೆಯವರು ಬಹಳ ಶ್ರಮವನ್ನು ಎಲ್ಲಾ ವಿಷಯಗಳಲ್ಲೂ ಹೊಂದುತಿದ್ದು, ಆದಿ ಭಾಗದಲ್ಲಿ ತಮ್ಮ ಕೌಟುಂಬಿಕ ಕಷ್ಟಗಳಿಂದ ಕೂಡಿದವರಾಗುವವರಾದರೂ, ಅಂತಹ ವಿಪತ್ಕಾಲದಲ್ಲೇ ಉತ್ತಮ ಸಾಹಿತ್ಯ ನಿರ್ಮಾಣವನ್ನು ಮಾಡಲಿರುತ್ತಾರೆ. ಮೂಲಾ ನಕ್ಷತ್ರದ ತರುಣರು ಸಾಹಿತ್ಯ ಸೇವೆಯಲ್ಲಿ ಅತಿ ಪ್ರೀತಿಯುಳ್ಳವರಾಗುವರು. ಕೆಲಸಗಾರರಿಂದ ತೊಡಕು ಆಗಾಗ ಉಂಟಾಗಲಿರುತ್ತದೆ. ವಾಹನ ಸುಖಕ್ಕಾಗಿ ಧನ ವ್ಯಯವಿರುತ್ತದೆ. ಈ ವರ್ಷದ ಮಧ್ಯ ಭಾಗದಲ್ಲಿ ವಾಹನಗಳ ಮೂಲಕ ಅಪಘಡಗಳುಂಟಾಗದಂತೆ ಜಾಗರೂಕರಾಗಿರಬೇಕು. ಚಿತ್ರಾದಿಗಳನ್ನು ಮನೆಯಲ್ಲಿ ಹೆಚ್ಚಿಸಲಿರುವಿರಿ. ಭೂಷಾ ವಸ್ತುಗಳನ್ನಿಡುವ ವಿವಿಧೋಪಕರಣಗಳನ್ನು ಮನೆಯಲ್ಲಿ ಹೆಚ್ಚಿಸುವ ಯೋಗವು ವರ್ಷಾಂತ್ಯದಲ್ಲಿದೆ.

ಮಕರ:—

ನಿಮ್ಮಲ್ಲಿ ಸ್ವಯಂ—ಜಾಗರೂಕವಾಗಿರುವ ವಿಶೇಷ ಶಕ್ತಿಯು ನಿಮ್ಮ ಕೆಲಸಗಳನ್ನು ಮುಂದರಿಸುವುದರಿಂದ ಎಲ್ಲೆಡೆಯಲ್ಲೂ ಜಯಲಾಭಕ್ಕೆ ಅವಕಾಶವಿದೆ. ಕೇವಲ ಅಂಧಾನುಕರಣೆಯ ಮೂಲಕ ಕಷ್ಟ ವಿರೋಧ ಪ್ರಸಂಗಗಳಿಗೆ ಆಸ್ಪದಗೊಳ್ಳುವಿರಿ. ಯಥೇಷ್ಟವಾದ ಕರ್ತೃತ್ವ ಶಕ್ತಿ ಇರುವುದಾದರೂ ನೀವು ಆ ಶಕ್ತಿಯನ್ನು ಹೊರಗೆಡಹದೆ ಉಳಿಯುವುದರಿಂದ, ನಿಮ್ಮ ವರ್ಚಸ್ಸನ್ನು ಸಮಾಜದಲ್ಲಿ ಬೀರಲಾಗುವುದಿಲ್ಲ. ಸಮಾಜವು ಕರ್ತೃತ್ವಶಕ್ತಿ ಮತ್ತು ಧನ ಈ ಎರಡರ ಮೇಲೆ ಕಣ್ಣಿರಿಸಿರುವುದಾದರೂ ನಿಮ್ಮ ಕರ್ತೃತ್ವಶಕ್ತಿಯು ಧನಾಭಾವವನ್ನು ಲಕ್ಷಿಸುವುದಿಲ್ಲ. ಮಹಾಜನರ ಸಹಾಯ ಸಂಪರ್ಕವನ್ನು ಹೊಂದಿ ಉತ್ತಮವಾದ ಪ್ರಗತಿಗಿರುವ ಸಂಪತ್ತುಂಟಾಗುತ್ತದೆ. ಅದರಿಂದಲೇ ನಿಮ್ಮ ಈ ವರ್ಷದ ಜೀವನವು ಮಹತ್ವದ ಪರಿವರ್ತನೆಯನ್ನು ಕೊಡುವುದಾಗಿದೆ. ಕೌಟುಂಬಿಕ ವಾತಾವರಣವು ಈ ವರ್ಷದ ಆದ್ಯಂತ್ಯ ಭಾಗಗಳಲ್ಲಿ ಅಶಾಂತಿಯಿಂದ ಕೂಡಿರುವುದು. ರೋಗಶಯ್ಯೆಗಳು ಸಂಭವಿಸದಂತೆ ಜಾಗ್ರತೆ. ಧನಿಷ್ಠಾ ನಕ್ಷತ್ರದವರು ಹಟಮಾರಿತನದಿಂದ ಕೆಡುವ ಪ್ರಸಂಗವಿದೆ. ಉದ್ಯೋಗ ಜೀವನದಲ್ಲಿ ಇದರಿಂದ ಕ್ಲೇಶಾವಕಾಶವಿರುತ್ತದೆ. ಮಾನಸಿಕವಾದ ಶಾಂತಿಯು ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಕಡಮೆಯಾಗಿರುತ್ತದೆ. ಕೋರ್ಟು ವ್ಯವಹಾರಗಳು ನಡೆಯಲಿದ್ದು ಅವುಗಳಿಗಾಗಿ ಧನ ವ್ಯಯವಿರುತ್ತದೆ. ಮಕರ ರಾಶಿಯ ವ್ಯಾಪಾರಿಗಳು ಧನ ವಿಷಯದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಅಭಿವೃದ್ಧಿಯುಳ್ಳವರಾಗುವರು. ಆಕಸ್ಮಿಕವಾಗಿ ಧನಲಾಭವು ಶುಕ್ರನ ಲಾಭ ದ್ವಿತೀಯ ಪಂಚಮ ಚಾರದಲ್ಲೂ ಕುಜ ಚಾರದಲ್ಲೂ ಇರುವುದು. ಭೂ ಗೃಹ ಸಂಬಂಧವಾಗಿ ಧನ ವ್ಯಯವನ್ನು ಬಹಳವಾಗಿ ಮಾಡಲಿರುವ ಅವಕಾಶವೇ ಈ ವರ್ಷದಲ್ಲಿ ಅತಿಯಾಗಿರುತ್ತದೆ. ಕುಟುಂಬದಲ್ಲಿ ಅಂತಃಕಲಹಗಳುಂಟಾಗದಂತೆ ಜಾಗರೂಕರಾಗಿರುವುದು ಮುಖ್ಯ. ಮಾರ್ಚಿ ಎಪ್ರೀಲು ತಿಂಗಳು ತುಂಬಾ ವಹಿವಾಟಿನದ್ದಾಗಿರುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಶ್ರವಣ ನಕ್ಷತ್ರದವರು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ಭಾಗ್ಯಗತನಾದ ಶನಿಯು ತುಂಬಾ ಪ್ರಯಾಣವನ್ನುಂಟುಮಾಡುತ್ತಾನೆ. ಕನ್ನಿಕೆಯರಿಗೆ ವರಾವಲೋಕನೆ ದಾಂಪತ್ಯ ಜೀವನ ಸಂಪರ್ಕಗಳು ಸಂಭವಿಸುವವು. ಚಿತ್ರಾನಕ್ಷತ್ರದ ಶನಿಯೇ ತರುಣ ತರುಣಿಯರಿಗೆ ದಾಂಪತ್ಯಜೀವನವನ್ನುಂಟುಮಾಡಿಸಿ, ಜೀವನದಲ್ಲಿ ಪ್ರಗತಿಯ ಸಂಘಟನೆಯನ್ನು ಕೊಡುವನು. ವ್ರಣವಿಕಾರಗಳು ಕರ್ಮದ ಕುಜಚಾರದಲ್ಲಿ ಸಂಭವಿಸುವಂತಿರುವುದರಿಂದ ತುಂಬಾ ಜಾಗರೂಕರಾಗಿರಬೇಕು. ಲೇಖಕ ಲೇಖಕಿಯರಿಗೆ ಈ ವರ್ಷವು ಮಹತ್ವದ್ದು. ಬಟ್ಟೆಯ ವ್ಯಾಪಾರಿಗಳಿಗೆ ವರ್ಷದ ಆದಿಭಾಗವು ಧನ ವಿಷಯದಲ್ಲಿ ತುಂಬಾ ತೊಡಕಿನದ್ದಾಗಿರು

ವುದು. ಅನ್ಯರಿಗೆ ಸಹಾಯವನ್ನು ಮಾಡ ಹೋಗಿ ಕಠಿಣ ಪ್ರಸಂಗಗಳಿಗೆ ಈಡಾಗುವ ಸಂಭವವಿರುತ್ತದೆ. ವಾಸಸ್ಥಾನದ ಬದಲಾವಣೆಯು ಕನ್ಯಾ ರವಿಚಾರನಂತರ ಉಂಟಾಗಲಿರುತ್ತದೆ. ಮಕ್ಕಳ ಆರೋಗ್ಯವು ಚೆನ್ನಾಗಿರುವುದಿಲ್ಲ. ವಾಹನ ಸಂಚಾಲಕರು, ನವಮ ದಶಮದ ಕುಜ ಚಾರ ಈ ವರ್ಷ ಅಧಿಕವಿರುವುದರಿಂದ ಅವಘಡಗಳುಂಟಾಗದಂತೆ ಅತಿಯಾಗಿ ಜಾಗರೂಕತೆಯನ್ನು ವಹಿಸುವುದು ಅಗತ್ಯವಿರುತ್ತದೆ. ನೌಕರರು ಉನ್ನತಿಯ ಸ್ಥಾನವನ್ನು ಹೊಂದಲು ಮಕರ ಮಿಥುನ ಬುಧ ಚಾರ ಕಾಲದಲ್ಲಿ ಶಕ್ತರಾಗುವರು. ಮಹಿಳೆಯರೇ, ನಿಮಗೀವರ್ಷವು ಗೃಹ ವಾತಾವರಣದಲ್ಲಿ ಸುಖಶಾಂತಿಗಳಿರಲಾರವು. ಪ್ರಯಾಣ ಪುಣ್ಯಕಾರ್ಯಗಳನ್ನು ಮಾಡಲಿರುವ ವಿಶೇಷ ಸಂಪರ್ಕವಿರುತ್ತದೆ. ಕುಟುಂಬಗತನಾದ ರಾಹುವು ಕೇವಲ ಕುಟುಂಬ ಶಾಂತಿಯಿರದಿರುವಿಕೆಯನ್ನು ಮಾತ್ರವಲ್ಲದೆ, ವೃತ್ತಿಯಲ್ಲಿಯೂ ಅಶಾಂತಿಯನ್ನು ಕೊಡುತ್ತಾನೆ. ಆದರೆ, ಮನೋಸ್ಥೈರ್ಯದಿಂದ ಗೆಲ್ಲುವಿರಿ. ಯಾಂತ್ರಿಕ ಉದ್ಯೋಗ ಸಂಸ್ಥೆಯವರು ಅಭಿವೃದ್ಧಿಯನ್ನು ಎಲ್ಲಾ ವಿಧದಿಂದಲೂ ಸಾಧಿಸಲಿರುತ್ತಾರೆ. ಆಕರ್ಷಕ ವಸ್ತುಗಳ ಮಾರಾಟನವರು ಫೆಬ್ರವರಿಯಿಂದ ಆಗೋಸ್ಟಿನವರೆಗೆ ಪ್ರಗತಿಯನ್ನೇ ಸಾಧಿಸುವರು.

ಕುಂಭ:—

ನಿಮ್ಮ ಜೀವನವು ಆಕಸ್ಮಿಕ ಘಟನೆಗಳಿಂದ ಕೂಡಿದ್ದು, ತುಂಬಾ ಬದಲಾವಣೆಯ ಸಂಘಟನೆಯು ಅಷ್ಟಮದ ಶನಿ ತೃತೀಯದ ಗುರುಗಳ ಮೂಲಕ ಉಂಟಾಗಲಿದೆ. ಉದ್ಯೋಗದಲ್ಲಿ ಅಭಿವೃದ್ಧಿಯಿದೆ. ದೂರಗತರು ಸ್ವಸ್ಥಾನಕ್ಕೆ ಮರಳಿ ನವೀನ ಉದ್ಯೋಗವನ್ನು ಬಂಧು ಜನರ ಮೂಲಕ ಸಾಧಿಸಿ ಬೆಳಕಿಗೆ ಬರಲಿರುವ ಯತ್ನಯುಕ್ತರಾಗುವರು. ಹಿರಿಯರ ಸುಖವು ಚೆನ್ನಾಗಿರುವುದಿಲ್ಲ. ಕುಟುಂಬೀಯರೇ ವಿರೋಧಿಗಳಾಗಿರುತ್ತಾರೆ. ಸಂಪತ್ತು ವಿಪತ್ತುಗಳೆರಡೂ ನಿಮಗೆ ಅನುಭವಕ್ಕೆ ಬಂದಿರುತ್ತವಾದರೂ ವಿಪತ್ತನ್ನು ದೂರಗೊಳಿಸುವ ಉದ್ಯಮ ವ್ಯವಹಾರಗಳು ಮಕರ ರವಿ ಚಾರನಂತರ ಕಾಣುವುದಾಗಿದೆ. ರಿಕಾರ್ಡು ಸಂಬಂಧವಾದ ವ್ಯವಹಾರಗಳು ನಡೆಯಲಿರುತ್ತವೆ. ಕನ್ನಿಕೆಯರಿಗೆ ಎಂಟನೆ ಮನೆಯ ಶನಿ, ತೃತೀಯದ ಗುರುಗಳು, ದಾಂಪತ್ಯಜೀವನದ ಬಂಧವನ್ನೊದಗಿಸಿ ಮುಂದಿನ ಶ್ರೇಯಸ್ಸಿಗೆ ಆಸ್ಪದವಾಗುವುದು. ಉದ್ಯೋಗಸ್ಥರು ಪರಿವರ್ತನೆ ಹೊಂದಲಿರುವ ಅವಕಾಶವಿದೆ. ಕೌಟುಂಬಿಕ ಜೀವನದವರಿಗೆ ಈ ವರ್ಷದ ಆದ್ಯಂತ್ಯ ಭಾಗಗಳು ಕ್ಲೇಶದಾಯಕಗಳಾಗಿರುತ್ತವೆ. ವಿಪತ್ತುಗಳು ಪದೇ ಪದೇ ತೋರುವಂತಿವೆ. ತರುಣರು ನವೀನ ಉದ್ಯೋಗ ವ್ಯವಹಾರವನ್ನು ನವಮದ ಕುಜ ಚಾರ ಕಾಲದಲ್ಲಿ ಮಾಡುವುದರಿಂದ ಶ್ರೇಯಸ್ಸ

ಪಡೆವರು, ಪ್ರಯಾಣಗಳು ಬಹಳವಾಗಿರುತ್ತವೆ. ಪೂರ್ವಾ
ಭಾದ್ರ ನಕ್ಷತ್ರದವರು ಹೊಸ ವಿಚಾರಗಳಿಂದ ಕೂಡಿದವರಾ
ಗಿರುವರು. ನವೀನ ಉದ್ಯೋಗ ಸಂಸ್ಥೆಯ ನಿರ್ಮಾಣವನ್ನು
ಮಾಡಿ ಅದರಿಂದ ಅಭಿವೃದ್ಧಿಯುಳ್ಳವರಾಗುತ್ತಾರೆ. ಶೋಧ
ಕರು ಉತ್ತಮ ಯಶಸ್ಸನ್ನು ತಮ್ಮ ಕೆಲಸದಲ್ಲಿ ಹೊಂದಿ,
ಉನ್ನತವಾದ ಸ್ಥಾನಮಾನಗಳನ್ನು ಹೊಂದುತ್ತಾರೆ. ರಾಜ
ಕೀಯ ವಿಷಯದಲ್ಲಿ ಆಸಕ್ತರಾದವರು ಅದರಿಂದ ನಿವೃತ್ತಿ
ಯನ್ನು ಹೊಂದಲು ಬಯಸುವವರಾಗುವವರಾದರೂ, ವಾತಾ
ವರಣವು ಅವರನ್ನು ಮುಂದಕ್ಕೆ ಸೆಳೆಯುತ್ತದೆ. ಬೇಂಕು,
ವಿಮಾ, ಮೊದಲಾದ ಧನ ಸಂಬಂಧ ವ್ಯವಹಾರ ಸಂಸ್ಥೆಯವರು
ಅಪವಾದಗಳುಂಟಾಗದಂತೆ ಜಾಗರೂಕರಾಗಿರಬೇಕಾಗಿದೆ.
ವಕೀಲ ವೃತ್ತಿಯವರಿಗೆ ಜನವರಿಯಿಂದ ಮಾರ್ಚ್ ವರೆಗೂ
ಆಗೋಸ್ಟಿನಿಂದ ದಶಂಬರದ ವರೆಗೆಯೂ ತುಂಬಾ ವ್ಯವಹಾರ
ಗಳು ಸಿಕ್ಕಿ, ಅವುಗಳ ಮೂಲಕ ಕೀರ್ತಿ ಪ್ರತಿಷ್ಠೆಗಳಿಗೆ ಕಾರಣ
ರಾಗುವನು. ಧವಸಧಾನ್ಯ, ಹಲ್ಕಾಮಾಲುಗಳ ವ್ಯಾಪಾರ
ದಿಂದಲೂ ಅನ್ನಾಹಾರ ಸಾಮಾಗ್ರಿಗಳ ವ್ಯಾಪಾರದಿಂದಲೂ
ವ್ಯಾಪಾರಿಗಳಿಗೆ ಧನದ ಲಾಭವಿರುತ್ತದೆ. ಪುಸ್ತಕ ಕಾಗದ
ವ್ಯಾಪಾರಿಗಳಿಗೆ ಈ ವರ್ಷ ಅಭಿವೃದ್ಧಿಯದೇ ಆಗಿ ಕಂಡು
ಬರುವುದು. ವೈದ್ಯಕೀಯ ಮತ್ತು ರಾಸಾಯನಿಕ ಸಂಬಂಧದ
ಉದ್ಯೋಗಸ್ಥರಿಗೆ ಎಪ್ರಿಲಿನ ನಂತರ ಪ್ರಗತಿ. ಪತ್ರವ್ಯವ
ಹಾರಗಳು ಬಹಳವಾಗಿರುತ್ತವೆ. ಗ್ರಂಥ ನಿರ್ಮಾಣ ಕಾರ್ಯ
ವನ್ನು ಮೇಷದ ಗುರುವು ಲೇಖಕರಿಗುಂಟುಮಾಡಿಸುತ್ತಾನೆ.
ತೃತೀಯದ ಗುರುವು ಸಾಮಾಜಿಕದಲ್ಲಿ ಉತ್ತಮವಾದ ಸ್ಥಾನ
ಮಾನಗಳನ್ನುಂಟುಮಾಡುವನು. ನಟನಟಿಯರಿಗೆ ಈ ವರ್ಷ
ಪೂರ್ಣದ ವರ್ಷ. ವಿದೇಶಗತರು ನಿವೃತ್ತರಾಗಲಿರುವ ಅವ
ಕಾಶವಿರುತ್ತದೆ. ಸಂತಾನಾರ್ಥಿಗಳು ಧನು ಮೇಷ ರವಿಯ
ಚಾರ ಕೊನೆಗೊಳ್ಳುವ ಮೊದಲು ಈ ಶುಭ ಚಿಹ್ನೆಯಿಂದ
ಕೂಡಿದವರಾಗುವರು.

ಮೀನ:—

'ಶುಭಸ್ಯ ಶೀಘ್ರಂ' ಎಂಬುದನ್ನು ನೀವು ಮನಸ್ಸಿನಲ್ಲಿರಿಸಿ
ಎಲ್ಲಾ ಕೆಲಸಗಳನ್ನೂ ಬೇಗನೆ ಮಾಡುವುದರಿಂದ ಶ್ರೇಯಸ್ಸಿದೆ.
ನಿಮ್ಮ ರಾಶಿತನದ ಗುರುವು ಕರ್ಮಪತಿಯಾಗಿರುವುದರಿಂದ
ಸ್ವತಂತ್ರರಾಗಲಿರುವ ವಿಚಾರವುಳ್ಳವರಾಗಿರುವಿರಿ. ಆ ಮೂ
ಲಕ ನಿಮಗೆ ಜೀವನದಲ್ಲಿ ಮಹತ್ವದ ಬದಲಾವಣೆ ಉಂಟಾಗಿ
ಮುಂದೆ ಶ್ರೇಯಸ್ಸನ್ನೇ ಹೊಂದಲಿರುವಿರಿ. ದ್ವಿತೀಯ ಜನ್ಮ
ಸ್ಥನಾಗಿರುವ ಗುರುವಿನಿಂದ ಶುಭಕೆಲಸಗಳು ಕುಟುಂಬದಲ್ಲಿ
ನಡೆಯಲಿರುತ್ತವೆ. ದೂರ ಪ್ರಯಾಣಾಸಕ್ತಿಯೂ ಕಾಣಬರು
ವುದು. ಪುಣ್ಯಕಾರ್ಯಗಳು ನಡೆಯಲಿರುತ್ತವೆ. ವಾಸ
ಸ್ಥಳದ ಬದಲಾವಣೆಯನ್ನು ಮಾಡಲಿರುವಿರಿ. ಕೌಟುಂಬಿಕ
ಸಮಸ್ಯೆಯು ಚೆನ್ನಾಗಿರುವುದಿಲ್ಲ. ಕಲಹಭಿನ್ನತೆಗಳಿಗಿರುವ
ಸಂಘಟನೆಯೇ ಅಧಿಕವಿರುತ್ತದೆ. ಕುಟುಂಬದಿಂದ ದೂರಾಗಿ
ರುವುದರಿಂದ ಇಂತಹ ಪ್ರಸಂಗಗಳಿಂದ ತಪ್ಪಿಸಿಕೊಳ್ಳಲು ಶಕ್ತ
ರಾಗುತ್ತೀರಿ. ಏಳನೆ ಮನೆಯ ಶನಿಕುಜರು ದಾಂಪತ್ಯಜೀ
ವನವಲ್ಲಿ ತೊಡಕನ್ನೇ ಪದೇ ಪದೇ ಉಂಟುಮಾಡುತ್ತಾರೆ.
ಅಗಲುವಿಕೆ ವಿಭಿನ್ನತೆಗಳು ಸಂಭವಿಸುತ್ತವೆ. ಪರಿಮಳದ್ರವ್ಯ,
ಸಾಬೂನುಗಳ ವ್ಯಾಪಾರಿಗಳು ಬಹಳವಾಗಿ ಆರ್ಥಿಕ ಸಂಪ
ತ್ತನ್ನು ಗಳಿಸುವರು. ತೈಲ ವ್ಯಾಪಾರಿಗಳಿಗೆ ಈ ವರುಷದಲ್ಲಿ
ಪ್ರಗತಿ ಇದೆ. ಪೂರ್ವಾಭಾದ್ರ ರೇವತಿ ನಕ್ಷತ್ರದವರು ಹೊಸ
ಕೆಲಸಗಳಿಗೆ ಕೈಹಾಕುವರು. ಸಪ್ತಮಾಷ್ಟಮದ ಕುಜಚಾರವು
ವಿವಾಹ ಸಂಪರ್ಕವನ್ನು ಹೊಂದಲು ಉತ್ತಮವಲ್ಲವಾದ ಕಾ
ರಣ ಈ ಕುರಿತು ಶಾಂತಿ ಪ್ರತಿಕ್ರಿಯೆಗೊಂಡೇ ತರುಣ
ತರುಣಿಯರು ವಿವಾಹ ಸಂಬಂಧವನ್ನು ಹೊಂದುವುದುಚಿತ
ವಿರುತ್ತದೆ. ಉದ್ಯೋಗ ಸಂಸ್ಥೆಗಳು ಪರದೇಶ ಸಂಪತ್ತನ್ನು
ವೃದ್ಧಿಗೊಳಿಸಿ ರಫ್ತುಮಾಡುವುದರಿಂದ ಉತ್ತಮ ಆರ್ಥಿಕಸ್ಥಿತಿ
ಯನ್ನು ಹೊಂದಲಿರುತ್ತವೆ. ಎಲ್ಲಾ ವಸ್ತುಗಳೂ ಯಾವ
ಆತಂಕವಿರದೆ ತಲಪಿ ಅದರಿಂದ ಶುಭಪರಿಣಾಮವಾಗುವುದು.
ಸಿಂಹ, ಮೀನಗಳ ರವಿಚಾರ ಕಾಲವು ನವೀನ ಉದ್ಯೋಗ
ವನ್ನು ಕೊಡಲಿರುವ ಸಂಭವವಿರುತ್ತದೆ. ಈ ಕಾಲದಲ್ಲೆ ಹೊಸ
ವೃತ್ತಿಯನ್ನು ಆರಂಭಿಸುವುದರಿಂದ ತರುಣರಿಗೆ ಪ್ರಗತಿ ಕಂಡು
ಬರುವುದಾಗಿದೆ. ಚರ್ಮ, ನೆಯ್ಗೆಯೇ ಮೊದಲಾದ ದೈನಿಕ
ವ್ಯವಹಾರ ವಸ್ತುಗಳ ಕಾರ್ಮಿಕರು ತುಂಬಾ ಪ್ರಗತಿಯುಳ್ಳವ
ರಾಗುತ್ತಾರೆ. ಹೊಗೆಸೊಪ್ಪು, ಹುಡಿ ಮೊದಲಾದ ಆಕರ್ಷಕ
ಹಾಗೂ ಮಾದಕ ವಸ್ತುಗಳ ವ್ಯಾಪಾರಿಗಳಿಗೆ ಜನವರಿಯ
ಮುಂದೆ ತುಂಬಾ ಪ್ರಗತಿ ಇರುವುದು. ಭೂಮಾಲಿಕರು ಕೃಷಿ
ಸಂಪತ್ತನ್ನು ಅಧಿಕರಿಸಲಿರುತ್ತಾರೆ. ಅಷ್ಟಮದ ಕುಜನು
ಭಾಗ್ಯಾಧಿಪತಿಯಾದ್ದರಿಂದ ಆಕಸ್ಮಿಕವಾಗಿ ಧನಪ್ರಾಪ್ತಿಯನ್ನು
ಕೊಡಲಿರುವನು. ರೇವತಿ ನಕ್ಷತ್ರದವರು ಋಣಸಂಬಂಧ
ವ್ಯವಹಾರವನ್ನು ಮಾಡುವಾಗ ಜಾಗರೂಕರಾಗಿರಬೇಕು.
ಡಾಕ್ಟರರು ಉತ್ತಮ ಪ್ರಗತಿಯನ್ನು ಹೊಂದಲಿರುತ್ತಾರೆ.
ಕಚ್ಚಾಮಾಲುಗಳ ವ್ಯಾಪಾರಿಗಳಿಗೆ ಆರ್ಥಿಕ ಸುಧಾರಣೆಯಿದೆ.
ಲೇಖಕರು ವರ್ಷಾಂತ್ಯದಲ್ಲಿ ತುಂಬಾ ಶ್ರಮಯುಕ್ತರಾಗುವರು.
ಮಹಿಳೆಯರೇ, ನಿಮಗೆ ಸಪ್ತಮದ ಕುಜನು ದಾಂಪತ್ಯಜೀವ
ನಕ್ಕೆ ಆಗಾಗ ತೊಡಕನ್ನು ಕೊಡುವನು. ಅಷ್ಟಮದ
ಕುಜನೂ ಇದೇ ಫಲವನ್ನೀಯುತ್ತಾನೆ. ಯಾಂತ್ರಿಕ ಉದ್ಯೋ
ಗದವರು ಪ್ರಗತಿಯುಳ್ಳವರಾಗುವರು. ಸಾಮಾಜಿಕ ಕಾರ್ಯ
ದುರಂಧರರು ವಿಶೇಷ ಚಟುವಟಿಕೆಗಳ ಮೂಲಕ ಯಶಸ್ವಿ
ಗಳಾಗುವರು.

ಈ ವರುಷದ (1952) ವಿಶೇಷ ಫಲ

ಕೃಷಿ ಆಹಾರ ಸಂಪತ್ತುಗಳು ಈ ವರುಷ ಹೆಚ್ಚಾಗ
ಲಿರುತ್ತವೆ. ಭಾರತವು ಅನ್ಯರಾಷ್ಟ್ರಗಳ ಮುಂದೆ ಉನ್ನತ

ಮಾನವ ಮತ್ತು ಮೃಗಪಕ್ಷಿಗಳು

(ಲೇಖಕಿ: ಶ್ರೀಮತಿ ಬಿ. ಮೋಹಿನಿದೇವಿ, ಸಂಪಾದಕಿ: "ಸುವಾಸಿನಿ")

ಅಹಂಕಾರದಲ್ಲಿ ಮುಳುಗಿದ ಮನುಷ್ಯತ್ವವು, ದೀನ ಪಶುಗಳನ್ನು ತಿರಸ್ಕಾರದಿಂದ ನೋಡುತ್ತಿದೆ. ಆದರೆ, ವಿಚಾರಮಾಡಿ ನೋಡಿದರೆ, ಬುದ್ಧಿಬಲದ ಒಂದು ಕಾರಣದಿಂದಲೇ ಮನುಷ್ಯನು ಪಶುವಿಗಿಂತ ಶ್ರೇಷ್ಠನೇ ಎಂಬ ವಿಷಯದಲ್ಲಿ ಸಂದೇಹ ಏಳುತ್ತದೆ. ಮನುಷ್ಯ ಮತ್ತು ಪಶುಗಳ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾಗಿವೆಯಾದ ಕಾರಣ ಅವುಗಳ ವಾಸ್ತವಿಕ ಬುದ್ಧಿಬಲದ ಅಂದಾಜುಮಾಡಲಾರೆವು.

ಮನುಷ್ಯರಲ್ಲಿ ಮತ್ತು ಪಶುಗಳಲ್ಲಿ ಬಹಳ ಅಂತರವಿದೆಯೆಂದು ಸಾಮಾನ್ಯವಾಗಿ ಜನರ ಅಭಿಪ್ರಾಯವಿದೆ. ನಾವು ಮನುಷ್ಯರಾದ ಕಾರಣ ಪ್ರಾಣಿಗಳನ್ನು ಬಹಳ ತಿರಸ್ಕಾರದೃಷ್ಟಿಯಿಂದ ನೋಡುತ್ತೇವೆ. ಸ್ವತಃ ನಮ್ಮ ಪ್ರಶಂಸೆಯ ಭಾವನೆಯ ಜೊತೆಯಲ್ಲೇ ಪಶುಗಳ ವಿಷಯವಾಗಿ ಆಳವಾದ ಅವಜ್ಞೆಯ ಭಾವನೆಯೂ ಸೇರಿರುತ್ತದೆ. "ನಾವು ಮನುಷ್ಯರು" ಎಂದು ತಿಳಕೊಂಡು, ನಾವು ಎಲ್ಲ ರೀತಿಯಲ್ಲಿ ಪಶುಗಳಿಗಿಂತ ಶ್ರೇಷ್ಠರೆಂದು ಹೇಳಿಸಿಕೊಳ್ಳುತ್ತೇವೆ. ನಮ್ಮ ಈ ಅಹಂಭಾವವನ್ನು ಹೆಚ್ಚಿಸುತ್ತಾ ಪರ್ವತವನ್ನು ದಾಟಿದ್ದೇವೆ. ಪಶುತ್ವ ಎಂಬ ಶಬ್ದವೇ ದುರ್ಗುಣಗಳ ಪರ್ಯಾಯವಾಚಕ ಶಬ್ದವಾಗಿದೆ.

ನಿಜವಾಗಿ "ಪಶು ಮತ್ತು ಮನುಷ್ಯರಲ್ಲಿ ಇಷ್ಟು ಭೇದವಿದೆಯೇ? ನಮ್ಮಲ್ಲಿದ್ದ ಗುಣ–ಅವಗುಣಗಳು ಪಕ್ಷಿಗಳಲ್ಲಿ ಇಲ್ಲವೇನು? ಆದರೆ, ನಾವು ಒಬ್ಬ ಮೂರ್ಖನಿಗೆ, 'ಕತ್ತೆ' ಮತ್ತು ಚತುರನಿಗೆ 'ನರಿ' ಎಂದು ಹೇಳಲು ಹಿಂಜರಿಯುವುದಿಲ್ಲ. ನಾರಿಯ ಸುಂದರ ಕಣ್ಣುಗಳ ಕಾರಣದಿಂದಾಗಿ 'ಮೃಗನಯನೆ' ಅಥವಾ ಮದಭರಿತ ಚಲನೆಯ ಕಾರಣ 'ಗಜಗಾಮಿನಿ' ಎಂದು ಹೇಳಲು ಸಂಕೋಚಪಡುವುದಿಲ್ಲ. ಮಧುರವಾಗಿ ಹಾಡಿದ ಕಾರಣ ಆಕೆಯನ್ನು 'ಕೋಗಿಲೆ' ಎಂದು ಹೇಳುವುದು ನಮ್ಮ ಕಲಾ ಪ್ರಿಯತೆಯ ಪರಿಚಯವನ್ನು ಕೊಡುತ್ತಿದೆ. ವೀರತ್ವವನ್ನು ನೋಡಿ, ಸಿಂಹದ ಉಪಾಧಿಯನ್ನು ಕೊಟ್ಟು ವಿಭೂಷಿಸುತ್ತೇವೆ. ಮನುಷ್ಯನ ಗುಣವಾಗಲಿ ಅವಗುಣವಾಗಲಿ, ಅದರ ಪರಿಚಯವನ್ನು ಕೊಡಲು ಆತನ ಬಳಿ ಏನಿದೆ? ಇದಕ್ಕಾಗಿ ಮನುಷ್ಯನಿಗೆ ಈ ದೀನ ಮೂಕ ಪಶುಗಳ, ಪಕ್ಷಿಗಳ ಸಾಮ್ಯದ ಸಹಾಯ ಪಡೆಯಬೇಕಾಗುವುದು. ಹಾಗಿದ್ದರೂ ಅಹಂಕಾರದಲ್ಲಿ ಮುಳುಗಿದ ಮನುಷ್ಯತ್ವವು ಆ ದೀನ ಪಶುಗಳನ್ನು ತಿರಸ್ಕಾರದ ದೃಷ್ಟಿಯಿಂದ ನೋಡಲು ಸಂಕೋಚಪಡುವುದಿಲ್ಲ.

ವಾದ ಸ್ಥಾನಮಾನವನ್ನು ಹೊಂದಲಿರುತ್ತದೆ. ರಾಜಕೀಯದಲ್ಲಿ ಕೊಂಗ್ರೆಸ್ ಸಂಸ್ಥೆಯು ಅನೇಕ ಕಷ್ಟಪರಂಪರೆಗಳಿಗೆ ತುತ್ತಾದರೂ, ಕೊಂಗ್ರೆಸ್ಸೇ ಸರ್ವತ್ರ ತನ್ನ ವಿಜಯವನ್ನು ತೋರುವುದು. ಮುಂದಾಳುಗಳಲ್ಲಿ ವಿಶೇಷ ಕೀರ್ತಿಕಾರಕ ಯೋಗವಿರುತ್ತದೆ. ವಿದೇಶದಲ್ಲಿ ಉದ್ಯೋದ್ಯಮಗಳುಂಟಾಗಿ ಮುಂದಾಳುಗಳಿಗೆ ಕಠಿಣ ಸಮಸ್ಯೆ ಹಾನಿಗಳುಂಟಾಗುವ ಯೋಗವಿದೆ. ವಿದ್ಯಾಸಂಸ್ಥೆಗಳಲ್ಲಿ ತೀವ್ರವಾದ ಬದಲಾವಣೆಯಾಗಲಿರುತ್ತದೆ. ಭಾರತದ ರಾಷ್ಟ್ರಕ್ಕೆ ರಾಷ್ಟ್ರೀಯ ಭಾಷೆಯನ್ನು ಭರದಿಂದ ಪ್ರಚಾರಗೊಳಿಸಲಿರುವ ಪರಿಸ್ಥಿತಿಯುಂಟಾಗುತ್ತದೆ. ಭಾರತ ಸರಕಾರವು ಹಲವಾರು ಯೋಜನೆಗಳನ್ನು ತಯಾರಿಸಿ ಇನ್ನು ಏಳು ವರುಷಗಳಲ್ಲಿ ಅತ್ಯುನ್ನತ ಸ್ಥಾನಕ್ಕಿರುವ ಸಾಧನೆಗೊಳ್ಳುವುದು. ಪಾಕಿಸ್ಥಾನದ ನೆಲೆ ಕ್ರಾಂತಿಕಾರಕವಾಗಿರುತ್ತದೆ. ವಿದೇಶದ ಕೈಚಳಕ ಪಾಕಿಸ್ಥಾನದಲ್ಲಿ ಬೀಳುವಂತಿರುತ್ತದೆ. ಜನತೆಯ ಬಡತನದ ಕಷ್ಟ ಸಮಸ್ಯೆ, ಆಹಾರ ವಸ್ತುಗಳ ಅಭಾವ ಇವುಗಳಿಂದಾದ ಅನಿಷ್ಟ ಪರಿಣಾಮ ಭಾರತಕ್ಕೆ ಅಷ್ಟಿಷ್ಟಲ್ಲವಾದರೂ ಈ ಗೋಳಿನ ನಿವಾರಣೆಯು ಭಾರತ ಸರಕಾರದಿಂದ ಉತ್ತಮ ರೀತಿಯಲ್ಲಿ ನಡೆದು ರಾಜ್ಯದ ಆದರ್ಶ ನೆಲೆಗಿರುವ ಯೋಜನೆ ಮೇಷದ ಗುರುಚಾರದಿಂದ ಉಂಟಾಗುತ್ತದೆ. ಉದ್ಯೋಗ ಸಂಸ್ಥೆಗಳೂ ವಿದ್ಯಾಲಯಗಳೂ ಭಾರತದಲ್ಲಿ ಹೆಚ್ಚಲಿರುತ್ತವೆ. ಇದರಿಂದ ಭಾರತ ಮುನ್ನಡೆಯುವುದು.

ನಿಜವಾಗಿ ಪಶು ಮತ್ತು ಮನುಷ್ಯನಲ್ಲಿರುವ ಅಂತರವನ್ನು ಪರಿಶೀಲಿಸುವ. ಬುದ್ಧಿಬಲದ ಕಾರಣದಿಂದಲೇ ಮನುಷ್ಯನು ಪಶುವಿಗಿಂತ ಶ್ರೇಷ್ಠ. ಜಗತ್ತಿನ ಎಲ್ಲಾ ಮನುಷ್ಯರು ಬುದ್ಧಿವಂತರಾದರೆ, ನಾವು ಯಾರಿಗಾಗಿ, ಕತ್ತೆ, ಮೂಢ, ಹುಚ್ಚ ಎಂಬ ಶಬ್ದಗಳ ಉಪಯೋಗ ಮಾಡುತ್ತಿದ್ದೇವೆ? ಆ ಮೂಢ-ಹುಚ್ಚ-ಕತ್ತೆ....ಅವರು ಯಾರು? ಲೋಕದ ಎಲ್ಲ ಮನುಷ್ಯರು ಸಮಾನರೂಪದಲ್ಲಿ ಬುದ್ಧಿವಂತರಲ್ಲದಿದ್ದರೂ, ಹೆಚ್ಚಾಗಿ ಪಶುಗಳಿಗಿಂತ ಬುದ್ಧಿವಂತರೇ ಆಗಿರುವರು. ಮನುಷ್ಯ ಮತ್ತು ಪಶುಗಳ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾಗಿವೆ. ಆದ್ದರಿಂದ ಅವುಗಳ ವಾಸ್ತವಿಕ ಬುದ್ಧಿಬಲದ ಅಂದಾಜು ಮಾಡಲಾರೆವು. ಈ ಸಂಬಂಧವಾಗಿ ಅವುಗಳನ್ನು ಬುದ್ಧಿಹೀನ ಎಂದು ಹೇಳುವುದು ನಮ್ಮ ಬುದ್ಧಿವಂತಿಕೆ ಅಲ್ಲ. ಪಳಗಿಸಿದ ಪಶುಗಳ ಕಾರ್ಯ-ಚತುರತೆಯ ಪರಿಚಯ ನಮಗೆ ಪ್ರತಿದಿನ ಸಿಗುತ್ತದೆ. ಅವುಗಳನ್ನು ನೋಡಿ ಬುದ್ಧಿಬಲವು ಕಡಿಮೆ ಇಲ್ಲವೆಂದು ನಾವು ಗ್ರಹಿಸತಕ್ಕದ್ದು.

ಪಶುಗಳ ಶಾರೀರಿಕ ಬಲವು ಎಷ್ಟೇ ಇರಲಿ, ಅದನ್ನು ನಾವು ಎಂದಿಗೂ ಸರಿಗಟ್ಟಲಾರೆವು. ಈ ಶಾರೀರಿಕ ಬಲದ ಕಾರಣವೆ ಪ್ರಾಕೃತಿಕ ಧ್ಯೇಯವು ಅಲ್ಲ—ಅನೇಕ ಪಶು-ಪಕ್ಷಿಗಳ ಬುದ್ಧಿವಂತಿಕೆ ಹೇಳಲ್ಪಟ್ಟಿದೆ. ಮನುಷ್ಯರ ಹಾಗೆ ಮೃಷ್ಟಾನ್ನಭೋಜನವನ್ನು ಅವುಗಳು ಸೇವಿಸಲಿಲ್ಲ. ಮನುಷ್ಯರಂತೆ ಅವುಗಳಿಗೆ ಸ್ವಾದಿಷ್ಟ ಭೋಜನ ಬೇಕೆಂತಿಲ್ಲ. ಮಾದಕ ದ್ರವ್ಯಗಳನ್ನೂ ಅವು ಅರಿಯವು. ಇದೇ ಕಾರಣದಿಂದ ಅವುಗಳಿಗೆ ಡಾಕ್ಟರರ ಆವಶ್ಯಕತೆ ಇಲ್ಲ. ನಾನಾ ತರದ ಔಷಧಿಗಳ ಅಗತ್ಯವೂ ಇಲ್ಲ. ಅಕಾಲಮೃತ್ಯುವು ಅವುಗಳಲ್ಲಿ ಇಲ್ಲ. ಕ್ಷಯ, ಮಹಾರೋಗಗಳನ್ನು ಅವುಗಳು ನೋಡಿಯೇ ಇಲ್ಲ. ಆದರೆ ಮನುಷ್ಯರ ಸಂಸರ್ಗದಲ್ಲಿ ಬಿದ್ದ ಕಾರಣ ಹಾಗೂ ಮನುಷ್ಯರು ನಡೆಯುವ ರಸ್ತೆಯ ಮೇಲೆ ನಡೆದ ಕಾರಣ ಕೆಲವು ಪಶುಗಳು ಮನುಷ್ಯರಿಗೆ ಬರುವ ಸಂಕಟಗಳಿಗೆ ತಾವೂ ಗುರಿಯಾಗುತ್ತಿವೆ.

ಪಶುಗಳ ನೈತಿಕ ಜೀವನ


ಪಶುಗಳ ನೈತಿಕ ಅಥವಾ ಸಾಮಾಜಿಕ ಜೀವನವು ಮನುಷ್ಯನಿಗಿಂತ ಉನ್ನತವಾಗಿರುವುದು. ಮಾನವತೆಯ ಸಭ್ಯತೆಯ ಮೂಲ್ಯವೇ ಅವುಗಳಿಗೆ ಇಲ್ಲ. ಮಾನವರು ಅನೇಕರ ದೂಷಣೆಯನ್ನು ಪ್ರಚಾರ ಮಾಡುತ್ತ ಇರುವರಾದರೆ ಈ ಗುಣವು ಪಶುಗಳಲ್ಲಿ ಇಲ್ಲ. ಉಚ್ಚ-ನೀಚ ಅಥವಾ ಮೂರ್ಖ-ಪಂಡಿತರ ವಾದ-ವಿವಾದವು ಅವುಗಳಲ್ಲಿ ಇಲ್ಲ. ವರ್ತಮಾನದ ತಮ್ಮ ಹಸಿವೆ, ನಗ್ನತೆ, ಕುರೂಪ, ಸಭ್ಯತೆಯ ಮಿಥ್ಯ ಅಭಿಮಾನ, ಡಾಂಭಿಕರಾದ ಮಾನವರಿಗೆ, ಈ ಮೂಕ ಪಶುಗಳು ನವಚೇತನ ಮತ್ತು ಜಾಗ್ರತಿಯ ಸಂದೇಹವನ್ನು ಕೊಡುತ್ತಿರುವುವು. ಯಾವಾಗಲೂ ಕಳ್ಳತನ, ಡಕಾಯತಿಗಳಿಂದ ದೂರ ಇರಲು, ತಮ್ಮ ಕರ್ತವ್ಯದಲ್ಲೇ ಲೀನರಾಗಿರಲು ಈ ಮೂಕಪಶುಗಳು ನಮಗೆ ಕಲಿಸುವುವು. ಸಹಜವಾಗಿ ಸ್ವಾಭಾವಿಕ ಜೀವನದ ಸುಂದರವಾದ ಉದಾಹರಣೆಯನ್ನು ನಮಗೆ ಕೊಡುತ್ತಿರುವುವು. ಮನುಷ್ಯರಂತೆ ಪರಾವಲಂಬಿಗಳಾಗಿ ಜೀವಿಸಲು ಪಕ್ಷಿಗಳು ಕಲಿಸುವುದಿಲ್ಲ.

ಸೌಂದರ್ಯಪ್ರೇಮಿಯಾದ ಮನುಷ್ಯನು ತನ್ನ ಸೌಂದರ್ಯದಲ್ಲಿ ಎಷ್ಟೇ ಮಗ್ನನಾಗಿರಲಿ, ಅವನು ಸುಂದರತೆಯಲ್ಲಿ ಪಶು ಮತ್ತು ಪಕ್ಷಿಗಳಲ್ಲಿ [ಸಮಾನತೆಯನ್ನು ಹೊಂದಬಲ್ಲನೇ? ಮನಷ್ಯನು ಪ್ರಕೃತಿಯ ಕುರೂಪ ಪ್ರಾಣಿಯಾಗಿದ್ದಾನೆ. ತನ್ನ ಶೃಂಗಾರವನ್ನು ಆಭರಣಗಳಿಂದಲೂ ಒಳ್ಳೇ ಬಟ್ಟೆಗಳಿಂದಲೂ ಮಾಡಿಕೊಂಡರೂ ಸರಿಯೇ,—ಪಕ್ಷಿಗಳನ್ನು ಸರಿಗಟ್ಟಲಾರನು. ಪಕ್ಷಿಗಳಿಗೆ ಪ್ರಕೃತಿಯೇ ಸ್ವತಃ ನಾನಾ ತರದ ಬಣ್ಣ ತಥಾ ರಾಗಗಳಿಂದ ಅಲಂಕರಿಸಿದೆ. ಸಿಂಹ ಮತ್ತು ವ್ಯಾಘ್ರ ಹಿಂಸಕ ಪಶುಗಳಲ್ಲೂ ಮೋಹಕ ಮತ್ತು ಆಕರ್ಷಕ ವ್ಯಕ್ತಿತ್ವ ಕಂಡುಬರುವುದು. ಈ ಗುಣಗಳು ಮನುಷ್ಯರಲ್ಲಿ ಸಿಗುವುದು ದುರ್ಲಭವಾಗಿದೆ.

ಕಲೆಯ ಎರಡು ಮುಖ್ಯ ಉಪಕರಣಗಳಾದ ನೃತ್ಯ ಮತ್ತು ಸಂಗೀತಗಳ ಅಭಾವವು ಅವುಗಳಲ್ಲಿಲ್ಲ. ಮನುಷ್ಯರ ನೃತ್ಯ ಮತ್ತು ಸಂಗೀತದಲ್ಲಿ ಆಕರ್ಷಿತರಾಗುವವರು ಕಡಿಮೆ ಇರಬಹುದು. ಆದರೆ ಕೋಗಿಲೆಯ ಮಧುರವಾದ ಸ್ವರ ಕೇಳಿ ತನ್ನನ್ನು ಮರೆಯುವರು, ನವಿಲಿನ ಕರೆಯಿಂದ ವ್ಯಥಿತ, ಭ್ರಮರದ 'ಗೂಂಜ'ರವದಿಂದ ಆಂದೋಲಿತ, ನರನಾರಿಯರ ಉದ್ಗಾರದಿಂದ ಮಾನವ ಜಾತಿಯ ಪೂರ್ಣ ಸಾಹಿತ್ಯವು ತುಂಬಿದೆ. ಪಕ್ಷಿಗಳ ಕಲರವವು ವಸಂತ ಆಗಮನದ ಸಂಕೇತ ಮಾಡುತ್ತದೆ. ಕೋಳಿಯ ಕೂಗು ಪ್ರತಿ ದಿನ ನವ-ಜಾಗ್ರತಿಯ ಸಂದೇಶಕೊಡುತ್ತಿದೆ. ಪಶು ಪಕ್ಷಿಗಳು ಪ್ರಕೃತಿಯ ಅನುಗಾಮಿಯಾದ್ದರಿಂದಲೇ, ಪ್ರಕೃತಿಯ ಮಮತೆ ಪಶುಗಳ ಮೇಲೆ ತುಂಬಾ ಇದೆ. ಅವು ತಮ್ಮ ಶಕ್ತಿಯ ದುರುಪಯೋಗ ಮಾಡುವುದಿಲ್ಲ, ಆದ್ದರಿಂದ ಅವುಗಳನ್ನು ದುರ್ಬಲವೆಂದು ತಿಳಕೊಳ್ಳುವುದು ನಮ್ಮ ತಪ್ಪಾಗಿದೆ. ಅವು ತಮ್ಮ ಅಧಿಕಾರಕ್ಕಾಗಿ ಹಿಂಸೆ ಮಾಡುವುದೂ ಇಲ್ಲ. ಅಲ್ಲದೆ ತಮ್ಮ ವೀರತ್ವವನ್ನು ತೋರಿಸುವುದಕ್ಕಾಗಿ, ತಮ್ಮ ಶಕ್ತಿಯ ಉಪಯೋಗ ಮಾಡುವುದೂ ಇಲ್ಲ. ತಮ್ಮ ಪ್ರಕೃತಿಗತ ಅತ್ಯಗತ್ಯದ ಪೂರ್ತಿಗಾಗಿ, ಅವುಗಳ ಪ್ರತಿಯೊಂದು ಆಚರಣವು ಸಹಜ ಮತ್ತು ಸ್ವಾಭಾವಿಕವಾಗಿದೆ. ಪ್ರಕೃತಿಯು ಅವಕ್ಕೆ ಆಕಾಶ, ಸ್ಥಲ ಮತ್ತು ಜಲದಲ್ಲಿ ವಿಚರಣ ಮಾಡುವ ಕ್ಷಮತೆಯನ್ನು ಕೊಟ್ಟಿದೆ. ಈ ಪ್ರಾಕೃತಿಕ ವಿಚರಣದ ಆನಂದವನ್ನು ಮನುಷ್ಯನು ಧನರಾಶಿಯಲ್ಲೂ ಮಾಡಲಾರನು. ಪ್ರತಿಯೊಂದು ಪ್ರಾಣಿಗೆ ಆಕಾಶದಲ್ಲಿ ಹಾರಲು, ನೀರಿನಲ್ಲಿ ಮುಳುಗಲು ಸಾಮರ್ಥ್ಯವಿದೆ, ಜಗತ್ತಿನ ಪ್ರತಿಯೊರ್ವನು ವಿಮಾನದಲ್ಲಿ ಪ್ರಯಾಣ ಬೆಳೆಸಲು ಶಕ್ತನೇ?

ಜಪಾನಿನ 'ನೋ' '(Noh')

ನಾಟಕ



ಜಪಾನಿನ 'ನೋ' ನಾಟಕದಲ್ಲಿ ಉಪಯೋಗಿಸುವ
ಒಂದು ಮುಖವಾಡ.

[ಹಿಂದೊಮ್ಮೆ ಜಪಾನಿನಲ್ಲಿ ಫ್ರಾನ್ಸಿನ ರಾಯಭಾರಿಯ
ಐದು ವರ್ಷಗಳ ಕಾಲ ಇದ್ದ ಪೊಲ್ ಕ್ಲೊಡಲ್‌ರವರು
ಬರೆದ ಒಂದು ಲೇಖನದಿಂದಾಯ್ದುದು.]

ಜಪಾನಿನ 'ನೋ' ನಾಟಕಗಳು ಒಂದು ಪ್ರತ್ಯೇಕ ವರ್ಗದ ಸೃಷ್ಟಿಯಾಗಿವೆ. ಜಪಾನಿನ ಫುಜಿವಾರಾ ಶೊಗೂನರ ಕಾಲ ದಿಂದ ಅವು ಬಳಕೆಯಲ್ಲಿದ್ದುವೆಂದೂ ತಿಳಿಯಲಾಗಿದೆ.

'ನೋ' ನಾಟಕಗಳು ಸಾಮಾನ್ಯವಾಗಿ ಬಲು ಚಿಕ್ಕವು. ಕೆಲವೇ ನಿಮಿಷಗಳಲ್ಲಿ ಅಭಿನಯಿಸಲ್ಪಡುವುವು. ದೃಶ್ಯಗಳೂ ಒಂದಕ್ಕಿಂತ ಹೆಚ್ಚು ಇಲ್ಲ.

ಈ ವರೆಗೆ ಸುಮಾರು ಇನ್ನೂರೈವತ್ತು 'ನೋ' ನಾಟಕ ಗಳು ದೊರೆತಿವೆ.

ಸುಶಿಕ್ಷಿತ ಕಲಾಭಿಜ್ಞರ ಸಲುವಾಗಿಯೇ 'ನೋ' ನಾಟ ಕಗಳಿವೆ ಎನ್ನಬಹುದು. ಅವು ಕೇವಲ ಮನೋರಂಜನೆಗಾಗಿಲ್ಲ; ಜನಸಾಮಾನ್ಯರ ಬಗ್ಗೆ ಇಲ್ಲ. ಕೆಲವೇ ಮೇಧಾವಿಗಳ ಬಗ್ಗೆ, ಪರಿಮಿತ ಜನರ ಬಗ್ಗೆ ಇವೆ.

ಅವುಗಳಲ್ಲಿ ಒಂದು ತರದ ಪವಿತ್ರತೆ ತುಂಬಿದೆ. ಅವು ಗಳಲ್ಲ ಅಭಿನಯಿಸುವವರು, ಪ್ರತಿಯೊಂದು ಶಬ್ದೋಚ್ಚಾರದಲ್ಲಿ ಲವಲೇಶವಾದರೂ ತಪ್ಪದಂತೆ, ಮುಖ— ಕಣ್ಣು —ಕೈ
ಚಲನವಲನಗಳಲ್ಲಿ ಎಲ್ಲಿಯೂ ಯಾವ ತಪ್ಪು ಚಲನೆಯ
ಆಗದಂತೆ ಎಚ್ಚರ ವಹಿಸುವರು. ಅವುಗಳನ್ನು ನೋಡ
ವರು ಕೂಡ, ಬಾಹ್ಯ ಪ್ರಪಂಚದಿಂದ ತಮ್ಮ ಚಿತ್ತವ
ತೆಗೆದು, ಅವುಗಳಲ್ಲೆ ತಲ್ಲೀನರಾಗುವಂತೆ ಮನಸ್ಸನ್ನು ಸ್ತ
ಗೊಳಿಸಿಯೇ ಬಂದು ಕುಳಿತುಕೊಳ್ಳುವರು. ಇಂಥ ಮನ
ಸ್ಥಿತಿಯನ್ನು ತಂದುಕೊಳ್ಳುವುದು ಕಠಿನ ಕೆಲಸ; ಆದರೆ, 'ನೋ
ನಾಟಕ ನೋಡುವವರಿಗೆ, ಅದನ್ನು ಸರಿಯಾಗಿ ತಿಳಕೊಳ್ಳ
ವರಿಗೆ— ಇಂತಹ ಶುದ್ಧ ಮನಸ್ಸು—ಪ್ರಪಂಚ ವ್ಯವಹ
ದಿಂದ ದೂರ ಇರುವಿಕೆ— ಇವು ಅವಶ್ಯವೆಂದೇ ಈ ನಾ
ಪ್ರದರ್ಶಕರ ಕಠಿಣ ನಿಯಮವಿರುತ್ತದೆ.

'ನೋ' ನಾಟಕಗಳಲ್ಲಿ ಪಾತ್ರವಹಿಸುವವರು ಕೂಡ
ಸಾಮಾನ್ಯ ನಟರಲ್ಲ. ಇಂತಹ ನಾಟಕಗಳಲ್ಲಿ ಅಭಿನಯಿಸ
ವೈಶಿಷ್ಟ್ಯವುಳ್ಳ ಕುಟುಂಬಗಳೇ ಇರುತ್ತವೆ. ಅವುಗಳ
ಒಳ್ಳೇ ನಟರನ್ನು ಆರಿಸುತ್ತಾರೆ. ಪಾತ್ರ ಅಭ್ಯಾಸದ ಮೊದ
ಅವರು ಒಂದು ದಿನದ ಧ್ಯಾನವನ್ನು ಕೈಕೊಳ್ಳಬೇಕಾಗುವ

ಆದರೆ ಮನುಷ್ಯನು ಪಶುವಿಗಿಂತ ಶ್ರೇಷ್ಠನು. ಪ್ರಕೃ ತಿಯ ಎಲ್ಲಾ ಜೀವಜಂತುಗಳಲ್ಲಿ ಕೇವಲ ಮನುಷ್ಯನಿಗೆ ಮಾತ್ರ ಬೇರೆಯವರ ದುಃಖವನ್ನು ಹೋಗಲಾಡಿಸುವ, ಆಪತ್ತಿ ಗಳನ್ನು ತನ್ನ ಮೇಲೆ ಹೊರಿಸಿಕೊಳ್ಳಲು ಕ್ಷಮತೆ ಇದೆ—ಬೇರೆ ಯವರ ದುಃಖದಲ್ಲಿ ಭಾಗವಹಿಸುವುದು ಮಾನವತೆಯ ಕರ್ತ ವ್ಯವಾಗಿದೆ. ಇದರ ಸಂಗಡವೇ ಮನುಷ್ಯನಿಗೆ ಶಾರೀರಿಕತೆ ಮತ್ತು ಸ್ವಾರ್ಥವನ್ನು ಬಿಡಬೇಕಾಗುವುದು. ಎಷ್ಟರ ವ
ಮನುಷ್ಯನು ತನ್ನ ವ್ಯಕ್ತಿತ್ವವನ್ನು ಈ ಸ್ಥಾನಕ್ಕೆ ತರಲ
ನೋ, ಅಂದಿನ ವರೆಗೆ ಆತನನ್ನು ಪಶುವಿಗಿಂತ ಶ್ರೇಷ್ಠನೆಂ
ಹೇಳುವ ಯಾವ ಅಧಿಕಾರವೂ ಯಾರಿಗೂ ಇಲ್ಲ. ಅವ
ಪಶುವೇ ಸರಿ!

ಪ್ರಥಮ ತರಗತಿಯ ಪಾತ್ರ ವಹಿಸುವವರು ಇಂಥ ಕಠಿನ ವ್ರತ ಕೈಕೊಂಡೇ ಮತ್ತೆ ಪಾತ್ರಸ್ವೀಕಾರ ಮಾಡುವರು. ದ್ವಿತೀಯ ಶ್ರೇಣಿಯವರು ಕೂಡ ವಿಶೇಷ ತರದ ಪೂರ್ವಸಿದ್ಧತೆಗಳನಂತರ, ವಹಿಸಿಕೊಳ್ಳುವರು. ಸಂಗೀತ ಮತ್ತು 'ಗೊಂಪಲ'ದಲ್ಲಿ ಭಾಗವಹಿಸುವವರಿಗೂ ಕಠಿನ ನಿಯಮಗಳಿರುತ್ತವೆ.

'ನೋ' ನಾಟಕ ನೋಡುವವರು, ಅವುಗಳಲ್ಲಿನ ನಟರಿಂದ "ಪೂರ್ಣತ್ವ"ವನ್ನು ಅಪೇಕ್ಷಿಸುವುದು ಮಾತ್ರವಲ್ಲ, ನಿರ್ದಾಕ್ಷಿಣ್ಯವಾಗಿ ಅದನ್ನು ಪಡೆಯುತ್ತಾರೆ. ಪಾತ್ರಧಾರಿಯು ತಿಲಮಾತ್ರವೂ ತಪ್ಪಿದರೆ, ಅವನಿಗೆ ಮತ್ತೆ ಕ್ಷಮೆಯಿಲ್ಲ. ಅವನು ಸಹಿಸಬೇಕಾದ ವಿಷಯಗಳು ಹಲವಿವೆ. ಅವನು ಪೂರ್ಣವಾಗಿ ತನ್ನ ಪಾತ್ರ ನಿರ್ವಹಣದಲ್ಲಿ ಮಗ್ನನಾಗಿರುವನೋ ಇಲ್ಲವೋ ಎಂಬುದನ್ನು ಈ ಕೆಳಗಿನ ಉದಾಹರಣೆಯಿಂದ ತಿಳಿಯಬಹುದು: "ಘಂಟೆ" ಎಂಬ 'ನೋ' ನಾಟಕದಲ್ಲಿ, ಪುರೋಹಿತನೊಬ್ಬನು ನಿಂತಿರುವಾಗ, ಭೇತಾಳನು ಒಂದು ಅಭಿಯೋಗವಮಾಡುವನು. ಆಗ, ಆ ಪುರೋಹಿತನು, ಕಣ್ಣು ರೆಪ್ಪೆಯನ್ನು ಕೂಡ ಕೊಂಚವೂ ಅಲುಗಾಡಿಸದೆ ಶಿಲಾಪ್ರತಿಮೆಯಂತೆ ನಿಂತಿರಬೇಕು. "ನಿರ್ದಯ" ದರ್ಶಕರು ಈ ತರದ ಕಠಿಣತೆಯನ್ನು ನಟನ ಮೇಲೆ ಹೊರಿಸುವರು.

'ನೋ' ಪಾತ್ರಧಾರಿಗಳು, ತಮ್ಮ ಪಾತ್ರವನ್ನು ಮರೆತು ಕೊಂಚವಾದರೂ ಚಪಲತೆ(ಅಥವಾ ಮನಸ್ಸನ್ನು ಮತ್ತೊಂದು ವಿಷಯದ ಕಡೆಗೆ ತಿರುಗಿಸಿದ್ದನ್ನು) ತೋರಿದರೆ, 'ನೋ' ನಾಟಕವು ಭ್ರಷ್ಟವಾಯಿತೆಂದೇ ಅರ್ಥ. ಚಿತ್ತ ಚಾಪಲ್ಯವಿರಬಾರದೆಂಬ ವಿಷಯದಲ್ಲಿ, ಇನ್ನೊಂದು ಕಥೆಯಿದೆ: ಒಬ್ಬ ಅರಸನು, ಒಮ್ಮೆ 'ನೋ' ನಾಟಕವನ್ನು ನೋಡುತ್ತಿರುವ ವೇಳೆ, ತನ್ನವರೊಬ್ಬನಿಗೆ, ಒಬ್ಬ ಪ್ರಖ್ಯಾತ ನಟನ ವಿಷಯವಾಗಿ ರಹಸ್ಯವಾಗಿ ಈ ಆಜ್ಞೆ ಕೊಟ್ಟನು: "ಆ ನಟನನ್ನೆ ಚೆನ್ನಾಗಿ ನೋಡುತ್ತಿರು. ಅವನು ತನ್ನ ಪಾತ್ರ ಮರೆತು ಒಂದು ಕೂದಲೆಳೆಯಷ್ಟು ಚಿತ್ತ ಚಾಪಲ್ಯ ತೋರಿದ್ದೇ ಆದರೆ, ತಕ್ಷಣವೇ ಅವನನ್ನು ಅಲ್ಲೇ ಕೊಂದು ಹಾಕು!"

ನಾಟಕವೇನೋ, ಅಂತಹ ದುರಂತ ಘಟಿಸದೆ ಮುಗಿಯಿತು.

ನಾಟಕ ಮುಗಿದ ನಂತರ, ಆಜ್ಞಾಪಿತ ಮನುಷ್ಯನನ್ನು ಪ್ರಶ್ನಿಸಲು, ಅವನು ಹೀಗೆಂದನು: "ಈ ನಟನು ಒಂದು ಕಡೆಯಲ್ಲಿ ಕಿಂಚಿನ್ಮಾತ್ರವಾದ ಚಿತ್ತಚಪಲತೆ ತೋರುವಂತೆ ನನಗೆ ಭಾಸವಾಯಿತು. ಕೂಡಲೇ ನನ್ನ ಕರವಾರಕ್ಕೆ ಕೈಯಿಕ್ಕಿದೆ. ಆದರೆ, ಅಷ್ಟರೊಳಗೇ ನಾಟಕದ ಮುಂದೋಟವು ಪುನಃ ನನ್ನನ್ನು ಅದರ (ನಾಟಕದ) ದರ್ಶನದಲ್ಲಿ ಲೀನನನ್ನಾಗಿ ಮಾಡಿಬಿಟ್ಟಿತು."

ಅಲ್ಲೆ ನಿಂತು ಕೇಳುತಿದ್ದ ನಟನು ಕೂಡಲೇ ಉತ್ತರವಿತ್ತನು: "ನಿಜ. ಪವಿತ್ರ ರಂಗಭೂಮಿಯ ಮೇಲೆ ನನ್ನ



ಜಪಾನಿನ 'ನೋ' ನಾಟಕ ಅಭಿನಯಿಸುವ ಚೊಕ್ಕಟವಾದ ರಂಗಭೂಮಿ.

ಕಣ್ಣುಗಳು ಒಂದು ಚಿಕ್ಕ ಧೂಳಿನ ಕಣವನ್ನು ಕಂಡವು. ಒಂದು ಕ್ಷಣಕ್ಕೆಂಬಂತೆ ಆ ಧೂಳಿನ ಕಣವು ನನ್ನ ಚಿತ್ತವನ್ನು ಒಮ್ಮಿಂದೊಮ್ಮೆ ಕೆಡಿಸಿತು."

'ನೋ' ನಾಟಕದ ವಿಷಯವು, ಯಾವಾಗಲೂ ಒಂದೇ ಆಗಿರುತ್ತದೆ. ಒಬ್ಬನು ಪರಲೋಕವನ್ನು (ಅಥವಾ ಆಧ್ಯಾತ್ಮಿಕ ಲೋಕವನ್ನು) ಪ್ರತಿನಿಧಿಸುವನು; ಆ ಮೇಲೆ ಒಬ್ಬ ಪುರೋಹಿತ, ಯೋದ್ಧ, ಪುರುಷ ಅಥವಾ ಸ್ತ್ರೀ ಇದ್ದು, ಪರಲೋಕ ಪ್ರತಿನಿಧಿಯು ಮಾನವರೊಡನೆ ಸಂಭಾಷಿಸುವನು. ಸಂಭಾಷಣೆಯ ಮೂಲಕ ತತ್ತ್ವ ಪ್ರಚುರಿಸುವಾತನು ರೇಶ್ಮೆ ಮತ್ತು ಜರತಾರಿಯ ವಸ್ತ್ರಗಳಿಂದ ವಿಭೂಷಿತನಾಗಿ, ರಂಗಭೂಮಿಗೆ, ಮೆಲ್ಲನೆ ಹಜ್ಜೆಯಿಕ್ಕುತ್ತ, ಗಂಭೀರವಾಗಿ ಪ್ರವೇಶಿಸುವಾಗ, ದರ್ಶಕರು ಗೌರವ-ಭಯ-ಭಕ್ತಿಗಳಿಂದ, ಮೌನವಾಗಿ ಕುಳಿತು ನೋಡುವರು. ಅವನ ಒಂದೊಂದು ದೃಢ ಹಜ್ಜೆಯು ಮಾನವನ ಜಿಜ್ಞಾಸೆಯನ್ನೂ ಛಲವನ್ನೂ ಪ್ರತಿನಿಧಿಸುವಂತೆಯೇ, ಮೆಲ್ಲನೆ ಇರಿಸಿದಾ ಹಜ್ಜೆಯಲ್ಲಿ ಇಹ-ಪರಗಳ ಅಂತರವೂ ಸೂಚಿತವಾಗುತ್ತಿದೆ. ದೀರ್ಘಗೀತದಲ್ಲಿ ತತ್ತ್ವೋಪದೇಶವಾಗುವುದು. ಆ ಮೇಲೆ, ಪ್ರಶ್ನೋತ್ತರಗಳಾಗುವುವು.

'ನೋ' ನಾಟಕವು ಯುರೋಪಿನ ದೇಶಗಳಲ್ಲಿಯೂ ಪಂಡಿತರ ಲಕ್ಷ್ಯವನ್ನು ಸೆಳೆದಿದೆ. ಭಾರತದಲ್ಲಿ ಅದರ ಪರಿಚಯವಿನ್ನೂ ಆಗಿಲ್ಲ. ಕಳೆದ ಮೂರು "ಪ್ರಭಾತ" ವಿಶೇಷಾಂಕಗಳಲ್ಲಿ, ರಾಷ್ಟ್ರಕವಿ ಗೋವಿಂದ ಪೈಯವರು, ಕನ್ನಡದಲ್ಲಿ ಮೊದಲಾಗಿ ಮೂರು 'ನೋ'ಗಳನ್ನು ಕನ್ನಡಿಸಿ ಕೊಟ್ಟಿರುವುದಾಗಿದೆ. (ಕಲಾ ಪರಿಚಯವನ್ನುಂಟುಮಾಡಿಕೊಡುವವರು, 'ನೋ' ನಾಟಕಗಳ ಕುರಿತಾಗಿಯೂ, ಬೇರೆ ಬೇರೆ ದೇಶಗಳಲ್ಲಿನ ರಂಗಭೂಮಿ-ನೃತ್ಯ ಮೊದಲಾದುವುಗಳ ವಿಷಯವಾಗಿಯೂ ಚಿಕ್ಕಲೇಖನಗಳನ್ನು ಬರೆದು ಕಳಿಸಿದರೆ, "ಪ್ರಭಾತ" ವಾರ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.)

K. V. S.

SRI RAMA VIJAYA HINDHU HOTEL

HARISCHANDRA GOREGOANKER ROAD,

GAMDEVI, BOMBAY - 7.

ಅವಶ್ಯವಾಗಿ ಬನ್ನಿ ! ಅವಶ್ಯವಾಗಿ ಬರಲು ಮರೆಯದಿರಿ !!

ಹೊಸ ವರ್ಷವು ನಮ್ಮ
ಗ್ರಾಹಕರಿಗೆ ಸುಖಕರ
ವಾಗಲಿ! ಸ್ವಾತಂತ್ರ್ಯದ
ಐದನೇ ವರ್ಷವು
ಸಂತೋಷಕರವಾಗಲಿ!



ಉತ್ತಮವಾದ ಫಲಾ
ಹಾರದ ತಿಂಡಿಗಳು
ಕಾಫಿ, ಚಾ ಮತ್ತು
ಉತ್ತಮ ತರದ ಊಟ
ಮುಂತಾದುವುಗಳು.

ಪ್ರೊಪ್ರ್ಯಾಟರ್: ನರಸಿಂಹ ರಾಮಕೃಷ್ಣ ನಾಯಕ.

ದೀಪಾವಳಿಯ ಬೆಳಕಿನ ಬೆಡಗನ್ನು ನೋಡಲು ನೀವು ಮುಂಬಾಯಿಗೆ ಬಂದರೆ

ಶ್ರೀ ರಾಮ ವಿಜಯ ಹಿಂದೂ ಹೋಟೆಲನ್ನು

ಅವಶ್ಯವಾಗಿ ಸಂದರ್ಶಿಸಿರಿ. ಕಾರಣ,-ತಾವು ತಮ್ಮ ದೇಶಬಂಧುಗಳಾಗಿರುವಿರಿ. ಎಂದೇ ತಮಗೆ ನಾನು ಸೂಚಿಸುತ್ತೇನೆ,-ತಮಗೆ ತಮ್ಮ ರಿವಾಜಿನಂತೆ ಎಲ್ಲಾ ತರದ ತಿಂಡಿ ತಿನಸುಗಳು ತಮಗಾಗಿ ತಯಾರಿವೆ, ನಮ್ಮ

ಶ್ರೀ ರಾಮ ವಿಜಯ ಹಿಂದೂ ಹೋಟೇಲಿನಲ್ಲಿ.

ವಿಶೇಷ ಸೂಚನೆ:— ಕಾಫಿ ಮತ್ತು ಊಟವು ತಮ್ಮ ಅಭಿರುಚಿಗೊಪ್ಪುವಂತೇ ದೊರೆಯುವುದು. ಆದ್ದರಿಂದ ತಾವೆಲ್ಲರೂ ಇವರ ಲಾಭವನ್ನು ಪಡೆಯಲೇಬೇಕು.

ಶ್ರೀ ರಾಮ ವಿಜಯ ಹಿಂದೂ ಹೊಟೇಲ್

ಗಾಂವದೇವಿ, ಮುಂಬಾಯಿ ನಂಬ್ರ 7.

★ ಶ್ರೀ ಧರ್ಮಸ್ಥಳ ಮತ್ತು ★
ಶ್ರೀ ಮಂಜಯ್ಯ ಹೆಗ್ಗಡೆಯವರು

ಮಂಗಳೂರಿನಿಂದ ಸುಮಾರು ೪೬ ಮೈಲು ದೂರದಲ್ಲಿ, ನೇತ್ರಾವತಿಯ ದಂಡೆಯ ಮೇಲೆ, ಪಶ್ಚಿಮ ಘಟ್ಟಗಳಿಂದ ಅನತಿ ದೂರದಲ್ಲಿ, ಶ್ರೀ ಕ್ಷೇತ್ರ ಧರ್ಮಸ್ಥಳವು,—ಪೂರ್ವಕಾಲದ ತಪೋವನಗಳ ಶಾಂತತೆಯನ್ನೂ ರಮಣೀಯತೆಯನ್ನೂ ನೆನಪಿಗೆ ತರುವಂತೆ, ಕಂಗೊಳಿಸುತ್ತಿದೆ. ವರ್ಷದ ೩೬೫ ದಿನಗಳಲ್ಲೂ ಎಂಬಂತೆ, ಯಾತ್ರಿಕನು, ಭಕ್ತಿ-ಗೌರವಗಳಿಂದ ತುಂಬಿದ ಹೃದಯದಿಂದ, ಗುರಿಮುಟ್ಟಿದ ಜಿಜ್ಞಾಸುವಿನ ತೃಪ್ತ ನಯನಗಳಿಂದ, ಈ ಪಾವನ ಸ್ಥಳವನ್ನು ಪ್ರವೇಶಿಸುತ್ತಾನೆ.

ಸಂದೇಹಗ್ರಸ್ತನು ಇಲ್ಲಿ ತನ್ನ ಮನಸ್ಸನ್ನು ಶುದ್ಧಗೊಳಿಸುತ್ತಾನೆ; ಅತೃಪ್ತನು ಹೃದಯವರಳಿಸಿಕೊಳ್ಳುತ್ತಾನೆ; ಭೀತನು ಅಭಯ ಹೊಂದುತ್ತಾನೆ.

ದೈವಾನುಗ್ರಹ ಪಡೆದ ತೃಪ್ತಿ ಮಾತ್ರವಲ್ಲ; ದೈವವನ್ನು ಪ್ರತಿನಿಧೀಕರಿಸುವಾತನ ಶಾಂತ—ಪ್ರಸನ್ನ ವಚನಗಳಿಂದ ಯಾತ್ರಿಕನು ತಾನು ಕೃತಾರ್ಥನಾದೆನೆಂಬ ಭಾವನೆ ತಾಳುವನು.

ಭಾರತೀಯ ಸಂಸ್ಕೃತಿಯಲ್ಲಿನ ಕುರುಹುಗಳನ್ನೆಲ್ಲ ವಿಚಾರವಂತನು ಅಲ್ಲಿ ಕಾಣುವನು. "ದೇವಾಲಯ" ಎಂಬುದನ್ನು ಪುನರಪಿ ಕಂಡುಕೊಳ್ಳುವನು.

ಅಲ್ಲಿ ಕರ್ಕಶವಾದುದಾವುದೂ ಇಲ್ಲ. ಹಿಂಸೆಯ ಲವಲೇಶವೂ ಇಲ್ಲ; ಕ್ರೌರ್ಯದ ಮಾತಿಲ್ಲ. ಸದ್ದು—ಗದ್ದಲಗಳಿಲ್ಲ. ಅಹಿತಕರ—ಅಸಹ್ಯ ಭಾಷೆಯಿಲ್ಲ. ತಾಮಸವಾವುದನ್ನೂ ಕಾಣಲಾರಿರಿ. ಸರ್ವತ್ರವೂ ಆನಂದಮಯ ಶಾಂತತೆ.

ಈ ಪವಿತ್ರ ಕ್ಷೇತ್ರದ ಆಡಳಿತಗಾರರಾಗಿರುವ ಶ್ರೀ। ಮಂಜಯ್ಯ ಹೆಗ್ಗಡೆಯವರು, "ಧುರೀಣ"ನೆಂಬುದರ ಉತ್ತಮ, ದೃಷ್ಟ ಉದಾಹರಣೆಯಾಗಿದ್ದು, ನಾಡಿನ ಪಂಡಿತ—ಪಾಮರರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವರು. ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಶ್ರೀ। ಮಂಜಯ್ಯ ಹೆಗ್ಗಡೆಯವರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಟ್ಟಿರುವೆವು.

ಶ್ರೀ ಕ್ಷೇತ್ರ ಧರ್ಮಸ್ಥಳದ ಸಂಕ್ಷಿಪ್ತ ಪರಿಚಯ

ಶ್ರೀ ಕ್ಷೇತ್ರ ಧರ್ಮಸ್ಥಳವು, ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು-ಚಾರ್ಮಾಡಿ ರಸ್ತೆಯಲ್ಲಿ, ಉಜ್ರೆಯಿಂದ ಸುಮಾರು ಐದು ಮೈಲು ದೂರದಲ್ಲಿ, ನೇತ್ರಾವತಿ ಹೊಳೆಯಾಚೆ ಈ ಧರ್ಮಸ್ಥಳ ಕ್ಷೇತ್ರವಿದ್ದು, ದಕ್ಷಿಣ ಕನ್ನಡ ಜಿಲ್ಲೆ—ಉತ್ತರ ಕನ್ನಡ ಜಿಲ್ಲೆ—ಮೈಸೂರು ಪ್ರಾಂತ್ಯ—ಮುಂತಾದ ಕಡೆಗಳಿಂದ ವರ್ಷಂಪ್ರತಿ ಸಾವಿರಾರು ಆಸ್ತಿಕ ಜನರನ್ನಾಕರ್ಷಿಸುತ್ತಿದೆ. ಇಲ್ಲಿಯ ಜನ ಸಂಖ್ಯೆ ಸುಮಾರು ಒಂದೂವರೆ ಸಾವಿರವಿದ್ದು, ೨೦೦ ಮನೆಗಳಿವೆಯೆಂದು ಅಂದಾಜು ಮಾಡಲಾಗಿದೆ. ಅಕ್ಷರಸ್ಥರು ಸೇಕಡಾ ೪೦ಕ್ಕೂ ಹೆಚ್ಚು ಎನ್ನಬಹುದು.

ಈ ಕ್ಷೇತ್ರಕ್ಕೆ ಮೊದಲು 'ಕುಡುಮ' ಎಂದು ಹೆಸರಿತ್ತು. ಸಾವಿರ ವರ್ಷದ ಐತಿಹ್ಯವುಳ್ಳ ಸ್ಥಳವಿದು. ಬಹು ಕಾಲದ ಹಿಂದೆ, ಧರ್ಮದೇವತೆಗಳು, ದೂತನಾದ ಅಣ್ಣಪ್ಪನನ್ನು ಕದಿರೆಗೆ ಕಳಿಸಿ, ಕಾಶಿಯಿಂದ ಕದಿರೆಗೆ ಬಂದಿದ್ದ ಶಿವಲಿಂಗವನ್ನು ತರಿಸಿ, ಈಗ ದೇವಾಲಯವಿರುವ ಸ್ಥಳದಲ್ಲಿ ಪ್ರತಿಷ್ಠಿಸಿದರು ಎಂಬುದಾಗಿ ಉಲ್ಲೇಖವಿದೆ. ಸಾವಿರವರ್ಷಗಳ ಹಿಂದೆ, ಈಗ ಧರ್ಮಸ್ಥಳದ ನೆಲ್ಯಾಡಿ ಬೀಡು ಇರುವಲ್ಲಿ ಬಿರ್ಮಣ್ಣ ಹೆಗ್ಗಡೆ ಎಂಬವರು ವಾಸಿಸಿಕೊಂಡಿದ್ದಾಗ ಧರ್ಮದೇವತೆಗಳು ಮನುಷ್ಯ ರೂಪ ತಾಳಿ ಅತ್ತ ಬಂದು, ಬಿರ್ಮಣ್ಣ ಹೆಗ್ಗಡೆಯವರ ಆತಿಥ್ಯ ಸ್ವೀಕಾರಮಾಡಿ, ಮತ್ತೆ ಆ ಬೀಡನ್ನು ತಮಗೆ ಬಿಟ್ಟುಕೊಡಬೇಕಾಗಿ ಕೇಳಿಕೊಂಡರೆಂದೂ, ತೇಜಸ್ವಿಗಳಾದ ಅವರ ಮಾತಿನಂತೆ ಬಿರ್ಮಣ್ಣ ಹೆಗ್ಗಡೆಯವರು ಒಪ್ಪಿಕೊಂಡು, ಅವರಿಗೆ ಪ್ರತ್ಯೇಕ ಗುಡಿಗಳನ್ನಲ್ಲದೆ ಬೀಡನ್ನೂ ಬಿಟ್ಟುಕೊಟ್ಟು ತಾವು

ಹೊಸ ಬೀಡು ಕಟ್ಟಿಸಿಕೊಂಡರೆಂದೂ ಈ ಕ್ಷೇತ್ರದ ಇತಿಹಾಸ ದಿಂದ ತಿಳಿದುಬರುತ್ತದೆ.

ಅಲ್ಲಿಂದ ಮುಂದೆ, ಈ ಕ್ಷೇತ್ರದ ಇತಿಹಾಸದಲ್ಲಿ, ಸ್ವಾರಸ್ಯ ವಾದ ಅನೇಕ ಘಟನೆಗಳಿವೆ. ಕುಡುಮದ ಬಳಿಯ ಕಲ್ಲೇರಿ ಎಂಬಲ್ಲಿ ಒಬ್ಬ ಬ್ರಾಹ್ಮಣನ ಮಗನು ದುರ್ನಡತೆಯುವನಾಗಿದ್ದು, ದುರ್ಮರಣಕ್ಕೊಳಗಾಗಿ, ಬ್ರಹ್ಮ ರಾಕ್ಷಸನಾಗಿ ಊರವರಿಗೆ ಬಾಧೆ ಕೊಡುತ್ತಿರಲು, ಆಗಿನ ಆಡಳಿತಗಾರರಾದ ಪದ್ಮಯ್ಯ ಹೆಗ್ಗಡೆಯುವರು, ಆ ಬ್ರಹ್ಮ ರಾಕ್ಷಸನಿಗೆ ಪ್ರತ್ಯೇಕ ಪೌಳಿ ಮಾಡಿಸಿಕೊಟ್ಟು, ಅಣ್ಣಪ್ಪನೊಂದಿಗೆ ಸೇರಿಕೊಂಡಿರುವಂತೆ ಹೇಳಿದರೆಂದೂ, ಅಂದಿನಿಂದ ಆ ಬ್ರಹ್ಮ ರಾಕ್ಷಸನ ಕಾಟ ತಪ್ಪಿತೆಂದೂ ಹೇಳುವರು. ಈಗಲೂ ಆ ಸ್ಥಳದಲ್ಲಿ ಪ್ರತಿ ತಿಂಗಳಲ್ಲಿ ಪರ್ವ ಸಲ್ಲುತ್ತಿದೆ.

ಪದ್ಮಯ ಹೆಗ್ಗಡೆಯುವರಿಗೆ ಮಕ್ಕಳಿರಲಿಲ್ಲ. ಅವರು ೧೪೩೨ರಲ್ಲಿ ಮೃತಿ ಹೊಂದಲು, ಅವರ ಸಹೋದರಿ ಗುಮ್ಮಕ್ಕನ ಮಗ ಚಂದಯ್ಯ ಎಂಬವರು ಅಧಿಕಾರಕ್ಕೆ ಬಂದರು. ಇವರು ಸನ್ ೧೫೦೩ರ ವರೆಗೆ ಆಡಳಿತ ನಡೆಸಿಕೊಂಡಿದ್ದರು.

ಚಂದಯ್ಯನವರ ನಂತರ, ಅವರ ತಂಗಿಯ ಮಗ ದೇವರಾಜ ಹೆಗ್ಗಡೆಯುವರು ಪಟ್ಟಕ್ಕೆ ಬಂದರು. ಇವರ ಕಾಲದಲ್ಲಿ, ಉಡುಪಿಯ ಸೋದೆ ಮಠದ ವಾದಿರಾಜ ಸ್ವಾಮಿಗಳು ಧರ್ಮಸ್ಥಳಕ್ಕೆ ಬಂದರು. ಹೆಗ್ಗಡೆಯುವರು ಶ್ರೀ ಸ್ವಾಮಿಗಳಿಗೆ ಭಿಕ್ಷೆ ಸ್ವೀಕಾರಮಾಡಬೇಕೆಂದು ಕೇಳಿಕೊಂಡಾಗ, "ದೈವಗಳು ತಂದು ಲಿಂಗ ಪ್ರತಿಷ್ಠಿತವಾಗಿರುವ ಸ್ಥಳದಲ್ಲಿ ಭಿಕ್ಷೆ ಸ್ವೀಕರಿಸಲಾರೆ"ನೆಂದರು. ಹೆಗ್ಗಡೆಯುವರು ವಾದಿರಾಜ ಸ್ವಾಮಿಗಳವರನ್ನೆ ವಿಚಾರಿಸಿ, ಅವರ ಸಲಹೆಯಂತೇ ಅವರ ಕೈಯಿಂದಲೇ ಕಲಶ-ಪ್ರಾಣ ಪ್ರತಿಷ್ಠೆಗಳನ್ನು ಮಾಡಿಸಿದರೆಂದೂ, ಈ ಸೇವೆ-ಔದಾರ್ಯಗಳನ್ನು ಕಂಡು ಹರ್ಷಿತರಾದ ವಾದಿರಾಜ ಸ್ವಾಮಿಗಳವರು, ದಾನಧರ್ಮಾದಿಗಳು ನಡೆಯುತಿದ್ದ ಈ ಸ್ಥಳಕ್ಕೆ "ಧರ್ಮಸ್ಥಳ"ವೆಂದು ಹೆಸರಿಸಿದರಾಗಿಯೂ ತಿಳಿದು ಬರುತ್ತದೆ.

ದೇವರಾಜ ಹೆಗ್ಗಡೆಯುವರ ಕಾಲದಿಂದ ಈ ಕ್ಷೇತ್ರದ ಹೆಸರು ಬದಲಾದುದಲ್ಲದೆ, ದಾನಧರ್ಮಗಳೂ ಹೆಚ್ಚಿ, ಕ್ಷೇತ್ರದ ಕೀರ್ತಿ ಹರಡಿತು.

ದೇವರಾಜ ಹೆಗ್ಗಡೆಯುವರ ನಂತರ ಮಂಜಯ್ಯ ಹೆಗ್ಗಡೆ ಜಿನಪ್ಪ ಹೆಗ್ಗಡೆ, ಚಂದಯ್ಯ ಹೆಗ್ಗಡೆ, ದೇವಪ್ಪರಾಜ ಹೆಗ್ಗಡೆ, ಅನಂತಯ್ಯ ಹೆಗ್ಗಡೆ, ವೃಷಭಯ್ಯ ಹೆಗ್ಗಡೆ, ಗುಮ್ಮಣ್ಣ ಹೆಗ್ಗಡೆ, ವರದಯ್ಯ ಹೆಗ್ಗಡೆ, ಚಂದಯ್ಯ ಹೆಗ್ಗಡೆ—ಇವರು ಕ್ರಮವಾಗಿ ಆಡಳಿತ ನಡೆಸಿಕೊಂಡು ಬಂದರು. ಚಂದಯ್ಯ ಹೆಗ್ಗಡೆಯುವರು, ೨೨ ವರ್ಷಗಳ ಕಾಲ ಆಡಳಿತ ನಡೆಸಿದ್ದರು. ಮಕ್ಕಳಿಲ್ಲದುದನ್ನು ಕಂಡು ಕುಳೂರು ಬೀಡಿನಲ್ಲಿ ಕುಮಾರಯ್ಯ ಎಂಬವರನ್ನು ದತ್ತಕ್ಕೆ ತೆಗೆದುಕೊಂಡರು.

ಕುಮಾರಯ್ಯ ಹೆಗ್ಗಡೆಯುವರು ಸನ್ ೧೭೮೫ರಿ ೧೮೩೦ರ ವರೆಗೆ ಇದ್ದರು. ಇವರೊಡನೆ ಹಲವು ಯೋದ್ಧ ಇರುತಿದ್ದರು. 'ದಶಾವತಾರ' ಬಯಲಾಟವನ್ನು ಪ್ರಾರಂ ಸಿದವರು ಕುಮಾರಯ್ಯನವರು. ಇವರು ಮೈಸೂರು ತ ಹೋಗಿ, ಅಲ್ಲಿಯ ಅರಸರಿಂದ ಸತ್ಕಾರ ಹೊಂದಿ, ಕೊಡ ಹೋಗಿ, ಅಲ್ಲಿದ್ದ ವೀರ ರಾಜೇಂದ್ರ ಅರಸನ ಅತಿಥಿಗಳಾಗಿ ಸತ್ಕಾರ ಪಡೆದು, ಉತ್ತಮ ಆಯುಧಗಳನ್ನೂ ಪಡೆದು ಊ ಮರಳಿದರು. ವೀರ ರಾಜೇಂದ್ರ ಅರಸರೂ ಧರ್ಮಸ್ಥಳ ಬಂದು, ಯೋಗ್ಯ ಸತ್ಕಾರ ಹೊಂದಿದ್ದರು.

ಕುಮಾರಯ್ಯನವರಿಗೂ ಮಕ್ಕಳಿರಲಿಲ್ಲ. ಚಂದಯ ಮತ್ತು ಮಂಜಯ್ಯ ಎಂಬಿಬ್ಬರನ್ನು ದತ್ತಕ್ಕೆ ತೆಗೆದುಕೊಂಡ ಚಂದಯ್ಯ ಹೆಗ್ಗಡೆಯುವರು ಪಟ್ಟಕ್ಕೆ ಬಂದು, ದೇವಸ್ಥಾನದ ಳಗೆ ಅನೇಕ ಸುಧಾರಣೆಗಳನ್ನು ಮಾಡಿದರು. ಸನ್ ೧೮ ರಲ್ಲಿ ಇವರು ಕಾಲವಶರಾಗಲು, ಕುಮಾರಯ್ಯನವರ ಡನೇ ದತ್ತದ ಅಧಿಕಾರಿ ಮಂಜಯ್ಯನವರೇ ಆಡಳಿತ ವಹಿ ದರು. ಮಂಜಯ್ಯ ಹೆಗ್ಗಡೆಯುವರ ಕಾಲದಲ್ಲಿ ಬ್ರಾಹ್ಮಣ ಛತ್ರ, ದೇವಾಲಯದ ಹೊರ ಪ್ರಾಕಾರ, ಗೋಪುರ, ಜವ ಉಗ್ರಾಣ, ಮರದ ರಥ, ಚಿನ್ನ—ಬೆಳ್ಳಿಗಳ ಆಭರಣಗ ಬಸ್ತಿ ಕಟ್ಟಡದ ಜೀರ್ಣೋದ್ಧಾರ ಇವು ನಡೆದಿವೆ. ಇವ ದೈವಗಳಿಗೆ ಮೂರು ಮಹಾ ನಡಾವಳಿಗಳನ್ನು ಕೊಟ್ಟರು ರೆಂದು ತಿಳಿದುಬರುತ್ತದೆ. ಇವರ ಕಾಲದಲ್ಲಿ ಪೂಜೆ—ಉ ವಗಳು ಹೆಚ್ಚಿದುವು. ನಲ್ವತ್ತೈದು ವರ್ಷಗಳ ಕಾಲ ಆಡಳ ನಡೆಸಿ, ಇವರು ಸನ್ ೧೮೯೫ರಲ್ಲಿ ಕಾಲವಾದರು.

ಮಂಜಯ್ಯ ಹೆಗ್ಗಡೆಯುವರಿಗೆ ಕೂಡ ಮಕ್ಕಳಿರಲಿ ಮೊದಲಿನ ಚಂದಯ್ಯ ಹೆಗ್ಗಡೆಯುವರ ಮಗ ಕುಮಾರಯ ಹೆಗ್ಗಡೆ ಮತ್ತು ಪತ್ನಿ ಲಕ್ಷ್ಮೀಮತಿ ಅಮ್ಮ ಇವರಿಗೆ ಧರ್ಮಪಾ ನೆಂಬ ಮಗನಿದ್ದನು. ಇವನಿಗೆ ಪಟ್ಟವಾಯಿತು; ಆದ ಇವರು ಸನ್ ೧೮೯೬ರಲ್ಲೆ ಮೃತಿಯನ್ನೈದಿದರು. ಧರ್ಮ ಪಾಲರಿಗೂ ಮಕ್ಕಳಿರಲಿಲ್ಲ. ಇವರು ವಿಟ್ಲ ಚಿಕ್ಕತ್ತ ಅಣ್ಣಿ ಯಾನೆ ಪದ್ಮ ಶೆಟ್ಟರ ಅಳಿಯ ೧೩ ವರ್ಷ ಪ್ರಾಯ ಚಂದಪ್ಪ ಮತ್ತು ಪದ್ಮ ಶೆಟ್ಟರ ಮಗ ಏಳು ವರ್ಷದ ಮಂಜ ಎಂಬ ಇಬ್ಬರನ್ನು ದತ್ತಮಾಡಿಕೊಂಡರು. ಇವರು ಅಪ ಯಸ್ಥರಾದುದರಿಂದ ಸುಮಾರು ೬ ವರ್ಷಗಳ ಕಾಲ ಗುಂ ಪದ್ಮನಾಭ ಭಟ್ಟರು ಮತ್ತು ಅಣ್ಣಿ ಯಾನೆ ಪದ್ಮಶೆಟ್ಟರು ಆ ಳಿತದಾರರಾಗಿದ್ದರು. ಆ ಮೇಲೆ ಚಂದಯ್ಯ ಹೆಗ್ಗಡೆಯುವ ಅಧಿಕಾರ ವಹಿಸಿದರು. ಇವರು ಬಸ್ತಿಗೆ ಪಂಚಕಲ್ಯಾ ಮಾಡಿಸಿದರು. ದೈವಗಳಿಗೆ ನಡಾವಳಿ ಕೊಟ್ಟರು; ನಲ್ಲಿನೀರನ ಒದಗಿಸಿದರು.

ಚಂದಯ್ಯ ಹೆಗ್ಗಡೆಯವರು ೧೯೧೮ರಲ್ಲಿ ಮೃತಿಯನ್ನೈದಲು, ಈಗಿನ ಮಂಜಯ್ಯ ಹೆಗ್ಗಡೆಯವರು ಪಟ್ಟಕ್ಕೆ ಬಂದರು.

ಶ್ರೀ| ಮಂಜಯ್ಯ ಹೆಗ್ಗಡೆಯವರು

ಶ್ರೀ| ಮಂಜಯ್ಯ ಹೆಗ್ಗಡೆಯವರು ಕಳೆದ ಮೂವತ್ತ ಮೂರು ವರ್ಷಗಳಿಂದಲೂ ಆಡಳಿತ ನಡೆಸಿಕೊಂಡು ಬಂದಿರುವರು. ಇವರ ಷಷ್ಠ್ಯಬ್ದಿ ಪೂರ್ತಿ ಸಮಾರಂಭವು, ಕಳೆದ ವರ್ಷ (೧೯೫೧) ನಡೆಯಿತು.

ಶ್ರೀ| ಮಂಜ್ಯಯ ಹೆಗ್ಗಡೆಯವರು, ಇಂಟರ್ ಮೀಡಿಯೇಟ್ ತನಕ ವಿದ್ಯಾಭ್ಯಾಸ ಮಾಡಿದವರು. ಭಾರತ ಸಂಸ್ಕೃತಿಯಂತೆ ಇತರ ಸಂಸ್ಕೃತಿಗಳನ್ನೂ ತಿಳಿದವರು. ಪರಮತ ಸಹಿಷ್ಣುಗಳಷ್ಟೆ ಅಲ್ಲ, ಎಲ್ಲ ಮತೀಯರೊಡನೆ ಪ್ರೇಮಭಾವದಿಂದ ನಡೆದು ಕೊಳ್ಳುತ್ತಲಿರುವ ಉದಾರ ಹೃದಯರು; ಉನ್ನತ ಮತಿಗಳು. ನಮ್ಮ ಜಿಲ್ಲೆಯಲ್ಲೆ ಮಾತ್ರವಲ್ಲ—ಕರ್ಣಾಟಕದಲ್ಲೆ ಹೊಸದಾಗಿ, ದೀಪೋತ್ಸವದ ಕಾಲದಲ್ಲಿ, ವಿವಿಧ ಧರ್ಮ ಸಮ್ಮೇಲನವನ್ನು ಆರಂಭಿಸಿದವರು ಇವರೇ.

ವಿದ್ಯಾಭಿಮಾನಿಗಳು. ಉಜ್ರೆಯಲ್ಲಿ ಸಿದ್ಧವನ ಕಟ್ಟಿಸಿ, ನಡೆಸುತ್ತಿರುವರು. ಉಜ್ರೆ ಹೈಸ್ಕೂಲಿಗೆ ವಿದ್ಯಾರ್ಥಿ ಭವನವನ್ನೊದಗಿಸಿರುವರು. ಶಿಕ್ಷಣ ಸಂಬಂಧವಾಗಿಯೇ ಶ್ರೀ| ಹೆಗ್ಗಡೆಯವರ ಈ ವರೆಗಿನ ದಾನವು ಒಂದೂವರೆ ಲಕ್ಷ ರೂಪಾಯಿಗಳಿಗೂ ಮೀರಬಹುದೆನ್ನಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇದ್ದವರು. ಸಂಗೀತಾಭಿಮಾನಿಗಳು; ಪ್ರೋತ್ಸಾಹಕರು. ನಾಟಕಕಲೆ, ಯಕ್ಷಗಾನ, ಇವುಗಳನ್ನೂ ಪ್ರೋತ್ಸಾಹಿಸಿದವರು.

ಕಲಾಭಿಮಾನಿಗಳಷ್ಟೆ ಅಲ್ಲ, ಉನ್ನತ ಶ್ರೇಣಿಯ ಕಲಾಕಾರರೂ ಆಗಿರುವರು: ಇವರು ಚಿತ್ರಿಸಿ ಬೀಡಿನಲ್ಲಿ ಅಲಂಕರಿಸಿದ ತ್ರಿವರ್ಣ ತೈಲಚಿತ್ರಗಳು ಹಲವಿವೆ. ಕಳೆದ ವರ್ಷವೂ, ತಮ್ಮ ೬೦ನೇ ವಯಸ್ಸಿನಲ್ಲಿ, ಮೂರು—ನಾಲ್ಕು ಚಿತ್ರಗಳನ್ನು ತಯಾರಿಸಿರುವರು. ಇವರು ತಯಾರಿಸಿದ ಚಿತ್ರಗಳು, ಕಳೆದ ಎಪ್ರಿಲ್ ತಿಂಗಳಲ್ಲಿ |ಕಾರ್ಕಳ ಶ್ರೀ ಮಹಾ ಮಸ್ತಕಾಭಿಷೇಕ ಕಾಲದಲ್ಲಿ ಪ್ರದರ್ಶಿಸಲ್ಪಟ್ಟಿದ್ದುವು.

ಎಂ. ಎಲ್. ಸಿ.ಗಳಾಗಿ ಅನೇಕ ವರ್ಷ ಸೇವೆ ಸಲಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಧುರೀಣತ್ವ ವಹಿಸಿದ್ದಾರೆ.

ಶ್ರೀ| ಹೆಗ್ಗಡೆಯವರು, ತಮ್ಮ ದೇಹಾರೋಗ್ಯದ ಪರಿವೆಯಿಲ್ಲದೆ, ಅತಿ ಶ್ರಮದಲ್ಲಿ ತೊಡಗಿಯೂ ಸೇವೆ ಸಲಿಸಿದ್ದಾರೆ. ಧರ್ಮಸ್ಥಳದಲ್ಲಿ ಸರ್ವೋನ್ನತರಾಗಿದ್ದೂ ಸರ್ವಸುಲಭರಾಗಿರುವರು. ಮಧುರವಚನ, ದಯಾವಾಣಿ, ನಿರಹಂಕಾರ, ವಿಶಾಲ ಮನೋಭಾವ, ಉದಾರ ಹೃದಯ, ನಿಷ್ಪಕ್ಷಪಾತ ವರ್ತನೆ—ಈ ಗುಣವೈಶಿಷ್ಟ್ಯಗಳೆಲ್ಲವೂ ಒಂದೇ ಕಡೆಯಲ್ಲಿ ಮೂಡಿರುವ ಶ್ರೀ| ಹೆಗ್ಗಡೆಯವರು—ಬಹುಕಾಲ ನಾಡಿಗಾಗಿ, ನಡೆಗಾಗಿ, ನುಡಿಗಾಗಿ, ಉಳಿಯಲಿ!

ಶ್ರೀ| ಹೆಗ್ಗಡೆಯವರ ಷಷ್ಠ್ಯಬ್ದಿಪೂರ್ತಿ ಸಮಾರಂಭ ಕಾಲದಲ್ಲಿ (೧೯೫೦) ಅವರಿಗೆ ನಾಡಿನ ಹಿರಿಯ ಸಾಹಿತಿಗಳೆಲ್ಲರೂ ಕೂಡಿ ಒಂದು ಗ್ರಂಥವನ್ನು ಸಮರ್ಪಿಸಿ ಗೌರವಿಸಿದ್ದರು. ಈಗ, ಪತ್ರಿಕೆಗಳಲ್ಲಿ ಪ್ರಥಮವಾಗಿ "ಪ್ರಭಾತ"ವು, ಈ ವರ್ಷದ ವಿಶೇಷಾಂಕವನ್ನು ಶ್ರೀ| ಹೆಗ್ಗಡೆಯವರ ೬೧ನೇ ಸಂವತ್ಸರದ ಸವಿ ನೆನಹಿಗಾಗಿ, ಅವರಿಗೆ ಸಮರ್ಪಿಸಿದೆ; ಅದಕ್ಕಾಗಿಯೇ ಶ್ರೀ| ಹೆಗ್ಗಡೆಯವರಿಗೆ ಪ್ರಿಯವಾಗಿರುವ ಉತ್ಕೃಷ್ಟ ಲೇಖನಗಳನ್ನೆ ಸಂಗ್ರಹಿಸಿ ವಾಚಕರಿಗೆ ಕಾಣಿಕೆಯಾಗಿತ್ತಿದೆ.

ಕರೆ

೧. ಬಾರೆ ಸಖಿ,
ಕಮಲಮುಖಿ;
ಸ್ವಪ್ನಸುಂದರಿ!
ಅಮರ ಪ್ರೇಮ-
ಸುಧಾಧಾಮ,
ಕಂಬುಕಂಧರಿ!

೨. ನಿನ್ನ ಪಾದ-
ಸ್ಪರ್ಶಮೋದ-
ಕಿದೋ ಮಂದಿರ!-
ಸ್ವರ್ಣರಚಿತ,
ರತ್ನಖಚಿತ,
ಸ್ವರ್ಗಸುಂದರ!

೩. ದಿವ್ಯತೇಜ
ಸದ್ವಿರಾಜ
ಸುಪ್ರಭಾವಲಿ!
ದಿನಪಸದೃಶ
ಮಿಸುಪ ಕಲಶ
ಶಿಖರತಲದಲಿ!

೪. ಶೋಭೆಯಾಂತ
ಚಂದ್ರಕಾಂತ
ರಂಜಿತಾಂಗಣ!
ನಾಕದಿಂದ
ಸೆಳೆದು ತಂದ
ದಿವ್ಯ ನಂದನ!

೫. ಅಮರ ಗಾನ
ಮಧುರ ತಾನ
ಧ್ವನಿತ ಸರ್ವದಾ!
ಸುಖ ಸುವಾಸ
ಸದ್ವಿಲಾಸ
ಭರಿತಮಿದೊ ಸದಾ!

೬. ಸುಂದರಾಸ್ಯ
ಮಧುರ ಲಾಸ್ಯ
ಚಿರ ಮನೋಹರ!
ಅತಿ ರಹಸ್ಯ
ಸರಸ ಹಾಸ್ಯ
ಮಧುರ-ಮಧುತರ!

೭. ಮೃದುಲ ಮೈತ್ರಿ
ದಿವಾ-ರಾತ್ರಿ
ಮಿಡಿವ ಮರ್ಮರ!
ಪರಮ ದಿವ್ಯ
ಪ್ರಣಯ ಕಾವ್ಯ
ಹರಿವ ನಿರ್ಝರ!

೮. ಹೃದಯ ತೃಪ್ತಿ
ದಿವ್ಯ ದೀಪ್ತಿ
ಉಗುವ ಸಂಭ್ರಮ!
ಮೋದ ಲಹರಿ
ಗಗನಕಡರಿ
ನಗುವ ವಿಭ್ರಮ!

* * *

೯. ಜನನ ಮರಣ
ಕಠಿನ ಚರಣ
ಇಡದ ಜೀವನ!
ರೋಗ ಭುಕ್ತಿ,
ಮೋಣಶಕ್ತಿ
ಇರದ ಯೌವನ!

೧೦. ಕಾಮ-ಕ್ರೋಧ-
ಲೋಭ ವ್ಯಾಧ
ಬಲೆಯ ಬೀಸನೈ!
ಮೋಹ-ಮದ-
ಮತ್ಸರದ
ಪವನ ಸೂಸನೈ!

೧೧. ಕ್ಷುಧೆ, ಪಿಪಾಸೆ,
ಭಯ, ನಿರಾಸೆ,
ಇನಿಸು ತೋರದೈ!
ನಿಂದೆ, ದ್ವೇಷ,
ಕುಹಕ, ಕ್ಲೇಶ,
ಸನಿಹ ಸಾರದೈ!

೧೨. ದುಷ್ಟ-ನೀಚ-
ತಾ ಪಿಶಾಚ
ಇಣುಕದರೆಚಣ!
ಮೌಢ್ಯ-ಡಂಭ—
ಈ ಹಿಡಿಂಬ
ಕೆಣಕನನುದಿನ!

೧೩. ಪರಾಜಯದ,
ಪತನ ಭಯದ
ಬಾಧೆ ಮುಟ್ಟದೈ!
ಲೋಪ, ದೋಷ,
ಗ್ಲಾನಿ, ನಾಶ
ಇನಿಸು ತಟ್ಟದೈ!

೧೪. ಕಳವಳದ,
ತಳಮಳದ
ಕಾಟವಿಲ್ಲವೈ!
ತರತರದ
ತರಹರದ
ಕೀಟವಿಲ್ಲವೈ!

೧೫. ಹಿಂಸೆ, ಹತ್ಯ,
ಮೋಣಸತ್ಯ
ಒಂದು ಕಾಡದೈ!
ತುಮುಲ, ಭ್ರಾಂತಿ,
ಮೋಣಶಾಂತಿ
ದಾಳಿ ಹೂಡದೈ!

* * =

೧೬. ಪ್ರಣಯಿ ಪಿಕ
ಅಲೌಕಿಕ
ಗಾನ ಗೈವುದೈ!
ಹೃದಯ ಪುಷ್ಪ
ಅರಳಿ, ಬಾಷ್ಪ
ನಯನ ಹಾಯ್ವುದೈ!

೧೭. ವಿಮಲ ಪ್ರೇಮ
ಅಮರ ಧಾಮ
ರಾಜ್ಯವಾಳುವ!
ಬಾರೆ ಸಖಿ,
ಕಮಲಮುಖಿ,
ಮೋಕ್ಷಕೇಳುವ!

"ಶ್ರೀನಿಭ"

—೦—



ಶಸ್ತ್ರಕ್ರಿಯೆಯನಂತರ, ವಿರಮಿಸುತ್ತಿರುವ ರೋಗಿಗಳ ಒಂದು ಕೊಠಡಿ. ಶ್ರೀಕ್ಷೇತ್ರ ಧರ್ಮಸ್ಥಳ.

★



ನೇತ್ರಚಿಕಿತ್ಸೆಗಾಗಿ ಬಂದಿರುವವರಿಗೆ ಉಪಾಹಾರ ಕೊಡುತ್ತಿರುವ ದೃಶ್ಯ. ಶ್ರೀಕ್ಷೇತ್ರ ಧರ್ಮಸ್ಥಳ.

(ಈ ಸಂಚಿಕೆಯಲ್ಲಿರುವ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿನ ನೇತ್ರ ಚಿಕಿತ್ಸೆಯ ಐದು ಭಾವಚಿತ್ರಗಳು, ಶ್ರೀ ಯು. ಆರ್. ಪ್ರಭು, ಇವರಿಂದ)

REGD. NO. M. 3247.

Printed at the Prabhat Printers, Limited, Mangalore,
and Edited & Published at Prabhat Office, Car Street, Mangalore by K. V. Shenoy.